

# ರಾತ್ರಿಯ ಗೀತೆಗಳು

## SONGS IN THE NIGHT

"ಪರಿಶುದ್ಧ ಹಬ್ಬವನ್ನು ಆಚರಿಸುವ ರಾತ್ರಿಯಲ್ಲಿ ಹೇಗೋ
ಹಾಗೆ ನಿಮಗೆ ಹಾಡುವಿರಿ; ಮತ್ತು... ಹೃದಯದ
ಸಂತೋಷ ವಿರುವದು"
ಯೆಶಾಯ 30:29

## 1 ಜನವರಿ

**“ಬನ್ನಿರಿ, ನಮ್ಮನ್ನು ಉಂಟು ಮಾಡಿದ ಕರ್ತನ ಮುಂದೆ ಮೊಣಕಾಲು ಊರೋಣ ಆತನಿಗೆ ಎರಗಿ ಆರಾಧಿಸೋಣ.” (ಕೀರ್ತನೆಗಳು 95:6)**

ಒಮ್ಮೆ ದೈವಿಕ ಯೋಜನೆಯ ಮೂಲಕ ದೈವಿಕ ಗುಣಲಕ್ಷಣದ ಮಹಿಮೆಗಳ ಮಿನುಗು ನೋಟವನ್ನು ನಾವು ನೋಡಿದ ಮೇಲೆ, ತಿಳುವಳಿಕೆಯ ಕಣ್ಣುಗಳ ಮೂಲಕ ನಾವು ನಿಜವಾದ ನೋಟವನ್ನು ಪಡೆದುಕೊಂಡ ಮೇಲೆ, ಆತನು ಸಭೆಯ ಮಹಾ ಪರಿಪಾಲಕನೂ ಮತ್ತು ಹೃದಯವನ್ನು ಪರಿಶೋಧಿಸುವವನೂ ಆಗಿರುವುದರಿಂದ, ನಮ್ಮನ್ನು ತಗ್ಗಿಸಿಕೊಂಡು ಆತನ ಮುಂದೆ ಧೂಳಿನಲ್ಲಿ ಅಡ್ಡಬೀಳೋಣ. ಏಕೆಂದರೆ ನಾವು ಅಪೂರ್ಣರು ಎಂದು ಅರಿತಿರುವುದರಿಂದ ನಮ್ಮ ಬೋಧಕನ ಮುಂದೆ ನಿಲ್ಲಲು ನಾವು ಶಕ್ತರಲ್ಲ. ಏಕೆಂದರೆ ಆತನ ದಯೆ ಮತ್ತು ಪ್ರೀತಿಗೆ ನಾವು ಯೋಗ್ಯರಲ್ಲ. ಆದರೆ ಯೋಹಾನನನ್ನು ಆತನು ಮೃದುವಾಗಿ ಮುಟ್ಟಿ ಆತನನ್ನು ಎಬ್ಬಿಸಿದಂತೆ ನಮಗೆ ಹಿತಕರವಾದ, ಸಮಾಧಾನವಾದ ಮತ್ತು ಪ್ರೀತಿಯ ಮಾತುಗಳನ್ನಾಡಿದ್ದಾನೆ ಹಾಗೂ ನಮಗೆ ಭರವಸೆ ನೀಡುವುದೇನೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ. ಆದರೆ ಇದಕ್ಕೆ ತದ್ವಿರುದ್ಧವಾಗಿ ನಮಗೆ ಸಹಾಯ ಮಾಡಲು ಅನುಕಂಪವುಳ್ಳವನೂ ಮತ್ತು ದಯೆಯುಳ್ಳವನೂ ಆಗಿದ್ದು, ಆತನು ತನ್ನ ಸ್ವಂತ ಅಮೂಲ್ಯ ರಕ್ತದಿಂದ ನಮ್ಮನ್ನು ಕ್ರಯಕ್ಕೆ ಕೊಂಡುಕೊಂಡಿದ್ದಾನೆ. ಎಲ್ಲಿಯವರೆಗೂ ನಾವು ಆತನಲ್ಲಿ ನೆಲೆಸಿದ್ದು, ನಮ್ಮ ಹೃದಯದಲ್ಲಿ ಆತನನ್ನು ಹುಡುಕಿ, ಆತನ ಚಿತ್ತವನ್ನು ನೆರವೇರಿಸುತ್ತೇವೋ ಅಲ್ಲಿಯವರೆಗೂ ಆತನು ನಮ್ಮನ್ನು ಅಂಗೀಕರಿಸಿ ಆತನ ಶರೀರದ ಅಂಗಗಳಾಗಿ ಎಣಿಸುತ್ತಾನೆ. **R 3569 : 6**

## 2 ಜನವರಿ

**“ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ, ಆದರೆ ಈಗ ನೀವು ಕರ್ತನಲ್ಲಿ ಬೆಳಕಾಗಿರುವುದರಿಂದ ಬೆಳಕಿನ ಮಕ್ಕಳಂತೆ ನಡೆದುಕೊಳ್ಳಿರಿ.”. (ಎಫೆಸದವರಿಗೆ 5 : 8)**

ಕರ್ತನಾದ ಯೇಸು ನಮಗೆ ಹೇಳುವುದೇನೆಂದರೆ ಬೆಳಕಿಗೆ ನಾವು ನಂಬಿಗಸ್ತರಾಗಿದ್ದರೆ ನಮ್ಮ ಬೆಳಕು ಪ್ರಕಾಶಿಸುವಂತೆ ಮಾಡಿ ನಮ್ಮ ಪರಲೋಕದ

ತಂದೆಯ ಸ್ತುತಿಸ್ತೋತ್ರಗಳನ್ನು ತೋರಿಸುವಂತೆ ಮಾಡಬೇಕು. ಆತನು ನಮಗೆ ಮುನ್ನೆಚ್ಚರಿಸುವುದೇನೆಂದರೆ ಅನೇಕರು ನಮ್ಮ ಒಳ್ಳೆ ಕ್ರಿಯೆಗಳನ್ನು ಮೆಚ್ಚುವುದಿಲ್ಲ. ಆದರೆ ಆತನ ನಾಮದ ನಿಮಿತ್ತವಾಗಿ ನಮ್ಮ ಮೇಲೆ ಎಲ್ಲಾ ವಿಧವಾದ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸುವರು. ಆತನು ನಮಗೆ ಭರವಸೆ ನೀಡುವುದೇನೆಂದರೆ ಕತ್ತಲೆಯ ಮಕ್ಕಳು ಬೆಳಕಿನ ಮಕ್ಕಳನ್ನು ದ್ವೇಷಿಸುತ್ತಾರೆ. ಆದರೆ ಆತನು ನಮಗೆ ಒತ್ತಿ ಹೇಳುವುದೇನೆಂದರೆ ಇಂತಹ ಅನುಭವಗಳಲ್ಲಿ ನಾವು "ಸಂತೋಷ ಪಡಬೇಕು, ಅತಿ ಉಲ್ಲಾಸ ಪಡಬೇಕು; ಏಕೆಂದರೆ ಪರಲೋಕದಲ್ಲಿ ನಮಗೆ ಬಹಳ ಫಲ ಸಿಕ್ಕುವದು." ಸಂಕಟ ಮತ್ತು ಉಪದ್ರವಗಳ ಮಧ್ಯದಲ್ಲಿಯೂ ಸಂತೋಷ ಪಡುವಂತಹ ಮನೋಭಾವವು ಬೆಳಕಿನ ಮಕ್ಕಳಲ್ಲಿರುತ್ತದೆ. ಅವರು ಬೆಳಕನ್ನು ಅಂದರೆ ಸತ್ಯವನ್ನು ಪ್ರಕಾಶಗೊಳಿಸುವಾಗ, ಸರಿಯಾದ ತಿಳುವಳಿಕೆ ಮತ್ತು ಶ್ರೇಷ್ಠವಾದ ಹೃದಯವುಳ್ಳವರಲ್ಲಿ ಇರುವ ತಪ್ಪುಗಳು ಪ್ರಕಟವಾಗುವುದು. **R 5719 : 4**

## 3 ಜನವರಿ

**"ಆದರೆ ನಾನು ಕೊಡುವ ನೀರನ್ನು ಕುಡಿಯುವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ." (ಯೋಹಾನನು 4 : 14)**

ಜೀವ ತಣ್ಣೀರಾಗಿರುವ ಸತ್ಯವನ್ನು ಎಂದಿಗೂ ರುಚಿನೋಡದೆ ಇರುವವರಿಗೆ ತಪ್ಪುಗಳು ಮತ್ತು ಸುಳ್ಳುಗಳು ತಾತ್ಕಾಲಿಕವಾದ ತೃಪ್ತಿಯನ್ನು ತಂದುಕೊಡಬಹುದು; ಆದರೆ ಸತ್ಯದ ಹೊರತು ಬೇರೆ ಯಾವುದೂ ಶಾಶ್ವತವಾದ ತೃಪ್ತಿಯನ್ನು ಕೊಡುವುದಿಲ್ಲ. ಮತ್ತು ಸ್ವತಃ ನಮ್ಮ ಕರ್ತನು ಅಂದರೆ ಲೋಗೋಸ್, ತಂದೆಯ ಸಂದೇಶಕನು ಕೃಪೆ ಮತ್ತು ಸತ್ಯದಿಂದ ತುಂಬಿರುವಾತನು, ತೃಪ್ತಿ ತರುವಂತಹ ಈ ಜೀವ ತಣ್ಣೀರಿನ ಪ್ರತಿರೂಪ ಮತ್ತು ಪ್ರತಿನಿಧಿಯಾಗಿದ್ದಾನೆ. ಯಾರೆಲ್ಲಾ ಕರ್ತನನ್ನು ತನ್ನ ವಿಮೋಚಕನಾಗಿ ಮತ್ತು ನಾಯಕನಾಗಿ ಮತ್ತು ಬೋಧಕನಾಗಿ ಸ್ವೀಕರಿಸುತ್ತಾರೋ, ಆತನ ಮೂಲಕ ಅವರೆಲ್ಲರಿಗೂ ದೇವರ ಕೃಪೆ ತುಂಬಿದ ವಾಗ್ದಾನಗಳೆಲ್ಲವೂ ನೆರವೇರುವುದು; ಯಾರೆಲ್ಲಾ ಈ ಜೀವ ತಣ್ಣೀರನ್ನು ಪಡೆದುಕೊಳ್ಳುತ್ತಾರೋ ಅಂಥವರು ತಮಗೆ ಸಿಗಬೇಕಾದ ತೃಪ್ತಿಕರವಾದ ಭಾಗವನ್ನು ಹೊಂದುತ್ತಾರೆ, ಮತ್ತು ಬೇರೆ ದಿಕ್ಕಿನಿಂದ ಬರುವ ಸತ್ಯವನ್ನು ಎಂದಿಗೂ ಎದುರು ನೋಡುವುದಿಲ್ಲ. ಬೇರೆ ಎಲ್ಲೂ ಪೂರೈಸದಂತಹ ಆತನ ಹಂಬಲವನ್ನು ಅದು ಪೂರೈಸುವಂತದ್ದಾಗಿದೆ ಮತ್ತು ಎಷ್ಟು ಹೇರಳವಾಗಿ ಸಿಗುತ್ತದೆಂದರೆ ಅನ್ಯ ನೀರಿಗಾಗಿ ಬೇರೆ ಎಲ್ಲಿಗೂ ಹುಡುಕಿಕೊಂಡು ಹೋಗಬೇಕಾಗಿಲ್ಲ. **R 2424 : 2.**

## 4 ಜನವರಿ

**“ಆದರೆ ನಾನು ಹಿಡಿಯುವ [ಹೋಗುವ] ಮಾರ್ಗವನ್ನು ಆತನು ತಿಳಿದಿದ್ದಾನೆ” (ಯೋಬನು 23 : 10)**

ನಮ್ಮ ಇಕ್ಕಟ್ಟಾದ ಮಾರ್ಗದಲ್ಲಿ ಹಾದುಹೋಗುವಾಗ, ಎಷ್ಟರ ಮಟ್ಟಿಗೆ ಸೈತಾನನ ಧಾಳಿಗೆ ಎದುರಾಗುತ್ತೇವೋ ಮತ್ತು ನಮ್ಮ ನಿರೀಕ್ಷೆ, ನಂಬಿಕೆ ಮತ್ತು ಪ್ರೀತಿಯ ನಿಮಿತ್ತ ನಮ್ಮ ಪರೀಕ್ಷೆಗಳು ಎಷ್ಟು ತೀವ್ರವಾಗಿರುತ್ತದೋ, ಅಷ್ಟರ ಮಟ್ಟಿಗೆ ಹೋಲಿಕೆಗೆ ಮೀರಿ ಅಧಿಕವಾದ ಆತ್ಮೀಕ ಸಂತೋಷ ಮತ್ತು ಸಮಾಧಾನ ನಮಗಿರುತ್ತದೆ. ನಮಗೆ ತಿಳಿದಿರುವಂತೆ ಇವೆಲ್ಲವೂ ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ. ಕಣ್ಣಿಗೆ ಕಾಣದೆ ಇರುವಾತನನ್ನು ನಾವು ನೋಡಿದಂತೆ ಮತ್ತು ಆತನ ಕೈಗಳಿಂದ ನಮ್ಮನ್ನು ಎತ್ತಿ ಹಿಡಿದು ನಡೆಸುವನೆಂದು ತಿಳಿದು ನಾವು ಶೋಧನೆಗಳನ್ನು ಸಹಿಸಿಕೊಳ್ಳುತ್ತೇವೆ. ನಮಗೆ ಬರುವ ಎಲ್ಲಾ ತೊಂದರೆಗಳಲ್ಲಿ ಆತನು ನಮ್ಮೊಂದಿಗೆ ಇರುವನು ಎಂಬ ವಾಗ್ದಾನವು ನಮಗಿದೆ. ಆತನು ಎಂದಿಗೂ ನಮ್ಮನ್ನು ಕೈ ಬಿಡುವುದಿಲ್ಲ ಮತ್ತು ನಮ್ಮನ್ನು ತೊರೆಯುವುದಿಲ್ಲ ಹಾಗೂ ಎಲ್ಲಾ ವಿಷಯಗಳಲ್ಲಿ [ತೋರಿಕೆಯಲ್ಲಿ ನಮ್ಮ ಜೀವನದ ಕೆಟ್ಟದ್ದೂ ಸಹ], ನಮ್ಮ ಉನ್ನತ ಒಳಿತಿಗಾಗಿ ಆತನು ಇವೆಲ್ಲವನ್ನು ರದ್ದುಮಾಡಲು ಚಿತ್ತವುಳ್ಳವನಾಗಿದ್ದಾನೆ ಮತ್ತು ಶಕ್ತನಾಗಿದ್ದಾನೆ : ಏಕೆಂದರೆ ನಾವು ದೇವರನ್ನು, ಆತನ ಮಾರ್ಗವನ್ನು ಮತ್ತು ಆತನ ಯೋಜನೆಯನ್ನು ನಮಗಿಂತ ಹಾಗೂ ನಮ್ಮ ಮಾರ್ಗಗಳಿಗಿಂತ ಹೆಚ್ಚಾಗಿ ಪ್ರೀತಿಸುತ್ತೇವೆ—ಏಕೆಂದರೆ ಆತನ ಉದ್ದೇಶಕನುಸಾರವಾಗಿ ನಾವು ಕರೆಯಲ್ಪಟ್ಟಿದ್ದೇವೆ ಮತ್ತು ಆತನ ಕರೆಯುವಿಕೆಯನ್ನು ಸ್ವೀಕರಿಸಿದ್ದೇವೆ ಹಾಗೂ ಅದರ ಉದ್ದೇಶಕ್ಕಾಗಿ ಸಹಾನುಭೂತಿ ತೋರಿಸುವವರಾಗಿದ್ದೇವೆ. ಕರ್ತನಿಗೆ ಹಾಗೂ ಆತನ ಉನ್ನತ ಕರೆಯುವಿಕೆಗೆ ಯೋಗ್ಯರಾಗಿ ನಡೆಯಲು ಮತ್ತು ನಮ್ಮ ಕರೆಯುವಿಕೆಯನ್ನು ಆಯ್ಕೆಯನ್ನು ದೃಢಪಡಿಸಿಕೊಳ್ಳುವುದಕ್ಕೆ ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನ ಪಡುತ್ತೇವೆ. **R 1751 : 3**

## 5 ಜನವರಿ

**“ದೇವರ ದಾನವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ನಿತ್ಯ ಜೀವವು” (ರೋಮಾಪುರದವರಿಗೆ 6 : 23)**

ಪರಲೋಕದ ತಂದೆ ನಮಗಾಗಲಿ ಅಥವಾ ನಮ್ಮ ಮಕ್ಕಳಿಗಾಗಲಿ ನೋವು, ಪಾಡುಗಳು ಮತ್ತು ಮರಣಕ್ಕೆ ಎದುರಾಗಿ ರೋಗ ನಿರೋಧಕ ಶಕ್ತಿಯನ್ನು ಅನುದಾನವಾಗಿ ನೀಡಲಿಲ್ಲ. ಆದಾಗ್ಯೂ ಆತನು ನಮಗಾಗಿ ಇನ್ನೂ ಮಹತ್ತರವಾದ ಮತ್ತು ಅಧಿಕವಾದ ಮಹಿಮೆಯುಳ್ಳ ಏರ್ಪಾಡನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಮಾಡಿದ್ದಾರೆ–ಅಂದರೆ ನಮ್ಮ ನಿತ್ಯ ಜೀವಕ್ಕೆ ಬೇಕಾದ ಏರ್ಪಾಡು ಮಾಡಿದ್ದಾರೆ. ಆದರೆ ಈ ದಾನವನ್ನು ಯಾರೆಲ್ಲಾ ಈಗ ಅಥವಾ ಭವಿಷ್ಯದಲ್ಲಿ ದೇವರಿಗೆ ಮತ್ತು ಮನುಷ್ಯನಿಗೆ ಉದಾರತೆ, ನಂಬಿಕೆ, ಪ್ರೀತಿಯನ್ನು ಬೆಳಸಿಕೊಂಡು ಉದಾಹರಣೆಯಾಗಿ ಜೀವಿಸುತ್ತಾರೋ ಅಂಥವರಿಗಾಗಿ ಮಾತ್ರ ಮೀಸಲಾಗಿ ಇಡಲಾಗಿದೆ. ದೇವರ ಕೃಪೆಯನ್ನು ತಿಳಿದುಕೊಳ್ಳುವುದಕ್ಕಾಗಿ, ಅದನ್ನು ಪ್ರಶಂಸಿಸಲು ನಮ್ಮ ತಿಳುವಳಿಕೆಯ ಕಣ್ಣುಗಳು ಮತ್ತು ಕಿವಿಗಳು ತೆರೆದಿರುವುದರಿಂದ ನಾವು ಧನ್ಯರು–ಈಗ ಕ್ರಿಸ್ತನ ಶಾಲೆಯಲ್ಲಿರುವ ನಾವು ಆತನ ಆತ್ಮದ ಫಲಗಳನ್ನು ಮತ್ತು ಕೃಪೆಗಳನ್ನು ಬೆಳೆಸಿಕೊಂಡು ನಮ್ಮ ಕರ್ತನ ಸ್ವರೂಪವನ್ನು ಹೊಂದುವವರಾದ ನಾವು ಧನ್ಯರು. ಅಂಥವರಿಗೋಸ್ಕರವೇ ರಾಜ್ಯವು, ಸಹ–ಬಾಧ್ಯಸ್ತಿಕೆಯು, ಆಶೀರ್ವಾದಗಳು ಮತ್ತು ಸವಲತ್ತನ್ನು ನೀಡಲಾಗುತ್ತದೆ. ನಿತ್ಯ ಜೀವಕ್ಕೆ ಮಾತ್ರವಲ್ಲದೆ ಕ್ರಿಸ್ತನೊಂದಿಗೆ ಸಹ–ಭಾಧ್ಯಸ್ತಿಕೆಯೂ ಸಹ ದೊರೆಯುತ್ತದೆ. ಲೋಕದ ಸಾಮಾನ್ಯ ಜನರಿಗೆ ಸಾವಿರ ವರ್ಷದ ಯುಗದಲ್ಲಿ ಅವರೂ ನಿತ್ಯ ಜೀವವನ್ನು ಪಡೆಯುವುದಕ್ಕೆ ಯೋಗ್ಯರಾಗಬೇಕಾದರೆ ಕರ್ತನ ಆತ್ಮದ ಫಲಗಳನ್ನು ಮತ್ತು ಕೃಪೆಗಳನ್ನು ಬೆಳೆಸಿಕೊಳ್ಳಬೇಕು. ಪುತ್ರತ್ವ ಎಂದರೆ ಆತನ ಸ್ವಾರೂಪ್ಯವನ್ನು ಸೂಚಿಸುತ್ತದೆ. ಮತ್ತು ಯಾರೆಲ್ಲಾ ಮಕ್ಕಳಾಗಿ ಅಂಗೀಕರಿಸಲ್ಪಡುವುದಿಲ್ಲವೋ ಅವರು ನಿತ್ಯ ಜೀವವನ್ನು ಪಡೆಯಲು ಸಾಧ್ಯವಿಲ್ಲ. **R 3432 : 6**

## 6 ಜನವರಿ

**"ನಾನು ನಡೆಯುವುದನ್ನು ಮಲಗುವುದನ್ನು ನೀನು ಶೋಧಿಸಿದ್ದೀ ; ನನ್ನ ಮಾರ್ಗಗಳೆಲ್ಲಾ ನಿನಗೆ ಗೊತ್ತಾಗಿದೆ" (ಕೀರ್ತನೆಗಳು 139 : 3)**

ಓಹ್, ಬೋಧಕನ ಹೆಜ್ಜೆಯ ಜಾಡನ್ನು ಹಿಂಬಾಲಿಸುವ ಸಂತರ (ಪರಿಶುದ್ಧ ಜನರ) ದಾರಿಯು ಎಷ್ಟು ಇಕ್ಕಟ್ಟಾಗಿದೆ! ಪ್ರತಿಯೊಂದು ಹೆಜ್ಜೆಯಲ್ಲೂ ಸ್ವಯಂ ನಿರಾಕರಣೆ ಇದೆ. ಆದರೆ ಯೇಸು ಹೀಗೆಂದು ಹೇಳಿದ್ದಾನೆ– "ತನ್ನ ಶಿಲುಬೆಯನ್ನು ತೆಗೆದುಕೊಳ್ಳದೆ ನನ್ನನ್ನು ಹಿಂಬಾಲಿಸುವವನು ನನಗೆ ಯೋಗ್ಯನಲ್ಲ." ಒಂದು ವೇಳೆ ಕರ್ತನ ಮೇಲೆ ನಮಗಿರುವ ಪ್ರೀತಿಯನ್ನು ಆತನ ನಿಂದೆಗಳು ಮತ್ತು ಸ್ವಯಂ–

ನಿರಾಕರಣೆಗಳಲ್ಲಿ ಪಾಲುಹೊಂದಿ ನಿರೂಪಿಸದಿದ್ದರೆ, ಆತನ ವಧುವಾಗುವುದಕ್ಕೆ ಆಸೆಪಡುವ ವರ್ಗದವರಾಗಿ ನಾವಿರಲು ಸಾಧ್ಯವಿಲ್ಲ. ಯಾರಿಗೇ ಆಗಲಿ ಕೊನೆಯವರೆಗೂ ಸಹಿಸಿಕೊಳ್ಳುವುದು ಸುಲಭವಾದ ಕಾರ್ಯವಲ್ಲ ಆದರೆ ಹಾಗೆ ಮಾಡುವವರು ಧನ್ಯರು. ಒಂದು ವೇಳೆ ನಾವು ನಮ್ಮ ಹಿಂದಿನ ವಿಷಯಗಳನ್ನು ನೋಡುತ್ತಲೇ ಇದ್ದರೆ, ಹಳೆಯ ಮಹತ್ವಾಕಾಂಕ್ಷೆಯಲ್ಲಿ ಆನಂದಿಸುತ್ತಾ ಒಮ್ಮೆ ನಮ್ಮನ್ನು ಪ್ರೇರೇಪಿಸಿದ ಹಳೆಯ ಆತ್ಮವನ್ನು [ಆಲೋಚನೆಗಳನ್ನು] ಬೆಳೆಸುತ್ತಾ ಇದ್ದರೆ, ಒಂದು ವೇಳೆ ನಮ್ಮ ಶೋಧನೆಗಳನ್ನು ಸಹಿಸಿಕೊಳ್ಳುವುದು ಅಸಾಧ್ಯವಾಗದಿದ್ದರೂ ಅದು ಬಹಳ ಕಷ್ಟಕರವಾಗುತ್ತದೆ: ಆದರೆ ಅಪೋಸ್ತಲನ ಸಲಹೆಯನ್ನು ಪಡೆದುಕೊಳ್ಳೋಣ ಮತ್ತು ಹಿಂದಿನವುಗಳನ್ನು ಮರೆತು ಈ ಲೋಕ, ಶರೀರ ಮತ್ತು ಸೈತಾನನ ಮೇಲೆ ಹೊಸ ಜಯವನ್ನು ಹೊಂದಲು ಪ್ರಯತ್ನಿಸೋಣ. **R 901 : 6**

## 7 ಜನವರಿ

**"ಇರುಳು ಬಹಳ ಮಟ್ಟಿಗೆ ಕಳೆಯಿತು : ಹಗಲು ಸಮೀಪವಾಯಿತು, ಆದುದರಿಂದ ನಾವು ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ." (ರೋಮಾಪುರದವರಿಗೆ 13 : 12)**

ನೀವು ಈಗ ಸ್ವೀಕರಿಸಿದ ಬೆಳಕನ್ನು ಪರಿಗಣಿಸಿರಿ–ದೇವರ ಜ್ಞಾನದ ಬೆಳಕು, ಆತನ ಚಿತ್ತ, ಯಾವುದಕ್ಕಾಗಿ ಬಾಳಬೇಕು, ಯಾವ ರೀತಿಯಾದ ಗುಣಲಕ್ಷಣವಿದ್ದರೆ ಕರ್ತನು ಅಂಥವರಿಗೆ ನಿತ್ಯಜೀವದ ಬಹುಮಾನವನ್ನು ಅನುಗ್ರಹಿಸುವುದಕ್ಕೆ ಇಷ್ಟಪಡುತ್ತಾನೆ, ಜೀವದ ಅತ್ಯುನ್ನತ ನೆಲೆಯನ್ನು ಕೊಡುತ್ತಾನೆ. ಇವೆಲ್ಲಾ ಜ್ಞಾನ ನಿಮಗಿದ್ದ ಮೇಲೆ ಅದು ನಿಮ್ಮನ್ನು ರಕ್ಷಿಸುವಂತಹ ಆಯುಧವಾಗಿ ಧರಿಸಿಕೊಳ್ಳಿರಿ. ದೇವರಿಗೆ ಏನು ಪ್ರಿಯವಾದದ್ದು ಎಂದು ತಿಳಿದುಕೊಂಡು ಇವೆಲ್ಲವನ್ನು ಧರಿಸಿಕೊಳ್ಳಿರಿ. ಆದರೆ ವಸ್ತ್ರದಂತೆ ಅಲ್ಲ, ವಸ್ತ್ರದ ಮೇಲೆ ಹಾಕುವ ಆಯುಧದಂತೆ ಧರಿಸಿಕೊಳ್ಳಿರಿ. ಹೃದಯವನ್ನು ಮರೆಮಾಡುವ ಹಾಗೆ ನೀತಿಯೆಂಬ ಎದೆ ಕವಚವನ್ನು ಧರಿಸಿಕೊಳ್ಳಿರಿ. ದೇವರು ಪರಿಗಣಿಸುವುದು ಹೃದಯ ಶುದ್ಧತೆ ಮತ್ತು ಸಂಪೂರ್ಣ ನಿಷ್ಠೆ ಎಂದು ಅರಿತುಕೊಳ್ಳಬೇಕು. ದೇವರು ನಮಗಾಗಿ ಇದ್ದಾರೆ ಎಂದು ಅರಿತುಕೊಳ್ಳಬೇಕು. ಆತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ ಮತ್ತು ಅಪೋಸ್ತಲನು ಹೇಳಿದ ಎಲ್ಲಾ ಆಯುಧಗಳನ್ನು ಧರಿಸಿಕೊಳ್ಳಿರಿ. ಇವೆಲ್ಲವೂ

ಸೇರಿ "ಬೆಳಕಿನ ಆಯುಧಗಳಾಗಿವೆ", ಹೀಗೆ ಕರೆಯಲು ಕಾರಣವೇನೆಂದರೆ ಅದು ಸತ್ಯದ ಬೆಳಕಿನಿಂದ ಉಂಟಾಗಿದೆ. **R 5770 : 1**

## 8 ಜನವರಿ

**"ಅವರು ರೆಬೆಕ್ಕಳನ್ನು ಕರೆದು ಆಕೆಗೆ–ಈ ಮನುಷ್ಯನ ಸಂಗಡ ಹೋಗುವಿಯೋ ಎಂದು ಕೇಳಿದರು, ಅದಕ್ಕೆ ಆಕೆಯು–ನಾನು ಹೋಗುತ್ತೇನೆ ಅಂದಳು." (ಆದಿಕಾಂಡ 24: 58)**

ಇದು ಕ್ರಿಸ್ತನ ವಧುವಾಗುವುದಕ್ಕಾಗಿ ಕರೆಯಲ್ಪಟ್ಟವರ ಮುಂದೆ ಇಡುವ [ಕೇಳುವ] ಪ್ರಶ್ನೆಯನ್ನು ಚೆನ್ನಾಗಿ ಸೂಚಿಸುತ್ತದೆ. ಆತನು "ಕೃಪೆಯೂ ಸತ್ಯವೂ ತುಂಬಿದ ತಂದೆಯ ಒಬ್ಬನೇ ಕುಮಾರನು" ಎಂದು ಅವರು ಕೇಳಿಸಿಕೊಳ್ಳುತ್ತಾರೆ. ಅವರು ಕೇಳಿಸಿಕೊಳ್ಳುವುದು ಏನೆಂದರೆ ಆತನು ಎಲ್ಲದಕ್ಕೂ ಕರ್ತನು, "ಅತ್ಯಂತ ಮಹತ್ವವುಳ್ಳ ಅಮೂಲ್ಯವಾದ ವಾಗ್ದಾನಗಳಿಗೆ" ವಾರಸುದಾರನು. ಆತನೊಂದಿಗೆ ಐಕ್ಯವಾಗುವುದರ ಅರ್ಥವು ಏನೆಂದರೆ ಆತನ ಎಲ್ಲಾ ಮಹತ್ತರವಾದ ಮತ್ತು ಅದ್ಭುತವಾದ ಭವಿಷ್ಯದಲ್ಲಿ ಆತನೊಂದಿಗೆ ಎಂದೆಂದಿಗೂ ಜೊತೆಯಲ್ಲಿದ್ದು ಅದರಲ್ಲಿ ಪಾಲುಹೊಂದುತ್ತೇವೆ ಎಂದು ಅವರು ಕಲಿತುಕೊಳ್ಳುತ್ತಾರೆ. ಆತನನ್ನು ಸರಿಯಾಗಿ ಅರಿತವರ ಉತ್ತರವು "ನಾನು ಹೋಗುತ್ತೇನೆ" ಎಂದು ರೆಬೆಕ್ಕಳು ತ್ವರಿತವಾಗಿ ಹೇಳಿದಂತೆ ಇರುತ್ತದೆ.....ಕರ್ತನಿಗಾಗಿ ಇರುವ ಪೂರ್ಣವಾದ ಹೃದಯದ ಪ್ರೀತಿ ಮತ್ತು ಚೆನ್ನಾಗಿ ನೆಲೆಸಿರುವ ವಿಶ್ವಾಸ....ಇವುಗಳು ಮಾತ್ರ ನಮ್ಮ ಪ್ರಯಾಣದ ಅಂತ್ಯದವರೆಗೂ ಕೊಂಡೊಯ್ಯುತ್ತದೆ. ನಮ್ಮ ಪ್ರಿಯನಾದ ಮಹಿಮೆಯ ರಾಜನೊಂದಿಗೆ ಕೊನೆಯಲ್ಲಿ ಅಂಗೀಕರಿಸಲ್ಪಡುವುದಕ್ಕಾಗಿ ನಿರೀಕ್ಷೆಯಲ್ಲಿ ಸಂತೋಷವುಳ್ಳವರಾಗಿದ್ದೇವೆ. **R 5188 : 1**

## 9 ಜನವರಿ

**"ಆಗ ಯೇಸು ಅವನಿಗೆ–ಸೈತಾನನೇ, ಇಲ್ಲಿಂದ ತೊಲಗಿಹೋಗು; ಯಾಕೆಂದರೆ–ನೀನು ನಿನ್ನ ದೇವರಾದ ಕರ್ತನನ್ನು ಮಾತ್ರ ಆರಾಧಿಸಿ ಆತನೊಬ್ಬನನ್ನೇ ಸೇವಿಸಬೇಕು ಎಂಬುದಾಗಿ ಬರೆದದೆ ಅಂದನು" (ಮತ್ತಾಯ 4 : 10)**

ನಮ್ಮ ಕರ್ತನು ನಲ್ವತ್ತು ದಿವಸ ಅಡವಿಯಲ್ಲಿದ್ದು ತಿಳಿದುಕೊಂಡದ್ದು ಏನೆಂದರೆ–ಮಹಾ ಸಂಕಟಗಳ ಮೂಲಕ ಮಾತ್ರವೆ ಈ ಭೂಮಿಯನ್ನು ಆಳ್ವಿಕೆ

ಮಾಡಲು ಸಾಧ್ಯವಾಗುತ್ತದೆ. ಆತನು ಬಹಳ ದಿವಸಗಳು ಉಪವಾಸವಿದದ್ದರಿಂದ ಬಲಹೀನನಾಗಿದ್ದನು ಮತ್ತು ಎಲ್ಲಾ ಪ್ರವಾದನೆಗಳ ವಿವರಗಳು ಆತನ ಮನಸ್ಸಿನಲ್ಲಿತ್ತು. ಕತ್ತರಿಸುವವರ ಮುಂದೆ ಇರುವ ಮೂಕ ಕುರಿಮರಿಯಂತೆ ಆತನು ತನ್ನನ್ನೇ ಕಂಡುಕೊಂಡನು; ಅಡವಿಯಲ್ಲಿ ಸರ್ಪವು ಮೇಲಕ್ಕೆ ಎತ್ತಲ್ಪಟ್ಟಂತೆ ತನ್ನನ್ನೇ ಕಂಡುಕೊಂಡನು. ಸೈತಾನನ ಸಲಹೆಯು ಯೇಸುವಿಗೆ ಒಂದು ಶೋಧನೆಯಾಗಿತ್ತು. ಆದರೆ ಸೈತಾನನು ಯೇಸು ಮಾಡಿದ ಒಡಂಬಡಿಕೆಯನ್ನು ಮೀರುವಂತೆ ಹೇಳುತ್ತಿದ್ದಾನೆಂದು ಪರಿಗಣಿಸಿದ ನಂತರ ಅಂದರೆ ಸೈತಾನನು ದೇವರ ಚಿತ್ತಕ್ಕೆ ವಿರೋಧವಾಗಿ ನಡೆಯುವಂತೆ ಹೇಳುತ್ತಿದ್ದಾನೆಂದು ತಿಳಿದುಕೊಂಡನು. ತಕ್ಷಣ ಆತನು ಉತ್ತರಿಸಿ ಹೇಳಿದ್ದೇನೆಂದರೆ "ಸೈತಾನನೇ, ಇಲ್ಲಿಂದ ತೊಲಗಿಹೋಗು : ಯಾಕೆಂದರೆ–ನೀನು ನಿನ್ನ ದೇವರಾದ ಕರ್ತನನ್ನು ಮಾತ್ರ ಆರಾಧಿಸಿ ಆತನೊಬ್ಬನನ್ನೇ ಸೇವಿಸಬೇಕು ಎಂಬುದಾಗಿ ಬರೆದದೆ ಅಂದನು." ನಂತರ ಸೈತಾನನು ಕರ್ತನನ್ನು ಬಿಟ್ಟು ಹೊರಟುಹೋದನು. ಏಕೆಂದರೆ ಯೆಹೋವನ ವಾಕ್ಯಕ್ಕೆ ಯೇಸು ತುಂಬಾ ನಿಷ್ಠಾವಂತನಾಗಿರುವುದರಿಂದ ಇನ್ನೂ ಶೋಧಿಸುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಸೈತಾನನು ಅಂದುಕೊಂಡನು. ನಂತರ ದೇವದೂತರು ಬಂದು ಯೇಸುವನ್ನು ಉಪಚರಿಸಿದರು. **R 5084 : 6**

## 10 ಜನವರಿ

**"ಕರ್ತನಾದ ದೇವರ ಶಕ್ತಿಯಲ್ಲಿ ನಾನು ಹೋಗುವೆನು, ನಿನ್ನ ನೀತಿಯನ್ನು ಹೌದು, ನಿನ್ನದನ್ನೇ ತಿಳಿಸುವೆನು" (ಕೀರ್ತನೆಗಳು 71 : 16)**

ಪ್ರಸ್ತುತ [ಈಗಿನ] ಸಮಯಗಳಲ್ಲಿ ಲೋಕ, ಶರೀರ ಮತ್ತು ಸೈತಾನನಿಗೆ ವಿರೋಧವಾಗಿ ಕಣ್ಣೀರು, ದುಃಖ ಮತ್ತು ಕಲಹಗಳೊಂದಿಗೆ ಹೋರಾಡುವುದು ಅತ್ಯವಶ್ಯಕವಾಗಿದೆ; ಮತ್ತು ಇವೆಲ್ಲಾ ಅನುಭವಗಳ ಮೂಲಕ ನಾವು ಮುನ್ನಡೆಯದೆ ಜಯಶಾಲಿಗಳಾಗಿ ಕಿರೀಟವನ್ನು ಪಡೆದುಕೊಳ್ಳುತ್ತೇವೆಂದು ನಿರೀಕ್ಷಿಸಲೂಬಾರದು ಮತ್ತು ಎದುರುನೋಡಲೂಬಾರದು. ಈ ಯುದ್ಧದಲ್ಲಿ ನಾವು ಯೋಚಿಸಬೇಕಾಗಿರುವುದಕ್ಕಿಂತ ಹೆಚ್ಚಾಗಿ ನಮ್ಮ ಬಗ್ಗೆ ಯೋಚಿಸದಿರಲು ನಾವು ಕಲಿಯುತ್ತೇವೆ: ಒಂದು ವೇಳೆ ನಾವು ಲೋಕದಿಂದ ನಮ್ಮ ವಸ್ತ್ರಗಳನ್ನು ನಿಷ್ಕಳಂಕವಾಗಿ ಕಾಪಾಡಿಕೊಳ್ಳಬೇಕಾದರೆ ನಮ್ಮ ಸ್ವಂತ ಬಲಹೀನತೆಗಳು ಮತ್ತು ಅಪೂರ್ಣತೆಗಳನ್ನು ಕುರಿತು ಕಲಿತುಕೊಂಡು ನಮ್ಮ ಕರ್ತನೊಂದಿಗೆ ಸಮೀಪವಾಗಿ ನಡೆಯಬೇಕು ಎಂಬ ಅವಶ್ಯಕತೆಯನ್ನು ಕುರಿತು ಅರಿತುಕೊಳ್ಳುತ್ತೇವೆ. ಇದಲ್ಲದೆ

ಆತನ ಕೃಪೆಯನ್ನು ನಂಬಲು ಮತ್ತು "ದೇವರು ನಮಗೆ ಸಾಕು" ಎಂದು ಕಲಿತುಕೊಳ್ಳುತ್ತೇವೆ. ಇದಲ್ಲದೆ "ನಮಗೆ ಎದುರಾಗಿ ಎಷ್ಟೇ ಜನರಿದ್ದರೂ, ನಮ್ಮ ಪಕ್ಷದಲ್ಲಿರುವವನು ಅವರೆಲ್ಲರಿಗಿಂತ ದೊಡ್ಡವನು" ಎಂದು ಕಲಿತುಕೊಳ್ಳುತ್ತೇವೆ. ಲೋಕವನ್ನು ಜಯಿಸುವ ಜಯವು ನಮ್ಮ ಬಲದಿಂದಾಗಲಿ ಅಥವಾ ನಮ್ಮ ಪರಿಪೂರ್ಣವಾದ ಶರೀರದಿಂದಾಗಲಿ ಅಲ್ಲ ಆಥವಾ ಕೇವಲ ನಮ್ಮ ಮನಸ್ಸಿನಲ್ಲಿ ಮಾಡುವ ಬಲವಾದ ತೀರ್ಮಾನದಿಂದ ಅಲ್ಲ ಎಂದು ತಿಳಿದುಕೊಳ್ಳುತ್ತೇವೆ. ಆದರೆ ನಮ್ಮ ಬಲವಾದ ತೀರ್ಮಾನವನ್ನು ನೋಡಿ ಆತನು ನಮಗೆ ಸಹಾಯಮಾಡಿ, ಬಲಪಡಿಸಿ ನಮಗೆ ಭರವಸೆ ನೀಡುವುದೇನೆಂದರೆ ಆತನ ಬಲವು ನಮ್ಮ ಬಲಹೀನತೆಯಲ್ಲಿ ಪರಿಪೂರ್ಣವಾಗುತ್ತದೆ. ಇಲ್ಲಿ ನಾವು ಕಲಿಯುವುದೇನೆಂದರೆ ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ. **R 2195 : 2**

## 11 ಜನವರಿ

**"ನಿಮ್ಮ ಆಲೋಚನೆಯಂತೆ ನನ್ನನ್ನು ನಡಿಸಿದ ತರುವಾಯ ಮಹಿಮೆಗೆ ನನ್ನನ್ನು ಅಂಗೀಕರಿಸುವಿ" ( ಕೀರ್ತನೆಗಳು 73 : 24)**

ದೀನತೆ ಮತ್ತು ನಂಬಿಕೆಯಿಂದಿರುವ ದೇವರ ಮಕ್ಕಳು ಅರಿತುಕೊಳ್ಳವುದೇನೆಂದರೆ ಕರ್ತನ ನಡೆಸುವಿಕೆಯ ಮಾರ್ಗವನ್ನು ಅವರು ಎಲ್ಲಾ ಸಮಯಗಳಲ್ಲಿ ತಿಳಿದುಕೊಳ್ಳದೆ ಇದ್ದರೂ, ಅವರು ಆತನ ಜ್ಞಾನ, ಪ್ರೀತಿ ಮತ್ತು ಆರೈಕೆಯನ್ನು ತಿಳಿದುಕೊಳ್ಳಬಹುದು ಮತ್ತು ಆತನನ್ನು ನೋಡಲು ಸಾಧ್ಯವಿಲ್ಲದಿದ್ದರೂ ಆತನನ್ನು ನಂಬಬಹುದು. ನಮ್ಮ ಶಕ್ತಿಗೆ ಮೀರಿದ ದೈವಿಕ ಜ್ಞಾನವನ್ನು ಯಾವಾಗಲೂ ನಾವು ಗ್ರಹಿಸಲು ಸಾಧ್ಯವಿದೆ ಎಂದು ನಾವು ಅಂದುಕೊಳ್ಳಬಾರದು; ಆದರೂ ಅದನ್ನು ನಂತರ ನಾವು ಅರಿತುಕೊಳ್ಳಬಹುದು. ಕೆಲವು ಸಾರಿ ಆತನ ಶಿಕ್ಷೆ ಬಹಳ ತೀವ್ರವಾಗಿರಬಹುದು ಮತ್ತು ಖಂಡಿತವಾಗಿಯೂ ಅದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೂ ನಂತರ "ಅದು ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತವೆ." ಕಹಿ ಬಂದ ನಂತರ ಸಿಹಿ ಬರುತ್ತದೆ; ಆದ್ದರಿಂದ ತಾಳ್ಮೆಯಿಂದ ಕಹಿಯನ್ನು ಸ್ವೀಕರಿಸೋಣ ಮತ್ತು ತಾಳ್ಮೆಯಿಂದ ಒಳ್ಳೆಯದನ್ನು ಮಾಡುವುದರಲ್ಲಿ ಮುಂದುವರಿಯುತ್ತಾ, ನಮಗೆಂದು ಏನನ್ನೂ ಮೀಸಲಾಗಿ ಇಡದೆ ದೇವರ ಏರ್ಪಾಡಿಗೆ, ಆತನ ಸಲಹೆ ಮತ್ತು ಮಾರ್ಗದರ್ಶನಕ್ಕೆ ಒಪ್ಪಿಸಿಕೊಟ್ಟು, ಅತ್ಯಂತ ಮಹತ್ವವುಳ್ಳ ಮತ್ತು ಅಮೂಲ್ಯವಾದ

ವಾಗ್ದಾನಗಳು ತಕ್ಕ ಕಾಲದಲ್ಲಿ ಕೈಗೂಡುವುದು ಎಂಬ ನಿರೀಕ್ಷೆಯಲ್ಲಿ ಸಂತೋಷವುಳ್ಳವರಾಗಿರೋಣ. **R 1562 : 2**

## 12 ಜನವರಿ

**"ನಿನ್ನ ನೀತಿಯನ್ನು ನನ್ನ ಹೃದಯದಲ್ಲಿ ಅಡಗಿಸಲಿಲ್ಲ; ನಿನ್ನ ನಂಬಿಕೆಯನ್ನೂ ರಕ್ಷಣೆಯನ್ನೂ ನಾನು ಪ್ರಕಟಿಸಿದ್ದೇನೆ; ನಿನ್ನ ಪ್ರೀತಿ ಕರುಣೆಗಳನ್ನು ಸತ್ಯವನ್ನು ದೊಡ್ಡ ಸಭೆಯಲ್ಲಿ ನಾನು ಮರೆಮಾಡಲಿಲ್ಲ" ( ಕೀರ್ತನೆಗಳು 40 : 10)**

ಒಂದು ವೇಳೆ ನಮ್ಮ ಜೀವನದಲ್ಲಿ ಬೇರೆ ಎಲ್ಲವನ್ನು ನಮ್ಮಿಂದ ತೆಗೆದುಬಿಟ್ಟರೆ ಮತ್ತು ಈ ಲೋಕದಲ್ಲಿ ನಮಗೆ ಒಂದು ರೂಪಾಯಿ ಕೂಡ ಇಲ್ಲದಿದ್ದರೂ, ಸತ್ಯ ನಮ್ಮಲ್ಲಿದ್ದರೆ ನಾವು ದೇವರಲ್ಲಿ ಐಶ್ವರ್ಯವುಳ್ಳವರಾಗಿದ್ದೇವೆ. ಆದ್ದರಿಂದ ನಮ್ಮೆಲ್ಲರಿಗೂ ಈ ಬುದ್ಧಿವಂತಿಕೆಯ, ಈ ಜ್ಞಾನದ ಅವಶ್ಯಕತೆ ಇದೆ. ಇದನ್ನು ನಾವು ಗ್ರಹಿಸುವಾಗ, ಅಂಧಕಾರದಲ್ಲಿದ್ದ ನಮ್ಮನ್ನು ಆಶ್ಚರ್ಯಕರವಾದ ಬೆಳಕಿಗೆ ಕರೆದಾತನ ಸ್ತುತಿಯನ್ನು ಕುರಿತು ಹೇಳಲು ನಾವು ಅಸಡ್ಡೆಯಾಗಿ ಇರಲು ಹೇಗೆ ಸಾಧ್ಯ! ಆದ್ದರಿಂದ ದೇವರು ಈ ವಿಷಯವನ್ನು ಹೇಗೆ ಏರ್ಪಾಡು ಮಾಡಿದ್ದಾನೆಂದರೆ, ಯಾರೆಲ್ಲಾ ನಂಬಿ ದೇವರ ಮಕ್ಕಳಾಗುತ್ತಾರೋ ಆತನೊಂದಿಗೆ ಆತನ ಮಹಾ ಕೆಲಸದಲ್ಲಿ ಭಾಗಿಯಾಗುತ್ತಾರೆ. ಮತ್ತು ಈ ವಿಷಯಗಳು ನಮಗೆ ತಿಳಿದಿರುವುದರಿಂದ ಅವುಗಳು ನಮ್ಮ ನಿಷ್ಠೆ ಮತ್ತು ನಮ್ಮ ಪ್ರೀತಿಗೆ ಪರೀಕ್ಷೆಯಾಗಿರುತ್ತದೆ. ಮತ್ತು ಈ ಗುಣಲಕ್ಷಣವು ನಮ್ಮಲ್ಲಿ ಕಾಣುತ್ತದೋ ಅಥವಾ ಕಾಣುವುದಿಲ್ಲವೋ ಎಂಬುದು ಕರ್ತನು ನೋಡಿ ನಾವು ಈ ಘನವುಳ್ಳ ಕೆಲಸದಲ್ಲಿ ಭಾಗಿಯಾಗುತ್ತೇವೋ ಅಥವಾ ಇಲ್ಲವೋ ಎಂಬುದು ತೆರೆಯ ಆ ಕಡೆಯಲ್ಲಿ ತಿಳಿದುಬರುತ್ತದೆ. **R 5335 : 4**

## 13 ಜನವರಿ

**"ನೀವು ಬಹಳ ಫಲವನ್ನು ಕೊಡುವುದರಿಂದ ನನ್ನ ತಂದೆಗೆ ಮಹಿಮೆ ಉಂಟಾಗುವುದು; ಹೀಗೆ ನೀವು ನನ್ನ ಶಿಷ್ಯರಾಗುವಿರಿ." ( ಯೋಹಾನ 15 : 8)**

ಕರ್ತನು ಸ್ವತಃ ತಾನೇ ನಿಜವಾದ ದ್ರಾಕ್ಷೇಬಳ್ಳಿ ಎಂದು ಮತ್ತು ಆತನ ತಂದೆಯು ನಿಜವಾದ ತೋಟಗಾರನಾಗಿದ್ದು, ಆ ನಿಜವಾದ ದ್ರಾಕ್ಷೇಬಳ್ಳಿಯನ್ನು ನೆಟ್ಟು, ಆತನ ಹಿಂಬಾಲಕರು ಆ ಬಳ್ಳಿಯ ನಿಜವಾದ ಕೊಂಬೆಗಳು ಎಂದು

ಪ್ರಕಟಪಡಿಸಿದನು. "ನಿಜವಾದ ದ್ರಾಕ್ಷೇಬಳ್ಳಿ" ಎಂದು ಹೇಳುವಾಗ ಸುಳ್ಳಾದ ದ್ರಾಕ್ಷೇಬಳ್ಳಿ ಇದೆ ಎಂದಾಯಿತು ಮತ್ತು ಈ ಆಲೋಚನೆಯನ್ನು ವಿವರವಾಗಿ ನಮ್ಮ ಕರ್ತನು ತನ್ನ ಕೊನೆಯ ಸಂದೇಶವಾದ ಪ್ರಕಟನೆ ಪುಸ್ತಕದಲ್ಲಿ ತನ್ನ ಜನರಿಗೆ ಸಾಂಕೇತಿಕವಾಗಿ ತಿಳಿಸುತ್ತಾನೆ. ಅಲ್ಲಿ ಆತನು ಈ ಯುಗದ ಸಮಾಪ್ತಿಯಲ್ಲಿ "ಭೂಮಿಯ ದ್ರಾಕ್ಷೇಬಳ್ಳಿಯ ಹಣ್ಣನ್ನು" ಕೂಡಿಸಿ ದೇವರ ರೌದ್ರದ ದೊಡ್ಡ ದ್ರಾಕ್ಷೇತೊಟ್ಟಿಯಲ್ಲಿ ಹಾಕುವುದನ್ನು ಕುರಿತು ಮಾತನಾಡುತ್ತಾನೆ. [ಪ್ರಕಟನೆ 14 : 19] "ನಿಜವಾದ ದ್ರಾಕ್ಷೇಬಳ್ಳಿ" ಎಂದು ನಮ್ಮ ಕರ್ತನು ಹೇಳಿರುವುದರಿಂದ ಅಪೋಸ್ತಲರು ಆಗ ಬಹುಶಃ ಅವರಿಂದ ಅರಿಸಲ್ಪಟ್ಟದ್ದಕ್ಕಿಂತ , ಇದರಲ್ಲಿ ಆಳವಾದ ಅರ್ಥವಿತ್ತು. ಈಗಿನ ಕಾಲದಲ್ಲಿ ಬಾಳುತ್ತಿರುವ ನಾವು ದೇವರು ನೆಟ್ಟ ನಿಜವಾದ ದ್ರಾಕ್ಷೇಬಳ್ಳಿ ಮತ್ತು ಭೂಸಂಬಂಧದ–ಭೂಮಿಯ ದ್ರಾಕ್ಷೇಬಳ್ಳಿ ಎರಡೂ ಬೆಳೆಯುತ್ತಿರುವುದನ್ನು ಮತ್ತು ಭೂಮಿಯ ದ್ರಾಕ್ಷೇಬಳ್ಳಿಯು ಪರಲೋಕದ ದ್ರಾಕ್ಷೇಬಳ್ಳಿಗೆ ತದ್ವಿರುದ್ಧವಾಗಿದೆ ಎಂದು ಗಮನಿಸುತ್ತೇವೆ. ಎಷ್ಟರ ಮಟ್ಟಿಗೆ ಈ ವಿಷಯವನ್ನು ನಾವು ಸ್ಪಷ್ಟವಾಗಿ ನೋಡುತ್ತೇವೋ, ಅಷ್ಟರ ಮಟ್ಟಿಗೆ ನಮ್ಮ ಕರ್ತನ ಈ ಸಾಮ್ಯರೂಪವನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ, ನಮ್ಮ ಅನುದಿನದ ಜೀವಿತದಲ್ಲಿ ಅದನ್ನು ಅಳವಡಿಸುವುದರಲ್ಲಿ ಅದು ಸಹಾಯವಾಗುತ್ತದೆ. ನಾವು ಈ ತಪ್ಪಾದ ತಿಳುವಳಿಕೆಯಿಂದ ತಪ್ಪಾದ ಹೇಳಿಕೆಗಳಿಂದ ಮತ್ತು ತಪ್ಪಾದ ದ್ರಾಕ್ಷೇಬಳ್ಳಿಯಿಂದ ವಂಚನೆಗೊಳಗಾಗುವ ಆಪತ್ತು ಬಹಳ ಕಡಿಮೆಯಾಗಿರುತ್ತದೆ. ಅಥವಾ ತಪ್ಪಾದ ಕೊಂಬೆಗಳು ಮತ್ತು ಅದರ ಬೆಳವಣಿಗೆಗೆ ಸಂಬಂಧಪಟ್ಟ ತಪ್ಪಾದ ನಿಯಮಗಳಿಂದ ತಪ್ಪಿಸಿಕೊಳ್ಳುವೆವು. ಏಕೆಂದರೆ ಆ ತಪ್ಪಾದ ಕೊಂಬೆಗಳು ದೈವಿಕ ತೋಟಗಾರನ ಆರೈಕೆಯಲಿಲ್ಲ. **R 3544 : 2**

## 14 ಜನವರಿ

**"ಆದದರಿಂದ ನನ್ನ ಪ್ರಿಯ ಸಹೋದರರೇ, ಪ್ರತಿಯೊಬ್ಬರು ಕಿವಿಗೊಡುವುದರಲ್ಲಿ ತೀವ್ರವಾಗಿಯೂ ಮಾತಾಡುವುದರಲ್ಲಿ ಮತ್ತು ಕೋಪಿಸುವುದರಲ್ಲಿ ನಿಧಾನವಾಗಿಯೂ ಇರಲಿ" ( ಯಾಕೋಬನು 1 : 19)**

ಎಷ್ಟರ ಮಟ್ಟಿಗೆ ಕೋಪವೆಂಬ ತೀವ್ರವಾದ ಗುಣವನ್ನು ಅನುಮತಿಸುತ್ತೇವೋ ಅದೇ ರೀತಿಯಾದ ತೀವ್ರವಾದ ಗುಣವನ್ನು ಅದಕ್ಕೆ ವಿರುದ್ಧವಾದ–ಆಳವಾದ ಪ್ರೀತಿಯಲ್ಲಿ ತೋರಿಸಿದರೆ ಅದು ತುಂಬಾ ಒಳ್ಳೆಯದು. ಹೇಗೆ ಸರಿಯಾದ ಕಾರಣಕ್ಕಾಗಿ ಕೋಪಗೊಳ್ಳುವ ಸಮಯದಲ್ಲಿ ಕೋಪಗೊಳ್ಳದಿದ್ದರೆ ಅದು ಅಪೂರ್ಣ ನೆಲೆಯನ್ನು, ನ್ಯೂನತೆಯನ್ನು [ಕಳಂಕವನ್ನು] ತೋರಿಸುತ್ತದೆಯೋ,

ಅದೇ ರೀತಿ ಬಲವಾಗಿ ಪ್ರೀತಿಸುವದರಲ್ಲಿ ಅಸಮರ್ಥರಾದರೆ–ಅದು ಗುಣಲಕ್ಷಣದಲ್ಲಿ ಕೊರತೆ ಇರುವ ನೆಲೆಯನ್ನು ಸೂಚಿಸುತ್ತದೆ....... ಪವಿತ್ರಾತ್ಮದಿಂದ ಭ್ರೂಣಾಂಕುರಗೊಂಡ ನಮಗೆ **[begotten of the holy spirit]** "ಕ್ರಿಸ್ತನಲ್ಲಿರುವಂತಹ ಮನಸ್ಸು" ನಮ್ಮಲ್ಲಿರಬೇಕು. ಆ ಮನಸ್ಸು ಪ್ರೀತಿ, ಉದಾರತೆ, ದಯೆಯುಳ್ಳದಾಗಿದ್ದು ನಾವು ಸಹ ಮನುಷ್ಯರನ್ನು [ವಿಶೇಷವಾಗಿ ಸಹೋದರರನ್ನು] ಮನ್ನಿಸುವವರಾಗಿಬೇಕು, ಅಂದರೆ ಅದು ದೇವರ ಮೇಲಿರುವ ಭಯ ಭಕ್ತಿ ಮತ್ತು ವಿಧೇಯತೆಯನ್ನು ದೇವರಿಗೆ ತೋರಿಸುವುದಾಗಿದೆ. ಈ ಮನಸ್ಸು ತಂದೆಯಾದ ದೇವರು ಮತ್ತು ಆತನ ಮಗನಲ್ಲಿದೆ; ಇದಕ್ಕೆ ವಿರುದ್ಧವಾದ ಮನಸ್ಸು ವಿರೋಧಿಯಾದ ಸೈತಾನನಲ್ಲಿದೆ [ಎದುರಾಳಿಯಲ್ಲಿದೆ]. ಇವೆರಡೂ ಮನಸ್ಸು ಒಂದಕ್ಕೊಂದು ಎಷ್ಟು ವಿರುದ್ಧವಾಗಿದೆ ಅಂದರೆ ನಮ್ಮಲ್ಲಿ ಇವೆರಡೂ ಒಟ್ಟಿಗೆ ಇರಲು ಸಾಧ್ಯವಿಲ್ಲ– ನಾವು ದೇವರನ್ನು ಮತ್ತು ಲೋಕವನ್ನು [ಲೋಕದ ವಸ್ತುವನ್ನು], ಕ್ರಿಸ್ತನನ್ನು ಮತ್ತು ಬೇಲಿಯಲನ್ನು ಒಟ್ಟಿಗೆ ಸೇವಿಸಲು ಸಾಧ್ಯವಿಲ್ಲ. **R 3928 : 2, 4**

## 15 ಜನವರಿ

**"ಇದಾದ ಮೇಲೆ ಆತನು ಆ ದಿವಸಗಳಲ್ಲಿ ಪ್ರಾರ್ಥಿಸುವುದಕ್ಕಾಗಿ ಒಂದು ಬೆಟ್ಟಕ್ಕೆ ಹೋಗಿ ರಾತ್ರಿಯೆಲ್ಲಾ ದೇವರಿಗೆ ಪ್ರಾರ್ಥಿಸಿದನು" ( ಲೂಕ 6 : 12)**

ಸರ್ವಶಕ್ತನಿಂದ ಉಪಯೋಗಿಸಲ್ಪಟ್ಟ ಸತ್ಯವೇದದ ಮಹಾ ಭಕ್ತರೆಲ್ಲರೂ ಆತನ ಬಳಿ ನಿಯಮಿತವಾಗಿ ಪ್ರಾರ್ಥನೆಯಲ್ಲಿ ಹೋಗಿ ಎಲ್ಲಾ ವಿಷಯಗಳಿಗಾಗಿ ಆತನ ಮಾರ್ಗದರ್ಶನವನ್ನು ಹುಡುಕುತ್ತಿದ್ದರು ಎಂದು ಗಮನಿಸದೆ ಇರುವವರು ಯಾರು? ಪರಿಶುದ್ಧನೂ ಕೇಡು ಮಾಡದವನೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವಾತನಾದ ಮಹಾ ವಿಮೋಚಕನೂ ಸಹ ತಂದೆಯ ಬಳಿ ಪ್ರಾರ್ಥನೆಗೆ ಹೋಗಬೇಕಾದ ಅವಶ್ಯಕತೆ ಇತ್ತು–ಐಕ್ಯತೆ ಮತ್ತು ಸಂಭಾಷಣೆಗಳ ಅವಶ್ಯಕತೆ ಇತ್ತು–ನಿತ್ಯನಾದವನ ಬಳಿ ಭೇಟಿಯಾಗುವುದು ಅವಶ್ಯವಾಗಿತ್ತು . ನಮ್ಮ ಬಿನ್ನಹಕ್ಕೆ [ಬೇಡಿಕೆಗೆ] ಉತ್ತರವಾಗಿ ಸರ್ವಶಕ್ತನು ತನ್ನ ಯೋಜನೆಗಳನ್ನು ಬದಲಾಯಿಸುತ್ತಾನಾ? ಎಂದು ನಮ್ಮಲ್ಲಿ ಯಾರಾದರೂ ಕೇಳಬಹುದು. ನಿಶ್ಚಯವಾಗಿಯೂ ಆತನು ಹಾಗೆ ಮಾಡುವುದಿಲ್ಲ. ನಿಜವಾಗಿಯೂ ಇದಕ್ಕೆ ತದ್ವಿರುದ್ಧವಾಗಿ ಸತ್ಯವೇದದಲ್ಲಿ ನಮಗೆ ಎಚ್ಚರಿಸಿರುವುದೇನೆಂದರೆ ನಾವು ಆತನ ಚಿತ್ತದ ಪ್ರಕಾರವೇ ಕೇಳಬೇಕು. ನಮಗೆ ಎಚ್ಚರಿಸಲ್ಪಟ್ಟಿರುವುದು ಏನೆಂದರೆ ಒಂದು ವೇಳೆ ನಾವು ತಪ್ಪಾಗಿ ಬಿನ್ನಹ ಮಾಡಿದರೆ, ಆ ಬಿನ್ನಹಕ್ಕೆ ಉತ್ತರ ದೊರೆಯುವುದಿಲ್ಲ.

ಆದ್ದರಿಂದ ದೇವರ ವಾಕ್ಯವನ್ನು ಅಧ್ಯಯನ ಮಾಡಿ ದೈವಿಕ ಯೋಜನೆಯನ್ನು ಕುರಿತು ಬೆಳಕನ್ನು [ಜ್ಞಾನವನ್ನು] ಹೊಂದಿಕೊಂಡು ಅದಕ್ಕೆ ಅನುಗುಣವಾಗಿ ಪ್ರಾರ್ಥಿಸಿ, ನಮ್ಮ ಬಿನ್ನಹಕ್ಕೆ ದೊರೆಯುವ ಉತ್ತರದ ಮೂಲಕ ಬಲವನ್ನು ಮತ್ತು ಉತ್ತೇಜನವನ್ನು ಪಡೆಯುವುದು ಅವಶ್ಯವಾಗಿದೆ. **R 4913 : 2**

## 16 ಜನವರಿ

**"ಆದಿಯಿಂದಲೂ ದೇವರೇ ನಿಮಗೆ ನಿವಾಸಸ್ಥಾನವಾಗಿದ್ದಾನಲ್ಲಾ; ದೇವರ ಹಸ್ತವೇ ನಿಮಗೆ ಆಧಾರ" (ಧರ್ಮೋಪದೇಶಕಾಂಡ 33 : 27)**

ವಂಚಿಸುವಂತಹ ಭಯಂಕರವಾದ ಶೋಧನೆಗಳು ಹತ್ತಿರದ ಭವಿಷ್ಯದಲ್ಲಿದೆ ಎಂದು ಹೇಳುವ ಸತ್ಯವಾಕ್ಯಗಳು ಯಥೇಚ್ಛವಾಗಿವೆ. ಸುಳ್ಳು ಹೇಳುವ ದೂತರ ಬಗ್ಗೆ, ಅನೀತಿಯುಳ್ಳ ಮತ್ತು "ಸುಳ್ಳಾದ ಅದ್ಭುತಗಳಿಂದಲೂ" ವಂಚಿಸುವವರ ಬಗ್ಗೆ ಆ ವಾಕ್ಯವು ಹೇಳುತ್ತದೆ ಮತ್ತು ಸುಳ್ಳನ್ನು ನಂಬುವ ಹಾಗೆ ಸ್ವತಃ ಕರ್ತನೇ ಬಲವಾದ ವಂಚನೆಗಳನ್ನು ಕಳುಹಿಸುತ್ತಾನೆ ಅಥವಾ ಅನುಮತಿಸುತ್ತಾನೆ ಎಂದು ವಾಕ್ಯವು ನಮಗೆ ಹೇಳುತ್ತದೆ. ಈ ವಿಷಯದ ಸರಿಯಾದ ಪರಿಕಲ್ಪನೆ ನಮಗಿದ್ದರೆ ಜ್ಞಾನಿಗಳನ್ನು ಸೇರಿ ಇಡೀ ಲೋಕಕ್ಕೆ ಈ ವಂಚನೆಗಳಿಂದ ಪರಿಣಾಮ ಉಂಟಾಗುತ್ತದೆ ಎಂದು ತಿಳಿದುಬರುತ್ತದೆ ಮತ್ತು "ಆಯ್ದುಕೊಂಡವರನ್ನು"(very elect) ಬಿಟ್ಟು ಎಲ್ಲರೂ ಈ ವಂಚನೆಗೊಳಗಾಗುವರು ಮತ್ತು "ಆಯ್ದುಕೊಂಡವರು" (very elect) ಕಾಪಾಡಲ್ಪಡುವರು, ಅವರ ಸ್ವಂತ ಜ್ಞಾನದಿಂದಲ್ಲ ಅಥವಾ ಅವರ ಶ್ರೇಷ್ಠತೆಯಿಂದಲ್ಲ ಆದರೆ ದೇವರ ಬಲದಿಂದ ಮಾತ್ರ ಸಾಧ್ಯವಾಗುತ್ತದೆ. "ಯಾಕೆಂದರೆ ಸುಳ್ಳುಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳು ಎದ್ದು ಸಾಧ್ಯವಾದರೆ ಆಯಲ್ಪಟ್ಟವರನ್ನು ಸಹ ಮೋಸಗೊಳಿಸುವಂತೆ ದೊಡ್ಡ ಸೂಚಕಕಾರ್ಯಗಳನ್ನು ಅದ್ಭುತ ಕಾರ್ಯಗಳನ್ನು ಮಾಡಿ ತೋರಿಸುವರು" [ಮತ್ತಾಯ 24 : 24] **R 4379:3**

## 17 ಜನವರಿ

**"ಕರ್ತನಲ್ಲಿ ಶಾಂತವಾಗಿರು; ಮೌನವಾಗಿದ್ದು ಆತನಿಗಾಗಿ ಎದುರುನೋಡು" ( ಕೀರ್ತನೆಗಳು 37 : 7)**

ನಮ್ಮ ಹೊರಗಿನ ಸಮಾಧಾನ ಮತ್ತು ಶಾಂತತೆಯನ್ನು ಹಂಬಲಿಸಿ ಅದು ಸಿಗುವುದಕ್ಕೆ ಬಹಳ ತಡವಾದಾಗ ನಾವು ನಿರಾಶೆಗೊಳ್ಳಬಾರದು ಮತ್ತು ತಾಳ್ಮೆಯಿಂದ

ಸಹಿಸುವ ಪರೀಕ್ಷೆ ಉಂಟಾದಾಗ ನಮ್ಮ ನಂಬಿಕೆಯು ಕುಂಠಿತವಾಗಬಾರದು. ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗುವುದಕ್ಕೆ ನಿಧಾನವಾಗಿದೆ ಎಂದು ತೋರಿದಾಗ ನಮ್ಮ ತಂದೆ ನಮ್ಮನ್ನು ಮರೆತುಬಿಟ್ಟಿಲ್ಲ ಎಂದು ನಾವು ಅರಿತುಕೊಳ್ಳಬೇಕು. ನೂತನ ಸೃಷ್ಟಿಗಳಾದ ನಮಗೆ ಹೊರಗಿನ ಸಮಾಧಾನ ಮತ್ತು ಶಾಂತತೆಯು ಯಾವಾಗಲೂ ನಮ್ಮ ಅಗತ್ಯತೆಗಳಿಗನುಸಾರವಾಗಿ ಪರಿಸ್ಥಿತಿಗಳು ಸೂಕ್ತವಾಗಿರುವುದಿಲ್ಲ; ಮತ್ತು ಅಮೂಲ್ಯವಾದ ಆತ್ಮದ ಫಲಗಳು ನಮ್ಮಲ್ಲಿ ಬೆಳೆಯದಂತೆ ಇರುವ ಪರಿಸ್ಥಿತಿಯನ್ನು ನಾವು ಬಯಸುವುದಿಲ್ಲ. ಆದುದರಿಂದ "ನಿಮ್ಮನ್ನು ಶೋಧಿಸುವುದಕ್ಕೆ ಅಗ್ನಿಯಂತಿರುವ ಪರಿಶೋಧನೆಗಾಗಿ ನೀವು ಆಶ್ಚರ್ಯಪಡಬೇಡಿರಿ; ಅಪೂರ್ವವಾದ ಸಂಗತಿ ನಿಮಗೆ ಸಂಭವಿಸಿತೆಂದು ಯೋಚಿಸಬೇಡಿರಿ; ಆದರೆ ಸಂತೋಷವುಳ್ಳವರಾಗಿರಿ." [1 ಪೇತ್ರನು 4 : 12, 13]. ನಮ್ಮ ತಲೆಯಲ್ಲಿರುವ ಪ್ರತಿಯೊಂದು ಕೂದಲನ್ನು ಎಣಿಕೆ ಮಾಡಿರುವಾತನು ಅತಿ ಬಲಹೀನ ಮತ್ತು ವಿನಮ್ರವುಳ್ಳ ಆತನ ಮಕ್ಕಳ ಪಾಡುಗಳು ಮತ್ತು ಅವಶ್ಯಕತೆಗಳನ್ನು ಕುರಿತು ಅಲಕ್ಷ್ಯ ಮಾಡುವಾತನಲ್ಲ. ಓಹ್, ಅಂತಹ ಪ್ರೀತಿಯ ಪಾಲನೆಯ ಆರೈಕೆಯನ್ನು ಕುರಿತು ಅರಿತುಕೊಳ್ಳುವಾಗ ಎಷ್ಟು ಹಿತವಾಗಿದೆ! "ಆತನು ಶಾಂತತೆಯನ್ನು ದಯಪಾಲಿಸಿದರೆ ಕೇಡು ಮಾಡುವವನು ಯಾರು?" **R 5802 : 6**

## 18 ಜನವರಿ

**"ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವವುಳ್ಳದ್ದಾಗಿದೆ" (ರೋಮಾಪುರದವರಿಗೆ 8 : 10)**

ದೈವಿಕ ದೃಷ್ಟಿಯಿಂದ ನೋಡಿದಾಗ ದೇಹವು ಸತ್ತದ್ದಾಗಿದೆ. ಆದರೆ ಆತ್ಮ ಅಥವಾ ಮನಸ್ಸು ಜೀವವುಳ್ಳದ್ದಾಗಿ ಪರಿಗಣಿಸಲಾಗುತ್ತದೆ. ಇದು ದೇವರು ಗುರುತಿಸುವ ನೂತನ ಸೃಷ್ಟಿಯಾಗಿದೆ. ಇದಕ್ಕೆ ತಕ್ಕ ಕಾಲದಲ್ಲಿ ಹೊಸ ಆತ್ಮೀಕ ಶರೀರವನ್ನು ಕೊಡಲು ಆತನು ಉದ್ದೇಶವುಳ್ಳವನಾಗಿದ್ದಾನೆ–ಅದನ್ನು ಮೊದಲನೆಯ ಪುನರುತ್ಥಾನದಲ್ಲಿ ಕೊಡುತ್ತಾನೆ. ಈ ಆಲೋಚನೆಯು ನಮ್ಮ ಮನಸ್ಸಿನಲ್ಲಿ ಸ್ಥಿರವಾದ ಸ್ಥಾನವನ್ನು ಹೊಂದಿರಬೇಕು ಏಕೆಂದರೆ ನಾವು ಯಾವಾಗಲೂ ದೇವರ ಸಮಾಧಾನವನ್ನು ಮತ್ತು ಕ್ರಿಸ್ತನಲ್ಲಿ ಆತನ ದಯೆ ಮತ್ತು ಅನುಕಂಪವನ್ನು ಕುರಿತು ಅರಿತವರಾಗಿರಬೇಕು. ಒಂದು ವೇಳೆ ದೇವರು ನಮ್ಮ ಚಿತ್ತವನ್ನು ಪರಿಗಣಿಸುತ್ತಾನೆ ಎಂಬ ನಿಜಾಂಶದ ದೃಷ್ಟಿಯನ್ನು ಕಳೆದುಕೊಂಡರೆ, ನಾವು ನಮ್ಮ ಬಗ್ಗೆ ಯೋಚಿಸಲು

ಹೋದರೆ ಮತ್ತು ಶರೀರದ ಪ್ರಕಾರ ದೇವರು ನಮ್ಮನ್ನು ಪರಿಗಣಿಸುತ್ತಾನೆ ಎಂದು ಅಂದುಕೊಂಡರೆ, ಅಷ್ಟರ ಮಟ್ಟಿಗೆ ನಿಜವಾಗಿಯೂ ನಾವು ಕತ್ತಲಲ್ಲಿ, ಗೊಂದಲದಲ್ಲಿ ಮತ್ತು ನಿರುತ್ಸಾಹದಲ್ಲಿ ಒಳಗಾಗುತ್ತೇವೆ. ಆದರೆ ಅದಕ್ಕೆ ಬದಲಾಗಿ ನೀತಿಯ ನಿಮಿತ್ತ ನಮ್ಮ ಆತ್ಮ ಅಥವಾ ಚಿತ್ತ ಜೀವವುಳ್ಳದ್ದಾಗಿದೆ ಎಂದು ಮರೆಯದಿರೋಣ. ಯಾಕೆಂದರೆ ಅದು ದೇವರೊಂದಿಗೆ ಹೊಂದಾಣಿಕೆ [ಸಾಮರಸ್ಯ] ಹೊಂದಿದೆ. ಆದದರಿಂದ ನಾವು ಚಿತ್ತ ಅಥವಾ ಉದ್ದೇಶದ ವಿಷಯದಲ್ಲಿ ಎಂದಿಗೂ ಸಡಿಲವಾಗಿರದೆ ನಮ್ಮ ಜೀವಿತದ ನಡವಳಿಕೆಯನ್ನು ಆಡಳಿತ ಮಾಡುವವರಾಗಿರೋಣ. ಆದರೆ ಯಾವುದೇ ರೀತಿಯಲ್ಲಿ ಅಜಾಗರೂಕತೆ ಇದೆ ಎಂದರೆ ಅಷ್ಟರ ಮಟ್ಟಿಗೆ ಆತ್ಮೀಕ ಜೀವಿತದಲ್ಲಿ ನಷ್ಟ ಉಂಟಾಗುತ್ತದೆ. ಸರಿಯಾದ ಚಿತ್ತವುಳ್ಳವರಾಗಿರಲು ನಮ್ಮಿಂದ ಯಾವಾಗಲೂ ಸಾಧ್ಯವಾಗುತ್ತದೆ ಮತ್ತು ಸಂಪೂರ್ಣ ನಿಷ್ಟಾವಂತರಾಗಿರುವವರನ್ನು ಮಾತ್ರವೇ ಕ್ರಿಸ್ತನಲ್ಲಿ ದೇವರು ಅಂಗಿಕರಿಸುತ್ತಾನೆ. **R 3203:2**

## 19 ಜನವರಿ

**"ಸ್ನೇಹಿತನು ಎಲ್ಲಾ ಸಮಯಗಳಲ್ಲಿ ಪ್ರೀತಿಸುತ್ತಾನೆ, ಇಕ್ಕಟ್ಟಿಗೋಸ್ಕರ ಸಹೋದರನು ಹುಟ್ಟಿದ್ದಾನೆ" (ಜ್ಞಾನೋಕ್ತಿಗಳು 17 : 17)**

ಒಬ್ಬ ಸ್ನೇಹಿತನು ಎಲ್ಲಾ ಕಾಲದಲ್ಲಿಯೂ ಪ್ರೀತಿಸುತ್ತಾನೆ ಎಂದು ಜ್ಞಾನಿಯಾದ ಸೊಲೊಮೋನನು ಚೆನ್ನಾಗಿ ಹೇಳಿದ್ದಾನೆ. ತನಗೆ ಅನುಕೂಲತೆ [ಪ್ರಯೋಜನ] ಉಂಟೆಂದು ತಿಳಿದು ಅಂಥಹ ಸಮಯದಲ್ಲಿ ಮಾತ್ರ ಪ್ರೀತಿಸುವವರು ನಿಜವಾದ ಪ್ರೀತಿಯನ್ನು ಅರಿಯದೆ ಇದ್ದಾರೆ. ತನ್ನ ಸಹೋದರನು ಐಶ್ವರ್ಯವಂತನಾಗಿರುವಾಗ ಮಾತ್ರ ಪ್ರೀತಿಸುವವನು, ತನ್ನ ಪ್ರೀತಿ ಮತ್ತು ಸ್ನೇಹವು ಉಪದ್ರವ ಮತ್ತು ಪತ್ರಿಕೂಲತೆಗಳು [ಕೇಡುಗಾಲ] ಎಂಬ ಶಾಖ ಬರುವಾಗ ಬಾಡಿಹೋದರೆ ಅದು ನಿಜವಾದ ಅರ್ಥದಲ್ಲಿ ಎಂದಿಗೂ ಪ್ರೀತಿ ಎಂದೆಣಿಸುವುದಿಲ್ಲ. ಆದರೆ ಅಂಥವರು ಸ್ವಾರ್ಥವುಳ್ಳವರೂ–ಕೇವಲ ಲೋಕದ ಪ್ರೀತಿಯುಳ್ಳವರೂ ಆಗಿದ್ದಾರೆ. ದೇವರು ನಮ್ಮ ಮೇಲಿಟ್ಟಿರುವ ಪ್ರೀತಿಯು ಸ್ವಾರ್ಥವುಳ್ಳದಲ್ಲ. ಆದರೆ ಅದು ಉದಾರ ಪ್ರಕೃತಿಯುಳ್ಳದ್ದು ಎಂದು ನಮಗೆ ತೋರಿಸಿದ್ದಾರೆ. ಸ್ವತಃ ದೊಡ್ಡ ವೆಚ್ಚದಲ್ಲಿ [ತನ್ನ ಒಬ್ಬನೇ ಮಗನನ್ನು ನಮಗೆ ಕೊಟ್ಟು] ನಮ್ಮ ಬಂಧನದಿಂದ ಬಿಡುಗಡೆ ಮಾಡುವ ಏರ್ಪಾಡನ್ನು ಮಾಡಿದ್ದಾರೆ ಮತ್ತು ಪುತ್ರರು ಎಂಬ ಹಕ್ಕನ್ನು [ಸವಲತ್ತನ್ನು] ನಮಗೆ ಕೊಟ್ಟಿದ್ದಾರೆ. ಎಷ್ಟೋ ನಿಜವಾದ ಪ್ರೀತಿಯಿಂದ [ತನ್ನ

ಮಗನನ್ನು] ನಮಗಾಗಿ ತ್ಯಾಗ ಮಾಡಿದ್ದಾರೆ. ಆದ್ದರಿಂದ ಇತರರಿಗಾಗಿ ನಮ್ಮ ಪ್ರೀತಿ, ಕರ್ತನಿಗಾಗಿ ನಮ್ಮ ಪ್ರೀತಿ, ಸಹೋದರರಿಗಾಗಿ ನಮ್ಮ ಪ್ರೀತಿ, ನಮ್ಮ ಕುಟುಂಬಕ್ಕಾಗಿ ನಮ್ಮ ಪ್ರೀತಿ, ನಮ್ಮ ನೆರೆಹೊರೆಯವರಿಗಾಗಿ ನಮ್ಮ ಪ್ರೀತಿ, ನಮ್ಮ ಶತ್ರುಗಳಿಗೂ ಸಹ ನಾವು ಪ್ರೀತಿ ತೋರಿಸಿ, ಅವರ ಉನ್ನತ ಒಳಿತಿಗಾಗಿ ನಾವು ತ್ಯಾಗ ಮಾಡಲು ಸಿದ್ಧರಾಗಿದ್ದೇವಾ ಎಂದು ನಮ್ಮನ್ನು ನಾವೇ ವಿಚಾರಿಸಿಕೊಳ್ಳೋಣ. **R 4224:5**

## 20 ಜನವರಿ

### "ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆ ಪಡದೆ [ಇರಲಿ]" (1 ಪೇತ್ರನು 4 : 16)

ಅಪೋಸ್ತಲನಾದ ಪೇತ್ರನು ತನಗೆ ಬಂದ ಬಾಧೆಗಳಿಗಾಗಿ ನಾಚಿಕೆಪಡಲಿಲ್ಲ. ಏಕೆಂದರೆ ಆತನು ಕ್ರಿಸ್ತನ ನಿಮಿತ್ತ ಸಹಿಸಿಕೊಳ್ಳುತ್ತಿದ್ದಾನೆಂದು ಆತನಿಗೆ ಮನವರಿಕೆಯಾಗಿತ್ತು. ಯಾವ ಪುರುಷನು ಅಥವಾ ಸ್ತ್ರೀಯು ಅಪರಾಧಿ ಎಂದೆಣಿಸಿ, ನ್ಯಾಯಪ್ರಮಾಣವನ್ನು ಮೀರಿದವರಾಗಿ, ಬಹಿರಂಗವಾಗಿ ಬಂಧನವಾದರೆ ಅವರಿಗೆ ಆಳವಾದ ನೋವಿನ ಭಾವನೆಯುಂಟಾಗುತ್ತದೆ. ಆದರೆ ಇಂತಹ ಅನುಭವಗಳು ಉಂಟಾದರೆ ಮತ್ತು ಅದು ನಮಗೆ ಬರುವ ಕಾರಣವು ನಾವು ಕರ್ತನಿಗಾಗಿ ನಂಬಿಗಸ್ತಿಕೆಯಿಂದ ಇರುವ ಕಾರಣದಿಂದಾಗಿ ಎಂದು ನಮಗೆ ಮನವರಿಕೆಯಾದರೆ, ಆತನ ಹೆಜ್ಜೆಯ ಜಾಡನ್ನು ಹಿಂಬಾಲಿಸಿ ಅವಮಾನದಲ್ಲಿಯೂ ಸಂತೋಷಪಡುತ್ತೇವೆ, ಇಲ್ಲದಿದ್ದರೆ ಅದು ಅವಮಾನ ಮತ್ತು ಅಸಹ್ಯ ಎಂದೆಣಿಸುತ್ತದೆ. ಆದ್ದರಿಂದ ಒಂದು ವೇಳೆ ಕರ್ತನ ಏರ್ಪಾಡಿನಲ್ಲಿ ಬಂಧನ ಅಥವಾ ಜೈಲು ಶಿಕ್ಷೆಯಾದರೆ ಅಥವಾ ಯಾರಿಗಾದರು ಈ ಲೇಖನವನ್ನು ಓದುವವರಿಗೆ ಛಡಿಯೇಟು ಸಿಕ್ಕಿದರೆ, ಒಂದು ವೇಳೆ ಬಹಿರಂಗವಾಗಿ ಅಥವಾ ಪರೋಕ್ಷವಾಗಿ [ಮರೆಯಾಗಿ] ಕರ್ತನ ನಿಮಿತ್ತ ಮತ್ತು ಆತನ ಸತ್ಯದ ನಿಮಿತ್ತ ನಂಬಿಗಸ್ತರಾಗಿರುವುದರಿಂದ ಉಪದ್ರವಗಳು ಅವರಿಗೆ ಕಾಣಿಸಿಕೊಂಡರೆ ಅವರು ನಾಚಿಕೆಪಡದಿರಲಿ; ಇದರ ನಿಮಿತ್ತ ಅವರು ದೇವರನ್ನು ಮಹಿಮೆಪಡಿಸಲಿ, ಏಕೆಂದರೆ ಅವರು ಕ್ರಿಸ್ತನ ನಿಮಿತ್ತ ಬಾಧೆಗಳನ್ನು ಅನುಭವಿಸಲು ಯೋಗ್ಯರಾಗಿದ್ದಾರೆಂದು ಎಣಿಸಿ ಸಂತೋಷಪಡಲಿ ಮತ್ತು ನಮ್ಮ ಕರ್ತನಾದ ಯೇಸುವಿಗೂ ಹೀಗೆಯೇ ನಡೆಯಿತು ಎಂದು ಜ್ಞಾಪಿಸಿಕೊಳ್ಳಲಿ. ಆತನನ್ನು ಬಂಧಿಸಿದರು; ಆತನು ಕಟ್ಟಲ್ಪಟ್ಟನು; ಆತನಿಗೆ ಛಡಿಯೇಟು ಕೊಡಲಾಯಿತು; ಆತನನ್ನು ಬಹಿರಂಗವಾಗಿ ಅವಮಾನ ಪಡಿಸಲಾಯಿತು; ಆತನು ದೇವರಿಗೆ ವಿರೋಧವಾಗಿ ದೇವದೂಷಣೆ ಮಾತುಗಳನ್ನಾಡಿದ್ದಾನೆಂದು ಆತನನ್ನು ಶಿಲುಬೆಗೆ ಹಾಕಿದರು. **R 3189 : 6**

## 21 ಜನವರಿ

**"ಕರ್ತನ ದೃಷ್ಟಿ ನೀತಿವಂತರ ಮೇಲಿದೆ. ಆತನು ಅವರ ಪ್ರಾರ್ಥನೆಗಳಿಗೆ ಕಿವಿಗೊಡುತ್ತಾನೆ" (1 ಪೇತ್ರನು 3 : 12)**

ನಮ್ಮ ಪರಲೋಕದ ತಂದೆಯು ನಮ್ಮನ್ನು ಮತ್ತು ನಮಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ಆಳವಾದ ಅಕ್ಕರೆಯುಳ್ಳವನಾಗಿದ್ದಾನೆ. ನಮ್ಮ ತಲೆಯಲ್ಲಿರುವ ಎಲ್ಲಾ ಕೂದಲನ್ನು ಎಣಿಸಿರುವಾತನಿಗೆ ಗಮನಕ್ಕೆ ಬಾರದೆಯಿರುವ ಯಾವ ಚಿಕ್ಕ ವಿಷಯವಾದರೂ ಇದೆಯೇ?....(ಮೊದಲು) ಶ್ರೇಷ್ಠವಾದ ಸ್ಥಿತಿಯಲ್ಲಿ ಸೃಷ್ಟಿಸಲ್ಪಟ್ಟ ನಾವು ಈಗ ಬಿದ್ದು ಹೋದ ಸೃಷ್ಟಿಗಳಾಗಿದ್ದರೂ, ನಮ್ಮ ಮನುಕುಲವನ್ನು ದೇವರು ಎಷ್ಟೋ ಹೆಚ್ಚಾಗಿ ಪ್ರೀತಿಸಿದನೆಂದರೆ ನಾವು ಪಾಪಿಗಳಾಗಿದ್ದಾಗಲೂ, ಬಹಳ ಬೆಲೆಕೊಟ್ಟು ನಮ್ಮನ್ನು ವಿಮೋಚಿಸಲು ಮತ್ತು ನಮ್ಮನ್ನು ಹಿಂದಿನ ಸ್ಥಿತಿಗೆ ತರಲು ಮತ್ತು ನಿತ್ಯವಾದ ಮಹಿಮೆ ಹೊಂದಲು ಆತನು ಏರ್ಪಾಡು ಮಾಡಿದ್ದಾನೆ. ಆತನು ನಮ್ಮನ್ನು ಪ್ರೀತಿಸಿದರಿಂದಲೇ ಕ್ರಿಸ್ತನ ಮೂಲಕ ನಾವು ಆತನ ಮಕ್ಕಳಾಗುವಂತೆ ಆತನು ನಮಗೆ ಕೃಪೆಯುಳ್ಳ ದಯೆಯನ್ನು ತೋರಿಸಿದ್ದಾನೆ....ಬೇರೆ ಹೆಚ್ಚು ಮುಖ್ಯವಾದ ವಿಷಯಗಳಲ್ಲಿ ಆತನು ಬಹಳ ಬಿಡುವಿಲ್ಲದವನಾಗಿದ್ದಾನೆಂದು ನಾವು ಭಯಪಡಬೇಕಾಗಿಲ್ಲ ಅಥವಾ ಚಿಕ್ಕ ಚಿಕ್ಕ ವಿಷಯಗಳಿಗಾಗಿ ನಾವು ಆತನ ಬಳಿಗೆ ಪದೇ ಪದೇ ಹೋಗುವುದರಿಂದ ಆತನು ಬೇಸರ ಪಡುತ್ತಾನೆ ಎಂದು ನಾವು ಭಯಪಡಬೇಕಾಗಿಲ್ಲ....ನಮ್ಮ ಮನೆಯ ಬಾಗಿಲನ್ನು ಮುಚ್ಚಿ ಅಂತರಂಗದಲ್ಲಿ ನಾವು ಪ್ರಾರ್ಥಿಸುವಾಗ ನಮ್ಮ ತಂದೆಯು ಬಹಿರಂಗವಾಗಿ ಅದರ ಫಲವನ್ನು [ಬಹುಮಾನವನ್ನು] ನಮಗೆ ಕೊಡುವನು. **R1865:5, 1864:3, 1865:4**

## 22 ಜನವರಿ

**"ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ." (ಗಲಾತ್ಯದವರಿಗೆ 5 : 13)**

ನಾವು ಇತರರಿಗಾಗಿ, ಕರ್ತನಿಗಾಗಿ, ಸಹೋದರ ಸಹೋದರಿಯರಿಗಾಗಿ, ನಮ್ಮ ಕುಟುಂಬದವರಿಗಾಗಿ, ನಮ್ಮ ನೆರೆಹೊರೆಯವರಿಗಾಗಿ, ನಮ್ಮ ಶತ್ರುಗಳಿಗಾಗಿಯೂ ಸಹ, ಅವರ ಮೇಲಿರುವ ಆಸಕ್ತಿಗಾಗಿ ಮತ್ತು ಅವರ ಉನ್ನತ ಒಳಿತಿಗಾಗಿ ನಮಗಿರುವ ಪ್ರೀತಿಯನ್ನು ಕುರಿತು ನಾವು ನ್ಯಾಯವಿಚಾರಣೆ ಮಾಡೋಣ. ಒಂದು ವೇಳೆ ಕರ್ತನಿಗಾಗಿ ನಾವು ಯಾವ ಬಲಿಯನ್ನೂ ಸಲ್ಲಿಸದೆ

ನಾವು ಕರ್ತನನ್ನು ಪ್ರೀತಿಸುತ್ತೇವೆ ಎಂದು ಹೇಳಿ ನಮ್ಮನ್ನು ನಾವೇ ವಂಚಿಸಿಕೊಳ್ಳದೆ ಇರೋಣ. ಒಂದು ವೇಳೆ ನಾವು ಸಹಿಸಿಕೊಳ್ಳುವುದಕ್ಕೆ ಮನಸ್ಸಿಲ್ಲದಿದ್ದರೆ, ಸಹೋದರರ ಒಳಿತಿಗಾಗಿ, ಪ್ರಿಯರಾಗಿರುವ ಇತರರಿಗೆ ಬಲಿಯನ್ನು ಸಲ್ಲಿಸದೆ ಈ ವಿಷಯವನ್ನು ತಪ್ಪಾಗಿ ತಿಳಿದುಕೊಂಡು ಅದನ್ನು ಪ್ರೀತಿಯೆಂದು ಕರೆಯದೆ ಇರೋಣ. ಒಂದು ವೇಳೆ ನಮ್ಮ ಶತ್ರುಗಳಿಗೆ ಅವಶ್ಯವಿದ್ದಾಗ ಅವರಿಗೆ ದಯೆ ತೋರಿಸದೆ ಕರ್ತನನ್ನು ಪ್ರೀತಿಸುತ್ತೇವೆಂದು ತಪ್ಪಾಗಿ ತಿಳಿಯದೆ ಇರೋಣ; ಸದ್ಗುಣ [ಒಳ್ಳೆಯತನ], ದಯೆ ಮತ್ತು ಸ್ವಯಂ–ನಿರಾಕರಣೆಗಳು–ಇವುಗಳು ನಮ್ಮ ಪ್ರೀತಿಯುಳ್ಳ ಹೃದಯಕ್ಕೆ ಏಕೈಕ ಸೂಚಕವಾಗಿದೆ ಎಂದು ಕರ್ತನು ಹೇಳಿದ್ದಾನೆ. **R 4224:5**

## 23 ಜನವರಿ

**"ಅವರು ಅಪೋಸ್ತಲರ ಬೋಧನೆಯಲ್ಲಿಯೂ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿ ಸ್ಥಿರಚಿತ್ತರಾಗಿದ್ದರು." (ಅಪೋಸ್ತಲರ ಕೃತ್ಯಗಳು 2 : 42)**

ಎಲ್ಲಾ ದೇವಜನರು ಪ್ರೀತಿಯಿಂದಲೂ ಅನ್ಯೋನ್ಯತೆಯಲ್ಲಿಯೂ ದೈವಿಕ ಕಾಳಜಿಯ ಅಡಿಯಲ್ಲಿ "ರಾಜವಂಶದ ಯಾಜಕರಾಗಿ" ನಿಜರೂಪ ಗುಡಾರದ "ಪರಿಶುದ್ಧ" ಸ್ಥಳದಲ್ಲಿ — "ಪರಲೋಕದ ಸಿಂಹಾಸನದಲ್ಲಿ ಜೊತೆಯಾಗಿ ಕುಳಿತುಕೊಳ್ಳುವರು." ಈ ಲೋಕದ ಪ್ರಕಾರವಾಗಿ ನಮ್ಮ ವಾಸಸ್ಥಳಕ್ಕೆ ಸಂಬಂಧಿಸಿದಂತೆ ಇಂದು ಅನುಕೂಲಕರವಾದ ರೈಲುಮಾರ್ಗ ಮತ್ತು ಅಂಚೆ ಸೇವೆಗಳ ಮೂಲಕ ಇನ್ನೂ ಹತ್ತಿರದಲ್ಲಿ ಬದುಕಬಹುದು. ಆದ್ದರಿಂದ ನಾವು "ಒಬ್ಬರಿಗೊಬ್ಬರು ಆಗಾಗ್ಗೆ ಮಾತನಾಡುವುದು" ನಮ್ಮೆಲ್ಲರ ಕರ್ತವ್ಯವಾಗಿದೆ. ಏಕೆಂದರೆ ಪ್ರವಾದಿಯು ಹೇಳುವಂತೆ ಕರ್ತನು ಅದನ್ನು ಕೇಳಿ, ಗಮನಿಸಿ, ನಮ್ಮ ಒಬ್ಬರಿಗೊಬ್ಬರ ಮಾತುಗಳಿಂದ ನಮ್ಮ ಆಶೀರ್ವಾದಗಳು ವೃದ್ಧಿಯಾಗುವಂತೆ ಮಾಡುತ್ತಾನೆ. [ಮಲಾಕಿ 3 : 16] ಮತ್ತು ನಾವು ಸಲಹೆ ನೀಡುವುದೇನೆಂದರೆ, "ನಮ್ಮ ಪಾದಗಳಿಗೆ ನೇರವಾದ ದಾರಿಗಳನ್ನು ಮಾಡಬೇಕು, ಇಲ್ಲದಿದ್ದರೆ [ನಮ್ಮ] ಕುಂಟಕಾಲು ದಾರಿ ತಪ್ಪುತ್ತದೆ" ಎಂಬ ಆದೇಶವು ಭಾಗಶಃ ನೆರವೇರಿಕೆಯಾಗಿದೆ. ಒಂದು ವೇಳೆ ನಾವು ವಿಶ್ವಾಸದ ಮನೆವಾರ್ತೆಯವರೊಂದಿಗೆ ಆಗಾಗ್ಗೆ ಮಾತಾಡುವುದರಿಂದ ಅಂತಹ ವಾಸಸ್ಥಾನಕ್ಕೆ ನಮ್ಮನ್ನು ನಡೆಸುತ್ತದೆ. ನಮ್ಮ ಐಶ್ವರ್ಯ ಮತ್ತು ನಮ್ಮ ಬೇರೆ ಎಲ್ಲಾ ವಿಷಯಗಳಿಗಿಂತ ಮೊದಲು ದೇವರಿಗೆ ನಾವು ಮೊದಲ ಸ್ಥಾನವನ್ನು ನೀಡೋಣ ಮತ್ತು ಕ್ರೈಸ್ತ ಸಹೋದರರೊಂದಿಗಿನ ಅನ್ಯೋನ್ಯತೆ ಮತ್ತು

ಕೃಪೆಯಲ್ಲಿ ಬೆಳೆಯುವುದಕ್ಕೆ ಎರಡನೆಯ ಸ್ಥಾನವನ್ನು ನೀಡೋಣ. ಆದ್ದರಿಂದ ನಾವು ಮೊದಲು ದೇವರ ರಾಜ್ಯವನ್ನು ಮತ್ತು ಅದರ ನೀತಿಯನ್ನು ಹುಡುಕುವುದು ಉತ್ತಮವಾಗಿದೆ ಮತ್ತು ನೂತನ ಸೃಷ್ಟಿಯಾಗಿರುವ ನಮಗೆ ನಿಜವಾಗಿ ಅವಶ್ಯಕತೆಗೆ ಅನುಗುಣವಾಗಿ ಎಲ್ಲಾ ಇತರ ವಸ್ತುಗಳು ನಮಗೆ ಕೊಡಲ್ಪಡುವವು. **R 4090:5**

## 24 ಜನವರಿ

**"ಹೀಗೆಯೇ ದಾವೀದನು ದಿನದಿನಕ್ಕೆ ದೊಡ್ಡವನಾಗುತ್ತಾ ಇದ್ದನು, ಸೈನ್ಯಗಳ ದೇವರಾದ ಕರ್ತನು ಅವನ ಸಂಗಡ ಇದ್ದನು." (2 ಸಮುವೇಲನು 5:10)**

ರಾಜ್ಯವನ್ನು ಆಳುವುದಕ್ಕಾಗಿ ಕಾದಿದ್ದ ದಾವೀದನು, ತನ್ನ ಅನುಭವಗಳ ಮೂಲಕ ಕಲಿತುಕೊಂಡ ಪಾಠಗಳು, ಅದರ ಮೂಲಕ ಅಭಿವೃದ್ಧಿ ಹೊಂದಿದ ಗುಣಲಕ್ಷಣಗಳು, ಅದಕ್ಕೆ ತಯಾರಾಗುವುದರಿಂದ ಆತನು ಹೊಂದಿದ ಜ್ಞಾನ ಮತ್ತು ನಿಧಾನತೆ ಇವೆಲ್ಲವು ಸುವಾರ್ತಾಯುಗದಲ್ಲಿರುವ ಸಭೆಯವರಿಗೆ ಒಂದು ದೊಡ್ಡ ಪಾಠ ಕಲಿತುಕೊಳ್ಳುವುದಕ್ಕೆ ಉದಾಹರಣೆಯಾಗಿವೆ. ನಾವೂ ಸಹ ಕರ್ತನ ಸಿಂಹಾಸನದಲ್ಲಿ ಕುಳಿತುಕೊಳ್ಳುವುದಕ್ಕಾಗಿ — ಆತನ ನಾಮದಲ್ಲಿ ಆಳ್ವಿಕೆ ಮಾಡುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ. ನಾವೂ ಸಹ ಅಂತಹ ಅಧಿಕಾರ ಪಡೆದುಕೊಳ್ಳುವುದಕ್ಕಾಗಿ ಅದನ್ನು ಕುರಿತು ಅಪೋಸ್ತಲನು ಹೇಳುವ ಹಾಗೆ ಮುಂದೆ ಬರಲಿಕ್ಕಿರುವ ಮಹಿಮೆ, ಸಂತೋಷಗಳಿಗೆ ಮತ್ತು ನಾವು ಕಿರೀಟ ಹೊಂದುವ ದಿನಕ್ಕೆ ಪ್ರವೇಶಿಸುವುದಕ್ಕಾಗಿ ಈಗಲೇ ಅದರ ಉದ್ಯೋಗದ ಮುನ್–ರುಚಿನೋಡುವುದಕ್ಕಾಗಿ ಪವಿತ್ರಾತ್ಮದಿಂದ ಅಭಿಷೇಕಿಸಲ್ಪಟ್ಟಿದ್ದೇವೆ. ಶಿಸ್ತು, ಸ್ವಯಂ ಕಟ್ಟುಪಾಡು, ವಿಶ್ವಾಸ, ಸ್ಥೈರಣೆ ಮತ್ತು ನಿರೀಕ್ಷೆಗಳಂತಹ ಈ ಎಲ್ಲಾ ಗುಣಗಳು ದಾವೀದನನ್ನು ಕರ್ತರ ಜನರಿಗೆ ರಾಜರನ್ನಾಗಿ ಮಾಡಿ, ಆತನು ಆ ಆಳ್ವಿಕೆಗೆ ತಕ್ಕವನು ಎಂದು ಸೂಚಿಸಿದ್ದಾದರೆ, ಅದಕ್ಕಿಂತಲೂ ಉನ್ನತವಾದ ಪದವಿಗೆ ಭೂಲೋಕದ ಸಿಂಹಾಸನಕ್ಕೆ ದೇವರ ಪ್ರತಿನಿಧಿಗಳಾಗಿ ಮತ್ತು ರಾಜವಂಶದ ಯಾಜಕರಾಗಲು, ಆಳ್ವಿಕೆ ಮಾಡಲು, ನ್ಯಾಯತೀರ್ಪು ಮಾಡಲು ಮತ್ತು ಮನುಕುಲವನ್ನು ಶೋಧಿಸಿ, ಅವರಲ್ಲಿ ಎಷ್ಟು ಸಾಧ್ಯವೋ ಅಷ್ಟು ಜನರನ್ನು ಅವರ ಅಳಿವಿನ ಸ್ಥಿತಿಯಿಂದ ರಕ್ಷಿಸಲು ಮತ್ತು ದೇವರೊಂದಿಗೆ ಪೂರ್ಣ ಸಾಮರಸ್ಯವನ್ನು ಹೊಂದುವಂತೆ ಮಾಡಲು ನಮಗೆ ಎಷ್ಟೋ ಹೆಚ್ಚಾದ ಕಠಿಣ ಪಾಠಗಳಿರುತ್ತದೆ. **R 4236:1**

## 25 ಜನವರಿ

**"ಕರ್ತನ ಆಶೀರ್ವಾದವು ಐಶ್ವರ್ಯವನ್ನುಂಟು ಮಾಡುವುದು ಅದರೊಂದಿಗೆ ಆತನು ಯಾವ ದುಃಖವನ್ನೂ ಸೇರಿಸುವುದಿಲ್ಲ" ( ಜ್ಞಾನೋಕ್ತಿಗಳು 10 : 22)**

ಯಾರೆಲ್ಲಾ ಕರ್ತನ ಆಶೀರ್ವಾದವನ್ನು ಹೊಂದಿದ್ದಾರೋ ಅವರು ಒಂದು ವೇಳೆ ಈ ಲೋಕದ ಸಂಪತ್ತನ್ನು ಹೊಂದದಿದ್ದರೂ ಅಂಥವರು ನಿಜವಾಗಿಯೂ ಐಶ್ವರ್ಯವಂತರಾಗಿದ್ದಾರೆ. ಲೋಕದಲ್ಲಿ ಎಷ್ಟೋ ಐಶ್ವರ್ಯವುಳ್ಳವನಾಗಿದ್ದರೂ ಅವನ ಐಶ್ವರ್ಯವು ಆತನಿಗೆ ಸಮಾಧಾನ, ಸಂತೋಷ ಮತ್ತು ಆನಂದವನ್ನು ತರದಿದ್ದರೆ ಅದರಿಂದ ಪ್ರಯೋಜನವೇನು? ನಾವು ಎಲ್ಲಿ ಹೋದರು ಬಡವರನ್ನು ಮತ್ತು ಐಶ್ವರ್ಯವಂತರನ್ನು ನೋಡುತ್ತೇವೆ, ಅವರು ಸಂತೋಷವನ್ನು ಉಲ್ಲಾಸವನ್ನು ಹುಡುಕುತ್ತಿದ್ದಾರೆ; ಅವರಲ್ಲಿ ಬಹಳ ಕಡಿಮೆ ಜನರು ಅದನ್ನು ಕಂಡುಕೊಳ್ಳುತ್ತಾರೆ! ಅಯ್ಯೋ! ಈ ಲೋಕವು ಕರ್ತನ ಆಶೀರ್ವಾದದಿಂದ ಬರುವಂತಹ, ಯಾವಾಗಲೂ ನೆಲೆಸಿರುವಂತಹ ಸಂತೋಷ, ಸಮಾಧಾನ, ಐಶ್ವರ್ಯವು ಯಾವುದೆಂದು ಅರಿತುಕೊಳ್ಳುವುದು ಅಸಾಧ್ಯವೆಂದು ತೋರುತ್ತದೆ. ಈಗ ಇರುವ ಆನಂದಕ್ಕಿಂತಲೂ ಮುಂದೆ ಬರುವಂಥದ್ದು ಈಗಿರುವ ಜೀವಕ್ಕಿಂತಲೂ ಹೆಚ್ಚಿನದಾಗಿದೆ. ಕರ್ತನು ತನ್ನ ದಯೆಯಿಂದ, ತನ್ನ ವಾಗ್ದಾನದಿಂದ, ತನ್ನ ಮಾರ್ಗದರ್ಶನ ಮತ್ತು ತನ್ನ ಆಶೀರ್ವಾದದಿಂದ ಯಾರನ್ನು ಐಶ್ವರ್ಯವಂತರನ್ನಾಗಿ ಮಾಡುತ್ತಾನೋ, ಅವರಿಗಿರುವ ಸಂತೋಷವನ್ನು ಇತರರು ವ್ಯರ್ಥವಾಗಿ ಹುಡುಕಲು ಹಂಬಲಿಸುತ್ತಾರೆ. ಈ ಸುವಾರ್ತಾ ಯುಗದಲ್ಲಿ ನಿಜವಾದ ಐಶ್ವರ್ಯವನ್ನು ಹೊಂದಿಕೊಳ್ಳುವವರು "ಕೇಳುವಂತಹ ಕಿವಿ"ಯುಳ್ಳವರಾಗಿರುತ್ತಾರೆ ಮತ್ತು ಕ್ರಿಸ್ತನಲ್ಲಿ ದೇವರ ದಯೆ ಹೊಂದುವುದನ್ನು ಕುರಿತು ಕಲಿತುಕೊಳ್ಳುತ್ತಾರೆ. ಕ್ರಿಸ್ತನಲ್ಲಿ ದೈವಿಕ ಜ್ಞಾನ, ಪ್ರೀತಿ ಮತ್ತು ಶಕ್ತಿಯ ಎಲ್ಲಾ ನಿಧಿಗಳು ಮರೆಯಾಗಿವೆ (ಅಡಗಿವೆ). **R 5171:1**

## 26 ಜನವರಿ

**"ನನ್ನ ಒಡಂಬಡಿಕೆಯನ್ನು ನಾನು ಮುರಿಯೆನು : ಇಲ್ಲವೆ ನನ್ನ ತುಟಿಗಳಿಂದ ಹೊರಟದ್ದನ್ನು ಬದಲಾಯಿಸೆನು" (ಕೀರ್ತನೆಗಳು 89 : 34)**

ಯೆಹೋವ ದೇವರ ಈ ಮೇಲಿನ ವಾಕ್ಯವು ಆತನ ನಂಬಿಗಸ್ತರಾದ ಮಕ್ಕಳಿಗೆ ಬಹಳ ಸಾಂತ್ವನವಾಗಿಯೂ ಮತ್ತು ತೃಪ್ತಿ ತರುವಂಥದಾಗಿಯೂ ಇದೆ.

ನಿರೀಕ್ಷೆಗೆ ನಂಬಿಕೆ ಆಧಾರವಾಗಿರುವುದರಿಂದ, ವಿಶ್ವಾಸ ಮತ್ತು ಅನುಭವಗಳು ನಂಬಿಕೆಯ ಮೇಲೆ ವಿಶ್ರಾಂತಿ ಪಡೆಯಲು ಒಂದು ಆಧಾರವಾಗಿದೆ. ಮಾರ್ಪಾಡಾಗದ ನಮ್ಮ ದೇವರು, ಆತನ ಗುಣಗಳಲ್ಲಿ ಇದೊಂದು ಆಕರ್ಷಕ ವೈಶಿಷ್ಟ್ಯವಾಗಿದೆ: ಆತನು ನಮಗೆ ನೀಡುವ ಭರವಸೆ ಏನೆಂದರೆ "ನಾನು ಏಕರೀತಿಯಾಗಿದ್ದೇನೆ, ನಾನು ಮಾರ್ಪಡುವುದಿಲ್ಲ." ಕರ್ತನ ಮಾತು ಅಥವಾ ವಾಕ್ಯವು ನಮಗೆ ವಿರೋಧವಾಗಿದ್ದರೂ, ಅಂದರೆ– ಪಾಪ ಮತ್ತು ಪಾಪಿಗಳ ವಿರೋಧವಾಗಿ ಆತನ ನ್ಯಾಯತೀರ್ಪಿನ ಉಚ್ಚರಣೆ ಇರುವಂತೆ ಮತ್ತು ಆತನ ಬದಲಾಗದಿರುವಿಕೆಯು ಪಾಪವನ್ನು ಅಥವಾ ತಪ್ಪಿತಸ್ಥರನ್ನು ಮನ್ನಿಸುವುದಕ್ಕೆ ಅನುಮತಿಸದೆ ಇರುವುದು, ದೇವರ ಈ ಸ್ಥಿರತೆಯು, ಆತನು ಉಚ್ಚರಿಸಿದ ದಂಡನೆಯು ಕಟ್ಟುನಿಟ್ಟಿನದಾಗಿಯೂ ಮತ್ತು ಬದಲಾಗದೆಯೂ ಇದೆ ಎಂದು ನಮಗೆ ಭರವಸೆಯನ್ನುಂಟು ಮಾಡುತ್ತದೆ. ಆತನು ನಮಗೆ ಮಾಡಿದ ಎಲ್ಲಾ ಒಳ್ಳೆಯ ವಾಗ್ದಾನಗಳು ಮತ್ತು ಒಡಂಬಡಿಕೆಗಳು ನೆರವೇರಿಸುವ ವಿಷಯದಲ್ಲಿ ಅದಕ್ಕೆ ಸಮನಾದ ಕಟ್ಟುನಿಟ್ಟು ಮತ್ತು ಬದಲಾಗದವರಾಗಿದ್ದಾನೆ. **R 3107:3**

## 27 ಜನವರಿ

**"ನಾನು ತಂದೆಯನ್ನು ಬೇಡಿಕೊಳ್ಳುವೆನು; ಆಗ ಆತನು ನಿಮಗೆ ಬೇರೊಬ್ಬ ಆದರಿಕನನ್ನು [ಸಾಂತ್ವನಕಾರನನ್ನು] ಸದಾಕಾಲವು ನಿಮ್ಮ ಸಂಗಡ ಇರುವದಕ್ಕೆ ಕೊಡುವನು" (ಯೋಹಾನನು 14:16)**

ಕರ್ತನ ಜನರು ಆತನಿಂದ ಉಪಯೋಗಿಸಲ್ಪಟ್ಟು ಆತನ ಕುಟುಂಬದಲ್ಲಿ ಪವಿತ್ರಾತ್ಮದಿಂದ ಭ್ರೂಣಾಂಕುರಗೊಳ್ಳುವ [ಗರ್ಭಧಾರಣೆಯಾಗುವ] ಮೂಲಕ ದತ್ತು ಪಡೆದು, ಪವಿತ್ರಾತ್ಮದಿಂದ ಅಭಿಷೇಕ ಹೊಂದಿ, ಪವಿತ್ರಾತ್ಮದಿಂದ ಪ್ರಭಾವಿತರಾಗಿ, ತಂದೆ ಮತ್ತು ಮಗನಿಂದ ಆಶೀರ್ವಾದ ಪಡೆದು, ನಮ್ಮ ನಡತೆಗಳಿಗೆ ಮಾರ್ಗದರ್ಶನ ನೀಡಿ, ನಮ್ಮ ಹೃದಯಗಳಿಗೆ ಮಾರ್ಗದರ್ಶನ ನೀಡಿ, ಸತ್ಯವೇದ ವಾಕ್ಯಗಳನ್ನು ನಮ್ಮ ಮುಂದೆ ತೆರೆದು, ನಮ್ಮ ಹೃದಯಗಳನ್ನು ನಮ್ಮೊಳಗೆ ಕುದಿಯುವ ಹಾಗೆ ಮಾಡಿ, ನಮ್ಮ ತಂದೆಯ ಮಹಿಮೆಯುಳ್ಳ ರಕ್ಷಣೆಯ ಯೋಜನೆಯನ್ನು ನಮಗಾಗಿ ಮತ್ತು ಭೂಮಿಯಲ್ಲಿರುವ ಎಲ್ಲಾ ಜನರಿಗೂ ಇರುವ ಇನ್ನೂ ಅಧಿಕವಾದ ಮೆಚ್ಚಿಗೆಯನ್ನುಂಟುಮಾಡುವ ಪ್ರೀತಿಯ ಅಗಲ, ನೀಳ, ಎತ್ತರ ಮತ್ತು ಆಳಗಳು ಎಷ್ಟು ತೃಪ್ತಿ, ಎಷ್ಟು ಆದರಣೆಯನ್ನು ತರುತ್ತದೆ!.... ನಿಜವಾಗಿಯೂ ನಮ್ಮ ಕರ್ತನು ಹೇಳಿದಂತೆ, ಪವಿತ್ರಾತ್ಮವು ನಮಗೆ ಮುಂದೆ ಬರಬೇಕಾದ

ವಿಷಯಗಳನ್ನು ತಿಳಿಯಪಡಿಸುತ್ತದೆ ಮತ್ತು ಹಿಂದೆ ನಡೆದ ಸಂಗತಿಗಳನ್ನು ವಿವರಿಸುತ್ತದೆ. ಮುಂದೆ ಬರಲಿಕ್ಕಿರುವ ಸಾವಿರ ವರ್ಷದ ರಾಜ್ಯದ ವಿಷಯವು, ಸಮಸ್ತವನ್ನು ತಿರಿಗಿ ಪಡೆಯುವ ಕಾಲಗಳು, ಭೂಮಿಯಲ್ಲಿರುವ ಎಲ್ಲಾ ಜನರನ್ನು ಉನ್ನತ ಸ್ಥಿತಿಗೆ ತಂದು ಬಲಪಡಿಸುವ ವಿಷಯಗಳು ಉನ್ನತವಾದ ಆಶೀರ್ವಾದಗಳನ್ನು ತರುವಂತದ್ದಾಗಿದೆ ಎಂಬ ವಿಷಯವು ಎಷ್ಟು ಮೆಚ್ಚುವಂಥದ್ದಾಗಿದೆ! **R 4166:6**

## 28 ಜನವರಿ

**"ಹೀಗೆ ಸರ್ವಸೃಷ್ಟಿಯು ಇಂದಿನವರೆಗೂ ನರಳುತ್ತಾ ಪ್ರಸವವೇದನೆ ಪಡುತ್ತದೆಯೆಂದು ನಾವು ಬಲ್ಲೆವು" (ರೋಮಾಪುರದವರಿಗೆ 8 : 22)**

ಪ್ರತಿಷ್ಠೆ ಮಾಡಿಕೊಂಡಿರುವ ಅತಿ ಪ್ರೀತಿಯ ಮನೆವಾರ್ತೆಯವರೆ, ನರಳುತ್ತಾ ಪ್ರಸವವೇದನೆ ಪಡುತ್ತಿರುವ ಈ ಸೃಷ್ಟಿಯೊಂದಿಗೆ ಸಂಪರ್ಕದಲ್ಲಿರಲು ಮರೆಯದೆ ಇರೋಣ; ಅವರ ದುಃಖಗಳು ಮತ್ತು ಸಂಕಟಗಳಿಗಾಗಿ ನಾವು ಅನುಕಂಪ ತೋರಿಸೋಣ; ಅದರ ಆಳವಾದ ಅವನತಿ ಮತ್ತು ದುರ್ದೆಸೆಯನ್ನು [ವಿಪತ್ತನ್ನು] ಕುರಿತು ಅರಿತುಕೊಳ್ಳೋಣ; ಅದರ ದುರ್ಬಲತೆಯನ್ನು ನೆನೆದು, ಅವರ ಭೀಕರ ಭಾರಗಳಾದ ಅನುವಂಶಿಕ ಕಳಂಕಗಳು ಮತ್ತು ಅದರ ಪರಿಣಾಮದಿಂದುಂಟಾದ ಬಲಹೀನತೆಗಳನ್ನು ನೆನೆಸೋಣ; ಅದರಿಂದ ಈಗಿನ ಅಜ್ಞಾನ ಮತ್ತು ಮೂಢನಂಬಿಕೆಯಲ್ಲಿರುವ ಪರಿಸರದ ಸ್ಥಿತಿ ಮತ್ತು ಅದರ ಬಹುಕಾಲದಿಂದ ಸ್ಥಾಪಿತವಾದ ಸಾರ್ವಜನಿಕ ಭಾವನೆಗಳು, ತಪ್ಪುಗಳು; ಅದೇ ಸಮಯದಲ್ಲಿ ನಾವು ಸಹ ಇನ್ನೂ ಪಾಪದ ಶರೀರದಲ್ಲಿ ಇದ್ದೇವೆಂದು ಮತ್ತು ಪಾಪದ ನಡವಳಿಕೆಗಳು ನಮ್ಮಲ್ಲಿ ಆಗಾಗ್ಗೆ ನೋವಿನಿಂದ ಕೂಡಿದೆ, ಅದು ಅನೇಕವಾಗಿಲ್ಲದೆ ಇದ್ದರೂ ಸ್ವಲ್ಪವಾಗಿದೆ ಎಂದು ನೆನಪಿನಲ್ಲಿಟ್ಟುಕೊಳ್ಳೋಣ. ಮತ್ತು ನರಳುತ್ತಿರುವ ಸೃಷ್ಟಿಯ ಕೂಗು ಸೇನಾಧಿಶ್ವರನಾದ ಕರ್ತನ ಕಿವಿಗಳಿಗೆ ಕೇಳಿಸುತ್ತದೆ ಮತ್ತು ಅದರ ಬಲವಾದ ಮತ್ತು ಕರುಣಾಜನಕ ಮನವಿಯು ಆತನ ಪ್ರೀತಿಯುಳ್ಳ ಹೃದಯಕ್ಕೆ ಮುಟ್ಟುತ್ತದೆ. ಆದ್ದರಿಂದ ಅವುಗಳು ನಮ್ಮ ಕಿವಿಗಳಿಗೆ ಕೇಳಿಸಿ ಅವರಿಗೆ ನಮ್ಮ ಅನುಕಂಪವು ಸಿಗುವಂತಾಗಲಿ ಮತ್ತು ನಮ್ಮ ಉತ್ಸಾಹವನ್ನು ಚುರುಕುಗೊಳಿಸಿ ನಮ್ಮ ಪರಲೋಕ ತಂದೆಯ ಯೋಜನೆಯ ಪ್ರಕಾರ ಆತನ ನೀತಿಯುಳ್ಳ ರಾಜ್ಯವು ಸ್ಥಾಪಿತವಾಗುವಂತೆ ಸಹಕರಿಸೋಣ. **R 3067:6**

## 29 ಜನವರಿ

**"ಕರ್ತನು ನನ್ನ ಬಲವೂ ಕೀರ್ತನೆಯೂ ಆಗಿದ್ದಾನೆ; ಆತನು ನನ್ನ ರಕ್ಷಣೆಯಾದನು" ( ವಿಮೋಚನಕಾಂಡ 15 : 2)**

ಕರ್ತನು ನಮ್ಮ ಬಲವಾಗಿದ್ದಾನೆ; ನಾವು ಮನುಷ್ಯರ ಶಕ್ತಿಯನ್ನು ಅವಲಂಬಿಸಬೇಕಾಗಿಲ್ಲ. ನಾವು ನಮ್ಮ ಸ್ವಂತ ಅಥವಾ ಬೇರೆಯವರ ಶಕ್ತಿಯನ್ನು ಅವಲಂಬಿಸಬೇಕಾಗಿಲ್ಲ. ನಾವು ನಮ್ಮ ತಲೆಯಾದ ಯೇಸುವನ್ನು ಅವಲಂಬಿಸಿದ್ದೇವೆ. ಆತನು ನಮ್ಮನ್ನು ಆಳ್ವಿಕೆ ಮಾಡುವುದಕ್ಕಾಗಿ ಆತನಿಂದ ನಮಗೆ ನ್ಯಾಯಪ್ರಮಾಣ ಬರುವದು ಮಾತ್ರವಲ್ಲದೆ, ಆತನಿಂದ ನಮಗೆ ಬಲವೂ, ಮಾರ್ಗದರ್ಶನವೂ, ರಕ್ಷಣೆಯೂ ಮತ್ತು ಕಾಳಜಿಯೂ ಉಂಟಾಗಿ, ಅದು ನಮಗೆ ಅವಶ್ಯವಾಗಿದ್ದು, ಅದರಲ್ಲಿ ನಾವು ಆನಂದಿಸುವವರಾಗಿದ್ದೇವೆ. ಕರ್ತನೇ ನಮಗೆ ರಕ್ಷಣೆಯಾಗಿದ್ದಾನೆ ; ಆತನ ರಕ್ತದಲ್ಲಿ ವಿಶ್ವಾಸವಿಡುವುದರ ಮೂಲಕ ಆತನು ಪಾಪದ ದಂಡನೆಯಿಂದ ನಮ್ಮನ್ನು ರಕ್ಷಿಸಿದ್ದಾನೆ; ನಮಗಿದ್ದ ಪಾಪದ ಮೇಲಿದ್ದ ಪ್ರೀತಿಯಿಂದ ಆತನು ನಮ್ಮನ್ನು ರಕ್ಷಿಸಿದ್ದಾನೆ. ಆತನು ನಮ್ಮನ್ನು ಪುನರುಜ್ಜೀವನಗೊಳಿಸಿದ್ದು ಮಾತ್ರವಲ್ಲದೆ, ನಮ್ಮನ್ನು ಬಲಪಡಿಸಿದ್ದಾನೆ, ಮತ್ತು ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವುದಕ್ಕೆ ಸಕ್ರಿಯಗೊಳಿಸಿದ್ದಾನೆ, ಮತ್ತು ಅದನ್ನು ಆನಂದದಿಂದ ಮತ್ತು ಸಂತೋಷದಿಂದ ಜಿಗಿತ ಉಂಟಾಗುವಂತೆ ಮಾಡಿದ್ದಾನೆ. ಈಗಾಗಲೇ ಆತನು ನಮಗೆ ರಕ್ಷಣೆಯಾಗಿದ್ದಾನೆ. ಆ ರಕ್ಷಣೆಯು ಮೊದಲನೆಯ ಪುನರುತ್ಥಾನದಲ್ಲಿ ಪೂರ್ಣಗೊಳ್ಳುವಂಥದು ಈಗಾಗಲೇ ಆರಂಭವಾಗಿದೆ.—ಏಕೆಂದರೆ ಈಗಾಗಲೇ ನಾವು ಮರಣದಿಂದ ಜೀವಕ್ಕೆ ಹಾದುಹೋಗಿದ್ದೇವೆ ಮತ್ತು ನಮಗೆ ಪವಿತ್ರಾತ್ಮನಲ್ಲಿ ಇದನ್ನು ಸಾಕ್ಷಿಯಾಗಿ ಕೊಡಲ್ಪಟ್ಟಿದೆ. **R 2934 : 4**

## 30 ಜನವರಿ

**"ದೇವರ ಸಮಾಧಾನವು ನಿಮ್ಮ ಹೃದಯಗಳಲ್ಲಿ ಆಳಲಿ" (ಕೊಲೊಸ್ಸೆಯವರಿಗೆ 3 : 15)**

ಮನುಷ್ಯನ ಎಲ್ಲಾ ತಿಳುವಳಿಕೆಗೂ ಮೀರಿದ ಸಮಾಧಾನ ಮತ್ತು ಸಂತೋಷವನ್ನು ಲೋಕಕ್ಕೆ ಕೊಟ್ಟಿಲ್ಲ. ಅಥವಾ ಅದನ್ನು ಹೆಸರಿಗೆ ಮಾತ್ರ ಕ್ರೈಸ್ತ ಪ್ರಾಧ್ಯಾಪರಿಗೆ ಕೊಟ್ಟಿಲ್ಲ ಅಥವಾ ಸಂಪ್ರದಾಯ ಬದ್ಧರು ಅಥವಾ ಆಚರಣೆಕಾರರಿಗೆ ಅವರು ಎಷ್ಟೇ ಉತ್ಸಾಹದಿಂದಿದ್ದರೂ ಅವರಿಗೆ ಕೊಡಲ್ಪಟ್ಟಿಲ್ಲ. ಅದನ್ನು ಪವಿತ್ರಾತ್ಮದ

ಮೂಲಕವಾಗಿ ಕೃಪೆಯ ಐಶ್ವರ್ಯವನ್ನು ಪಡೆದವರು ಮಾತ್ರ ಉದ್ದೇಶಪೂರ್ವಕವಾಗಿ ಹೊಂದಿಕೊಳ್ಳಬಹುದಾಗಿದೆ–ಯಾರೆಲ್ಲಾ ಸತ್ಯ ಮತ್ತು ಅದರ ಆತ್ಮದಲ್ಲಿ ಬೆಳೆದು ಎಲ್ಲಾ ವಿಷಯದಲ್ಲಿಯೂ ತಮ್ಮ ಜೀವವುಳ್ಳ ತಲೆಯಾದ ಕ್ರಿಸ್ತನಲ್ಲಿ ಬೆಳೆಯುತ್ತಾರೋ ಅಂಥವರಿಗೆ ಕೊಡಲ್ಪಡುವುದು. ಅಂಥವರಲ್ಲಿ ಸಮಾಧಾನವು ಆಳವಾಗಿ ನೆಲೆಸಿ ನಿಲ್ಲುವುದು ಮತ್ತು ಎಷ್ಟರ ಮಟ್ಟಿಗೆ ದೇವರ ಪ್ರೀತಿಯ ಅಗಲ, ನೀಳ, ಎತ್ತರ ಮತ್ತು ಆಳವನ್ನು, ನಂಬಿಕೆ ಮತ್ತು ವಿಧೇಯತೆಯ ಮೂಲಕ ಎಲ್ಲಾ ಪರಿಶುದ್ಧರೊಂದಿಗೆ ಗ್ರಹಿಸುತ್ತಾರೋ ಅಷ್ಟರ ಮಟ್ಟಿಗೆ ಸಮಾಧಾನವು ಅಧಿಕವಾಗುತ್ತಾ ಹೋಗುತ್ತದೆ. **R 2456 : 6**

## 31 ಜನವರಿ

**"ನೀನು ಜಲರಾಶಿಯನ್ನು ದಾಟಿಹೋಗುವಾಗ, ನಾನು ನಿನ್ನೊಂದಿಗಿರುವೆನು; ನದಿಗಳನ್ನು ನೀನು ದಾಟುವಾಗ ಅವು ನಿನ್ನನ್ನು ಮುಳುಗಿಸುವುದಿಲ್ಲ" (ಯೆಶಾಯ 43 : 2)**

ಕರೆಯಲ್ಪಟ್ಟ, ಆರಿಸಲ್ಪಟ್ಟ ಮತ್ತು ನಂಬಿಗಸ್ತರೆಲ್ಲರ ಕೊನೆಯ ಅನುಮೋದನೆಯ ದೃಷ್ಟಿಯಿಂದ ನೋಡುವಾಗ ಇವರು ಅನುಭವ, ಶಿಸ್ತು ಮತ್ತು ಪರೀಕ್ಷೆಗಳ ಶಾಲೆಯಲ್ಲಿ ಹಾದು ಹೋಗಬೇಕಾಗಿದೆ, ಎಲ್ಲಾ ತೊಂದರೆಗಳ ಮಧ್ಯದಲ್ಲಿ ನಿಜವಾಗಿಯೂ ನಮ್ಮ ಕರ್ತನು ನಮ್ಮೊಂದಿಗಿರುವುದನ್ನು ತಿಳಿದಾಗ ನಮಗೆ ಎಷ್ಟು ಪ್ರೋತ್ಸಾಹವನ್ನುಂಟು ಮಾಡುತ್ತದೆ. ಆತನು ನಮ್ಮ ಎಲ್ಲಾ ಪರೀಕ್ಷೆಗಳಲ್ಲಿ ಪ್ರತಿಕೂಲತೆ [ಕೇಡುಗಾಲ]ಗಳಲ್ಲಿ, ಗೊಂದಲಗಳಲ್ಲಿ ನಮಗೆ ಅನುಕಂಪವನ್ನು ತೋರಿಸುತ್ತಾನೆ ಮತ್ತು "ನಿರಾಕರಣೆ ಭಾವನೆಯ ಏರ್ಪಾಡಿನ ಹಿಂದೆ [ಹುಬ್ಬು ಗಂಟುಮಾಡಿಕೊಂಡು ನೀಡುವ ಅನುಗ್ರಹದ ಹಿಂದೆ] ತನ್ನ ನಗು ಮುಖವನ್ನು ಮರೆಮಾಡುವನು." ಸಂಕಟ, ನಿರಾಶೆ, ಗೊಂದಲ, ತೊಂದರೆಗಳೆಂಬ ನೀರುಗಳು ನಮಗಿರುತ್ತದೆ ಮತ್ತು ಈ ಪ್ರವಾಹದೊಂದಿಗೆ ನಾವು ತೇಲಿಹೋಗಬಾರದು.ಆದರೆ ಕಠಿಣತನವನ್ನು [ಕಷ್ಟಗಳನ್ನು] ಒಳ್ಳೆಯ ಸೈನಿಕರಂತೆ ಸಹಿಸಿಕೊಳ್ಳಬೇಕು. ಆದರೆ ಈಗಿನ ಜೀವಿತದ ಹೋರಾಟಕ್ಕೆ ಬೇಕಾಗಿರುವ ಶಕ್ತಿಯ ಮೂಲವನ್ನು ಎಂದಿಗೂ ಮರೆಯಬಾರದು. ಕರ್ತನು ನಮ್ಮನ್ನು ತೆರೆಯ ಇನ್ನೊಂದು ಕಡೆಗೆ ಸುರಕ್ಷಿತವಾಗಿ ಎಳೆದುಕೊಳ್ಳುವನು. ಅಲ್ಲಿ ನಮಗೆ ಜೀವವಿರುವುದು, ಮತ್ತು ಅದು ಅತ್ಯಧಿಕವಾಗಿರುವುದು. ಅದರೊಂದಿಗೆ ಮಹಿಮೆ, ಘನ ಮತ್ತು ನಿರ್ಲಯತ್ವ [ಅಮರತ್ವ]ವನ್ನು ಆತನ ವಧುವಾಗಿ ಆರಿಸಲ್ಪಟ್ಟವರಿಗೆ ಆತನು ಒದಗಿಸುತ್ತಾನೆ. **R 4005 : 1**

## 1 ಫೆಬ್ರವರಿ

**"ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥನೆ ಮಾಡಿದವರಾಗಿ ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು." (ಅಪೋಸ್ತಲರ ಕೃತ್ಯಗಳು 16 : 25)**

ಕ್ರೈಸ್ತರ ಜೀವಿತವು ದುಃಖ ಅಥವಾ ಶೋಕಕರವಾದದ್ದಲ್ಲ. ಆದರೆ ಅದಕ್ಕೆ ಬದಲಾಗಿ ಅಧಿಕ ಆನಂದವುಳ್ಳದ್ದಾಗಿದೆ. ಆತನು ಉಪದ್ರವಗಳಲ್ಲಿಯೂ ಸಂತೋಷವಾಗಿರಬಹುದು. ಏಕೆಂದರೆ– "ನಮಗೆ ಉಂಟಾಗುವ ಉಪದ್ರವದಿಂದ ತಾಳ್ಮೆಯೂ, ತಾಳ್ಮೆಯಿಂದ ಅನುಭವವೂ, ಅನುಭವದಿಂದ ನಿರೀಕ್ಷೆಯೂ ಉಂಟಾಗುತ್ತದೆಂದು ಬಲ್ಲೆವು." ಇದು ಮಾತ್ರವಲ್ಲದೆ "ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ."– ಅದು ತೆರೆಯ ಹಿಂದೆ ಉಂಟಾಗುತ್ತದೆ. [ರೋಮಾಪುರದವರಿಗೆ 5 : 3, 4 ; 2 ಕೊರಿಂಥದವರಿಗೆ 4 : 17]. ಆದ್ದರಿಂದ ನಾವು ಈ ಪಾಡುಗಳ ಪಾತ್ರೆಯಲ್ಲಿಯೂ ಮತ್ತು ನಮಗಾಗಿ ಸ್ವಾಸ್ತ್ಯವಾಗಿಟ್ಟಿರುವ ಸಂತೋಷದ ಪಾತ್ರೆಯಲ್ಲಿಯೂ ನಾವು ಉತ್ಸಾಹದಿಂದ ಪಾಲುಗಾರರಾಗುತ್ತೇವೆ.....ಕರ್ತನ ಸೇವೆಯನ್ನು ಧೈರ್ಯದಿಂದ ಮತ್ತು ಉತ್ಸಾಹದಿಂದ ಮಾಡಲು ಈ ಆತ್ಮದಲ್ಲಿ [ಮನಸ್ಥಿತಿಯಲ್ಲಿ] ಸಂತೋಷವಾಗಿರುವುದು ಅವಶ್ಯವಾಗಿದೆ. ಸೆರೆಮನೆಯಲ್ಲಿ ಬೆನ್ನು ಗಾಯಗಳಿಂದಲೂ ಮತ್ತು ಕಾಲುಗಳು ಸರಪಣಿಗಳಿಂದ ಕಟ್ಟಲ್ಪಟ್ಟ ಸ್ಥಿತಿಯಲ್ಲೂ ಪೌಲನೂ ಮತ್ತು ಸೀಲನೂ ದೇವರನ್ನು ಹಾಡಿ ಸ್ತುತಿಸಿದನ್ನು ಗಮನಿಸಿರಿ. ಇಕ್ಕಟ್ಟಾದ ದಾರಿಯಲ್ಲಿ ನಡೆಯುವಂತಹ ಕಿಸ್ತನ ನಿಜವಾದ ಹಿಂಬಾಲಕರು ಹೀಗೆಯೇ ಇರಬೇಕು. **R 4592 : 4**

## 2 ಫೆಬ್ರವರಿ

**"ಪರಿಶುದ್ಧರು ಘನತೆಯಿಂದ [ಮಹಿಮೆಯಲ್ಲಿ] ಉತ್ಸಾಹಪಡಲಿ; ತಮ್ಮ ಹಾಸಿಗೆಗಳ ಮೇಲೆ ಉತ್ಸಾಹ ಧ್ವನಿಮಾಡಲಿ." (ಕೀರ್ತನೆಗಳು 149 : 5)**

ಈ ಕಾಲದಲ್ಲಿ ಪರಿಶುದ್ಧರು ದೇವರನ್ನು ಸ್ತುತಿಸಿ ಹಾಡುವಾಗ ಅವರು ತಮ್ಮ ಹಾಸಿಗೆಯಲ್ಲಿ ವಿಶ್ರಾಂತಿಸುವರೆಂದು ಕೀರ್ತನಾಗಾರನು ಹೇಳುತ್ತಾನೆ. ಇಲ್ಲಿ ಹಾಸಿಗೆ ಎಂದರೆ ಮತಾಭಿಪ್ರಾಯ ಅಥವಾ ಒಟ್ಟುಮೊತ್ತ ಮತ ನಂಬಿಕೆಯನ್ನು ಸೂಚಿಸುತ್ತದೆ ಎಂದು ಅರಿತುಕೊಳ್ಳುವವರಿಗೆ ಈ ವಾಕ್ಯವು ಅರ್ಥವಿಲ್ಲದ್ದಾಗಿರುತ್ತದೆ....ಈ

ಕಾಲದಲ್ಲಿ ದೇವರ ನಿಜವಾದ ಪರಿಶುದ್ಧರು [ಸಾಂಕೇತಿಕವಾಗಿ] ಪೂರ್ಣವಾದ ಮತ್ತು ಸರಿಯಾದ ಅಳತೆಯುಳ್ಳ ಹಾಸಿಗೆಗಳು, ವಿಶಾಲವಾದ ಮತ್ತು ಬೆಚ್ಚಗಿನ ಕಂಬಳಿಯನ್ನು ಹೊಂದಿರುತ್ತಾರೆ. ಬೇರೆಯವರು ವಿಶ್ರಾಂತಿಯಿಲ್ಲದೆ, ಸೌಕರ್ಯವಿಲ್ಲದೆ ಇರುವಾಗ, ಪರಿಶುದ್ಧರು ಆರಾಮಾಗಿ, ಸೌಕರ್ಯದೊಂದಿಗೆ ತಮ್ಮ ವಿಶ್ವಾಸದಲ್ಲಿ ನೆಲೆಸಿರುತ್ತಾರೆ ಎಂದು ಈ ಪ್ರವಾದನಾ ಚಿತ್ರಣದಲ್ಲಿ ತೋರಿಸಲಾಗಿದೆ. ಒಳ್ಳೆಯ ಹಾಸಿಗೆಯಲ್ಲಿ ವಿಶ್ರಮಿಸುವದು ಎಂದರೆ ಅವರ ಹೃದಯ ಮತ್ತು ಮನಸ್ಥಿತಿಯನ್ನು ಸೂಚಿಸುತ್ತದೆ, ಅವರು ದೇವರನ್ನು ಸ್ತುತಿಸುವಾಗ "ಇಬ್ಬದಿಯಲ್ಲೂ ಚೂಪಾಗಿರುವ ಕತ್ತಿ" ಎಂಬ ಸತ್ಯವೇದವನ್ನು ತಮ್ಮ ಕೈಯಲ್ಲಿಟ್ಟುಕೊಂಡು ಅದನ್ನು ಜ್ಞಾನದಿಂದ ಉಪಯೋಗಿಸುತ್ತಾರೆ. **R 5804 : 2**

## 3 ಫೆಬ್ರವರಿ

**"ನನ್ನ ಪ್ರವಾಸದ ಮನೆಯಲ್ಲಿ ನಿನ್ನ ನಿಯಮಗಳು ನನಗೆ ಕೀರ್ತನೆಗಳಾಗಿವೆ" (ಕೀರ್ತನೆಗಳು 119 : 54)**

ಸತ್ಯವೇದದಲ್ಲಿ ಹೀಗೆ ಬರೆದಿದೆ "ಆತನು ರಾತ್ರಿಯಲ್ಲಿಯೂ ಕೀರ್ತನೆಗಳನ್ನು ಹಾಡಮಾಡುತ್ತಾನಲ್ಲಾ" ಮತ್ತು "ಆತನು ನನ್ನ ಬಾಯಲ್ಲಿ ನೂತನ ಹಾಡನ್ನು ಇಟ್ಟಿದ್ದಾನೆ." ಪರಿಶುದ್ಧರು "ಮಹಿಮೆಯಲ್ಲಿ ಸಂತೋಷವುಳ್ಳವರಾಗಿರುತ್ತಾರೆ" ಎಂದು ತಿಳಿಯುವುದರಲ್ಲಿ ಯಾವ ಆಶ್ಚರ್ಯವೂ ಉಂಟಾಗುವುದಿಲ್ಲ ಮತ್ತು ಬರೆದಿರುವ ನ್ಯಾಯತೀರ್ಪನ್ನು ಕಾರ್ಯಗತಗೊಳಿಸಲು ಅವರಿಗೆ ನೀಡಿದಾಗ ಅವರ ಬಾಯಲ್ಲಿ ದೇವರ ಹೆಚ್ಚಿನ ಸ್ತುತಿಗಳೊಂದಿಗೆ ಗಟ್ಟಿಯಾಗಿ ಹಾಡುವರು. ಆದರೆ ಈಗಿನ ಅಪೂರ್ಣ ಮತ್ತು ಬಲಹೀನತೆಯ ಸ್ಥಿತಿಯಲ್ಲಿ ನಾವು ನರಳುವಿಕೆ ಮತ್ತು ಭಾರವುಳ್ಳವರಾಗಿದ್ದೇವೆಂದು ಕೆಲವರಿಗೆ ತೋಚಬಹುದು. ಇಂತಹ ಸ್ಥಿತಿಯಲ್ಲೂ ಕೀರ್ತನೆಗಳೂ, ಕೃತಜ್ಞತಾಸ್ತುತಿಗಳೂ ಮತ್ತು ಸಂತೋಷವು ನಮ್ಮಲ್ಲಿದ್ದು ಅವುಗಳು ನಮ್ಮನ್ನು ಆಳ್ವಿಕೆ ಮಾಡಬೇಕು. ಅದೇನೆ ಇದ್ದರೂ ಇದು ದೈವಿಕ ಚಿತ್ತವಾಗಿದೆ. ಯಾರೆಲ್ಲಾ ನಿಜವಾಗಿಯೂ ಜಯಶಾಲಿಗಳಾಗುತ್ತಾರೋ ಅವರ ಬಗ್ಗೆ ದೈವಿಕ ವಾಕ್ಯವು ಹೀಗೆ ಉಂಟಾಗಿದೆ: ಅವರೆಲ್ಲರೂ ತಮ್ಮ ಪ್ರವಾಸದ ಮನೆಯಲ್ಲಿ ಸಂತೋಷವಾಗಿರಬೇಕು. ಈ ಸಂತೋಷವನ್ನು ಕುರಿತು ನಮ್ಮ ಕರ್ತನು ಹೀಗೆ ಹೇಳಿದ್ದಾನೆ, "ನಿಮ್ಮ ಸಂತೋಷವನ್ನು ಯಾರಿಂದಲೂ ನಿಮ್ಮಿಂದ ತೆಗೆಯುವುದಕ್ಕೆ ಸಾಧ್ಯವಿಲ್ಲ." ಆದ್ದರಿಂದ ನೂತನ ಜೀವವನ್ನು ಹೊಂದಿದವರಿಗೆ ಕೆಲವು ಭಾರದ ನಿಮಿತ್ತ ಸ್ವಲ್ಪಮಟ್ಟಿಗೆ ನರಳುವಿಕೆ ಇರುತ್ತದೆ, ಇದರೊಂದಿಗೆ ಲೋಕವು ಕೊಡಲು

ಸಾಧ್ಯವಿಲ್ಲದ, ತೆಗೆದುಕೊಳ್ಳಲು ಸಾಧ್ಯವಿಲ್ಲದ ಆಶೀರ್ವಾದದ ಸಂತೋಷಗಳು ಸಹ ಇರುತ್ತದೆ; ಮತ್ತು ಈ ಮೂಲದಿಂದಾಗಿ ಮತ್ತು ಕಾರಣದಿಂದಾಗಿ ನಿರಂತರವಾಗಿರುವ ಸಂತೋಷ ಮತ್ತು "ರಾತ್ರಿಯ ಗೀತೆಗಳು" ಉಂಟಾಗುತ್ತದೆ. ಇದು ಹೊಸ ಸಾವಿರ ವರ್ಷದ ದಿನವು ಆರಂಭವಾಗುವುದಕ್ಕೆ ಮುಂಚೆ ಉಂಟಾಗುತ್ತದೆ. ನಾವು ನಿಜವಾಗಿಯೂ ನಮ್ಮ "ಮನೆಯಲ್ಲಿ" (ಪರಲೋಕದಲ್ಲಿ) ಇಲ್ಲದಿರುವಾಗ ನಮಗೆ ಮಂಜೂರಾಗಿರುವ ಈ ಸಂತೋಷದ ಹಾಡುಗಳು ನಮ್ಮೆಲ್ಲರಿಗೂ ಉತ್ತೇಜನವಾಗಿದೆ . **R 2231 : 6**

## 4 ಫೆಬ್ರವರಿ

**"ನಮ್ಮ ಸಂಗಡ ನೀನು ಬಾ; ನಾವು ನಿನಗೆ ಒಳ್ಳೇದನ್ನು ಮಾಡುವೆವು; ಕರ್ತನು ಇಸ್ರಾಯೇಲ್ಯರನ್ನು ಕುರಿತು ಒಳ್ಳೇದನ್ನು ಹೇಳಿದ್ದಾನೆ." (ಅರಣ್ಯಕಾಂಡ 10 : 29)**

ಯಾರೆಲ್ಲಾ ನಮ್ಮೊಂದಿಗೆ ಬರುತ್ತಾರೋ ಅವರೆಲ್ಲರೂ ಆಶೀರ್ವಾದವನ್ನು ಪಡೆದು ಕೊಳ್ಳುತ್ತಾರೆ ಮತ್ತು ಯಾರನ್ನಾದರೂ ಹಾಗೆ ಬರುವುದಕ್ಕೆ ಪ್ರೇರೇಪಿಸುವಾಗ ನಾವೂ ಸಹ ಆಶೀರ್ವಾದವನ್ನು ಪಡೆದುಕೊಳ್ಳುತ್ತೇವೆ. ಏಕೆಂದರೆ ನಮ್ಮ ಸ್ವಂತ ನಂಬಿಕೆ ಉತ್ಸಾಹಗೊಳ್ಳುತ್ತದೆ, ಉತ್ತೇಜನಗೊಳ್ಳುತ್ತದೆ ಮತ್ತು ನಾವೂ ಸಹ ಕರ್ತನಿಗೆ ವಿಧೇಯರಾಗಿರುತ್ತೇವೆ; ಏಕೆಂದರೆ ಕರ್ತನು ನಿನಗೆ ಒಳ್ಳೆಯದನ್ನು ಮಾಡುತ್ತಾನೆಂದು ನಾವು ಇತರರಿಗೆ ಹೇಳಿದ ಮೇಲೆ, ಸ್ವತಃ ನಾವೇ ಆ ಒಳ್ಳೆಯ ಅನುಭವವನ್ನು ರುಚಿನೋಡುತ್ತೇವೆ ಮತ್ತು ಕರ್ತನ ಕೈಯಿಂದ ಪ್ರತಿದಿನ ನಾವು ಆಶೀರ್ವಾದಗಳನ್ನು ಪಡೆದುಕೊಳ್ಳುವುದು ನಮಗೆ ಮನವರಿಕೆ ಆಗುವುದಿಲ್ಲವೆ? ಮತ್ತು ಒಂದು ವೇಳೆ ಅವರು ನಮ್ಮೊಂದಿಗೆ ಬಂದರೆ, ನಾವು ಒಂದು ವಿಷಯವನ್ನು ಅವರಿಗೆ ಸಲಹೆ ನೀಡಿ, ಅದರಿಂದ ಆಶೀರ್ವಾದ ಉಂಟಾಗುತ್ತದೆ ಎಂದು ನಾವು ವಾಗ್ದಾನ ಮಾಡಿದ ಮೇಲೆ ಅದು ನಮ್ಮನ್ನು ಗುಣಗುಟ್ಟದಂತೆ ಹಾಗೂ ದೂರು ಹೇಳದಂತೆ ಕಾಪಾಡುತ್ತದೆ ಮತ್ತು ಕರ್ತನಿಂದ ಯಾವಾಗಲೂ ನಾವು ಒಳ್ಳೆಯದನ್ನೆ ಪಡೆದುಕೊಳ್ಳುತ್ತೇವೆ ಎಂಬುದು ವ್ಯಕ್ತವಾಗುತ್ತದೆ. ನಾವು ಆತ್ಮೀಕ ಇಸ್ರಾಯೇಲ್ಯರಂತೆ, ಮೋಶೆಯ ಉದಾಹರಣೆಯನ್ನು ಯಾರೆಲ್ಲಾ ನಮ್ಮ ವಿಜ್ಞಾಪನೆಗೆ ಪ್ರಭಾವಿತರಾಗಿ ನಮ್ಮ ಬಳಿ ಬರುತ್ತಾರೋ, ಅವರಿಗೆ ಕರ್ತನ ವಾಗ್ದಾನಗಳನ್ನು ಹೇಳುತ್ತೇವೆ ಮತ್ತು ಅದೇ ನಂಬಿಕೆಯನ್ನು ನಾವೂ ಸಹ ತೋರಿಸುತ್ತೇವೆ. **R 4038 : 4**

## 5 ಫೆಬ್ರವರಿ

**“ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದಾತನಿಗೆ....ಮಹಿಮೆಯುಂಟಾಗಲಿ” (ಎಫೆಸದವರಿಗೆ 3 : 20)**

ನಮ್ಮ ಮನಸ್ಸೆಂಬ ನಡುಕಟ್ಟನ್ನು ಕಟ್ಟಿಕೊಳ್ಳೋಣ ಮತ್ತು ಶಾಂತ ಮನಸ್ಸುಳ್ಳವರಾಗಿರೋಣ ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಕ್ರಿಸ್ತ ಯೇಸು ಪ್ರಕಟವಾಗುವಾಗ (ಪ್ರತ್ಯಕ್ಷನಾಗುವಾಗ) ಆತನು ಕೊಡುವ ಕೃಪೆಯನ್ನು ಕುರಿತು ಕೊನೆಯವರೆಗೂ ನಿರೀಕ್ಷೆಯುಳ್ಳವರಾಗಿರೋಣ. ಕಾಣುವಂಥವುಗಳ ಮೇಲೆ ನಮ್ಮ ದೃಷ್ಟಿಯನ್ನು ಇಡದೆ ಇರೋಣ. ಏಕೆಂದರೆ ಅದು ತಾತ್ಕಾಲಿಕವಾಗಿವೆ. ಆದರೆ ಕಾಣದೆ ಇರುವಂಥವುಗಳ ಮೇಲೆ ನಮ್ಮ ಮನಸ್ಸನ್ನು ಇಡೋಣ. ಏಕೆಂದರೆ ಅವು ನಿತ್ಯವಾದವುಗಳಾಗಿವೆ. ನಮ್ಮ ವಿಶ್ವಾಸದ ಕಣ್ಣುಗಳಿಂದ (ಮನೋನೇತ್ರದಿಂದ) ಯೇಸುವನ್ನು ದೃಷ್ಟಿಸಿ ನೋಡೋಣ, ಆತನು ನಮಗಾಗಿ ವಾಗ್ದಾನ ಮಾಡಿರುವ ಜೀವ ಕಿರೀಟವನ್ನು ದೃಷ್ಟಿಸಿ ನೋಡೋಣ. ಆತನು ತಂದೆಯ ಮನೆಯಲ್ಲಿ ಅನೇಕ ಬಿಡಾರಗಳನ್ನು ನಮಗಾಗಿ ಸಿದ್ಧ ಮಾಡುತ್ತಿರುವುದನ್ನು ಕುರಿತು ದೃಷ್ಟಿಸಿ ನೋಡೋಣ; ನಾವು ಸಂದೇಹ ಮತ್ತು ಭಯದಿಂದ ನೋಡದೆ ಆತನು ನಮ್ಮನ್ನು ಉನ್ನತಕ್ಕೆ ಕರೆದುಕೊಂಡು ಹೋಗಿ ನಮ್ಮ ಕರ್ತನಾದ ಯೇಸುವಿನ ಸಂತೋಷದಲ್ಲಿ ಪ್ರವೇಶಿಸುವಂತೆ ಮಾಡುವಾಗ, ನಮ್ಮ ಮಹತ್ತರವಾದ ನಿರೀಕ್ಷೆಗಳು ನಾವು ಅರಿತುಕೊಂಡಿರುವುದಕ್ಕಿಂತ ಅಧಿಕವಾಗಿರುತ್ತದೆ ಎಂದು ಪೂರ್ಣ ವಿಶ್ವಾಸದಿಂದಿರೋಣ. "ಯಾಕೆಂದರೆ ನಮಗೆ ಏನೇನು ಸಂಭವಿಸಿದರೂ ದೇವರ ಮೇಲಣ ನಮ್ಮ ನಂಬಿಕೆಯು ಆತನಲ್ಲಿ ದೃಢವಾದ ಭರವಸವುಳ್ಳವರಾಗಿರುವಂತೆ ಮಾಡುವದು." ನಾವು ಎಷ್ಟು ಹೆಚ್ಚಾಗಿ ಈ ವಿಷಯಗಳನ್ನು ಕುರಿತು ಅಭ್ಯಾಸಿಸುತ್ತೇವೋ (ಪ್ರಯಾಸಪಡುತ್ತೇವೋ), ಅಂಧಕಾರದ ಕತ್ತಲೆಯಿಂದ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನ ದೃಷ್ಟಿಯಲ್ಲಿ ನಾವು ಅಧಿಕ ಪ್ರಿಯವುಳ್ಳವರಾಗಿರುತ್ತೇವೆ; ಮತ್ತು ಇಂತಹ ನಂಬಿಕೆಯು ಎಷ್ಟು ಅಧಿಕವಾಗುವುದಕ್ಕೆ ನಾವು ಪ್ರಯಾಸಪಡುತ್ತೇವೋ ಅಷ್ಟೇ ಹೆಚ್ಚಾಗಿ ದೇವರ ಶಕ್ತಿ ನಮ್ಮಲ್ಲಿರುತ್ತದೆ. ಅದು ನಮ್ಮಲ್ಲಿ ಉದ್ದೇಶವನ್ನೂ ಕಾರ್ಯವನ್ನೂ ಸಾಧಿಸುವಂತೆ ಮಾಡುತ್ತದೆ–ಇದು ನಮ್ಮನ್ನು ಅಧಿಕವಾಗಿ ಈ ಲೋಕದಿಂದ ಪ್ರತ್ಯೇಕವಾಗಿ ಜೀವಿಸುವಂತೆ ಮಾಡುತ್ತದೆ. ಲೋಕವನ್ನು ಜಯಿಸಲು, ಪಾಪ ಹಾಗೂ ಸ್ವಾರ್ಥತೆ, ಈ ಲೋಕ, ಎದುರಾಳಿ, ಮತ್ತು ನಮ್ಮ ಸ್ವಂತ ಶರೀರಕ್ಕೆ ವಿರೋಧವಾಗಿ ಒಳ್ಳೆಯ ಹೋರಾಟವನ್ನು ಹೋರಾಡುವಂತೆ ಸಹಾಯ ಮಾಡುತ್ತದೆ. **R 3892:4**

## 6 ಫೆಬ್ರವರಿ

**“ಮೇಲಿರುವಂಥವುಗಳ ಮೇಲೆ ನಿಮ್ಮ ಮನಸ್ಸಿಡಿರಿ. ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ.” (ಕೊಲೊಸ್ಸೆಯವರಿಗೆ 3 : 2)**

ಶರೀರದ ನಿರಂತರವಾದ ಪ್ರವೃತ್ತಿಯು ಭೂಸಂಬಂಧವಾದವುಗಳಾಗಿದೆ ಮತ್ತು ಇದು ನೂತನ ಮನಸ್ಸಿಗೆ ವಿರೋಧವಾಗಿದೆ. ಯಾರೆಲ್ಲಾ ಈಗಾಗಲೇ ಕರ್ತನಿಗೆ ಪ್ರತಿಷ್ಠೆ ಪಡಿಸಿಕೊಂಡಿದ್ದಾರೋ ಅವರು ತಮ್ಮ ಪ್ರೀತಿ–ವಾತ್ಸಲ್ಯವನ್ನು ಪರಲೋಕದ ವಿಷಯಗಳಲ್ಲಿ ನಿರಂತರವಾಗಿ ಪುನಃ ಸ್ಥಾಪಿಸಬೇಕು. ದೇವರು ತಮ್ಮನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲವೂ ಅನುಕೂಲವಾಗಿರಲಾಗಿ, ಒಂದು ವೇಳೆ ಸ್ವಲ್ಪ ಮಟ್ಟಿಗೆ ನಿರ್ಲಕ್ಷ್ಯ ಮಾಡಿದರೆ, ಆತನನ್ನು ಪ್ರೀತಿಸುವವರಿಗಾಗಿಯೇ ಮೀಸಲಾಗಿಟ್ಟಿರುವ ದೇವರ ವಿಷಯಗಳನ್ನು ಬಿಟ್ಟು ಸ್ವಲ್ಪ ಮಟ್ಟಿಗೆ ಬೇರೆಡೆಯಲ್ಲಿ ನೋಡಿದರೆ ಅಥವಾ ಸ್ವಲ್ಪ ಮಟ್ಟಿಗೆ ನಮ್ಮ ಮನಸ್ಸನ್ನು ಮತ್ತು ಪ್ರೀತಿ– ವಾತ್ಸಲ್ಯವನ್ನು ಭೂಮಿಯ ವಿಷಯಗಳಲ್ಲಿ, ಭೂಮಿಯ ನಿರೀಕ್ಷೆಗಳಲ್ಲಿ, ಭೂಮಿಯ ಮಹತ್ವಾಕಾಂಕ್ಷೆಗಳಲ್ಲಿ, ಭೂಮಿಯ ಪ್ರತೀಕ್ಷೆಗಳಲ್ಲಿ ಇಟ್ಟರೆ ಅದು ಬಹಳ ಶೀಘ್ರವಾಗಿ ನಮಗೆ ನಷ್ಟವನ್ನು ಉಂಟುಮಾಡುತ್ತದೆ–ಹಳೆಯ ಸ್ವಭಾವವು ನವೀಕರಣಗೊಂಡು ಬಲ ಹೊಂದುತ್ತದೆ ಮತ್ತು ಅಷ್ಟೇ ಅಳತೆಯಲ್ಲಿ ನೂತನ ಸ್ವಭಾವವು ಬಲಹೀನ ಹೊಂದುತ್ತದೆ ಮತ್ತು ಇದಕ್ಕೆ ಅನುಗುಣವಾಗಿ ಕ್ರಿಸ್ತ ಯೇಸುವಿನಲ್ಲಿ ನಮ್ಮ ಉನ್ನತ ಕರೆಯುವಿಕೆಯ ಬಹುಮಾನವನ್ನು, ಪರಲೋಕದ ಕಿರೀಟವನ್ನು ಹೊಂದುವದಕ್ಕಾಗಿ ನಾವು ಓಡುತ್ತಿರುವ ನಮ್ಮ ಓಟದಲ್ಲಿ ಬಹಳ ಹಿನ್ನಡೆಯುಂಟಾಗುತ್ತದೆ. **R 3914 : 1**

## 7 ಫೆಬ್ರವರಿ

**“ಪರಲೋಕದಿಂದ ಇಳಿದು ಬಂದ ಜೀವದ ರೊಟ್ಟಿಯು ನಾನೇ” (ಯೋಹಾನನು 6 : 51)**

ನಮ್ಮ ಕರ್ತನು ಸ್ವತಃ ತಾನೇ ಪರಲೋಕದಿಂದಿಳಿದು ಬಂದ ಜೀವದ ರೊಟ್ಟಿ ಎಂದು ಹೇಳಿದಾಗ ಅದನ್ನು ಕೇಳಿಸಿಕೊಂಡವರು ಅದರ ನಿಜವಾದ ಅರ್ಥವನ್ನು ಗ್ರಹಿಸುವುದಕ್ಕೆ ವಿಫಲರಾದರು ಮತ್ತು ಇದು ಕಠಿಣವಾದ ಉಪದೇಶವಾಗಿದೆ ಎಂದು ಹೇಳಿದರು. ಮತ್ತು ಇವನು ತನ್ನ ಮಾಂಸವನ್ನು ನಮಗೆ ಹೇಗೆ ತಿನ್ನುವದಕ್ಕೆ ಕೊಟ್ಟಾನು? ಎಂದು ಹೇಳಿದರು. ನಮ್ಮ ಕರ್ತನು ಸತ್ಯಕ್ಕೆ ಪ್ರತಿನಿಧಿಯಾಗಿದ್ದು ಆತನನೊಳಗೆ ದೇವರ ಮಹಾ ದೈವಿಕ ಯೋಜನೆಯು

ಕೇಂದ್ರೀಕೃತವಾಗಿರುವುದನ್ನು ಲೋಕಕ್ಕೆ ತನ್ನ ಜೀವವನ್ನು ಕೊಡುವದಕ್ಕಾಗಿ ಬಂದಿರುವುದನ್ನು, ನಾವು ಆತನ ಮೂಲಕ ಬದುಕುವವರಾಗುವದ್ಕಾಗಿ ಆತನು ಬಂದಿದ್ದಾನೆಂದು ಗ್ರಹಿಸುವದಕ್ಕೆ ವಿಫಲರಾದರು. ಯೇಸುವಿನ ಮಾಂಸವನ್ನು ತಿನ್ನುವುದೆಂದರೆ ಅರ್ಥಗತವಾಗಿ ಶರೀರ ಸ್ವಭಾವವನ್ನು ಉಂಟು ಮಾಡುತ್ತದೆ. ಆದರೆ ಆತನನ್ನು ಸೇವಿಸುವುದು ಆತನಲ್ಲಿ ಒದಗಿಸಿರುವ ದೇವರ ಆಶೀರ್ವಾದಗಳು ಮತ್ತು ದಯೆಗಳಲ್ಲಿ ನಾವು ಪಾಲು ಹೊಂದುವದನ್ನು ಸೂಚಿಸುತ್ತದೆ ಮತ್ತು ಆತನ (ಆತ್ಮ) ಮನಸ್ಥಿತಿ ಮತ್ತು ಆಲೋಚನೆಗಳನ್ನು ನಮ್ಮದಾಗಿಸಿಕೊಳ್ಳುವದು ಸರಿಯಾದ ಆಲೋಚನೆಯಾಗಿದೆ. ಕರ್ತನ ಗುಣಲಕ್ಷಣಗಳಲ್ಲಿ ನಾವು ಪಾಲುಗಾರರಾಗುವಾಗ ಅವುಗಳು ನಮ್ಮದಾಗಿ ಮಾರ್ಪಡುತ್ತದೆ, ಆತನನ್ನು ನಮ್ಮ ಹೃದಯಗಳಲ್ಲಿ ಸೇವಿಸುವಾಗ ನಾವು ವಿಶ್ವಾಸದಲ್ಲಿ ಮತ್ತು ಆತನ ಆತ್ಮದ ಎಲ್ಲಾ ಕೃಪೆಗಳಲ್ಲಿ ಬಲಹೊಂದುತ್ತೇವೆ. ಆದ್ದರಿಂದ ನಾವು ಪ್ರತಿದಿನ ನಮ್ಮ ಪಾಲಿನ ಮನ್ನಾವನ್ನು ಸಂಗ್ರಹಿಸೋಣ ಮತ್ತು ಅವೆಲ್ಲವನ್ನು ಉಪಯೋಗಿಸೋಣ ಮತ್ತು ಪರಲೋಕ ಕಾನಾನನ್ನು ಪ್ರವೇಶಿಸುವವರೆಗೆ ಅವುಗಳು ನಮ್ಮ ಪಾಲು ಆಗಿದೆಯೆಂದು ಮನವರಿಕೆ ಮಾಡಿಕೊಳ್ಳೋಣ. ಆದ್ದರಿಂದ ನಿಶ್ಚಯವಾಗಿ ಕರ್ತನ ನಂಬಿಗಸ್ತರಿಗೆ ಒದಗಿ ಬಂದಿರುವ ಎಲ್ಲಾ ದೈವಿಕ ಕೃಪೆಗಳ ಅನುಭವಗಳು, ಅಂಧಕಾರದ ಕತ್ತಲೆಯಿಂದ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನ ಮೇಲಿರುವ ನಂಬಿಕೆ ಮತ್ತು ವಿಶ್ವಾಸ ನಮಗೆ ಉತ್ತೇಜನವಾಗಿರಬೇಕು. **R 4012 : 5**

## 8 ಫೆಬ್ರವರಿ

**"ನೀತಿವಂತರೇ, ಕರ್ತನಲ್ಲಿ ಸಂತೋಷಿಸಿರಿ, ಉಲ್ಲಾಸಪಡಿರಿ ಯಥಾರ್ಥ ಹೃದಯವುಳ್ಳವರೇ, ಉತ್ಸಾಹ ಧ್ವನಿಮಾಡಿರಿ." (ಕೀರ್ತನೆಗಳು 32 : 11)**

ನಮ್ಮ ಓದುಗರು ಈ ಆಶೀರ್ವದಿಸಲ್ಪಟ್ಟ ಸಂದೇಶವನ್ನು ಅತ್ಯಧಿಕವಾದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆಂದು ನಾವು ನಂಬುತ್ತೇವೆ–ಕರ್ತನಲ್ಲಿ ಸಂತೋಷವಾಗಿರುತ್ತಾರೆ–ಇದು ಕ್ಷುಲ್ಲಕವಾಗಿರುವ ಈ ಲೌಕಿಕ ವಿಷಯಗಳಿಗಿಂತಲೂ ಬಹಳ ವ್ಯತ್ಯಾಸವಾಗಿದೆ. ಯಾರೆಲ್ಲಾ ಈ ಭೂಮಿಯ ಮೇಲೆ ತಮ್ಮ ಪ್ರೀತಿ–ವಾತ್ಸಲ್ಯವನ್ನು ಇಡುತ್ತಾರೋ, ಅವರಿಗಿರುವ ನಿರಂತರವಾದ ಸಂತೋಷಕ್ಕೆ ಈ ಲೋಕದಲ್ಲಿ ತಡೆಯನ್ನುಂಟು ಮಾಡುವ ಸಂಕಟಗಳಿರುತ್ತದೆ, ಆದರೆ ಯಾರೆಲ್ಲಾ ತಮ್ಮ ಪ್ರೀತಿ–ವಾತ್ಸಲ್ಯವನ್ನು ಪರಲೋಕದ ವಿಷಯಗಳಿಗೆ ಕರ್ತನ ಮೇಲೆ ಮತ್ತು ಆತನು ನಮಗಾಗಿ ವಾಗ್ದಾನ ಮಾಡಿರುವ ಮಹಿಮೆಯ

ವಿಷಯಗಳ ಮೇಲಿಡುತ್ತಾರೋ ಅವರು ನಿಶ್ಚಯವಾಗಿಯೂ ಸಂತೋಷದಿಂದಿರುವರು. ಏಕೆಂದರೆ ನಮ್ಮ ಕರ್ತನು ಬದಲಾಗದವನು. "ಆತನು ಮಾಡಿದ ವಾಗ್ದಾನಗಳಲ್ಲಿ ಒಂದು ಕೂಡ ವಿಫಲವಾಗದು." ಯಾರೆಲ್ಲಾ ಈ ನಿರೀಕ್ಷೆಯಲ್ಲಿ, ಉದ್ದೇಶದಲ್ಲಿ, ಪ್ರಯತ್ನದಲ್ಲಿ ಪ್ರಾಮಾಣಿಕರಾಗಿದ್ದಾರೋ ಅವರೆಲ್ಲರೂ ಕರ್ತನ ಸ್ತುತಿಯನ್ನು ಹೇಳಲಿ ಮತ್ತು ಉತ್ಸಾಹ ಧ್ವನಿ ಮಾಡಲಿ, ಕೇವಲ ಶಾರೀರಿಕ ಪ್ರಕಾರ ಅವರ ಉದ್ದೇಶಪೂರ್ವಕವಲ್ಲದ ಅಪೂರ್ಣತೆಗಳು ಮರೆಮಾಡಲಾಗಿರುವದು ಮಾತ್ರವಲ್ಲ, ಆದರೆ ನೀತಿಯ ಆಳ್ವಿಕೆ, ಸಾವಿರ ವರ್ಷದ ರಾಜ್ಯ, ಈಗ ಹತ್ತಿರವಿರುವುದರಿಂದ ಮತ್ತು ಅದರ ಆಳ್ವಿಕೆಯ ಅಡಿಯಲ್ಲಿ, ಮಹಾ ಶತ್ರುವಾದ ಸೈತಾನನನ್ನು ಬಂಧಿಸಿದ ನಂತರ, ಲೋಕದ ಎಲ್ಲಾ ಜನರು ಆಶೀರ್ವಾದವನ್ನು ಹೊಂದಿಕೊಳ್ಳುವರು ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಉತ್ಸಾಹ ಧ್ವನಿ ಮಾಡಲಿ. **R 4273 : 4**

## 9 ಫೆಬ್ರವರಿ

**"ನಿನ್ನ ದೇವರಾದ ಕರ್ತನನ್ನು ಜ್ಞಾಪಕಮಾಡಿಕೊಳ್ಳಬೇಕು." (ಧರ್ಮೋಪದೇಶಕಾಂಡ 8 : 18)**

ಕರ್ತನು ನಮಗೆ ವಾಗ್ದಾನ ಮಾಡಿರುವ ಆತ್ಮೀಕ ಆಶೀರ್ವಾದಗಳನ್ನು ನಂಬಿಕೆಯ ಮೂಲಕ ಅದನ್ನು ನಾವು ಸ್ವೀಕರಿಸಿ, ಎಷ್ಟು ಹೆಚ್ಚಾಗಿ ಅದನ್ನು ಹೊಂದಿಕೊಳ್ಳುತ್ತೇವೋ, ಅಷ್ಟೇ ಹೆಚ್ಚಾಗಿ ದೀನ ಸ್ವಭಾವವನ್ನು ನಾವು ಹೊಂದಿಕೊಳ್ಳಬೇಕು; ಮತ್ತು ದೈವಿಕ ಸದ್ಗುಣ ಮತ್ತು ನಮ್ಮ ಕೃತಜ್ಞತೆಗಳನ್ನು ಕುರಿತು ಎಷ್ಟರ ಮಟ್ಟಿಗೆ ಪ್ರಶಂಸಿಸುತ್ತೇವೋ ಅಷ್ಟರ ಮಟ್ಟಿಗೆ ನಮ್ಮ ದೀನತೆಯು ಹೆಚ್ಚಾಗಿರುವವು. ಕೃತಜ್ಞತೆಯುಳ್ಳ ಹೃದಯವು ಕೃಪೆಯಿಂದ ಕೃಪೆಗೆ, ಬಲದಿಂದ ಬಲಕ್ಕೆ ಬೆಳೆಯುತ್ತಾ ಹೋಗುವವು; ಜ್ಞಾನದಿಂದ ಜ್ಞಾನಕ್ಕೆ ,[ಒಂದು] ಸಾಧನೆಯಿಂದ [ಮತ್ತೊಂದು] ಸಾಧನೆಯತ್ತ ಬೆಳೆಯುವದು; ಆದರೆ ನಮ್ಮ ಕೃತಜ್ಞತೆಯು ಕ್ಷೀಣಿಸಿದರೆ ಮತ್ತು ನಾವು ಹೊಂದಿಕೊಂಡ ಅನುಕೂಲತೆಗಳು ನಮ್ಮ ಸ್ವಂತ ಸಾಧನೆಯಿಂದ ಅಥವಾ ಅದೃಷ್ಟದಿಂದ ಬಂದದೆ ಅಂದುಕೊಂಡರೆ, ಅಷ್ಟರ ಮಟ್ಟಿಗೆ ನಮ್ಮ ಆತ್ಮೀಕ ಬೆಳವಣಿಗೆಯು ತಣ್ಣಗಾಗುತ್ತದೆ ಮತ್ತು ಕೃತಜ್ಞತೆಯಿಲ್ಲದಿರುವುದರಿಂದ ಅಶುದ್ಧತೆಯು ಉಂಟಾಗುತ್ತದೆ, ಆತ್ಮೀಕ ಅಹಂಕಾರ ಮತ್ತು ಹೆಮ್ಮೆ ಉಂಟಾಗುತ್ತದೆ. ಇವೆಲ್ಲದರ ಮೂಲಕ ಅದು ಆತ್ಮೀಕ ಫಲ ಕೊಡದಂತಾಗುತ್ತದೆ. ಹೀಗೆ ಮುಂದುವರಿದರೆ ಅದು ಆತ್ಮೀಕ ಮರಣವನ್ನುಂಟು ಮಾಡುತ್ತದೆ. **R 3080 : 2**

## 10 ಫೆಬ್ರವರಿ

**“ಸಾವಿರದ ಮುನ್ನೂರ ಮೂವತ್ತೈದು ದಿನಗಳು ಬರುವವರೆಗೆ ಕಾದಿರುವವನೇ ಭಾಗ್ಯವಂತನು.” (ದಾನಿಯೇಲನು 12 : 12)**

ನಾವು ಯಾವ ಆಶೀರ್ವಾದಗಳನ್ನು ಸ್ವೀಕರಿಸಿದ್ದೇವೆ? ಸತ್ಯವೇದವು ನಮಗೆ ಹೇಳಿದಂತೆಯೇ ಅದು ನೆರವೇರಿದೆ. ಯಾರೆಲ್ಲಾ ತಮ್ಮ ಹೃದಯಗಳನ್ನು ಕರ್ತನಿಗಾಗಿ ತೆರೆದು ಕೊಡುತ್ತಾರೋ, ಕರ್ತನು ಅವರ ಹೃದಯದೊಳಗೆ ಬಂದು ಭೋಜನ ಮಾಡುವದು ಮಾತ್ರವಲ್ಲದೆ ಕರ್ತನ ಸೇವಕರಾಗಿರಲಾಗಿ, ಕರ್ತನು ಅವರನ್ನು ಸಂತೈಸುತ್ತಾನೆ ಮತ್ತು “ತಕ್ಕ ಕಾಲದ ಆಹಾರವನ್ನು” ಅವರಿಗೆ ಕೊಡುತ್ತಾನೆ. ಇವೆಲ್ಲಾ ಆಶೀರ್ವದಿಸಲ್ಪಟ್ಟ ಸತ್ಯಗಳನ್ನು ನಾವು ಈಗಿನ ಕಾಲದ ಬೆಳಕಿನಲ್ಲಿ ಪ್ರವೇಶ ಮಾಡಿದಾಗಿನಿಂದ ಸೇವಿಸುತ್ತಿದ್ದೇವೆ ಮತ್ತು ಇದರಿಂದ ಏನು ನಿರೂಪಣೆಯಾಗುತ್ತದೆ ಎಂದರೆ ಈ ಯುಗಗಳ ದೈವಿಕ ಯೋಜನೆಯು ಯಾವ ಮನುಷ್ಯರಿಂದಲೂ ಬಂದಿದ್ದಲ್ಲ, ಯಾವ ಮನುಷ್ಯನ ಯೋಜನೆ ಅಥವಾ ರಚನೆಯೂ ಅಲ್ಲ; ಏಕೆಂದರೆ ಯಾವ ಮನುಷ್ಯನಾಗಲಿ ದೇವರ ವಾಕ್ಯದಿಂದಲ್ಲದೆ ಇಂತಹ ಮಹಿಮೆಯುಳ್ಳ ವಿಷಯಗಳನ್ನು ತರಲು ಶಕ್ತನಲ್ಲ. **R 5568 : 5**

## 11 ಫೆಬ್ರವರಿ

**“ಇದಲ್ಲದೆ ಆ ವಾಕ್ಯವಾಗಿರುವಾತನು[ಲೋಗೋಸ್] ಶರೀರಧಾರಿಯಾಗಿ.... ನಮ್ಮ ಮಧ್ಯದಲ್ಲಿ ವಾಸಮಾಡಿದನು.” (ಯೋಹಾನನು 1 : 14)** [Diaglott]

ಮನುಷ್ಯರ ಎಲ್ಲಾ ಸಂತತಿಯವರು ಆದಾಮನ ಮಕ್ಕಳಾಗಿರುವುದರಿಂದ ಮತ್ತು ಆತನ ಮರಣ ದಂಡನೆಯಲ್ಲಿ ಪಾಲುಗಾರರಾಗಿರುವುದರಿಂದ, ಯಾವನಾದರೂ ತನ್ನ ಸಹೋದರನು ಶಾಶ್ವತವಾಗಿ ಬದುಕಿರುವದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು. [ಕೀರ್ತನೆಗಳು 49 : 7 , 8]. ದೇವರು ಈ ವಿಷಯವನ್ನು ಹೇಗೆ ಮುಚ್ಚಿಹಾಕಿದ್ದಾರೆ [ಮರೆಮಾಡಿದ್ದಾರೆ] ಎಂದರೆ ಆದಾಮನು ಮತ್ತು ಅವನ ಸಂತತಿಗಾಗಿ ಒಬ್ಬ ಪರಿಪೂರ್ಣ ಮನುಷ್ಯನು ಸ್ವಇಚ್ಛೆಯಿಂದ ಸಾಯಬೇಕು, ಆಗ ಮಾತ್ರ ಅವರನ್ನು ಬಿಡಿಸಿಕೊಳ್ಳಲು ಸಾಧ್ಯ. ಆದರೆ ಹಾಗೆ ಮನುಷ್ಯರಲ್ಲಿ ಒಬ್ಬರೂ ಇಲ್ಲದೆ ಇರುವುದರಿಂದ, ದೇವರು ತನ್ನ ಒಬ್ಬನೇ ಮಗನಾದ ಲೋಗೋಸ್ ಅನ್ನು ಮನುಷ್ಯನನ್ನಾಗಿ ಮಾಡಿ, ಆದಾಮ ಮತ್ತು ಆತನ

ಎಲ್ಲಾ ಮಕ್ಕಳನ್ನು ಬಿಡಿಸಿ ರಕ್ಷಿಸುವ ಹಾಗೆ ಏರ್ಪಾಡನ್ನು ಮಾಡಿದನು. **R 5352 : 4**

## 12 ಫೆಬ್ರವರಿ

**"ನಾವು ದೇವರ ಜೊತೆ ಕೆಲಸದವರು." ( 1 ಕೊರಿಂಥದವರಿಗೆ 3 : 9)**

ಈ ಸುವಾರ್ತಾ ಯುಗದಲ್ಲಿನ ಒಂದೇ ಒಂದು ಕೆಲಸವೇನೆಂದರೆ, ಅಬ್ರಹಾಮನ ಆತ್ಮೀಕ ಸಂತತಿಯನ್ನು ಆಯ್ಕೆ ಮಾಡುವದಾಗಿದೆ, ಇವರ ಮೂಲಕ ಭೂಮಿಯ ಸಂತತಿಯಾಗಿರುವ ಲೋಕದ ಎಲ್ಲಾ ಜನರು ಆಶೀರ್ವಾದವನ್ನು ಪಡೆದುಕೊಳ್ಳುವರು. ಭೂಮಿಯಲ್ಲಿರುವ ಎಲ್ಲಾ ಜನಾಂಗದವರು ಆಶೀರ್ವಾದ ಹೊಂದುವರೆಂಬ ಈ ವಾಗ್ದಾನವು ಆತ್ಮೀಕ ಸಂತಾನವು ನೆರವೇರಿ ಮುಗಿಯುವವರೆಗೂ ಅದು ಪೂರ್ಣವಾಗುವುದಿಲ್ಲ. "ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ." [ಗಲಾತ್ಯ 3 : 29] ಈ ಸುವಾರ್ತೆ ಯುಗದ ಮೊದಲಿನಿಂದ ಕೊನೆಯವರೆಗೂ ಈ ಒಂದೇ ಒಂದು ಕೆಲಸ ಮಾತ್ರ ನಡೆಯುತ್ತಿದೆ. ಆದ್ದರಿಂದ ಸತ್ಯವೇದದಲ್ಲಿ ನಾವು ಹೀಗೆ ಓದುತ್ತೇವೆ; "ಬಿತ್ತುವವನೊಬ್ಬನು, ಕೊಯ್ಯುವವನು ಮತ್ತೊಬ್ಬನು. ನೀವು ಕಷ್ಟ ಪಡದಂಥ ಬೆಳೆಯನ್ನು ಕೊಯ್ಯುವದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು. ಬೇರೊಬ್ಬರು ಕಷ್ಟ ಪಟ್ಟರು, ನೀವು ಅವರ ಕಷ್ಟದಲ್ಲಿ ಸೇರಿಕೊಂಡಿದ್ದೀರಿ ಅಂದನು." [ಯೋಹಾನನು 4 : 35-38] ಅದು ಆರಂಭದಲ್ಲಾದರೂ ಸರಿ ಅಥವಾ ಯುಗದ ಸಮಾಪ್ತಿಯಲ್ಲಿರುವ ಈಗಿನ ಕೊಯ್ಯುವ ಕಾಲವಾದರೂ ಸರಿ—ಅವೆಲ್ಲವೂ ಒಂದೇ ಕೆಲಸ ಮತ್ತು ಒಂದೇ ಉದ್ದೇಶವನ್ನು ಒಳಗೊಂಡಿದೆ, ಅಂದರೆ ಅದು ಆಯಲ್ಪಟ್ಟವರನ್ನು ಒಟ್ಟುಗೂಡಿಸುವದಾಗಿದೆ. **R 5302 : 1**

## 13 ಫೆಬ್ರವರಿ

**"ನಿಮ್ಮನ್ನು ಕರೆಯುವಾತನು ನಂಬಿಗಸ್ತನು. ಆತನು ತನ್ನ ಕಾರ್ಯವನ್ನು ಸಾಧಿಸುವನು." (1 ಥೆಸಲೋನಿಕದವರಿಗೆ 5 : 24)**

ಪ್ರಿಯ ಸ್ನೇಹಿತರೇ, ಯಜ್ಞದ ಕುರಿಮರಿಯಾದಾತನ ಮದುವೆಗೆ, ಕುರಿಮರಿಯಾದಾತನೊಂದಿಗಿನ ನಮ್ಮ ಮದುವೆಗೆ ನಾವು ಸಿದ್ಧರಾಗುತ್ತಾ ಇದ್ದೇವೆ. ಇಂದು ನಾವು ಏನಾದರು ಮಾಡಿದರೂ ಸರಿ ಮಾಡದಿದ್ದರೂ ಸರಿ, ಅದು ನಮ್ಮ ಅಂತ್ಯದ ಸಿದ್ಧತೆಗೆ ಪ್ರಭಾವ ಬೀರುತ್ತದೆ. ಈ ಎಲ್ಲಾ ವಿಷಯಗಳಿಗೆ ನಮ್ಮ

ಮನಸ್ಸುಗಳೇ ಅಡಿಪಾಯವಾಗಿದೆ. ನಮಗೆ ಅಪೂರ್ಣ ಶರೀರಗಳಿವೆ ಎಂದು ಕರ್ತನಿಗೆ ಗೊತ್ತಿದೆ. ಆದ್ದರಿಂದ ನಮಗೆ  ನಮ್ಮ ಶರೀರವು ಪರಿಪೂರ್ಣವಾಗಿದೆಯಾ ಎಂದು ಪರೀಕ್ಷೆಗಳು ಉಂಟಾಗುವುದಿಲ್ಲ, ಆದರೆ ನಮ್ಮ ಹೃದಯಗಳು ಪರಿಪೂರ್ಣವಾಗಿದೆಯಾ ಎಂಬ ಪರೀಕ್ಷೆ ಉಂಟಾಗುತ್ತದೆ. ಒಂದು ವೇಳೆ ದೇವರ ಸನ್ನಿಧಿಯಲ್ಲಿ ನಮ್ಮ ಹೃದಯವು ಪರಿಪೂರ್ಣವಾಗಿದ್ದರೆ, ನಮ್ಮ ಮಾತುಗಳು, ಕ್ರಿಯೆಗಳು ಮತ್ತು ನಮ್ಮ ಆಲೋಚನೆಗಳನ್ನು ನಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ಪ್ರೀತಿಯ ಪ್ರಮಾಣಕ್ಕೆ ಸಾಮರಸ್ಯವಾಗಿ[ಹೊಂದಾಣಿಕೆಯಾಗಿ] ತರಬಹುದು. ಒಂದು ವೇಳೆ ನಾವು ನಮ್ಮ ಹೃದಯವನ್ನು ನಿಷ್ಠೆಯುಳ್ಳದ್ದಾಗಿ ಕಾದುಕೊಂಡರೆ, ನಾವು ಅತ್ಯಧಿಕವಾಗಿ ದೇವರ ಪ್ರಿಯ ಮಗನ, ನಮ್ಮ ಪರಲೋಕದ ಮದಲಿಂಗನ ಪ್ರತಿರೂಪವಾಗಲು ಸಾಧ್ಯ; ಮತ್ತು ತಕ್ಕ ಕಾಲದಲ್ಲಿ ನಾವು "ಕೈಗಳಿಂದ ಮಾಡಿರದ ಮನೆ ಅಂದರೆ ನಿತ್ಯವಾದ ಪರಲೋಕಕ್ಕೆ" ಅತ್ಯಧಿಕ ಸಂತೋಷದಿಂದ ಪ್ರವೇಶಿಸುವೆವು. ನಂತರ ನಮ್ಮ ಕರ್ತನು ನಮ್ಮನ್ನು ತಂದೆಯ ಸಮ್ಮುಖದಲ್ಲಿ– "ತನ್ನ ಮದಲಿಂಗನಿಗಾಗಿ ಸಿದ್ಧವಾಗಿರುವ ವಧುವಾಗಿ" ಒಪ್ಪಿಸುವನು; ಆತನು ನಮ್ಮನ್ನು ನಿಷ್ಕಳಂಕವಾಗಿ–ಅತ್ಯಧಿಕ ಸಂತೋಷದಿಂದ ತಂದೆಯ ಮುಂದೆ ಒಪ್ಪಿಸುವನು. **R 5907 : 4**

## 14 ಫೆಬ್ರವರಿ

**"ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ." (2 ಕೊರಿಂಥದವರಿಗೆ 4 : 17)**

ಸತ್ಯಕ್ಕಾಗಿ ನಿಷ್ಠೆಯಿಂದಿರುವುದರಿಂದ ನಮಗೆ ಬರುವಂತಹ ಹಗೆತನ, ಅಪಹಾಸ್ಯ, ನಿಷ್ಠುರವಾದ ಮಾತುಗಳನ್ನು ಸಹಿಸಿಕೊಳ್ಳುವುದಕ್ಕೆ ನಾವು ಸಿದ್ಧರಾಗಿದ್ದೇವಾ? ನಮ್ಮ ತಂದೆಯ ಪ್ರೀತಿಯ ದಯೆ, ಈ ಇಡೀ ಲೋಕದ ದಯೆ ಮತ್ತು ನಗುವಿಗಿಂತ –ಸ್ವತಃ ನಮ್ಮ ಜೀವಕ್ಕಿಂತ ಅತ್ಯಧಿಕವಾಗಿದೆಯಾ? ಹಾಗಿದ್ದರೆ ಆತನ ನಾಮದಲ್ಲಿ ಮುಂದೆ ಹೋಗಬಹುದು. ಸಂತೋಷದಿಂದ ನಾವು ಹೋಗುವಾಗ ನಮ್ಮ ತುಟಿಗಳಿಂದ ಆತನನ್ನು ಸ್ತುತಿಸುತ್ತಾ, ಆತನು ನಮ್ಮ ಬಾಯಲ್ಲಿ ಇಟ್ಟಿರುವ ಹೊಸ ಹಾಡನ್ನು ಹಾಡುವೆವು ಅದು "ನಮ್ಮ ದೇವರ ಪ್ರೀತಿಯ–ದಯೆಯನ್ನು ಕುರಿತು ಹಾಡುವೆವು." ಈ ಹಾಡನ್ನು ಹಾಡಲು ನಾವು ಸ್ವಲ್ಪ ಬೆಲೆ ಕೊಡಬೇಕಾಗುತ್ತದೆ. [ತ್ಯಾಗ ಮಾಡಬೇಕಾಗುತ್ತದೆ.] **R 5441 : 6**

## 15 ಫೆಬ್ರವರಿ

**"ಕರ್ತನು ತನ್ನ ಜನರಲ್ಲಿ ಇಷ್ಟಪಡುತ್ತಾನೆ; ದೀನರನ್ನು ರಕ್ಷಣೆಯಿಂದ ಅಲಂಕರಿಸುತ್ತಾನೆ." (ಕೀರ್ತನೆಗಳು 149 : 4)**

ಇಂತವರಲ್ಲಿಯೇ ಕರ್ತನು [ದೇವರು] ಇಷ್ಟವುಳ್ಳವನಾಗಿದ್ದು, ಆತನ ಮಗನಲ್ಲಿರುವ ಜ್ಞಾನ ಮತ್ತು ಆತನಲ್ಲಿರುವ ಎಲ್ಲಾ ಆಶೀರ್ವಾದಗಳನ್ನು ಕುರಿತು ಬೋಧಿಸುತ್ತಾನೆ ಮತ್ತು ಮಾರ್ಗದರ್ಶನ ನೀಡುತ್ತಾನೆ. ಒಂದು ವೇಳೆ ಅವರು ದೀನರಾಗಿಯೇ ಮುಂದುವರಿದರೆ, ಅವರನ್ನು ದೇವರೊಂದಿಗೆ ಭಾಧ್ಯಸ್ತರಾಗಿಯೂ ಮತ್ತು ತಮ್ಮ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸಹ–ಬಾಧ್ಯಸ್ತರನ್ನಾಗಿಯೂ ಮಾಡುವನು. ದೀನರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವರು ಎಂದು ನಾವು ಸತ್ಯವೇದದಲ್ಲಿ ಓದುತ್ತೇವೆ. ಅವರು ಪ್ರಧಾನವಾದ ಮತ್ತು ಮೂಲವಾದ ಒಡಂಬಡಿಕೆಯ ಅಡಿಯಲ್ಲಿ ಸ್ವಾಸ್ತ್ಯವನ್ನು ಪಡೆದುಕೊಳ್ಳುವರು. ಇವರೇ ಅಬ್ರಹಾಮನ ಸಂತತಿಯವರಾಗಿರುವರು. ಇವರ ಮೂಲಕವಾಗಿ ಸಾವಿರ ವರ್ಷದ ಆಳ್ವಿಕೆಯಲ್ಲಿ ವಿಧೇಯರಾಗುವ ಎಲ್ಲಾ ಮನುಕುಲಕ್ಕೆ ಆಶೀರ್ವಾದವು ದೊರೆಯುವದು. ಸಾವಿರ ವರ್ಷದ ಅಂತ್ಯದಲ್ಲಿ, ಅವರಿಗೆ ಕೊನೆಯ ಪರೀಕ್ಷೆಗಳು ಆದ ಮೇಲೆ ಇಡೀ ಲೋಕದವರು ಬೋಧಿಸಲ್ಪಡುವರು. ದೇವರು ಎಲ್ಲಾ ಜ್ಞಾನಕ್ಕೆ ಜೀವ ಬುಗ್ಗೆಯಾಗಿದ್ದಾನೆಂದು(ಮೂಲ ಕಾರಣನಾಗಿದ್ದಾನೆಂದು) ಅವರು ಕಲಿತುಕೊಂಡಿರುವರು; ಮತ್ತು ಅವರು ಈ ಬೋಧನೆಗಳಿಂದ ಲಾಭವನ್ನು ಪಡೆಯುವರು. **R 5370 : 5**

## 16 ಫೆಬ್ರವರಿ

**"ಇದೇ ನಿಮಗೆ ಅವಶ್ಯವಾದ ವಿಶ್ರಾಂತಿ. ಬಳಲಿದವರನ್ನು ವಿಶ್ರಮಗೊಳಿಸಿರಿ, ನಿಮಗೆ ಅನುಕೂಲವಾದ ಉಪಶಮನ ಇದೇ." (ಯೆಶಾಯ 28 : 12)**

ನಾವು ಕರ್ತನ ವಾಗ್ದಾನದಲ್ಲಿ ವಿಶ್ರಾಂತಿಗೊಂಡಿದ್ದೇವೆ–ನಾವು ಆತನ ಬಲದಲ್ಲಿ ವಿಶ್ರಾಂತಿಗೊಂಡಿದ್ದೇವೆ ಮತ್ತು ಆತನು ನಮಗೆ ಮಾಡಿದ ವಾಗ್ದಾನಗಳನ್ನು ನೆರವೇರಿಸಲು ಶಕ್ತನಾಗಿದ್ದಾನೆ ಎಂಬ ಭರವಸದಲ್ಲಿ ವಿಶ್ರಾಂತಿಗೊಂಡಿದ್ದೇವೆ; ನಮ್ಮನ್ನು ಕರೆದಾತನು ತಾನು ಹೇಳಿದ ತನ್ನ ಎಲ್ಲಾ ಶುಭ ವಾರ್ತೆಗಳನ್ನು ನೆರವೇರಿಸುವುದಕ್ಕೆ ಶಕ್ತನಾಗಿದ್ದಾನೆಂದು ನಾವು ಬಲ್ಲೆವು. ಈ ಸಮಾಧಾನ ಅಥವಾ ವಿಶ್ರಾಂತಿಯು ಪವಿತ್ರಾತ್ಮದ ವಿಶೇಷವಾದ ಆಶೀರ್ವಾದವಾಗಿದೆ. ನಾವು ಎಷ್ಟರ ಮಟ್ಟಗೆ ಈ ಪವಿತ್ರಾತ್ಮ, ದೇವರ ಪರಿಶುದ್ದ ಮನಸ್ಸು, ಪರಿಶುದ್ಧ ಆಲೋಚನೆ ಹೊಂದುತ್ತೇವೋ

ಅಷ್ಟರ ಮಟ್ಟಿಗೆ ಈ ಸಮಾಧಾನವು ನಮ್ಮಲ್ಲಿ ತುಂಬಿರುವದು. ಇದೊಂದು ಸರಳ ಪ್ರಮಾಣದ ವಿಷಯವಾಗಿದೆ. ನಾವು ಕೃಪೆಯಲ್ಲಿ, ಕರ್ತನ ಜ್ಞಾನದಲ್ಲಿ, ಸತ್ಯದ ಜ್ಞಾನದಲ್ಲಿ ಬೆಳೆಯುತ್ತಾ ಹೋದಂತೆ ಇವು ನಮ್ಮನ್ನು ಸಾಂತ್ವನಗೊಳಿಸುತ್ತದೆ, ನಮ್ಮನ್ನು ಬಲಪಡಿಸುತ್ತದೆ; ನಾವು ಪ್ರತಿದಿನವೂ ಅತ್ಯಧಿಕವಾದ ದೇವರ ಸಮಾಧಾನವನ್ನು ಹೊಂದಿಕೊಳ್ಳಬಹುದು ಮತ್ತು ಆತನ ಪ್ರೀತಿಯಲ್ಲಿ ನಾವು ನೆಲಸಿರಬಹುದು. **R 5432 : 3**

## 17 ಫೆಬ್ರವರಿ

**"ನಿಮ್ಮ ಹೃದಯವು ಉಲ್ಲಾಸಿಸುವದು; ನಿಮ್ಮ ಆನಂದವನ್ನು ನಿಮ್ಮಿಂದ ಯಾರೂ ತೆಗೆಯುವದಿಲ್ಲ." (ಯೋಹಾನನು 16 : 22)**

ಯಾವ ಮನುಷ್ಯನೂ ತೆಗೆದುಬಿಡುವುದಕ್ಕೆ ಆಗದೆ ಇರುವಂತಹ ಆನಂದವು ಯಾವುದು? ಯಾವ ಉಪದ್ರವ, ಸಂಕಟ ಮತ್ತು ತೊಂದರೆಗಳು ಆ ಆನಂದವನ್ನು ಇನ್ನೂ ಆಳವಾಗಿಯೂ, ಅಗಲವಾಗಿಯೂ ಮತ್ತು ಇನ್ನೂ ಹೆಚ್ಚಾದ ಮಧುರವುಳ್ಳದ್ದಾಗಿ ಮಾಡುತ್ತದೆ? ಏನಿದು ಆನಂದ? ಈ ಆನಂದವು ಉತ್ಸುಕತೆಯಿಂದ ನಮ್ಮ ಸ್ವಾಸ್ಥ್ಯಕ್ಕಾಗಿ ನಿರೀಕ್ಷಿಸುತ್ತಿರುವ ಬರಬೇಕಾದ ಆಶೀರ್ವಾದಗಳಿಗೆ ಮುನ್‌ರುಚಿಯಾಗಿದೆ. ಆತನು ಆರಂಭಿಸಿದ ತನ್ನ ಸುಚಿತ್ತದ ಪ್ರಕಾರ ನಮ್ಮಲ್ಲಿ ಉದ್ದೇಶವನ್ನೂ ಕಾರ್ಯವನ್ನೂ ಸಾಧಿಸುತ್ತಾನೆ ಮತ್ತು ನಾವು ಬಯಸುವುದನ್ನು ತನ್ನದೇ ಆದ ಅತ್ಯುತ್ತಮ ರೀತಿಯಲ್ಲಿ ಪೂರ್ಣಗೊಳಿಸುತ್ತಾನೆ ಎಂಬುದು ಆತ್ಮವಿಶ್ವಾಸದಿಂದ ಪ್ರೇರಿತವಾಗಿದೆ; ನಮಗೆ ಆತ್ಮವಿಶ್ವಾಸವಿರುವುದೇನೆಂದರೆ ನಾವು ಎಲ್ಲಿಯವರೆಗೂ ಆತನ ಕೃಪೆಯ ವಾಗ್ದಾನಗಳನ್ನು ನಮ್ಮ ವಿಶ್ವಾಸವೆಂಬ ಕೈಗಳಿಂದ ಗಟ್ಟಿಯಾಗಿ ಹಿಡಿದಿರುತ್ತೇವೋ, ಅಲ್ಲಿಯವರೆಗೂ ನಮ್ಮನ್ನು ಆತನಿಂದ ಹಗಲಿಸಲು ಆತನು ಅನುಮತಿ ಕೊಡುವುದಿಲ್ಲ. ಕ್ರಿಸ್ತನಲ್ಲಿರುವ ದೇವರ ಪ್ರೀತಿಯಿಂದ ನಮ್ಮನ್ನು ಹಗಲಿಸುವವರು ಯಾರು? ಹಿಂಸೆಗಳೋ, ಉಪದ್ರವಗಳೋ? ನಮ್ಮ ತಂದೆಯ ಕೈಯೊಳಗಿಂದ ನಮ್ಮನ್ನು ಯಾರೂ ಕಸಕೊಳ್ಳಲಾರರು ಎಂಬ [ಆತ್ಮ] ವಿಶ್ವಾಸ ನಮಗಿದೆ [ಯೋಹಾನ **10 : 29**] ಮತ್ತು ಸ್ವತಃ "ದೇವರೇ ನಮ್ಮನ್ನು ಪ್ರೀತಿಸುತ್ತಾನೆ" ಮತ್ತು ಎಲ್ಲಿಯವರೆಗೂ ನಾವು ಆತನ ಪ್ರೀತಿಯಲ್ಲಿ ವಿಧೇಯರಾಗಿ ನೆಲೆಗೊಂಡಿರುತ್ತೇವೋ, ಅಲ್ಲಿಯವರೆಗೂ ಆತನು ನಮ್ಮನ್ನು ಕೈಬಿಟ್ಟು ತೊರೆಯುವದಿಲ್ಲ. ಹೌದು, ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ ಎಂಬ ಆತ್ಮವಿಶ್ವಾಸ ನಮಗಿದೆ; ನಮ್ಮೊಂದಿರುವಾತನು

ನಮಗೆ ಎದುರಾಗಿ ಇರುವವರೆಲ್ಲರಿಗಿಂತಲೂ ಶಕ್ತಿಶಾಲಿಯಾಗಿದ್ದಾನೆ ಎಂಬ ಆತ್ಮವಿಶ್ವಾಸ ನಮಗಿದೆ. ಇಂತಹ ಆತ್ಮವಿಶ್ವಾಸವು ನಿಶ್ಚಯವಾಗಿ ಈ ಲೋಕವು ಗ್ರಹಿಸುವದಕ್ಕಿಂತ ಮಿಗಿಲಾಗಿ ನಮಗೆ ಸಂತೋಷವನ್ನು ತರುತ್ತದೆ ಮತ್ತು ಎಲ್ಲಾ ಗ್ರಹಿಕೆಗೂ ಮೀರಿದ ದೇವರ ಸಮಾಧಾನ ನಮ್ಮ ಹೃದಯಗಳನ್ನು ಕಾಯುತ್ತದೆ. **R 2232 : 1**

## 18 ಫೆಬ್ರವರಿ

**"ಆದದರಿಂದ ನೀವು ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ದೇವರನ್ನು ಅನುಸರಿಸುವವರಾಗಿರಿ." (ಎಫೆಸದವರಿಗೆ 5 : 1)**

ನಾವು ದೇವರನ್ನು ಮತ್ತು ಲೋಕವನ್ನು (ಲೋಕದ ವಸ್ತುವನ್ನು) ಒಟ್ಟಿಗೆ ಸೇವಿಸಲು ಸಾಧ್ಯವಿಲ್ಲ ಎಂದು ಕಲಿತುಕೊಳ್ಳುವ ತಕ್ಕ ಸಮಯದಲ್ಲಿದ್ದೇವೆ ಮತ್ತು ಈಗ ಇವೆರಡರಲ್ಲಿ ಒಂದನ್ನು ಮಾತ್ರ ಆರಿಸಿಕೊಳ್ಳಬೇಕಾಗಿದೆ. ಒಂದು ವೇಳೆ ಕರ್ತನು ಮತ್ತು ಆತನ ಸೇವೆಯನ್ನು ಆರಿಸಿಕೊಳ್ಳದಿದ್ದರೆ ಮತ್ತು ನಮ್ಮ ಹೃದಯದ ವಾತ್ಸಲ್ಯದಲ್ಲಿ ಕರ್ತನಿಗೆ ಮೊದಲ ಸ್ಥಾನ ಕೊಡದಿದ್ದರೆ, ಬೇರೆ ಲೌಕಿಕ ವಿಷಯಗಳಿಗೆ ಮೊದಲ ಸ್ಥಾನ ಕೊಡುತ್ತಿದ್ದೇವೆ ಎಂದಾಗುತ್ತದೆ–ಇದು ಸ್ವಾಭಾವಿಕ ಮನುಷ್ಯನ ಆಸಕ್ತಿಗಳಾಗಿದೆ; ಮತ್ತು ಇದಕ್ಕೆ ಅನುಗುಣವಾಗಿ ಕರ್ತನು ನಮ್ಮನ್ನು ಮೆಚ್ಚುತ್ತಾನೆ ಹಾಗೂ ನಮಗೆ ತಕ್ಕ ಬಹುಮಾನವನ್ನು ಕೊಡುತ್ತಾನೆ. ಆತನು ನಿಶ್ಚಯವಾಗಿಯೂ ಭೂಮಿಯಲ್ಲಿರುವ ಎಲ್ಲಾ ಸಂತತಿಯವರಿಗೆ ಆಶೀರ್ವಾದಗಳನ್ನು ನೀಡುತ್ತಾನೆ. ಆದರೆ ಯಾರೆಲ್ಲಾ ಆತನನ್ನು ಅತ್ಯುನ್ನತವಾಗಿ ಪ್ರೀತಿಸುತ್ತಾರೋ ಅಂದರೆ ಯಾರೆಲ್ಲಾ ಮನೆಗಳು, ಭೂಮಿಗಳು, ವ್ಯಾಪಾರ ಅಥವಾ ಐಶ್ವರ್ಯ , ಕುಟುಂಬ ಅಥವಾ ಸಂಬಂಧಿಕರು ಅಥವಾ ತನ್ನನ್ನೇ ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಕರ್ತನನ್ನು ಪ್ರೀತಿಸುತ್ತಾರೋ ಅವರಿಗೆ ಅತ್ಯಂತ ಮಹತ್ವವುಳ್ಳ ಅಮೂಲ್ಯವಾದ ವಾಗ್ದಾನಗಳಾದ ಮಹಿಮೆ, ಘನ ಮತ್ತು ನಿರ್ಲಯತ್ವ(ಅಮರತ್ವ)ಗಳೆಂಬ ವಿಶೇಷವಾದ ಆಶೀರ್ವಾದಗಳನ್ನು ಕೊಡುತ್ತಾನೆ. ಕರ್ತನನ್ನು ಹಿಂಬಾಲಿಸುವದಕ್ಕಾಗಿ ಎಲ್ಲವನ್ನೂ ತೊರೆದು ಬಿಟ್ಟವರಿಗಾಗಿ ನಮ್ಮ ಬುದ್ಧಿವಾದ ಏನೆಂದರೆ, ನಾವು ಮತ್ತೆ ಹಿಂದಕ್ಕೆ ತಿರುಗಿ ನೋಡುವಂತಿಲ್ಲ, ನಾವು ಊಹಿಸಬಹುದಾದ ಅತ್ಯಂತ ದೊಡ್ಡ ಕರಾರನ್ನು(ಒಡಂಬಡಿಕೆಯನ್ನು) ಮಾಡಿದ್ದೇವೆ ಎಂದು ನಾವು ಅಂದಾಜು ಮಾಡುತ್ತೇವೆ, ಅಂದರೆ ಕರ್ತನೊಂದಿಗೆ ಆತನ ಅದ್ಭುತವಾದ ಕೆಲಸಗಳಲ್ಲಿ ಮತ್ತು ದೈವಿಕ ಅನುಮತಿಯೊಂದಿಗೆ ನಾವು ಊಹಿಸಬಹುದಾದ ಶ್ರೇಷ್ಟ ಬಹುಮಾನವನ್ನು ಪಡೆಯುವ ಹಾದಿಯಲ್ಲಿದ್ದೇವೆ. **R 3721 : 4**

## 19 ಫೆಬ್ರವರಿ

**"ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸಿಂಹಾಸನದ ಬಳಿಗೆ ಬರೋಣ." (ಇಬ್ರಿಯರಿಗೆ 4 : 16)**

ಪ್ರಾರ್ಥನೆ ಎಂಬುದು ಆಜ್ಞೆಯಾಗಿರದೆ ಅದೊಂದು ಸವಲತ್ತು [ಹಕ್ಕು] ಆಗಿರುವುದರಿಂದ ನಮ್ಮ ಬಿದ್ದು ಹೋದ ಸ್ಥಿತಿಗೆ ಅದು ಅವಶ್ಯವಾಗಿದೆ. ಮನುಷ್ಯ ತನ್ನ ಮೊದಲ ನಿಜವಾದ ಪರಿಪೂರ್ಣತೆಯಿಂದ ಬಿದ್ದುಹೋಗಿರುವುದರಿಂದ ನಮ್ಮ ಶರೀರವು ಅಪೂರ್ಣತೆ ಮತ್ತು ಕ್ಷೀಣತೆಯುಳ್ಳದ್ದಾಗಿದೆ; ಆದರೂ ನಾವು ನೂತನ ಸೃಷ್ಟಿಗಳಾಗಿರುವುದರಿಂದ, ಈ ಬಲಹೀನತೆಗಳನ್ನು ಕುರಿತು ಜವಾಬ್ದಾರಿವುಳ್ಳವರಾಗಿದ್ದೇವೆ. ಈ ಹೊರೆಗಳನ್ನು ಇಳಿಸುವುದಕ್ಕೆ ಒಂದೇ ಮಾರ್ಗವೇನೆಂದರೆ ಕೃಪಾಸಿಂಹಾಸನದ ಬಳಿಗೆ ಬಂದು ಸಮಯೋಚಿತವಾದ ಸಹಾಯವನ್ನು ಪಡೆಯುವದಾಗಿದೆ. ಆದದರಿಂದ ಯಾರೆಲ್ಲಾ ಆಗಾಗ ಪ್ರಾರ್ಥನೆಯಲ್ಲಿ ಕೃಪಾಸನದ ಬಳಿಗೆ ಹೋಗುತ್ತಾರೋ, ದೇವರು ಅವರ ಒಳಿತಿಗಾಗಿ ಮತ್ತು ಅವರ ಸವಲತ್ತಿಗಾಗಿ ಒದಗಿಸಿರುವ ಅವಶ್ಯಕತೆಯನ್ನು ಕುರಿತು ಅರಿತಿದ್ದಾರೆಂದು ಸೂಚಿಸುತ್ತದೆ. **R 5201 : 5**

## 20 ಫೆಬ್ರವರಿ

**"ಯಾವನಾದರೂ ನನ್ನ ಮತ್ತು ನನ್ನ ವಾಕ್ಯಗಳ ವಿಷಯದಲ್ಲಿ ನಾಚಿಕೊಳ್ಳುವದಾದರೆ ಮನುಷ್ಯಕುಮಾರನು ತನ್ನ ಮತ್ತು ತನ್ನ ತಂದೆಯ ಪ್ರಭಾವದೊಡನೆಯೂ ಪರಿಶುದ್ಧ ದೂತರೊಂದಿಗೂ ಬರುವಾಗ ಅವನ ವಿಷಯದಲ್ಲಿ ಆತನು ನಾಚಿಕೊಳ್ಳುವನು." (ಲೂಕನು 9 : 26)**

ದೇವರ ವಾಕ್ಯವು ಬರೀ ಸತ್ಯವೇದ ಪುಸ್ತಕ ಮಾತ್ರವಲ್ಲ, ಆದರೆ ಅದು ಸತ್ಯೋಪದೇಶಗಳು, ಕೈ ಪ್ರತಿಗಳು, ಪುಸ್ತಕಗಳೂ ಒಳಗೊಂಡಿದೆ. ಎಷ್ಟರ ಮಟ್ಟಿಗೆ ಅದು ಒಳಗೊಂಡಿದೆಯೋ ಅದು ನಿಜವಾಗಿಯೂ ದೇವರ ಪ್ರಿಯ ಮಗನ ಸಂದೇಶವನ್ನು ಸೂಚಿಸುತ್ತದೆ. ಇದನ್ನು ಕುರಿತು ನಾವು ಯೋಚಿಸಬೇಕು ಮತ್ತು ಸತ್ಯವೇದದಲ್ಲಿ ಪ್ರಸ್ತುತ ಪಡಿಸಿರುವ ಯಾವುದೇ ಬೋಧನೆಗಳನ್ನು ಕುರಿತು ನಾವು ನಾಚಿಕೊಳ್ಳಬಾರದು, ಅಲ್ಲದೆ ಕರ್ತನ ಏರ್ಪಾಡಿನಲ್ಲಿ ಸಿದ್ಧವಾಗಿರುವ ಆತನ ಸತ್ಯವನ್ನು ಸೂಚಿಸುವ ಮತ್ತು ಅದನ್ನು ವಿವರಿಸುವ ಯಾವುದೇ ಕೃತಿ ಅಥವಾ

ಗ್ರಂಥಗಳಾಗಿರಲಿ ಅದರ ಬಗ್ಗೆ ನಾವು ನಾಚಿಕೊಳ್ಳಬಾರದು. ಕರ್ತನು ಯಾರನ್ನು ಬಯಸುತ್ತಾನೆಂದರೆ–ಅವರು ತೆರೆದ ಮನಸ್ಸು ಮತ್ತು ತೆರೆದ ಹೃದಯವುಳ್ಳ ಜನರಾಗಿದ್ದು ಅವರ ಹೃದಯವು ಕರ್ತನಿಗೆ ಮತ್ತು ಆತನ ಸತ್ಯಕ್ಕೆ ಎಷ್ಟು ನಿಷ್ಠೆಯುಳ್ಳದ್ದಾಗಿರಬೇಕೆಂದರೆ, ಅವರು ಸಂತೋಷದಿಂದ ಎಲ್ಲವನ್ನು, ಸ್ವತಃ ತಮ್ಮ ಸ್ವಂತ ಜೀವವನ್ನೂ ಸಹ ಒಪ್ಪಿಸಿಬಿಡುವಂತವರಾಗಿರಬೇಕು. ಇದನ್ನು ಬಿಟ್ಟು ಯಾವುದೇ ರೀತಿಯಲ್ಲಿ ಅದರ ಬೆಳವಣಿಗೆಗೆ ತಡೆಯಾಗಿಯೂ, ಅದಕ್ಕೆ ಅಗೌರವವನ್ನು ತರುವವರಾಗಿಯೂ ಇರಬಾರದು. ಅದಕ್ಕೆ ತದ್ವಿರುದ್ಧವಾಗಿ, ಯಾರೆಲ್ಲಾ ಕರ್ತನು ಮತ್ತು ಆತನ ವಾಕ್ಯವನ್ನು ಕುರಿತು ನಾಚಿಕೊಳ್ಳುವುದಿಲ್ಲವೋ ಅದರಲ್ಲಿ ನಾಚಿಕೊಳ್ಳುವುದಕ್ಕೆ ಯಾವುದೇ ವಿಷಯವಿಲ್ಲವೆಂದು ಅರಿತಿದ್ದಾರೋ ಅಂಥವರು ಅದಕ್ಕೆ ತದ್ವಿರುದ್ಧವಾಗಿ ಎಲ್ಲಾ ವಿಷಯದಲ್ಲಿ ಸಂತೋಷವುಳ್ಳವರಾಗಿಯೂ, ರಾಜವಂಶದ ಧ್ವಜವನ್ನು ಮೇಲಕ್ಕೆ ಎತ್ತಲು ಹುಡುಕುತ್ತಾರೆ, ಅವರ ಸಾಮರ್ಥ್ಯಕ್ಕೆ ತಕ್ಕಹಾಗೆ ಅತ್ಯಂತ ಸಂತೋಷವನ್ನು ಉಂಟುಮಾಡುವ ಶುಭ ಸಮಾಚಾರವನ್ನು ತಿಳಿಸುತ್ತಾರೆ. ಇದಲ್ಲದೆ ಬೇರೆ ಯಾರೆಲ್ಲಾ ಅಂಧಕಾರದ ಕತ್ತಲೆಯಿಂದ ಆಶ್ಚರ್ಯಕರವಾದ ಬೆಳಕಿಗೆ ಸೇರಿಸಿದಾತನ ಸ್ತುತಿಗಳನ್ನು ಪ್ರಕಟಿಸುವವರಾಗಿದ್ದಾರೋ ಅವರೊಂದಿಗೆ ಸಹಕರಿಸುವವರಾಗಿದ್ದಾರೆ. **R 3777 : 4**

## 21 ಫೆಬ್ರವರಿ

**"ಕೇಡಿನಿಂದ ನಿನ್ನ ನಾಲಗೆಯನ್ನೂ [ಮತ್ತು] ಮೋಸವನ್ನು ನುಡಿಯದ ಹಾಗೆ ನಿನ್ನ ತುಟಿಗಳನ್ನೂ ಕಾಯಿ." (ಕೀರ್ತನೆಗಳು 34 : 13)**

ಕರ್ತನ ಜನರು ನಾಲಿಗೆಯನ್ನು ಹತೋಟಿಯಲ್ಲಿ ಇಡುವದು ಬಹಳ ಕಷ್ಟಕರವಾದ ಅಂಗ ಎಂದು ಅರಿತಿದ್ದಾರೆ ಮತ್ತು "ನನ್ನ ತುಟಿಗಳ ಬಾಗಿಲನ್ನು ಕಾಯಿ" ಎಂದು ಪ್ರಾರ್ಥಿಸುವದು ಸೂಕ್ತವಾಗಿದೆ. ಮತ್ತು ಈ ಪ್ರಾರ್ಥನೆಯು ಯಥಾರ್ಥವುಳ್ಳದ್ದಾಗಿದ್ದರೆ, ಹೃದಯದಿಂದ ಬರುವಂಥದಾಗಿದ್ದರೆ, ವಿಜ್ಞಾಪನೆ ಮಾಡುವಾತನು ದೇವರ ಸಹಾಯದೊಂದಿಗೆ ತನ್ನ ಎಲ್ಲಾ ಶಕ್ತಿಯಿಂದಲೂ, ತನ್ನ ನಾಲಿಗೆಯನ್ನು ಕಾಯುವುದರಲ್ಲಿ ಹೋರಾಡುವವನಾಗಿದ್ದಾನೆ ಮತ್ತು ಈ ಪಾಠದ ಮೂಲಕ ದೈವಿಕ ಸಹಾಯವು ಒದಗಿ ಬರುತ್ತದೆ ಮತ್ತು ತುಟಿಗಳಲ್ಲಿ ದೋಷವಿಲ್ಲ ಎಂದು ನಮಗೆ ಭರವಸೆ ಕೊಡುತ್ತದೆ. ಹೃದಯವು ಪವಿತ್ರಾತ್ಮದ ಪುನರುಜ್ಜೀವನ ಕೆಲಸದ ಪೂರ್ಣತೆಯನ್ನು ಹೊಂದಬೇಕಾಗಿದೆ. ಏಕೆಂದರೆ "ಹೃದಯದಲ್ಲಿ ಸಮೃದ್ಧಿಯಾಗಿರುವದನ್ನೇ ಬಾಯಿ ಮಾತನಾಡುತ್ತದೆ." ಇಲ್ಲಿ ನಾವು

ಕಲಿತುಕೊಳ್ಳಬೇಕಾದ ಪಾಠ ಏನೆಂದರೆ ನಮ್ಮ ತುಟಿಗಳಿಂದ ಯಾವುದೇ ರೀತಿಯಾದ ಕೆಟ್ಟ ಮಾತುಗಳು ಹೊರಟು ಬಂದರೂ, ಮೊದಲು ನಮ್ಮ ಹೃದಯವನ್ನು ಸರಿಪಡಿಸಿಕೊಳ್ಳಬೇಕು. ನಮ್ಮ ಹೃದಯಗಳನ್ನು ಅತ್ಯಧಿಕವಾಗಿ ದೇವರ ಹೃದಯಕ್ಕೆ ತಕ್ಕಂತೆ ಕಾದುಕೊಳ್ಳಬೇಕು–ಅಧಿಕವಾಗಿ ದೈವಿಕ ಸ್ವಭಾವದ ಕೃಪೆಯ ಅಂಶಗಳಿಗೆ ತಕ್ಕಂತೆ ಕಾದುಕೊಳ್ಳಬೇಕು, ಮತ್ತೊಬ್ಬರೊಂದಿಗೆ ನೀತಿಯಿಂದ ನಡೆದುಕೊಳ್ಳುವದು ಮಾತ್ರವಲ್ಲದೆ, ಇದರೊಂದಿಗೆ ದಯೆ, ಪ್ರೀತಿ, ಕರುಣೆ ಮತ್ತು ಪರೋಪಕಾರವನ್ನು ಎಲ್ಲರಿಗೂ ತೋರಿಸಬೇಕಾಗಿದೆ. **R 3739 : 6**

## 22 ಫೆಬ್ರವರಿ

**"ಯಾರು ಒಳ್ಳೆಯದನ್ನು ಮಾಡುವದರಲ್ಲಿ ತಾಳ್ಮೆಯಿಂದಿದ್ದು ಮಹಿಮೆ ಮಾನ ಮತ್ತು ನಿರ್ಲಯತ್ವವನ್ನು ಹುಡುಕುತ್ತಾರೋ ಅವರಿಗೆ ನಿತ್ಯಜೀವವನ್ನೂ ಕೊಡುತ್ತಾನೆ." (ರೋಮಾಪುರದವರಿಗೆ 2 : 7)**

ನಾವು ಏನನ್ನು ಹುಡುಕುತ್ತಾ ಇದ್ದೇವೆ? ಇದು ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಒಂದು ಒಳ್ಳೆಯ ಪ್ರಶ್ನೆಯಾಗಿದೆ ಮತ್ತು ಯಾರೆಲ್ಲಾ ಈಗಿನ [ಪ್ರಸ್ತುತ] ಸತ್ಯದ ಮೇಲೆ ಆಸಕ್ತಿಯನ್ನು ವ್ಯಕ್ತಪಡಿಸುತ್ತಾರೋ ಅವರೆಲ್ಲರಿಗೂ ಸಲಹೆ ನೀಡುವುದಕ್ಕೆ ಇದು ಸೂಕ್ತ ಸಮಯವಾಗಿದೆ. ಲೋಕದವರು ಐಶ್ವರ್ಯ, ಗೌರವ, ಖ್ಯಾತಿ, ಆರಾಮವನ್ನು ಹುಡುಕುತ್ತಿದ್ದಾರೆ ಎಂದು ನಮಗೆ ಗೊತ್ತಿದೆ. ಮತ್ತು ಕರ್ತನ ಕಡೆ ತಿರುಗಿರುವವರಲ್ಲಿ ಅನೇಕರಿಗೆ ಇನ್ನೂ ಲೋಕದ ಆತ್ಮವಿದೆ ಎಂದು ನಮಗೆ ಗೊತ್ತಿದೆ. ಅವರು ಕರ್ತನ ಶಿಷ್ಯರಾಗುವುದಕ್ಕೆ ಇಷ್ಟ ಪಡುತ್ತಾರೆ, ಆದರೂ ಹೆಚ್ಚು ಕಡಿಮೆ ಈ ಲೋಕದ ನಿರೀಕ್ಷೆಗಳು ಮತ್ತು ಮಹತ್ವಕಾಂಕ್ಷೆಗಳನ್ನು ಇನ್ನೂ ಹೊಂದಿಕೊಂಡು, ಅದನ್ನು ಬೆಳೆಸಿಕೊಂಡು ಅದರಲ್ಲಿ ಸಂತೋಷಪಡುತ್ತಾರೆ. ಕರ್ತನ ವಾಕ್ಯಗಳು ನಮ್ಮಲ್ಲಿ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಹೇಳಿದಂತೆ ನಾವು ಗಮನ ಕೊಡುವದು ಸೂಕ್ತವಾಗಿದೆ, ನೀವು ಏನನ್ನು ಹುಡುಕುತ್ತಿದ್ದೀರಾ? ನಮ್ಮ ಬೋಧಕನಿಗೆ ನಮ್ಮ ಸ್ವಂತ ಹೃದಯಗಳಲ್ಲಿ ಮತ್ತು ಪ್ರಾರ್ಥನೆಯಲ್ಲಿ ನಾವು ಉತ್ತರಿಸೋಣ; ಮತ್ತು ನಾವು ಉತ್ತರ ಕೊಡುವುದಕ್ಕೆ ಮೊದಲು ಸತ್ಯವುಳ್ಳವರಾಗಿದ್ದು ಉತ್ತರಿಸುವದನ್ನು ಕುರಿತು ಪರಿಗಣಿಸೋಣ, ಏಕೆಂದರೆ ನಮ್ಮನ್ನು ನಾವೇ ನಿಜವಾಗಿಯೂ ವಂಚಿಸಿಕೊಳ್ಳಬಹುದು, ಆದರೆ ಕರ್ತನನ್ನು ನಾವು ವಂಚಿಸಲು ಸಾಧ್ಯವಿಲ್ಲ. ನಾವು ರಾಜ್ಯವನ್ನು ಹುಡುಕುವದು ಸರಿಯಾದ ವಿಷಯವಾಗಿದೆ ಮತ್ತು ಅದರೊಂದಿಗೆ ದೈವಿಕ ಏರ್ಪಾಡಿನ ಪ್ರಕಾರ ಮಹತ್ತರವಾದ ಘನತೆ, ಮಹಿಮೆ ಮತ್ತು ಗೌರವವು ಕಾದಿದೆ ಎಂದು ನಮಗೆ ಗೊತ್ತಿರಬೇಕು. ಆದ್ದರಿಂದ ನಾವು

"ಮಹಿಮೆ, ಘನ ಮತ್ತು ನಿರ್ಲಯತ್ವವನ್ನು" ಹುಡುಕಬೇಕು. ಆದರೆ ಈ ರಾಜ್ಯವನ್ನು ಹುಡುಕುವುದರ ಜೊತೆಗೆ, ನಮ್ಮ ಬೋಧಕನು ಇನ್ನೊಂದು ಸಂದರ್ಭದಲ್ಲಿ ಹೇಳಿರುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಪ್ರಧಾನವಾಗಿ ನಾವು ದೇವರ ರಾಜ್ಯವನ್ನು ಮತ್ತು ಅದರ ನೀತಿಯನ್ನು ಹುಡುಕುವವರಾಗಿರಬೇಕು. **R 4116 : 2**

## 23 ಫೆಬ್ರವರಿ

**"ಆದದರಿಂದ ನೀವು ದೇವರಿಂದ ಆರಿಸಿಕೊಂಡವರೂ ಪರಿಶುದ್ಧರೂ ಪ್ರಿಯರೂ ಆಗಿರುವವರಿಗೆ ತಕ್ಕಂತೆ..... ದೀನ ಮನಸ್ಸನ್ನು ಧರಿಸಿಕೊಳ್ಳಿರಿ." (ಕೊಲೊಸ್ಸೆಯವರಿಗೆ 3 : 12)**

ಸತ್ಯವೇದದಲ್ಲಿನ ಎಲ್ಲಾ ವಿಷಯಗಳು ನಮಗೆ ಸೂಚಿಸುವುದೇನೆಂದರೆ, ಕರ್ತನ ಜನರೆಲ್ಲರೂ ಕರ್ತನಿಗಾಗಿ ಯಾವುದೇ ಮುಖ್ಯವಾದ ಅಥವಾ ವಿಶೇಷವಾದ ಸೇವೆಗೆ ಉಪಯೋಗಿಸಬೇಕಿದ್ದರೆ, ಈ ದೀನತೆ ಎಂಬ ಸ್ವಭಾವವನ್ನು ಹೊಂದಿಕೊಳ್ಳುವದು ಅತಿ ಮುಖ್ಯವಾಗಿದೆ. ಒಂದು ವೇಳೆ ಕರ್ತನ ಹಿಂಬಾಲಕರು ಈ ವಿಷಯವನ್ನು ನೆನಪಿನಲ್ಲಿ ಇಟ್ಟುಕೊಂಡರೆ ಮತ್ತು ನಿರಂತರವಾಗಿ ತಮ್ಮ ಜೀವಿತದ ನಡವಳಿಕೆಯನ್ನು ಅದರಂತೆ ರೂಪಿಸಿಕೊಂಡರೆ, ಅವರು ಬಹಳವಾಗಿ ಉಪಯೋಗಿಸಲ್ಪಡುವರು ಎಂದು ನಾವು ನಿಶ್ಚಯವಾಗಿ ಹೇಳಬಹುದು; ಕರ್ತನಿಗಾಗಿ ಯಾವುದೇ ಸೇವೆ ಮಾಡಿದರೂ ಅದು ಘನತೆಯುಳ್ಳದ್ದಾಗಿದೆ; ಆದರೆ ಎಷ್ಟರ ಮಟ್ಟಿಗೆ ನಾವು ಸೇವೆ ಮಾಡುವುದಕ್ಕೆ ಅನುಮತಿಸಲ್ಪಡುತ್ತೇವೋ ಅಷ್ಟರ ಮಟ್ಟಿಗೆ ಈ ಪ್ರಸ್ತುತ[ಈಗಿನ] ಜೀವಿತದಲ್ಲಿ ನಾವು ಆಶೀರ್ವದಿಸಲ್ಪಡುವೆವು ಮತ್ತು ಭವಿಷ್ಯದ ಜೀವಿತದಲ್ಲಿಯೂ ಸಹ ನಮಗೆ ಅಧಿಕವಾದ ಬಹುಮಾನಗಳು ಇರುತ್ತದೆ. ಆದದರಿಂದ ನಾವು ಅಪೋಸ್ತಲನು ಹೇಳುವ ಹಾಗೆ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಮ್ಮನ್ನು ತಗ್ಗಿಸಿಕೊಳ್ಳೋಣ; ಆಗ ಆತನು ತಕ್ಕ ಕಾಲದಲ್ಲಿ ನಮ್ಮನ್ನು ಮೇಲಕ್ಕೆ ತರುವನು. **R 5262 : 5**

## 24 ಫೆಬ್ರವರಿ

**"ನಮ್ಮ ಅನುದಿನದ ರೊಟ್ಟಿಯನ್ನು [ಆಹಾರವನ್ನು] ಈ ದಿನವು ನಮಗೆ ದಯಪಾಲಿಸು." (ಮತ್ತಾಯನು 6 : 11)**

ಒಂದು ವೇಳೆ ಇಲ್ಲಿ ಕರ್ತನು ಸ್ವಾಭಾವಿಕವಾದ ಆಹಾರವನ್ನು ಕುರಿತು

ಸೂಚಿಸುತ್ತಿದ್ದಾನೆಂದು ಯಾರಾದರು ಅಂದುಕೊಂಡರೆ, ಹಾಗೆ ವಿಜ್ಞಾಪನೆ ಮಾಡುವವರು ಕೇವಲ ಸ್ವಾಭಾವಿಕ ಮನುಷ್ಯರಾಗಿದ್ದಾರೆ. ಆದರೆ ಇಲ್ಲಿ ಕಲಿಸಿಕೊಟ್ಟಂತಹ ಪ್ರಾರ್ಥನೆಯು ಹೊಸ ಸೃಷ್ಟಿ ಎಂದು ಎಣಿಸಲ್ಪಟ್ಟಂತವರಿಗೆ ಮಾತ್ರ ಅನ್ವಯಿಸುತ್ತದೆ ಎಂದು ನಮಗೆ ಗೊತ್ತಿದೆ. ಇಂತವರು ಇಕ್ಕಟ್ಟಾದ ಮಾರ್ಗದಲ್ಲಿ ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಒಡಂಬಡಿಕೆಯನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ನಾವು ಅರ್ಥಮಾಡಿಕೊಳ್ಳಬೇಕಾದದ್ದು ಏನೆಂದರೆ ಈ ಸ್ಥಿತಿಯಲ್ಲಿ ಹೊಸ ಸೃಷ್ಟಿಯು ವಿಜ್ಞಾಪನೆಯನ್ನು ಸಲ್ಲಿಸುತ್ತಿರಲಾಗಿ, ನಾವು ಮುಖ್ಯವಾಗಿ ಹೊಸ ಸೃಷ್ಟಿಯ ಪೋಷಣೆಯನ್ನು ಕುರಿತು ಪರಿಗಣಿಸಬೇಕು—ಪರಲೋಕದ ತಂದೆಯು ನಮ್ಮ ಲೋಕದ ತಾತ್ಕಾಲಿಕ ಅವಶ್ಯಕತೆಗಳನ್ನು ಏರ್ಪಾಡು ಮಾಡುವಾಗ ಯಾವುದು ಅತ್ಯುತ್ತಮವೆಂದು ಎಣಿಸುತ್ತಾರೋ, ಅವುಗಳನ್ನು ನಾವು ಸಂತೋಷದಿಂದ ಸ್ವೀಕರಿಸಬೇಕು. **R 3806 : 5**

## 25 ಫೆಬ್ರವರಿ

**"ಬಲದಿಂದಲ್ಲ, ಶಕ್ತಿಯಿಂದಲ್ಲ, ನನ್ನ ಆತ್ಮದಿಂದಲೇ ಎಂದು ಸೈನ್ಯಗಳ ಕರ್ತನು ಹೇಳುತ್ತಾನೆ." (ಜೆಕರ್ಯ 4 : 6)**

ಸ್ವತಃ ನಮ್ಮ ಕರ್ತನಾದ ಯೇಸು ಆತ್ಮೀಕ ಆಲಯದ ಅಸ್ತಿವಾರವನ್ನು ಹಾಕಿದ್ದಾನೆ ಮತ್ತು ಸ್ವತಃ ತಾನೇ ಅದರ ಮೂಲೆ ಕಲ್ಲಾಗಿ ಇದ್ದು ಅದನ್ನು ಪೂರ್ಣಗೊಳಿಸುತ್ತಾನೆ ಮತ್ತು ದೇವರ ತಕ್ಕ ಕಾಲದಲ್ಲಿ ಮನುಷ್ಯರಿಂದ ಮಾತ್ರವಲ್ಲ ದೂತರುಗಳಿಂದಲೂ ಅದು ಮಹಿಮೆಯುಳ್ಳದ್ದಾಗಿ ಕಂಡುಬರುವದು. ಆ ಕ್ರಿಯೆಗಳೆಲ್ಲವು ಆತನ ಕೈಗಳಲ್ಲಿವೆ ಮತ್ತು ಈ ಸಮಯದಲ್ಲಿ ಹೊರನೋಟಕ್ಕೆ ನಿರುತ್ಸಾಹವುಳ್ಳದ್ದಾಗಿ ಕಂಡುಬರುತ್ತದೆ ಹಾಗು ಸ್ವಲ್ಪ ಮಾತ್ರ ಪ್ರಗತಿ ಹೊಂದಿರುವಂತೆ ಕಾಣುತ್ತದೆ. ಆದರೂ ಆತನ ಸೇವಕರು ಅಧಿಕ ಧೈರ್ಯವುಳ್ಳವರಾಗಿರಬೇಕು ಮತ್ತು ಅವರ ಜಯವು ಇನ್ನೂ ಮುಂದೆ ಬರಬೇಕಾಗಿದೆ. ಅದು ಮನುಷ್ಯರ ಬಲದಿಂದಲ್ಲ, ಪ್ರಭಾವದಿಂದಲ್ಲ, ಅಥವಾ ಅವರ ಸ್ವಂತ ಶಕ್ತಿಯಿಂದಲ್ಲ, ಆದರೆ ಕರ್ತನ ಆತ್ಮದಿಂದ ಆಗಿದೆ. ಆತನಲ್ಲಿರುವ ನಂಬಿಕೆ ಮತ್ತು ಆತನ ಆತ್ಮದಿಂದ ಈ ಲೋಕ, ಶರೀರ ಮತ್ತು ಎದುರಾಳಿಯಿಂದ ನಮಗೆ ಜಯವು ಉಂಟಾಗುತ್ತದೆ ಮತ್ತು ಆತನು ನಮ್ಮನ್ನು ಪ್ರೀತಿಸಿದ್ದರಿಂದ ಮತ್ತು ತನ್ನ ಸ್ವಂತ ಅಮೂಲ್ಯವಾದ ರಕ್ತದಿಂದ ನಮ್ಮನ್ನು ಕೊಂಡುಕೊಂಡಿರುವುದರಿಂದ ನಮ್ಮನ್ನು ಅತ್ಯಧಿಕ ಜಯಶಾಲಿಗಳನ್ನಾಗಿ ಮಾಡುತ್ತಾನೆ. **R 2522 : 2**

## 26 ಫೆಬ್ರವರಿ

**"ಬೇಡಿಕೊಳ್ಳಿರಿ, ಅದು ನಿಮಗೆ ಕೊಡಲ್ಪಡುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ಅದು ನಿಮಗೆ ತೆರೆಯಲ್ಪಡುವದು." (ಮತ್ತಾಯನು 7 : 7)**

ಕರ್ತನು ತನ್ನ ಆಶೀರ್ವಾದವನ್ನು ನಮಗೆ ಕೊಡುವುದಕ್ಕೆ ಮುಂಚೆ ಏಕೆ ನಾವು ಅದನ್ನು ಕೇಳಬೇಕೆಂದು ಇಷ್ಟಪಡುತ್ತಾನೆ? ಅದು ಬುದ್ಧಿವಂತ ಉದ್ದೇಶಕ್ಕಾಗಿ ಎಂದು ನಮಗೆ ನಿಶ್ಚಯವಾಗಿ ಗೊತ್ತಿದೆ! ನಮ್ಮ ಅವಶ್ಯಕತೆಯನ್ನು ಕುರಿತು ನಾವು ಭಾವನೆಯುಳ್ಳವರಾಗಿರಬೇಕೆಂದು ಆತನು ಇಷ್ಟಪಡುತ್ತಾನೆ. ಆತನು ನಮಗೆ ಕೊಟ್ಟಿರುವ ಸವಲತ್ತುಗಳನ್ನು ನಾವು ಮೆಚ್ಚಬೇಕೆಂದು ಇಷ್ಟಪಡುತ್ತಾನೆ, ನಮಗೆ ಆತನು ಪ್ರತಿಕ್ರಿಯೆ ಮಾಡುವುದನ್ನು ನಾವು ನಿರೀಕ್ಷಿಸುವವರಾಗಬೇಕೆಂದು ಆತನು ಎದುರುನೋಡುತ್ತಾನೆ. ಇವೆಲ್ಲಾ ಅನುಭವಗಳಲ್ಲಿ ನಾವು ಹೊಸ ಸೃಷ್ಟಿಯಾಗಿ, ಆತನ ಮಕ್ಕಳಾಗಿ ಬೆಳೆಯಬೇಕೆಂದು ಅಪೇಕ್ಷಿಸುತ್ತಾನೆ. ಆದದರಿಂದ ನಾವು ದೇವರ ಕೃಪೆಯ ಐಶ್ವರ್ಯವನ್ನು ನೋಡಬೇಕಾದರೆ ನಾವು ಕೇಳಬೇಕು, ಹುಡುಕಬೇಕು ಹಾಗೂ ತಟ್ಟಬೇಕು ಮತ್ತು ನಮಗೆ ಅತ್ಯಧಿಕವಾದ, ಅದ್ಭುತವಾದ ಸವಲತ್ತುಗಳು, ದಯೆಗಳು ಮತ್ತು ಆಶೀರ್ವಾದಗಳು ತೆರೆದಿರಲಾಗಿ ಅವುಗಳನ್ನು ಆತನು ನಮಗೆ ನೀಡಲು ಸಿದ್ಧನಾಗಿರುವುದರಿಂದ ನಾವು ನಮ್ಮ ಗುಣಲಕ್ಷಣವನ್ನು ಬೆಳೆಸಿಕೊಂಡು ಆತನ ದಯೆಗಳಿಗಾಗಿ ಸಿದ್ಧರಾಗಬೇಕಾಗಿದೆ. **R 3807 : 4**

## 27 ಫೆಬ್ರವರಿ

**"ನಂಬಿಕೆಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ. ಅದರಿಂದ ನೀವು ಕೆಡುಕನ ಅಗ್ನಿ ಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ." (ಎಫೆಸದವರಿಗೆ 6 : 16)**

ಹೊರಮನುಷ್ಯನು ಅಳಿದು ಹೋಗುತ್ತಾ ಇದ್ದರೂ ನೂತನ ಸೃಷ್ಟಿಯು ಅಭಿವೃದ್ಧಿ ಹೊಂದಬಹುದು. ಪ್ರಧಾನ ಯಾಜಕರು ಮತ್ತು ಪರಿಸಾಯರು ನಮ್ಮ ಕರ್ತನ ಮರಣಕ್ಕೆ ಕಾರಣವಾಗಿದ್ದು, ಸೈತಾನನು ಜಯ ಹೊಂದಿದವನಾಗಿರಬಹುದು; ಆದರೆ ಈ ಮೂಲಕವೇ ಯೇಸು ಕ್ರಿಸ್ತನು ಮಹಿಮೆಯಲ್ಲಿ ಪ್ರವೇಶಿಸಿದನು. ತಂದೆಯು ನಮ್ಮ ಕರ್ತನೊಂದಿಗೆ ನಡೆದುಕೊಂಡ ರೀತಿಯನ್ನು ನೋಡುವಾಗ, ಆತನು ನಮ್ಮೊಂದಿಗೂ ಹಾಗೆಯೇ ನಡೆದುಕೊಳ್ಳುತ್ತಾನೆಂಬ ನಿದರ್ಶನವನ್ನು ನೀಡಿದ್ದಾನೆ. ಒಂದು ವೇಳೆ ಸೈತಾನನು ನಮ್ಮ ಮೇಲೆ ಜಯ ಹೊಂದಿದವನಂತೆ ತೋರಿದರೂ, ನಮಗೆ ಮೊದಲೇ ಹೇಳಿದಂತೆ ಈ

“ಹಗುರವಾದ ಸಂಕಟವು” ನಮಗೆ “ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ.” ನಮ್ಮ ಶಕ್ತಿಯಿಂದ ಸೈತಾನನನ್ನು ನಾವು ಎದುರಿಸಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತಿದೆ. ಕರ್ತನನ್ನು ಹೊರತುಪಡಿಸಿ ಬೇರೆ ಯಾರಿಂದಲೂ ಇದು ಸಾಧ್ಯವಿಲ್ಲ. ಆದರೆ ನಮ್ಮ ಯೇಸು ಕ್ರಿಸ್ತನು ಆ ಸೈತಾನ ಮತ್ತು ಆತನ ಎಲ್ಲಾ ದೂತರುಗಳಿಗಿಂತಲೂ ದೊಡ್ಡವನಾಗಿದ್ದಾನೆ. ನಾವು ನಮ್ಮ ವಿಶ್ವಾಸದ ಕಣ್ಣಿನಿಂದ ನಮಗೆ ಕಾಣದೆ ಇರುವಂತವುಗಳನ್ನು ನಾವು ಎದುರು ನೋಡುತ್ತಾ ಇದ್ದೇವೆ. ಆದ್ದರಿಂದ ತಂದೆ ನಮಗೆ ಏನೇ ಅನುಮತಿಸಿದರೂ ನಾವು ಸ್ಥಿರಚಿತ್ತರಾಗಿದ್ದು, ಅಲುಗಾಡದೆ, ಪೂರ್ಣ ವಿಶ್ವಾಸದಿಂದ ಅದನ್ನು ಎದುರಿಸುವುದು ನಮ್ಮ ಕರ್ತವ್ಯವಾಗಿದೆ. **R 5184 : 6**

## 28 ಫೆಬ್ರವರಿ

**“ನೀವು ಭೂಮಿಗೆ ಉಪ್ಪಾಗಿದ್ದೀರಿ... ನೀವು ಲೋಕಕ್ಕೆ ಬೆಳಕಾಗಿದ್ದೀರಿ.” (ಮತ್ತಾಯನು 5 : 13 ,14)**

ಕ್ರಿಸ್ತನ ಶರೀರದ ಅಂಗದವರು ಬಹುಬೇಗನೆ ಜಯಹೊಂದಿ ಮಾರ್ಪಾಡು ಹೊಂದುವರು, ಮಹಿಮೆ ಹೊಂದುವರು ಮತ್ತು ತೆರೆಯ ಈ ಕಡೆಯಲ್ಲಿ ಈ ಶರೀರದ ಅಂಗದವರು ಒಬ್ಬರೂ ಇರುವುದಿಲ್ಲ ಮತ್ತು ತೆರೆಯ ಆ ಕಡೆಯಲ್ಲಿ ಶರೀರದ ಅಂಗದವರು ಮುಗಿದು ನೆರೆವೇರಿರುವರು ಎಂದು ನಾವು ನಿರೀಕ್ಷಿಸುತ್ತೇವೆ. ಬೆಳಕು ಹೊರಟು ಹೋಗುವವು ಮತ್ತು ಹಿಂದೆಂದಿಗಿಂತಲೂ ಕತ್ತಲೆಯು (ಈ ಭೂಮಿಯಲ್ಲಿ) ಪೂರ್ತಿಯಾಗಿ ತುಂಬಿಕೊಂಡಿರುವವು; ಉಪ್ಪು ಹೊರಟು ಹೋಗಿರುತ್ತದೆ ಮತ್ತು ಭೂಮಿಯು ಬೇಗನೆ ಭ್ರಷ್ಟಾಚಾರದ ಹಿಡಿತದಲ್ಲಿರುವವು ಮತ್ತು ಇದರ ಪರಿಣಾಮವಾಗಿ ಮಹಾ ಸಂಕಟದ ಕಾಲ ಬರುವದು. ಇಂತಹ ಸಂಕಟವು ಲೋಕ ಉಂಟಾಗಿದಂದಿನಿಂದ ಹಿಂದೆಂದೂ ಉಂಟಾಗಲಿಲ್ಲ. ಅದೇ ಸಮಯದಲ್ಲಿ ಮನುಷ್ಯರು ಲಕ್ಷ್ಯಕೊಟ್ಟರು, ಲಕ್ಷ್ಯಕೊಡದಿದ್ದರೂ ನಾವು ನಮ್ಮ ಬೆಳಕನ್ನು ಕೊಡಬೇಕು ಮತ್ತು ತಂದೆಯನ್ನು ಮಹಿಮೆ ಪಡಿಸಬೇಕು; ಮನುಷ್ಯರು ಕೇಳಿಸಿಕೊಂಡರೂ, ಕೇಳಿಸಿಕೊಳ್ಳದಿದ್ದರೂ, ನಾವು ನಮ್ಮ ಉಪ್ಪು ಅಥವಾ ಸಂರಕ್ಷಕ ಪ್ರಭಾವವನ್ನು ನೀತಿ ಮತ್ತು ಸತ್ಯದ ಪ್ರಭಾವವನ್ನು ಕಾದುಕೊಳ್ಳಲು ಪ್ರಯಾಸ ಪಡುವವರೂ ಆಗಿರಬೇಕು. ಸಭೆಯು ಈಗಿನ ತಗ್ಗಿದ ಸ್ಥಾನದಲ್ಲಿದ್ದುಕೊಂಡು ಲೋಕವನ್ನು ಜ್ಞಾನೋದಯದ ಕಡೆಗೆ ತರುವದು ದೇವರ ಉದ್ದೇಶವಲ್ಲ ಎಂದು ನಾವು ಸ್ಪಷ್ಟವಾಗಿ ನೋಡುತ್ತೇವೆ. (ಈಗಿನ) ಈ ವಿಷಯವು ನಾವು ಕ್ರಿಸ್ತನ

ಮಹಿಮೆಯ ಶರೀರದಲ್ಲಿ ಅಂಗಗಳಾಗುವುದಕ್ಕೆ ಯೋಗ್ಯರಾಗುತ್ತೇವೋ ಇಲ್ಲವೋ ಎಂದು ನಮ್ಮನ್ನು ಪರೀಕ್ಷಿಸಿ ಶೋಧಿಸುತ್ತದೆ. ನಂತರ ಬಹುಬೇಗನೆ ತಂದೆಯ ಮಹಿಮೆಯಲ್ಲಿ ಸೂರ್ಯನ ಹಾಗೆ ಪ್ರಕಾಶಿಸಿ, ಇಡೀ ಲೋಕಕ್ಕೆ ಜ್ಞಾನವನ್ನು ಕೊಡುತ್ತೇವೆ. ಆದರೆ ಈಗಿನ ನಮ್ಮ ಚಿಕ್ಕದಾದ ಬೆಳಕು ಆ ಮುಂದಿನ ಪ್ರಕಾಶಮಾನವಾದ ಬೆಳಕಿಗೆ ಯಾವ ರೀತಿಯಲ್ಲೂ ಹೋಲಿಸಲು ಸಾಧ್ಯವಿಲ್ಲ. **R 3737 : 1**

## 1 ಮಾರ್ಚ್

**"ನೀತಿವಂತನು ಸಾಯುವಂತೆ ನಾನು ಸಾಯಬೇಕು, ನನ್ನ ಕಡೇ ಅಂತ್ಯವು ಅವನಂತೆಯೇ ಆಗಲಿ!" (ಅರಣ್ಯಕಾಂಡ 23:10)**

ನಮ್ಮ ಕರ್ತನಾದ ಯೇಸು ನೀತಿವಂತನಾಗಿದ್ದನು ಮತ್ತು ನಾವು [ನಮ್ಮ] ಮರಣವನ್ನು ಕುರಿತು ಯೋಚಿಸುವಾಗ ಆತನನ್ನೂ ಆತನ ಮರಣವನ್ನು ಕುರಿತು ನಾವು ಯೋಚಿಸಬೇಕು ಮತ್ತು ಆತನು ತನ್ನ ಜೀವವನ್ನು ಸಮರ್ಪಿಸಿದಂತೆ ನಾವೂ ಸಹ ನಮ್ಮ ಸಹೋದರ, ಸಹೋದರಿಯರಿಗಾಗಿ ನಮ್ಮ ಜೀವವನ್ನು ಸಮರ್ಪಿಸಬೇಕು ಎಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಆತನು ದೈವಿಕ ಯೋಜನೆಯಂತೆ ಈ ಭೂಮಿಯ ಆಸಕ್ತಿಗಳು, ಅನುಕೂಲತೆಗಳು, ಹಕ್ಕುಗಳು ಮತ್ತು ಸಂತೋಷಗಳನ್ನು ಬಲಿಯಾಗಿ ಸಮರ್ಪಿಸಿ ಹೇಗೆ ಮರಣ ಹೊಂದಿದನೋ, ಹಾಗೆಯೇ ನಾವೂ ಸಹ "ಆತನೊಂದಿಗೆ ಸಾಯುತ್ತೇವೆ" ಎಂದು ಒಡಂಬಡಿಕೆಯನ್ನು ಮಾಡಿದ್ದೇವೆಂದು ನೆನಪಿಡೋಣ. ನಾವು ಆತನೊಂದಿಗೆ ಸತ್ತರೆ, ಆತನೊಂದಿಗೆ ಬದುಕುವೆವು; ಆತನೊಂದಿಗೆ ಬಾಧೆಯನ್ನು ಅನುಭವಿಸಿದರೆ ಆತನೊಂದಿಗೆ ನಾವೂ ಸಹ ಆಳ್ವಿಕೆಯನ್ನು ಮಾಡುವೆವು. ಆತನೊಂದಿಗೆ ಮಹಿಮೆ, ಮಾನ, ನಿರ್ಲಯತ್ವವನ್ನು ಪುನರುತ್ಥಾನದಲ್ಲಿ ಪಾಲುಹೊಂದುವ ನಿರೀಕ್ಷೆಯು, ನಂಬಿಗಸ್ತಿಕೆಯಿಂದ ಆತನೊಂದಿಗೆ ಆತನ ಮರಣದಲ್ಲಿ ಪಾಲುಹೊಂದುವದರಲ್ಲಿ ಆಧಾರಿತವಾಗಿದೆ, ಅಂದರೆ ಆತನೊಂದಿಗೆ ಈ ಪ್ರಸ್ತುತ(ಈಗಿನ)ಕಾಲದಲ್ಲಿ ಆತನ ಬಾಧೆಗಳಲ್ಲಿ ಪಾಲು ಹೊಂದುವದು ಅವಶ್ಯವಾಗಿದೆ. ಆದರೆ ನಾವು ಪಿಸ್ಗಾದ ತುದಿಯಲ್ಲಿ ನಿಂತಿರುವ ನಿರೀಕ್ಷೆಯಂತೆ [ಧರ್ಮೋಪದೇಶಕಾಂಡ 3 : 27], ನಮ್ಮ ಒಳಮನುಷ್ಯನು ಬಲ ಹೊಂದಿರುವಾಗ, ಮರಣ ಅಥವಾ ಅದರ ಪಾಡುಗಳು ಏಕೆ ನಮ್ಮನ್ನು ತಡೆಯಬೇಕು? ಇಲ್ಲ, ಈ ಎಲ್ಲಾ ವಿಷಯದಲ್ಲೂ ನಾವು ಸಂತೋಷ ಪಡುತ್ತೇವೆ ಮತ್ತು ನಮ್ಮ ಕರ್ತನು, ವಿಮೋಚಕನು ಮತ್ತು ನಮ್ಮ ತಲೆಯಾದ ಕ್ರಿಸ್ತನ ಮೂಲಕ ನಾವು ಜಯವನ್ನು ಸಾಧಿಸುತ್ತೇವೆ! **R 4055 : 5**

## 2 ಮಾರ್ಚ್

**"ಅದಕ್ಕೆ ಯೇಸು ಅವರಿಗೆ–ನಾನೇ ಆ ಜೀವದ ರೊಟ್ಟಿ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ." (ಯೋಹಾನನು 6 : 35)**

ನಮ್ಮ ಕರ್ತನ ಬಲಿಯ ಪುಣ್ಯದಲ್ಲಿ (ಅರ್ಹತೆಯಲ್ಲಿ)(merit) ಮತ್ತು ಆತನು ನಮಗಾಗಿ ಮಾಡಿರುವ ಕೃಪೆಯ ಏರ್ಪಾಡನ್ನು ಅಧಿಕವಾಗಿ, ನಿಯಮಿತವಾಗಿ, ಪ್ರತಿದಿನವೂ ನಾವು ಪಾಲುಹೊಂದಿದಾಗ ಮಾತ್ರ ಆತನಲ್ಲಿ ನಾವು ಬಲಹೊಂದಲು ಸಾಧ್ಯವಾಗುತ್ತದೆ ಮತ್ತು ನಮ್ಮ ಪ್ರಯಾಣವನ್ನು ನಂಬಿಗಸ್ತಿಕೆಯಿಂದ ಪರಿಶೋಧಿಸಿದಾಗ ನಮ್ಮ ಆತ್ಮೀಕ ಕಾನಾನಿನೊಳಗೆ ಪ್ರವೇಶಿಸಲು ಸಾಧ್ಯವಾಗುತ್ತದೆ. ಹೇಗೆ ಪ್ರತಿಯೊಬ್ಬ ಇಸ್ರಾಯೇಲ್ಯನು ತನಗಾಗಿ ಮನ್ನಾವನ್ನು ಕೂಡಿಸಿಟ್ಟುಕೊಳ್ಳಬೇಕಿತ್ತೋ ಹಾಗೆಯೇ ಪ್ರತಿಯೊಬ್ಬ ಕ್ರೈಸ್ತನು ಸತ್ಯವನ್ನು ಕೂಡಿಸಿ ಅದನ್ನು ತನ್ನದಾಗಿಸಿಕೊಳ್ಳಬೇಕು. ಆತ್ಮೀಕ ವಿಷಯದಲ್ಲಿ ಮತ್ತು ಭೂಸಂಬಂಧವಾದ ವಿಷಯಗಳಲ್ಲಿ ನಾವು ಮಾಡಬೇಕಾದ ಕಾರ್ಯಗಳನ್ನು ಮಾಡಲೇಬೇಕು. ಪವಿತ್ರಾತ್ಮದ ಕೃಪೆಗಳು ಪೂರ್ವಸಿದ್ಧತೆಯೊಂದಿಗೆ ನೆಡದೆ ಹೋದರೆ, ತರಿದುಹಾಕದೆ ಹೋದರೆ (trimming) ಮತ್ತು ಬೆಳಸದೆ ಹೋದರೆ ಪರಿಪೂರ್ಣತೆ ಉಂಟಾಗುತ್ತದೆ ಎಂದು ನಿರೀಕ್ಷಿಸಬಾರದು. ಯಾರೋ ಒಬ್ಬರು ಹೀಗೆ ಚೆನ್ನಾಗಿ ಹೇಳಿದ್ದಾರೆ, "ಕಾಲೇಜಿನ ಬಳಿ ಸುತ್ತಾಡಿದರೆ ಮಾತ್ರ ವಿದ್ವಾಂಸಕರಾಗುವದಿಲ್ಲ ಅಥವಾ ಸಭೆಯೊಳಗಿನ ಬೋಧನೆ ಸ್ಥಳದಲ್ಲಿ ಕುಳಿತ ಮಾತ್ರಕ್ಕೆ ಒಬ್ಬ ಕ್ರೈಸ್ತನಾಗಿ ಮಾರ್ಪಡುವುದಿಲ್ಲ." ಕರ್ತನಲ್ಲಿಯೂ ಆತನ ಅತ್ಯಧಿಕವಾದ ಶಕ್ತಿಯಲ್ಲಿಯೂ ಬಲಗೊಳ್ಳಬೇಕಾದರೆ ನಾವು ಪ್ರತಿದಿನವೂ ಆತನ ಬಲಿಯ ಪುಣ್ಯವನ್ನು (ಅರ್ಹತೆಯನ್ನು) ಪ್ರಶಂಸಿಸುತ್ತಾ ಅದನ್ನು ನಮ್ಮದಾಗಿಸಿಕೊಳ್ಳಬೇಕು. **R 5279 : 4**

## 3 ಮಾರ್ಚ್

**"ಚಿಕ್ಕ ಹಿಂಡೇ, ಭಯಪಡಬೇಡ; ಯಾಕಂದರೆ ನಿಮಗೆ ರಾಜ್ಯವನ್ನು ಕೊಡುವದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ." (ಲೂಕನು 12 : 32)**

ಕ್ರಿಸ್ತನ ಹಿಂಬಾಲಕರಾಗಿ ನಮ್ಮ ಪ್ರಿಯ ವಿಮೋಚಕನೊಂದಿಗೆ ದೇವರ ರಾಜ್ಯದಲ್ಲಿ ಪಾಲು ಹೊಂದುವದನ್ನು ಹುಡುಕುವದೇ ನಮ್ಮ ಮುಖ್ಯ ಕಾಳಜಿಯಾಗಿರಬೇಕು–ಕ್ರಿಸ್ತನ ವಧುವಾಗಿ ಸಾವಿರ ವರ್ಷದ ರಾಜ್ಯದಲ್ಲಿ ಪಾಲುಹೊಂದಿ, ಲೋಕದ ಮನುಷ್ಯ ಜಾತಿಯನ್ನು ಮೇಲಕ್ಕೆ ಎತ್ತಿ, ಆಶೀರ್ವದಿಸುವದಕ್ಕಾಗಿ ಆತನೊಂದಿಗೆ ಆತನ ಮಹಿಮೆಯುಳ್ಳ ಸಿಂಹಾಸನದಲ್ಲಿ

ಕುಳಿತುಕೊಳ್ಳುವದೇ ನಮ್ಮ ಮುಖ್ಯ ಕಾಳಜಿಯಾಗಿರಬೇಕು. ಯಾರೆಲ್ಲಾ ಈ ಪಯಣವನ್ನು ಹುಡುಕುತ್ತಾರೋ ಅವರೆಲ್ಲರೂ ಜ್ಞಾನದಿಂದ ನಡೆಯುತ್ತಾರೆ ಮತ್ತು ನಮ್ಮ ಬೋಧಕನು ನಮಗೆ ಭರವಸೆ ನೀಡುವುದೇನೆಂದರೆ ದೇವರು ಅಂಥವರ ಉನ್ನತ ಒಳಿತಿಗಾಗಿ ಭೂಮಿಯ ಎಲ್ಲಾ ವಿಷಯಗಳಲ್ಲಿ ಅವರನ್ನು ನಡೆಸುತ್ತಾನೆ. ಹಾಗೆ ಮಾಡುವದರಿಂದ ನಮ್ಮ ಜೀವಿತದಲ್ಲಿ ಸಮಾಧಾನ ಮತ್ತು ಸಂತೋಷವನ್ನು ನಮಗೆ ಕಿರೀಟಧಾರಣೆಯಾಗಿ ಕೊಡಲಾಗುತ್ತದೆ ಮತ್ತು ಕರ್ತನಲ್ಲಿ ವಿಶ್ರಾಂತಿಗೊಳ್ಳುತ್ತೇವೆ. ಇದನ್ನು ಕುರಿತು ಆತನನ್ನು ನಂಬಿದವರಿಗೆ ಆತನ ವಾಕ್ಯದಲ್ಲಿ ವಾಗ್ದಾನವಾಗಿ ಕೊಡಲಾಗಿದೆ. **R 4567 : 5**

## 4 ಮಾರ್ಚ್

**"ಇಗೋ, ಲೋಕಾಂತ್ಯದವರೆಗೂ ಯಾವಾಗಲೂ ನಾನು ನಿಮ್ಮ ಸಂಗಡ ಇರುತ್ತೇನೆ." (ಮತ್ತಾಯನು 28 : 20)**

ಈ ವಾಕ್ಯದಲ್ಲಿ ಒಂದು ಬೆಲೆಯುಳ್ಳ ಆಲೋಚನೆಯಿದೆ–ಅದೇನೆಂದರೆ ಕರ್ತನು ತನ್ನ ಪ್ರತಿನಿಧಿಗಳ ಎಲ್ಲಾ ಪ್ರೀತಿಯ ಪ್ರಯಾಸಗಳು ಮತ್ತು ಸ್ವಯಂ–ನಿರಾಕರಣೆಗಳಲ್ಲಿ ಇಡೀ ಸುವಾರ್ತೆ ಯುಗದಲ್ಲಿ ಜೊತೆಗಿದ್ದು, ಅವರ ಪ್ರಯಾಸಗಳನ್ನು ಗಮನಿಸುತ್ತಾ, ಸಹಾಯ ಮಾಡುತ್ತಾ, ಪ್ರೋತ್ಸಾಹಿಸುತ್ತಾ, ಅವರನ್ನು ಕಾಪಾಡುತ್ತಿದ್ದಾನೆ ಮತ್ತು ಯಾರೆಲ್ಲಾ ತಮ್ಮ ಜೀವನದಲ್ಲಿ ಆತನ ಸೇವೆಯನ್ನು ತಮ್ಮ ವಿಶೇಷವಾದ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದಾರೋ ಅವರೆಲ್ಲರಿಗೂ ಆತನು ನಿಶ್ಚಯವಾಗಿ ನೀರುಹಾಕಿ ಉಲ್ಲಾಸಕರವಾಗುವಂತೆ ಮಾಡುತ್ತಾನೆ–ಅಂಥವರು ಕರ್ತನ ಕೃಪೆಯನ್ನು ಮತ್ತೊಬ್ಬರಿಗೆ ತಿಳಿಸಿ ನೀರುಹಾಕಿ ಪೋಷಿಸುತ್ತಾ ಸೇವೆ ಸಲ್ಲಿಸುತ್ತಾರೆ. ಮತ್ತು ಇದು ಕಳೆದ ಸಮಯಗಳಲ್ಲಿ ಅಂದರೆ ಇಡೀ ಸುವಾರ್ತಾ ಯುಗದಲ್ಲಿ ನಿಜವಾಗಿದ್ದರೆ, ಅದು ವಿಶೇಷವಾಗಿ ಈಗ, ಯುಗದ ಅಂತ್ಯದಲ್ಲಿ ಎಷ್ಟು ನಿಜವಾಗಿದೆ ಎಂದು ನಮಗೆ ಮನವರಿಕೆಯಾಗಬಹುದು. ವಿಶೇಷವಾಗಿ ಸುಗ್ಗಿಯ ಕಾಲದಲ್ಲಿ ನಮ್ಮ ಕರ್ತನ ಎರಡನೆಯ ಪ್ರಸನ್ನತೆಯಲ್ಲಿ ಎಷ್ಟು ಸತ್ಯವಾಗಿದೆ! ಆತನು ನಮ್ಮೊಂದಿಗೆ ಇದ್ದು ನಮಗೆ ಅನುಕಂಪ ತೋರಿಸಿ, ನಮಗೆ ಸಹಕಾರ ನೀಡಿ, ನಮಗೆ ಬರುವ ಎಲ್ಲಾ ವಿಷಯಗಳಲ್ಲಿ ಸಹಾಯ ಮಾಡಿ, ಕೃಪೆಯಿಂದ ನಮ್ಮನ್ನು ಕಾಪಾಡಿ, ಎಲ್ಲಾ ವಿಧವಾದ ಅನುಭವಗಳಿಂದ ನಮಗೆ ಒಳ್ಳೆಯ ಫಲಗಳು ಉಂಟಾಗುವಂತೆ ಮಾಡಲು ಆತನು ಶಕ್ತನೂ ಮತ್ತು ಚಿತ್ತವುಳ್ಳವನೂ ಆಗಿದ್ದಾನೆ ಮತ್ತು ಅಂಧಕಾರದಿಂದ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನು, ಹೇರಳವಾಗಿ ಆತನ ಸ್ತೋತ್ರಗಳನ್ನು ಪ್ರಚುರಪಡಿಸುವದಕ್ಕಾಗಿ ನಮ್ಮನ್ನು ಉಪಯೋಗಿಸುತ್ತಾನೆಂದು ನಾವು ಹೇಗೆ ಅರಿತುಕೊಳ್ಳಬಹುದು! **R 3166 : 6**

## 5 ಮಾರ್ಚ್

**"ನಾನೇ ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿ ಮತ್ತು ನಾನು ಅವನಲ್ಲಿ ನೆಲೆಗೊಂಡಿದ್ದರೆ ಅವನೇ ಬಹಳ ಫಲವನ್ನು ಕೊಡುವನು; ಯಾಕೆಂದರೆ ನಾನಿಲ್ಲದೆ ನೀವು ಏನೂ ಮಾಡಲಾರಿರಿ." (ಯೋಹಾನನು 15:5)**

ನಾವು ರಾಜ್ಯದ ಸಂದೇಶವನ್ನು ಕೇಳುವದು ಮಾತ್ರ ಸಾಲದು; ಅದರ ಬಗ್ಗೆ ನಮಗೆ ಒಳ್ಳೆಯ ಹೃದಯ ಅಥವಾ ಒಳ್ಳೆಯ ಉದ್ದೇಶ ಇದ್ದರೆ ಮಾತ್ರ ಸಾಲದು; ನಮ್ಮ ಬೋಧಕನು ಹೇಳಿರುವಂತೆ ಅದರೊಂದಿಗೆ ರಾಜ್ಯದ ಸಂದೇಶವನ್ನು ಕುರಿತು ಅರ್ಥ ಮಾಡಿಕೊಂಡಿರಬೇಕು ಎಂಬದು ಅವಶ್ಯವಾಗಿದೆ. ಆದ್ದರಿಂದ ಸತ್ಯವೇದ ಅಧ್ಯಯನ ನಮಗೆ ಅವಶ್ಯವಾಗಿದೆ. ಈ ಭೂಮಿಯ ಕೆಲವು ವರ್ಷಗಳ ಬದುಕಿಗಾಗಿ ತಯಾರು ಮಾಡಲು ಅಧ್ಯಯನ ಮಾಡುವದಕ್ಕಾಗಿ ಅನೇಕ ವರ್ಷಗಳನ್ನು ಮುಡುಪಾಗಿ ಇಡುವದು ವಿವೇಕವುಳ್ಳ ಮತ್ತು ಸರಿಯಾದ ವಿಷಯವೆಂದು ಬುದ್ಧಿಯುಳ್ಳ ಜನರು ಪರಿಗಣಿಸುತ್ತಾರೆ. ಹಾಗಾದರೆ ನಿತ್ಯಜೀವ ಮತ್ತು ರಾಜ್ಯದ ಆಶೀರ್ವಾದಗಳಿಗಾಗಿ ಇನ್ನೂ ಅಧಿಕ ಅಧ್ಯಯನ ಮಾಡಿ ನಾವು ತಯಾರಾಗುವದು ಎಷ್ಟು ಸೂಕ್ತ ಎಂದು ಪರಿಗಣಿಸಬೇಕಾಗಿದೆ? ರಾಜ್ಯಕ್ಕಾಗಿ ನಮ್ಮ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಲು ನಾವು ವ್ಯಯ ಮಾಡುವ ಕಾಲ ಮತ್ತು ಪ್ರಯಾಸವನ್ನು ಬುದ್ಧಿವಂತಿಕೆಯಿಂದ ಕಳೆದರೆ ಸುಗ್ಗಿಯಲ್ಲಿ ಮೂವತ್ತು, ಅರವತ್ತು, ಅಥವಾ ನೂರರಷ್ಟು ಫಲ ದೊರೆಯುತ್ತದೆ ಎಂದು ಹೇಳುವ ಈ ಸಾಮ್ಯವು, ನಮ್ಮ ಶ್ರದ್ಧೆ ಎಷ್ಟರ ಮಟ್ಟಿಗೆ ಮತ್ತು ಎಷ್ಟು ತೀವ್ರತೆಯಾಗಿದೆ ಎಂಬುದಕ್ಕೆ ಉದಾಹರಣೆಯಾಗಿ ತೋರಿಸಲಾಗಿದೆ. ರಾಜ್ಯದಲ್ಲಿ ಅದರ ಪ್ರತಿಫಲವು ಅಷ್ಟೇ ಅಳತೆಯಲ್ಲಿರುತ್ತದೆ. "ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಹೆಚ್ಚು ಕಡಿಮೆಯುಂಟಷ್ಟೆ. ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು." ರಾಜ್ಯದಲ್ಲಿ ಅನೇಕ ವಿಧವಾದ ಮಹಿಮೆಯು ವ್ಯಕ್ತವಾಗುವದು, ಆದರೂ ಹೆಚ್ಚಾದ ಅಳತೆಯಲ್ಲಿ ಫಲಗಳನ್ನು ಕೊಡದಿದ್ದರೆ ಯಾರನ್ನೂ ತಂದೆಯು ಅಂಗೀಕರಿಸುವದಿಲ್ಲ; ಅದಕ್ಕೆ ನಾವು ಅರ್ಹರಾಗಿರದಿದ್ದರೆ "ಭಲೇ! ಭೇಷ್" ಎಂದು ಎಂದಿಗೂ ಕರೆಯಿಸಿಕೊಳ್ಳಲು ಸಾಧ್ಯವಾಗುವದಿಲ್ಲ. **R 4635 : 5**

## 6 ಮಾರ್ಚ್

**"ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನು ನಮಗೆ ಪಕ್ಷವಾದಿಯಾಗಿದ್ದಾನೆ." (1ಯೋಹಾನನು 2 : 1)**

ನಮಗೆ ಪಕ್ಷವಾದಿಯು [Advocate] ಏಕೆ ಬೇಕು? ಏಕೆಂದರೆ ನಾವು ನ್ಯಾಯತೀರ್ಪಿನ ದಂಡನೆಯಿಂದ ಬಿಡುಗಡೆ ಹೊಂದಿದ ಹೊಸ ಸೃಷ್ಟಿಗಳಾಗಿದ್ದು ತಂದೆಯೊಂದಿಗೆ ಪೂರ್ಣವಾದ ಐಕ್ಯ [ಸಂಬಂಧ] ಹೊಂದಿದ್ದೇವೆ ಮತ್ತು "ನಾವು ಕರುಣೆಯನ್ನು ಹೊಂದುವಂತೆಯೂ ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸಿಂಹಾಸನದ ಬಳಿಗೆ" ಹೋಗುವವರಾಗಿದ್ದರೂ, ಹೊಸ ಸೃಷ್ಟಿಗಳಾಗಿರುವ ನಮಗೆ ಇನ್ನೂ ಹೊಸ ಶರೀರಗಳು ಕೊಡಲ್ಪಟ್ಟಿಲ್ಲ ಮತ್ತು ಮೊದಲ ಪುನರುತ್ಥಾನದವರೆಗೂ ಅದನ್ನು ನಾವು ಹೊಂದುವದಕ್ಕೆ ಆಗುವದಿಲ್ಲ. ಅದೇ ಸಮಯದಲ್ಲಿ ದೈವಿಕ ಏರ್ಪಾಡಿನ ಪ್ರಕಾರ, ನಮಗಿರುವ ಭೂಮಿಯ ಶರೀರವನ್ನೇ ನಾವು ಉಪಯೋಗಿಸಬೇಕು, ಈ ಮಾಂಸಿಕ ಶರೀರವು ಅಪೂರ್ಣವೆಂದು ದೇವರು ಮತ್ತು ನಾವು ಇಬ್ಬರೂ ಒಪ್ಪಿಕೊಳ್ಳುತ್ತೇವೆ. ನಾವು ನಮ್ಮ ಶರೀರಗಳಿಂದಲೇ ಕ್ರಿಯೆ ಮಾಡುವುದರಿಂದ, "ನಾವು ಮಾಡಬೇಕೆಂದಿರುವದನ್ನು ಮಾಡಲಾಗುವದಿಲ್ಲ" ಎಂದು ನಮಗೆ ಗೊತ್ತಿದೆ. ಏಕೆಂದರೆ "ನಮ್ಮ ಶರೀರದಲ್ಲಿ ಪರಿಪೂರ್ಣತೆ ಎಂಬದು ನೆಲೆಸಿಲ್ಲ" ಆದರೆ ಒಂದು ವೇಳೆ ಶರೀರದ ಬಲಹೀನತೆಯಿಂದ ಅಥವಾ ಅರಿಯದೆ ನಾವು ತಪ್ಪು ಮಾಡಿದರೆ, ದೈವಿಕ ಏರ್ಪಾಡು ನಮಗಿರುವುದರಿಂದ ನಮ್ಮ ಪಕ್ಷವಾದಿಯ ಈಡುಬಲಿಯ ಪುಣ್ಯ(ಅರ್ಹತೆ)(merit) ನಮಗೆ ಅನ್ವಯಿಸುತ್ತದೆ. ಆತನು ನಮಗಾಗಿ ತಂದೆಯ ಎದುರಲ್ಲಿ ನಿಂತು [ಛಾಯೆಯಲ್ಲಿ ಆತನ ಪುಣ್ಯವನ್ನು(ಅರ್ಹತೆಯನ್ನ)(merit) ನಮಗೆ ಅನ್ವಯಿಸಿ] ನಾವು ಮಾಡಿದ ಉದ್ದೇಶ ಪೂರ್ವಕವಲ್ಲದ ತಪ್ಪುಗಳನ್ನು ರದ್ದುಮಾಡುತ್ತಾನೆ ಮತ್ತು ತಂದೆಯ ದೃಷ್ಟಿಯಲ್ಲಿ ನಮ್ಮಲ್ಲಿ ಯಾವ ರೀತಿಯಾದ ಕಳಂಕ ಅಥವಾ ಸುಕ್ಕುಗಳಿಲ್ಲದಂತೆ ನಡೆಸುತ್ತಾನೆ. **R 4516 : 6**

## 7 ಮಾರ್ಚ್

**"ನಂಬಿಕೆಯಿಂದಲೇ....ಯೆರಿಕೋವಿನ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು." (ಇಬ್ರಿಯರಿಗೆ 11 : 30)**

"ನನ್ನನ್ನು ಬಲಪಡಿಸುವ ಕ್ರಿಸ್ತನ ಮೂಲಕ ನಾನು ಎಲ್ಲವುಗಳನ್ನು ಮಾಡಬಲ್ಲೆನು." [ಫಿಲಿಪ್ಪಿಯವರಿಗೆ 4 : 13] ನಮಗೆ ನಂಬಿಕೆ ಎಂಬದು ಅವಶ್ಯವಾಗಿದೆ; ಆದರೆ ನಾವು ಯೋರ್ದಾನನ್ನು ದಾಟಿರಬೇಕು; ನಾವು ನೀತಿವಂತರೆಂದು ಎಣಿಸಲ್ಪಟ್ಟಿರಬೇಕು; ನಾವು ನಿಜಸ್ವರೂಪವಾದ ಪಸ್ಕದಲ್ಲಿ ಪಾಲು ಹೊಂದಿರಬೇಕು; ಕರ್ತನು ನಮ್ಮನ್ನು ಸ್ವೀಕರಿಸುವದಕ್ಕೆ ಮೊದಲು ನಾವು

ಪರಿಶುದ್ಧರಾಗಿ ಪ್ರತ್ಯೇಕರಾಗಿರಬೇಕು, ಯೆರಿಕೋವಿನ ಮೇಲೆ ನಮಗೆ ಜಯ ಉಂಟಾಗುವ ವಾಗ್ದಾನವಾಗಲಿ ಅಥವಾ ಅಂಥಹ ನಂಬಿಕೆಗೆ ಬೇಕಾದ ಪ್ರಯಾಸದಿಂದ ನಮಗೆ (ಭವಿಷ್ಯದಲ್ಲಿ) ಸಿಗುವ ಜಯಕ್ಕೆ ಮೊದಲು ನಾವು ಪರಿಶುದ್ಧರಾಗಿ ಪ್ರತ್ಯೇಕಿಸಲ್ಪಟ್ಟಿರಬೇಕು. ಒಂದು ವೇಳೆ ಛಾಯೆಯಲ್ಲಿ ಅಂತಹ ನಂಬಿಕೆಯಿಂದ ಪಟ್ಟಣದ ಬಲವಾದ ಗೋಡೆಗಳು ಬಿದ್ದು ಹೋದರೆ, ನಿಜಸ್ವರೂಪದಲ್ಲಿ ನಂಬಿಕೆಯ ಬೆಲೆಯು ಎಷ್ಟು ವಿಶೇಷವುಳ್ಳದ್ದಾಗಿರಬೇಕು! ಯಾಕೆಂದರೆ "ಲೋಕವನ್ನು ಜಯಿಸುವಂತಹ ಆ ಜಯವು ನಮ್ಮ ನಂಬಿಕೆಯೇ." ಆದರೆ ಎಲ್ಲಿಯವರೆಗೂ ನಾವು ಕರ್ತನನ್ನು ನಂಬಿರುತ್ತೇವೋ ಮತ್ತು ಆತನಿಗೆ ಪ್ರಿಯವಾದದ್ದನ್ನು ಮಾತ್ರ ಮಾಡಲು ಹುಡುಕುತ್ತೇವೋ (ಪ್ರಯಾಸಪಡುತ್ತೇವೋ) ಅಲ್ಲಿಯವರೆಗೂ ಈ ಜಯಿಸುವಂತಹ ನಂಬಿಕೆಯನ್ನು ಅಭ್ಯಾಸಮಾಡಲು ಸಾಧ್ಯವಾಗುತ್ತದೆ. **R 3088 : 4**

## 8 ಮಾರ್ಚ್

**"ಬಲವಾಗಿರು, ದೃಢವಾಗಿರು(ಧೈರ್ಯವಾಗಿರು)." ( ಯೆಹೋಶುವ 1 : 6 )**

ಧೈರ್ಯವು ಯಾವಾಗಲೂ ಪ್ರಶಂಸಿಸತಕ್ಕದ್ದಾಗಿದೆ, ಆದರೆ ಶಾರೀರಿಕವಾದ ಧೈರ್ಯಕ್ಕಿಂತ ನೈತಿಕ ಧೈರ್ಯವು ಅತ್ಯಧಿಕ ಉನ್ನತ ಮಟ್ಟದ್ದಾಗಿದೆ. ಈ ರೀತಿಯಾದ ನೈತಿಕ ಧೈರ್ಯವು ಅಧಿಕವಾಗಿ ಕರ್ತನ ಜನರಲ್ಲಿ ಇರಬೇಕಾಗಿದೆ; ಅದು ಇಲ್ಲದಿದ್ದರೆ ಅವರು ಏನನ್ನೂ ಮಾಡಲಾರರು ಮತ್ತು ಅವರ ಕ್ರೈಸ್ತ ಜೀವಿತದ ಮಾರ್ಗದಲ್ಲಿ ಅನೇಕ ಸಂಕಷ್ಟಗಳಿಗೆ ಕಾರಣವೇನೆಂದರೆ ಈ ವಿಷಯವನ್ನು ಪ್ರಶಂಸಿಸುವುದರಲ್ಲಿ ವಿಫಲರಾಗುತ್ತಾರೆ ಮತ್ತು ಈ ಧೈರ್ಯವನ್ನು ಬೆಳೆಸಿಕೊಳ್ಳುವದರಲ್ಲಿ ವಿಫಲರಾಗುತ್ತಾರೆ. ಕರ್ತನ ಸತ್ಯಕ್ಕಾಗಿ ಮತ್ತು ಆತನ ಜನರಿಗಾಗಿ ಉನ್ನತ ನೆಲೆಯ ನಿಜವಾದ ಧೈರ್ಯವು ಅವಶ್ಯವಾಗಿದೆ. ಏಕೆಂದರೆ ಇವುಗಳನ್ನು ಕುರಿತು ತಪ್ಪಾಗಿ ತಿಳಿದುಕೊಳ್ಳಲಾಗುತ್ತದೆ, ತಪ್ಪಾಗಿ ಅರ್ಥೈಸಲಾಗುತ್ತದೆ, ವಿರೋಧಿಸಲ್ಪಡುತ್ತದೆ. ದೊಡ್ಡ ಎದುರಾಳಿಯಾದವನು ಇಡೀ ಲೋಕದ ಪ್ರಭಾವದಿಂದ ಬೆಳಕನ್ನು ಕತ್ತಲೆಯೆಂದು ಹೇಳಿ, ಅದಕ್ಕೆ ವಿರೋಧವಾಗಿ ಆಕ್ರಮಣ ಮಾಡುವಾಗ, ನಾವು ಬೆಳಕಿಗಾಗಿ ನಿಲ್ಲಲು ನಿಜವಾದ ಧೈರ್ಯ ಬೇಕಾಗುತ್ತದೆ. ಕತ್ತಲೆಯು ತನ್ನೊಂದಿಗೆ ಐಶ್ವರ್ಯ, ಸಂಸ್ಕೃತಿ, ಪ್ರಭಾವ ಮತ್ತು ಕ್ರೈಸ್ತತ್ವಗಳಿರುವಾಗ ಅದನ್ನು ನಾವು ವಿನಯದಿಂದ ನಿರಂತರವಾಗಿ ಖಂಡಿಸುವದಕ್ಕೆ ನಿಜವಾದ ಧೈರ್ಯ ಬೇಕಾಗುತ್ತದೆ. **R 4062 : 1**

## 9 ಮಾರ್ಚ್

**"ನಮಗೆ ಕೊಡಲ್ಪಟ್ಟಿರುವ ಪವಿತ್ರಾತ್ಮದ ಮೂಲಕವಾಗಿ ದೇವರ ಪ್ರೀತಿಯು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆ." (ರೋಮಾಪುರದವರಿಗೆ 5 : 5)**

ನಾವು ದೇವರಿಗಾಗಿ ದೊಡ್ಡದಾದ ಮತ್ತು ಮಹತ್ತರವಾದ ಕಾರ್ಯಗಳನ್ನು ಮಾಡುತ್ತಿದ್ದೇವೆಂದು ಹೇಳಿ ದೇವರು ನಮ್ಮನ್ನು ಪ್ರೀತಿಸುತ್ತಿಲ್ಲ. ಆತನು ನಮ್ಮನ್ನು ಹುಟ್ಟಿಸಿರಲಾಗಿ(ನಾವು ಭ್ರೂಣಾಂಕುರಗೊಂಡಿರಲಾಗಿ) ಆತನ ವಿಶೇಷವಾದ ಪ್ರೀತಿಯು ನಮ್ಮಲ್ಲಿ ಆರಂಭವಾಯಿತು. ಏಕೆಂದರೆ ನಾವು ಪ್ರತಿಷ್ಠೆ ಮಾಡಿದ್ದೇವೆ–ಏಕೆಂದರೆ ನಾವು ಯಜ್ಞದ ಒಡಂಬಡಿಕೆಯಲ್ಲಿ ಪ್ರವೇಶಿಸಿದ್ದೇವೆ. ಮತ್ತು ಆತನ ಆತ್ಮದಲ್ಲಿ ಮುದ್ರೆಯಾಗುವದಕ್ಕೆ ಬಯಸುವವರೆಲ್ಲರಲ್ಲಿ ತಂದೆಯು ಸಂತೋಷವುಳ್ಳವನಾಗಿದ್ದಾನೆ – ಯಾರೆಲ್ಲಾ ಆತನ ಮಕ್ಕಳಾಗುವದಕ್ಕೆ ಬಯಸುತ್ತಾರೋ ಅವರಲ್ಲಿ ಆತನು ಸಂತೋಷಿಸುತ್ತಾನೆ. ಆತನು ಕ್ರಿಸ್ತನಲ್ಲಿ ನಮ್ಮನ್ನು ಚಿಕ್ಕ ಮಗುವಂತೆ ಪ್ರೀತಿಸಲು ಪ್ರಾರಂಭಿಸಿದನು ಮತ್ತು ನಾವು ಬಲವಾಗಿ ಬೆಳೆದಂತೆಲ್ಲಾ ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಆತನು ನಮ್ಮನ್ನು ಕೊನೆಯವರೆಗೂ ಪ್ರೀತಿಸುತ್ತಾನೆ! . . . ನಾವು ಪ್ರಯಾಣ ಮಾಡುವಾಗ ದೇವರ ಪ್ರೀತಿಯಲ್ಲಿ ನಮ್ಮನ್ನು ಕಾದುಕೊಳ್ಳಬೇಕು. ಚಿಕ್ಕ ಮಗುವಿನಂತೆ ಆತನ ಪ್ರೀತಿಯಲ್ಲಿ ನಮ್ಮನ್ನು ಕಾದುಕೊಳ್ಳಬೇಕಾದದ್ದು ಅವಶ್ಯವಾಗಿದೆ; ಚಿಕ್ಕ ಮಕ್ಕಳಂತೆ ನಮ್ಮನ್ನು ಕಾದುಕೊಳ್ಳಬೇಕಾದದ್ದು ಅವಶ್ಯವಾಗಿದೆ; ಸ್ವಲ್ಪ ಬೆಳೆದ ಮೇಲೂ ಸಹ ಆತನ ಪ್ರೀತಿಯಲ್ಲಿ ಕಾದುಕೊಳ್ಳಬೇಕಾದದ್ದು ಅವಶ್ಯವಾಗಿದೆ. ನಾವು ಇದನ್ನು ಹೇಗೆ ಮಾಡಲು ಸಾಧ್ಯ? ಇದು ಆತನ ಕಟ್ಟಳೆಗಳಿಗೆ ಅನುಸಾರವಾಗಿ ನಡೆಯುವುದರಿಂದ ಸಾಧ್ಯವಾಗುತ್ತದೆ. ಆದ್ದರಿಂದ ಕ್ರಿಸ್ತನಲ್ಲಿ ದೇವರ ಪರಿಪೂರ್ಣ ಚಿತ್ತಕ್ಕೆ ಅನುಸಾರವಾಗಿ ನಡೆಯಲು ನಮ್ಮ ಶರೀರಗಳನ್ನು ಅಧೀನತೆಯಲ್ಲಿಟ್ಟು ಅದನ್ನು ಸ್ವಾಧೀನಪಡಿಸಿಕೊಳ್ಳುತ್ತೇವೆ. ಯಾರೆಲ್ಲಾ ಹೀಗೆ ಮಾಡುತ್ತಾರೋ ಅವರು ಬೆಳೆಯುತ್ತಾ ಹೋಗುತ್ತಾರೆ. ಪ್ರತಿದಿನ ನಾವು ಬೆಳೆಯಬೇಕು, ಹೆಚ್ಚಾಗಬೇಕು ಮತ್ತು ಅತ್ಯಧಿಕವಾಗಿ ದೇವರಂತೆ ಆಗಬೇಕು; ಆದ್ದರಿಂದ ದಿನಗಳು ಕಳೆದಂತೆಲ್ಲಾ ನಾವು ಹೆಚ್ಚು ಹೆಚ್ಚಾಗಿ ರೂಪಾಂತರ ಹೊಂದುತ್ತೇವೆ. ಆದ್ದರಿಂದ ನಮ್ಮನ್ನು ನಾವು ದೇವರ ಪ್ರೀತಿಯಲ್ಲಿ ಕಾದುಕೊಳ್ಳಬೇಕು. **R 5276 : 2**

## 10 ಮಾರ್ಚ್

**"ವ್ಯವಸಾಯಗಾರನನ್ನು ನೋಡಿರಿ; ಆತನು ಭೂಮಿಯ ಅಮೂಲ್ಯವಾದ ಫಲಕ್ಕಾಗಿ ಕಾದಿದ್ದು ಮುಂಗಾರು ಹಿಂಗಾರು ಮಳೆಗಳು ಬರುವ ತನಕ**

**ದೀರ್ಘಶಾಂತಿಯಿಂದಿರುವನು..... ನೀವೂ ದೀರ್ಘಶಾಂತಿಯಿಂದಿರಿ." (ಯಾಕೋಬನು 5 : 7-8)**

ತಾಳ್ಮೆಯೆಂಬದು ಒಂದು ಒಳ್ಳೆಯ ಗುಣ, ಅದನ್ನು ನಾವು ಬೆಳೆಸಿಕೊಳ್ಳಬೇಕೆಂದು ನಮ್ಮ ಪರಲೋಕದ ತಂದೆ ಅಪೇಕ್ಷಿಸುತ್ತಾನೆ ಮತ್ತು ಅದನ್ನು ಆತನು ತನ್ನಲ್ಲಿ ಮಹತ್ತರವಾದ ಉದಾಹರಣೆಯಾಗಿ ವ್ಯಕ್ತಪಡಿಸುತ್ತಾನೆ. ಕಳೆದ ಎಲ್ಲಾ ಶತಮಾನಗಳಿಂದ ಪರಲೋಕದ ತಂದೆಯು ಜನರ ನಿಂದೆಯನ್ನು ತಾಳ್ಮೆಯಿಂದ ಸಹಸಿಕೊಂಡಿದ್ದಾನೆ, ಆತನು ಜ್ಞಾನದಿಂದ ನೀತಿಯನ್ನು ಮತ್ತು ಆತನ ಹೇರಳವಾದ ಕೃಪೆಯ ಆಳವಾದ ವಿನ್ಯಾಸಗಳಿಂದ ಕಾರ್ಯಸಾಧಿಸುವ ವಿಷಯವನ್ನು ಅರ್ಥಮಾಡಿಕೊಳ್ಳದೆ ಇರುವವರನ್ನು ಮತ್ತು ಆತನ ನಿಜವಾದ ಮಹಿಮೆಯುಳ್ಳ ಮತ್ತು ಪರಿಶುದ್ಧ ಗುಣಲಕ್ಷಣವನ್ನು, ಕೆಟ್ಟದ್ದು ಮತ್ತು ಬರೀ ಕೆಟ್ಟದೆಂದು ಆರೋಪಿಸುವವರನ್ನು ತಾಳ್ಮೆಯಿಂದ ಸಹಿಸಿಕೊಂಡಿದ್ದಾನೆ. "ತಕ್ಕ ಕಾಲದಲ್ಲಿ" ಆತನು ತನ್ನ ಒಳ್ಳೆಯ ಗುಣಲಕ್ಷಣವನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾನೆಂದು (ವ್ಯಕ್ತಪಡಿಸುತ್ತಾನೆಂದು) ಆತನಿಗೆ ಗೊತ್ತಿದೆ, ಆದ್ದರಿಂದ ಆತನು ತಾಳ್ಮೆಯಿಂದ ಕಾಯುತ್ತಾನೆ, ಕೆಲಸಮಾಡುತ್ತಾನೆ ಮತ್ತು ಸಹಿಸುತ್ತಾನೆ. ಅದೇ ರೀತಿ ನಮ್ಮ ಕರ್ತನಾದ ಯೇಸು ಸಹ ಕಾಯುತ್ತಾನೆ ಮತ್ತು ಸಹಿಸುತ್ತಾನೆ. ಆತನು ಬಹಳವಾಗಿ ತನ್ನನ್ನು ತಗ್ಗಿಸಿಕೊಂಡು ನಮ್ಮಂತೆ ಕೀಳಾದ ನೆಲೆಗೆ ಬಂದು ಸಹಿಸಿಕೊಂಡನು. ನಂತರ ಆತನು ಒಬ್ಬ ಮನುಷ್ಯನಾಗಿ ಬಂದು, ಸ್ವತಃ ತನಗೆ ವಿರೋಧವಾಗಿ ಉಂಟಾದ ಪಾಪಿಗಳ ವಿರೋಧತ್ವವನ್ನು ಸಹಿಸಿಕೊಂಡನು ಮತ್ತು ತಾನು ರಕ್ಷಿಸಬೇಕೆಂದು ಬಂದ ನಂತರ ಆ ಜನರಿಂದಲೇ ಬಂದ ಉಪದ್ರವವನ್ನು ಮರಣದವರೆಗೂ ಸಹಿಸಿಕೊಂಡನು. ಮತ್ತು ತನ್ನ ಪರಲೋಕದ ತಂದೆಯಂತೆ, ಆ "ತಕ್ಕ ಕಾಲವನ್ನು" ಪರಿಗಣಿಸಿ, ಅದು ಇನ್ನೂ ದೂರದ ಭವಿಷ್ಯದಲ್ಲಿದ್ದರೂ, ಆಗ ಆತನ ಸ್ವಭಾವ ಮತ್ತು ಆತನ ತಂದೆಯ ಸ್ವಭಾವವೂ ಸಹ ಪೂರ್ಣವಾಗಿ ಪರಲೋಕದಲ್ಲಿಯೂ ಮತ್ತು ಭೂಲೋಕದಲ್ಲಿಯೂ ಸಮರ್ಥನೆಯಾಗುವದು ಮತ್ತು ವ್ಯಕ್ತವಾಗುವದು ಎಂದು ತಿಳಿದು ಇವೆಲ್ಲವುಗಳ ಮಧ್ಯದಲ್ಲಿ ಉತ್ಸಾಹವುಳ್ಳವನಾಗಿದ್ದನು. ಮತ್ತು ಆಶೀರ್ವದಿಸಲ್ಪಟ್ಟ ನಮ್ಮ ಕರ್ತನಾದ ಯೇಸು ಮತ್ತು ನಮ್ಮ ಆರಾಧ್ಯ ಪರಲೋಕದ ತಂದೆಯು ಆ ಭವ್ಯವಾದ ಪೂರ್ಣತೆಗಾಗಿ ಇನ್ನೂ ತಾಳ್ಮೆಯಿಂದ ಕಾದಿದ್ದಾರೆ. ಆದ್ದರಿಂದ ಅದೇ ಮನಸ್ಥಿತಿಯಿಂದ ನಾವು ಸಹ ಕಾಯಬೇಕು; ಏಕೆಂದರೆ ದಣಿಗಿಂತ [ಕರ್ತನಿಗಿಂತ] ಆಳು (ನಾವು) ದೊಡ್ಡವನಲ್ಲ, ಕ್ರಿಸ್ತನ ಮನಸ್ಸು ನಮಗಿದ್ದರೆ, ಭವಿಷ್ಯದ ಚಿತ್ತವನ್ನು ದೃಷ್ಟಿಯಲ್ಲಿಟ್ಟುಕೊಂಡು ಹರ್ಷಿಸುತ್ತೇವೆ, ನಮ್ಮ ಸಮರ್ಥನೆ ಮತ್ತು ಮಹಿಮೆಯ ನಿರೀಕ್ಷೆ ಮಾತ್ರವಲ್ಲದೆ,

ನಮ್ಮ ಕರ್ತನಾದ ಯೇಸುವಿನ ಮತ್ತು ದೇವರ ಸಮರ್ಥನೆ ಮತ್ತು ಮಹಿಮೆಯ ನಿರೀಕ್ಷೆ ಹಾಗೂ ಸತ್ಯ ಮತ್ತು ನೀತಿಯ ನಿತ್ಯವಾದ ಜಯದ ನಿರೀಕ್ಷೆಯಲ್ಲಿಯೂ ಹರ್ಷ ಪಡುತ್ತೇವೆ. **R 3784 : 1**

## 11 ಮಾರ್ಚ್

**"ಸಹೋದರರೇ, ನಾವು ಈಗ ಇಸಾಕನಂತೆ ವಾಗ್ದಾನದ ಮಕ್ಕಳಾಗಿದ್ದೇವೆ." ( ಗಲಾತ್ಯದವರಿಗೆ 4 : 28 )**

ನಮ್ಮ ತಲೆಯಾದ ಕ್ರಿಸ್ತನು ಮತ್ತು ಆತನ ಅಂಗಗಳಾದ ನಾವು, "ನಗು" ಅಥವಾ "ಸಂತೋಷ" ಎಂದು ಕರೆಯಲ್ಪಡುವಾತನಿಗೆ ನಿಜರೂಪವಾಗಿದ್ದೇವೆ. ಮತ್ತು ಪ್ರಸ್ತುತ( ಈಗಿನ) ಕಾಲದಲ್ಲಿ, ಬೇರೆಯವರಿಗಿಂತ ನಾವು ಅಧಿಕ ಸಂತೋಷವುಳ್ಳವರಾಗಿದ್ದೇವಲ್ಲವೆ? ನಿಜ, ಇಡೀ ಸೃಷ್ಟಿಗಳೆಲ್ಲಾ ಸಂಕಷ್ಟಗಳಲ್ಲಿ ನರಳುವಿಕೆ ಹಾಗೂ ಪ್ರಸವವೇದನೆ ಪಡುತ್ತಿದೆ. ನಮಗೂ ಅವರಂತೆ ಶೋಧನೆಗಳು, ಕಷ್ಟಗಳು, ದುಃಖಗಳು ಮತ್ತು ನಿರಾಶೆಗಳಲ್ಲಿ ಪೂರ್ಣ ಪಾಲು ಇದೆ. ಆದರೂ ಅವರಿಗೆ ಇಲ್ಲದೆ ಇರುವದು ನಮಗಿದೆ–ಅದೇನೆಂದರೆ "ಎಲ್ಲಾ ಗ್ರಹಿಕೆಗೂ ಮೀರಿದ ದೇವ ಸಮಾಧಾನ" ನಮಗಿದೆ. ಇದು ನಮ್ಮ ಹೃದಯಗಳನ್ನು ಆಳ್ವಿಕೆ ಮಾಡುತ್ತದೆ ಮತ್ತು "ಉಪದ್ರವಗಳಲ್ಲಿಯೂ ಸಂತೋಷವಾಗಿರುವಂತೆ" ಮಾಡುತ್ತದೆ. ಇದಲ್ಲದೆ ಉಪದ್ರವದಿಂದ ತಾಳ್ಮೆಯುಂಟಾಗುತ್ತದೆಂದು ತಿಳಿದಿರುವುದರಿಂದ, ಎಲ್ಲಾ ವಿಧವಾದ ಆತ್ಮೀಕ ಫಲಗಳು ನಮ್ಮಲ್ಲಿ ಪರಿಪೂರ್ಣವಾದಾಗ, ನಮ್ಮಲ್ಲಿ ಪರಲೋಕ ರಾಜ್ಯದ ಪರಿಪೂರ್ಣ ಸಂತೋಷ ಮತ್ತು ಹರ್ಷವನ್ನು ತರುತ್ತದೆ. ಮತ್ತು ಈ ಸಂತೋಷವು ಪ್ರಸ್ತುತ[ಈಗಿನ] ಕಾಲದಲ್ಲಿ ನಮಗೆ ಇಷ್ಟರ ಮಟ್ಟಗೆ ಅನ್ವಯಿಸುವದಾದರೆ, ಮಹಿಮೆಯುಳ್ಳ ಭವಿಷ್ಯದಲ್ಲಿ ನಮ್ಮ ಬೋಧಕನೊಂದಿಗೆ ಸೇರಿ, ಆತನ ರಾಜ್ಯದ ಮಹಿಮೆಯಲ್ಲಿ, ಕರ್ತನ ಜ್ಞಾನ ಮತ್ತು ಆಶೀರ್ವಾದವು ಇಡೀ ಲೋಕದಲ್ಲಿ ಉಂಟಾದಾಗ ಹಾಗೂ ಪಾಪ ಮತ್ತು ಮರಣದ ಆಳ್ವಿಕೆಯ ಅಡಿಯಲ್ಲಿ ಇರುವ ಈಗಿನ ಬಲಹೀನ ಮತ್ತು ನರಳುವಿಕೆಯಿಂದಿರುವ ಮನುಕುಲಕ್ಕೆ ನಗು ಮತ್ತು ಸಂತೋಷವನ್ನು ತರುವಾಗ ನಾವು ಏನೆಂದು ಹೇಳೋಣ? "ಈ ಎಲ್ಲಾ ಆಶೀರ್ವಾದಗಳು ನಮ್ಮ ದೇವರಿಂದ ಬರುವುದರಿಂದ ಆತನಿಗೆ ಸ್ತೋತ್ರವಾಗಲಿ." **R 2861 : 5**

## 12 ಮಾರ್ಚ್

**"ನೀನು ತಗ್ಗಿಸಿಕೊಳ್ಳುವ ನಿಮಿತ್ತವೂ ಹೃದಯದಲ್ಲಿ ಇರುವದನ್ನು (ತಿಳುಕೊಳ್ಳುವದಕ್ಕೂ) ಅಂದರೆ ನೀನು ಆತನ ಆಜ್ಞೆಗಳನ್ನು ಕಾಪಾಡುವಿಯೋ**

**ಇಲ್ಲವೋ ಎಂದು ತಿಳುಕೊಳ್ಳುವದಕ್ಕೂ ನಿನ್ನ ದೇವರಾದ ಕರ್ತನು ನಿನ್ನನ್ನು...ನಡಿಸಿದ ಮಾರ್ಗವನ್ನೆಲ್ಲಾ ಜ್ಞಾಪಕಮಾಡಿಕೊಳ್ಳಬೇಕು." ( ಧರ್ಮೋಪದೇಶಕಾಂಡ 8 : 2 )**

ದೇವರಿಂದ ಪ್ರತಿಷ್ಠಿಸಲ್ಪಟ್ಟ ತನ್ನ ಜನರಿಗೆ ಉಪದ್ರವವನ್ನು ಅನುಮತಿಸುವದಕ್ಕೆ ಒಂದು ನಿರ್ಧಿಷ್ಟವಾದ ಕಾರಣವಿದೆ. "ನಿನ್ನ ದೇವರಾದ ಕರ್ತನು [ಶೋಧಿಸಿ] ತಿಳುಕೊಳ್ಳುವದಕ್ಕೆ" ನಿನ್ನನ್ನು ಪರೀಕ್ಷಿಸುತ್ತಾನೆ. ಏಕೆ? ಆತನು ಏನನ್ನು [ಶೋಧಿಸಿ] ತಿಳುಕೊಳ್ಳುತ್ತಾನೆ? ನಾವು ಆತನ ನಿಷ್ಠಾವಂತ ಮಕ್ಕಳೆಂದು ಹೇಳಿಕೊಳ್ಳುತ್ತೇವೆ. ನಮಗಿರುವುದೆಲ್ಲವನ್ನು ಆತನಿಗೆ ಸಮರ್ಪಿಸುತ್ತೇವೆಂದು ಹೇಳಿಕೊಳ್ಳುತ್ತೇವೆ. ಮತ್ತು ಈಗ "ನಿಮ್ಮ ದೇವರಾದ ಕರ್ತನು ನಿಮ್ಮನ್ನು ಶೋಧಿಸಿ ನೀವು ನಿಮ್ಮ ಪೂರ್ಣ ಹೃದಯದಿಂದಲೂ ನಿಮ್ಮ ಪೂರ್ಣ ಪ್ರಾಣದಿಂದಲೂ ನಿಮ್ಮ ದೇವರಾದ ಕರ್ತನನ್ನು ಪ್ರೀತಿ ಮಾಡುತ್ತೀರೇನೋ ಎಂದು ಪರೀಕ್ಷಿಸುತ್ತಾನೆ." [ಧರ್ಮೋಪದೇಶಕಾಂಡ 13 : 3] ನೀವು ಎಷ್ಟು ಸಹಿಸುತ್ತೀರಾ? ಎಷ್ಟು ತಾಳ್ಮೆಯಿಂದ ನೀವು ಸಹಿಸುತ್ತೀರಾ? ಎಷ್ಟರ ಮಟ್ಟಿಗೆ ನೀವು ಸಹಿಸುತ್ತೀರಾ? ಯಾರೆಲ್ಲಾ ಅತ್ಯಧಿಕವಾಗಿ ಸಹಿಸುತ್ತಾರೋ ಮತ್ತು ಅತ್ಯಧಿಕ ತಾಳ್ಮೆಯಿಂದ ಸಹಿಸುತ್ತಾರೋ ಅವರು ಅತ್ಯುತ್ತಮ ಗುಣಲಕ್ಷಣದ ಸಾಕ್ಷಿಯನ್ನು ನೀಡುತ್ತಾರೆ. ಮತ್ತು ಯಾರೆಲ್ಲಾ ಅತ್ಯುತ್ತಮ ಗುಣಲಕ್ಷಣವನ್ನು ಪ್ರದರ್ಶಿಸುತ್ತಾರೋ ಅವರು ರಾಜ್ಯದಲ್ಲಿ ಅತ್ಯುನ್ನತ ಸ್ಥಾನವನ್ನು ಹೊಂದುತ್ತಾರೆ. ಪ್ರತಿಯೊಬ್ಬರ ನಂಬಿಗಸ್ತಿಕೆಗೆ ತಕ್ಕಂತೆ ಅವರ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. ಆದರೆ ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೆ ಇನ್ನೊಂದು ನಕ್ಷತ್ರ ಹೇಗೆ ವ್ಯತ್ಯಾಸ ಉಂಟೋ ಹಾಗೆಯೇ ರಾಜ್ಯದಲ್ಲಿರುವದು. ಯಾರೆಲ್ಲಾ ತಮ್ಮ ಸ್ವಂತ[ಶರೀರ] ಸ್ವಭಾವಕ್ಕೆ ವಿರೋಧವಾಗಿ ಅತ್ಯಧಿಕವಾಗಿ ಹೋರಾಡುತ್ತಾರೋ ಮತ್ತು ತಮ್ಮ ಹೃದಯದಲ್ಲಿ ಅತ್ಯಧಿಕವಾದ ಪ್ರೀತಿ ಮತ್ತು ಉತ್ಸಾಹವನ್ನು ಪ್ರದರ್ಶಿಸುತ್ತಾರೋ, ಅಂಥವರು ಉನ್ನತ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. **R 5395 : 6**

## 13 ಮಾರ್ಚ್

**"ಸೈತಾನನಿಗೆ ನಮ್ಮ ವಿಷಯದಲ್ಲಿ ಎಡೆ ಸಿಕ್ಕಬಾರದು; ಅವನ ಕುತಂತ್ರಗಳನ್ನು ನಾವು ಅರಿಯದವರಲ್ಲವಲ್ಲಾ." (2 ಕೊರಿಂಥದವರಿಗೆ 2:11)**

ಸಭೆಗೆ ಎದುರಾಳಿಯಾಗಿರುವ ಸೈತಾನನು ಸಿಂಹದಂತೆ ಬಲಶಾಲಿಯಾಗಿದ್ದಾನೆ, ಜಾಗರೂಕನಾಗಿದ್ದಾನೆ ಮತ್ತು ಸಂಪೂರ್ಣವಾಗಿ ಎಚ್ಚರವಾಗಿದ್ದಾನೆ. ಅಪೋಸ್ತಲನಾದ ಪೌಲನು ಹೇಳುವಂತೆ–ನಮಗೆ

ವಿರೋಧವಾಗಿರುವ ಎಲ್ಲಾ ಅವಕಾಶಗಳನ್ನು ಉಪಯೋಗಿಸಲು ಆತನು ಹುಡುಕುತ್ತಾನೆ. ನಮ್ಮನ್ನು ನುಂಗಿಬಿಡಬೇಕೆಂದು ಆತನು ಕಾದು ಕುಳಿತ್ತಿದ್ದಾನೆ. ಆತನು ಎಚ್ಚರಿಕೆಯಿಂದ ಇದ್ದರೂ ಘರ್ಜನೆಯೊಂದಿಗೆ ನಮ್ಮೆದುರಿಗೆ ಬರುವುದಿಲ್ಲ, ಆದರೆ ನಾವು ಎದುರು ನೋಡದಂತಹ ಸಮಯದಲ್ಲಿ ಅಥವಾ ಸ್ಥಳದಲ್ಲಿ ರಹಸ್ಯವಾಗಿ ತೆವಳುತ್ತಾ, ನಮ್ಮನ್ನು ನುಂಗಲು, ನಮ್ಮನ್ನು ಜಯಿಸಲು, ನಮ್ಮ ಆತ್ಮೀಕ ಜೀವಿತವನ್ನು ಜಜ್ಜಲು, ವಿಶೇಷವಾಗಿ ದೇವರಲ್ಲಿ ನಮಗಿರುವ ನಂಬಿಕೆಯನ್ನು ನಾಶಮಾಡಲು ನಮ್ಮ ಮೇಲೆ ಬೀಳುತ್ತಾನೆ. ಯಾರ ಯಾರ ಕಿವಿಗಳು ಆ ಸಿಂಹದ ಹೆಜ್ಜೆಯ ಶಬ್ದವನ್ನು ಕಂಡುಹಿಡಿಯಲು ಪರಿಣಿತವಾಗಿದೆಯೋ, ಅವರೆಲ್ಲರೂ ಆತನ ನಡೆಯನ್ನು ಕೇಳಿಸಿಕೊಳ್ಳುವರು, ಹಾಗೆಯೇ ಯಾರೆಲ್ಲಾ ಆತನ ನಡೆಗಳಲ್ಲಿ ಪರಿಚಯವಿಲ್ಲದವರಾಗಿರುವರೋ ಅವರು ಆತನ ಒಂದು ಚಿಕ್ಕ ಶಬ್ಧವನ್ನಾದರೂ ಕೇಳಿಸಿಕೊಳ್ಳಲಾರರು. ಆದದರಿಂದ ಕರ್ತನು ನಮ್ಮ ಕಿವಿಗಳನ್ನು ತೆರೆದಿರುವುದರಿಂದ, ನಮ್ಮ ಕಣ್ಣುಗಳು ಪ್ರತಿಷ್ಠೆ ಎಂಬ ಅಂಜನದಿಂದ ಅಭಿಷೇಕಿಸಲ್ಪಟ್ಟಿರುವುದರಿಂದ ಮತ್ತು ನಮ್ಮನ್ನು ಕರ್ತನ ಚಿತ್ತಕ್ಕೆ ಒಪ್ಪಿಸಿಕೊಟ್ಟಿರುವುದರಿಂದ, ನಮ್ಮ ಪ್ರಧಾನ ಶತ್ರುವು ಹತ್ತಿರ ಬರುವುದನ್ನು ಗ್ರಹಿಸಿ ಬೇಗನೆ ಗುರುತಿಸಲು, ಆತನನ್ನು ಎದುರಿಸಲು ಸಾಧ್ಯವಾಗುತ್ತದೆ. ದೇವರ ವಾಕ್ಯವು ಒದಗಿಸುವ ಸರ್ವಾಯುಧವನ್ನು ಧರಿಸಿದವರಾಗಿ ನಾವು ನಿಂತುಕೊಳ್ಳೋಣ ಮತ್ತು ದೇವರ ಬಲದೊಂದಿಗೆ ಆತ್ಮವೆಂಬ ಕತ್ತಿಹಿಡಿದು ಅದನ್ನು ಉಪಯೋಗಿಸೋಣ. **R 5183 : 6**

## 14 ಮಾರ್ಚ್

**"ನಿಮ್ಮ ಹೃದಯವನ್ನು ಕರ್ತನಿಗೆ ಸಿದ್ಧಮಾಡಿ ಆತನೊಬ್ಬನನ್ನೇ ಸೇವಿಸಿ...." (1 ಸಮುವೇಲನು 7 : 3 )**

ಪ್ರಿಯ ಸಹೋದರರೇ ಮತ್ತು ಸಹೋದರಿಯರೇ, ಬರಲಿರುವ ರಾಜ್ಯದ ಸಂದೇಶವನ್ನು ಸಾರುವ ಸವಲತ್ತು (ಭಾಗ್ಯ) ಹೊಂದಿರುವ ನಾವು, ಸ್ನಾನಿಕನಾದ ಯೋಹಾನನಂತೆ ಅತ್ಯಾಸಕ್ತಿ ಮತ್ತು ಉತ್ಸಾಹವುಳ್ಳವರಾಗಿರೋಣ. ಈ ಲೋಕದ ಪದ್ಧತಿ ಮತ್ತು ಸಂಪ್ರದಾಯಗಳಿಗೆ ಅತಿ ಕಡಿಮೆ ಗಮನಕೊಟ್ಟು, ನಮಗೆ ನೇಮಿಸಲ್ಪಟ್ಟ ಕೆಲಸಗಳನ್ನು ಅತ್ಯಂತ ಶ್ರದ್ಧೆಯಿಂದ ಗಮನಿಸೋಣ, ನಮ್ಮ ಪರಲೋಕದ ಮದಲಿಂಗನ ಸ್ತುತಿಸ್ತೋತ್ರಗಳನ್ನು ಎಲ್ಲರಿಗೂ ಹೇಳಿ ಪ್ರಚುರಪಡಿಸೋಣ, ಆತನ ದಯೆ, ನಿಯಮಗಳು ಮತ್ತು ಷರತ್ತುಗಳನ್ನು ಎಲ್ಲರಿಗೂ ತಿಳಿಸೋಣ ಮತ್ತು ಈ ಯುಗದ ಸುಗ್ಗಿಯ ಕಾಲದಲ್ಲಿ ಆತನು

ಪ್ರಸನ್ನನಾಗಿದ್ದಾನೆಂಬುದಕ್ಕೆ ಸಾಕ್ಷಿ ಹೇಳುವವರಾಗಿರೋಣ. ಆತನ ಬೀಸಣಿಗೆ ಆತನ ಕೈಯಲ್ಲಿದೆ. ಆತನು ಕಣದ ಎಲ್ಲಾ ಹೊಟ್ಟುಗಳನ್ನು ಚೆನ್ನಾಗಿ ಶುದ್ಧೀಕರಿಸುವನು ಮತ್ತು ಗೋಧಿಯನ್ನು ಆತನ ರಾಜ್ಯದ ಕಣಜದಲ್ಲಿ ಒಟ್ಟುಗೂಡಿಸುವನು ಮತ್ತು ಹೆಸರಿಗೆ ಮಾತ್ರವಿರುವ ಕ್ರೈಸ್ತ ಪ್ರಪಂಚದ ಬಹುಪಾಲು ಜನರು ಆ ಮಹಾ ಉಪದ್ರವದ ಕಾಲದಲ್ಲಿ ಪ್ರವೇಶಿಸುವರು ಎಂದು ತಿಳಿಸೋಣ. ತೆರೆಯ ಈ ಕಡೆಯಲ್ಲಿರುವ ನಾವು ನಿಜಸ್ವರೂಪದ ಎಲೀಯನಂತೆ ನಂಬಿಗಸ್ತ ಸೇವಕರಾಗಿದ್ದರೆ ನಿಶ್ಚಯವಾಗಿ ಅಭಿಷೇಕಿಸಲ್ಪಟ್ಟವನ ಶರೀರದ ಅಂಗಗಳಾಗಿ ನಾವು ತೆರೆಯ ಆ ಕಡೆಯಲ್ಲಿ ಅಂಗೀಕರಿಸಲ್ಪಡುವೆವು ಎಂಬ ಭಾವನೆ ನಮಗುಂಟಾಗುತ್ತದೆ ಮತ್ತು ಈಗಿನ ಕಾಲದಲ್ಲಿರುವ ಪಾಡುಗಳಲ್ಲಿ ಆತನೊಂದಿಗೆ ನಾವು ಪಾಲುಗಾರರಾದರೆ, ಭವಿಷ್ಯದಲ್ಲಿ ಮಹಿಮೆ ಮತ್ತು ಘನತೆಯಲ್ಲಿ ಆತನೊಂದಿಗೆ ಪಾಲುಗಾರರಾಗುವೆವು.
**R 3713 : 4**

## 15 ಮಾರ್ಚ್

**"ಜೀವಕ್ಕೆ ನಡಿಸುವ ದ್ವಾರವು ಇಕ್ಕಟ್ಟಾದದ್ದೂ ದಾರಿಯೂ ಬಿಕ್ಕಟ್ಟಾದದ್ದೂ ಆಗಿದೆ; ಆದದರಿಂದ ಅದನ್ನು ಕಂಡುಕೊಳ್ಳುವವರು ಸ್ವಲ್ಪ ಜನ." (ಮತ್ತಾಯನು 7:14 )**

ಇದು ಬಹಳ ಬಿಕ್ಕಟ್ಟಾದ ದಾರಿಯಲ್ಲವೆ? ಹೌದು ಇದು ಬಿಕ್ಕಟ್ಟಾದ ದಾರಿ, ಇದು ಕರ್ತನ ಯೋಜನೆಯನ್ನು ಧಾರಾಳವಾಗಿ ಒಪ್ಪಿಕೊಳ್ಳುವವರಿಗೆ ಮಾತ್ರ ಸಾಧ್ಯವಾಗುತ್ತದೆ ಮತ್ತು ಬೇರೆ ಎಲ್ಲಾ ಯೋಜನೆಗಳನ್ನು, ಉಪಾಯಗಳನ್ನು ಮತ್ತು ಪ್ರಶ್ನಿಸುವುದನ್ನು ತಿರಸ್ಕರಿಸಲು ಇಚ್ಛಿಸುವವರು ಅದರ ಸೇವೆಗೆಂದು ಪೂರ್ಣವಾಗಿ ತಮ್ಮನ್ನೇ ಒಪ್ಪಿಸುವವರಿಗೆ ಮಾತ್ರ ಈ ದಾರಿಯಲ್ಲಿ ಒಪ್ಪಿ ನಡೆಯಲು ಸಾಧ್ಯ; ಮತ್ತು ಅದು ತರುವಂತಹ ನಿಂದೆಗಳು ಎಂತಹದಾಗಿದ್ದರೂ ಅದನ್ನು ಸಹಿಸಲು ಸಿದ್ಧರಿರುತ್ತಾರೆ. ನೀವು ಪ್ರತಿದಿನ ದೈವಿಕ ಗುಣಲಕ್ಷಣವನ್ನು ಹೊಂದುವುದಕ್ಕೆ ಮತ್ತು ದೇವರ ನೀತಿಯುಳ್ಳ ಮಾರ್ಗಗಳನ್ನು ಕುರಿತು ತಿಳಿಸುವದಕ್ಕೆ ಪ್ರಯತ್ನಿಸುತ್ತಿದ್ದೀರಾ? ನೀವು ಸತ್ಯದಲ್ಲಿ ಚಿರಪರಿಚಿತರಾಗುವುದಕ್ಕೆ ಶ್ರದ್ಧೆಯಿಂದ ಪ್ರಯಾಸ ಪಡುತ್ತಿದ್ದೀರಾ? ಇದರಿಂದ ನಿಮ್ಮ ಸುತ್ತಮುತ್ತ ಇರುವ ಜನರಿಗೆ ಪ್ರಭಾವ ಬೀರುವಂತೆ, ಇತರರು ನಿಮ್ಮನ್ನು ಅರಿಯುವಂತೆ ಮತ್ತು ನಿಮ್ಮನ್ನು ಕುರಿತು ಓದುವಂತೆ(ತಿಳುಕೊಳ್ಳುವಂತೆ) ನೀವು ಜೀವವುಳ್ಳ ಪತ್ರಿಕೆಯಾಗಿದ್ದೀರಾ? ನಿಜವಾಗಿಯೂ ನೀವು ಅವಮಾನಕ್ಕೆ ಗುರಿಯಾಗದ ಕೆಲಸದವರಾಗಿದ್ದೀರಾ? ತಮ್ಮನ್ನೇ ಕರ್ತನಿಗೆ ಅರ್ಪಿಸಿರುವವರಂತೆ

ನೀವು ನಿಜವಾಗಿಯೂ ಅರ್ಪಿಸಿದ್ದೀರಾ? ಸತ್ಯವಾಗಿ ಆತನಿಗೆ ನೀವು ಹೀಗೆ ಹೇಳುತ್ತೀರಾ : "ನನ್ನನ್ನು ಸ್ವೀಕರಿಸು—ಎಂದೆಂದಿಗೂ ನಾನು ಎಲ್ಲವನ್ನು ನಿನಗೆ ಮಾತ್ರ ಒಪ್ಪಿಸಲು ಬಯಸುತ್ತೇನೆ" ಹಾಗಿದ್ದರೆ, ನೀನು ಒಂದೇ ಮನಸ್ಸುಳ್ಳವನಾಗಿ ಹೀಗೆ ಹೇಳಲು ಸಾಧ್ಯವಾಗುತ್ತದೆ, "ಇದೊಂದನ್ನು ನಾನು ಮಾಡುತ್ತೇನೆ; ದೇವರ ಸ್ತುತಿಗಳನ್ನು ಪ್ರಚುರಪಡಿಸುವದಕ್ಕಾಗಿ ಮತ್ತು ಬೇರೆಯವರನ್ನು ಆತನ ಆಶ್ಚರ್ಯಕರವಾದ ಬೆಳಕಿನಲ್ಲಿ ನಡೆಸುವದಕ್ಕಾಗಿ ಬೇರೆಲ್ಲವನ್ನು ಬಿಟ್ಟು, ಇದೊಂದನ್ನು ಮಾತ್ರ ಮಾಡುವವನಾಗುತ್ತೇನೆ; ಮತ್ತು ನನ್ನ ಪರಲೋಕ ತಂದೆಗೆ ಜ್ಞಾನವುಳ್ಳ ಸೇವಕನಾಗಿ ಕೊನೆಯವರೆಗೂ ನಾನು ಹೊಂದಿರುವಂತಹ ತಲಾಂತುಗಳನ್ನು ಬೆಳೆಸಿಕೊಂಡು, ಅದನ್ನು ಉಪಯೋಗಿಸುತ್ತೇನೆ." **R 5045 : 3**

## 16 ಮಾರ್ಚ್

**"ಯಾಕೆಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ." ( ಕೊಲೊಸ್ಸೆಯವರಿಗೆ 3:3 )**

ಯಾರೋ ಒಬ್ಬ ಕ್ರೈಸ್ತ ಲೇಖಕನು ಹೀಗೆ ಚೆನ್ನಾಗಿ ಹೇಳಿದ್ದಾನೆ; "ಎಲ್ಲೆಲ್ಲಾ ಪ್ರತಿಷ್ಠಿತ ಹೃದಯದಲ್ಲಿ ಕರ್ತನನ್ನು ನಂಬಿಗಸ್ತಿಕೆಯಿಂದ ಹಿಂಬಾಲಿಸುವವರಿದ್ದಾರೋ, ಅನೇಕ (ಒಳ್ಳೆಯ) ವಿಷಯಗಳು ಬೇಗನೆ ಅಥವಾ ನಿಧಾನವಾಗಿ ಅವರನ್ನು ಅನಿವಾರ್ಯವಾಗಿ ಹಿಂಬಾಲಿಸುತ್ತದೆ. ದೀನತೆ ಮತ್ತು ಶಾಂತತೆಯ ಆತ್ಮದ ಸ್ವಭಾವವು ಅವರ ಅನುದಿನದ ಜೀವಿತದ ಗುಣಲಕ್ಷಣಗಳಾಗಿ ಮಾರ್ಪಡುತ್ತದೆ. ಪ್ರತಿದಿನದ ಒಂದೊಂದು ಗಂಟೆಗಳ ಸಂಭವದಲ್ಲೂ ದೇವರ ಚಿತ್ತವನ್ನು ಸ್ವೀಕರಿಸುವಂತಹ ಮನೋಭಾವವು ವ್ಯಕ್ತವಾಗುತ್ತದೆ; ದೇವರ ಕೈಯಲ್ಲಿ ವಿಧೇಯರಾಗಿದ್ದು ಆತನ ಚಿತ್ತವನ್ನು ಮಾಡುವುದಕ್ಕೆ ಅಥವಾ ಆತನ ಚಿತ್ತವನ್ನು ಮಾಡುವವದರಿಂದ ಬಾಧೆಯನ್ನು ಅನುಭವಿಸುವುದಕ್ಕೆ ಅತ್ಯಂತ ಸಂತೋಷವುಳ್ಳವನಾಗಿರುತ್ತಾನೆ; ಪ್ರಚೋದನೆಗಳಲ್ಲಿ ಆನಂದವುಳ್ಳವನಾಗಿರುತ್ತಾನೆ; ಗದ್ದಲ ಮತ್ತು ಗೊಂದಲಗಳ ನಡುವೆ ಶಾಂತತೆಯಿಂದಿರುತ್ತಾನೆ; ಮತ್ತೊಬ್ಬರ ಬಯಕೆಗೆ ಮಣಿಯುತ್ತಾರೆ [ಇದರಲ್ಲಿ ಯಾವ ಜಗಳದ ನಿಯಮವೂ ಇರುವದಿಲ್ಲ.] ಹಾಗೂ ಅಪಮಾನ ಮತ್ತು ಹಿಂಸಿಸುವ ಯಾವ ವಿಷಯವೂ ಇರುವುದಿಲ್ಲ; ಚಿಂತೆ ಅಥವಾ ಆತಂಕ ಕಾಣೆಯಾಗಿರುತ್ತದೆ; ಕಳವಳ ಮತ್ತು ಭಯದಿಂದ ಬಿಡುಗಡೆ ಹೊಂದಿರುತ್ತಾನೆ, ಇವೆಲ್ಲಾದರ ಜೊತೆಗೆ ಇನ್ನೂ ಅನೇಕ ಕೃಪೆಗಳೊಂದಿಗೆ

ಮಾರ್ಪಡದಂತಹ ಸ್ವಾಭಾವಿಕ ಹೊರಗಿನ ಬೆಳವಣಿಗೆಯನ್ನು "ಕ್ರಿಸ್ತನೊಂದಿಗೆ ದೇವರಲ್ಲಿ ಮರೆ"ಯಾಗಿರುವ ಆತನ ಒಳಗಿನ ಜೀವಿತದಲ್ಲಿ ಕಾಣಬಹುದು." **R 5913 : 1**

## 17 ಮಾರ್ಚ್

**"ಕೆಟ್ಟತನವನ್ನು ಹೇಸಿಕೊಂಡು ಒಳ್ಳೆಯದಕ್ಕೆ ಅಂಟಿಕೊಳ್ಳಿರಿ." (ರೋಮಾಪುರದವರಿಗೆ 12 : 9)**

ಹೇಗೆ ಪವಿತ್ರತೆ ಮತ್ತು ಪಾಪ ಒಂದಕ್ಕೊಂದು ವಿರೋಧವಾಗಿದೆಯೋ ಹಾಗೆಯೇ ಇವುಗಳ ಮೇಲೆ ನಮ್ಮ ಭಾವನೆಯು ಪ್ರೀತಿ ಮತ್ತು ದ್ವೇಷವೆಂಬ ಭಾವನೆಗಳಲ್ಲಿ ಪ್ರತಿನಿಧಿಸಬೇಕು. ನೀತಿಗಾಗಿ ಇರುವ ನಮ್ಮ ಪ್ರೀತಿಯು ತಣ್ಣಗಾದರೆ, ಪಾಪವನ್ನು ಹೇಸಿಕೊಳ್ಳುವದರಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದೇವೆಂದು ಅರ್ಥ. ಆದ್ದರಿಂದ ನಮ್ಮೊಳಗೆ ಪಾಪ, ಸ್ವಾರ್ಥತೆ, ಅಪವಿತ್ರತೆ ಮತ್ತು ಎಲ್ಲಾ ರೀತಿಯಾದ ಕೆಟ್ಟತನವನ್ನು ದ್ವೇಷಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳೋಣ, ಆಗ ಪವಿತ್ರಾತ್ಮದ ಸುಂದರವಾದ ಕೃಪೆಗಳನ್ನು ನಮ್ಮ ಹೃದಯಗಳಲ್ಲಿ ಬೆಳೆಸಿಕೊಳ್ಳುವದಕ್ಕೆ ಸುಲಭವಾಗುತ್ತದೆ ಎಂದು ನಾವು ನೋಡಬಹುದು. ನಮ್ಮ ಮನಸ್ಸಿನಲ್ಲಿ ಮಾತ್ರ ಹಳೆಯವುಗಳು ಅಳಿದುಹೋಗುತ್ತದೆ ಮತ್ತು ಎಲ್ಲವೂ ನೂತನವಾಗುತ್ತದೆ. ನಿಜವಾಗಿಯೂ ಈ (ಪರಿಪೂರ್ಣ) ಬದಲಾವಣೆಯನ್ನು ನಾವು ಆತ್ಮೀಕ ಜೀವಿಗಳಾಗಿ ಮಾರ್ಪಟ್ಟ ನಂತರ ಹೊಂದಿಕೊಳ್ಳುವೆವು. ಕರ್ತನು ನಾವು ಹೇಗಿರಬೇಕೆಂದು ಅಪೇಕ್ಷಿಸುತ್ತಾನೋ ಹಾಗಿರುವುದಕ್ಕೆ ನಮ್ಮ ಮನಸ್ಸಿನ ಆಸೆ ಮತ್ತು ನಮ್ಮ ಅತ್ಯಾಸಕ್ತಿಯನ್ನು ವ್ಯಕ್ತಪಡಿಸುವಾಗ ಮಾತ್ರ ಮೊದಲನೆಯ ಪುನರುತ್ಥಾನದಲ್ಲಿ ಸ್ಥಾನ ಹೊಂದುವದಕ್ಕೆ ಯೋಗ್ಯರಾಗಿ ಎಣಿಸಲ್ಪಡುತ್ತೇವೆ. ನಮ್ಮ ಹೃದಯಗಳನ್ನು ಮತ್ತು ನಮ್ಮ ಮನಸ್ಸುಗಳನ್ನು ಕಟ್ಟುನಿಟ್ಟಾದ ಕಣ್ಗಾವಲಿನಲ್ಲಿ ಕಾದುಕೊಳ್ಳುವುದಕ್ಕಿಂತ ಉತ್ತಮವಾದ ಬೇರೆ ಯಾವ ರೀತಿಯಲ್ಲೂ ಕರ್ತನಿಗೆ ಯೋಗ್ಯರೆಂದು ವ್ಯಕ್ತಪಡಿಸಲು ಅಥವಾ ನಿರೂಪಿಸಲು ನಮಗೆ ಸಹಾಯವಾಗುವದಿಲ್ಲ. **R 4895: 4**

## 18 ಮಾರ್ಚ್

**"ನಾನಾದರೋ ನೀತಿಯಲ್ಲಿ ನಿನ್ನ ಮುಖವನ್ನು ದೃಷ್ಟಿಸುವೆನು; ನಾನು ಎಚ್ಚರವಾದಾಗ ನಿನ್ನ ಹೋಲಿಕೆಯೊಂದಿಗೆ ತೃಪ್ತಿಹೊಂದುವೆನು." (ಕೀರ್ತನೆಗಳು 17 : 15)**

ನಮ್ಮ ಆಶೀರ್ವದಿಸಲ್ಪಟ್ಟ ಕರ್ತನೂ ಮತ್ತು ತಲೆಯೂ ಆಗಿರುವಾತನ ಗುಣ ಸ್ವರೂಪವನ್ನು ಹೊಂದುವ ಆ ಭಾವನೆಯು ಜೀವನ ಪರ್ಯಂತ ಇರುವಂತಹ ಕೆಲಸವಾಗಿದೆ ಎಂಬ ಮುಖ್ಯತ್ವವನ್ನು ಪರಿಗಣಿಸುವವರು ಯಾರು! ಈ ಸ್ವಭಾವವನ್ನು ಒಂದು ದಿನ ಅಥವಾ ಒಂದು ವರ್ಷದಲ್ಲಿ ಹೊಂದಲು ಸಾಧ್ಯವಿಲ್ಲ; ಆದರೆ ಜೀವನವಿಡೀ ಅದಕ್ಕಾಗಿ ಮೀಸಲಾಗಿಡಬೇಕು; ಅನುದಿನ ನಾವು ನಂಬಿಗಸ್ತರಾಗಿದ್ದರೆ, ಕೃಪೆಯಲ್ಲಿ ಬೆಳೆಯುವದನ್ನು ಮತ್ತು ಕ್ರೈಸ್ತ ಸ್ವಭಾವದಲ್ಲಿ ಅಭಿವೃದ್ಧಿ ಹೊಂದುವುದನ್ನು ನಮಗೆ ಮನವರಿಕೆ ಆಗಬೇಕು. ನಮಗೆ ಸತ್ಯವು ತಿಳಿದಿದೆ ಎಂಬದು ಮಾತ್ರ ಸಾಲದು ಅಥವಾ ನೀತಿಯಲ್ಲಿ ನೆಲೆಗೊಂಡು ನಿಂತಿರುವುದರಲ್ಲಿ ತೃಪ್ತಿಹೊಂದುವದು ಮಾತ್ರ ಸಾಲದು. ಸತ್ಯವು ನಮ್ಮ ಸ್ವಭಾವದಲ್ಲಿ ಅದರ ಕ್ರಮಬದ್ಧವಾದ ಮತ್ತು ವಿನ್ಯಾಸದ ಪರಿಣಾಮವನ್ನು ಉಂಟುಮಾಡುವಂತೆ ನಾವು ನೋಡಿಕೊಳ್ಳಬೇಕು. ಮತ್ತು ಒಂದು ವೇಳೆ ಸತ್ಯವನ್ನು ಒಳ್ಳೆಯ ಮತ್ತು ಪ್ರಾಮಾಣಿಕ ಹೃದಯಗಳಿಂದ ಸ್ವೀಕರಿಸಿದರೆ, ಅಪೋಸ್ತಲನಾದ ಪೇತ್ರನು ಭರವಸೆ ನೀಡುವಂತೆ "ನಾವು ಎಂದಿಗೂ ತಪ್ಪಿಹೋಗುವದಿಲ್ಲ [ಬಿದ್ದುಹೋಗುವದಿಲ್ಲ.] ಆದರೆ ತಕ್ಕ ಕಾಲದಲ್ಲಿ ನಾವು ರಾಜ್ಯದಲ್ಲಿ ಸ್ವೀಕರಿಸಲ್ಪಡುವೆವು." **R 4911 : 4**

## 19 ಮಾರ್ಚ್

**"ನಾನು ಕಣ್ಣೀರಿನಿಂದ....ಹಗಲಿರುಳು ಎಡೆಬಿಡದೆ ಪ್ರತಿಯೊಬ್ಬನನ್ನು ಎಚ್ಚರಿಸಿದೆನೆಂದು ಜ್ಞಾಪಕಮಾಡಿಕೊಂಡು ಎಚ್ಚರವಾಗಿರಿ" (ಅಪೋಸ್ತಲರ ಕೃತ್ಯಗಳು 20 : 31)**

ಇಲ್ಲಿ ಪ್ರೀತಿಯ ಅಪೋಸ್ತಲನು ತಾನು ಬೀಳ್ಕೊಡುವಾಗ ಎಫೆಸ ಸಭೆಯವರ ಹಿರಿಯರು ಆತನು ಯೆರುಸಲೇಮಿಗೆ ಹಡಗಿನಲ್ಲಿ ಪ್ರಯಾಣ ಮಾಡುವುದಕ್ಕೆ ಮುಂಚೆ ಆತನಿಗೆ ವಿದಾಯ ಹೇಳಲು ಬರುತ್ತಾರೆ ಮತ್ತು ತಾನು ಬೀಳ್ಕೊಡುವಾಗ ಹೇಳುವ ಆಲೋಚನೆಯನ್ನು ಹೊಂದಿಕೊಳ್ಳುತ್ತಾರೆ. ಇದು ಆತನ ನಂಬಿಗಸ್ತಿಕೆ ಮತ್ತು ಯೋಗ್ಯವಾದ ಉದಾಹರಣೆಯಾಗಿದ್ದು ನಾವು ಅನುಕರಣೆ ಮಾಡುವುದಕ್ಕೆ ಇನ್ನೊಂದು ವಿಷಯವಾಗಿದೆ. ಆತನು ಅವರಿಗೆ ಹೀಗೆ ಹೇಳುತ್ತಾನೆ "ನೀವು ನನ್ನ ಮುಖವನ್ನು ಮುಂದೆ ಎಂದಿಗೂ ನೋಡುವುದಿಲ್ಲ...ಎಂದು ನನಗೆ ಗೊತ್ತಿದೆ. ಆದದರಿಂದ ಈ ದಿನ ನನ್ನ ಮಾತುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಿರಿ. ಅದೇನೆಂದರೆ ಎಲ್ಲಾ ಮನುಷ್ಯರ ರಕ್ತದ ಹೊಣೆಯಿಂದ ನಾನು ಮುಕ್ತನಾಗಿದ್ದೇನೆ

[ಆತನು ಪ್ರವಾದಿಯಾದ ಯೆಹೆಜ್ಕೇಲನು ಸೂಚಿಸಿರುವಂತೆ ತಾನು ಕರ್ತನ ಸೇವಕನಾಗಿದ್ದು ತನ್ನ ಸ್ವಂತ ಜವಾಬ್ದಾರಿಯನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡು ಈ ಮಾತನ್ನು ಅವರಿಗೆ ಹೇಳಿದನು. (ಯೆಹೆಜ್ಕೇಲನು 33 : 7-9)] ದೇವರ ಆಲೋಚನೆಯನ್ನು ನಿಮ್ಮೆಲ್ಲರಿಗೂ ತಿಳಿಸುವುದಕ್ಕೆ ನಾನು ಸ್ವಲ್ಪವೂ ಹಿಂಜರಿಯಲಿಲ್ಲ." ಪೌಲನು ಸತ್ಯದ ವಿಷಯದಲ್ಲಿ ಯಾವ ರಾಜಿಯನ್ನು [ಸಂಧಾನವನ್ನು] ಮಾಡಿಕೊಳ್ಳಲಿಲ್ಲ. ಯೆಹೂದ್ಯರಿಗಾಗಲಿ, ಅನ್ಯರಿಗಾಗಲಿ ಸತ್ಯವನ್ನು ಮತ್ತು ಮನುಷ್ಯರ ತತ್ವ ಶಾಸ್ತ್ರವನ್ನು ಅಧಿಕ ಸ್ವಾರಸ್ಯವಾಗಿರಲೆಂದು ಮಿಶ್ರಣ ಮಾಡಲಿಲ್ಲ ಅಥವಾ ತಪ್ಪಿಸಿಕೊಳ್ಳಲಾಗದೆ ಇರುವ ಹಿಂಸೆಯನ್ನು ತಡೆಗಟ್ಟಲು ಆತನು ಹಾಗೆ ಮಾಡಲಿಲ್ಲ. ಈ ಸನ್ನಿವೇಶದಲ್ಲಿ ಇಂತಹ ಸಾಕ್ಷಿಯನ್ನು ಹೊಂದಿರುವ ಒಬ್ಬ ಕ್ರೈಸ್ತ ಬೋಧಕನು ನಿಜವಾದ ಕಲ್ವಾರಿ ಶಿಲುಬೆಯ ಸೈನಿಕನಾಗಿದ್ದಾನೆ. **R 1558 : 6**

## 20 ಮಾರ್ಚ್

**"ಅವರ ಮಧ್ಯದಲ್ಲಿಂದ ನೀವು ಹೊರಗೆ ಬಂದು ಪ್ರತ್ಯೇಕವಾಗಿರಿ.... ಎಂದು ಕರ್ತನು ಹೇಳುತ್ತಾನೆ. ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರ್ತೆಯರಾಗಿರುವಿರಿ ಎಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ." ( 2 ಕೊರಿಂಥದವರಿಗೆ 6 : 17, 18 )**

ಇದು ಎಂತಹ ವಾಗ್ದಾನವಾಗಿದೆ! ಎಂತಹ ಆಲೋಚನೆಯಾಗಿದೆ—ಅಂದರೆ ನಾವು ಸ್ವಾಭಾವಿಕವಾಗಿ ಅಶುದ್ಧರೂ ಮತ್ತು ಅಪೂರ್ಣರೂ ಆಗಿದ್ದೇವೆ. ನಮ್ಮ ಸರ್ವಶಕ್ತನಾದ ಸೃಷ್ಟಿಕರ್ತನನ್ನು ನಾವು ಗಮನಿಸುವದು ಮಾತ್ರವಲ್ಲದೆ, ಆತನ ಮಕ್ಕಳಾಗುವಂತೆ ಆಹ್ವಾನಿಸಲ್ಪಟ್ಟಿದ್ದೇವೆ ಮತ್ತು ತಂದೆಯ ಪ್ರೀತಿ ವಾತ್ಸಲ್ಯ ನಮಗೆ ಕೊಡಲ್ಪಟ್ಟಿದೆ ಎಂಬ ಭರವಸೆ ನಮಗುಂಟು. ಅಂದರೆ "ಒಬ್ಬ ತಂದೆಯು ತನ್ನ ಮಕ್ಕಳನ್ನು ಕರುಣಿಸುವಂತೆ, ಆತನಿಗೆ ಭಯಪಡುವ ಮಕ್ಕಳಿಗೆ ಆತನು ಕರುಣಿಸುತ್ತಾನೆ." ಇದು ಎಷ್ಟು ಆಶ್ಚರ್ಯವಾಗಿ ತೋರುತ್ತದೆ! ಮತ್ತು ಬೇರೆ ಕಡೆಯಲ್ಲಿ ಅಪೋಸ್ತಲನು ಹೀಗೆ ಹೇಳುತ್ತಾನೆ, ಈ ವಿಷಯವು ಇಲ್ಲಿಗೆ ಮುಗಿಯುವುದಿಲ್ಲ, ಆದರೆ ಇದು ಕೇವಲ ಆರಂಭವಾಗಿದೆ, ಆತನು ಹೀಗೆ ಹೇಳುತ್ತಾನೆ: "ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಸಹಬಾಧ್ಯರು; ಆತನೊಂದಿಗೆ ಶ್ರಮೆಯನ್ನು ಅನುಭವಿಸುವರಾದರೆ ಒಟ್ಟಾಗಿ ನಾವು ಸಹ ಮಹಿಮೆಯನ್ನು ಹೊಂದುವೆವು." [ರೋಮಾಪುರದವರಿಗೆ 8 : 17] **R 5739 : 5**

## 21 ಮಾರ್ಚ್

**“ಈಗ ನೀನೆದ್ದು, ಈ ಯೋರ್ದಾನ್‌ನನ್ನು ದಾಟಿ ಹೋಗು.” (ಯೆಹೋಶುವನು 1:2)**

ಇಲ್ಲಿ ನಾವು ನೋಡುವದೇನೆಂದರೆ ಮೋಶೆಯಂತೆ ಯೆಹೋಶುವನೂ ಸಹ ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿದ್ದನು ಮತ್ತು ಆತನು ಅಧಿಕಾರವನ್ನು ತನ್ನ ವಶಕ್ಕೆ ಪಡೆದುಕೊಳ್ಳುವುದಕ್ಕೆ ಬದಲು ಕರ್ತನು ಆತನನ್ನು ಪ್ರೋತ್ಸಾಹಿಸಿ ಆತನು ಆ ನಾಯಕನ ಜವಾಬ್ದಾರಿಯನ್ನು ಪಡೆದುಕೊಳ್ಳಬೇಕೆಂದು ಎದುರುನೋಡುತ್ತಿದ್ದನು. ಕರ್ತನ ಜನರೆಲ್ಲಾ ಇದೇ ರೀತಿಯಾದ ಸಾತ್ವಿಕ ಮತ್ತು ದೀನ ಮನಸ್ಸುಳ್ಳವರಾಗಿದ್ದರೆ ಅದು ಸಂತೋಷಕರವಾಗಿರುತ್ತದೆ. ಎಲ್ಲರೂ ಈ ವಿಷಯದಲ್ಲಿ ತಮ್ಮ ಹೃದಯಗಳು ಮತ್ತು ಉದ್ದೇಶಗಳನ್ನು ವಿಮರ್ಶೆ ಮಾಡಬೇಕು ಮತ್ತು ಮಹತ್ವಾಕಾಂಕ್ಷೆಯ ಆತ್ಮವುಳ್ಳವರು ತಮಗೂ ಮತ್ತು ಕರ್ತನ ಜನರಿಗೆ ತರುವಂತಹ ಆಪತ್ತನ್ನು ಕುರಿತು ನೆನೆಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಕರ್ತನು ಅಹಂಕಾರಿಯನ್ನು, ಸ್ವಯಂ ಪ್ರಜ್ಞೆಯುಳ್ಳವರನ್ನು, ಬಡಾಯಿಕೊಚ್ಚಿಕೊಳ್ಳುವವರನ್ನು, ಮಹತ್ವಾಕಾಂಕ್ಷೆಯುಳ್ಳವರನ್ನು ಎದುರಿಸುತ್ತಾನೆ ಮತ್ತು ದೀನರಿಗಾದರೋ ತನ್ನ ಕೃಪೆಯನ್ನು ಅನುಗ್ರಹಿಸುತ್ತಾನೆ. **R 4061 : 1**

## 22 ಮಾರ್ಚ್

**“ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ.” (ಯೋಹಾನನು 1 : 5 )**

ಯಾರೆಲ್ಲಾ ಸತ್ಯದ ಬೆಳಕನ್ನು ಬುದ್ಧಿವಂತಿಕೆಯಿಂದ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸಂತೋಷಕರವಾಗಿರಬೇಕು; ಮತ್ತು ಹಾಗೆ ಸಂತೋಷವಾಗಿರುವಾಗ ಆತನು ಸತ್ಯದ ಬೆಳಕನ್ನು ಇತರರಿಗೆ ಬೀಸಬೇಕು ಅಥವಾ ಕೊಳಗದೊಳಗೆ ಆತನ ಬೆಳಕನ್ನು ಮರೆಮಾಡಿದರೆ, ಅವನು ತನ್ನ ಧೈರ್ಯದ ಕೊರತೆಯನ್ನು, ಮೆಚ್ಚುಗೆಯ ಕೊರತೆಯನ್ನು, ಶ್ರದ್ಧೆಯ ಕೊರತೆಯನ್ನು ಪ್ರದರ್ಶಿಸುವನು—ಯೇಸು ತನ್ನ ಮಧ್ಯಸ್ಥಿಕೆಯ ಮಹಿಮೆಯ ರಾಜ್ಯವನ್ನು ಮನುಷ್ಯರ ಮಧ್ಯದಲ್ಲಿ ಸ್ಥಾಪಿಸುವಾಗ, ಆತನೊಂದಿಗೆ ಪಾಲುಗಾರರಾಗಲು ಆಹ್ವಾನಿಸಲ್ಪಟ್ಟವರಲ್ಲಿ ಈಗ ವಿಶೇಷವಾಗಿ ಇಂತಹ ಸಂತೋಷಕರವಾದ ಹಾಗೂ ಬೆಳಕನ್ನು ಹೊಂದಿರುವ ಗುಣವುಳ್ಳವರನ್ನು ಹುಡುಕುತ್ತಿರುವನು. ಆದ್ದರಿಂದ ಮನುಷ್ಯರ ನಡುವೆ ನಮ್ಮ ಬೆಳಕು ಬೀಸುವದು ಬಹಳ ಮುಖ್ಯವಾಗಿದೆ; ಆದ್ದರಿಂದ ನಾವು ಚಿತ್ತವುಳ್ಳವರಾಗಿದ್ದು ಮಾತ್ರವಲ್ಲದೆ ಸಂತೋಷದಿಂದಿದ್ದು, ಕರ್ತನಿಗಾಗಿ ಮತ್ತು

ಆತನ ಸಂದೇಶಕ್ಕಾಗಿ ನಿಷ್ಠಾವಂತರಾಗಿರಲು ಬಾಧೆ ಪಡುವದು ಅವಶ್ಯವಾಗಿದೆ. ಮತ್ತು ಈಗ ಆತನನ್ನು ಕುರಿತು ಅಥವಾ ಆತನ ವಾಕ್ಯವನ್ನು ಕುರಿತು ನಾಚಿಕೆ ಪಟ್ಟರೆ ಮುಂದೆ ಅವರು ನಾಚಿಕೆಗೊಳಗಾಗುವರು. ಆತನು ವಧು ವರ್ಗದ ಅಂಗಗಳಾಗಿ ಅವರನ್ನು ಅಂಗೀಕರಿಸುವದಿಲ್ಲ, ಆತನ ಮಹಿಮೆಯುಳ್ಳ ಸಿಂಹಾಸನದಲ್ಲಿ ಆತನೊಂದಿಗೆ ಸಹಾಯಕರಾಗಿರಲು ಆತನು ಅಂಗೀಕರಿಸುವುದಿಲ್ಲ. **R 4967 : 5**

## 23 ಮಾರ್ಚ್

**"ಆದದರಿಂದ ನೀವು ಈ ಸಂಗತಿಗಳನ್ನು ತಿಳಿದವರಾಗಿ ಈಗಿನ ಸತ್ಯದಲ್ಲಿ ಸ್ಥಿರವಾಗಿದ್ದರೂ ಇವುಗಳನ್ನು ಯಾವಾಗಲೂ ನಿಮಗೆ ಜ್ಞಾಪಕಕೊಡುವದಕ್ಕೆ ನಾನು ಎಂದಿಗೂ ಅಲಕ್ಷ್ಯ ಮಾಡುವದಿಲ್ಲ." ( 2 ಪೇತ್ರನು 1 : 12 )**

ಸತ್ಯದಲ್ಲಿ ಸ್ಥಿರವಾಗಿರುವದು ಎಂದರೆ "ನ್ಯಾಯಪ್ರಮಾಣದಲ್ಲಿ ಮತ್ತು ಸಾಕ್ಷಿಯ ವಿಷಯದಲ್ಲಿ" ಎಚ್ಚರಿಕೆಯಿಂದ ಅಧ್ಯಯನ ಮಾಡಿ ಚೆನ್ನಾಗಿ ಸಾಬೀತು ಪಡಿಸಿರುವದನ್ನು ಸೂಚಿಸುತ್ತದೆ. [ಯೆಶಾಯ 8 : 20] ಮತ್ತು ಇದರ ಪರಿಣಾಮವಾಗಿ ನಾವು ಅದರ ಸತ್ಯತೆಯನ್ನು ಮನಗಂಡಿದ್ದೇವೆ, ಆದ್ದರಿಂದ ನಮ್ಮ ನಂಬಿಕೆಯು ಸ್ಥಿರವಾಗಿದೆ ಮತ್ತು ಕದಲಿಸಲಾಗುವದಿಲ್ಲ; ನಾವು ಯಾರನ್ನು ನಂಬಿದ್ದೇವೆಂದು ನಮಗೆ ಗೊತ್ತಿದೆ; ಕರ್ತನು ಒಳ್ಳೆಯವನೆಂದು ನಾವು ರುಚಿ ನೋಡಿದ್ದೇವೆ; ಆತನೊಂದಿಗೆ ಮಧುರವಾದ ಐಕ್ಯದಲ್ಲಿ ಪಾಲು ಹೊಂದಿದ್ದೇವೆ; ನಾವು ಆತನ ಸಾತ್ವಿಕ ಮನಸ್ಸು, ನಂಬಿಕೆ ಮತ್ತು ದೇವಭಕ್ತಿಯಲ್ಲಿ ಎಷ್ಟರ ಮಟ್ಟಿಗೆ ಪಾಲು ಹೊಂದಿದ್ದೇವೆಂದರೆ ಸಂತೋಷದಾಯಕ ಮನವರಿಕೆಯು, ಆತನ ಪೂರ್ಣತೆಯ ಕೃಪೆಯು, ಆಶ್ಚರ್ಯಕರವಾದ ಯುಗಗಳ ದೈವೀಕ ಯೋಜನೆಗಳಲ್ಲಿ ವ್ಯಕ್ತವಾಗುವದರೆಡೆಗೆ ಕೊಂಡೊಯ್ಯುವುದು; ಮತ್ತು ಆತನ ಯೋಜನೆಯ ವಿವಿಧ ವೈಶಿಷ್ಟ್ಯವನ್ನು ನೋಡುವದಕ್ಕೆ ನಮಗೆ ಅನುಮತಿ ಸಿಕ್ಕಿರುವದು ಮಾತ್ರವಲ್ಲದೆ, ಅದರ ಅವಶ್ಯಕತೆ ಮತ್ತು ಸಮಂಜಸವಾದ ಅದರ ಎಲ್ಲಾ ಸಿದ್ಧತೆಗಳನ್ನು, ಪರಿಪೂರ್ಣವಾದ ತಕ್ಕ ಕಾಲಗಳಲ್ಲಿ ಮಹಿಮೆಯಿಂದ ಹೊರಬರುವಂತಹ ಸಂಪೂರ್ಣ ನೆರವೇರಿಕೆಯನ್ನು ನೋಡುವದಕ್ಕಾಗಿದೆ. ಇದನ್ನೆ "ಪ್ರಸ್ತುತ (ಈಗಿನ) ಸತ್ಯದಲ್ಲಿ ಸ್ಥಾಪಿತವಾಗಿರುವದನ್ನು" ಸೂಚಿಸಲಾಗಿದೆ. ಇದು ನಿಜವಾಗಿಯೂ ಅತ್ಯಧಿಕವಾದ ಆಶೀರ್ವಾದದ ಸ್ಥಿತಿಯಾಗಿದ್ದು ಅದರೊಂದಿಗೆ ಯಾರೂ ಕೊಡಲಾಗದ ಅಥವಾ ಯಾರೂ ತೆಗೆಯಲಾಗದ ಸಮಾಧಾನ ಮತ್ತು ಸಂತೋಷವನ್ನು ಕೊಡುವಂಥದಾಗಿದೆ. **R 3089 : 3**

## 24 ಮಾರ್ಚ್

**"ನಿನ್ನ ದೇವರಾದ ಕರ್ತನು ನಿನ್ನನ್ನು ಉತ್ತಮ ದೇಶಕ್ಕೆ ಬರಮಾಡುತ್ತಾನೆ; ಅದು ನೀರಿನ ಹಳ್ಳಗಳೂ ತಗ್ಗಿನಲ್ಲಿಯೂ ಬೆಟ್ಟದಲ್ಲಿಯೂ ಉಕ್ಕುವ ಬುಗ್ಗೆಗಳುಳ್ಳ ದೇಶವೇ. ಗೋಧಿಯೂ ಜವೆಗೋಧಿಯೂ ದ್ರಾಕ್ಷೆಯೂ ಅಂಜೂರ ಮರಗಳೂ ದಾಳಿಂಬರಗಳೂ ಇರುವ ದೇಶವೇ; ಅದು ಹಿಪ್ಪೇ[ಓಲೀವ]ಎಣ್ಣೆಯೂ ಜೇನೂ ಉಳ್ಳ ದೇಶವೇ. ನೀನು ಕೊರತೆಯಿಲ್ಲದೆ ರೊಟ್ಟಿ ತಿನ್ನುವ ಆ ದೇಶದಲ್ಲಿ ಯಾವದರ ಕೊರತೆ ನಿನಗೆ ಆಗದು..... ನಾನು ಈಹೊತ್ತು ನಿನಗೆ ಆಜ್ಞಾಪಿಸುವ ಆತನ ಆಜ್ಞೆ ನ್ಯಾಯ ನಿಯಮಗಳನ್ನು ಕಾಪಾಡದವರೂ ನಿನ್ನ ದೇವರಾದ ಕರ್ತನನ್ನು ಮರೆಯುವವರೂ ಆಗಬೇಡಿರಿ.." (ಧರ್ಮೋಪದೇಶಕಾಂಡ 8 : 7-11)**

ಇದು ಎಂತಹ ಉಪದೇಶವಾಗಿದೆ! ನಂಬಿಗಸ್ತಿಕೆಗೆ ಎಂತಹ ಪ್ರೋತ್ಸಾಹಕರವಾಗಿದೆ! ಇಂತಹ ದೇವರನ್ನು ಆರಾಧಿಸದೆ ಮತ್ತು ಸೇವಿಸದೆ ಇರಲು ಯಾರಿಂದ ಸಾಧ್ಯ! ಮತ್ತು ಆತ್ಮೀಕ ಇಸ್ರಾಯೇಲ್ಯರು ಈ ವಾಕ್ಯವನ್ನು ಎಷ್ಟು ಅದ್ಭುತವಾಗಿ ತಮಗೆ ಅನ್ವಯಿಸಿಕೊಳ್ಳಬಹುದು! ಆತನ ಒಡಂಬಡಿಕೆಯ ಜನರಾದ ನಮ್ಮನ್ನು ಈ ಲೋಕವೆಂಬ ಅರಣ್ಯದಲ್ಲಿ ನಮ್ಮ ಅನುದಿನದ ಅವಶ್ಯಕತೆಗಳನ್ನು ಒದಗಿಸಿ, ದೇವರು ಎಷ್ಟು ಆಶ್ಚರ್ಯಕರವಾದ ರೀತಿಯಲ್ಲಿ ನಮ್ಮನ್ನು ನಡೆಸಿದ್ದಾನೆ! ಹೇಗೆ ಶಿಕ್ಷಿಸುವ ಆತನ ಪ್ರೀತಿಯುಳ್ಳ ಕೈಗಳು, ನಮ್ಮ ಕಾಲುಗಳನ್ನು ಅಲೆಯದಂತೆ ಕಾಪಾಡಿದೆ; ಅಥವಾ ಯಾವುದೇ ಸಮಯದಲ್ಲಿ ಒಂದು ವೇಳೆ ನಾವು ಬಲಕ್ಕಾಗಲಿ ಅಥವಾ ಎಡಕ್ಕಾಗಲಿ ತಿರುಗಿದಾಗ ಹೇಗೆ ಆತನ ಪ್ರೀತಿಯು ನಮ್ಮನ್ನು ಮತ್ತೆ ಹಿಂದಕ್ಕೆ ಎಳೆದುಕೊಂಡು ಬಂದಿದೆ! ಮತ್ತು ಆತನು ನಮ್ಮನ್ನು ಉತ್ತಮ ದೇಶಕ್ಕೆ, ನೀರಿನ ಹಳ್ಳಗಳೂ, ತಗ್ಗಿನಲ್ಲಿಯೂ ಮತ್ತು ಬುಗ್ಗೆಗಳುಳ್ಳ, ಹಿಪ್ಪೇ[ಓಲೀವ]ಎಣ್ಣೆಯೂ ಜೇನೂ ಉಳ್ಳ ದೇಶಕ್ಕೆ ಬರಮಾಡಲಿಲ್ಲವೆ? ಆ ದೇಶದಲ್ಲಿ ತಿನ್ನುವದಕ್ಕೆ ರೊಟ್ಟಿ ಅಂದರೆ ಪರಲೋಕದ ಮನ್ನಾವನ್ನು ಕೊರತೆಯಿಲ್ಲದೆ ಕೊಟ್ಟನಲ್ಲವೆ? ನಿಜವಾಗಿಯೂ ನಮಗೆ ಯಾವ ಕೊರತೆಯೂ ಇಲ್ಲ. ಒಂದು ವೇಳೆ ಹಳೆಯ ಒಡಂಬಡಿಕೆಯ ಇಸ್ರಾಯೇಲ್ಯರು ದೇವರಿಗೆ ಕೃತಜ್ಞತೆ ಮತ್ತು ಪ್ರೀತಿಯನ್ನು ನಿರೂಪಿಸಲು ಕಾರಣವಿದ್ದರೆ, ಆತ್ಮೀಕ ಇಸ್ರಾಯೆಲ್ಯರಾಗಿರುವ ನಮಗೆ ಆ ಪ್ರೀತಿಯನ್ನು ನಿರೂಪಿಸಲು ಇನ್ನೂ ಎಷ್ಟೋ ಅಧಿಕ ಕಾರಣಗಳಿರಬೇಕಲ್ಲವೇ! **R 5527 : 6**

## 25 ಮಾರ್ಚ್

**"ಅದರಂತೆಯೇ ಪ್ರತಿಯೊಂದು ಒಳ್ಳೆ ಮರವು ಒಳ್ಳೆ ಫಲವನ್ನು ಕೊಡುತ್ತದೆ; ಮತ್ತು ಕೆಟ್ಟ ಮರವು ಕೆಟ್ಟ ಫಲವನ್ನು ಕೊಡುತ್ತದೆ." (ಮತ್ತಾಯನು 7 : 17)**

ಕರ್ತನ ನಿಜವಾದ ಜನರು ಯಾವ ವಿಧದವರು ಎಂದರೆ ಅವರ ಜೀವಿತದ ಫಲಗಳು, ಯಾರೆಲ್ಲಾ ಆತನೊಂದಿಗೆ ಐಕ್ಯವನ್ನು ಇಡುತ್ತಾರೋ ಅಂಥವರಿಗೆ ಆರೈಕೆಯೂ ಮತ್ತು ಉಲ್ಲಾಸಕರವೂ ಉಂಟಾಗುತ್ತದೆ. ಮತ್ತೊಂದೆಡೆ ಕೆಲವು ವ್ಯಕ್ತಿಗಳು ಮುಳ್ಳಿನ ಹಾಗೆ ಯಾವಾಗಲೂ ಬೀಜಗಳನ್ನು ಚದುರಿಸಿ ತೊಂದರೆಗಳನ್ನು ಉಂಟುಮಾಡುವರು ಅಂದರೆ ತಪ್ಪಾದ ಬೋಧನೆಗಳು, ಕೆಟ್ಟದಾಗಿ ಕಲ್ಪನೆಮಾಡುವದು, ತಪ್ಪುಗಳನ್ನು ನುಡಿಯುವದು ಇವರ ಗುಣಲಕ್ಷಣವಾಗಿರುತ್ತದೆ; ಮತ್ತು ಇನ್ನೂ ಕೆಲವರು ಉಲ್ಲಾಸಕರವಾದ ಫಲಗಳನ್ನು ಕೊಡುವುದರ ಬದಲು, ಮುಳ್ಳಿನ ಗಿಡಗಳಂತೆ ನಿರಂತರವಾಗಿ ಇತರರಿಗೆ ಅಡ್ಡಿಯಾಗಿರುತ್ತಾರೆ. ಯಾರೆಲ್ಲಾ ಅವರ ಸಂಪರ್ಕಕ್ಕೆ ಬರುತ್ತಾರೋ ಅವರಿಗೆ ಕಿರಿ–ಕಿರಿ ನೀಡುತ್ತಾ, ಸಿಟ್ಟು ಎಬ್ಬಿಸುತ್ತಾ, ಅವರನ್ನು ರೇಗಿಸುತ್ತಾ, ಅವರಿಗೆ ವಿಷವನಿಟ್ಟು ಗಾಯಪಡಿಸುತ್ತಾರೆ. ಕರ್ತನ ಜನರು ಈ ರೀತಿಯಾಗಿ ತಮ್ಮನ್ನು ದಾರಿ ತಪ್ಪಿಸುವ ಸುಳ್ಳು ಬೋಧಕರು ಹಾಗೂ ಮಂದೆಯ ಸೇವೆಗಾಗಿ ತಮ್ಮ ಪ್ರಾಣವನ್ನೇ ಸಂತೋಷವಾಗಿ ನೀಡುವ ಕುರುಬರ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿದಿರಬೇಕು. ಒಂದು ವರ್ಗದವರು ನಿರಂತರವಾಗಿ ಕೇಡನ್ನುಂಟು ಮಾಡುವವರಾಗಿಯೂ ದುರ್ಬಲಗೊಳಿಸುವವರಾಗಿಯೂ ನಾಶಮಾಡುವವರಾಗಿಯೂ ಇರುತ್ತಾರೆ. ಇನ್ನೊಂದು ವರ್ಗದವರು ಸಹಾಯಕರಾಗಿಯೂ ಕಟ್ಟುವವರಾಗಿಯೂ ಬಲಪಡಿಸುವವರಾಗಿಯೂ ಸಮಾಧಾನವನ್ನು ಉಂಟುಮಾಡುವವರಾಗಿಯೂ ಇರುತ್ತಾರೆ. **R 3742 : 2**

## 26 ಮಾರ್ಚ್

**“ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯದಲ್ಲಿಯೂ ಸಮಾರ್ಯದಲ್ಲಿಯೂ ಭೂಮಿಯ ಕಟ್ಟ ಕಡೆಯವರೆಗೂ ನೀವು ನನಗೆ ಸಾಕ್ಷಿಗಳಾಗಿರುವಿರಿ.” (ಅಪೋಸ್ತಲರಕೃತ್ಯಗಳು 1 : 8)**

ಕ್ರೈಸ್ತತ್ವದ ಆತ್ಮವು ಒಂದು ಆಕ್ರಮಣಶೀಲತೆಯುಳ್ಳದ್ದಾಗಿದೆ. ಸುವಾರ್ತೆ ಎಂಬುದು ನಿಜವಾದ ವಿಶ್ವಾಸಿಯ ಮುಂದೆ ಒಂದು ಉದ್ದೇಶ ಪೂರ್ವಕವಾಗಿದ್ದು ಅತ್ಯುನ್ನತ ಅಳತೆಯ ಉತ್ಸಾಹದಲ್ಲಿದ್ದು ಸ್ಫೂರ್ತಿದಾಯಕವಾಗಿದೆ. ಸಂದೇಶವು ಕೆಂಡದಂತೆ ಉರಿಯುವಂತದಾಗಿದ್ದು ಇತರರಿಗೆ ಜ್ಞಾನೋದಯವನ್ನು ಉಂಟುಮಾಡಿ ನಿಜವಾದ ಬೆಳಕು ಕೊಡುವಂತದಾಗುತ್ತದೆ. ಇಲ್ಲದಿದ್ದರೆ ಅದು ಆರಿಹೋಗುತ್ತದೆ, ಹೊಗೆಯಾಡಿಸಿದಂತಾಗುತ್ತದೆ. “ಆತ್ಮವನ್ನು ನಂದಿಸಬೇಡಿರಿ, ಅದರಿಂದಲೇ ನೀವು ಮುದ್ರಿತರಾಗಿದ್ದೀರಿ.” ಎಂಬುದು ನಿಶ್ಚಯವಾಗಿ ಸೇವೆಯ ಆತ್ಮದಲ್ಲಿ ಮತ್ತು ಇತರ ರೀತಿಯಲ್ಲಿಯೂ ಅನ್ವಯಿಸುತ್ತದೆ. . . . ಈಗ ನಮಗೆ ಕೊಡಲ್ಪಟ್ಟಿರುವ ಸಂದೇಶವು

ವಿಶೇಷವಾದ ದಯೆಯುಳ್ಳದಾಗಿದ್ದು, ಯಾರಿಗೆಲ್ಲಾ ಕೇಳುವ ಕಿವಿಯುಂಟೋ ಮತ್ತು ಅದನ್ನು ಪ್ರಶಂಸಿಸುವ ಹೃದಯವಿದ್ದು ಅದನ್ನು ಅಂಗೀಕರಿಸುವವರಿಗಾಗಿ ಕೊಡಲ್ಪಟ್ಟಿದೆ. ನಮ್ಮ ಸೇವೆಯೆಂಬ ಬೇಟೆಯು ಕರ್ತನ ಆಭರಣಗಳಿಗಾಗಿ, ಆತನ "ರಾಜವಂಶಸ್ಥರಾದ ಯಾಜಕರಿಗಾಗಿ", ಆತನ "ಚಿಕ್ಕ ಹಿಂಡಿಗಾಗಿ", ಆತನಿಂದ "ಆರಿಸಲ್ಪಟ್ಟವರಿಗಾಗಿದೆ"–ಏಕೆಂದರೆ ಇವರು ಜ್ಞಾನೋದಯ ಹೊಂದಿಕೊಂಡು, ಸತ್ಯದ ಜ್ಞಾನವನ್ನು ಸ್ಪಷ್ಟವಾಗಿ ತಿಳಿಯಲು ಸಹಾಯ ಮಾಡಿ, ರಾಜ್ಯದಲ್ಲಿ ತಮ್ಮ ವಿಮೋಚಕನೊಂದಿಗೆ ಸಹ–ಬಾಧ್ಯಸ್ಥರಾಗಲು, ತಮ್ಮ ಕರೆಯುವಿಕೆ ಮತ್ತು ಆಯಲ್ಪಡುವಿಕೆಯನ್ನು ದೃಢಪಡಿಸಿಕೊಳ್ಳುವದಕ್ಕೆ ನಾವು ಸಹಾಯಕರಾಗಿದ್ದೇವೆ. **R 4359 : 3**

## 27 ಮಾರ್ಚ್

**"ಈ ಪುಸ್ತಕದಲ್ಲಿ ಬರೆದಿರುವ ನ್ಯಾಯಪ್ರಮಾಣವು ನಿನ್ನ ಬಾಯಿಂದ ಹೋಗಬಾರದು; ಅದರಲ್ಲಿ ಬರೆದಿರುವ ಪ್ರಕಾರವೇ ಕೈಕೊಂಡು ನಡೆಯುವ ಹಾಗೆ ರಾತ್ರಿ ಹಗಲು ಅದನ್ನು ಧ್ಯಾನಿಸಬೇಕು." (ಯೆಹೋಶುವ 1 : 8)**

ದೈವಿಕ ನ್ಯಾಯಪ್ರಮಾಣವನ್ನು ಹಗಲು ಮತ್ತು ರಾತ್ರಿ ಧ್ಯಾನಿಸುವುದು ಅಂದರೆ ಅದು ಖಂಡಿತವಾಗಿಯೂ ಅರ್ಥಗತವಾದ ಭಾಷೆಯೆಂದು ತಿಳಿದುಕೊಳ್ಳಬಾರದು–ನಾವು ಹಗಲು ಅಥವಾ ರಾತ್ರಿಯಲ್ಲಿ ಸತ್ಯವೇದವನ್ನು ಧ್ಯಾನಿಸುವುದನ್ನು ಬಿಟ್ಟು ಬೇರೆ ಏನ್ನನ್ನೂ ಮಾಡಬಾರದು ಎಂದು ಅರ್ಥವಲ್ಲ. ನಮ್ಮ ಕರ್ತನು ಹೇಳಿದಕ್ಕೆ ಅರ್ಥವೇನೆಂದರೆ, ನಮ್ಮ ಜೀವನದ ಎಲ್ಲಾ ನಡವಳಿಕೆಗಳಲ್ಲಿ ನಾವು ಆತನವರು ಎಂಬ ಭಾವನೆ, ಎಲ್ಲಾ ವಿಷಯಗಳಲ್ಲಿ ಆತನೇ ನಮಗೆ ಮಾರ್ಗದರ್ಶಿ, ನಿರ್ದೇಶಕ, ನಮ್ಮ ಜೀವನದ ಮತ್ತು ಅದರ ಆಸಕ್ತಿಯ ವಿಷಯದಲ್ಲಿ ಹಗಲಿನಲ್ಲಾಗಲಿ ಅಥವಾ ರಾತ್ರಿಯಲ್ಲಾಗಲಿ ಬರುವ ಚಿಕ್ಕ ಚಿಕ್ಕ ವಿಷಯಗಳಲ್ಲೂ ಕರ್ತನ ಚಿತ್ತವನ್ನು ಗಣನೆಗೆ ತಂದು ಅದರಂತೆ ನಡೆಯಬೇಕಾಗಿದೆ. **R 4062 : 4**

## 28 ಮಾರ್ಚ್

**"ನೀನು ಯಾವದನ್ನು ಭೂಮಿಯ ಮೇಲೆ ಕಟ್ಟುತ್ತೀಯೋ ಅದು ಪರಲೋಕದಲ್ಲಿಯೂ ಕಟ್ಟಲ್ಪಡುವದು; ನೀನು ಯಾವದನ್ನು ಭೂಮಿಯ ಮೇಲೆ ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಲ್ಪಡುವದು." (ಮತ್ತಾಯನು 16:19)**

ಆ ಕಾಲದಲ್ಲಿ ಕಟ್ಟಲ್ಪಡುವದು ಮತ್ತು ಬಿಚ್ಚಲ್ಪಡುವದು ಎಂದರೆ ಪೇತ್ರನು ಅಧಿಕಾರವನ್ನು ನಿಷೇಧಿಸುವದು ಮತ್ತು ಅನುಮತಿಸುವದನ್ನು ಘೋಷಿಸುವದಕ್ಕೆ ಸೂಚಿತವಾಗಿದೆ. ಒಬ್ಬ ಲೇಖಕನು ಹೀಗೆನ್ನುತ್ತಾನೆ: "ಯೆಹೂದ್ಯ ರಬ್ಬಿಯರಲ್ಲಿ ಕಟ್ಟುವುದು ಮತ್ತು ಬಿಚ್ಚುವುದು ಎಂಬ ಆಡು ಭಾಷೆ ಆ ಕಾಲದಲ್ಲಿ ಸಾಮಾನ್ಯವಾಗಿತ್ತು. ಅವರು ರಬ್ಬಿಯರ ಉದ್ಯೋಗದ ಶಾಸಕಾಂಗ ಮತ್ತು ನ್ಯಾಯಾಂಗ ಅಧಿಕಾರಗಳನ್ನು ಪ್ರತಿನಿಧಿಸಿದರು." ಈ ಅಧಿಕಾರವನ್ನು ಎಲ್ಲಾ ಅಪೋಸ್ತಲರು ಹಂಚಿಕೊಂಡಿದ್ದರು.[ಮತ್ತಾಯ 18 : 18, 19] ಮತ್ತು ಈ ನಂಬಿಕೆಗೆ ಕಾರಣವೇನೆಂದರೆ, ಅವರು ದೈವೀಕ ಚಿತ್ತಕ್ಕೆ ಪ್ರತಿನಿಧಿಗಳಾಗಿರುವದರಿಂದ, ನಾವು ಅಪೋಸ್ತಲರ ನಿಖರವಾದ ಪ್ರಸ್ತುತಿಗಳನ್ನು ಒಪ್ಪಿಕೋಳ್ಳುತ್ತೇವೆ. ಮತ್ತು ಅದೇ ಪ್ರಭಾವವನ್ನು ಅಥವಾ ಘನತೆಯನ್ನು ಹೊಂದಿದ್ದೇವೆ ಎಂದು ಹೇಳಿಕೊಂಡು ಅವರ ನಂತರ ಬಂದಂತಹ ಕರ್ತನ ಹಿಂಬಾಲಕರ ಸಾಕ್ಷಿಯನ್ನು ಒಪ್ಪುವಂತಿಲ್ಲ. ಅಪೋಸ್ತಲರು ಮಾತ್ರ ದೈವಿಕವಾದ ಮೇಲ್ವಿಚಾರಣೆಗೆ ಒಳಗಾದರೆಂಬ ಭರವಸೆ ನಮಗಿದೆ—ಅಂದರೆ ಅವರು ಯಾವುದನ್ನೇ ನಿಷೇಧಿಸಿದರೂ ಅಥವಾ ಅನುಮತಿಸಿದರೂ ಅದು ಪರಲೋಕದ ಮಾರ್ಗದರ್ಶನ ಮತ್ತು ಅನುಮೋದನೆಯ ಅಡಿಯಲ್ಲಿತ್ತು. **R 3789 : 6**

## 29 ಮಾರ್ಚ್

**"ಇಸ್ರಾಯೇಲ್ ಮಕ್ಕಳು ಅದನ್ನು ನೋಡಿದಾಗ ಅವರು ಒಬ್ಬರಿಗೊಬ್ಬರು—ಇದು ಮನ್ನಾ ಅಂದರು. ಯಾಕಂದರೆ ಅದು ಏನಾಗಿತ್ತೆಂದು ಅವರಿಗೆ ತಿಳಿಯಲಿಲ್ಲ. ಆಗ ಮೋಶೆಯು ಅವರಿಗೆ—ಕರ್ತನು ನಿಮಗೆ ಕೊಟ್ಟಿರುವ ರೊಟ್ಟಿಯು ಇದೇ ಎಂದು ಹೇಳಿದನು." (ವಿಮೋಚನಕಾಂಡ 16 : 15)**

ಮನ್ನಾವಿನ ಪೂರೈಕೆಯು ಕ್ರಿಸ್ತನಲ್ಲಿರುವ ಕೃಪೆಯ ಪೂರೈಕೆಗೆ ಒಂದು ಸುಂದರವಾದ ಛಾಯೆಯಾಗಿದೆ : ಅದನ್ನು ಪ್ರತಿದಿನ ಸಂಗ್ರಹಿಸಬೇಕಾಗಿತ್ತು; ಅದನ್ನು ಮರುದಿನ ಇಡುವಂತಿಲ್ಲ. ಇದರಿಂದ ನಮಗೆ ಪಾಠವೇನೆಂದರೆ ಯಾರೆಲ್ಲಾ ದೇವರ ಕೃಪೆ ಮತ್ತು ಸತ್ಯವನ್ನು ಹೆಚ್ಚಾಗಿ ಸಂಗ್ರಹ ಮಾಡುತ್ತಾರೋ ಅವರು ಅದನ್ನು ಮತ್ತೊಬ್ಬರಿಗೆ ವಿನಿಯೋಗ ಮಾಡುವವರಾಗಿಯೂ ಸಹ ಇರುಬೇಕು. ಇದನ್ನು ಒದಗಿಸುವದು ಒಂದು ಆತ್ಮೀಕ ಶ್ರಿಮಂತ ವರ್ಗದವರನ್ನು ಸೃಷ್ಟಿಸುವದಕ್ಕಾಗಿ ಇರುವ ದೃಷ್ಟಿಯಿಂದಲ್ಲ. ಇದಕ್ಕೆ ಉದಾಹರಣೆಯನ್ನು ನಾವು ಅನೇಕ ಸಾರಿ ನೋಡಿದ್ದೇವೆ: ಯಾರೆಲ್ಲಾ ತಮಗಾಗಿ ಮಾತ್ರ ವಾಕ್ಯಗಳನ್ನು ಅಧ್ಯಯನ ಮಾಡುತ್ತಾರೋ ಮತ್ತು ಸಹೋದರರೊಂದಿಗೆ ಸೇರಿ ಅವರು ಪಡೆದ ಆಶೀರ್ವಾದಗಳನ್ನು

ಹಂಚಿಕೊಳ್ಳುವದಿಲ್ಲವೋ, ನಾವು ನಿರೀಕ್ಷಿಸುವಂತೆ ಅವರು ಸತ್ಯದಲ್ಲಿ ಬಹುಕಾಲ ಇರುವದಿಲ್ಲ. ನಾವು ಮನ್ನಾವನ್ನು ಪ್ರತಿದಿನ ಸಂಗ್ರಹಣೆ ಮಾಡಬೇಕು: ನಾವು ಸೇವಿಸುವ ಪರಲೋಕದ ರೊಟ್ಟಿಯು ನಿರಂತರವಾದ ಸವಲತ್ತು ಆಗಿರಬೇಕು, ಇಲ್ಲದಿದ್ದರೆ ನಮ್ಮ ಜೀವನದ ಪಯಣಕ್ಕೆ ಬೇಕಾದ ಶಕ್ತಿ ಇರುವದಿಲ್ಲ: ಆದರೆ ಅದರ ಜೊತೆಗೆ ನಾವು ಕರ್ತನೊಂದಿಗೆ ಶಕ್ತಿಯುತವಾಗಿರಬೇಕು ಮತ್ತು ಒಂದು ವೇಳೆ ಅನುಮತಿಸಲ್ಪಟ್ಟರೆ ಬೇರೆಯವರಿಗೆ ದೈವಿಕ ಕೃಪೆಯನ್ನು ಒದಗಿಸುವಲ್ಲಿ ಸಹಾಯಕರಾಗಿರಬೇಕು. **R 4012 : 5**

## 30 ಮಾರ್ಚ್

**"ಅವರು ದೇವರ ಸೇವಕನಾದ ಮೋಶೆಯ ಹಾಡನ್ನೂ ಕುರಿಮರಿಯಾದಾತನ ಹಾಡನ್ನೂ ಹಾಡುತ್ತಾ– ಸರ್ವಶಕ್ತನಾಗಿರುವ ದೇವರಾದ ಕರ್ತನೇ, ನಿನ್ನ ಕ್ರಿಯೆಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ: ಪರಿಶುದ್ಧರ ಅರಸನೇ, ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ." ( ಪ್ರಕಟನೆ 15 : 3 )**

ನಾವು ಎಷ್ಟು ಅಧಿಕವಾಗಿ ದೈವಿಕ ನೀತಿಯನ್ನು ಮತ್ತು ನಮ್ಮ ಮನುಷ್ಯ ಜಾತಿಗೆ ವಿರೋಧವಾಗಿರುವ ನೀತಿಯುಳ್ಳ ಮರಣದಂಡನೆಯನ್ನು ಕುರಿತು ಪ್ರಶಂಸಿಸುತ್ತೇವೋ ಅಷ್ಟು ಅಧಿಕವಾಗಿ ನಮ್ಮ ಮೇಲಿರುವ ದೇವರ ಪ್ರೀತಿ ಮತ್ತು ದಯೆಯನ್ನು ಕುರಿತು ಪ್ರಶಂಸಿಸುತ್ತೇವೆ ಮತ್ತು ಒಬ್ಬನಾದರೂ ನಾಶವಾಗುವದು ಆತನ ಚಿತ್ತವಲ್ಲ ಎನ್ನುವ ವಿಷಯವು ನಮಗೆ ಸಂತೋಷವನ್ನುಂಟು ಮಾಡುತ್ತದೆ. ಮತ್ತು ಎಲ್ಲರೂ ಆತನ ಕಡೆಗೆ ತಿರುಗಿ ಬದುಕಬೇಕು–ನಿತ್ಯ ಜೀವವನ್ನು ಹೊಂದಬೇಕು ಎಂಬ ಅಗಲವಾದ, ಎತ್ತರವಾದ, ಆಳವಾದ ಏರ್ಪಾಡನ್ನು ಆತನು ಮಾಡಿದ್ದಾನೆ. ಈ ದಯೆಯ ಏರ್ಪಾಡು ಇದೆಯೆಂದು ಪಾಪವನ್ನು ಅಲಕ್ಷ್ಯ ಮಾಡುವಂತಿಲ್ಲ ಅಥವಾ ಪಾಪಿಯು ಅದನ್ನು ಅಲಕ್ಷ್ಯ ಮಾಡಲು ಅನುಮತಿಸುವಂತಿಲ್ಲ. ವಿಮೋಚನೆ ಹೊಂದಿದವರು ಅದನ್ನು ಅರಿತಿರಬೇಕು, ಪ್ರಶಂಸಿಸಬೇಕು ಮತ್ತು ಅವರು ಬಿದ್ದು ಹೋದ ಸ್ಥಿತಿಯನ್ನು, ಅವರ ಮರಣ ದಂಡನೆಯ ನ್ಯಾಯತೀರ್ಪನ್ನು ಮತ್ತು ಅವರ ಮರಳಿಪಡೆಯುವಿಕೆಗೆ ಮೊತ್ತವಾಗಿ ದೈವಿಕ ದಯೆಯೇ ಕಾರಣವೆಂದು ಪ್ರಶಂಸಿಸುವವರಾಗಬೇಕು. ಅವರು ಈ ಪಾಠವನ್ನು ಕಲಿಯದ ಹೊರತು ಅವರು ಎಂದಿಗೂ ದೈವಿಕ ಏರ್ಪಾಡುಗಳನ್ನು ಪ್ರಶಂಸಿಸಲಾರರು ಮತ್ತು ಈ ನಿಬಂಧನೆಯ ಮೇಲೆ ಮಾತ್ರ ದೇವರು ಅವರಿಗೆ ನಿತ್ಯ ಜೀವವನ್ನು ಅನುಗ್ರಹಿಸಲು ಸಾಧ್ಯ–ದೇವರ ಕೃಪೆ, ಕ್ಷಮಾಪಣೆ ಮತ್ತು ಅವರು

ಆತನಿಗೆ ಹಾಗೂ ಆತನ ನೀತಿಯ ನಿಯಮಗಳಿಗೆ ವಿಧೇಯರಾಗುವದಕ್ಕೆ ಇರುವ ನಿಬಂಧನೆಗಳು ಇದಾಗಿದೆ. **R 3729 : 5**

## 31 ಮಾರ್ಚ್

**"ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಶಕ್ತಿಯುಳ್ಳದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದೂ... ಆಗಿದೆ." ( ಇಬ್ರಿಯರಿಗೆ 4 : 12 )**

ಪ್ರತಿಯೊಂದು ಸಂದರ್ಭದಲ್ಲೂ ದೇವರ ವಾಕ್ಯವು ಅಡಚಣೆ ಮತ್ತು ಗದ್ದಲವನ್ನುಂಟು ಮಾಡುತ್ತಿದೆ. ಅದು ಹಳೆಯ ಒಡಂಬಡಿಕೆಯ ಪ್ರವಾದಿಗಳ ಮೂಲಕವಾಗಿರಬಹುದು ಅಥವಾ ಈ ಯುಗದ ಅಪೋಸ್ತಲರು ಮತ್ತು ಸುಧಾರಕರ ಮೂಲಕವಾಗಿರಬಹುದು, ಅದನ್ನು ಪರಲೋಕದಿಂದ ದೇವರೇ ಮಾತಾಡುತ್ತಿದ್ದಾರೆ ಮತ್ತು ಆತನ ವಾಕ್ಯವು ಸಜೀವವಾಗಿಯೂ ಮತ್ತು ಶಕ್ತಿಯುತವಾಗಿದೆ, ಯಾವುದೇ ಮಾನವ ಸಂದೇಶವನ್ನು ಮೀರಿ ಹುಡುಕುವಂಥದಾಗಿದೆ. ಅದು ಪ್ರತ್ಯೇಕಿಸುತ್ತದೆ, ವ್ಯತ್ಯಾಸವನ್ನುಂಟು ಮಾಡುತ್ತದೆ; ಸತ್ಯದ ಮೇಲೆ ದಾಹವುಳ್ಳವರನ್ನು ಕಂಡುಹಿಡಿದು, ಬೇರೆಯವರನ್ನು ಪ್ರತ್ಯೇಕಿಸುತ್ತದೆ; ಅಪೋಸ್ತಲನು ಹೇಳಿರುವಂತೆ ನಾವು ಏನೇ ಮಾಡಿದರೂ ಬೆಳಕು ಅದನ್ನು ಪ್ರಕಟಗೊಳಿಸುತ್ತದೆ. ಜನರ ಮನಸ್ಥಿತಿಯನ್ನು ಸತ್ಯವೆಂಬ ಬೆಳಕು ಅವರು ಬೆಳಕಿನವರೋ ಅಥವಾ ಕತ್ತಲೆಯವರೋ ಎಂದು ಪ್ರಕಟಪಡಿಸುತ್ತದೆ. ನಮ್ಮ ಅಪೂರ್ಣ ನ್ಯಾಯತೀರ್ಪಿನಲ್ಲಿ, ನಿಜವಾಗಿಯೂ ಬೆಳಕಿನವರಲ್ಲದವರನ್ನು ಬೆಳಕಿನ ಮಕ್ಕಳೆಂದೂ, ಕೆಲವರನ್ನು ಅವರು ಸರಿಯಾದ ಹೃದಯವುಳ್ಳವರಾಗಿದ್ದರೂ ಸಹ ಕತ್ತಲೆಯ ಮಕ್ಕಳೆಂದು ಅಂದುಕೊಳ್ಳುವದಕ್ಕೆ ಸಾಧ್ಯತೆ ಇದೆ. ಕರ್ತನು ತನ್ನವರನ್ನು ಅರಿತಿದ್ದಾನೆ; ಯಾರು ಯಾರು ಆತನ ಕಡೆ ಇದ್ದಾರೆ ಮತ್ತು ಯಾರು ಯಾರು ಕತ್ತಲೆಯ ಕಡೆಯಿದ್ದಾರೆಂದು ಆತನು ಪ್ರಕಟಪಡಿಸುತ್ತಾನೆ; ನಾವು ಸಂತೃಪ್ತಿಯುಳ್ಳವರಾಗಿರೋಣ ಮತ್ತು ಸುಗ್ಗಿಯ ಕೆಲಸದಲ್ಲಿ ಸತ್ಯವೆಂಬ ಕುಡುಗೋಲು ಬೇರ್ಪಡುವಿಕೆಯ ಕಾರ್ಯವನ್ನು ಮಾಡಲಿ ಮತ್ತು ನಾವು ಸ್ವಂತ ಚಿತ್ತವುಳ್ಳವರಾಗಿರದೆ ಮತ್ತು ಸ್ವಂತ ಅಭಿಪ್ರಾಯವುಳ್ಳವರಾಗಿರದೆ ಕರ್ತನಿಗಾಗಿ ಕಾದಿರೋಣ. ದೈವಿಕ ಜ್ಞಾನ ಮತ್ತು ಪ್ರೀತಿಯೊಂದಿಗೆ ಬೇರ್ಪಡಿಸುವಿಕೆಗಾಗಿ ತಾಳ್ಮೆಯಿಂದ ಕಾದಿರೋಣ – ಕೊನೆಯಲ್ಲಿ ಆತನ ಯೋಜನೆಯು ಅತ್ಯುತ್ತಮವಾಗಿರುತ್ತದೆ ಎಂದು ನಮಗೆ ಗೊತ್ತಿದೆ. **R 3860 : 6**

## 1 ಏಪ್ರಿಲ್

**"ಕರ್ತನ ಗುಟ್ಟು ಆತನಿಗೆ ಭಯಪಡುವವರೊಂದಿಗೆ ಅದೆ; ತನ್ನ ಒಡಂಬಡಿಕೆಯನ್ನು ಆತನು ಅವರಿಗೆ ತಿಳಿಸುವನು." ( ಕೀರ್ತನೆಗಳು 25 :14 )**

ಯಾರೆಲ್ಲಾ ವಾಕ್ಯವನ್ನು ಪ್ರಾಮಾಣಿಕತೆ ಮತ್ತು ಯಥಾರ್ಥತೆಯಿಂದ ಹುಡುಕುತ್ತಾರೋ ಅವರೆಲ್ಲರಿಗೂ ಆ ಅದ್ಭುತವಾದ ಒಡಂಬಡಿಕೆಯನ್ನು ತೋರಿಸಲಾಗುವುದು. ಅದು ನಮಗೆ ಭರವಸೆ ನೀಡುವುದೇನೆಂದರೆ ನಮ್ಮ ಪ್ರಿಯ ವಿಮೋಚಕನು ನಮಗಾಗಿ ಮತ್ತು ಲೋಕದ ವಿಮೋಚನೆಗಾಗಿ ತನ್ನನ್ನು ತಗ್ಗಿಸಿಕೊಂಡನು ಮತ್ತು ಈಗ ಉನ್ನತಿಗೆ ಏರಿಸಲ್ಪಟ್ಟಿದ್ದಾನೆ. ಹಾಗೆಯೇ ನಾವು ನಂಬಿಗಸ್ತರಾಗಿ ಈಗ ಬಾಧೆಪಟ್ಟರೆ, ಮುಂದೆ ಆತನ ಮಹಿಮೆಯಲ್ಲಿ ಪಾಲುಹೊಂದುತ್ತೇವೆ ಮತ್ತು ಆತನೊಂದಿಗೆ ರಾಜ್ಯದಲ್ಲಿ ಸಹ–ಕೆಲಸದವರಾಗಿದ್ದು ಲೋಕದ ಎಲ್ಲಾ ಸಂತತಿಯನ್ನು ಆಶೀರ್ವದಿಸುವೆವು. ಓಹ್, ಎಂತಹ ಕೃಪೆಯ ಐಶ್ವರ್ಯ! ಎಂತಹ ಪ್ರೀತಿಪೂರ್ವಕ ಕರುಣೆ! ಎಂತಹ ಕೋಮಲ–ದಯೆ! ಎಂತಹ ದೈವಿಕ ಜ್ಞಾನದ, ಕೌಶಲ್ಯದ, ನೀತಿಯ, ಪ್ರೀತಿಯ ಮತ್ತು ಶಕ್ತಿಯ ಸಾಕ್ಷಿಯಾಗಿದೆ! ಹೇಗೆ ಈ ದೃಷ್ಟಿಕೋನವು ತಂದೆಯ ಏಕೈಕ ಮಗನನ್ನು ನಮ್ಮ ವಿಮೋಚಕನಾಗಿಯೂ, ನಮ್ಮ ಕರ್ತನೂ ಮತ್ತು ಶಿರಸ್ಸನ್ನಾಗಿಯೂ ಸಹ ತೋರಿಸುತ್ತದೆ. ಅಂದ ಹಾಗೆ ವಾಗ್ದಾನದ ಪ್ರಕಾರ ಆತನು ಪ್ರೀತಿಯುಳ್ಳ ದೇವರ ಮುಂದೆ ನಮ್ಮನ್ನು ಕ್ರಿಸ್ತನ ವಧುವನ್ನಾಗಿಯೂ, ನಿರ್ದೋಷಿಯನ್ನಾಗಿಯೂ ನಿಷ್ಕಳಂಕರನ್ನಾಗಿಯೂ ಸಮರ್ಪಿಸುತ್ತಾನೆ. ಈ ದೃಷ್ಟಿಕೋನದಿಂದ ನೋಡುವಾಗ ಯೇಸುವಿನ ಗುರುತು ಅಂದರೆ ನಮ್ಮ ಪ್ರಿಯ ವಿಮೋಚಕನು, ದೇವರಿಂದ ಕಳುಹಿಸಲ್ಪಟ್ಟವನು, ಲೋಕದ ರಕ್ಷಕನು. ಹಾಗೆಂದು "ನಮ್ಮ ದೇವರಾದ ಯೆಹೋವನು ಒಬ್ಬನೇ (ದೇವರು)" ಎಂಬ ಆಜ್ಞೆಯ ವಾಕ್ಯವು ಅವಹೇಳನದ ಮಾತಲ್ಲ. ಏಕೆಂದರೆ ಅಪೋಸ್ತಲರು ನಮಗೆ ಭರವಸೆ ನೀಡುವದೇನೆಂದರೆ ದೈವಿಕ ಅಧಿಕಾರದ ಪ್ರಕಾರ ತಂದೆಗೆ ಭಯಪಡುವಂತೆ ಮಗನಿಗೂ ಸಹ ಭಯಪಡಬೇಕು– ಆತನನ್ನು ತಂದೆ ಎಂದು ಭಯಪಡಬಾರದು, ಆದರೆ ಮಗನೆಂದು ಭಯಪಡಬೇಕು. ಏಕೆಂದರೆ ತಂದೆಯು ಮಗನನ್ನು ಎಲ್ಲಾ ವಿಷಯಕ್ಕೂ ಭಾಧ್ಯಸ್ಥನಾಗಿಯೂ ಮತ್ತು ತಂದೆಯೊಂದಿಗೆ ಜೊತೆಗಾರನಾಗಿದ್ದು ಭೂಮಿಯ ಎಲ್ಲಾ ಸಂತತಿಯನ್ನು ಆಶೀರ್ವದಿಸುವವನು ಮತ್ತು ಸಾವಿರ ವರ್ಷಗಳ ನಂತರ ಕ್ರಿಸ್ತನು ರಾಜ್ಯವನ್ನು ದೇವರಿಗೆ ಒಪ್ಪಿಸುವನು, ಆಗ ತಂದೆಯಾದ ದೇವರು ಸಮಸ್ತರಲ್ಲಿಯೂ ಸಮಸ್ತವೂ ಆಗಿರುವನು (1 ಕೊರಿಂಥದವರಿಗೆ. 15:28) **R 4052 : 1**

## 2 ಏಪ್ರಿಲ್

**"ಕರ್ತನಿಗೆ ಪ್ರಿಯನು ಸುರಕ್ಷಿತವಾಗಿ ಆತನ ಬಳಿಯಲ್ಲಿ ವಾಸ ಮಾಡುವನು." ( ಧರ್ಮೋಪದೇಶಕಾಂಡ 33 : 12 )**

ಒಂದು ಮಗು ಲೌಕಿಕ ತಂದೆಯನ್ನು ಹೇಗೆ ನಂಬುತ್ತದೋ ಹಾಗೆಯೇ ಯಾರೆಲ್ಲಾ ಪರಲೋಕದ ತಂದೆಯನ್ನು ನಂಬುತ್ತಾರೋ ಅಂಥವರು ಮಾತ್ರ ಈ ಇಕ್ಕಟ್ಟಾದ ಮಾರ್ಗದಲ್ಲಿ ಉತ್ತಮ ಪ್ರಗತಿಯನ್ನು ಹೊಂದಲು ಸಾಧ್ಯ ಮತ್ತು ಯಾರೆಲ್ಲಾ ಆತನವರಾಗಿದ್ದಾರೋ ಅವರಿಗೆ ಧೈರ್ಯ ಮತ್ತು ವಿಶ್ವಾಸವಿರುತ್ತದೆ ಮತ್ತು ಇವುಗಳಿಲ್ಲದೆ ನಮಗೆ ವಾಗ್ದಾನ ಮಾಡಿರುವ ಪರಿಪೂರ್ಣ ಪ್ರೀತಿ ಮತ್ತು ನಮಗೆ ಹೃದಯದಲ್ಲಿ ವಿಶ್ರಾಂತಿ ಇರಲು ಸಾಧ್ಯವಿಲ್ಲ. "ನಿಮ್ಮ ನಂಬಿಕೆಯಂತೆ ನಿಮಗಾಗಲಿ" ಎಂಬದೇ ಆ ವಾಗ್ದಾನವಾಗಿದೆ. ದೇವರಿಗೆ ಹತ್ತಿರ ಮತ್ತು ಇನ್ನೂ ಹತ್ತಿರವಾಗುವ ಬಯಕೆ ನಮ್ಮ ಹೃದಯದಲ್ಲಿ ಇರುಬೇಕು, ಹಾಗಿಲ್ಲದಿದ್ದರೆ ನಾವು ಮುಂದುವರಿಯಲು ಮತ್ತು ಕ್ರಿಸ್ತನಲ್ಲಿ ನಮ್ಮ ಸವಲತ್ತು ಪಡೆಯಲು ವಿಫಲರಾಗುತ್ತೇವೆ. ನೀತಿಗಾಗಿ ನಮ್ಮ ಹಸಿವು ಮತ್ತು ದಾಹವನ್ನು ವ್ಯಕ್ತಪಡಿಸುವ ಬಯಕೆಯನ್ನು ಕರ್ತನು ನಿರೀಕ್ಷಿಸುತ್ತಾನೆ. ಕರ್ತನು ಅವರೊಂದಿಗೆ ನಿಶ್ಚಿತಾರ್ಥವನ್ನು ಮಾಡುವ ಮೊದಲು ಅವರು ಅಂತಹ ಬಯಕೆಯಿಂದ ತುಂಬಿರಬೇಕೆಂದು ನಿರೀಕ್ಷಿಸುತ್ತಾನೆ. **R 5425 : 1**

## 3 ಏಪ್ರಿಲ್

**"ಕರ್ತನ ಆಶೀರ್ವಾದವು ಐಶ್ವರ್ಯವನ್ನುಂಟು ಮಾಡುವದು. ಅದರೊಂದಿಗೆ ಆತನು ಯಾವ ದುಃಖವನ್ನೂ ಸೇರಿಸುವದಿಲ್ಲ." ( ಜ್ಞಾನೋಕ್ತಿಗಳು 10 : 22 )**

ನಮ್ಮ ಕರ್ತನ ಶ್ರೇಷ್ಠವಾದ ಉದಾಹರಣೆಯನ್ನು ನಾವು ನೋಡುವಾಗ, ಆತನು ಎಲ್ಲದರಲ್ಲಿಯೂ ಐಶ್ವರ್ಯವಂತನಾಗಿದ್ದೂ ಸಹ ಆತನು ಎಲ್ಲವನ್ನೂ ಕೊಟ್ಟುಬಿಟ್ಟನು ಎಂದು ನೋಡುವಾಗ ನಾವು ಅದರಲ್ಲಿ ಸಂತೋಷಿಸುತ್ತೇವೆ ಮತ್ತು ನಮಗೆ ಮನವರಿಕೆಯಾಗುವುದೇನೆಂದರೆ ಆತನ ಬಲಿಯು ಎಷ್ಟು ದೊಡ್ಡದ್ದಾಗಿತ್ತೋ ಅಷ್ಟೇ ಅಳತೆಯಲ್ಲಿ ಆತನ ಬಹುಮಾನವೂ ಅತ್ಯಧಿಕವಾಗಿರುತ್ತದೆ. ಅದೇ ರೀತಿ ಅಪೋಸ್ತಲನಾದ ಪೌಲನ ಶ್ರೇಷ್ಠವಾದ ಉದಾಹರಣೆಯನ್ನು ನೋಡುವಾಗ, ಆತನು ಸಾಕಷ್ಟು ಸಂಪತ್ತುಗಳಾದ ಸಾಮರ್ಥ್ಯ, ತಲಾಂತು, ಪ್ರಭಾವ ಮತ್ತು ಬಹುಶಃ ಹಣಕಾಸಿನಲ್ಲಿಯೂ ಸಹ ಐಶ್ವರ್ಯವಂತನಾಗಿದ್ದು, ಇವೆಲ್ಲವನ್ನು ಸ್ವಚಿತ್ತದಿಂದ,

ಸಂತೋಷದ ಬಲಿಯಿಂದ, ಕರ್ತನ ಪಾದದಲ್ಲಿ ಮುಡುಪಾಗಿ ಇಟ್ಟನು. ಅವೆಲ್ಲವನ್ನು ಸಂತೋಷದಿಂದ ದೇವರ ಸೇವೆಯಲ್ಲಿ, ಸತ್ಯದ ಸೇವೆಯಲ್ಲಿ, ಸಹೋದರರ ಸೇವೆಯಲ್ಲಿ ಮುಡುಪಾಗಿ ಇಟ್ಟನು, ಇದು ನಮ್ಮ ಹೃದಯಗಳಿಗೆ ಸಂತೋಷವನ್ನುಂಟು ಮಾಡುತ್ತದೆ, ನಾವು ಖಚಿತವಾಗಿ ಭಾವಿಸುವದೇನೆಂದರೆ ಅಷ್ಟು ಐಶ್ವರ್ಯವಂತನಾಗಿದ್ದವನು ಮತ್ತು ಅಷ್ಟೊಂದು ನಂಬಿಗಸ್ತಿಕೆಯಿಂದ ತನ್ನ ಐಶ್ವರ್ಯಗಳನ್ನು ಖರ್ಚು ಮಾಡಿದವನು, ರಾಜ್ಯವು ಸ್ಥಾಪಿಸಲ್ಪಟ್ಟು ವ್ಯಕ್ತವಾಗುವಾಗ ಆತನು ಅಧಿಕ ಪ್ರಕಾಶಮಾನವಾಗಿ ಹೊಳೆಯುವನು. ಮತ್ತು ಅದೇ ರೀತಿ ಸಂದೇಹವಿಲ್ಲದೆ ರಾಜವಂಶದ ಯಾಜಕರೊಂದಿಗೂ ಇರುವದು–ಎಷ್ಟರ ಮಟ್ಟಿಗೆ ಅವರ ಸ್ವತ್ತನ್ನು ತ್ಯಾಗ–ಬಲಿಯಾಗಿ ಸಲ್ಲಿಸುತ್ತಾರೋ ಅಷ್ಟರ ಮಟ್ಟಿಗೆ ಅವರೂ ಸಹ ಪ್ರಕಾಶಮಾನವಾಗಿ ಹೊಳೆಯುವರು. ಯಾರೆಲ್ಲಾ ಕರ್ತನ ನಿಮಿತ್ತ, ಸತ್ಯದ ನಿಮಿತ್ತ, ಅತ್ಯಧಿಕವಾದ ಅವಮಾನವನ್ನು, ಅತ್ಯಧಿಕ ಅಪಕೀರ್ತಿಯನ್ನು, ಅತ್ಯಧಿಕ ಶೋಧನೆಗಳನ್ನು, ಅತ್ಯಧಿಕ ಉಪದ್ರವಗಳನ್ನು ಈಗಿನ ಜೀವಿತದಲ್ಲಿ ಸಂತೋಷವಾಗಿ ಸಹಿಸಿಕೊಳ್ಳುತ್ತಾರೋ ಮತ್ತು ಹೆಚ್ಚಾಗಿ ಯಜಮಾನನ ಹಾಗೆ ಮತ್ತು ಆತನ ಮಾದರಿಯ ಹಾಗೆ ಅನುಭವವನ್ನು ಪಡೆದುಕೊಳ್ಳುತ್ತಾರೋ, ನಾವು ನಿಶ್ಚಯವಾಗಿ ಹೇಳಬಹುದೇನೆಂದರೆ, ಅಂತಹ ತ್ಯಾಗ–ಬಲಿಗಳಲ್ಲಿ ವ್ಯಕ್ತವಾದ ಅವರ ನಂಬಿಗಸ್ತಿಕೆಗೆ ಅನುಗುಣವಾಗಿ, ಅವರಿಗೆ ಭವಿಷ್ಯದಲ್ಲಿ ಅತ್ಯಧಿಕ ಬಹುಮಾನಗಳಿರುವುದು–ಅಪೋಸ್ತಲನು ಘೋಷಿಸಿದಂತೆ "ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಹೆಚ್ಚು ಕಡಿಮೆಯುಂಟಷ್ಟೆ." **R 2762 : 3**

## 4 ಏಪ್ರಿಲ್

**"ಬುದ್ಧಿ ಹೀನರು ಬುದ್ಧಿವಂತೆಯರಿಗೆ–ನಿಮ್ಮ ಎಣ್ಣೆಯಲ್ಲಿ ನಮಗೆ ಕೊಡಿರಿ ಅಂದರು." ( ಮತ್ತಾಯನು 25 : 8 )**

ಯಾರೇ ಆಗಲಿ ಈ ಪವಿತ್ರಾತ್ಮವನ್ನು ಅತ್ಯಧಿಕವಾಗಿ ಪಡೆದುಕೊಳ್ಳಲು ಸಾಧ್ಯವಿಲ್ಲ, ಯಾರೇ ಆಗಲಿ ತನ್ನ ಸ್ವಂತ ಉಪಯೋಗಕ್ಕಾಗಿ ಅತಿಯಾದ ಪೂರೈಕೆಯನ್ನು ಹೊಂದಿ, ತಮ್ಮಲ್ಲಿರುವ ಸಮೃದ್ಧಿಯನ್ನು ಬೇರೆಯವರಿಗೆ ಒದಗಿಸಲು ಸಾಧ್ಯವಿಲ್ಲ. ಮದಲಿಂಗನು ಮುಂಗಡವಾಗಿ ಯಾರೆಲ್ಲಾ ಆತನೊಂದಿಗೆ ಮದುವೆಗೆ ಹೋಗಲು ಆಹ್ವಾನಿಸಿದ್ದಾನೋ ಅವರೆಲ್ಲರೂ ಸರಿಯಾಗಿ ಸಜ್ಜುಗೊಳ್ಳಲು ಹೇರಳವಾದ ಏರ್ಪಾಡನ್ನು ಮಾಡಿದ್ದಾನೆ, ವಸ್ತ್ರ ಮತ್ತು ದೀಪಗಳೊಂದಿಗೆ ಮಾತ್ರವಲ್ಲ, ಆದರೆ ಎಣ್ಣೆಯೊಂದಿಗೆ ಸಹ ಏರ್ಪಾಡು ಮಾಡಿದ್ದಾನೆ; ಯಾರಾದರು

ಎಣ್ಣೆಯನ್ನು ಸಂಗ್ರಹಿಸುವಲ್ಲಿ ಅಜಾಗರೂಕರಾದರೆ, ಅಂತವರು ಬಾಗಿಲು ಮುಚ್ಚುವುದರೊಳಗೆ ಮದಲಿಂಗನ ಜೊತೆ ಪ್ರವೇಶಿಸುವದಕ್ಕೆ ಅನರ್ಹರಾಗಿದ್ದಾರೆ. ಈ ಸಾಮ್ಯದಲ್ಲಿ ಕರ್ತನು ಸೂಚಿಸಿರುವ ಮೂಲತತ್ವವು ಇದೇ ಆಗಿದೆ, ಅಂದರೆ ಯಾರೆಲ್ಲಾ ರಾಜ್ಯದಲ್ಲಿ ಪ್ರವೇಶಿಸಿ ಅದರ ಮಹಿಮೆಯಲ್ಲಿ ಪಾಲು ಹೊಂದಲು ನಿರೀಕ್ಷಿಸುತ್ತಾರೋ, ಅವರು ಮುಂಗಡವಾಗಿ ತಯಾರು ಮಾಡಬೇಕು. ಒಂದು ವೇಳೆ ಅವರು ಬಾಗಿಲು ಮುಚ್ಚುವವರೆಗೂ ಕಾಯುತ್ತಿದ್ದರೆ, ಅವರು ಎಷ್ಟೇ ಅಪೇಕ್ಷೆಯುಳ್ಳವರಾಗಿದ್ದರೂ, ಎಷ್ಟೇ ಆತಂಕಗೊಂಡರೂ, ಅವರು ತಯಾರಾಗಲು ಸಾಧ್ಯವಿಲ್ಲ—ಏಕೆಂದರೆ ತಯಾರಿಗಾಗಿ ಸಮಯ, ತಾಳ್ಮೆ ಮತ್ತು ಕಾಳಜಿ ಬೇಕಾಗುತ್ತದೆ. **R 3868 : 5**

## 5 ಏಪ್ರಿಲ್

**"ಹಗಲಿನಲ್ಲಿ ಕರ್ತನು ತನ್ನ ಪ್ರೀತಿ, ಕರುಣೆಯನ್ನು ಆಜ್ಞಾಪಿಸುತ್ತಾನೆ; ರಾತ್ರಿಯಲ್ಲಿ ನನ್ನೊಂದಿಗೆ ಆತನ ಹಾಡೂ...**[ಇರುವದು.]**" ( ಕೀರ್ತನೆಗಳು 42 : 8 )**

ಒಂದು ವೇಳೆ ನಾವು ಎಲ್ಲಿದ್ದೇವೋ ಅಲ್ಲಿಂದಲೇ, ನಮಗಿರುವ ಅತ್ಯಂತ ಅನುಕೂಲಕರ ಸಂದರ್ಭಗಳು ಮತ್ತು ಪರಿಸ್ಥಿತಿಗಳಲ್ಲಿ ದೇವರನ್ನು ಸ್ತುತಿಸಲು ಸಿದ್ಧರಿಲ್ಲದೆ ಹೋದರೆ, ನಮಗೆ ವ್ಯತ್ಯಾಸವಾಗಿ ಬರುವ (ಕಷ್ಟದ) ಸಂದರ್ಭಗಳು ಮತ್ತು ಪರಿಸ್ಥಿತಿಗಳಲ್ಲಿ ಆತನನ್ನು ಸ್ತುತಿಸುವ ಸಾಧ್ಯತೆ ಇರುವದಿಲ್ಲ. ದಾರ್ಯಾವೆಷನು ಅರಮನೆಯಲ್ಲಿ ನಿದ್ರಿಸುವದಕ್ಕಿಂತ ದಾನಿಯೇಲನು ಸಿಂಹದ ಗವಿಯಲ್ಲಿ ಚೆನ್ನಾಗಿ ನಿದ್ರಿಸಿದನು; ಆತನಿಗಾದ ಸ್ಥಳವಾಗಿರುವ ಸಿಂಹದ ಗವಿಯಲ್ಲಿ ಯಾರು ವಿಶ್ರಾಂತಿಯನ್ನು ಕಾಣಲಾರನೋ, ಆತನನ್ನು ಅರಮನೆಯಲ್ಲಿ ಇಟ್ಟರೂ ವಿಶ್ರಾಂತಿಯನ್ನು ಪಡೆದುಕೊಳ್ಳಲಾರನು. ಆದ್ದರಿಂದ ಮನುಷ್ಯನ ಸ್ವಾರ್ಥತೆಯನ್ನು ಬದಲಾಯಿಸಬೇಕೇ ಹೊರತು ಆತನ ಸಂದರ್ಭಗಳು ಅಥವಾ ಆತನ ಆಸ್ತಿ ಅಲ್ಲ, ಮನುಷ್ಯನ ಸ್ವಾರ್ಥತೆಯನ್ನು ಬದಲಾಯಿಸಿದಾಗ ಮಾತ್ರ ಆತನ ಹೃದಯದಲ್ಲಿ ಸಂತೋಷ ಮತ್ತು ಸ್ತುತಿ—ಸ್ತೋತ್ರಗಳು ಉಕ್ಕಿ ಹರಿಯುವದು. **R 3123 : 4**

## 6 ಏಪ್ರಿಲ್

**"ಆದರೆ ಕರ್ತನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಅವರು ಹದ್ದುಗಳಂತೆ ರೆಕ್ಕೆಗಳಿಂದ ಬೆಟ್ಟವನ್ನು ಏರುವರು. ಓಡಿ ದಣಿಯರು, ನಡೆದು ಬಳಲರು." ( ಯೆಶಾಯ 40 : 31 )**

ಕ್ರಿಸ್ತನ ಶರೀರದ ಪ್ರತಿಯೊಬ್ಬ ಸದಸ್ಯನು, ದೇವರ ನಿಜವಾದ ಇಸ್ರಾಯೇಲ್ಯನು, ನಮ್ಮ ಅರಣ್ಯ ಪ್ರಯಾಣದ ಪ್ರತಿಯೊಂದು ಅನುಭವಗಳಲ್ಲಿಯೂ ಕರ್ತನ ಮಾರ್ಗದರ್ಶನವನ್ನು ನಿರಂತರವಾಗಿ ಹೊಂದಲು ಸವಲತ್ತನ್ನು ಪಡೆದಿರುತ್ತಾನೆ. ನಮ್ಮ ಅನುದಿನದ ಜೀವನಾಂಶಕ್ಕಾಗಿ ಪರಲೋಕದ ಮನ್ನಾವನ್ನು ಒದಗಿಸಲಾಗಿದೆ. ನಮ್ಮ ಅನುದಿನದ ಉಲ್ಲಾಸಕ್ಕಾಗಿ ಜೀವದ ನೀರು ನಮಗೆ ಹರಿಯುತ್ತದೆ. ಅದು ಯುಗಗಳ ಬಂಡೆಯ ಹೊಡೆತದಿಂದ ಉಂಟಾಗಿದೆ. ನಾವು ಅಪಾಯದಲ್ಲಿದ್ದಾಗ ನಮ್ಮ ತಂದೆಯ ಶಿಕ್ಷಿಸುವ ಕೋಲು ನಮ್ಮನ್ನು ತಡೆಯುತ್ತದೆ ಅಥವಾ ನಾವು ನಿಷೇಧಿತ ಮಾರ್ಗದಲ್ಲಿ ಅಲೆಯುವಾಗ ಅದು ನಮ್ಮನ್ನು ತಡೆಯುತ್ತದೆ. ಎಷ್ಟು ಪ್ರೀತಿಯಿಂದ ಆತನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಾನೆ ಹಾಗೂ ನಾವು ಎಡವುದರಿಂದ ಕಾಪಾಡುತ್ತಾನೆ ಮತ್ತು ಬಲಹೀನತೆಗಳನ್ನು ಗುಣಪಡಿಸುತ್ತಾನೆ! ಖಂಡಿತವಾಗಿಯೂ ನಮ್ಮ ಪರಲೋಕದ ಮಾರ್ಗದರ್ಶಿಯಲ್ಲಿ ವಿಶ್ವಾಸವಿರಬೇಕು. ಆದ್ದರಿಂದ ನಾವು ಆತನಲ್ಲಿ ವಿಶ್ರಾಂತಿಗೊಂಡು ಪರಿಪೂರ್ಣ ಸಮಾಧಾನವನ್ನು ಕಾದುಕೊಳ್ಳಬಹುದು. **R 5548 : 4**

## 7 ಏಪ್ರಿಲ್

**"ಅದಕ್ಕೆ ರೂತಳು ನಿನ್ನನ್ನು ಬಿಟ್ಟು ಹಿಂದಿರುಗಬೇಕೆಂದು ನನ್ನನ್ನು ಒತ್ತಾಯ ಮಾಡಬೇಡ; ಯಾಕಂದರೆ ನೀನು ಎಲ್ಲಿ ಹೋಗುವಿಯೋ ನಾನು ಅಲ್ಲಿಗೆ ಬರುವೆನು; ನೀನು ಎಲ್ಲಿ ಇಳುಕೊಳ್ಳುವಿಯೋ ನಾನು ಅಲ್ಲಿ ಇಳುಕೊಳ್ಳುವೆನು; ನಿನ್ನ ಜನರೇ ನನ್ನ ಜನರು; ನಿನ್ನ ದೇವರೇ ನನ್ನ ದೇವರು." ( ರೂತಳು 1 : 16 )**

ಇಲ್ಲಿ ರೂತಳು ತನ್ನ ನಿರ್ಧಾರವನ್ನು ತೆಗೆದುಕೊಂಡ ಸಕಾರಾತ್ಮಕತೆ [ದೃಢತೆ]ಯುಳ್ಳ ಆಲೋಚನೆಯನ್ನು ಗಮನಿಸಬೇಕಾಗಿದೆ. ಅದು ಯೂದಾಯದಲ್ಲಿ ಹೇಗೆ ಬದುಕುವದು ಎಂದು ಸ್ವಲ್ಪ ಸಮಯದವರೆಗೆ ಪ್ರಯತ್ನಿಸುವ ಪ್ರಸ್ತಾಪವಾಗಿರಲಿಲ್ಲ. ಅದು ಸಾಯುವವರೆಗೆ ಇರಬೇಕಾದ ನಿರ್ಧಾರವಾಗಿತ್ತು. ಈ ವಿಷಯದಲ್ಲಿ ಎಲ್ಲಾ ನಿಜವಾದ ಪರಿವರ್ತನೆಗಳು ಸಮಾನವಾಗಿವೆ. ಉದಾಹರಣೆಗೆ ಒಬ್ಬ ಕ್ರೈಸ್ತನು ತಾನು ಈ ಲೋಕವನ್ನು ಅದರ ವ್ಯವಹಾರಗಳನ್ನು ಅದರ ಮೇಲಿನ ಪ್ರೀತಿಯನ್ನು ಅದರ ಭರವಸೆಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ತೊರೆಯಲು ಮತ್ತು ಕರ್ತನ ಸೇವೆಯಲ್ಲಿ ಮರಣದ ತನಕ ತನಗಿರುವುದೆಲ್ಲವನ್ನು ಖರ್ಚು ಮಾಡಲು ಮತ್ತು ಖರ್ಚು ಮಾಡಿಸಿಕೊಳ್ಳಲು ತನ್ನನ್ನು ತಾನೇ ಖಚಿತವಾದ, ಸಕಾರಾತ್ಮಕವಾದ ಪ್ರತಿಷ್ಠೆಪಡಿಸಿಕೊಳ್ಳದಿದ್ದರೆ ಆತನು ನಿಜವಾಗಿಯೂ ಒಬ್ಬ ಕ್ರೈಸ್ತನಾಗಿರಲಾರನು. ಜೀವಕ್ಕೆ ಸಂಬಂಧಿಸಿದಂತೆ ಸಕಾರಾತ್ಮಕ ನಿರ್ಧಾರದ ಮೌಲ್ಯವನ್ನು ನಾವು ಅಂದಾಜು ಮಾಡಲು ಆಗುವುದಿಲ್ಲ. ನಿರ್ಧಾರದ ಕೊರತೆಯಿಂದ ಸಾವಿರಾರು ಬದುಕುಗಳು ನಾಶವಾಗಿವೆ.

ನಮ್ಮ ನಿರೀಕ್ಷೆಯಾದ "ನಮ್ಮನ್ನು ಕರೆದದ್ದನ್ನೂ ಮತ್ತು ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದಕ್ಕೆ" ದೇವರಿಗಾಗಿ ಸಕಾರಾತ್ಮಕತೆಯಿಂದಿರುವುದೇ ಏಕೈಕ ನಿಯಮವಾಗಿದೆ. **R 5614 : 4**

## 8 ಏಪ್ರಿಲ್

**"ಕರ್ತನ ಭಯವು ಜ್ಞಾನೋಪದೇಶ; ಗೌರವಕ್ಕೆ ಮೊದಲು ವಿನಯ." ( ಜ್ಞಾನೋಕ್ತಿಗಳು 15 : 33 )**

ಒಬ್ಬ ಮನುಷ್ಯನ ಸಾಮ್ಯದಲ್ಲಿ ತನ್ನ ಸ್ವಂತ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ತನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ತೆಗೆಯಲು ಪ್ರಯತ್ನಿಸುವದು ಬಲವಾದ ವಿಧಾನವಾಗಿದ್ದು, ಬೋಧಕನಾದ ಯೇಸು ವಿನಯದ (ದೀನತೆಯ) ಅವಶ್ಯವನ್ನು ಕುರಿತು ದೇವರಿಂದ ಬೋಧಿಸಲ್ಪಡುವವರಿಗೆ ತಿಳಿಸುತ್ತಾನೆ. ವಿನಯ (ದೀನತೆ) ಎಂಬುದು ಇಲ್ಲಿ ಬೇರೆಡೆ ಹೇಳಿದಂತೆ ಸದ್ಗುಣವನ್ನು ಅಡಿಪಾಯವಾಗಿ ಇರಿಸಿದಂತೆ ಹೇಳಲ್ಪಟ್ಟಿದೆ. ವಿನಯಕ್ಕೆ(ದೀನತೆಗೆ) ಲ್ಯಾಟಿನ್ ಪದವು "ಹ್ಯೂಮಸ್", ಅಂದರೆ ನೆಲ ಎಂದು ಅರ್ಥ. ಇದು ಇತರ ಸದ್ಗುಣಗಳನ್ನು ಉತ್ಪಾದಿಸುವ ಮಣ್ಣು ಎಂದು ಸೂಚಿಸಲಾಗಿದೆ. ಯಾರೆಲ್ಲಾ ತಮಗೆ ಎಲ್ಲಾ ತಿಳಿದಿದೆ ಎಂದು ಅಂದುಕೊಳ್ಳುತ್ತಾರೋ ಅಂಥವರು ಏನನ್ನೂ ಕಲಿತುಕೊಳ್ಳಲಾರರು. ಚಾಲ್ಮರ್ಸನು ಹೇಳಿದಂತೆ : "ಒಬ್ಬ ಮನುಷ್ಯನು (ತನ್ನನ್ನು) ಎಷ್ಟು ಹೆಚ್ಚಾಗಿ ಪರಿಕ್ಷಿಸುತ್ತಾನೋ, ಅವನು ತನ್ನ ಸ್ವಂತ ಗುಣಲಕ್ಷಣದ ದುರ್ಬಲತೆಗಳನ್ನು [ಕೊರತೆಗಳನ್ನು] ಕಂಡುಕೊಳ್ಳುತ್ತಾನೆ." ವೀಟ್ಲೇಯನ ಅಭಿಪ್ರಾಯದಂತೆ: "ನಮ್ಮ ನೆರೆಹೊರೆಯವರಲ್ಲಿ ಕಂಡು ಬರುವ ಹತ್ತು ಸಾವಿರ ದೊಡ್ಡ ದೋಷಗಳು ನಮ್ಮಲ್ಲಿರುವ ಸಣ್ಣ ದೋಷಗಳಿಕ್ಕಿಂತ ಕಡಿಮೆ ಪರಿಣಾಮಗಳನ್ನು ಉಂಟುಮಾಡುತ್ತದೆ." ನಮ್ಮ ಪಾಪಗಳು ಮತ್ತು ಅಪೂರ್ಣತೆಗಳನ್ನು ಕುರಿತ ಜ್ಞಾನವನ್ನು ಹೊಂದಿಕೊಂಡ ಮೇಲೆ ನಮ್ಮ ಎಲ್ಲಾ ಮನುಷ್ಯಸ್ವಭಾವವನ್ನು ವಿನಯವಾಗಿರಿಸಿಕೊಳ್ಳಬೇಕು(ದೀನತೆಯಿಂದಿರಬೇಕು); ಆದರೆ ಪರಿಪೂರ್ಣ ಯೇಸು ವಿನಯವಾಗಿರುವನೆಂದು(ದೀನತೆಯಿಂದಿರುವನೆಂದು) ಮನವರಿಕೆಯಾಗುವದು ನಮಗೆ ಎಷ್ಟು ಸುಂದರವಾಗಿದೆ ಮತ್ತು ಎಲ್ಲಾ ಪರಿಶುದ್ಧ ದೂತರೂ ಹಾಗೆಯೇ ಇದ್ದಾರೆ! **R 5029 : 3**

.

## 9 ಏಪ್ರಿಲ್

**"ವಾಸಿಸುವ ಪಟ್ಟಣಕ್ಕೆ ಹೋಗುವ ಹಾಗೆ ಅವರನ್ನು ಸರಿಯಾದ ಹಾದಿಯಲ್ಲಿ ನಡೆಸಿದನು." ( ಕೀರ್ತನೆಗಳು 107 : 7 )**

ಆತ್ಮೀಕ ಇಸ್ರಾಯೇಲ್ಯರ ವಿಷಯದಲ್ಲಿ ಕರ್ತನು ವಿಶೇಷವಾಗಿ ಸರಿಯಾದ ಮತ್ತು ಉತ್ತಮ ಮಾರ್ಗದಲ್ಲಿ ಮುನ್ನಡೆಸುತ್ತಾನೆ ಎಂಬುದು ನಿಜವಾಗಿದೆ; ಮತ್ತು ಆತನ ನಿಜವಾದ ಎಲ್ಲಾ ಜನರು ಆತನ ನಡೆಸುವಿಕೆಯನ್ನು ಎಚ್ಚರಿಕೆಯಿಂದ ಗಮನಿಸಿ ತ್ವರಿತವಾಗಿ ಅವುಗಳನ್ನು ಅನುಸರಿಸಬೇಕು. ಕೊನೆಯಲ್ಲಿ ನಾವು ನಿಶ್ಚಯವಾಗಿ ನೋಡುವುದೇನೆಂದರೆ ಆತನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಿದನು. ಒಂದು ವೇಳೆ ಆ ಮಾರ್ಗ ನಾವು ನಮಗಾಗಿ ಆರಿಸಿಕೊಂಡದ್ದಕ್ಕಿಂತ ವಿಭಿನ್ನವಾಗಿರಬಹುದು. ಅನೇಕರೊಂದಿಗಿನ ಕಷ್ಟವೇನೆಂದರೆ ಅವರು ತೆಗೆದುಕೊಳ್ಳುವ ಮಾರ್ಗವು ಕರ್ತನು ಮುನ್ನೆಡೆಸಿದ ಮಾರ್ಗವಲ್ಲ ಅದು ಉತ್ತಮ ಮಾರ್ಗವಲ್ಲ, ಅವರು ದಾರಿ ತಪ್ಪುವುದನ್ನು ಕರ್ತನು ತಡೆದಿದ್ದರಿಂದ ಅವರಿಗೆ ದೊಡ್ಡ ಗಾಯವಾಗಲಿಲ್ಲ, ಹಾಗಿಲ್ಲದಿದ್ದರೆ ಅವರಿಗೆ ಅದು ದೊಡ್ಡ ಗಾಯವಾಗಿರಬಹುದಾಗಿತ್ತು. ಎಷ್ಟು ಅಧಿಕವಾಗಿ ನಾವು ಕರ್ತನ ನಿಜವಾದ ಜ್ಞಾನವನ್ನು ಹೊಂದಿಕೊಳ್ಳುತ್ತೇವೋ—ಅಷ್ಟು ಅಧಿಕವಾಗಿ ಆ ಜ್ಞಾನವು ಕರ್ತನ ಪ್ರೀತಿಯಲ್ಲಿ ಪರಿಪೂರ್ಣರಾಗುವಂತೆ ಮಾಡುವುದು—ನಮ್ಮ ನಂಬಿಕೆ ಹೆಚ್ಚಾಗಿರುತ್ತದೆ, ಅಷ್ಟೇ ಹೆಚ್ಚಾಗಿ ಈಗಿನ ಜೀವಿತದಲ್ಲಿಯೂ ಮತ್ತು ಮುಂದಿನ ಜೀವಿತದಲ್ಲಿಯೂ ಅದರ ಪರಿಣಾಮವು ಬೆಲೆಯುಳ್ಳದ್ದಾಗಿರುತ್ತದೆ. ಹೇಗೆ ಮಹಿಮೆಯಲ್ಲಿ ಒಂದು ನಕ್ಷತ್ರಕ್ಕಿಂತ ಮತ್ತೊಂದು ನಕ್ಷತ್ರ ವ್ಯತ್ಯಾಸವುಳ್ಳದಾಗಿರುತ್ತದೋ ಹಾಗೆಯೇ ಅಧಿಕ ನಂಬಿಗಸ್ತರಾದ ಕರ್ತನ ಜನರು ಮತ್ತು ಅಧಿಕ ಉತ್ಸಾಹ ಮತ್ತು ಅಧಿಕ ಕ್ರಿಸ್ತನ ಸ್ವಾರೂಪ್ಯ ಹೊಂದಿದವರು ಅಧಿಕವಾಗಿ ಪ್ರಕಾಶಿಸುವರು, ಅಧಿಕ ಆಶೀರ್ವಾದ ಮತ್ತು ಅನುಭವವುಳ್ಳವರಾಗಿರುವರು. ಆದ್ದರಿಂದ ನಾವು ಇಲ್ಲಿಯವರೆಗೆ ನಮ್ಮನ್ನು ನಡೆಸಿದಾತನ ಮೇಲೆ ಪೂರ್ಣ ವಿಶ್ವಾಸದೊಂದಿಗೆ ಮುನ್ನಡೆದು, ಮುಂಬರುವ ದಿನಗಳಲ್ಲಿ ಈ ಲೋಕ, ಶರೀರ ಮತ್ತು ಎದುರಾಳಿಗೆ ವಿರುದ್ಧವಾಗಿ ಹೋರಾಡಿ ಜಯಿಸಲು ನಮ್ಮಲ್ಲಿ ಸಾಕಷ್ಟು ಶಕ್ತಿಯಿಲ್ಲದಿರುವದರಿಂದ ನಮ್ಮನ್ನು ಕರೆದು ಇದುವರೆಗೂ ನಡೆಸಿದಾತನ ಮೇಲೆ ಪೂರ್ಣ ವಿಶ್ವಾಸವಿಡೋಣ. **R 4064 : 5**

## 10 ಏಪ್ರಿಲ್

**"ಆದದರಿಂದ ನಾವು ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ನಮ್ಮ ಹೃದಯಗಳನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತನಾಡುತ್ತೇನೆ." (1 ಥೆಸಲೋನಿಕದವರಿಗೆ 2 : 4 )**

ನಮ್ಮ ಹೃದಯವು ಚಿತ್ತವನ್ನು, ಉದ್ದೇಶಗಳನ್ನು ಸೂಚಿಸುತ್ತದೆ; ಆ ಚಿತ್ತವು

ದೇವರಲ್ಲಿ ಯಥಾರ್ಥವುಳ್ಳದ್ದಾಗಿಯೂ ಮತ್ತು ದೇವರಲ್ಲಿ ಕೇಂದ್ರಿತವಾಗಿಯೂ ಇರಬೇಕು, ಆದರೆ ಅದು ಇಡೀ ಮನುಷ್ಯನ ಆಡಳಿತ ಶಕ್ತಿಯಾಗಿದೆ. ಆದರೂ ಚಿತ್ತವು ಮನುಷ್ಯನನ್ನು ನಿಯಂತ್ರಣ ಮಾಡುವ ಶಕ್ತಿ ಹೊಂದಿದೆ ಹಾಗೂ ಅದು ಪ್ರಭಾವಕ್ಕೂ ಒಳಪಟ್ಟಿರುತ್ತದೆ. ಆಲೋಚನೆಗಳು ಅಶುದ್ಧ, ಅನೀತಿ ಅಥವಾ ಅಪವಿತ್ರವಾಗಿದ್ದರೆ, ಚಿತ್ತದ ಶಕ್ತಿಯು ಹೆಚ್ಚು ಹೆಚ್ಚಾಗಿ ದುರ್ಬಲಗೊಳ್ಳುತ್ತದೆ. ಆದ್ದರಿಂದ ಆಲೋಚನೆಗಳ ಗುಣವು ಹೇಗಿರಬೇಕು ಎಂಬುದಕ್ಕೆ ಅಪೋಸ್ತಲನು ಉಪದೇಶದ ಮೂಲಕ ನಮಗೆ ಬುದ್ಧಿವಾದವನ್ನು  ಹೇಳುತ್ತಾನೆ. ಕರ್ತನ ಮೇಲಿನ ಭಯದಿಂದ ಪರಿಪೂರ್ಣ ಪರಿಶುದ್ಧತೆಗಾಗಿ ಹೋರಾಡುವವರು—ಪರಿಶುದ್ಧವೆಂಬ ಸೌಂದರ್ಯದಿಂದ ತಮ್ಮನ್ನು ಅಲಂಕರಿಸುವವರು—ಚಿಂತನೆಯನ್ನು [ಆಲೋಚನೆಯನ್ನು] ನಿರ್ಲಕ್ಷಿಸಬಾರದು ಮತ್ತು ಪ್ರತಿ ಹುಲ್ಲುಗಾವಲಿನಲ್ಲಿ ಶುದ್ಧ ಮತ್ತು ಆರೋಗ್ಯ ಆಹಾರವನ್ನು ಹುಡುಕುವದಕ್ಕೆ ಅನುಮತಿಸಬೇಕು ಹಾಗೂ ಸೇವಿಸಲು ಶಿಸ್ತುಬದ್ಧವಾಗಿರಬೇಕು. **R 4827 : 2**

## 11 ಏಪ್ರಿಲ್

**"ಭಕ್ತಿಹೀನರ ಆಲೋಚನೆಯಂತೆ ನಡೆಯದ ಮನುಷ್ಯನೇ ಧನ್ಯನು... ಅವನು ತನ್ನ ಕಾಲದಲ್ಲಿ ತನ್ನ ಫಲಕೊಡುವಂಥ, ಎಲೆ ಬಾಡದಂಥ, ನೀರಿನ ಹೊಳೆಗಳ ಬಳಿಯಲ್ಲಿ ನೆಡಲ್ಪಟ್ಟಂಥ ಮರದ ಹಾಗಿರುವನು." ( ಕೀರ್ತನೆಗಳು 1 : 1-3 )**

ನಾವು ಇನ್ನೂ ಈ ಅಪೂರ್ಣ ದೇಹಗಳನ್ನು ಹೊಂದಿರುವವರೆಗೆ ಪರಿಪೂರ್ಣತೆಯ ಎತ್ತರವನ್ನು ತಲುಪಲು ಸಾಧ್ಯವಿಲ್ಲ. ದೇವರ ಪ್ರತಿ ಮಕ್ಕಳಲ್ಲೂ ಬಹಳವಾದ ಗ್ರಹಿಕೆ ಮತ್ತು ಕೃಪೆಯಲ್ಲಿ ನಿರಂತರ ಬೆಳವಣಿಗೆ ಹೊಂದಬೇಕು ಮತ್ತು ತಾನು ಹೊಂದಿದ ಪ್ರತಿಯೊಂದು ಹೆಜ್ಜೆಯನ್ನೂ ಉನ್ನತ ಸಾಧನೆಗಳ ಮೆಟ್ಟಿಲು ಎಂದು ಪರಿಗಣಿಸಬೇಕು. ಒಂದು ವೇಳೆ ದೇವರ ಹೋಲಿಕೆಯಲ್ಲಿ ಯಾವುದೇ ಗ್ರಹಿಸಬಹುದಾದ ಬೆಳವಣಿಗೆ ಇಲ್ಲದಿದ್ದರೆ ಅಥವಾ ಹಿಂದುಳಿದ ಪ್ರವೃತ್ತಿ ಇದ್ದರೆ ಅಥವಾ ನಿರಾಸಕ್ತಿಯ ನಿಲುವು ಇದ್ದರೆ, ಆಗ ಅದು ಎಚ್ಚರಿಕೆಗೆ ಕಾರಣವಾಗುತ್ತದೆ. ಕರ್ತನಾದ ಯೇಸು ನಮಗೆ ಉದಾಹರಣೆಗಾಗಿ ರೂಪಿಸಿದ ಮಾದರಿಯನ್ನು ನಾವು ನಿರಂತರವಾಗಿ ನಮ್ಮ ಕಣ್ಣ ಮುಂದೆ ಇಡೋಣ—ಆತನು ಎಲ್ಲಾ ನ್ಯಾಯಪ್ರಮಾಣವನ್ನು ನಿರ್ದೋಷವಾಗಿ ಕಾಪಾಡಿ ದೇವರ ಚಿತ್ತವನ್ನು ಸಂಪೂರ್ಣವಾಗಿ ನೆರವೇರಿಸಿ ನಮಗೆ ಮಾದರಿಯಾಗಿದ್ದಾನೆ. ನಾವೂ ಸಹ ಪ್ರೀತಿಯ—ಉತ್ಸಾಹ ಮತ್ತು ದೇವರ ಮೇಲಿನ ನಿಷ್ಠೆಯ ಪೂರ್ಣ ಅಳತೆಯಂತೆ

ನಾವು ಆತನ ನೀತಿಯ ಮತ್ತು ಸ್ವಂತ–ಬಲಿಯನ್ನು ಎಷ್ಟು ಹತ್ತಿರ ಸಾಧ್ಯವೋ ಅಷ್ಟು ಹತ್ತಿರ ಆತನ ಹೆಜ್ಜೆಗಳನ್ನು ಹಿಂಬಾಲಿಸೋಣ. ಮತ್ತು ನಾವು ಈಗ ದೈವಿಕ ಅನುಮೋದನೆಯ ಆಶೀರ್ವಾದವನ್ನು ಹೊಂದುತ್ತೇವೆ ಮತ್ತು ತಕ್ಕ ಸಮಯದಲ್ಲಿ ದೈವಿಕ ದಯೆಯ ಮಹಿಮೆಯುಳ್ಳ ಬಹುಮಾನವನ್ನು ಹೊಂದುತ್ತೇವೆ. **R4835 : 5**

## 12 ಏಪ್ರಿಲ್

**"ಕರ್ತನು ಕನಿಕರವೂ ದಯೆಯೂ ದೀರ್ಘಶಾಂತಿಯೂ ಬಹಳ ಕೃಪೆಯೂ ಉಳ್ಳವನಾಗಿದ್ದಾನೆ." ( ಕೀರ್ತನೆಗಳು 103 : 8 )**

ಕರ್ತನು ಕನಿಕರವೂ, ದಯೆಯೂ, ದೀರ್ಘಶಾಂತಿಯೂ ಬಹಳ ಕೃಪೆಯೂ ಉಳ್ಳವನೂ ಎಂದು ನಮ್ಮ ಈ ಮೇಲಿನ ವಾಕ್ಯವು ನಮಗೆ ನೆನಪಿಸುತ್ತದೆ ಮತ್ತು ಅರಣ್ಯದ ಅನುಭವಗಳಲ್ಲಿ ಶಾರೀರಿಕ ಇಸ್ರಾಯೇಲ್ಯರ ವಿಷಯದಲ್ಲಿ ಇದನ್ನು ಚೆನ್ನಾಗಿ ವಿವರಿಸಲಾಗಿದೆ. ಈ ಸುವಾರ್ತೆ ಯುಗದ ಕರ್ತನ ಜನರ ಇತಿಹಾಸದಲ್ಲಿ, ನಾಮಾಂಕಿತ [ಹೆಸರಿಗೆ ಮಾತ್ರ] ಆತ್ಮೀಕ ಇಸ್ರಾಯೇಲ್ಯರಲ್ಲಿ ಮತ್ತು ನಂಬಿಗಸ್ತರ ವಿಷಯದಲ್ಲಿಯೂ ಸಹ ಇದು ಅನ್ವಯಿಸುತ್ತದೆ. ನಮ್ಮ ಜೀವನದ ವಿವಿಧ ಅನುಭವಗಳಲ್ಲಿ ಕರ್ತನು ನಮಗೆ ಎಷ್ಟು ತಾಳ್ಮೆ ಮತ್ತು ಕನಿಕರವುಳ್ಳವನಾಗಿದ್ದಾನೆಂದು ನಮಗೆ ಮನವರಿಕೆಯಾಗಿದೆಯಲ್ಲವೇ? ಬಹಳ ಹಿಂದೆಯೇ (ನಮ್ಮ ಪಾಪಗಳ ನಿಮಿತ್ತ) ನಮ್ಮ ಒಡಂಬಡಿಕೆಯನ್ನು ರದ್ದುಮಾಡಬಹುದಿತ್ತು. ಅದಕ್ಕೆ ಆತನು ಹೇಗೆ ಸಂಪೂರ್ಣವಾಗಿ ಸಮರ್ಥನೆ ಹೊಂದಿದ್ದಾನೆಂದು ನಮಗೆ ಗೊತ್ತಿದೆ. ಆದರೂ ಆತನ ಕರುಣೆ ಮತ್ತು ಪ್ರೀತಿಯಿಂದ ಮಾತ್ರ ಪರಲೋಕ ರಾಜ್ಯದ ಕಡೆಗೆ ಬರಲು ನಮಗೆ ಅನುಮತಿ ನೀಡಲಾಗಿದೆ ಎಂದು ನಾವು ನೋಡುತ್ತೇವಲ್ಲವೆ? ಖಂಡಿತವಾಗಿಯೂ ಈ ವಿಷಯಗಳು ನಮಗೆ ಮನವರಿಕೆಯಾಗುವಾಗ ನಮ್ಮನ್ನು ತಾಳ್ಮೆ ಮತ್ತು ನಂಬಿಗಸ್ತರನ್ನಾಗಿ ಮಾಡಬೇಕು. ಇದಲ್ಲದೆ ಕರ್ತನು ನಮಗೆ ತಿಳಿಸುವುದೇನೆಂದರೆ ಆತನು ನಮ್ಮಿಂದ ಇನ್ನೂ ಹೆಚ್ಚಿನ ವಿಚಾರವನ್ನು ನಾವು ಮಾಡಬೇಕೆಂದು ಅಪೇಕ್ಷಿಸುತ್ತಾನೆ. ಅದೇನೆಂದರೆ ನಮ್ಮ ವಿಷಯಗಳಲ್ಲಿ ಕ್ರಿಸ್ತನ ಮೂಲಕ ಆತನ ಶ್ರೇಷ್ಠತೆ ಮತ್ತು ಕರುಣೆಯನ್ನು ನಾವು ಮೆಚ್ಚಿದ್ದಾದರೆ, ನಾವು ನಮಗೆ ವಿರುದ್ಧವಾಗಿ ತಪ್ಪು ಮಾಡುವ ಇತರರ ಬಗ್ಗೆ ಇದೇ ರೀತಿ ಕರುಣೆ ಮತ್ತು ಸಹಿಷ್ಣುತೆಯನ್ನು ತೋರಿಸುತ್ತೇವೆ. ನಿಜಕ್ಕೂ ಈ ವಿಷಯವನ್ನು ಕರ್ತನು ನಮ್ಮನ್ನು ಮೆಚ್ಚಿಸುವಲ್ಲಿ ಎಷ್ಟು ಶ್ರದ್ಧೆಯನ್ನು ತೋರಿಸುತ್ತಾನೆಂದರೆ ಈ

ಸಹೋದರನ ಮತ್ತು ಸಹ ಸೇವಕರೊಂದಿಗಿನ ಸಂಬಂಧದಲ್ಲಿ ಈ ಮನೋಭಾವವನ್ನು, ಈ ಗುಣಲಕ್ಷಣವನ್ನು ಬೆಳೆಸಿಕೊಳ್ಳದಿದ್ದರೆ ನಮ್ಮಲ್ಲಿ ಯಾರೊಬ್ಬರೂ ಆತನೊಂದಿಗೆ ಸಂಬಂಧವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಎಷ್ಟು ಉದಾರತೆ, ಎಷ್ಟು ಪರಿಗಣಿಸುವಿಕೆ, ಎಷ್ಟು ಸೌಮ್ಯತೆ, ಎಷ್ಟು ಕ್ಷಮಿಸುವ ಗುಣ, ಇವೆಲ್ಲವೂ ಸಹೋದರರೊಂದಿಗೆ ನಾವು ಐಕ್ಯದಲ್ಲಿರಲು ನಮ್ಮನ್ನು ನಡೆಸುತ್ತದೆ. ವಿಶೇಷವಾಗಿ ಈ ವಿಷಯಗಳು ನಮ್ಮನ್ನು ಅಥವಾ ನಮ್ಮ ಹಿತಾಸಕ್ತಿಗಳನ್ನು ಯಾವುದೇ ಅಳತೆಯಲ್ಲಿ ಗಾಯಗೊಳಿಸಿದವರೊಂದಿಗೂ ಇರಬೇಕು. **R 4056 : 1**

## 13 ಏಪ್ರಿಲ್

**"ಆಶ್ರಯವನ್ನು ಹೊಂದುವದಕ್ಕೆ ಓಡಿ ಬಂದು ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡಿದುಕೊಂಡವರಾದ ನಮಗೆ ಬಲವಾದ ಆದರಣೆ ಉಂಟಾಯಿತು." ( ಇಬ್ರಿಯರಿಗೆ 6 : 18 )**

ಸಂತರು ಪ್ರತಿ ದುಃಖ ಮತ್ತು ವ್ಯಸನದಲ್ಲೂ ಆಶೀರ್ವದಿಸಿದ ಆದರಣೆಯನ್ನು ಹೊಂದಿದ್ದಾರೆ, ಆದರೆ ಲೋಕದವರು ಈ ವಿಷಯವನ್ನು ಸಂಪೂರ್ಣವಾಗಿ ಅರಿಯದವರಾಗಿದ್ದಾರೆ. ದೇವರ ಮಕ್ಕಳು ಹೊರತುಪಡಿಸಿ ಬೇರೆ ಯಾರೂ ಅದನ್ನು ತಿಳಿಯಲು ಸಾಧ್ಯವಿಲ್ಲ. ಈ ಆದರಣೆ ಎಂದರೆ ಏನು?...ಹೃದಯ ಮತ್ತು ಶರೀರವು ಬಹುತೇಕವಾಗಿ ವಿಫಲವಾದಾಗ ಇದು ಭರವಸೆ, ಪ್ರೀತಿ ಮತ್ತು ಧೈರ್ಯದಿಂದ ಕೂಡಿದ ಸೌಮ್ಯವಾದ ಪಿಸು ಮಾತಾಗಿದೆ. ಇದು ದೈವಿಕ ಆದರಣೆಯಾಗಿದ್ದು, ಇದು ಗುಣಪಡಿಸುವ ಅಥವಾ ಉಲ್ಲಾಸಕರವನ್ನುಂಟುಮಾಡುವಂತಹ ಸದ್ಗುಣವನ್ನು ಹೊಂದಿರುವ ಏಕೈಕ ಆದರಣೆಯಾಗಿದೆ. ರಾಜಾದಿರಾಜನ ಸೇವೆಯಲ್ಲಿ ಪ್ರತಿ ದಿನ ಭಾರವನ್ನು ಹೊರುವ ಮತ್ತು ಪ್ರತಿ ದಿನದ ಶಾಖವನ್ನು(ಕೋಪವನ್ನು) ನಿಷ್ಠೆಯಿಂದ ಸಹಿಸುವ ಶ್ರೇಷ್ಠ ಆತ್ಮಗಳಿಗೆ ಮಾತ್ರ ಇದು ಕಾಯ್ದಿರಿಸಲಾಗಿದೆ; ಯಾರೆಲ್ಲಾ ಈ ಪ್ರಪಂಚದ ಪ್ರವಾಹದೊಂದಿಗೆ ಉದಾಸೀನ ಭಾವದಿಂದ ಚಲಿಸುವರೋ [ಹೊಯ್ಯಲ್ಪಡುತ್ತಾರೋ] ಮತ್ತು ಶರೀರದಾಸೆಯ ಸ್ವಭಾವದ ಕೆಳಮುಖ ಪ್ರವೃತ್ತಿ ಹೊಂದಿರುವವರು ಎಂದಿಗೂ ಅದರ ಸುಗಂಧವನ್ನು ತಿಳಿಯಲು ಸಾಧ್ಯವಿಲ್ಲ. **R 5803 : 1**

## 14 ಏಪ್ರಿಲ್

**"ನಿನ್ನ ನಂಬಿಕೆಯು ದೊಡ್ಡದು; ನೀನು ಇಷ್ಟಪಟ್ಟಂತೆಯೇ ನಿನಗಾಗಲಿ." (ಮತ್ತಾಯನು 15 : 28)**

ನಂಬಿಕೆಯ ಈ ವಿಷಯವನ್ನು ನಾವು ಹೆಚ್ಚು ಅಧ್ಯಯನ ಮಾಡಿದರೆ, ದೇವರ ದೃಷ್ಟಿಯಲ್ಲಿ ನಂಬಿಕೆ ಎಂಬುದು ಅನಿವಾರ್ಯ ಮಾತ್ರವಲ್ಲ, ಅದು ಬಹಳ ಅಮೂಲ್ಯವಾದದ್ದು ಎಂದು ನಮಗೆ ಮನವರಿಕೆಯಾಗುತ್ತದೆ. ನಂಬಿಕೆ ಇಲ್ಲದೆ ದೇವರ ಬಳಿಗೆ ಬರಲು ಸಾಧ್ಯವಿಲ್ಲ, ನಂಬಿಕೆಯಿಲ್ಲದೆ ಆತನ ಪ್ರೀತಿಯಲ್ಲಿ ನೆಲೆಗೊಂಡಿರಲು ಸಾಧ್ಯವಿಲ್ಲ, ಆತನ ವಾಗ್ದಾನಗಳಲ್ಲಿ ನಂಬಿಕೆಯಿಲ್ಲದೆ ಅನುದಿನ ಆತನ ಕನಿಕರ, ಆಶೀರ್ವಾದ ಮತ್ತು ಆತನ ನಡೆಸುವಿಕೆಯನ್ನು ನಾವು ಪಡೆದುಕೊಳ್ಳಲು ಸಾಧ್ಯವಿಲ್ಲ. ಈ ಪರಿಣಾಮಕ್ಕಾಗಿ ಆತನ ವಾಗ್ದಾನಗಳ ವಾಕ್ಯದಲ್ಲಿ ನಾವು ನಂಬಿಕೆ ಇಡದಿದ್ದರೆ, ನಾವು ಆತನ ಮಕ್ಕಳೆಂದು, ಪವಿತ್ರಾತ್ಮದಿಂದ ಭ್ರೂಣಾಂಕುರಗೊಂಡಿದ್ದೇವೆಂದು (ಗರ್ಭಧಾರಣೆಗೊಂಡಿದ್ದೇವೆಂದು) (Begotten of the Holy Spirit), ದೇವರ ಬಾಧ್ಯಸ್ಥರೂ, ನಮ್ಮ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸಹ–ಬಾಧ್ಯಸ್ಥರೂ ಎಂದು ಮನವರಿಕೆಯಾಗಲು ಸಾಧ್ಯವಿಲ್ಲ. ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ ಹೊರತು ನಾವು ದಿನದಿಂದ ದಿನಕ್ಕೆ ಕರ್ತನನ್ನು ಹಿಂಬಾಲಿಸಲು ಸಾಧ್ಯವಿಲ್ಲ ಯಾಕಂದರೆ ತನ್ನ ಎಲ್ಲಾ ಹಿಂಬಾಲಕರ ಮೇಲೆ ಇಡುವ ಪರೀಕ್ಷೆ ಇದಾಗಿದೆ. ಈ ಲೋಕ, ಶರೀರ ಮತ್ತು ಸೈತಾನನ ವಿರೋಧಗಳು ನಮಗೆ ತುಂಬಾ ನೋವಿನಿಂದ ಕೂಡಿದ ಹಾಗೆ ಕಾಣಿಸಿದರೂ, ಮರೆಯಾಗಿ ಅವುಗಳು ನಮಗೆ ಆಶೀರ್ವಾದವಾಗಿದೆ. ದೇವರ ವಾಗ್ದಾನಗಳಲ್ಲಿ ನಾವು ನಂಬಿಕೆಯನ್ನು ಅಭ್ಯಾಸಮಾಡದ ಹೊರುತು ನಾವು ಅವುಗಳನ್ನು ನೋಡಲಾಗುವುದಿಲ್ಲ. ಕ್ರಿಸ್ತನ ಶಾಲೆಯಲ್ಲಿ ನಮ್ಮ ಪ್ರಯೋಜನಕ್ಕಾಗಿ ಕೊಡಲ್ಪಟ್ಟಿರುವ ವಿವಿಧ ಪಾಠಗಳನ್ನು ನಾವು ಪಡೆದು, ಅಭ್ಯಾಸ ಮಾಡಿದ ಹೊರತು, ಪರಲೋಕ ರಾಜ್ಯ ಮತ್ತು ಅದರಲ್ಲಿರುವ ಮಹಿಮೆ, ಆಶೀರ್ವಾದ ಮತ್ತು ಸವಲತ್ತು ಇವುಗಳಿಗಾಗಿ ನಾವು ತಯಾರಾಗಲು ಸಾಧ್ಯವಿಲ್ಲ. **R 3787 : 5**

## 15 ಏಪ್ರಿಲ್

**"ಈಗ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದು ನಿದ್ರೆ ಹೋದವರಲ್ಲಿ ಪ್ರಥಮಫಲವಾದನು." ( 1 ಕೊರಿಂಥದವರಿಗೆ 15 : 20 )**

ಇತರರು ಸಾವಿನ ನಿದ್ರೆಯಿಂದ ತಾತ್ಕಾಲಿಕವಾಗಿ ಎಚ್ಚರಗೊಂಡಿದ್ದಾರೆ, ತರುವಾಯ ಮತ್ತೆ ಅವರು ಸಾವಿಗೀಡಾಗಿದ್ದಾರೆ, ಆದರೆ ನಮ್ಮ ಕರ್ತನಾದ ಯೇಸು "ಸತ್ತವರಲ್ಲಿ ಪ್ರಥಮ ಫಲವಾದನು" "ನಿದ್ರಿಸುವವರಲ್ಲಿ ಪ್ರಥಮಫಲವಾದನು"– ಅಪೋಸ್ತಲನು ಹೇಳಿದಂತೆ ಆತನು ಸತ್ತವರೊಳಗಿಂದ ಎದ್ದ ಮೊದಲನೆಯವನಾದನು. ಆತನ ಪುನರುತ್ಥಾನವು ಜೀವಕ್ಕೆ ಪುನರುತ್ಥಾನವಾಗಿತ್ತು– ಅದು ಆತ್ಮೀಕ ಸಮತಲದಲ್ಲಿ ಪರಿಪೂರ್ಣತೆಯಲ್ಲಿತ್ತು. ಅದರಲ್ಲಿ ಆತನು ನಿದ್ರಿಸುವವರಲ್ಲಿ ಮೊದಲ ಫಲವಾದನು, ಇದರ ಅರ್ಥವೇನೆಂದರೆ ಇತರರು ಇದೇ ರೀತಿ ನಿದ್ರಿಸಿದ್ದರು ಮತ್ತು ಪುನರುತ್ಥಾನದಲ್ಲಿ ಅದೇ ರೀತಿ ನಂತರ ಆತ್ಮೀಕ ಜೀವಿಗಳಾಗಿ ಎದ್ದು ಬರುತ್ತಾರೆ. ಮೊದಲ ಫಲಗಳಾಗಿರುವುದು ಎಂದರೆ ಇತರರದ್ದು ಸಹ ಒಂದೇ ರೀತಿಯದ್ದಾಗಿರುತ್ತದೆ ಎಂದು ಸೂಚಿಸುತ್ತದೆ. ಯಾಕೆಂದರೆ ನಮ್ಮ ಕರ್ತನ ಪುನರುತ್ಥಾನವು ಇತರ ಎಲ್ಲಾ ಪುನರುತ್ಥಾನಗಳಿಗಿಂತ ಮುಂಚಿನದು ಎಂಬ ಅರ್ಥದಲ್ಲಿ ನಿದ್ರಿಸಿದವರೆಲ್ಲರ ಮೊದಲ ಫಲವಾದನು. ಬೇರೆ ರೀತಿಯಲ್ಲಿ ಹೇಳುವುದಾದರೆ ಆತನು ತನ್ನ ಶರೀರವಾಗಿರುವ ಸಭೆಗೆ ಮೊದಲ ಫಲವಾದನು. ಇನ್ನೂ ಹೆಚ್ಚಾದ ಅರ್ಥದಲ್ಲಿ ಹೇಳಬೇಕಾದರೆ ಕ್ರಿಸ್ತನು–ತಲೆ ಮತ್ತು ಶರೀರ, ಇಡೀ ಪ್ರಪಂಚದಲ್ಲಿ ಜೀವಕ್ಕೆ ಬಂದ ಮೊದಲ ಫಲವಾಗಿದೆ; ಅಪೋಸ್ತಲನಾದ ಯಾಕೋಬನು ಈ ವಿಷಯವನ್ನು ವ್ಯಕ್ತಪಡಿಸಿದಂತೆ "ಆತನು ತನ್ನ ಚಿತ್ತದ ಪ್ರಕಾರ ಸತ್ಯವಾಕ್ಯದಿಂದ ನಮ್ಮನ್ನು ಹುಟ್ಟಿಸಿರಲಾಗಿ ನಾವು ಆತನ ಸೃಷ್ಟಿಗಳಲ್ಲಿ ಒಂದು ತರಹದ ಪ್ರಥಮ ಫಲಗಳಂತಾದೆವು." **R 3377 : 5**

## 16 ಏಪ್ರಿಲ್

**"ಅವರು ಊಟಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ಅದನ್ನು ಆಶೀರ್ವದಿಸಿ ಮುರಿದು ತನ್ನ ಶಿಷ್ಯರಿಗೆ ಕೊಟ್ಟು–ತಕ್ಕೊಳ್ಳಿರಿ; ಇದು ನನ್ನ ದೇಹ ಅಂದನು." ( ಮತ್ತಾಯ 26 : 25 )**

ರೊಟ್ಟಿಯು ಎಲ್ಲಾ ತರಹದ ಆಹಾರವನ್ನು ಸೂಚಿಸುತ್ತದೆ ಮತ್ತು ಸಂಕೇತವಾಗಿದೆ, ಆದ್ದರಿಂದ ಈ ಸಂಕೇತದ ಬೋಧನೆ ಏನೆಂದರೆ ಕ್ರಿಸ್ತನು ಕೊಡುವ ಜೀವವನ್ನು ಯಾರು ಹೊಂದುತ್ತಾರೋ ಅವರು ಅದನ್ನು ಆತನ ತ್ಯಾಗ–ಬಲಿಯ ಪರಿಣಾಮವಾಗಿ ಉಂಟಾಗಿದೆ ಎಂದು ಸ್ವೀಕರಿಸಬೇಕು. ನಾವು ಜೀವಿಸಬೇಕೆಂದು ಆತನು ಸತ್ತನು. ಆತನು ಸ್ವಯಂ–ಪ್ರೇರಣೆಯಿಂದ ಒಪ್ಪಿಸಿದ ಹಕ್ಕುಗಳು ಮತ್ತು ಸವಲತ್ತುಗಳನ್ನು ಆತನ ಮೇಲೆ ನಂಬಿಕೆಯಿಡುವ, ಆತನನ್ನು ಮತ್ತು ಆತನ

ಆಲೋಚನೆಗಳನ್ನು ಸ್ವೀಕರಿಸುವ ಎಲ್ಲರೂ ತಿನ್ನಬಹುದು, ಅನ್ವಯಿಸಿಕೊಳ್ಳಬಹುದು, ನಮ್ಮದಾಗಿಸಿಕೊಳ್ಳಬಹುದು. ಆದಾಮನು ಕಳೆದುಕೊಂಡಿರುವ ಎಲ್ಲಾ ಹಕ್ಕುಗಳು ಮತ್ತು ಸವಲತ್ತುಗಳನ್ನು, ಪರಿಪೂರ್ಣ ಮಾನವ ಸ್ವಭಾವವನ್ನು ಅವರಿಗೆ ನೀಡಲಾಗಿದೆ ಎಂದು ಎಣಿಸಲ್ಪಟ್ಟಿದೆ. ಪರಲೋಕದ ಈ ರೊಟ್ಟಿಯನ್ನು ತಿನ್ನದೆ ಹೋದರೆ ಯಾರೂ ನಿತ್ಯ ಜೀವವನ್ನು ಹೊಂದಲು ಸಾಧ್ಯವಿಲ್ಲ. ಇದು ಈ ಪ್ರಸ್ತುತ (ಈಗಿನ) ಕಾಲದಲ್ಲಿರುವ ವಿಶ್ವಾಸಿಗಳಿಗೆ ಮಾತ್ರ ಅನ್ವಯಿಸದೆ, ಭವಿಷ್ಯದ ಯುಗದಲ್ಲಿರುವವರಿಗೂ(ಸಾವಿರ ವರ್ಷ) ಅನ್ವಯಿಸುತ್ತದೆ. ಅವರ ಜೀವದ ಹಕ್ಕುಗಳು ಮತ್ತು ಸವಲತ್ತುಗಳು ಎಲ್ಲವೂ ಆತನು ಮಾಡಿದ ಈಡು ಬಲಿಯ ಮೂಲಕ ಬಂದಿತ್ತೆಂದು ಎಲ್ಲರೂ ಗ್ರಹಿಸಬೇಕು. ಒಂದೇ ಪದದಲ್ಲಿ ಹೇಳಬೇಕೆಂದರೆ, ನಮ್ಮ ಕರ್ತನ ದೇಹವನ್ನು ಸೂಚಿಸಿವ ರೊಟ್ಟಿಯು, ಆತನ ಈಡು ಬಲಿಯನ್ನು ಅಂಗೀಕರಿಸುವ ಮೂಲಕ ನಾವು ನೀತಿವಂತರಾಗಿದ್ದೇವೆ ಎಂದು ಬೋಧಿಸುತ್ತದೆ. **R 3879 : 6**

## 17 ಏಪ್ರಿಲ್

**"ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನು ತಾನೇ ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನೆಂಬದನ್ನು ನೀವು ಆಲೋಚಿಸಿರಿ." ( ಇಬ್ರಿಯರಿಗೆ 12 : 3 )**

ನಮ್ಮ ಪ್ರೀತಿಯ ವಿಮೋಚಕನ ಅವಮಾನದ ನಿರೂಪಣೆ, ನಮ್ಮ ಪರವಾಗಿ ಬಹಳ ತಾಳ್ಮೆಯಿಂದ ಸಹಿಸಿಕೊಂಡದ್ದು ನಮಗೆ ಹೆಚ್ಚು ಹೃದಯ ಸ್ಪರ್ಶದಾಯಕವಾಗಿದೆ ಮತ್ತು ಅದನ್ನು ಕುರಿತು ಅರಿತುಕೊಳ್ಳುವುದರಿಂದ ಬಹುಶಃ ಬೇರೆ ಯಾವುದೇ ವಿಷಯಕ್ಕಿಂತ ನಮ್ಮ ಹೃದಯಗಳು ಅಧಿಕವಾಗಿ ಪಶ್ಚಾತ್ತಾಪ ಪಡುತ್ತದೆ. ನಮ್ಮ ಕರ್ತನನ್ನು ಈಗಾಗಲೇ ಅಂಗೀಕರಿಸಿದವರೊಂದಿಗೆ ಇರುವ ಅದರ ಶಕ್ತಿಯನ್ನು ಮತ್ತು ಆತನ ರಕ್ತವು ಪರಿಣಾಮ ಬೀರಿದ ವಿಮೋಚನೆಯ ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ; ತನ್ನ ವಿರುದ್ಧ ಪಾಪಿಗಳ ದೊಡ್ಡ ವಿರೋಧತ್ವವನ್ನು ಸಹಿಸಿಕೊಂಡವನನ್ನು, ಅದು ಆತನಿಗೆ ದಕ್ಕಿತು ಎಂದು ನಾವು ನೆನಪಿಸಿಕೊಂಡಾಗ ಮತ್ತು ನಮ್ಮ ನಿಮಿತ್ತ ಅದು ಆತನ ಬಲಿಯ ಒಂದು ಭಾಗವಾಗಿತ್ತು ಎಂದು ನಾವು ಪರಿಗಣಿಸಿದಾಗಲೆಲ್ಲಾ ಅದು ನಮ್ಮ ಹೃದಯವನ್ನು ಕರಗಿಸುತ್ತದೆ. ಅಪೋಸ್ತಲನು ಈ ವಿಷಯದಲ್ಲಿ ತನ್ನ ಅತ್ಯಂತ ಬಲವುಳ್ಳ ಅನೇಕ ಪಾಠಗಳಲ್ಲಿ ಈ ಒಂದು ಪಾಠವನ್ನು ನಮಗೆ ಸೂಚಿಸುತ್ತಾನೆ. ಕರ್ತನ ಎಲ್ಲಾ ಶಿಷ್ಯರು ಕ್ರಿಸ್ತನ ಸಾತ್ವಿಕತೆ, ತಾಳ್ಮೆ

ಮತ್ತು ಬಾಧೆಗಳನ್ನು ಪರಿಗಣಿಸಬೇಕು ಎಂದು ಒತ್ತಾಯಿಸುತ್ತಾನೆ, ಕ್ರಿಸ್ತನು ಅವುಗಳನ್ನು ಅತ್ಯಂತ ಅನ್ಯಾಯವಾಗಿ ಸಹಿಸಿಕೊಂಡನು, ಹಾಗೆ ಪರಿಗಣಿಸದಿದ್ದರೆ ನಾವು ನಮ್ಮ ಮನಸ್ಸಿನಲ್ಲಿ ದಣಿದವರಾಗಿ ಬಲಹೀನರಾಗುತ್ತೇವೆ. ಏಕೆಂದರೆ ನಾವು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯುವಾಗ ನಮಗೆ ಬರುವ ಸಂಕಟವು, ಆತನಿಗೆ ಬಂದ ಸಂಕಟಗಳಿಗಿಂತ ಬಹಳ ಹಗುರವಾಗಿವೆ. **R 2313 : 5**

## 18 ಏಪ್ರಿಲ್

**"ಮತ್ತು ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರ ಮಾಡಿ ಅವರಿಗೆ ಕೊಟ್ಟು– ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ ಅಂದನು." ( ಮತ್ತಾಯ 26 : 27 )**

ನಮ್ಮ ಕರ್ತನು ಸ್ಪಷ್ಟವಾಗಿ ಹೇಳುವುದೇನೆಂದರೆ ಪಾತ್ರೆಯಲ್ಲಿರುವ ದ್ರಾಕ್ಷಾರಸವು ರಕ್ತವನ್ನು ಸೂಚಿಸುತ್ತದೆ, ಆದ್ದರಿಂದ ಅದು ಜೀವವಾಗಿದೆ; (ಕರ್ತನು) ಆ ಜೀವವನ್ನು ಉಳಿಸಿಕೊಳ್ಳಲಿಲ್ಲ. ಆದರೆ ಆ ಜೀವವನ್ನು ಸುರಿಸಲಾಯಿತು ಅಥವಾ ನೀಡಲಾಯಿತು, ಬಲಿದಾನ ಮಾಡಲಾಯಿತು. ಆತನು ನಮಗೆ ಹೇಳುವದೇನೆಂದರೆ ಅದು ಪಾಪಗಳ ಪರಿಹಾರಕ್ಕಾಗಿದೆ, ಮತ್ತು ಆತನವರೆಲ್ಲರೂ ಅದನ್ನು ಕುಡಿಯಲೇಬೇಕು–ಆತನ ಬಲಿಯನ್ನು ಅಂಗೀಕರಿಸಬೇಕು ಮತ್ತು ನಂಬಿಕೆಯಿಂದ ತಮ್ಮದಾಗಿಸಿಕೊಳ್ಳಬೇಕು. ಯಾರೆಲ್ಲಾ ನಂಬಿಕೆಯ ಮೂಲಕ ನೀತಿವಂತರಾಗಬೇಕೆಂದಿದ್ದಾರೋ, ಅವರೆಲ್ಲರೂ ಈ ಜೀವದ ಮೂಲವನ್ನು ಅಂಗೀಕರಿಸಬೇಕು. ಯಾವುದೇ ಶ್ರೇಷ್ಟ ಬೋಧಕನ ಮೇಲಿನ ನಂಬಿಕೆ ಮತ್ತು ವಿಧೇಯತೆಯು ಈ ಒಂದೇ ವಿಷಯಕ್ಕೆ ಸಮನಾಗಿರುತ್ತದೆ ಮತ್ತು ನಿತ್ಯ ಜೀವವನ್ನು ತರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಈ ಲೋಕದ ಪಾಪಗಳಿಗಾಗಿ ಈಡುಬಲಿಯಾಗಿ ಒಮ್ಮೆ ಸುರಿಸಿದ ರಕ್ತವನ್ನು ಅಂಗೀಕರಿಸದ ಹೊರತು ನಿತ್ಯ ಜೀವವನ್ನು ಪಡೆಯಲು ಬೇರೆ ಯಾವ ಮಾರ್ಗವೂ ಇಲ್ಲ. ನಾವು ರಕ್ಷಣೆ ಹೊಂದಲೆಂದು ಆಕಾಶದಲ್ಲಾಗಲಿ ಅಥವಾ ಮನುಷ್ಯರ ಮಧ್ಯದಲ್ಲಾಗಲಿ ಬೇರೆ ಯಾವ ನಾಮವನ್ನು ಕೊಡಲ್ಪಟ್ಟಿಲ್ಲ. ಅದೇ ರೀತಿ ನಾವು ಈ ಹೊಸ ಸ್ವಭಾವವನ್ನು ಪಡೆಯಲು ಕರ್ತನ ಪಾತ್ರೆಯಲ್ಲಿ ಕುಡಿಯುವುದಕ್ಕೆ, ಆತನ ಒಂದೇ ರೊಟ್ಟಿಯ ಅಂಗಗಳಾಗಿ ಮುರಿಯಲ್ಪಡಲು, ಮತ್ತು ಆತನ ದೀಕ್ಷಾಸ್ನಾನವೆಂಬ ಮರಣದೊಳಗೆ ಊಣಿಡಲು, ಮತ್ತು ಇದಾದ ನಂತರ ಆತನೊಂದಿಗೆ ಮಹಿಮೆ, ಘನ ಮತ್ತು ನಿರ್ಲಯತ್ವವನ್ನು ಹೊಂದಲು ಆತನನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಆದ್ದರಿಂದ ನಾವು ಈ ಭವ್ಯವಾದ ನೆನೆಸುವಿಕೆಯನ್ನು(grand memorial) ಆಚರಿಸುವಾಗ, ನಮ್ಮ

ಕರ್ತನಿಗೆ ಮರೆಯದೆ ಕೃತಜ್ಞತಾಸ್ತುತಿಗಳನ್ನು ಸಲ್ಲಿಸೋಣ. ಮತ್ತು ನಾವು ನೀತಿವಂತರಾಗಿದ್ದಕ್ಕೆ ನಮ್ಮ ವಿಮೋಚಕನೊಂದಿಗೆ ಸಂತೋಷದಿಂದ ಸಹ–ಬಲಿಯನ್ನರ್ಪಿಸುವವರಾಗಿ ದೊರೆತ ಭವ್ಯವಾದ ಸವಲತ್ತಿಗಾಗಿ ಮತ್ತು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ ಎಂದು ಹೇಳಿ ಕೃತಜ್ಞತಾಸ್ತುತಿಗಳನ್ನು ಸಲ್ಲಿಸೋಣ. ಮತ್ತು ಈ ಸಂದರ್ಭದಲ್ಲಿ ದುಃಖಕರ ಮತ್ತು ಚಿಂತಾಪೂರ್ವಕ ಧ್ಯಾನ ಮಾಡುತ್ತಾ ಮತ್ತು ಹೃದಯವನ್ನು ಪೂರ್ಣವಾಗಿ ಶೋಧಿಸುತ್ತಾ ಇರುವ ನಾವು ಸಹ ಕರ್ತನು ಮಾಡಿದ ಹಾಗೆ, ನಂಬಿಕೆಯ ಮೂಲಕ ಜಯಗಳಿಸಿ, ನಮ್ಮನ್ನು ಕತ್ತಲೆಯಿಂದ ತನ್ನ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನನ್ನು ಸ್ತುತಿಸಿ ಹಾಡೋಣ, ಮತ್ತು ಈಗ ಪ್ರಗತಿಯಲ್ಲಿರುವ ದೊಡ್ಡ ಕೆಲಸದಲ್ಲಿ ಐಕ್ಯ ಹೊಂದಲು ನಮಗೆ ಸವಲತ್ತು ನೀಡಿದಾತನಿಗೆ ಸ್ತುತಿಗೀತೆಗಳನ್ನು ಹಾಡೋಣ. **R 2772 : 6**

## 19 ಏಪ್ರಿಲ್

**"ನಾನು ನಿಮಗೆ ಹೇಳುವದೇನೆಂದರೆ–ಇಂದಿನಿಂದ ನನ್ನ ತಂದೆಯ ರಾಜ್ಯದಲ್ಲಿ ನಿಮ್ಮೊಂದಿಗೆ ಹೊಸದಾಗಿ ಕುಡಿಯುವ ಆ ದಿನದವರೆಗೆ ನಾನು ದ್ರಾಕ್ಷಾರಸವನ್ನು ಕುಡಿಯುವದೇ ಇಲ್ಲ ಎಂದು ಹೇಳಿದನು." ( ಮತ್ತಾಯನು 26 : 29 )**

ದೇವರ ರಾಜ್ಯವು ಬರುವಾಗ ಈ ಕಾಲದಲ್ಲಿರುವ ಎಲ್ಲಾ ವಿಧವಾದ ಬಾಧೆಗಳು ಮತ್ತು ಶೋಧನೆಗಳು ಹೊರಟು ಹೋಗುವವು. ದ್ರಾಕ್ಷೇ ತೊಟ್ಟಿಯನ್ನು ತುಳಿಯುವದು, ದ್ರಾಕ್ಷಾರಸವನ್ನು ತಯಾರಿಸುವದು, ಎಲ್ಲಾ ಮುಗಿಯುತ್ತದೆ ಮತ್ತು ಇದಕ್ಕೆ ಬದಲಾಗಿ ಆ ದ್ರಾಕ್ಷಾರಸವು ಸಂತೋಷ ಮತ್ತು ಉಲ್ಲಾಸಕರವಾಗಿರುತ್ತದೆ. ನಮ್ಮ ವಿಮೊಚಕನೊಂದಿಗಿನ ಐಕ್ಯದಲ್ಲಿ ಇರುವ ಸಂತೋಷ ಮತ್ತು ಆಶೀರ್ವಾದಗಳು ಊಹಿಸಲು ಅಥವಾ ವ್ಯಕ್ತಪಡಿಸಲು ಸಾಧ್ಯವಾಗದ ಒಂದು ಭಾಗವೆಂದು ಸೂಚಿಸುತ್ತದೆ. ರಾಜ್ಯದ ಕಾಲವು ಬಹಳ ಹತ್ತಿರವಿದೆ–ನಿಶ್ಚಯವಾಗಿಯೂ ಈ ಮಾತುಗಳನ್ನು ಕರ್ತನು ಹೇಳಿದ್ದಕ್ಕಿಂತ 1800 [ಈಗ 1900] ವರ್ಷಗಳಿಗಿಂತ ಹತ್ತಿರವಾಗಿದೆ–ಮತ್ತು ಇದರ ಸಾಕ್ಷಿಯು ನಿಧಾನವಾಗಿ ಆರಂಭವಾಗಿ ಅದು ಎಲ್ಲಾ ವಿಧದಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ ಬೆಳೆಯುತ್ತಾ ಇದೆ. ಈ ನಿರೀಕ್ಷೆಯಲ್ಲಿ ನಮ್ಮ ಹೃದಯಗಳು ಅಷ್ಟೇ ಅಳತೆಗಳಲ್ಲಿ ಸಂತೋಷಿಸಬೇಕು, ಮತ್ತು ಅಷ್ಟೇ ಅಳತೆಯಲ್ಲಿ ನಮಗೆ ಈಗಿನ ಕಾಲದಲ್ಲಿ ದುಃಖ, ಪಾಡುಗಳು, ಅವಮಾನ ಮತ್ತು ವಿವಾದಗಳು ಬರುವಾಗ ನಾವು ನಂಬಿಗಸ್ತರಾಗಿರಬೇಕು ಮತ್ತು ನಮ್ಮ ಪ್ರೀತಿ ಮತ್ತು ನಿಷ್ಠೆಗೆ ಸಾಕ್ಷಿಗಳಾಗಿರಬೇಕು. **R 3365 : 1**

## 20 ಏಪ್ರಿಲ್

**"ನಮ್ಮ ಪಸ್ಕವಾಗಿರುವ ಕ್ರಿಸ್ತನೇ ನಮಗೋಸ್ಕರ ಯಜ್ಞಾರ್ಪಿತನಾಗಿದ್ದಾನೆ... ಆದಕಾರಣ ಹಬ್ಬವನ್ನು ಆಚರಿಸೋಣ." ( 1 ಕೊರಿಂಥದವರಿಗೆ 5 : 7, 8 )**

ಯೆಹೂದ್ಯರ ಪಸ್ಕ ಹಬ್ಬ ನೆನೆಸಿಕೊಳ್ಳುವದನ್ನು, ಕರ್ತನ ರಾತ್ರಿ ಭೋಜನದ ಸಂಬಂಧದಲ್ಲಿ ನೋಡಿದಾಗ ಈ ಪದಗಳಲ್ಲಿ ಎಂತಹ ಅರ್ಥವಿದೆ! ಹೇಗೆ ಛಾಯೆಯಲ್ಲಿರುವ ಬೆಳಕು ನಿಜರೂಪವನ್ನು ಬೆಳಗಿಸುತ್ತದೆ! ಹೇಗೆ ಇಸ್ರಾಯೇಲಿನ "ಜೇಷ್ಟ ಪುತ್ರರು" ಮರಣದ ಅಪಾಯಕ್ಕೆ ಈಡಾದಂತೆ, "ಪರಲೋಕದಲ್ಲಿ ಹೆಸರು ಬರೆಯಲ್ಪಟ್ಟಿರುವ ಮೊದಲ ಫಲವಾದ ಸಭೆಯವರು" ಈಗ ನಿತ್ಯಜೀವ ಅಥವಾ ನಿತ್ಯಮರಣದ ಶೋಧನೆಯಡಿಯಲ್ಲಿದ್ದಾರೆ. ಆಗ ಛಾಯೆಯಲ್ಲಿದ್ದ ಎಲ್ಲಾ ಜೇಷ್ಟ ಪುತ್ರರು ಎಲ್ಲಿಯವರೆಗೆ ಮನೆಯಲ್ಲೇ ಇದ್ದು, ಕುರಿಮರಿಯನ್ನು ತಿಂದು, ಅದರ ರಕ್ತವನ್ನು ಮನೆಯ ಬಾಗಿಲ ನಿಲುವು ಕಂಬಗಳಿಗೂ ಮೇಲಿನ ಪಟ್ಟಿಗೂ ಹಚ್ಚಿ ಸುರಕ್ಷಿತರಾಗಿದ್ದರೋ, ಹಾಗೆಯೇ ವಿಶ್ವಾಸದ ಮನೆವಾರ್ತೆಯವರಾದ ನಾವು ಉತ್ತಮವಾದ "ಹಚ್ಚಿದ ರಕ್ತ"ದೊಳಗೆ ನೆಲೆಸಿದ್ದರೆ, ಯೇಸು ಎಂಬ ಪಸ್ಕದ ಕುರಿಮರಿಯನ್ನು (ಸಾಂಕೇತಿಕವಾಗಿ) ತಿಂದು, ಮರಣದಿಂದ ಸುರಕ್ಷಿತರಾಗಿರುತ್ತೇವೆ – ದೇವರ ಏರ್ಪಾಡಿನಲ್ಲಿ ನಿಶ್ಚಯವಾಗಿ ನಿತ್ಯ ಜೀವವನ್ನು ಪಡೆಯುತ್ತೇವೆ. ಛಾಯೆಯ ಕುರಿಮರಿಯನ್ನು ಈಗ ನಾವು ಅಂಗೀಕರಿಸುವುದಿಲ್ಲ, ಆದರೆ ಇದಕ್ಕೆ ಬದಲಾಗಿ ಈ ಲೋಕದ ಪಾಪವನ್ನು ತೆಗೆದು ಹಾಕುವ "ದೇವರ ಕುರಿಮರಿಯನ್ನು" ಅಂಗೀಕರಿಸುತ್ತೇವೆ. ಆತನನ್ನು ನಾವು ಸೇವಿಸುತ್ತೇವೆ; ಅರ್ಥಗತವಾಗಿ ಆತನ ಮಾಂಸವನ್ನು ತಿನ್ನುವುದಿಲ್ಲ, ಆದರೆ ನಂಬಿಕೆಯ ಮೂಲಕ ಆತನ ಬಲಿಯ ಸವಲತ್ತಿನಲ್ಲಿ ಭಾಗವಹಿಸುತ್ತೇವೆ ಮತ್ತು ಅದನ್ನು ನಮ್ಮದಾಗಿಸಿಕೊಳ್ಳುತ್ತೇವೆ. ಈ ಇಡೀ ರಾತ್ರಿ ಎಂಬ ಸುವಾರ್ತಾ ಯುಗದಲ್ಲಿ ನಾವು ನಮ್ಮ ಕುರಿಮರಿಯನ್ನು–ಬಿಡುಗಡೆ ಹೊಂದುವ ಸಾವಿರ ವರ್ಷದ ಬೆಳಗ್ಗಿನವರೆಗೂ ತಿನ್ನುತ್ತೇವೆ. ವಾರ್ಷಿಕ ಜ್ಞಾಪಕದ ರಾತ್ರಿಭೋಜನವು ನಮಗೆ ಹಬ್ಬವಲ್ಲ, ಆದರೆ ಅದು ಪ್ರಧಾನ ಛಾಯೆ ಅಥವಾ ಉದಾಹರಣೆಯಾಗಿದೆ– ನೆನಸಿಕೊಳ್ಳುವದಾಗಿದೆ–ಬಹಳ ಸುಂದರವಾದದ್ದೂ, ಬಹಳ ಗಂಭೀರವಾದದ್ದೂ, ಉಪಯೋಗವುಳ್ಳದ್ದಾಗಿದೆ. ಆದ್ದರಿಂದ ವಿಶ್ವಾಸದ ಈ ಹಬ್ಬವನ್ನು ಮತ್ತು ನೆನಸಿಕೊಳ್ಳುವ ರಾತ್ರಿಯ ಭೋಜನ ಎರಡನ್ನೂ ಆಚರಿಸೋಣ. **R 4128 : 3**

## 21 ಏಪ್ರಿಲ್

**"ಕ್ರಿಸ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವು ಒಬ್ಬರಿಗೊಬ್ಬರು ಕ್ಷಮಿಸಿರಿ." (ಕೊಲೊಸ್ಸೆಯವರಿಗೆ 3 : 13)**

ಕ್ಷಮಿಸುವ ಮನಸ್ಥಿತಿ ನಮ್ಮಲ್ಲಿ ಯಾವಾಗಲೂ ಇರಬೇಕು, ಮತ್ತು ನಮ್ಮಲ್ಲಿ ಯಾವಾಗಲೂ ಅದು ವ್ಯಕ್ತವಾಗಬೇಕು. ನಮ್ಮ ಜೀವಿತದ ಎಲ್ಲಾ ಮಾತುಗಳಲ್ಲಿ ಮತ್ತು ನಡತೆಗಳಲ್ಲಿ ಪ್ರೀತಿಯ ಉದಾರತೆ ಹಾಗೂ ದಯೆ ಮತ್ತು ಕೆಟ್ಟದ್ದನ್ನು ಯೋಚಿಸದೆ ಇರುವ ಬಯಕೆ–ಅಥವಾ ಅದನ್ನು ಆದಷ್ಟು ಕಡಿಮೆ ಮಾಡುವದು–ಇವುಗಳನ್ನು ತೋರಿಸಬೇಕಾಗಿದೆ. ಈ ಓಟವು ದೇವರ ಸ್ವರೂಪವನ್ನು ಹೊಂದುವ ಓಟವಾಗಿದೆ. ನಾವು ಪಾಪಿಗಳಾಗಿದ್ದಾಗಲೂ ದೇವರು ನಮ್ಮ ಮೇಲೆ ದಯೆ, ಪರೋಪಕಾರ, ಉದಾರತೆಯುಳ್ಳವನಾಗಿದ್ದನು; ಪಾಪಿಗಳು ಆತನ ಬಳಿ ಕ್ಷಮೆ ಕೇಳಲಿ ಎಂದು ಆತನು ಕಾಯಲಿಲ್ಲ, ಆದರೆ ತಕ್ಷಣವೇ ಸಾಮರಸ್ಯ ಮತ್ತು ಬಯಕೆಯನ್ನು ವ್ಯಕ್ತಪಡಿಸಿದನು. ಮತ್ತು ಮನ್ನಿಸಲು ಆತನು ಸಿದ್ಧನಾಗಿದ್ದನು : ಇಡೀ ಸುವಾರ್ತೆಯ ಸಂದೇಶವು ಈ ಪರಿಣಾಮಕ್ಕಾಗಿದೆ: "ದೇವರೊಂದಿಗೆ ಸಮಾಧಾನವಾಗಿರಿ..." ಕ್ಷಮಿಸುವುದರ ವಿಷಯದಲ್ಲಿ ನಮ್ಮ ಹೃದಯಗಳು ಯಾವ ಮನಸ್ಥಿತಿಯಿಂದ ತುಂಬಿರಬೇಕೆಂದರೆ, ನಮ್ಮ ಮುಖದಲ್ಲಿ ಕಠಿಣ ನೋಟ, ಅಥವಾ ಕಹಿಯಾದ ಚುಚ್ಚು ಮಾತುಗಳು ಇರಬಾರದು. ಇದಕ್ಕೆ ತದ್ವಿರುದ್ಧವಾಗಿ, ನಮ್ಮ ಹೃದಯದಲ್ಲಿ ಎಲ್ಲಾ ಸಮಯದಲ್ಲೂ ಇರಬೇಕಾದ ಪ್ರೀತಿಯ ಕ್ಷಮೆಯನ್ನು ನಾವು ವ್ಯಕ್ತಪಡಿಸಬೇಕು. **R 4978 : 3**

## 22 ಏಪ್ರಿಲ್

**"ಆದದರಿಂದ ನಾನು ಆತನಿಗೋಸ್ಕರ ದೊಡ್ಡವರೊಂದಿಗೆ ಭಾಗ ಮಾಡುವೆನು ಆತನು ಬಲಿಷ್ಠರ ಸಂಗಡ ಕೊಳ್ಳೆಯಲ್ಲಿ ಪಾಲು ಮಾಡುವನು; ಆತನು ತನ್ನ ಪ್ರಾಣವನ್ನು ಮರಣದವರೆಗೆ ಹೊಯ್ದುಬಿಟ್ಟು ದ್ರೋಹಿಗಳೊಂದಿಗೆ ಎಣಿಸಲ್ಪಟ್ಟನು; ಅನೇಕರ ಪಾಪವನ್ನು ಹೊತ್ತುಕೊಂಡು ದ್ರೋಹಿಗಳಿಗೋಸ್ಕರ ವಿಜ್ಞಾಪನೆ ಮಾಡಿದನು." ( ಯೆಶಾಯ 53 : 12 )**

ತಂದೆಯಾದ ದೇವರಿಗೆ ತನ್ನ ಮಗನು ತೋರಿಸಿದ ನಂಬಿಕೆ ಮತ್ತು ವಿಧೇಯತೆಯ ನಿಮಿತ್ತವಾಗಿ ಹೇರಳವಾದ ಬಹುಮಾನ ಹೊಂದುವನು ಎಂದು ಚೆನ್ನಾಗಿ ಗೊತ್ತಿತ್ತು. ಯೇಸುವಿನ ಆತ್ಮವು, ಆತನ ಅಸ್ತಿತ್ವವು ಆದಾಮನು ಮತ್ತು ಆತನ ಸಂತತಿಗಾಗಿ ಪಾಪ–ಕಾಣಿಕೆಯಾಗಿ ಅರ್ಪಣೆಯಾಗಿದೆ ಎಂದು ದೇವರಿಗೆ

ಚೆನ್ನಾಗಿ ಗೊತ್ತಿತ್ತು ಮತ್ತು ಅಂತಿಮವಾಗಿ ಮಗನು ತನ್ನ ಆತ್ಮದ ಈ ಯಾತನೆಯಿಂದ ಪ್ರತಿಫಲವನ್ನು ನೋಡಬೇಕು ಮತ್ತು ಅದು ಆತನನ್ನು ತೃಪ್ತಿಪಡಿಸುತ್ತದೆ ಎಂದು ದೇವರಿಗೆ ಗೊತ್ತಿತ್ತು. ಅದು ಪ್ರತಿ ಶೋಧನೆ, ಪ್ರತಿ ಕಣ್ಣೀರು, ಪ್ರತಿ ನೋವಿಗಿಂತ ಹೆಚ್ಚಾಗಿ ಸರಿದೂಗಿಸುತ್ತದೆ. ಮತ್ತು ದೇವರ ಏರ್ಪಾಡಿನಲ್ಲಿ ಈ ಸುವಾರ್ತೆ ಯುಗದಲ್ಲಿ ಕರೆಯಲ್ಪಟ್ಟವರು ಇದೇ ಆದರಣೆಗಳನ್ನು ಮತ್ತು ಆಶ್ವಾಸನೆಗಳನ್ನು ಪ್ರತಿಯೊಬ್ಬರೂ ತಮ್ಮ ಸ್ವಂತ ಹೃದಯಕ್ಕೆ ಅನ್ವಯಿಸಿಕೊಳ್ಳಬಹುದು ಎಂಬುದು ಅದ್ಭುತವಲ್ಲವೇ? ಮತ್ತು ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ ಎಂದು ಗೊತ್ತಿದೆ–ಆತನ ಉದ್ದೇಶಕ್ಕನುಗುಣವಾಗಿ ಆತನು ಕರೆದವರ ಹಿತಕ್ಕಾಗಿ ಎಲ್ಲಾ ಕಾರ್ಯವೂ ಅನುಕೂಲವಾಗುತ್ತದೆ ಎಂದು ಗೊತ್ತಿಲ್ಲವೆ? ಆತನೊಂದಿಗೆ ಬಾಧೆಪಟ್ಟರೆ ನಾವೂ ಸಹ ಆತನೊಂದಿಗೆ ಆಳ್ವಿಕೆ ಮಾಡುವೆವು ಎಂಬ ಭರವಸೆ ನಮಗೆ ಇರುವುದರಿಂದ ನಮಗೆ ಇದು ಅದ್ಭುತವಾಗಿದೆ ಅಲ್ಲವೇ? ಒಂದು ವೇಳೆ ನಮ್ಮ ವಿಮೋಚಕನ ಹೆಜ್ಜೆಯ ಜಾಡಿನಲ್ಲಿ ನಡೆಯುವಾಗ ನಾವು ಆತ್ಮದ ಯಾತನೆಯನ್ನು ಅನುಭವಿಸಿದರೆ ನಾವೂ ಸಹ ನೋವಿಗಿಂತ ಹೆಚ್ಚಾದ ಸರಿದೂಗಿಸುವಿಕೆಯ ತೃಪ್ತಿಯನ್ನು ಹೊಂದುತ್ತೇವೆ ಮತ್ತು ಕರ್ತನ ವಾಕ್ಯವು ಅದನ್ನು ಖಚಿತಪಡಿಸುತ್ತದೆ ಅಲ್ಲವೇ? ಯಾರೆಲ್ಲಾ ಕರ್ತನ ವಾಗ್ದಾನಗಳನ್ನು ನಂಬಿಕೆಯಿಂದ ಅಂಗೀಕರಿಸುತ್ತಾರೋ,– "ನನಗೆ ಏನೇನು ಸಂಭವಿಸಿದರೂ ದೇವರ ಮೇಲಣ ನನ್ನ ನಂಬಿಕೆಯು ಆತನಲ್ಲಿ ದೃಢವಾದ ಭರವಸವುಳ್ಳವನಾಗಿರುವಂತೆ ಮಾಡುವದು" ಎಂಬ ವಿಷಯವು ನಿಶ್ಚಯವಾಗಿ ನಡೆಯುತ್ತದೆ. **R 3591 : 4**

## 23 ಏಪ್ರಿಲ್

**"ಯಾಕಂದರೆ ಕರ್ತನು ತನ್ನ ಮಹತ್ತಾದ ಹೆಸರಿಗೋಸ್ಕರ ತನ್ನ ಜನರನ್ನು ಕೈ ಬಿಡುವದಿಲ್ಲ." ( 1 ಸಮುವೇಲನು 12 : 21 )**

ಕೃತಜ್ಞತೆ ಮತ್ತು ನಂಬಿಗಸ್ತಿಕೆಯ ಅಡಿಯಲ್ಲಿ ದೇವರು–ಇಸ್ರಾಯೇಲ್ಯರಿಗೆ ಐಗುಪ್ತ್ಯದಿಂದ ಬಿಡುಗಡೆ, ಅರಣ್ಯದಲ್ಲಿ ಅವರಿಗೆ ಮಾರ್ಗದರ್ಶನ ಮತ್ತು ಇಸ್ರಾಯೇಲ್‍ದೇಶದೊಳಗೆ ಅವರ ಪ್ರವೇಶ, ಅವರಿಗೆ ಮಾಡಿದ ಮಹತ್ತರವಾದ ಕಾರ್ಯಗಳನ್ನು ನೆನಪಿಡುವಂತೆ ಸಮುವೇಲನು ಶಾರೀರಿಕ ಇಸ್ರಾಯೇಲ್ಯರಿಗೆ ಮನವಿ ಮಾಡಿದನು; ಆದರೆ ಒಂದು ವೇಳೆ ಈ ವಾಕ್ಯಗಳನ್ನು ಆತ್ಮೀಕ ಇಸ್ರಾಯೇಲ್ಯರಾದ ನಮಗೆ ಅನ್ವಯಿಸಿದರೆ, ನಮಗೆ ಅದು ಎಷ್ಟು ದೊಡ್ಡ ಪ್ರಭಾವ ಬೀರುತ್ತದೆ! ಕರ್ತನು ನಮ್ಮನ್ನು ಪಾಪ ಮತ್ತು ಮರಣ ಎಂಬ ಐಗುಪ್ತ್ಯದ ಬಂಧನದಿಂದ ಬಿಡುಗಡೆ

ಮಾಡಿದ್ದಾನೆ, ಆತನು ನಮ್ಮನ್ನು ಕತ್ತಲೆಯಿಂದ ಆತನ ಆಶ್ಚರ್ಯಕರವಾದ ಬೆಳಕಿಗೆ ನಡೆಸಿದ್ದಾನೆ. ಆತನು ನಮ್ಮನ್ನು ನಾಶನದ ಕುಳಿಯಿಂದ ಮತ್ತು ಹೊಲಸಾದ ಕೆಸರಿನಿಂದ ಮೇಲಕ್ಕೆತ್ತಿರುವುದು ಮಾತ್ರವಲ್ಲದೆ ನಮ್ಮ ಪಾದಗಳನ್ನು ಯೇಸು ಕ್ರಿಸ್ತನೆಂಬ ಬಂಡೆಯ ಮೇಲೆ ನಿಲ್ಲಿಸಿದ್ದಾನೆ; ಹೌದು, ಅಧಿಕವಾಗಿ! ನಮ್ಮ ಬಾಯಲ್ಲಿ ನೂತನ ಹಾಡನ್ನು ಇಟ್ಟಿದ್ದಾನೆ, ಅದು ದೇವರ ಪ್ರೀತಿಯ–ದಯೆಯೇ. ಆತನು ನಮ್ಮ ಪಾಪಗಳನ್ನು ಕ್ಷಮಿಸಿದ್ದು ಮಾತ್ರವಲ್ಲದೆ, ಯೇಸುವಿನಲ್ಲಿ ನಮ್ಮನ್ನು ಅಂಗೀಕರಿಸಿ, ಕ್ರಿಸ್ತನೊಂದಿಗೆ ಸಹ–ಬಾಧ್ಯಸ್ತರಾಗಲು ಆಹ್ವಾನಿಸಿದ್ದಾನೆ. ಈ ಅರಣ್ಯ ಪಯಣದಲ್ಲಿ ನಮ್ಮ ಹೃದಯಗಳನ್ನು ಪ್ರೋತ್ಸಾಹಿಸುವದಕ್ಕಾಗಿ ಆತನು ನಮಗೆ ಅತ್ಯಂತ ಮಹತ್ವವುಳ್ಳ ಮತ್ತು ಅಮೂಲ್ಯವಾದ ವಾಗ್ದಾನಗಳನ್ನು ನಮಗೆ ದಯಪಾಲಿಸಿರುವದು ಮಾತ್ರವಲ್ಲದೆ, ಅತ್ಯಂತ ದೊಡ್ಡ ಮತ್ತು ಅಮೂಲ್ಯವಾದ ವಿಷಯಗಳನ್ನು ಮೀಸಲಾಗಿಟ್ಟಿದ್ದಾನೆ, ಅದರಲ್ಲಿ ನಾವು ಪಡೆದುಕೊಳ್ಳುವ ನಮ್ಮ ಸ್ವಾಸ್ಥ್ಯವನ್ನು ಕುರಿತು ಆತನು ಪವಿತ್ರಾತ್ಮದ ಮೂಲಕ ಒಂದು ಮುನ್ನೋಟವನ್ನು ಅಥವಾ ಮುನ್‌ರುಚಿಯನ್ನು ನೀಡಿದ್ದಾನೆ. **R 4201 : 4**

## 24 ಏಪ್ರಿಲ್

**"ಒಳ್ಳೆಯ ಭೂಮಿಯ ಮೇಲೆ ಬಿತ್ತಲ್ಪಟ್ಟವರು ಇವರೇ; ಇಂಥವರು ವಾಕ್ಯವನ್ನು ಕೇಳಿ ಅಂಗೀಕರಿಸಿದ ಮೇಲೆ.... ಫಲಕೊಡುತ್ತಾರೆ." (ಮಾರ್ಕನು 4 : 20)**

ಪ್ರಿಯ ಸಹೋದರರೇ,ಸಹೋದರಿಯರೇ ನಮ್ಮ ಹೃದಯಗಳು ಒಳ್ಳೆಯ ಭೂಮಿಯಂತೆ ಇರುವುದನ್ನು ನಿಶ್ಚಯಪಡಿಸಿಕೊಳ್ಳುವದು ಮಾತ್ರವಲ್ಲದೆ, ದೇವರ ರಾಜ್ಯದ ವಾಕ್ಯವೆಂಬ ಒಳ್ಳೆಯ ಬೀಜವನ್ನು ಪಡೆದಿದ್ದೇವೆ ಮತ್ತು ಬೆಳೆಸುತ್ತಿದ್ದೇವೆ ಎಂಬುದನ್ನು ನಿಶ್ಚಯಪಡಿಸಿಕೊಳ್ಳೋಣ. ಇದಲ್ಲದೆ ಅಧಿಕ ಫಲಕೊಡುವವರಾಗಿರಲು ಪ್ರಯತ್ನಿಸೋಣ. ಬೋಧಕನ ಸ್ತುತಿಸ್ತೋತ್ರಗಳಿಗಾಗಿ ಕೆಲವರು ಮೂವತ್ತರಷ್ಟು, ಕೆಲವರು ಅರವತ್ತು ಮತ್ತು ಇನ್ನೂ ಕೆಲವರು ನೂರರಷ್ಟು ಫಲ ಕೊಡುವವರಾಗಿರುವುದರಿಂದ, ದೇವರ ಕೃಪೆಯಿಂದ ನಮ್ಮದು ಎಷ್ಟರದು ಮತ್ತು ನಮಗೆ ಯಾವುದು ಸಹಾಯಕವಾಗಿದೆ ಎಂದು ತಿಳಿದುಕೊಳ್ಳುವುದರಿಂದ, ನಮ್ಮ ರಾಜನ ಸೇವೆಗೆ ನಮ್ಮ ಅತಿದೊಡ್ಡ ಸಾಮರ್ಥ್ಯ ಮತ್ತು ಸೇವೆಯ ಅಳತೆಗೆ ತಕ್ಕಂತೆ ನಾವು ನೂರರಷ್ಟು ಫಲಕೊಡುವವರಾಗಿರುತ್ತೇವೆ–ನಮ್ಮ ನಂಬಿಗಸ್ತಿಕೆಯನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು? ಇದಕ್ಕೆ ಉತ್ತರವೇನೆಂದರೆ, ನಮ್ಮ ಹೃದಯದ ಪ್ರಾಮಾಣಿಕತೆಯನ್ನು ಹೆಚ್ಚಿಸುವುದರಿಂದ ಸಾಧ್ಯವಾಗುತ್ತದೆ. ಇದು ಬೀಜವು

ಹೆಚ್ಚಾಗುವಂತೆ ನಮ್ಮನ್ನು ಸಿದ್ಧಪಡಿಸುತ್ತದೆ ಮತ್ತು ಇದನ್ನು ಪರಿಪೂರ್ಣತೆಗೆ ತರಲು ನಮಗೆ ಅನುವು ಮಾಡಿಕೊಡುತ್ತದೆ. ಸುಗ್ಗಿಯು ಹತ್ತಿರವಾಗಿದೆ; ಆದ್ದರಿಂದ ಶ್ರದ್ಧೆಯಿಂದ ನಾವು ಇನ್ನು ಅವಕಾಶವಿರಲಾಗಿ ಅತ್ಯಂತ ದೊಡ್ಡ ಅಳತೆಯಲ್ಲಿ, ನಮ್ಮ ಸ್ವಭಾವದಲ್ಲಿ, ಸುತ್ತಮುತ್ತಲಿನ ಅವಕಾಶಗಳಲ್ಲಿ ನಾವು ಫಲ ನೀಡುವುದನ್ನು ನಮ್ಮ ಬೋಧಕನು ನಮ್ಮನ್ನು ನೋಡುವವನಾಗಲಿ. **R 3765 : 1**

## 25 ಏಪ್ರಿಲ್

**"ನಾನು ದೇವರನ್ನು ಸೇವಿಸಿ ಸ್ತೋತ್ರಸಲ್ಲಿಸುತ್ತೇನೆ,, ನಾನು ಹಗಲಿರುಳು ನನ್ನ ಪ್ರಾರ್ಥನೆಗಳಲ್ಲಿ ನಿನ್ನನ್ನು ತಪ್ಪದೆ ಜ್ಞಾಪಕ ಮಾಡುತ್ತೇನೆ." (2 ತಿಮೊಥೆಯನಿಗೆ 1 : 3)**

ಯಾರ ಹೃದಯಗಳು ತಮ್ಮ ಶತ್ರುಗಳನ್ನು ಪ್ರೀತಿಸಿ, ಮತ್ತು ನಂಬಿಕೆಯ ಮನೆವಾರ್ತೆಯವರನ್ನು ಪ್ರೀತಿಸಿ, ಎಲ್ಲಕ್ಕಿಂತ ಹೆಚ್ಚಾಗಿ, ಕರ್ತನನ್ನು ಪ್ರೀತಿಸುತ್ತಿದ್ದು, ಇಂತವರು ಒಂದು ವೇಳೆ ಇತರರ ಒಳಿತನ್ನು ಬಯಸದೆ, ಅವರಿಗಾಗಿ ಪ್ರಾರ್ಥಸದೆ ಇರುವ ಮನೋಭಾವವನ್ನು ಅವರ ಹೃದಯದಲ್ಲಿ ಹೊಂದಿದ್ದರೆ, ಅವರು ನಿಜವಾಗಿಯೂ ಅತಿ ಸೂಕ್ಷ್ಮವುಳ್ಳವರಾಗಿರುತ್ತಾರೆ. ಅಂತಹ ಹೃದಯಗಳಲ್ಲಿ ಕೋಪ, ಕಹಿತನ, ಜಗಳ, ಹೊಟ್ಟೆಕಿಚ್ಚು ಎಂಬುದಕ್ಕೆ ಜಾಗವೇ ಇರುವುದಿಲ್ಲ. ಅಂತಹ ಹೃದಯಗಳಲ್ಲಿ ಪವಿತ್ರ ಅಭಿಷೇಕದ ಎಣ್ಣೆಯನ್ನು ಪ್ರತಿನಿಧಿಸುವ ದೇವರ ಪ್ರೀತಿಯು ಚೆಲ್ಲಿರುತ್ತದೆ, ಪರಿಶುದ್ಧನಿಂದ ತೈಲಲೇಪನ ಹೊಂದಿ ಎಲ್ಲಾ ಸಂವೇದನೆಗಳನ್ನು ನಯಗೊಳಿಸುತ್ತದೆ, ಮುಖಭಾವವನ್ನು ಮಾತ್ರವಲ್ಲದೆ, ನಾಲಿಗೆ ಮತ್ತು ಹೃದಯವನ್ನೂ ಸುಗಮಗೊಳಿಸುತ್ತದೆ; ಏಕೆಂದರೆ "ಹೃದಯದ ಸಮೃದ್ಧಿಯಿಂದ ಬಾಯಿ ಮಾತನಾಡುತ್ತದೆ" ಮತ್ತು ಕಹಿ ನೀರು ಶುದ್ಧ ಬುಗ್ಗೆಯಿಂದ ಬರಲು ಸಾಧ್ಯವಿಲ್ಲ. **R 4201 : 2**

## 26 ಏಪ್ರಿಲ್

**"ಈಗ ನಿದ್ರೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತುಕೊಳ್ಳಿರಿ; ನಾವು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ರಕ್ಷಣೆಯು ಹತ್ತಿರವಾಯಿತು. ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು." (ರೋಮಾಪುರದವರಿಗೆ 13 : 11 , 12)**

ಅಪೋಸ್ತಲನು ತನ್ನ ದಿನದ ಪರಿಶುದ್ಧ ಜನರಿಗೆ, "ಸಮಯವನ್ನು ತಿಳಿದುಕೊಂಡು ಈಗ ನಿದ್ರೆಯಿಂದ ಎಚ್ಚರಗೊಳ್ಳುವ ಸಮಯ ಬಂದಿದೆ" ಎಂದು

ಹೇಳಿರಬಹುದು, ಏಕೆಂದರೆ ಅವರು ಆಗ ಸುವಾರ್ತಾ ಯುಗದಲ್ಲಿ ಪ್ರವೇಶಿಸಿದರು, ಅದರ ಉನ್ನತ ಕರೆಯುವಿಕೆಯ ಬಹುಮಾನವನ್ನು ಹೊಂದುವ ಓಟವನ್ನು ಓಡುವ ಸವಲತ್ತನ್ನು ಹೊಂದಿದ್ದರು, ಈ ಯುಗದ ಅಂತ್ಯದ ದಿನಗಳಲ್ಲಿ ಅಪೋಸ್ತಲನ ಮಾತುಗಳು ಇನ್ನೂ ಎಷ್ಟು ಹೆಚ್ಚಿನ ಪ್ರಭಾವವನ್ನು ಬೀರುತ್ತದೆ !... ಹೌದು "ಇರುಳು ಬಹಳ ಮಟ್ಟಿಗೆ ಕಳೆಯಿತು" ಮತ್ತು "ಹಗಲು [ಮಹಿಮೆಯುಳ್ಳ ಸಾವಿರ ವರ್ಷದ ದಿನವು] ಸಮೀಪವಾಯಿತು." ಈಗಲೂ ಮುಂಜಾನೆಯ ಬೂದಿಗೆರೆಗಳು ಕಾಣಿಸಿಕೊಳ್ಳುತ್ತವೆ. ರಾಜನಾದ ಮದಲಿಂಗನು ತನಗಾಗಿ ಸಿದ್ಧರಾಗಿ ಕಾಯುತ್ತಿರುವ ಮದುಮಗಳನ್ನು ಸ್ವೀಕರಿಸುವ ದಿನವಾಗಿದೆ ಮತ್ತು ನಾವು ಆತನೊಂದಿಗೆ ಒಟ್ಟಾಗಿ ಸೇರಲು ಸಿದ್ಧವಾಗುವ ಸಮಯ ಬಹಳ ಹತ್ತಿರವಾಗಿದೆ. ನಿದ್ರೆಯಿಂದ ಎಚ್ಚರಗೊಳ್ಳಲು ಇದು ನಿಜವಾಗಿಯೂ ತಕ್ಕ ಸಮಯವಾಗಿದೆ; ಏಕೆಂದರೆ ಈಗಲೇ ರಕ್ಷಣೆಯ ಸಮಯವಾಗಿದೆ, ನಮ್ಮ ಮಹಿಮೆಯುಳ್ಳ ವಿಮೋಚನೆಯು ಬಹಳ ಹತ್ತಿರದಲ್ಲಿದೆ. **R 3830 : 5**

## 27 ಏಪ್ರಿಲ್

**"ದೇವರ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ, ಆತನ ಆಜ್ಞೆಗಳು ಕಠಿಣವಾದವುಗಳಲ್ಲ." ( 1 ಯೋಹಾನನು 5 : 3 )**

ಯಾರೆಲ್ಲಾ ಈ ಆಶೀರ್ವಾದಗಳಿಗಾಗಿ ಕರ್ತನಿಗೆ ಹೃದಯದಲ್ಲಿ ಕೃತಜ್ಞತೆಯನ್ನು ಹೊಂದಿರುವನೋ, ಮೆಚ್ಚುಗೆಯನ್ನೂ ಮತ್ತು ಧನ್ಯವಾದವನ್ನು ವ್ಯಕ್ತಪಡಿಸುತ್ತಾನೋ, ಅಂತವನು ಕರ್ತನನ್ನು ಪೂರ್ಣ ಹೃದಯದಿಂದ ಸೇವೆ ಮಾಡಲು ನಿಜವಾಗಿಯೂ ಪ್ರಯತ್ನಿಸುವುದಿಲ್ಲವೆ! ಕರ್ತನ ವಾಕ್ಯವನ್ನು ನೆನಪಿಟ್ಟುಕೊಳ್ಳಲು ಮತ್ತು ಅದರ ಅವಶ್ಯಕತೆಗಳನ್ನು ಅನುಸರಿಸಲು ದೈವಿಕ ಸಹಾಯವನ್ನು ಪಡೆಯುವ ಮನೋಭಾವ ಹೊಂದಿರುವವನು ಮತ್ತು ಅಂಥವನು "ನೀವು ನನ್ನನ್ನು ಪ್ರೀತಿಸಿದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ." ಎಂಬ ವಾಕ್ಯವನ್ನು ಮರೆತು ಬಿಡಲು ಹೇಗೆ ಸಾಧ್ಯ? ಅಂಥವರಿಗೆ ಪ್ರತಿದಿನ ಕರ್ತನ ಆಜ್ಞೆಗಳು ವರ್ಧಿಸುತ್ತದೆ, ಹೆಚ್ಚಾಗುತ್ತದೆ. ಪ್ರತಿದಿನ ಅವನು ಈ ಆಜ್ಞೆಗಳಲ್ಲಿ ಹೊಸ ಬಲವನ್ನು(ಪ್ರಭಾವವನ್ನು), ಹೊಸ ಅರ್ಥಗಳನ್ನು ಕಂಡುಕೊಳ್ಳುತ್ತಾನೆ. ಅವನು ಕೃತಜ್ಞತೆಯುಳ್ಳವನಾಗಿದ್ದರೆ, ಆತನು ಈ ಹಿಂದೆ ಕರ್ತನು ತನ್ನ ಬಗ್ಗೆ ತೋರಿಸಿದ ಅಕ್ಕರೆಯ ಏರ್ಪಾಡನ್ನು ಮೆಚ್ಚಿದ್ದರೆ, ದೇವರ ಆಜ್ಞೆಗಳಲ್ಲಿರುವ ಆಳವಾದ ಅರ್ಥಗಳು ಅವನಿಗೆ ದುಃಖಕರವಾಗಿರುವುದಿಲ್ಲ; ಆದರೆ ನಮ್ಮ ಕರ್ತನ ಮನೋಭಾವಕ್ಕೆ ಸಹಾನುಭೂತಿಯಿಂದ ದಿನದಿಂದ ದಿನಕ್ಕೆ ಮುಂದೆ ಹೋಗಲು ಅವನು ಇನ್ನೂ ಸಂತೋಷಪಡುತ್ತಾನೆ, "ಓ ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ

ಸಂತೋಷವು: ನಿನ್ನ ನ್ಯಾಯ ಪ್ರಮಾಣವು ನನ್ನ ಅಂತರಂಗದಲ್ಲಿ ಅದೆ." ಅದೇ ರೀತಿ ಅದು ನಮ್ಮೊಂದಿಗೆ ಇರುತ್ತದೆ. ಅಪೋಸ್ತಲನು ಹೇಳಿದಂತೆ, ನಾವು ಆತನ ಆಜ್ಞೆಗಳನ್ನು ಕೈಕೊಳ್ಳುತ್ತೇವೆ ಮತ್ತು ನಮಗೆ ಅವು ದುಃಖಕರವಾಗಿರುವುದಿಲ್ಲ, ನಾವು ದೇವರನ್ನು ಪ್ರೀತಿಸುತ್ತೇವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಮತ್ತು ನಾವು ದೇವರಿಂದ ಪ್ರೀತಿಸಲ್ಪಟ್ಟು, ಆತನಿಂದ ಮುದ್ರೆ ಹೊಂದಿದವರಾಗಿ, ಆತನ ಆತ್ಮ ಅಂದರೆ ಸತ್ಯದ ಆತ್ಮದಿಂದ ಅಧಿಕ ಅಧಿಕವಾಗಿ ಪ್ರಭಾವಿತರಾಗುತ್ತೇವೆ. **R 4201 : 5**

## 28 ಏಪ್ರಿಲ್

**"ನಿಮ್ಮನ್ನು ಪ್ರೀತಿಸುವವರನ್ನೇ ನೀವು ಪ್ರೀತಿಸಿದರೆ ನಿಮಗೇನು ಹೊಗಳಿಕೆ ಬಂದೀತು? ಯಾಕಂದರೆ ಪಾಪಿಗಳು ಸಹ ತಮ್ಮನ್ನು ಪ್ರೀತಿಸುವವರನ್ನೇ ಪ್ರೀತಿಸುತ್ತಾರೆ, ನಿಮಗೆ ಒಳ್ಳೇದನ್ನು ಮಾಡುವವರಿಗೆ ನೀವು ಒಳ್ಳೇದನ್ನು ಮಾಡಿದರೆ ನಿಮಗೇನು ಹೊಗಳಿಕೆ ಬಂದೀತು? ಯಾಕಂದರೆ ಪಾಪಿಗಳು ಸಹ ಅವರಂತೆಯೇ ಮಾಡುತ್ತಾರೆ." (ಲೂಕನು 6 : 32 , 33)**

ಕರ್ತನ ಜನರ ಮಾನದಂಡವು ಕೃತಜ್ಞತೆಗಿಂತ ಇನ್ನೂ ಹೆಚ್ಚಾಗಿದೆ, ಆದರೂ ಅದು ಇದನ್ನು ಒಳಗೊಂಡಿರಬೇಕು. ನಮಗಿರುವ ಮಾನದಂಡವೇನೆಂದರೆ ಅದು ಔದಾರ್ಯ. ನಮಗೆ ವಿರೋಧವಾಗಿ ತಪ್ಪು ಮಾಡಿದವರಿಗೆ ಮತ್ತು ನಮಗೆ ವಿರೋಧವಾಗಿ ಎಲ್ಲಾ ರೀತಿಯ ಕೆಟ್ಟದ್ದನ್ನು ತಪ್ಪಾಗಿ ಹೇಳುವವರಿಗೆ ನಾವು ಕ್ಷಮಿಸಬೇಕಾಗಿದೆ. ನಮ್ಮ ಕರ್ತನ ಹಾಗೆ ಈ ರೀತಿಯ ಗುಣಲಕ್ಷಣದ ಹೋಲಿಕೆಯನ್ನು ಹೊಂದುವವರು ಆತನಿಂದ ಹೆಚ್ಚಾದ ಆಶೀರ್ವಾದವನ್ನು ಪಡೆಯುತ್ತಾರೆ ಮತ್ತು ಅವರಿಗೆ ಪರಲೋಕದಲ್ಲಿ ಪ್ರತಿಫಲವಿದೆ ಎಂದು ತಿಳಿಯಲು, ಸಂತೋಷ ಪಡಲು, ಮತ್ತು ಅತಿಯಾದ ಆನಂದ ಪಡಲು ಕರೆಯಲಾಗಿದೆ. **R 4200 : 5**

## 29 ಏಪ್ರಿಲ್

**"ಎಲ್ಲರ ಸಂಗಡ ಸಮಾಧಾನದಿಂದಿರುವದನ್ನೂ ಅನುಸರಿಸಿರಿ." (ಇಬ್ರಿಯರಿಗೆ 12 : 14)**

ಹೊಸ ಸೃಷ್ಟಿಗಳಾಗಿರುವ ನಾವು ಬಹಳ ಜಾಗರೂಕರಾಗಿರಬೇಕು, ನಾವು ಬೆಳೆಯುತ್ತಲೇ ಇರಬೇಕು, ಶರೀರವನ್ನು ಜಯಿಸಲು ಶಕ್ತಿಯನ್ನು ಹೆಚ್ಚಿಸಬೇಕು. ಆಗ ಮಾತ್ರ ನಾವು ಸುರಕ್ಷಿತವಾಗಿರಬಹುದು. ಸ್ವಾರ್ಥತೆಯನ್ನು ಜಯಿಸುವುದೇ ನಮ್ಮ ವಿಶೇಷ ಹೋರಾಟವಾಗಿರಬೇಕು. ಕರ್ತನ ಜನರಲ್ಲಿ ಅನೇಕರು ನೈಸರ್ಗಿಕವಾಗಿ

ಯುದ್ಧಶೀಲತೆಯನ್ನು ಹೊಂದಿರುತ್ತಾರೆ. ಇದನ್ನು ನಿಯಂತ್ರಿಸಿ ಸರಿಯಾದ ದಿಕ್ಕಿನಲ್ಲಿ ತಿರುಗಿಸಿದರೆ ಇದೊಂದು ಉತ್ತಮ ಗುಣಲಕ್ಷಣವಾಗಿರುತ್ತದೆ. ಯುದ್ಧಶೀಲತೆ ಅಗತ್ಯ, ಅದಿಲ್ಲದಿದ್ದರೆ ನಾವು ಎಂದಿಗೂ ಜಯಿಸಲು ಸಾಧ್ಯವಿಲ್ಲ. ಆದರೆ ನಾವು ಸಹೋದರರೊಂದಿಗೆ ಹೋರಾಡುವುದಿಲ್ಲ ಎಂದು ನಮ್ಮನ್ನು ನಾವೇ ನಿರ್ಬಂಧಿಸಿಕೊಳ್ಳಬೇಕು; ಮತ್ತು ನಾವು ಸೈತಾನನೊಡನೆ ವೈಯಕ್ತಿಕವಾಗಿ ಯುದ್ಧಕ್ಕೆ ಹೋಗಬಾರದು. ನಾವು ಅವನಿಗೆ ಯಾವ ರೀತಿಯಲ್ಲೂ ಸಮಾನರಲ್ಲ. ಆದರೆ ನಾವು ಅವನನ್ನು ವಿರೋಧಿಸಬೇಕು. ಕರ್ತನು ಶೀಘ್ರದಲ್ಲೇ ಅವನನ್ನು ಹಿಡಿದು ಒಂದು ಸಾವಿರ ವರ್ಷಗಳ ಕಾಲ ಬಂಧಿಸುವನು. ಕರ್ತನು ಎದುರಾಳಿಯನ್ನು ಗೆಲ್ಲುತ್ತಾನೆ ಮತ್ತು ಅವನ ಎಲ್ಲಾ ಕೆಲಸಗಳನ್ನು ಏನೂ ಇಲ್ಲದಂತೆ ಮಾಡುತ್ತಾನೆ. ಆದರೆ ಆ ಕೆಲಸವನ್ನು ಸಂಪೂರ್ಣವಾಗಿ ಸಾಧಿಸಲು ಇಡೀ ಸಾವಿರ ವರ್ಷಗಳು ಬೇಕಾಗುತ್ತದೆ. ನಾವು ಶರೀರದಲ್ಲಿರುವಾಗ ಸೈತಾನನನ್ನು ಸೋಲಿಸಲು ಅಥವಾ ಅವನ ಕಾರ್ಯಗಳನ್ನು ಉರುಳಿಸಲು ನಾವು ಆಶಿಸಬೇಕಾಗಿಲ್ಲ. ಇದು ನಮ್ಮ ಧ್ಯೇಯವಲ್ಲ. ಕರ್ತನು ನಮಗೆ ಏನು ಕೊಟ್ಟಿದ್ದಾನೆಂದರೆ, ನಮ್ಮನ್ನು  ನಾವು ಜಯಿಸುವದಾಗಿದೆ, ಆದಾಮನ ಬಿದ್ದು ಹೋದ ಸಂತತಿಯಲ್ಲಿರುವ ಈ ದೇಹವನ್ನು ನಿಯಂತ್ರಿಸುವುದು, ಆ ದುಷ್ಟನು ನಮ್ಮನ್ನು ಮುಟ್ಟದ ಹಾಗೆ ಕಾಪಾಡಿಕೊಳ್ಳವದು ಅವಶ್ಯವಾಗಿದೆ. **R 5923 : 5**

## 30 ಏಪ್ರಿಲ್

**"ನೀನು ದೇವರಿಗೆ ಯೋಗ್ಯವಾಗಿ ಕಾಣಿಸಿಕೊಳ್ಳುವುದಕ್ಕೆ ಅಭ್ಯಾಸಿಸು. ಅವಮಾನಕ್ಕೆ ಗುರಿಯಾಗದ ಕೆಲಸದವನೂ...ಆಗಿರು." (2 ತಿಮೊಥೆಯನಿಗೆ 2 : 15)**

ತನ್ನ ಬಹಿರಂಗ ಸೇವೆಯನ್ನು ಪ್ರಾರಂಭಿಸುವ ಮೊದಲು (ನಮ್ಮ) ಬೋಧಕನು ದೈವಿಕ ಯೋಜನೆಯ ಅಧ್ಯಯನಕ್ಕಾಗಿ ಅರಣ್ಯದ ಪಕ್ಕಕ್ಕೆ ಹೋಗುವದು ಬುದ್ದಿವಂತ ಮತ್ತು ಸರಿಯಾದ ಕಾರ್ಯವಾಗಿದೆ. ಹಾಗಿರುವಾಗ ಬಿದ್ದುಹೋದವರೂ, ಅಪೂರ್ಣ ತೀರ್ಪುಗಳನ್ನು ಹೊಂದಿರುವ ಆತನ ಹಿಂಬಾಲಕರು, ಯಾವುದೇ ಕೆಲಸವನ್ನು ಪ್ರಾರಂಭಿಸುವ ಮೊದಲು ಕರ್ತನ ವಾಕ್ಯ ಮತ್ತು ಅದರ ಮನೋಭಾವವನ್ನು ಹುಡುಕಿ, ಕರ್ತನ ದ್ರಾಕ್ಷೇತೋಟದಲ್ಲಿ ಯಾವ ಕೆಲಸವನ್ನು ಮಾಡಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಈ ಪಾಠವನ್ನು ಸಾಮಾನ್ಯವಾಗಿ ಅನುಸರಿಸಿದರೆ, ಕರ್ತನ ಹೆಸರಿನಲ್ಲಿ ಆಡಂಬರದ ಶೈಲಿಯಲ್ಲಿ ಭಾಷಣ ಮಾಡುವುದು ತೀರಾ ಕಡಿಮೆಯಾಗುತ್ತದೆ, ಕೆಲವರು ದೈವಿಕ ಚಿತ್ತವನ್ನು ಅಥವಾ ಆ ಯೋಜನೆಯ ಕೆಲಸವನ್ನು ಜಾಗರೂಕತೆಯಿಂದ ಅಧ್ಯಯನ ಮಾಡದೆ, ಆತುರವಾಗಿ ಹೋಗಿ ಕರ್ತನ ಕೆಲಸಗಳಲ್ಲಿ ಕೈ ಹಾಕುವದು ತಮ್ಮ ಸವಲತ್ತು ಎಂದು

ಭಾವಿಸುತ್ತಾರೆ–ಹಾಗೆ ಮಾಡಿ ಅವರು ಕರ್ತನ ಸೇವೆ ಮಾಡಬೇಕೆಂದು ಬಯಸುವವರು ಕರ್ತನ ಯೋಜನೆಗೆ ತಡೆಯೊಡ್ಡುವವರಾಗಿರುತ್ತಾರೆ. ಆದ್ದರಿಂದ ತಿಮೊಥೆಯನಿಗೆ ಅಪೋಸ್ತಲನು ಹೇಳುವ ವಾಕ್ಯವನ್ನು ನಾವು ಒಬ್ಬೊಬ್ಬರು ನಮಗೆ ಅತ್ಯಧಿಕವಾಗಿ ಅನ್ವಯಿಸಿಕೊಳ್ಳೋಣ. ಎಲ್ಲಿಯವರೆಗೂ ನಾವು ಅಧ್ಯಯನ ಮಾಡುವುದಿಲ್ಲವೋ, ಅಲ್ಲಿಯವರೆಗೆ ಕರ್ತನ ಸೇವೆಯಲ್ಲಿ ನಮ್ಮ ಸಿದ್ಧತೆ ಅಥವಾ ಉಪಯೋಗವನ್ನು ಕುರಿತು ಸಂದೇಹ ಪಡಲು ಕಾರಣವಾಗುತ್ತದೆ. ಮೊದಲನೆಯದಾಗಿ ಸಂಪೂರ್ಣವಾದ, ಕಾಯ್ದಿರಿಸದ ಪ್ರತಿಷ್ಠೆ ಬರುತ್ತದೆ; ಮತ್ತು ಎರಡನೆಯದಾಗಿ, ಆ ಪ್ರತಿಜ್ಞೆಯನ್ನು ಈಡೇರಿಸುವುದೇ ಮೊದಲ ಹೆಜ್ಜೆಯಾಗಿರುತ್ತದೆ. ದೈವಿಕ ಚಿತ್ತವನ್ನು ದೈವಿಕ ವಾಕ್ಯ ಮತ್ತು ದೈವಿಕ ಯೋಜನೆಯನ್ನು ಅದ್ಯಯನ ಮಾಡುವದು; ಮತ್ತು ಇವುಗಳನ್ನು ಅನುಸರಿಸಿದ ನಂತರ ಕರ್ತನ ದ್ರಾಕ್ಷೇತೋಟದಲ್ಲಿ ಕೆಲಸ ಮಾಡಬೇಕು. **R 3717 : 1**

## 1 ನೋ

**"ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯ ಕೂಡದೆಂದು ನಾನು ನಿಮ್ಮಲ್ಲಿ ತೀರ್ಮಾನಿಸಿಕೊಂಡೆನು " (1 ಕೊರಿಂಥದವರಿಗೆ 2 : 2 )**

ಸಹೋದರರೇ ಸುವಾರ್ತೆಯಲ್ಲಿ ನಿಮ್ಮ ಮುಂದೆ ಇಟ್ಟಿರುವ ಅದ್ಭುತವಾದ ಭರವಸೆಯನ್ನು ನೀವು ಗೌರವಿಸುತ್ತೀರಿ. ಅಪೋಸ್ತಲನು "1 ತಿಮೊಥೆಯನಿಗೆ 4 : 1" ರಲ್ಲಿ ಹೇಳುವಂತೆ ವಂಚಿಸುವ ಆತ್ಮಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯ ಕೊಡಬೇಡಿರಿ ಎಂದು ನಾವು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ಅದೇ ಸಮಯದಲ್ಲಿ ನಿಮ್ಮ ಉದ್ದೇಶದಲ್ಲಿ ಸ್ಥಿರತೆಯೊಂದಿಗೆ ಇದ್ದು ನಿಮ್ಮನ್ನು ಕರೆದ ಆ ಒಂದು ವಿಷಯಕ್ಕೆ ಮತ್ತು ಆ ರಾಜವಂಶ ವರ್ಗದ ಯಾಜಕರ ಸದಸ್ಯರಾಗುವುದಕ್ಕೆ ಸವಲತ್ತು (ಭಾಗ್ಯವನ್ನು) ಪಡೆದಿದ್ದೀರಿ ಎಂದು ತಿಳಿದು ಅದನ್ನು ನಿಮ್ಮದಾಗಿಸಿಕೊಳ್ಳಿರಿ. ನಾವು "ವಿಶೇಷವಾದ ಜನರೂ", ಹೆಸರಿಗೆ ಮಾತ್ರ ಕ್ರೈಸ್ತರಾಗಿರುವ ಮಹಾನ್‌ದೇಹದಿಂದ ಮತ್ತು ಲೋಕದಿಂದ ಪ್ರತ್ಯೇಕರಾದವರೂ, ಉನ್ನತವಾದ ನಿರೀಕ್ಷೆಗಳು, ಗುರಿಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ಹೊಂದಿದವರೂ, ಹಿಂದಿನ ಕತ್ತಲೆಯಿಂದ ಆತನ ಆಶ್ಚರ್ಯಕರವಾದ ಬೆಳಕಿಗೆ ಕರೆಯಲ್ಪಟ್ಟವರೂ ಮತ್ತು ದೇವರ ಆಳವಾದ ವಿಷಯಗಳನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿದ್ದೇವೆ ಎಂದು ನಾವು ಎಂದಿಗೂ ಮರೆತು ಬಿಡಬಾರದು. ಹೀಗೆ ಲೋಕ ಮತ್ತು ಲೋಕದ ಆತ್ಮದಲ್ಲಿ ಅತ್ಯಧಿಕವಾಗಿ ಪಾಲ್ಗೊಳ್ಳುವ ಕ್ರೈಸ್ತರಿಂದ ಬೇರ್ಪಟ್ಟಿರುವುದರಿಂದ, ಅವರೆಲ್ಲರೂ

ನಮ್ಮೊಂದಿಗಿನ ಐಕ್ಯದಿಂದ ದೂರ ಹೋದರೆ [ಹೊರಗುಳಿದರೆ] ಮತ್ತು ನಮ್ಮನ್ನು ನಿರ್ಲಕ್ಷಿಸಿದರೆ ಅಥವಾ ವಿರೋಧಿಸಿದರೆ ಆಶ್ಚರ್ಯವೇನಿದೆ! **R 5970 : 1**

## 2 ಮೇ

**"ನನ್ನ ಬಳಿಗೆ ಬರುವವನನ್ನು ನಾನು ಹೊರಗೆ ತಳ್ಳಿ ಬಿಡುವದೇ ಇಲ್ಲ." (ಯೋಹಾನ 6 : 37)**

ಕಾಲದ ಮಿತಿ ಮುಗಿದ ತಕ್ಷಣ ಭಯಭಕ್ತಿಯುಳ್ಳ, ಶುದ್ಧನಾದ, ಉದಾರ ಮನಸ್ಸುಳ್ಳ ಅನ್ಯಜನಾಂಗದವನಾದ ಕೊರ್ನೇಲ್ಯನೆಂಬವನಿಗೆ ಸುವಾರ್ತೆಯ ಸಂದೇಶವನ್ನು ಕಳುಹಿಸುವುದರ ಮೂಲಕ ದೇವರು ತನ್ನ ದಯೆಯನ್ನು ಅನ್ಯಜನರಿಗೆ ವ್ಯಕ್ತಪಡಿಸಿದನು. ಅಂದಿನಿಂದ ದೇವರ ದಯೆ ಯೆಹೂದ್ಯರಿಗೆ ತೆರೆದಿರುವಂತೆಯೇ ಅನ್ಯಜನರಿಗೂ ತೆರೆಯಲ್ಪಟ್ಟಿದೆ– "ವಿಭಜನೆಯ ಮಧ್ಯದ ಗೋಡೆ" ಎಂಬುದು "ಮುರಿದುಹೋಗಿದೆ." ಅನ್ಯಜನರು ಮತ್ತು ಯೆಹೂದ್ಯರು ಈಗ ಒಂದೇ ನಿಬಂಧನೆಗಳಲ್ಲಿ ಸ್ವೀಕರಿಸಲ್ಪಟ್ಟಿದ್ದಾರೆ. ಅಂದರೆ ಯೇಸುವಿನ ಮೇಲೆ ನಂಬಿಕೆ ಇಡುವದು ಮತ್ತು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಪ್ರತಿಷ್ಠಿಸಲ್ಪಡುವದಾಗಿದೆ. ಈ ದೃಷ್ಟಿಕೋನದಿಂದಲೇ ಕ್ರಿಸ್ತನ ಸುವಾರ್ತೆಯು "ಆಕಾಶದ ಕೆಳಗಿರುವ ಪ್ರತಿಯೊಂದು ಮನುಷ್ಯರಿಗೂ ಸಾರಲ್ಪಟ್ಟಿದೆ" ಎಂಬ ಅಪೋಸ್ತಲರ ಹೇಳಿಕೆಯನ್ನು ನಾವು ಓದಬೇಕು. ಎಲ್ಲಾ ಮನುಷ್ಯರಿಗೆ ಸುವಾರ್ತೆಯನ್ನು ಸಾರಲ್ಪಟ್ಟಿದೆ ಎಂಬುದು ಇದರ ಅರ್ಥವಲ್ಲ, ಅದು ನಿಜವಾಗಿಯೂ ನಡೆದು ಮುಗಿದಿಲ್ಲ. ಅಂದರೆ, ಹದಿನೆಂಟು (ಈಗ ಹತ್ತೊಂಬತ್ತು) ಶತಮಾನಗಳ ನಂತರ ಇನ್ನೂ ಎಲ್ಲಾ ಮನುಷ್ಯರಿಗೆ ಸಾರಲ್ಪಟ್ಟಿಲ್ಲ. ಅಪೋಸ್ತಲನು ಏನು ಹೇಳಿದನೆಂದರೆ ಸುವಾರ್ತೆ ಈಗ ನಿರ್ಬಂಧಿಸಲ್ಪಟ್ಟಿಲ್ಲ, ಆಕಾಶದ ಕೆಳಗಿರುವ ಪ್ರತಿಯೊಬ್ಬರಿಗೂ ಸುವಾರ್ತೆ ಸಾರಲು ಮುಕ್ತವಾಗಿದೆ–ಆತನು ಯಾವ ದೇಶದವನಾಗಿದ್ದರೂ ಪರವಾಗಿಲ್ಲ–ಅದು ಮೊದಲಿನಂತೆ ಯೆಹೂದ್ಯರಿಗೆ ಮಾತ್ರ ಸೀಮಿತವಾಗಿಲ್ಲ. ಈಗ ರಾಜ್ಯದ ಶುಭ ಸಂದೇಶವನ್ನು "ಕಿವಿಯುಳ್ಳವನು ಕೇಳಲಿ." ಈಗ ಯಾರೆಲ್ಲಾ ಕೇಳಿ, ದೇವರ ಕೃಪೆಯುಳ್ಳ ಸಂದೇಶವನ್ನು ಸ್ವೀಕರಿಸುವ ಹೃದಯವನ್ನು ಹೊಂದಿರುತ್ತಾರೋ ಅಂಥವನು ತನ್ನ ದೇಹವನ್ನು ಪರಿಶುದ್ಧವೂ ಮೆಚ್ಚಿಕೆಯೂ ಆಗಿರುವ ಸಜೀವ ಯಜ್ಞವಾಗಿ ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಿಸಲಿ. **R 5101 : 1**

## 3 ಮೇ

**"ನನ್ನ ಬೋಧನೆಯು ನನ್ನದಲ್ಲ; ಆದರೆ ನನ್ನನ್ನು ಕಳುಹಿಸಿದಾತನದೇ." (ಯೋಹಾನ 7 : 16)**

ಎಲ್ಲಾ ಕರ್ತನ ಪ್ರತಿನಿಧಿಗಳ ಬೋಧನೆಗಳು ಈ ಮೇಲಿನ ವಾಕ್ಯಕ್ಕೆ ಅನುಸಾರವಾಗಿರಬೇಕು–ಮನುಷ್ಯರ ಊಹಾಪೋಹಗಳು ಮತ್ತು ತತ್ತ್ವಗಳ ಚಿಂತೆಗಳಲ್ಲ, ಆದರೆ ದೇವರ ವಾಕ್ಯಕ್ಕೆ ಅನುಸಾರವಾಗಿರಬೇಕು.– "ಕನಸು ಉಂಟಾದ ಪ್ರವಾದಿಯು ಕನಸನ್ನು ತಿಳಿಸಲಿ, ನನ್ನ ವಾಕ್ಯ ಉಂಟಾದವನು ನನ್ನ ವಾಕ್ಯವನ್ನು ನಂಬಿಗಸ್ತನಾಗಿ ಹೇಳಲಿ." (ಯೆರೆಮೀಯ 23 : 28) "ನ್ಯಾಯಪ್ರಮಾಣ(ಧರ್ಮ ಶಾಸ್ತ್ರ) ಮತ್ತು ಸಾಕ್ಷಿಯ ವಿಷಯದಲ್ಲಿ ಈ ವಾಕ್ಯದ ಪ್ರಕಾರ ಹೇಳದಿರುವದು ಅವರಲ್ಲಿ ಬೆಳಕಿಲ್ಲದ್ದರಿಂದಲೇ." (ಯೆಶಾಯನು 8 : 20) "ವಾಕ್ಯವನ್ನು ಸಾರು ಮತ್ತು ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು." (2 ತಿಮೊಥೆಯನಿಗೆ 4 : 2) "ಯಾಕೆಂದರೆ ದೇವರ ವಾಕ್ಯವು ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು." (ಇಬ್ರಿಯರಿಗೆ 4 :12) "ನಿನ್ನ ಸತ್ಯದಿಂದ ಅವರನ್ನು ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು." (ಯೋಹಾನ 17 : 17) "ಅವರು ಯೇಸುವಿನೊಂದಿಗೆ ಇದ್ದು, ಆತನಿಂದ ಕಲಿತುಕೊಂಡವರೆಂದು ತಿಳಿದುಕೊಂಡರು." (ಅಪೋಸ್ತಲರ ಕೃತ್ಯಗಳು 5 : 13) ಹೀಗೆ ಕರ್ತನಿಗೆ ನಂಬಿಗಸ್ತರು ಮತ್ತು ನಿಷ್ಠಾವಂತರು, ಆತನ ಸಾಕ್ಷ್ಯದ ವಾಕ್ಯಗಳನ್ನು ಲೋಕಕ್ಕೆ ಅಸ್ಪಷ್ಟವಾಗಿ ಹಾಗೂ ಅನಿರ್ಧಿಷ್ಟವಾಗಿ ಮಾತನಾಡುವುದಿಲ್ಲ, ಆದರೆ ದೇವರ ಸಂದೇಶವನ್ನು "ತಕ್ಕ ಕಾಲದಲ್ಲಿ" "ಎಲ್ಲಾ ಜನರಿಗೆ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು ತಿಳಿಸುತ್ತಾರೆ." [ಲೂಕನು 2 :10] **R 3726 : 6**

## 4 ನೇ

**"ಈ ದೇವರು ಯುಗಯುಗಾಂತರಗಳಿಗೂ ನಮ್ಮ ದೇವರಾಗಿದ್ದಾನೆ. ಆತನು ಮರಣದವರೆಗೂ ನಮ್ಮನ್ನು ನಡಿಸುವನು." ( ಕೀರ್ತನೆಗಳು 48 : 14 )**

ಈ ಸಮಯ ನಮ್ಮ ವ್ಯವಹಾರಗಳಲ್ಲಿ ಕರ್ತನ ರಕ್ಷಣಾತ್ಮಕ ಆರೈಕೆಯನ್ನು ಹುಡುಕುವದು ಅವಶ್ಯವಾಗಿದೆ ಮತ್ತು ಅವು ನಮಗೆ ಮಾರ್ಗದರ್ಶನ ನೀಡಿ ಹಿಂಸೆ, ಸಂಕಟ ಮತ್ತು ಶೋಧನೆಗಳೆಂಬ ಬೇನೆಯಿಂದ ಕರ್ತನ ರಕ್ಷಣಾತ್ಮಕ ಆರೈಕೆಯು ನಮಗೆ ಆಶ್ರಯ ನೀಡುತ್ತದೆ ಮತ್ತು ಇತರ ಸಮಯಗಳಲ್ಲಿ ನಮಗೆ ಜ್ಞಾನೋದಯ ನೀಡಿ ಅಂಧಕಾರ ಕಾಲಗಳಲ್ಲಿ ನಮ್ಮನ್ನು ಉಲ್ಲಾಸಗೊಳಿಸುವುದು. ಮತ್ತು ನಾವು ಎಲ್ಲಿಯವರೆಗೂ ನಿಜವಾದ ಇಸ್ರಾಯೇಲ್ಯರಾಗಿರುತ್ತೇವೋ, ಅಲ್ಲಿಯವರೆಗೂ ಈ ದೈವೀಕ ಆರೈಕೆಯ ನಡೆಸುವಿಕೆಯು ನಮ್ಮದಾಗಲು ಉದ್ದೇಶಿಸಲಾಗಿದೆ. ನಾವು ಯೊರ್ದಾನನ್ನು ದಾಟಿ ಪರಲೋಕ ಕಾನಾನನ್ನು ತಲುಪುವವರೆಗೂ ನಡೆಸುತ್ತದೆ, ನಂತರ ಈ ವಿಶೇಷವಾದ ಏರ್ಪಾಡು ಮುಂದೆ ಅವಶ್ಯವಿರುವುದಿಲ್ಲ. ಯಾರ್ಯಾರ

ನಂಬಿಕೆಯು ಎಚ್ಚರವಾಗಿದೆಯೋ ಮತ್ತು ಜಾಗ್ರತವಾಗಿದೆಯೋ ಮತ್ತು ಲೋಕವು ಗ್ರಹಿಸದೆ ಇರುವ ಕರ್ತನ ದಯೆಯನ್ನು ಗ್ರಹಿಸುವವರು ಧನ್ಯರು ಮತ್ತು ಸರಿಯಾದ ಮನೋಭಾವದಲ್ಲಿರುವವರು ಮಾತ್ರ ಇದನ್ನು ಪ್ರಶಂಸಿಸುವರು. **R 3997 : 3**

## 5 ಮೇ

**"ಪ್ರತಿದಿನವೂ ನಮ್ಮನ್ನು ಮೇಲುಗಳಿಂದ ತುಂಬಿಸುವ ಕರ್ತನು. ಅಂದರೆ ನಮ್ಮ ರಕ್ಷಣೆಯ ದೇವರು ಸ್ತುತಿ ಹೊಂದಲಿ." ( ಕೀರ್ತನೆಗಳು 68 : 19 )**

ನಮ್ಮ ದೇವರು ಎಷ್ಟು ಪ್ರೀತಿ ಮತ್ತು ಕಾಳಜಿಯುಳ್ಳವನಾಗಿದ್ದಾನೆ, ಮತ್ತು ಎಷ್ಟು ಜ್ಞಾನವಂತ ಮತ್ತು ಬಲಶಾಲಿಯಾಗಿದ್ದಾನೆ! ಆತನ ಮೇಲೆ ಭರವಸೆಯಿಡುವವರನ್ನು ಆತನ ವಾಗ್ದಾನಗಳು ಎಂದಿಗೂ ವಿಫಲಗೊಳಿಸುವದಿಲ್ಲ. ನಾವು ಒಳ್ಳೆಯವರಾಗಿರಲು ಮತ್ತು ಒಳ್ಳೆಯದನ್ನು ಮಾಡುವ ನಮ್ಮ ಪ್ರಯತ್ನಗಳು ಬಹಳ ಫಲವಿಲ್ಲದ್ದೆಂದು ನಾವು ಭಾವಿಸಬಹುದು, ಏಕೆಂದರೆ ಹೊರಗಿನ ಮತ್ತು ಒಳಗಿನ ವಿರೋಧವು ತುಂಬಾ ಪ್ರಬಲವಾಗಿದೆ. ಆದರೆ ನಾವು ಬಲಹೀನರಾಗಿರುವಾಗ, ನಮ್ಮ ಅಸಹಾಯಕತೆ ಮತ್ತು ಅಸಮರ್ಥನೆಯನ್ನು ನಾವು ಅರಿತುಕೊಂಡಾಗ, ನಾವು ಕರ್ತನಲ್ಲಿ ಮತ್ತು ಆತನ ಶಕ್ತಿಯಲ್ಲಿ ಬಲಶಾಲಿಗಳಾಗಬಹುದು. ನಮ್ಮ ಬಲಹೀನತೆಯಲ್ಲಿ ಆತನ ಬಲವು ಪರಿಪೂರ್ಣವಾಗಿದೆ ಎಂದು ನಾವು ಅರಿತುಕೊಳ್ಳಬಹುದು. ಆತನ ಚಿತ್ತವನ್ನು ಮಾಡಲು ಪ್ರಯತ್ನಿಸುತ್ತಿರುವ ನಾವು ಬಲಹೀನರು ಮತ್ತು ಕುಂಟರು ಎಂಬ ನಿಜಾಂಶವು ನಮ್ಮ ದೇವರ ಪ್ರೀತಿ ಮತ್ತು ಶಕ್ತಿಯಿಂದ ನಮ್ಮನ್ನು ಬೇರ್ಪಡಿಸುವುದಿಲ್ಲ; ಏಕೆಂದರೆ "ಆತನು ನಮ್ಮ ಪ್ರಕೃತಿಯನ್ನು ತಿಳುಕೊಂಡು ನಾವು ಧೂಳಿಯಾಗಿದ್ದೇವೆಂದು ನೆನಪು ಮಾಡಿಕೊಳ್ಳುತ್ತಾನೆ." **R 5803 : 2**

## 6 ಮೇ

**"ನನ್ನ ಮನವೇ, ನಿನ್ನ ವಿಶ್ರಾಂತಿಗೆ ತಿರುಗಿಕೋ; ಕರ್ತನು ನಿನಗೆ ಉಪಕಾರ ಮಾಡಿದ್ದಾನೆ." ( ಕೀರ್ತನೆಗಳು 116 : 7 )**

ಈ ಪರಿಪೂರ್ಣ ಸಮಾಧಾನವನ್ನು ಆನಂದಿಸಲು ನಾವು ನಮ್ಮ ತಂದೆಯ ಪ್ರೀತಿಯ ಮೇಲೆ ಅಪಾರ ನಂಬಿಕೆಯನ್ನು ಹೊಂದಿರಬೇಕು ಮತ್ತು ನಂಬಿಗಸ್ತಿಕೆಯಲ್ಲಿ ನೆಲೆಸಿರಬೇಕು. ನಾವು ಆಕಾಶಗಳ ನಕ್ಷತ್ರಗಳನ್ನು ನೋಡುವಾಗ ದೇವರ ಪ್ರಬಲವಾದ

ಶಕ್ತಿ ಮತ್ತು ಮಹಿಮೆ ವ್ಯಕ್ತವಾಗುವುದನ್ನು ನೋಡುತ್ತೇವೆ. ಆದರೆ ನಮ್ಮ ಹೃದಯಗಳು ಮತ್ತು ಮನಸ್ಸುಗಳು ಇದರಲ್ಲೇ ಉಳಿಯುವಂತಿಲ್ಲ ಮತ್ತು ಇಲ್ಲಿಗೆ ನಿಲ್ಲುವಂತಿಲ್ಲ; ನಾವು ಆತನಿಂದ ದಾನಗಳನ್ನು ಸ್ವೀಕರಿಸಬಹುದು, ಆದರೆ ಆತನ ನಿಷ್ಠಾವಂತಿಕೆಯಲ್ಲಿ ನೆಲೆಸುವ ಜ್ಞಾನವಿಲ್ಲದಿದ್ದರೆ ಇವುಗಳು ಎದುರಾಳಿಯಿಂದ ನಮಗೆ ಗಾಯವಾಗುವುದಕ್ಕೆ ಬಲೆಗಳಾಗಿರಬಹುದೆಂದು ನಮಗೆ ಗೊತ್ತಾಗುವುದಿಲ್ಲ. ಆದರೆ ನಂಬಿಕೆಗೆ ಈ ಸರಿಯಾದ ಅಡಿಪಾಯವಿದ್ದರೆ, ನಮ್ಮ ತಂದೆಯನ್ನು ಆತನ ವಾಕ್ಯದ ಮೂಲಕ ತಿಳಿದುಕೊಳ್ಳಲು ನಾವು ಕಲಿತರೆ [ಇದೇ ನಾವು ಆತನನ್ನು ತಿಳಿದುಕೊಳ್ಳುವ ಏಕೈಕ ಮಾರ್ಗ], ನಾವು ಆತನ ಮೇಲೆ ವಿಶ್ವಾಸವನ್ನು ಹೊಂದಿದ್ದೇವೆ. **R 5432 : 5**

## 7 ಮೇ

**"ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಆತನ ಪ್ರತ್ಯಕ್ಷತೆಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು. ನಾವು ಪರಿಶುದ್ಧ ಪರ್ವತದ ಮೇಲೆ ಆತನ ಸಂಗಡ ಇದ್ದಾಗ ಆಕಾಶದಿಂದ ಬಂದ ಆ ಧ್ವನಿಯನ್ನು ನಾವೇ ಕೇಳಿದೆವು." ( 2 ಪೇತ್ರನು 1 : 16, 18 )**

ಕ್ರೈಸ್ತರ ಅನುಭವವು ಇಂದು ಅದೇ ರೀತಿಯಾಗಿದೆ. ಕರ್ತನಲ್ಲಿ ಹೆಚ್ಚು ಶ್ರದ್ಧೆ ಮತ್ತು ಉತ್ಸಾಹವುಳ್ಳ ಶಿಷ್ಯರು ಆತನೊಂದಿಗೆ ರೂಪಾಂತರದ ಪರ್ವತಕ್ಕೆ ಹೋಗಲು ಆಹ್ವಾನಿಸಲ್ಪಟ್ಟಿದ್ದಾರೆ. ನಮ್ಮ ತಿಳುವಳಿಕೆಯ ಕಣ್ಣುಗಳು ತೆರೆದಿವೆ. ನಾವು ಅದ್ಭುತವಾದ ಸಂಗತಿಗಳನ್ನು ನೋಡುತ್ತೇವೆ—ಹಳೆಯ ವಿಷಯಗಳನ್ನು ಹೊಸ ಬೆಳಕಿನಲ್ಲಿ ನೋಡುತ್ತೇವೆ ಮತ್ತು ಹೊಸ ವಿಷಯಗಳನ್ನು ನಮ್ಮ ದಿನಗಳಲ್ಲಿ ನೋಡುತ್ತಿದ್ದೇವೆ. ಖಂಡಿತವಾಗಿಯೂ ಮುಂದುವರಿದ ಕ್ರೈಸ್ತನು ತನ್ನ ಯಜಮಾನನನ್ನು ಹೊಸ ಪ್ರಕಾಶಮಾನತೆಯಿಂದ ನೋಡುತ್ತಾನೆ ಏಕೆಂದರೆ ಆತನು ಪರಿಶುದ್ಧ ಪರ್ವತದಲ್ಲಿ ಕರ್ತನೊಂದಿಗೆ ಮತ್ತು ತಂದೆಯೊಂದಿಗೆ ಹತ್ತಿರವಾದ ಐಕ್ಯ ಹೊಂದಲು ಬರುತ್ತಾನೆ! ಇದು ನಮ್ಮ ಆಶೀರ್ವಾದದ ಅನುಭವವಾಗಲಿ! ಕ್ರಿಸ್ತನೊಂದಿಗೆ ಉನ್ನತದಲ್ಲಿ ಕುಳಿತುಕೊಳ್ಳುವ ನಾವು ಲೌಕಿಕ ವಿಷಯಗಳಿಗೆ ವಿರುದ್ಧವಾಗಿ ರಾಜ್ಯದ ವಿಷಯಗಳನ್ನು ಹೆಚ್ಚು ಹೆಚ್ಚಾಗಿ ಪ್ರಶಂಸಿಸುತ್ತೇವೆ. **R 4890 : 5**

## 8 ಮೇ

**"ಆಗ ಆತನು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ-ಶಾಂತವಾಗಿ ಮೌನವಾಗಿರು ಎಂದು ಹೇಳಿದನು. ಆಗ ಗಾಳಿಯು ನಿಂತು ಅಲ್ಲಿ ದೊಡ್ಡ ಶಾಂತತೆ ಉಂಟಾಯಿತು." ( ಮಾರ್ಕನು 4 : 39 )**

ಆತನ ಹಿಂಬಾಲಕರಾದ ಚಿಕ್ಕ ಹಿಂಡಿಗೆ ಕರ್ತನು ಅನೇಕ ಬಿರುಗಾಳಿಗಳನ್ನು ಅನುಮತಿಸುತ್ತಾನೆ. ಕೆಲಮೊಮ್ಮೆ ಜೀವನದ ಸಂಪೂರ್ಣ ಪ್ರಯಾಣವು ಬಿರುಗಾಳಿಯಿಂದ ಕೂಡಿರುತ್ತದೆ. ನಾವು ಕೆಲವೊಮ್ಮೆ "ಜೀವನದ ಬಿರುಗಾಳಿಗಳು ಕೆರಳಿದಾಗ" ಎಂದು ಹಾಡುತ್ತೇವೆ. ಬಿರುಗಾಳಿಗಳು, ಶೋಧನೆಗಳು ಮತ್ತು ತೊಂದರೆಗಳನ್ನು ಹೊಂದದೆ ಇರುವವರಿಗೆ ಅವರು ದೇವರ ಮಕ್ಕಳು ಎಂಬುದಕ್ಕೆ ಪುರಾವೆ[ಸಾಕ್ಷಿ]ಗಳಿಲ್ಲ ಎಂದು ಅಪೋಸ್ತಲನು ತನ್ನ ಪತ್ರಿಕೆಗಳಲ್ಲಿ ತಿಳಿಸುತ್ತಾನೆ; ಏಕೆಂದರೆ ಅಂಥವರನ್ನು ದೇವರು ತನ್ನ ಮಕ್ಕಳಂತೆ ನಡೆಸುವುದಿಲ್ಲ[ವ್ಯವಹರಿಸುವುದಿಲ್ಲ]. (ಇಬ್ರಿಯರಿಗೆ 12 : 7, 8) ನಾವು ದೇವರ ಮಕ್ಕಳಾಗಿದ್ದರೆ ನಮಗೆ ಶೋಧನೆಗಳು ಮತ್ತು ಪರೀಕ್ಷೆಗಳು ಅವಶ್ಯವಾಗಿದೆ. ಏಕೆಂದರೆ ಇವುಗಳೇ ನಾವು ಬೆಳಕಿನಲ್ಲಿರುವ ಪರಿಶುದ್ಧರ ಸ್ವಾಸ್ಥ್ಯಕ್ಕೆ ಸೇರುವಂತೆ ಮಾಡುತ್ತವೆ. (ಕೊಲೊಸ್ಸೆಯವರಿಗೆ 1 : 12) ಈ ಎಲ್ಲಾ ಅನುಭವಗಳಿಂದ ಶೋಧನೆಗಳ ಪ್ರವೃತ್ತಿಯು ನಮ್ಮನ್ನು ಕರ್ತನ ಹತ್ತಿರಕ್ಕೆ ಕರೆದೊಯ್ಯುತ್ತದೆ. ಇದರಿಂದ ನಮಗೆ ದೈವಿಕ ಆಶ್ರಯ ಮತ್ತು ಕಾಳಜಿಯ ಅಗತ್ಯವಿದೆ ಎಂದು ನಮಗೆ ಅನಿಸುತ್ತದೆ. ಅದರಿಂದ ಅಕ್ಷರಶಃವಾಗಿ ಅಥವಾ ಸಾಂಕೇತಿಕವಾಗಿ ಈ ಬಿರುಗಾಳಿಗಳಿಂದ ಒಂದು ಆಶೀರ್ವಾದ ಬರುತ್ತದೆ. **R 5239 : 2**

## 9 ಮೇ

**"ತನ್ನ ಜನರಾದ ಇಸ್ರಾಯೇಲ್ಯರಿಗೆ ತಾನು ಮಾತು ಕೊಟ್ಟ ಎಲ್ಲಾದರ ಪ್ರಕಾರ ವಿಶ್ರಾಂತಿಯನ್ನು ಕೊಟ್ಟ ಕರ್ತನು ಸ್ತುತಿಸಲ್ಪಡಲಿ." ( 1 ಅರಸುಗಳು 8 : 56 )**

ಇಡೀ ಸೃಷ್ಟಿಯು ತನ್ನ ಪಾಪ ಮತ್ತು ದುಃಖದ ಹೊರೆಯಿಂದ ನರಳುತ್ತಿರುವಾಗ, ಕೆಲವು ಪರಿಶುದ್ಧ ಜನರು ಅವರ ಜೀವನದ ಎಲ್ಲಾ ದುಃಖಗಳ ನಡುವೆಯೂ ಮತ್ತು ಪಾಪದ ಫಲಿತಾಂಶಗಳನ್ನು ಇತರರಷ್ಟು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಹಂಚಿಕೊಂಡರೂ ಸಹ ಅವರು ಹಾಡಬಹುದು, ಆನಂದಿಸಬಹುದು. ಅವರ ಸಂತೋಷದ ರಹಸ್ಯವು ಎರಡು ಪಟ್ಟು ಆಗಿದೆ: **[1]** ಅವರು ದೇವರೊಂದಿಗೆ ಹೊಂದಾಣಿಕೆಯ ಅನುಭವವನ್ನು ಹೊಂದಿದ್ದಾರೆ.

**[2]** ಅವರು ತಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಒಪ್ಪಿಸಿದ್ದಾರೆ. ಅವರು ಈ ಹೊಸ ಸಂಬಂಧವನ್ನು ವಿಮೋಚಕನಲ್ಲಿ ನಂಬಿಕೆಯ ಮೂಲಕ ಪಡೆದಿದ್ದಾರೆ–ಆತನು ಸುರಿಸಿದ ಹೊಂದಾಣಿಕೆಯ(ಪ್ರಾಯಶ್ಚಿತ) ರಕ್ತದ ಮೇಲಿನ ನಂಬಿಕೆಯ ಮೂಲಕ ಈ ಹೊಸ ಸಂಬಂಧವನ್ನು ಪಡೆದಿದ್ದಾರೆ. ಅವರು "ಇಕ್ಕಟ್ಟಾದ ಬಾಗಿಲಿನಿಂದ ಒಳಗೆ ಪ್ರವೇಶಿಸಿ ಬಿಕ್ಕಟ್ಟಾದ ದಾರಿಯ" ಮೂಲಕ ದೇವರೊಂದಿಗೆ ಪ್ರತಿಷ್ಠೆಯನ್ನು ಮಾಡಿಕೊಂಡಿದ್ದಾರೆ–ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ತಮ್ಮ ಸ್ವಂತ ಚಿತ್ತವನ್ನು ಒಪ್ಪಿಸಿ ದೈವಿಕ ಚಿತ್ತವನ್ನು ಮಾಡಲು ಒಡಂಬಡಿಕೆಯನ್ನು ಮಾಡಿಕೊಂಡಿದ್ದಾರೆ. **R 4892 : 5**

## 10 ನೇ

**"ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" ( 1 ಕೊರಿಂಥದವರಿಗೆ 3 : 16 )**

ದೇವಾಲಯದ ಸಂಕೇತವನ್ನು ಸಭೆಗೆ ಸಂಬಂಧಿಸಿದಂತೆ ವಿವಿಧ ರೀತಿಯಲ್ಲಿ ಬಳಸಲಾಗುತ್ತದೆ. ಪ್ರತಿಯೊಬ್ಬ ಕ್ರೈಸ್ತನು ಆತ್ಮದಿಂದ ಭ್ರೂಣಾಂಕುರ [ಗರ್ಭಧಾರಣೆ] ಹೊಂದಿದ ನಂತರ ಪವಿತ್ರಾತ್ಮದ ದೇವಾಲಯವಾಗಿದ್ದಾರೆ ಎಂದು ಹೇಳಲಾಗುತ್ತದೆ. ಪ್ರತಿಯೊಬ್ಬ ಸಭೆಯ ಅಂಗದವರನ್ನು ದೇವರ ದೇವಾಲಯವೆಂದು ಪರಿಗಣಿಸಬಹುದು. ಇಡೀ ಸಭೆಯು ಪರಲೋಕದ ಮಹಿಮೆಯ ಸ್ಥಿತಿಗೆ ಒಟ್ಟುಗೂಡಿದಾಗ ಅವರು ದೇವರ ಆಲಯವಾಗುತ್ತಾರೆ, ದೇವರು ಅವರಲ್ಲಿ ವಾಸಿಸುತ್ತಾನೆ. ಮತ್ತೊಂದು ಸಂಕೇತದ ಪ್ರಕಾರ ಪ್ರತಿಯೊಬ್ಬ ಕ್ರೈಸ್ತನು ಜೀವಂತ ಕಲ್ಲುಗಳಾಗಿದ್ದು ಭವಿಷ್ಯದ ಮಹಾ ದೇವಾಲಯವಾಗುವುದಕ್ಕೆ ಈಗ ಉಳಿಯಿಂದ ರೂಪಿಸಲ್ಪಟ್ಟು, ಹೊಳಪು ಹೊಂದಿಕೊಂಡು ಮೇಲಿನ [ಪರಲೋಕದ] ಆಲಯದಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳಲು ತಯಾರಾಗುತ್ತಿದ್ದಾರೆ. ಹಿಂದಿನ ಕಾಲದಲ್ಲಿ ದೇವರು ಗುಡಾರದ ಅತ್ಯಂತ ಪರಿಶುದ್ಧ ಸ್ಥಳದಲ್ಲಿ ಶಕೀನಾ ಮಹಿಮೆಯಿಂದ ಪ್ರತಿನಿಧಿಸಲ್ಪಟ್ಟಂತೆ ಮತ್ತು ಯೆರುಸಲೇಮಿನ ಅಕ್ಷರಶಃ [ನಿಜವಾದ] ದೇವಾಲಯದಲ್ಲಿ ಪ್ರತಿನಿಧಿಸಲ್ಪಟ್ಟಂತೆ, ಈಗ ಆತನು ತನ್ನ ಪವಿತ್ರಾತ್ಮದಿಂದ ಭ್ರೂಣಾಂಕುರಗೊಂಡ ಎಲ್ಲರಲ್ಲಿಯೂ ಪ್ರತಿನಿಧಿಸಲ್ಪಟ್ಟಿದ್ದಾನೆ ಎಂಬುದು ಆಲೋಚನೆಯಾಗಿದೆ. ಮತ್ತು ಅವರ ಆತ್ಮದ ಭ್ರೂಣಾಂಕುರದೊಂದಿಗೆ ಸಾಮರಸ್ಯದಿಂದ ನಡೆದುಕೊಳ್ಳುವ ಮತ್ತು ಕರ್ತನ ಪ್ರೀತಿಯಲ್ಲಿ ನೆಲೆಗೊಂಡಿರುವುದನ್ನು ಮುಂದುವರಿಸುವ ಎಲ್ಲರಿಂದ ಮತ್ತಷ್ಟು ಪ್ರತಿನಿಧಿಸಲಾಗುತ್ತದೆ. **R 5831 : 5**

## 11 ಮೇ

**"ತೆಗೆದುಕೊಳ್ಳುವುದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯ..." (ಅಪೊಸ್ತಲರ ಕೃತ್ಯಗಳು 20 : 35)**

ನಮ್ಮ ಕರ್ತನಾದ ಯೇಸು ಕ್ರಿಸ್ತನು ಇತರರ ಒಳಿತಿಗಾಗಿ ಸ್ವಯಂ ನಿರಾಕರಣೆ ಮಾಡುವ ವಿಚಾರದಲ್ಲಿ ಶ್ರೇಷ್ಠ ಉದಾಹರಣೆಯಾಗಿದ್ದಾನೆ. ಆತನು ಆತ್ಮೀಕ ಸ್ವಭಾವದಲ್ಲಿದ್ದಾಗ ಅದರ ಎಲ್ಲಾ ಮಹಿಮೆ ಮತ್ತು ಗೌರವದೊಂದಿಗೆ ಶ್ರೀಮಂತನಾಗಿದ್ದನು. ಆದರೂ ನಮ್ಮ ಸಲುವಾಗಿ ಆತನು ಬಡವನಾದನು, ಮನುಕುಲವನ್ನು ವಿಮೋಚಿಸುವುದಕ್ಕಾಗಿ ಮಾನವ ಸ್ವಭಾವವನ್ನು ಪಡೆದುಕೊಂಡನು. ಈ ಉದ್ದೇಶದಿಂದಲೇ ಆತನು ಕಲ್ವಾರಿಯಲ್ಲಿ ತನ್ನ ಜೀವವನ್ನೇ ಅರ್ಪಿಸಿದನು, ಆತನ ತ್ಯಾಗ–ಬಲಿಯ ನಿಮಿತ್ತ ನಾವು ಶ್ರೀಮಂತರಾದೆವು– ಕ್ರಿಸ್ತನಲ್ಲಿ ದೈವಿಕ ದಯೆ ಮತ್ತು ದೈವಿಕ ಕೃಪೆಯ ಐಶ್ವರ್ಯವನ್ನು ಹೊಂದಿದ್ದೇವೆ– ದೈವಿಕ ಮಹಿಮೆಯಾದ ದೇವರ ಬಲಗಡೆಯಲ್ಲಿ ಈಗ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟ ನಮ್ಮ ಉನ್ನತನಾದ ಕರ್ತನೊಂದಿಗೆ ಸಹ–ಬಾಧ್ಯಸ್ಥಿಕೆಯನ್ನು ಹೊಂದಲು ಬಂದಿದ್ದೇವೆ. ಆದರೆ ಆತನೊಂದಿಗೆ ಈ ಸಹ–ಬಾಧ್ಯಸ್ಥಿಕೆಯನ್ನು ಹೊಂದಲು ನಾವು ಆತನಂತೆಯೇ ಇರಲು ಅಧ್ಯಯನ ಮಾಡಬೇಕು. ಆತನ ಆತ್ಮವನ್ನು ಹೊಂದಲು ಮತ್ತು ಆತನು ನಮಗೆ ತಾತ್ಕಾಲಿಕ (ಲೌಕಿಕ) ಅಥವಾ ಆತ್ಮೀಕ ದಯೆ ಏನೇ ಕೊಟ್ಟಿದ್ದರೂ ಅದನ್ನು ಇತರರೊಂದಿಗೆ ಹಂಚಿಕೊಳ್ಳಬೇಕು–ಇತರರಿಗೆ ಆಹಾರ ಅಥವಾ ಬಟ್ಟೆಗಳನ್ನು [ವಿಶೇಷವಾಗಿ ಆತನ ನಂಬಿಕೆಯ ಮನೆವಾರ್ತೆಯವರಿಗೆ] ಸಂದರ್ಭ–ಸನ್ನಿವೇಶಗಳು ನಮಗೆ ನಿರ್ದೇಶಿಸುವಂತೆ ಸಹಾಯಮಾಡಬೇಕು. **R 5927 : 6**

## 12 ಮೇ

**"ಎಷ್ಟೋ ದೊಡ್ಡ ಈ ರಕ್ಷಣೆಯನ್ನು....ಕರ್ತನಿಂದ ಮೊದಲು ಹೇಳಲಾರಂಭಿಸಿತು." ( ಇಬ್ರಿಯರಿಗೆ 2 : 3 )**

ನಮ್ಮ ಮನುಷ್ಯ ಜಾತಿಯಲ್ಲಿ (ಆದಾಮನು ಪಾಪ ಮಾಡಿದಾಗಿನಿಂದ) ನಿತ್ಯಜೀವ ಇರಲಿಲ್ಲ, ಮಾತ್ರವಲ್ಲದೆ ಯೇಸುವಿನ ಮೂಲಕ ಹೊರತುಪಡಿಸಿ ನಿತ್ಯಜೀವವನ್ನು ಪಡೆಯಲು ಯಾವ ನಿರೀಕ್ಷೆಯೂ ಇಲ್ಲ, ಆದರೆ ಆತನ ಪಾಪ ಪ್ರಾಯಶ್ಚಿತ್ತದ ಕೆಲಸವಿಲ್ಲದೆ ಹಿಂದಿನ ಎಲ್ಲಾ ವಾಗ್ದಾನಗಳು ಶಕ್ತಿ ಹೀನವಾಗುತ್ತಿದ್ದವು ಮತ್ತು ಆತನು ಬರುವವರೆಗೂ ನಮ್ಮ ವಿಮೋಚನೆ ಹೇಗೆ ನೆರವೇರುತ್ತದೆ ಎಂದು

ತಿಳಿದಿರಲಿಲ್ಲ. ನಿಜ, ಹಿಂದಿನ ಹಲವಾರು ಬಲಿಗಳಲ್ಲಿ ರಕ್ತವನ್ನು ಚೆಲ್ಲದೆ ಪಾಪದ ಪರಿಹಾರವಾಗುವುದಿಲ್ಲ ಎಂಬ ನಿಜಾಂಶವನ್ನು ವಿವಿಧ ಛಾಯೆಗಳಲ್ಲಿ ಮತ್ತು ನೆರಳುಗಳಲ್ಲಿ ಕರ್ತನು ನಮಗೆ ಒದಗಿಸಿದ್ದಾನೆ; ಆದರೆ ನಿಜಸ್ವರೂಪವು ಬರುವವರೆಗೂ ಅವುಗಳನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. ನಂತರ ಆತನು ಜೀವವನ್ನು ಬೆಳಕಿಗೆ ತಂದನು ಮತ್ತು ಅಮರತ್ವವನ್ನು [ನಿರ್ಲಯತ್ವವನ್ನು] ಬೆಳಕಿಗೆ ತಂದನು–ಲೋಕಕ್ಕೆ ಸಾವಿರ ವರ್ಷದ ಯುಗದಲ್ಲಿ ನಿತ್ಯಜೀವವನ್ನು ತರುವನು–ಆತನ ಸಭೆಗೆ, ಆತನ ವಧುವಿಗೆ, ಆತನ ಚಿಕ್ಕ ಹಿಂಡಿಗೆ, ಆತನ ಸಹ–ಬಾಧ್ಯಸ್ಥರಿಗೆ ನಿರ್ಲಯತ್ವವನ್ನು ತರುವನು. ಈ ವಿಚಾರವು ಹಿಂದೆಂದೂ ಬೆಳಕಿಗೆ ಬಂದಿರಲಿಲ್ಲ; ಅವುಗಳನ್ನು ಮುಸುಕಾಗಿ ನೋಡಿ, ಅಸ್ಪಷ್ಟವಾಗಿ ವಿವರಿಸಲಾಗಿತ್ತು. ಆದರೆ ದೇವರು ಮಗನ ಮೂಲಕ ನೀಡಿದ ರಕ್ಷಣೆಯನ್ನು ನಮ್ಮ ಮುಂದೆ ತರುವ ವಿಚಾರವು ಆ ಮಹಾ ಬೋಧಕನ(ಯೇಸುವಿನ) ಕೈಯಲ್ಲಿದೆ. ನಮ್ಮ ಹೃದಯಗಳು, ನಮ್ಮ ತುಟಿಗಳನ್ನು ಹೆಚ್ಚೆಚ್ಚಾಗಿ ಕತ್ತಲೆಯಿಂದ ನಮ್ಮನ್ನು ತನ್ನ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನ ಸ್ತುತಿಯನ್ನು ಹೇಳುವಂತೆ ಮಾಡಿದ್ದಕ್ಕಾಗಿ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸೋಣ. ಆತನಲ್ಲಿ ನಂಬಿಕೆಯ ಮೂಲಕ ಈಗಾಗಲೇ ನಾವು ನೂತನ ಜೀವದಲ್ಲಿ ನಡೆಯಲು ಎಬ್ಬಿಸಲ್ಪಟ್ಟಿದ್ದೇವೆ ಎಂದು ಎಣಿಸಲ್ಪಟ್ಟಿದ್ದೇವೆ ಮತ್ತು ಆತನ ಮೂಲಕ ತಂದೆಯು ತನ್ನ ಸ್ವಂತ ಶಕ್ತಿಯಿಂದ ನಮ್ಮನ್ನು ಎಬ್ಬಿಸುತ್ತಾನೆ. ಏಕೆಂದರೆ ನಾವೂ ಸಹ ಆತನಂತೆಯೇ ಇರುತ್ತೇವೆ ಮತ್ತು ಆತನ ಮಹಿಮೆ, ಗೌರವ ಮತ್ತು ನಿರ್ಲಯತ್ವದಲ್ಲಿ ಪಾಲು ಹೊಂದುತ್ತೇವೆ. **R 3795 : 5**

## 13 ನೇ

**"ಒಳ್ಳೆಯ ವಿವೇಚನೆಯನ್ನೂ ತಿಳುವಳಿಕೆಯನ್ನೂ ನನಗೆ ಕಲಿಸು." (ಕೀರ್ತನೆಗಳು 119 : 16)**

ಕ್ರಿಸ್ತನ ಹಿಂಬಾಲಕರು ಯಾರಾದರು ಸರಿ, ಅವರು ನನಗೆ ನೀತಿ ಮತ್ತು ಪ್ರೀತಿಯ ವಿಚಾರಗಳಲ್ಲಿ ಇನ್ನೂ ಯಾವುದೇ ಹೆಚ್ಚಿನ ನಿರ್ದೇಶನದ [ಸೂಚನೆಗಳ] ಅಗತ್ಯವಿಲ್ಲ ಎಂದು ಹೇಳುವಷ್ಟು ಮಟ್ಟಿಗೆ ಚೆನ್ನಾಗಿ ಅಭಿವೃದ್ಧಿ ಹೊಂದಿಲ್ಲ ಮತ್ತು ಸಹೋದರರೊಂದಿಗಿನ ನಮ್ಮ ಅನುಭವಗಳಲ್ಲಿ ಇನ್ನೊಬ್ಬರಲ್ಲಿ ತಪ್ಪು ಇರುವಂತೆ ತೋರುವಾಗ ಬಹುಶಃ ನನಗಿಂತ ಹೆಚ್ಚು ಅನಾನುಕೂಲಗಳನ್ನು ಹೊಂದಿರುವ ಒಬ್ಬ ಸಹೋದರ ಇಲ್ಲಿದ್ದಾನೆ ಎಂದು ನಮಗೆ ನಾವೇ ಹೇಳಿಕೊಳ್ಳದೆ ಇರೋಣ. ಆತ್ಮೀಕ ವಿಚಾರದ ಪ್ರಕಾರ ಆತನು ನನ್ನ ಸಹೋದರ. ಆತನು ಏನಾದರೂ ತಪ್ಪು

ಮಾಡುತ್ತಿದ್ದಾನೆ ಎಂದು ನನಗೆ ತೋರಬಹುದು, ಆದರೆ ನಾನು ಅವನ ಬಗ್ಗೆ ಸಹಾನುಭೂತಿ ಹೊಂದಿದ್ದೇನೆ. ಏಕೆಂದರೆ ಬಹುಶಃ ಅವನ ಕ್ರಿಯೆಯು ತಪ್ಪಾಗಿದೆ ಎಂದು ಅವನಿಗೆ ತಿಳಿದಿರುವುದಿಲ್ಲ. ಅಥವಾ ನಾನೇ ಆತನ ಬಗ್ಗೆ ತಪ್ಪಾಗಿ ತಿಳಿದಿರಬಹುದು. ಆತನು ನನ್ನ ದೃಷ್ಟಿಕೋನದಿಂದ ವಿಷಯವನ್ನು ನೋಡಿದರೆ, ಆತನು ಆ ಕಾರ್ಯವನ್ನು ವಿಭಿನ್ನವಾಗಿ ಮಾಡುತ್ತಾನೆ. ನಾನು ಆತನನ್ನು ನ್ಯಾಯತೀರ್ಪು ಮಾಡುವುದಿಲ್ಲ. ಆದರೆ ಅದನ್ನು ಸರ್ವಶಕ್ತನ ಕೈಯಲ್ಲಿ ಬಿಡುತ್ತೇನೆ. ಏಕೆಂದರೆ ಸರ್ವಶಕ್ತನು ನ್ಯಾಯತೀರ್ಪು ಮಾಡುವುದರಲ್ಲಿ ದೋಷವಿಲ್ಲದವನು ಮತ್ತು ನ್ಯಾಯತೀರ್ಪು ಮಾಡುವುದು ಆತನಿಗೆ ಸೇರಿದ್ದಾಗಿದೆ. (1 ಕೊರಿಂಥದವರಿಗೆ 4:5) **R 5604 : 2**

## 14 ಮೇ

**"ದೇವರ ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬದೇ." ( 2 ಕೊರಿಂಥದವರಿಗೆ 5 : 19)**

ಕ್ರಿಸ್ತನು ನ್ಯಾಯ ಪ್ರಮಾಣವನ್ನು ಕಾದುಕೊಂಡನು ಮತ್ತು ಸುವಾರ್ತಾ ಯುಗದಲ್ಲಿ ಯಾರೆಲ್ಲಾ ಆತನವರಾಗುತ್ತಾರೋ ಅವರೆಲ್ಲರಿಗೂ ದೈವಿಕ ನ್ಯಾಯತೀರ್ಪನ್ನು ತೃಪ್ತಿಪಡಿಸಿದನು; ಯಾರೆಲ್ಲಾ ತಮ್ಮ ಹೃದಯಗಳಲ್ಲಿ ನ್ಯಾಯಪ್ರಮಾಣವನ್ನು ಕಾದು ಕೊಳ್ಳುತ್ತಾರೋ ಅಂಥವರಿಗೆ ಆತನ ಅರ್ಹತೆಯನ್ನು ವಿಧಿಸಲಾಗುತ್ತದೆ ಮತ್ತು ಅಂಥವರು ತಮ್ಮ ಬಿದ್ದು ಹೋದ ಮಾಂಸದ ದೌರ್ಬಲ್ಯಗಳಿಂದ ಆ ನ್ಯಾಯಪ್ರಮಾಣವನ್ನು ಸಂಪೂರ್ಣವಾಗಿ ಕಾದುಕೊಳ್ಳಲು ಅಡ್ಡಿಯಾದಾಗ ಆತನ ಅರ್ಹತೆಯನ್ನು ಅವರ ಮೇಲೆ ವಿಧಿಸಲಾಗುತ್ತದೆ. ಆದ್ದರಿಂದ ಅಪೋಸ್ತಲನಾದ ಪೌಲನು ಮಾಂಸದ(ಶರೀರದ) ಪ್ರಕಾರ ನಡೆಯದೆ ಆತ್ಮದ ಪ್ರಕಾರ ನಡೆಯುವವರಾದ ನಮ್ಮಲ್ಲಿ ನ್ಯಾಯಪ್ರಮಾಣದ ನೀತಿಯು ನೆರವೇರುತ್ತದೆ ಎಂದು ಹೇಳುತ್ತಾನೆ. ಮೊದಲನೆಯದಾಗಿ, ಅವರ ಮರ್ತ್ಯ ದೇಹಗಳಿಗೆ, ಅವರ ಶರೀರಕ್ಕೆ ತನ್ನ ಅರ್ಹತೆಯನ್ನು ಅವರ ಮೇಲೆ ವಿಧಿಸಿ ನಮ್ಮ ವಿಮೋಚಕನು ಅವರ ಸ್ವಾಭಾವಿಕ ಅಪೂರ್ಣತೆಗಳನ್ನು ಮರೆ ಮಾಡುತ್ತಾನೆ. ಎರಡನೆಯದಾಗಿ, ಆ ಶರೀರವು ಎಷ್ಟೋ ಶ್ರದ್ಧೆಯಿಂದಿರುವದರಿಂದ, ಎಷ್ಟೋ ನೀತಿವಂತಿಕೆಯಾದದ್ದರಿಂದ ಅದು ಯಜ್ಞವಾಗಿ ಅರ್ಪಿತವಾಗಿದೆ. ಆದ್ದರಿಂದ ಆತನು ಅವರನ್ನು ಮನುಷ್ಯರು ಎಂಬ ದೃಷ್ಟಿಯಿಂದ ಸತ್ತವರು ಎಂದು ಎಣಿಸುತ್ತಾನೆ. ನಂತರ ಅವರು ಒಂದು ಹೊಸ ಆತ್ಮೀಕ ಸ್ವಭಾವಕ್ಕೆ

ಭ್ರೂಣಾಂಕರ [ಆತ್ಮೀಕ ಗರ್ಭಧಾರಣೆ] ಹೊಂದುತ್ತಾರೆ. ಅಂದಿನಿಂದ ಅವರ ಮರ್ತ್ಯ ದೇಹವನ್ನು ಹೊಸ ಸೃಷ್ಟಿಯ ದೇಹವಾಗಿ ಎಣಿಸಲ್ಪಡುತ್ತದೆ, ಇನ್ನೆಂದಿಗೂ ಅದನ್ನು ಮಾನವ ದೇಹವಾಗಿ ಎಣಿಸಲ್ಪಡುವುದಿಲ್ಲ; ಏಕೆಂದರೆ ಈ ದೇಹವು ಬಲಿಯಾಗಿ ಅರ್ಪಿತವಾಯಿತು. ವಾಸ್ತವವಾಗಿ, ಅದಾಗ್ಯೂ ಅದು ಹೊಸ ಸೃಷ್ಟಿಗೆ ಸೇವಕನಾಗಿರಲು ಬದುಕುವವನಾಗಿರುತ್ತದೆ. ಇನ್ನೂ ನಿಜವಾಗಿ ಮನುಷ್ಯನಾಗಿರುವುದರಿಂದ, ಪ್ರಸ್ತುತ [ಈಗಿನ] ಜೀವನದ ಕೊನೆಯವರೆಗೂ ಅದಕ್ಕೆ ಧರಿಸಲು ನೀತಿಯ ನಿಲುವಂಗಿಯನ್ನು ನೀಡಬೇಕು. ಇದನ್ನು ರಕ್ಷಕನಿಂದ ಒದಗಿಸಲ್ಪಟ್ಟಿದೆ. **R 5918 : 3**

## 15 ನೇ

**"ನಿನ್ನ ದೇವರಾದ ಕರ್ತನಾಗಿರುವ ನಾನು ರೋಷವುಳ್ಳ ದೇವರಾಗಿದ್ದೇನೆ." ( ಧರ್ಮೋಪದೇಶಕಾಂಡ 5 : 9 )**

ಮನುಷ್ಯನು ತನ್ನ ದ್ವೇಷ ಮತ್ತು ರೋಷಗಳನ್ನು ದೇವರಂತೆಯೇ ಹೊಂದಲು ಸಾಧ್ಯವಾದರೆ ಅದು ಸರಿಯಾಗಿರುತ್ತದೆ. ನಾವು ದೇವರಂತೆ ಪಾಪವನ್ನು ದ್ವೇಷಿಸಬೇಕು, ಆದರೆ ಪಾಪಿಯನ್ನು ಅಲ್ಲ. ದೇವರ ರೋಷವು ನೀತಿಯುಳ್ಳದ್ದಾಗಿದೆ ಮತ್ತು ಪಾಪಿಗೆ ನೀತಿಯುಳ್ಳ ಶಿಕ್ಷೆಯನ್ನು ಕೊಡುವದು ಖಚಿತವಾಗಿದೆ. ನಾವು ಇತರ ದೇವರುಗಳನ್ನು ಹೊಂದಿರುವಾಗ ನಾವು [ತಂದೆಯಾದ] ದೇವರು ರೋಷವುಳ್ಳವನಾಗಿರುತ್ತಾನೆಂದು ಪರಿಗಣಿಸಬೇಕು ಎಂದು ಆತನು ನಮಗೆ ಹೇಳುತ್ತಾನೆ; ಆದರೆ ರೋಷದ [ಅಸೂಯೆಯ] ಅನುಚಿತತೆಯು ಕಹಿ ಮತ್ತು ಇತರ ಗುಣಗಳಿಗೆ ಕಾರಣವಾಗುವುದು, ಅದು ಬಿದ್ದು ಹೋದ ಮನುಷ್ಯನ ಮನಸ್ಸಿಗೆ ಒಳಪಟ್ಟಿರುತ್ತದೆ ಮತ್ತು ಜವಾಬ್ಧಾರವಾಗಿರುತ್ತದೆ. ಕರ್ತನು ತನ್ನನ್ನು ರೋಷವುಳ್ಳ ದೇವರೆಂದು ಘೋಷಿಸುವಾಗ, ಆತನು ನಮ್ಮೆಲ್ಲರ ಪ್ರೀತಿವಾತ್ಸಲ್ಯ, ನಮ್ಮ ಎಲ್ಲಾ ವಿಶ್ವಾಸ, ನಮ್ಮ ಸಂಪೂರ್ಣ ನಂಬಿಕೆಯನ್ನು ಆತನಿಗೆ ಸಲ್ಲಿಸಬೇಕೆಂದು ಬಯಸುತ್ತಾನೆಂದು ನಾವು ಅರ್ಥಮಾಡಿಕೊಳ್ಳಬೇಕು ಎಂದಾಗಿದೆ. ನಮ್ಮ ಜೀವನದ ಎಲ್ಲಾ ವ್ಯವಹಾರಗಳಲ್ಲಿ [ವಿಚಾರಗಳಲ್ಲಿ] ಆತನ ಚಿತ್ತವು ಸರ್ವೋಚ್ಚವಾಗಿದ್ದು, ನಾವು ಆತನೊಂದಿಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗಿರಬೇಕೆಂದು ಆತನು ಬಯಸುತ್ತಾನೆ. ಇದನ್ನು ಸರ್ವಶಕ್ತನ ವಿಷಯದಲ್ಲಿ ಸ್ವಾರ್ಥವೆಂದು ಪರಿಗಣಿಸಲಾಗುವುದಿಲ್ಲ; ಏಕೆಂದರೆ ಇದು ಆತನ ಆಳ್ವಿಕೆಯ ಅಡಿಯಲ್ಲಿ, ಆತನ ಸೃಷ್ಟಿಗಳಿಗೆ ದೊಡ್ಡಪ್ರಮಾಣದ [ಅತ್ಯಂತ] ಸಂತೋಷವಾಗಿದೆ. ಪ್ರಸ್ತುತ [ಈಗಿನ]

ಜೀವನದ ಕರ್ತವ್ಯಗಳು ಮತ್ತು ವ್ಯವಹಾರಗಳಲ್ಲಿ ದೊಡ್ಡ ಪ್ರಮಾಣದ ಯಶಸ್ಸಾಗಿದೆ. ಮತ್ತು ಇವುಗಳು ಆತನನ್ನು ಪ್ರೀತಿಸುವವರಿಗೆ ದೇವರು ಸಂಪೂರ್ಣವಾಗಿ ಸಿದ್ಧತೆ ಮಾಡಿರುವ ಆಶೀರ್ವಾದಗಳು ಮತ್ತು ವಾಗ್ದಾನಗಳಿಗೆ ಸಿದ್ಧತೆಯಾಗಿದೆ. **R 4789 : 2**

## 16 ಮೇ

**"ಸೂರ್ಯನು ಮುಳುಗುವದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ." (ಎಫೆಸದವರಿಗೆ 4 : 26)**

ಒಬ್ಬನು ಎಷ್ಟೇ ಪ್ರಚೋದನೆಯನ್ನು ಹೊಂದಿದ್ದರೂ, ಆ ವಿಷಯವನ್ನು ಆದಷ್ಟು ಬೇಗ ಇತ್ಯರ್ಥಗೊಳಿಸುವಂತೆ ಅವನು ನೋಡಿಕೊಳ್ಳಬೇಕು. ಕೋಪ ಅಥವಾ ಕ್ರೋಧವನ್ನು ಆಶ್ರಯಿಸಬಾರದು ಮತ್ತು ಅದರಲ್ಲಿ ಸಂತೋಷಿಸಬಾರದು; ಏಕೆಂದರೆ ಇದು ಶಾಶ್ವತವಾದ ಕಹಿ ಮತ್ತು ದ್ವೇಷಕ್ಕೆ ಕಾರಣವಾಗುವುದು ಖಚಿತ. ಕೋಪ ಎಂಬ ಪದವು ಕ್ರೋಧದಷ್ಟು ಪ್ರಬಲವಾದ ಪದವಲ್ಲ ಎಂದು ತೋರುತ್ತದೆ. ಅಪೂರ್ಣವಾದ, ಬಿದ್ದುಹೋದ ಮನುಷ್ಯರಲ್ಲಿ ಕ್ರೋಧವು ಆಳವಾದ, ದೃಢವಾದ ಮತ್ತು ಶಾಶ್ವತವಾದ ಕೋಪವುಳ್ಳದ್ದಾಗಿ ತೋರುತ್ತದೆ. ಅದು ಅಸಮಾಧಾನ, ಪ್ರತೀಕಾರದ ಸಂಗತಿಯಾಗಿದೆ. ಕೆಟ್ಟ ಮಾತು ಎಂಬದು ಅಧಿಕ ಪರಿಷ್ಕೃತ, ಅಧಿಕ ಸೂಕ್ಷ್ಮವುಳ್ಳ, ಅಧಿಕ ವಂಚನೆಯುಳ್ಳ, ಅಧಿಕ ದುರುದ್ದೇಶಪೂರಿತವಾದ ವಿಷಯವಾಗಿದೆ. ಅನೇಕ ಜನರು ತಮ್ಮ ಗುಣಲಕ್ಷಣದಲ್ಲಿ ಎಷ್ಟು ದುರ್ಬಲರಾಗಿದ್ದಾರೆಂದರೆ, ಎಷ್ಟು ಸಮತೋಲನವಿಲ್ಲದವರಾಗಿದ್ದಾರೆಂದರೆ ತಮ್ಮ ದೈನಂದಿನ ಜೀವನದಲ್ಲಿ ಬಂಗಾರದ ಪ್ರಮಾಣವನ್ನು ಸರಿಯಾಗಿ ಅನ್ವಯಿಸುವುದನ್ನು ಕುರಿತು ಅರಿಯದಿದ್ದಾರೆ. ಅವರು ಇತರರ ವಿಷಯಗಳನ್ನು ಹೇಳುತ್ತಾರೆ, ಆದರೆ ಇತರರು ತಮ್ಮ ವಿಷಯದ ಬಗ್ಗೆ ಹೇಳುವುದನ್ನು ಕೇಳಲು ಬಯಸುವುದಿಲ್ಲ. ಅವರು ಇತರರೊಂದಿಗೆ ನಡೆದುಕೊಳ್ಳುವಂತೆ, ಇತರರು ಅವರೊಂದಿಗೆ ನಡೆದುಕೊಳ್ಳಬಾರದೆಂದು ಬಯಸುತ್ತಾರೆ. ಅಂತಹ ಎಲ್ಲಾ ನಡವಳಿಕೆಯು ಕರ್ತನ ಮಕ್ಕಳಿಂದ ದೂರವಿರಬೇಕು. ಯಾರೆಲ್ಲಾ ದೇವರೊಂದಿಗೆ ಪವಿತ್ರ ಒಡಂಬಡಿಕೆ ಮಾಡಿಕೊಂಡು, ದೇವರ ರಾಯಭಾರಿಗಳೆಂದು ಹೇಳಿಕೊಳ್ಳುತ್ತಾರೋ ಅವರು ಅಂತಹವರಿಂದ ದೂರವಿರಬೇಕು. **R 5974 : 1**

## 17 ಮೇ

**"ನಾವು ಕಾಣುವಂಥವುಗಳನ್ನು ದೃಷ್ಟಿಸದೆ ಕಾಣದಿರುವಂಥವುಗಳನ್ನು ದೃಷ್ಟಿಸುವವರಾಗಿದ್ದೇವೆ; ಯಾಕಂದರೆ ಕಾಣುವಂಥವುಗಳು ಸ್ವಲ್ಪಕಾಲ ಮಾತ್ರ ಇರುವವು;**

**ಕಾಣದಿರುವಂಥವುಗಳು ಸದಾಕಾಲವೂ ಇರುವವು." (2 ಕೊರಿಂಥದವರಿಗೆ 4 : 18)**

ಈ ವಾಕ್ಯದ ಅರ್ಥವೇನು? ಇದರ ಅರ್ಥವೇನೆಂದರೆ ಅಪೋಸ್ತಲನಾದ ಪೌಲನಿಗೆ ಆತ್ಮೀಕ ದೃಷ್ಟಿಯಿತ್ತು. ಆತನು ನಿಜವಾಗಿಯೂ ಈ ಲೋಕದ ಆಕರ್ಷಣೆಗಳನ್ನು ನೋಡಿದನು, ಆದರೆ ಆತನಿಗಿದ್ದ ಆತ್ಮೀಕ ದೃಷ್ಟಿಯಿಂದಾಗಿ– ಕಣ್ಣಿಗೆ ಕಾಣದ ವಿಷಯಗಳನ್ನು ಕುರಿತು ಆತನಿಗಿದ್ದ ಗ್ರಹಿಕೆಯಿಂದಾಗಿ ಅವುಗಳು ಆತನ ಮೇಲೆ ತಮ್ಮ ಸೆಳೆಯುವ ಶಕ್ತಿಯನ್ನು ಕಳೆದುಕೊಂಡವು. ನಂಬಿಕೆಯ ಕಣ್ಣಿನಿಂದ [ಮನೋನೇತ್ರದಿಂದ] ಆತನು ಪರಲೋಕದ ತಂದೆಯನ್ನು, ಮಹಿಮೆ ಹೊಂದಿದ ಕರ್ತನಾದ ಯೇಸುವನ್ನು, ಪರಲೋಕದ ಸೈನ್ಯಗಳನ್ನು, ಮುಂದೆ ಬರಲಿರುವ ರಾಜ್ಯದ ಮಹಿಮೆ, ಘನ ಮತ್ತು ನಿರ್ಲಯತ್ವವನ್ನು ನೋಡಿದನು. ನಂಬಿಕೆಯಿಂದ ಆತನು ಮಹತ್ತಾದ ಸಾವಿರ ವರ್ಷದ ರಾಜ್ಯವು ತನ್ನ ಮುಂದೆ ವಿಸ್ತಾರವಾಗುವುದನ್ನು ನೋಡಿದನು ಮತ್ತು ಆ ರಾಜ್ಯದಲ್ಲಿ ಬಾಧ್ಯಸ್ಥನಾಗಲು, ಬೋಧಕ ಮತ್ತು ವಿಮೋಚಕನೊಂದಿಗೆ ಸಹ–ಬಾಧ್ಯಸ್ಥನಾಗಲು ದೈವಿಕ ಆಹ್ವಾನವನ್ನು ಕೇಳಿಸಿಕೊಂಡನು. ಆತನ ಆಹ್ವಾನವನ್ನು ಸ್ವೀಕರಿಸಿದನು. ಆತನು ಬೋಧಕನ ಧ್ವಜೆಯ ಅಡಿಯಲ್ಲಿ ಸೇರ್ಪಡೆಗೊಂಡಿದ್ದನು; ಮತ್ತು ದೇವರು ವಾಗ್ದಾನ ಮಾಡಿದ ಈ ಶಾಶ್ವತವಾದ ವಿಷಯಗಳಿಗೆ ಹೋಲಿಸಿದರೆ ಈ ಲೋಕದಲ್ಲಿರುವ ಬೇರೆ ಎಲ್ಲಾ ವಿಷಯವು ಯಾವುದೇ ಮೌಲ್ಯವನ್ನು ಹೊಂದಿಲ್ಲ ಎಂದು ಆತನು ಅರಿತುಕೊಂಡನು. ಆತನ ಭರವಸೆಯು ದೇವರ ವಾಕ್ಯದ ಮೇಲಿತ್ತು. **R 5951 : 6**

## 18 ಮೇ

**"ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ." ( ಇಬ್ರಿಯರಿಗೆ 7 : 25 )**

ಇಡೀ ಸವಾರ್ತಾ ಯುಗದಲ್ಲಿ ಕರ್ತನ ಜನರು ನಂಬಿಕೆಯ ಕಣ್ಣಿನಿಂದ ತಮ್ಮ ಮಹಾಯಾಜಕನು ಎಂದೆಂದಿಗೂ ಬದುಕುವವನಾಗಿದ್ದು ನಮಗೋಸ್ಕರ ವಿಜ್ಞಾಪನೆ ಮಾಡುವವನಾಗಿದ್ದಾನೆ ಎಂದು ನೋಡುವವರಾಗಿದ್ದಾರೆ. ಆತನು ತನ್ನ ಎರಡನೆಯ ಬರುವಿಕೆಗಾಗಿ ತನ್ನ ತಂದೆಯ ಸಮಯಕೋಸ್ಕರ ಕಾದಿದ್ದು, ತನ್ನ ಆತ್ಮೀಕವಾದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ಮತ್ತು ಆಶೀರ್ವಾದಗಳನ್ನು ತನ್ನ ಸಭೆಗೆ ನೀಡುವವನಾಗಿದ್ದಾನೆ ಮತ್ತು ಈ ಲೋಕಕ್ಕೆ ವಾಗ್ದಾನ ಮಾಡಿದ ಸಮಸ್ತವನ್ನು ಸರಿಮಾಡುವ ಆಶೀರ್ವಾದಗಳನ್ನು

ದಯಪಾಲಿಸುವವನಾಗಿದ್ದಾನೆ. ಆ ವಿಷಯವನ್ನು ಕುರಿತು ದೇವರು "ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ." ಆದರೆ ನಿಜವಾದ ಆಶೀರ್ವಾದಗಳನ್ನು ದಯಪಾಲಿಸುವದಕ್ಕೆ ಮುಂಚಿತವಾಗಿ, ನಂಬಿಕೆಯಿಂದ ಯಾರೆಲ್ಲಾ ಆತನ ಸಹೋದರ–ಸಹೋದರಿಗಳಾಗಿದ್ದಾರೋ, ಆತನ ಶಿಷ್ಯರಾಗಿದ್ದಾರೋ, ಆತನ ಹೆಜ್ಜೆಯ ಜಾಡಿನಲ್ಲಿ ನಡೆಯುತ್ತಿದ್ದಾರೋ, ಕ್ರಿಸ್ತನು ತನ್ನ (ಈಡು)ಬಲಿಯನ್ನು ನೆರವೇರಿಸಿದಂತೆ ತಮ್ಮ (ಪಾಪ)ಬಲಿಗಳನ್ನು ನೆರವೇರಿಸುವುದಕ್ಕೆ ಪ್ರಯತ್ನಿಸುತ್ತಿರುವವರು ಅವರು ದೇವರಲ್ಲಿ ಅನ್ಯರಲ್ಲ, ಅಪರಿಚಿತರಲ್ಲ, ವಿದೇಶಿಯರೂ ಅಲ್ಲ, ಆದರೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಂದೆಯೊಂದಿಗೆ ತನ್ನ "ಪ್ರಿಯ ಕುಮಾರನ ಮೂಲಕ ಸ್ವೀಕರಿಸಲ್ಪಟ್ಟಿದ್ದಾರೆ." ಕ್ರಿಸ್ತನು ನಮಗೋಸ್ಕರ ವಿಜ್ಞಾಪಿಸುವವನೂ, ನಮ್ಮ ವಕೀಲನೂ ಆಗಿದ್ದು, ಆತನೊಬ್ಬನ ಮೂಲಕವೇ ನಮ್ಮ ತಂದೆಯ ಮುಂದೆ ನಿಲ್ಲಲು ಮತ್ತು ಯಾವುದೇ ರೀತಿಯಾದ ದಯೆಗಳನ್ನು ಬೇಡಿಕೊಳ್ಳಲು ಅಥವಾ ನಿರೀಕ್ಷಿಸಲು ಸಾಧ್ಯ. **R 2823 : 4**

## 19 ಮೇ

**"ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ, ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು." ( ಮತ್ತಾಯನು 5 : 16 )**

ನಮ್ಮ ಕರ್ತನಾದ ಯೇಸುವಿನಿಂದ ಅಥವಾ ಆತನ ಶಿಷ್ಯರಿಂದ ಈ ಲೋಕದವರು [ದೇವರ] ಸಂದೇಶವನ್ನು ಸ್ವೀಕರಿಸುತ್ತಾರೆ ಎಂದು ಈ ವಾಕ್ಯವು ಖಾತರಿಪಡಿಸುವುದಿಲ್ಲ. ಅದೇನೇ ಇದ್ದರೂ, ಕ್ರಿಸ್ತನು ತನ್ನ ಬೆಳಕನ್ನು ಪ್ರಕಾಶಿಸಿದಂತೆ ನಾವು ನಮ್ಮ ಬೆಳಕನ್ನು ಪ್ರಕಾಶಿಸೋಣ, ಕತ್ತಲೆಯು ಆ ಬೆಳಕನ್ನು ಗ್ರಹಿಸದೆ ಇದ್ದರೂ ಪರವಾಗಿಲ್ಲ. ಇಲ್ಲಿ ಆಲೋಚನೆ ಏನೆಂದರೆ ಕೆಲವರು ತಮ್ಮ ಕಾರ್ಯಗಳು ಕೆಟ್ಟದಾಗಿರುವುದರಿಂದ ಬೆಳಕನ್ನು ವಿರೋಧಿಸಬಹುದು, ಆದರೆ ಇನ್ನೂ ಕೆಲವರು ಸಂದೇಶವನ್ನು ವಿಭಿನ್ನವಾಗಿ ಸ್ವೀಕರಿಸಬಹುದು ಎಂದು ತೋರುತ್ತದೆ. ಆದ್ದರಿಂದ ನಾವು "ಮನುಷ್ಯರು ನಮ್ಮ ಒಳ್ಳೇ ಕ್ರಿಯೆಗಳನ್ನು ನೋಡುವಂತೆ ನಮ್ಮ ಬೆಳಕು ಅವರ ಮುಂದೆ ಪ್ರಕಾಶಿಸಲಿ"–ಅವರು ಈ ಕ್ರಿಯೆಗಳನ್ನು ಸರಿಯಾಗಿ ಅಥವಾ ಕೆಟ್ಟದ್ದಾಗಿ ಪರಿಗಣಿಸಬಹುದು. ಕೆಲವರು [ಆ ಬೆಳಕನ್ನು] ನೋಡಿ ಮೆಚ್ಚಬಹುದು. ನಮ್ಮ ಕರ್ತನನ್ನು ವಿರೋಧಿಸಿದವರು ಸಾಮಾನ್ಯ ಜನರಲ್ಲ, ಆದರೆ ವಿಶೇಷವಾಗಿ ದೇವರ ಜನರು ಎಂದು ಹೇಳಿಕೊಳ್ಳುವವರು, ಶಾಸ್ತ್ರಿಗಳು ಮತ್ತು ಫರಿಸಾಯರು, ಅವರು

ತಮ್ಮದೇ ಆದ ಮಾನ್ಯತೆ ಪಡೆದ ಮಾನದಂಡಗಳಿಗೆ ಅನುಗುಣವಾಗಿ ಬದುಕಲಿಲ್ಲ. ಇವರನ್ನು [ಯೇಸು] ಖಂಡಿಸುವುದನ್ನು ಅರಿತುಕೊಂಡರು. ಯೇಸುವಿನ ಬೋಧನೆಯು ಉನ್ನತ ಮಟ್ಟದಲ್ಲಿತ್ತು ಎಂದು ಅವರು ಅರಿತುಕೊಂಡರು. **R 4746 : 3**

## 20 ಮೇ

**"ನೀವು ಪೂರ್ವ ಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಮನುಷ್ಯನನ್ನು ಧರಿಸಿಕೊಂಡವರಾಗಿದ್ದೀರಿ ಅವನನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ಜ್ಞಾನದಲ್ಲಿ ಅವನು ನೂತನವಾಗುತ್ತಾನೆ." (ಕೊಲೊಸ್ಸೆಯವರಿಗೆ 3 : 9-10)**

ಜ್ಞಾನದ ಮೂಲಕ, ಜೊತೆಗೆ ಜ್ಞಾನದಲ್ಲಿ ನೂತನ ಸೃಷ್ಟಿಯು ನವೀಕರಿಸಲ್ಪಟ್ಟಿದೆ ಅಥವಾ ಉಜ್ಜೀವನಗೊಂಡಿದೆ, ಕಟ್ಟಲ್ಪಟ್ಟಿದೆ, ಬಲಗೊಂಡಿದೆ. ಈ ಲೋಕದ ಬುದ್ಧಿವಂತಿಕೆಯು ದೇವರ ಎಣಿಕೆಯಲ್ಲಿ ಮೂರ್ಖತನವಾಗಿದೆ. ಹಳೆಯ ಮನಸ್ಸು ಈ ಲೋಕದ ಬುದ್ಧಿವಂತಿಕೆಯನ್ನು ಹೊಂದಿತ್ತು. ನೂತನ ಸೃಷ್ಟಿಯು ದೇವರ ಬುದ್ಧಿವಂತಿಕೆಯನ್ನು ಪಡೆದುಕೊಂಡಿದೆ. ನೂತನ ಮನಸ್ಸಿನ ವಿವಿಧ ಶಕ್ತಿಗಳ ಬೆಳವಣಿಗೆಯು ಒಂದು ಕ್ರಮೇಣ ಕೆಲಸವಾಗಿದೆ, ಅದು ತಾನು ಪಡೆದ ಜ್ಞಾನದ ಮೇಲೆ ಅವಲಂಬಿತವಾಗಿದೆ. ನೂತನ ಚಿತ್ತವು ಜ್ಞಾನದೊಂದಿಗೆ ಬಲಗೊಂಡು ಶಕ್ತಿಯುತವಾಗುತ್ತದೆ, ಮತ್ತು ನೂತನ ಸೃಷ್ಟಿಯು ತನ್ನ ಉದ್ದೇಶವನ್ನು ಸಾಧಿಸುವ ಅವಕಾಶಗಳನ್ನು ಕಂಡುಕೊಳ್ಳುತ್ತದೆ. ಈ ಜ್ಞಾನವು ಮೇಲಿನಿಂದ [ಪರಲೋಕದಿಂದ] ಬರುತ್ತದೆ. ಸತ್ಯವೇದದಲ್ಲಿ ಎಷ್ಟು ಅಧ್ಯಾಯಗಳಿವೆ, ಅಥವಾ ಎಷ್ಟು ವಾಕ್ಯಗಳಿವೆ ಎಂದು ತಿಳಿದಿರುವದು ಮಾತ್ರ ಸಾಲದು ಮತ್ತು ಅವುಗಳನ್ನು ಹೇಳುವದು [ಉಲ್ಲೇಖಿಸುವದು] ಮಾತ್ರ ಸಾಲದು; ಆದರೆ ನಮ್ಮ ಜೀವನದಲ್ಲಿ ದೇವರ ವಿವಿಧ ಏರ್ಪಾಡುಗಳ ಮೂಲಕ, ದೇವರ ಜ್ಞಾನವನ್ನು ಪಡೆದು ಆತನ ಚಿತ್ತವನ್ನು ನಾವು ಸ್ಪಷ್ಟವಾಗಿ ಅರಿಯುವುದು, ಮತ್ತು ವಿಧೇಯತೆಯನ್ನು ತೋರಿಸುವುದನ್ನು ಖಚಿತಪಡಿಸಬೇಕಾಗಿದೆ. ನಾವು ದೇವರು ಮಾತನಾಡಿದ ವಿಷಯಗಳಿಗೆ ಎಷ್ಟು ಹೆಚ್ಚು ಗಮನಕೊಡುತ್ತೇವೋ, ಅಷ್ಟೇ ಹೆಚ್ಚು ಪ್ರಮಾಣದಲ್ಲಿ ನಮ್ಮ ಜ್ಞಾನ ವೃದ್ಧಿಯಾಗುತ್ತದೆ; ಈ ಭೂಮಿಯ ವಿಷಯಗಳಲ್ಲಿ ನಮ್ಮ ವಾತ್ಸಲ್ಯವನ್ನು ತೋರಿಸದೆ, ನಾವು ಮೇಲಿನ [ಪರಲೋಕದ] ವಿಷಯಗಳ ಮೇಲೆ ನಮ್ಮ ಪ್ರೀತಿ–ವಾತ್ಸಲ್ಯವನ್ನು ಎಷ್ಟರ ಮಟ್ಟಿಗೆ ತೋರಿಸುತ್ತೇವೋ, ಅಷ್ಟರ ಮಟ್ಟಿಗೆ ನಮ್ಮ ಜ್ಞಾನವು ಹೆಚ್ಚಾಗುತ್ತದೆ. **R 4894 : 6**

## 21 ಮೇ

**"ಆತನ ಹೆಸರಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನಲ್ಲಿ ಪಾಪ ಪರಿಹಾರವನ್ನು ಹೊಂದುವರು." ( ಅಪೋಸ್ತಲರಕೃತ್ಯಗಳು 10 : 43 )**

ನಮ್ಮ ಪಾಪ ಪರಿಹಾರ, ಪಾಪ ಮರೆಮಾಡುವಿಕೆಯ ಮೂಲಕವೇ ಹೊರತು ದೇವರ ಬಳಿ ಸಮೀಪಿಸಲು ಬೇರೆ ಯಾವುದೇ ವಿಧಾನಗಳಿಲ್ಲ; ಮತ್ತು ಕ್ರಿಸ್ತನ ಅಮೂಲ್ಯ ರಕ್ತದಲ್ಲಿ ನಂಬಿಕೆಯಿಡುವುದರ ಮೂಲಕವೇ ಹೊರತು ಪಾಪವನ್ನು ಮರೆಮಾಡುವ ಬೇರೆ ಯಾವುದೇ ವಿಧಾನಗಳಿಲ್ಲ. ರಕ್ಷಣೆಗಾಗಿ ಯೇಸುವಿನಲ್ಲಿ ನಂಬಿಕೆಯಿಡುವುದನ್ನು ಬಿಟ್ಟು, ಬೇರೆ ಎಲ್ಲಾ ಸಲಹೆಗಳು, ಅಜ್ಞಾನದಲ್ಲಿರುವ ಅನ್ಯ ಜನರ ಬೇರೆ ಎಲ್ಲಾ ಸಲಹೆಗಳು, ಐತಿಹಾಸಿಕ ಕ್ರಿಸ್ತನ ಜ್ಞಾನದ ಅಗತ್ಯವಿಲ್ಲ ಎಂದು ಹೇಳುವ ಎಲ್ಲಾ ಸಲಹೆಗಳು, ನೀತಿಯ ಆತ್ಮವುಳ್ಳ ಕ್ರಿಸ್ತನನ್ನು ಗುರುತಿಸುವುದೇ ಸಾಕೆನ್ನುವ ಎಲ್ಲಾ ಸಲಹೆಗಳು, "ಹೊಸ ಒಡಂಬಡಿಕೆಯ ಮಧ್ಯಸ್ಥನಾಗಿ" ಏರ್ಪಡಿಸಲಾಗಿರುವವನನ್ನು ಬಿಟ್ಟು, ಬೇರೆಯವನ ಮೂಲಕ ದೇವರೊಂದಿಗೆ ಸಾಮರಸ್ಯವಾಗುವ ಎಲ್ಲಾ ಸಲಹೆಗಳು, ಈ ಮೇಲಿನ ವಾಕ್ಯದ ಮೂಲಕ ಸಂಪೂರ್ಣ ಖಂಡನೆಯನ್ನು ಪಡೆಯುತ್ತವೆ. ದೇವರ ಸಂಪೂರ್ಣ ಯೋಜನೆಯು ದೈವಿಕ ನೀತಿ, ಜ್ಞಾನ, ಪ್ರೀತಿ ಮತ್ತು ಶಕ್ತಿಯನ್ನು ಮುಂದೆ ಇಟ್ಟು ಗೌರವ ಕೊಡುವುದು ಮಾತ್ರವಲ್ಲದೆ, ಯಾರಾದರೂ ಸರಿ ತಂದೆಯ ಬಳಿಗೆ ಬರಬೇಕಾದರೆ ಮತ್ತು ನಿತ್ಯಜೀವವನ್ನು ಹೊಂದಬೇಕಾದರೆ ಕರ್ತನಾದ ಯೇಸುವನ್ನು ಏಕೈಕ ಮಾರ್ಗವಾಗಿ ಮುಂದೆ ಇಟ್ಟು ಗೌರವ ಕೊಡಲಾಗಿದೆ. ಈ ಮಿತಿಗಳ ದೃಷ್ಟಿಯಲ್ಲಿ, ನಮ್ಮ ಮನುಷ್ಯ ಜಾತಿಯ ಬಹುಪಾಲು ಜನರಿಗೆ ಜ್ಞಾನದ ಸಮಯ ಮತ್ತು ಸಾವಿರ ವರ್ಷದ ಯುಗದಲ್ಲಿ ನಿತ್ಯ ಜೀವಕ್ಕಾಗಿ ಪರೀಕ್ಷೆಯ ಸಮಯವು ಭವಿಷ್ಯದಲ್ಲಿ ಉಂಟಾಗುತ್ತದೆ ಎಂಬ ಸತ್ಯವೇದದ ಆಶ್ವಾಸನೆಗಳು ಎಷ್ಟು ಸಾಂತ್ವನದಾಯಕವಾಗಿವೆ. **R 2997 : 4**

## 22 ಮೇ

**"ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲೂ ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ." ( ಇಬ್ರಿಯರಿಗೆ 12 : 1 )**

ಈ ಓಟ ಪಂದ್ಯದಲ್ಲಿರುವ ಪ್ರತಿಯೊಬ್ಬರೂ ಈ ಬಿಕ್ಕಟ್ಟಾದ ದಾರಿಯಲ್ಲಿ ಪ್ರಗತಿಗೆ ಸಂಬಂಧಿಸಿದಂತೆ ಇತರರನ್ನು ಪರೀಕ್ಷಿಸುವ ಬದಲು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಬೇಕು; ಯಾಕಂದರೆ ಕರ್ತನನ್ನು ಮಾತ್ರ ಹೊರತುಪಡಿಸಿ, ಪ್ರತಿಯೊಬ್ಬನು ತನ್ನ ಸ್ವಂತ ಹೃದಯದ ಸ್ಥಿತಿಯನ್ನು ಮತ್ತು ಅವನ ಸ್ವಂತ ಶರೀರದ ದೌರ್ಬಲ್ಯಗಳನ್ನು ಇತರರಿಗಿಂತ ಚೆನ್ನಾಗಿ ತಿಳಿದಿರುತ್ತಾನೆ. ಓಟ ಪಂದ್ಯದಲ್ಲಿ ಅವನು ಎಲ್ಲಿದ್ದಾನೆ ಎಂಬುದನ್ನು ನಾವು ಪ್ರತಿಯೊಬ್ಬರೂ ಗಮನಿಸೋಣ, ಅವನು ಓಟದಲ್ಲಿದ್ದಾನೆಂದು ಸಂತೋಷಪಡಲಿ; ಈ ಓಟ ಪಂದ್ಯದಲ್ಲಿ ಕರೆಯಲ್ಪಟ್ಟು ಅದರಲ್ಲಿ ಪ್ರವೇಶಿಸಲು ಪಡೆದಿರುವ ಒಂದು ದೊಡ್ಡ ಸವಲತ್ತನ್ನು ಕುರಿತು ಪರಿಗಣಿಸಲಿ. ನಾವು ಮೊದಲ ಕಾಲುಭಾಗದ ಗುರಿಯನ್ನು ಮುಟ್ಟಿದ್ದೇವೆ ಎಂದು ನಾವು ಕಂಡುಕೊಂಡರೆ ನಾವು ಸಂತೋಷ ಪಡೋಣ ಮತ್ತು ಇನ್ನೂ ಪ್ರಯಾಸ ಪಡೋಣ. ನಾವು ಎರಡನೆಯ ಕಾಲುಭಾಗದ ಗುರಿಯನ್ನು ಸಹ ಮುಟ್ಟಿದ್ದೇವೆ ಎಂದು ನಾವು ಕಂಡುಕೊಂಡರೆ, ನಾವು ಇನ್ನೂ ಹೆಚ್ಚಾಗಿ ಸಂತೋಷಪಡೋಣ, ಆದರೆ ನಮ್ಮ ಓಟವನ್ನು ನಿಧಾನಗೊಳಿಸಬಾರದು. ನಾವು ಮೂರನೆಯ ಕಾಲು ಭಾಗದ ಗುರಿಯನ್ನು ದಾಟಿದ್ದೇವೆ ಎಂದು ನಾವು ಕಂಡುಕೊಂಡರೆ ನಾವು ಅತ್ಯಧಿಕವಾಗಿ ಸಂತೋಷ ಪಡೋಣ ಮತ್ತು ಹುರುಪಿನಿಂದ ಇನ್ನೂ ಹೆಚ್ಚು ಪ್ರಯಾಸಪಡೋಣ. ಮತ್ತು ನಾವು ಶತ್ರುಗಳನ್ನು ಸಹ ಒಳಗೊಂಡಿರುವ ಪರಿಪೂರ್ಣ ಪ್ರೀತಿಯ ನಾಲ್ಕನೇ ಗುರಿಯನ್ನು ತಲುಪಿದ್ದರೆ, ನಮಗೆ ನಿಜವಾಗಿಯೂ ದೊಡ್ಡ ಸಂತೋಷಕ್ಕೆ ಕಾರಣವಿದೆ. ನಾವು ನಂಬಿಗಸ್ತರಾಗಿ ಉಳಿದರೆ ಬಹುಮಾನ ನಮ್ಮದೇ. ಆದರೆ ಸರ್ವಾಯುಧವನ್ನು ಧರಿಸಿಕೊಂಡು, ಅಪೋಸ್ತಲನು ಹೇಳುವಂತೆ, "ಮಾಡಬೇಕಾದದ್ದೆಲ್ಲವನ್ನು ಮಾಡಿ ನಿಲ್ಲಬೇಕು"—ಈ ಓಟಪಂದ್ಯದ ಕೊನೆಯವರೆಗೂ ವಿವಿಧ ಪರೀಕ್ಷೆಗಳಲ್ಲಿ ನಿಂತು, ನಮ್ಮ ಗುರಿಯಿಂದ ದಿಕ್ಕು ತಿರುಗಿಸುವ ಎಲ್ಲದ್ದರಿಂದ ಜಯಿಸಿ, "ಭಲಾ, ನಂಬಿಗಸ್ತನಾದ ಒಳ್ಳೇ ಸೇವಕನೇ, ನೀನು ನಿನ್ನ ಯಜಮಾನನ ಸಂತೋಷದಲ್ಲಿ ಪ್ರವೇಶಿಸು." ಎಂದು ಮಹಾ ಪರಿವೀಕ್ಷಕನು ಮತ್ತು ಬಹುಮಾನ ನೀಡುವವನಾದ ಕ್ರಿಸ್ತನ ಮುಂದೆ ನಿಲ್ಲಬೇಕಾಗಿದೆ. **R 2775 : 5**

## 23 ಮೇ

**"ಯಾರ ಅಪರಾಧಗಳು ಕ್ಷಮಿಸಲ್ಪಟ್ಟಿವೆಯೋ ಯಾರ ಪಾಪಗಳು ಮುಚ್ಚಿವೆಯೋ ಅವರೇ ಧನ್ಯರು." ( ರೋಮಾಪುರದವರಿಗೆ 4 : 7 )**

ಈ ವಿಷಯವನ್ನು ಅಧ್ಯಯನ ಮಾಡುವಾಗ ಕೆಲವರು ಯೋಚಿಸುವಂತೆ

ನೂತನ ಮನಸ್ಸಿನ ಪಾಪಗಳನ್ನು ನಿಲುವಂಗಿಯು ಮರೆ ಮಾಡುವುದಿಲ್ಲ ಎಂಬುದನ್ನು ನೆನಪಿನಲ್ಲಿಡುವುದು ಒಳ್ಳೆಯದು. ಧರ್ಮಶಾಸ್ತ್ರವು ನೂತನ ಮನಸ್ಸಿಗೆ ಯಾವುದೇ ಪಾಪವನ್ನು ಹೊರಿಸುವುದಿಲ್ಲ ಮತ್ತು ಬಿದ್ದು ಹೋದ ಮಾಂಸಿಕ ಶರೀರಕ್ಕೆ ನೀತಿಯ ಪರಿಪೂರ್ಣತೆಯನ್ನು ಹೊರಿಸುವುದಿಲ್ಲ. ನೂತನ ಮನಸ್ಸು ದೇವರಿಗೆ ನಿಷ್ಠೆಯಾಗಿ ಇಲ್ಲದಿದ್ದರೆ [ಕ್ರಿಸ್ತನ] ನಿಲುವಂಗಿಯು ಅದನ್ನು ಮರೆ ಮಾಡುವುದಿಲ್ಲ; ಅದು ನೂತನ ಮನಸ್ಸು ಆಗಿರುವುದನ್ನು ನಿಲ್ಲಿಸಿಬಿಡುತ್ತದೆ. ಶರೀರದ ಅಪೂರ್ಣತೆಗಳನ್ನು [ನಾವು ಆದಾಮನಿಂದ ಅನುವಂಶಿಕವಾಗಿ ಪಡೆದಿದ್ದೇವೆ] ಮರೆ ಮಾಡುವುದನ್ನು ಮುಂದುವರಿಸಲು, ಹೊಸ ಸೃಷ್ಟಿಯು ದೇವರಿಗೆ ನಿಷ್ಠಾವಂತರಾಗಿ ಉಳಿದಿರಬೇಕು, ಇಲ್ಲದಿದ್ದರೆ ಅದು ಎರಡನೇ ಮರಣಕ್ಕೆ ಪಾತ್ರವಾಗುತ್ತದೆ. ಆದ್ದರಿಂದ ಈ ಹೊಸ ಸೃಷ್ಟಿಗಳು, ಅಪೂರ್ಣ ದೇಹಗಳೊಂದಿಗೆ ನೂತನ ಮನಸ್ಸಿನ ಹತೋಟಿಯಲ್ಲಿರುವದರಿಂದ, ಅವರಿಗೆ ವಧುವಿನ ನಿಲುವಂಗಿಯನ್ನು ನೀಡಲಾಗಿದೆ, ಇದರಿಂದ ಅವರು ಕರ್ತನ ದೃಷ್ಟಿಯಲ್ಲಿ ಮತ್ತು ಸಹೋದರರ ದೃಷ್ಟಿಯಲ್ಲಿ [ನೀತಿವಂತರ] ಸ್ಥಾನವನ್ನು ಹೊಂದಿರುತ್ತಾರೆ. **R 4842 : 4**

## 24 ಮೇ

**"ಒಳ್ಳೇ ಮನುಷ್ಯನ ಹೆಜ್ಜೆಗಳು ಕರ್ತನಿಂದ ದೃಢವಾಗುತ್ತದೆ; ಆತನು ಅವನ ಮಾರ್ಗದಲ್ಲಿ ಸಂತೋಷಪಡುತ್ತಾನೆ. ಅವನು ಬಿದ್ದು ಹೋದಾಗ್ಯೂ ಪೂರ್ಣವಾಗಿ ಕೆಡವಲ್ಪಡುವುದಿಲ್ಲ. ಯಾಕಂದರೆ ಕರ್ತನು ತನ್ನ ಕೈಯಿಂದ ಅವನನ್ನು ಮೇಲೆ ಎತ್ತುತ್ತಾನೆ." ( ಕೀರ್ತನೆಗಳು 37 : 23, 24 )**

ನಮ್ಮ ಮೇಲಿನ ವಾಕ್ಯವು ನಮಗೆ ತಿಳಿಸುವುದೇನೆಂದರೆ, ಇಲ್ಲಿ ವಿವರಿಸಿರುವ ವರ್ಗದವರಲ್ಲಿ ತಮ್ಮ ಮಾನವ ಚಿತ್ತವು ರೂಪಾಂತರಗೊಂಡಿದೆ– ಅಂದರೆ ಮಾನವ ಚಿತ್ತಕ್ಕೆ ಬದಲಾಗಿ ದೈವಿಕ ಚಿತ್ತವನ್ನು ಸ್ವೀಕರಿಸಲಾಗಿದೆ; ಮತ್ತು ದೇವರ ಮಗನು ಈಗಾಗಲೇ ಪ್ರಾರಂಭಿಸಿದ ನೀತಿಯ ಮಾರ್ಗಗಳಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದಾನೆ; ಮತ್ತು ಗ್ರಹಿಸಬೇಕಾದ ಸರಿಯಾದ ಆಲೋಚನೆ ಏನೆಂದರೆ, ಹೀಗೆ ಕರ್ತನ ಮಾರ್ಗಗಳಲ್ಲಿ ನಡೆಯಲು ಪ್ರಯತ್ನಿಸುತ್ತಿರುವಾಗ, ದೇವರ ಮಕ್ಕಳ ಅಪೂರ್ಣತೆಯ ಕಾರಣದಿಂದಾಗಿ ತಾವು ಮಾಡುವ ತೀರ್ಪುಗಳಿಂದ ಅವರಿಗೆ ಯಾವುದೇ ಹಾನಿಯಾಗಲು ದೇವರು ಅನುಮತಿಸುವುದಿಲ್ಲ, ಆದರೆ ದೇವರ ಮಕ್ಕಳ ವಿಚಾರಗಳಲ್ಲಿ ಮೇಲ್ವಿಚಾರಣೆ ಮಾಡುತ್ತಾನೆ; ದೇವರ ಮಕ್ಕಳ ಸ್ವಂತ ಚಿತ್ತ, ಅವರ ಸ್ವಂತ ಇಚ್ಛೆಯಿಂದ ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಯನ್ನು

ರದ್ದುಗೊಳಿಸುತ್ತಾನೆ—ಅವರ ಪ್ರತಿಷ್ಠೆಯ ಚಿತ್ತವನ್ನು ಪರಿಗಣಿಸಿ ಅವರ ಒಳಿತಿಗಾಗಿ ಅದನ್ನು ರದ್ದುಗೊಳಿಸಲಾಗುವುದು; ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿ ಅವರ ಅಭಿವೃದ್ಧಿಗಾಗಿ ಅದನ್ನು ರದ್ದುಗೊಳಿಸಲಾಗುವುದು. ಅವರು ನ್ಯಾಯತೀರ್ಪಿನಲ್ಲಿ ತಪ್ಪುಮಾಡಿದರೆ ಮತ್ತು ಅವರ ತಪ್ಪಿನ ಪರಿಣಾಮಗಳನ್ನು ತಮ್ಮ ಮೇಲೆ ತಂದರೆ, ಕರ್ತನ ಜ್ಞಾನ ಮತ್ತು ಶಕ್ತಿಯು ಈ ವಾಗ್ದಾನದ ಎಲ್ಲಾ ಏರ್ಪಾಡುಗಳನ್ನು ಪೂರೈಸಬಲ್ಲನು ಮತ್ತು ಅವರ ತಪ್ಪುಗಳು ಮತ್ತು ಬಲಹೀನತೆಗಳನ್ನು ಸಹ ತಮ್ಮ ಗುಣಲಕ್ಷಣವನ್ನು ಬಲಪಡಿಸಲು ಮತ್ತು ನೀತಿಯಲ್ಲಿ ಸ್ಥಿರವಾಗಿ ಸ್ಥಾಪಿತವಾಗಲು, ಇದರ ಮತ್ತು ಬೇರೆ ಅನುಭವಗಳಿಂದ ಅವರಲ್ಲಿ ಆತ್ಮದ ಫಲಗಳು ಹಾಗೂ ಕೃಪೆಗಳನ್ನು ಅಭಿವೃದ್ಧಿಪಡಿಸಿ, ಅದು ಕೊನೆಯದಾಗಿ ರಾಜ್ಯದಲ್ಲಿ ಸಹ–ಬಾಧ್ಯಸ್ಥರನ್ನಾಗುವುದಕ್ಕೆ ಅವರನ್ನು ಸಿದ್ಧಪಡಿಸುತ್ತದೆ ಮತ್ತು ಯೋಗ್ಯವುಳ್ಳವರಾಗಿ ಮಾಡುತ್ತದೆ. **R 3156 : 6**

## 25 ಮೇ

**"ಕರ್ತನಲ್ಲಿಯೂ ಆತನ ಅತ್ಯಧಿಕವಾದ ಶಕ್ತಿಯಲ್ಲಿಯೂ ಬಲಗೊಳ್ಳಿರಿ." (ಎಫೆಸದವರಿಗೆ 6 : 10)**

ಇಲ್ಲಿ ನಾವು ಎಲ್ಲಾ ಸಮಯಗಳಲ್ಲಿ, ಎಲ್ಲಾ ಪರಿಸ್ಥಿತಿಗಳಲ್ಲಿ ಮತ್ತು ಎಲ್ಲಾ ಸಂದರ್ಭಗಳಲ್ಲಿ ದೇವರ ಜನರಿಗೆ ಅನ್ವಯಿಸುವ ಒಂದು ಬುದ್ಧಿವಾದವನ್ನು [ಉಪದೇಶವನ್ನು] ಹೊಂದಿದ್ದೇವೆ. ಇದು ಸ್ವಾಭಾವಿಕ ಮನುಷ್ಯನಾಗಿ, ಸೇವಕನಾಗಿ, ಸಂಸೋನನಿಗೆ ಅವನ ದಿನದಲ್ಲಿ ಅನ್ವಯಿಸುತ್ತದೆ ಮತ್ತು ಇದು ಕ್ರಿಸ್ತ ಯೇಸುವಿನಲ್ಲಿ ಹೊಸ ಸೃಷ್ಟಿಗಳಾಗಿ, ಮಹೋನ್ನತನ ಸೇವಕರಾಗಿ—ಮಕ್ಕಳಾಗಿ ಇಂದು ನಮಗೆ ಅನ್ವಯಿಸುತ್ತದೆ. ನಾವು ಸಂಸೋನನನ್ನು ಮತ್ತು ಅಪೋಸ್ತಲರಿಂದ ವಿವರಿಸಿರುವ ಎಲ್ಲಾ ಪಿತೃಗಳನ್ನು ಹಿಂತಿರುಗಿ ನೋಡಿದರೆ, ಅವರು ಸಹಿಸಿಕೊಂಡು ಜಯಿಸಿಲು ಕಾರಣವಾದ ಅವರ ಗುಣಲಕ್ಷಣದ ಶಕ್ತಿಯ ರಹಸ್ಯವು, ದೇವರಲ್ಲಿ ಮತ್ತು ಆತನು ಮಾಡಿದ ವಾಗ್ದಾನಗಳಲ್ಲಿ ಅವರಿಗಿದ್ದ ನಂಬಿಕೆಯಲ್ಲಿ ತೋರಿಬರುತ್ತದೆ. ಮತ್ತು ಅದೇ ನಂಬಿಕೆ ನಮ್ಮೊಂದಿಗೆ ಇರಬೇಕು. ಆದರೆ ನಂಬಿಕೆ ಮತ್ತು ಮೂಢನಂಬಿಕೆಯ ನಡುವೆ ವ್ಯತ್ಯಾಸವಿದೆ; ಎರಡನೆಯದು ಅಂದರೆ ಮೂಢನಂಬಿಕೆಯು ಶಕ್ತಿಯ ಚೈತನ್ಯವನ್ನು ನೀಡಬಹುದು ಆದರೆ ಅದು ಶಾಶ್ವತವಾಗಿ ಇರುವುದಿಲ್ಲ. ಮೊದಲನೆಯದು ಅಂದರೆ ನಂಬಿಕೆಯು ದೇವರ ಶಕ್ತಿಯಾಗಿದ್ದು ಕರ್ತನಾದ ಯೇಸು ಕ್ರಿಸ್ತನ ಉತ್ತಮ ಸೈನಿಕರಾಗಿ, ಸತ್ಯದ ಸೈನಿಕರಾಗಿ, ನೀತಿಯ ಸೈನಿಕರಾಗಿ, ಪಾಪ ಮತ್ತು ತಪ್ಪುಗಳು ಮತ್ತು ಎಲ್ಲಾ

ವಿಧವಾದ ಅವಭಕ್ತಿಗಳನ್ನು ನಾವು ಸಹಿಸಿಕೊಳ್ಳುವಂತೆ ಮಾಡುತ್ತದೆ. ಇದಲ್ಲದೆ ನಂಬಿಕೆಯಿಂದ, ಎದುರಾಳಿಯು ನಮ್ಮನ್ನು ಮತ್ತು ಇಡೀ ಲೋಕದ ಜನರನ್ನು ಮೋಸಗೊಳಿಸುವ ಕುಶಲ ಕುತಂತ್ರಗಳನ್ನು ಸಹ ಸಹಿಸಿಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ಕತ್ತಲೆಯ ಯುಗದಲ್ಲಿ ಕರ್ತನ ಜನರ ಮೇಲೆ ಹೇರಿದ "ದೆವ್ವಗಳ ಬೋಧನೆಗಳಿಂದ" ದೈವಿಕ ಗುಣಲಕ್ಷಣವನ್ನು ತಪ್ಪಾಗಿ ನಿರೂಪಿಸುತ್ತಾನೆ, ಅವರ ತಿಳುವಳಿಕೆಯ ಕಣ್ಣುಗಳನ್ನು ಕುರುಡುಗೊಳಿಸುತ್ತಾನೆ. ಈಗ ಕರ್ತನ ಏರ್ಪಾಡಿನಲ್ಲಿ ನಮ್ಮ ಕಣ್ಣುಗಳು ಅಪೋಸ್ತಲರ ಪ್ರಾರ್ಥನೆಗೆ ಅನುಗುಣವಾಗಿ ಹೆಚ್ಚೆಚ್ಚಾಗಿ ತೆರೆದುಕೊಳ್ಳುತ್ತವೆ, ಅಪೋಸ್ತಲನು ಹೇಳುವಂತೆ, "ನೀವು ಎಲ್ಲಾ ಸಂತರೊಂದಿಗೆ ಅದರ [ಪ್ರೀತಿಯ] ಅಗಲ, ಉದ್ದ, ಆಳ ಮತ್ತು ಎತ್ತರವನ್ನು ಗ್ರಹಿಸುವಂತೆಯೂ; ಮತ್ತು ಎಲ್ಲಾ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ಗ್ರಹಿಸುವಂತೆಯೂ ನಾನು ನಿಮಗಾಗಿ ದೇವರನ್ನು ಬೇಡಿಕೊಳ್ಳುತ್ತೇನೆ." **R 4089 : 4**

## 26 ಮೇ

**"ಕರ್ತನೇ ನಮ್ಮ ರಾಜನು; ಆತನೇ ನಮ್ಮನ್ನು ರಕ್ಷಿಸುವನು." (ಯೆಶಾಯನು 33:22)**

ನಮ್ಮ ಮೇಲಿನ ವಾಕ್ಯವು ಕರ್ತನ ಜನರ ಹೃದಯಗಳ ಮೇಲೆ ಆಳವಾಗಿ ಪ್ರಭಾವಿತವಾಗಬೇಕಾದ ಭಾವನೆಯಾಗಿದೆ. "ಕೈಸರನೇ ಹೊರತು ನಮಗೆ ಬೇರೆ ಅರಸನಿಲ್ಲ" ಎಂದು ಈ ಲೋಕವು ಕೂಗಬಹುದು, ಆದರೆ ಕರ್ತನ ಜನರು, ನಿಜವಾದ ಇಸ್ರಾಯೇಲ್ಯರು, ಇದರ ವಿರುದ್ಧವಾಗಿ ಅಂದರೆ "ಕರ್ತನೇ ನಮ್ಮ ರಾಜನು." ಎಂದು ಭಾವಿಸುತ್ತಾರೆ—ಆತನ ಆಜ್ಞೆಗೆ ಅನುಗುಣವಾಗಿ ನಾವು ಈ ಲೋಕದ ರಾಜರನ್ನು ಗೌರವಿಸುತ್ತೇವೆ ಮತ್ತು ದೈವಿಕ ಆಜ್ಞೆಗೆ ವಿರುದ್ಧವಾಗಿ ಇರದೆ ಇರುವ ಪ್ರತಿಯೊಂದು ನಿರ್ದಿಷ್ಟ ಲೋಕದ ಕಾನೂನುಗಳನ್ನು ಪಾಲಿಸುತ್ತೇವೆ; ಆದರೆ ಅದೇನೇ ಇದ್ದರೂ, ಈ ಲೋಕದ ರಾಜರಿಗಿಂತ ಹೆಚ್ಚಾಗಿ, ಕರ್ತನು [ತಂದೆಯಾದ ದೇವರು] ನೇಮಿಸಿದ ಇಮ್ಮಾನುಯೇಲ್ ರಾಜನಿಗೆ ನಮ್ಮ ಮಾನ್ಯತೆ, ಗೌರವ ಮತ್ತು ವಿಧೇಯತೆಯನ್ನು ತೋರಿಸಬೇಕು. ಆತನು ನಮ್ಮ ಹೃದಯದಲ್ಲಿ ಸಿಂಹಾಸನಾರೂಢನಾಗಿದ್ದರೆ, ನಾವು ಎಲ್ಲೇ ಇದ್ದರೂ ನಮ್ಮ ನಡತೆ ಮತ್ತು ಮಾತುಗಳಲ್ಲಿ ಆತನಿಗೆ ನಿಷ್ಠಾವಂತರಾಗಿರಲು ಸುಲಭವಾಗಿರುತ್ತದೆ. ನಾವು ಆತನನ್ನು ನಿರಾಕರಿಸಿದರೆ, ಆತನೂ ನಮ್ಮನ್ನು ನಿರಾಕರಿಸುತ್ತಾನೆ; ಆದರೆ ನಾವು ಆತನ ಮುಂದೆ ನಮ್ಮ ಪಾಪಗಳನ್ನು ಹರಿಕೆ ಮಾಡಿದರೆ ಆತನೂ ಸಹ ನಮ್ಮನ್ನು ತಂದೆ

ಮತ್ತು ದೂತರ ಮುಂದೆ ಸ್ವೀಕರಿಸುವನು—ಆತನು ಅಂತಿಮವಾಗಿ ನಮ್ಮನ್ನು ರಕ್ಷಿಸುತ್ತಾನೆ. ಆತನ ಸಭೆಯಾದ, ಆತನ ದೇಹವಾದ ನಮ್ಮ ಮೂಲಕ, ಮೂಲ ವಾಗ್ದಾನದ ಪ್ರಕಾರ ಲೋಕದ ಎಲ್ಲಾ ಸಂತತಿಯನ್ನು ಆಶೀರ್ವದಿಸುತ್ತಾನೆ, ಆಗ ನಾವು ಆತನೊಂದಿಗೆ ಅದನ್ನು ಸ್ವಾಸ್ಥ್ಯವಾಗಿ ಪಡೆಯುತ್ತೇವೆ. **R 3219 : 4**

## 27 ಮೇ

**"ಕರ್ತನ ಆಲಯಕ್ಕೆ ಹೋಗೋಣ ಎಂದು ಅವರು ನನಗೆ ಹೇಳಿದಾಗ ನನಗೆ ಸಂತೋಷವಾಯಿತು." ( ಕೀರ್ತನೆಗಳು 122 : 1 )**

ದೇವರ ಮನೆಯಾಗಲು, ಪುತ್ರರ ಮನೆಯಾಗಲು, ನಿಜರೂಪದ ದೇವಾಲಯದ ಸದಸ್ಯರಾಗಲು ಆಮಂತ್ರಣವನ್ನು [ಕರೆಯನ್ನು] ಕೇಳಿಸಿಕೊಳ್ಳುವವರು ಮತ್ತು ಆ ಆಮಂತ್ರಣವನ್ನು ಒಳ್ಳೆಯ ಮತ್ತು ಪ್ರಾಮಾಣಿಕ ಹೃದಯದಿಂದ ಸ್ವೀಕರಿಸುವವರು ನಿಜವಾಗಿಯೂ ಸಂತೋಷಪಡುತ್ತಾರೆ: "ಉತ್ಸಾಹ ಧ್ವನಿಯನ್ನು ತಿಳಿದ ಜನರು ಧನ್ಯರು." ನಾವು ಇದರೊಂದಿಗೆ ಅದೇ ಕೀರ್ತನಾಗಾರ—ಪ್ರವಾದಿಯು ಇದೇ ರೀತಿಯಾದ ಭಾವನೆಯೊಂದಿಗೆ ಘೋಷಿಸುವುದನ್ನು ನೋಡುತ್ತೇವೆ, "ನನ್ನ ಜೀವಮಾನವೆಲ್ಲಾ ಕರ್ತನ ಆಲಯದಲ್ಲಿ ವಾಸಿಸುವೆನು." ನಾವು ಶಾಶ್ವತವಾಗಿ ವಾಸಿಸಲು ನಿರೀಕ್ಷಿಸುವದು ಈ ಲೋಕದ ಮನೆಗಳಲ್ಲಿ ಅಲ್ಲ, ಈ ಲೋಕದ ದೇವಾಲಯಗಳಲ್ಲಿ ಅಲ್ಲ, ಆದರೆ ಈಗ ಕಟ್ಟಲ್ಪಡುತ್ತಿರುವ ಪರಲೋಕದ ಮನೆಯಲ್ಲಿ, ಪರಲೋಕದ ಸದಸ್ಯರಾಗಿ ನಿಜವಾಗಿಯೂ ಜೀವಂತ ಕಲ್ಲುಗಳಾಗಿ ಕರ್ತನ ಮನೆಯಲ್ಲಿ [ಆಲಯದಲ್ಲಿ] ಎಂದೆಂದಿಗೂ ವಾಸಿಸುತ್ತೇವೆ. ಅದರಲ್ಲಿ ಅವರು ನಿರ್ದಿಷ್ಟ ಸದಸ್ಯರಾಗಿರುವುದರಿಂದ ಅವರು ಇದನ್ನು ಬಿಟ್ಟು ಹೊರಗೆ ಹೋಗುವುದು ಎಂದರೆ ಮನೆಯು ನಾಶವಾಯಿತ್ತೆಂದು ಅರ್ಥ; ಕರ್ತನು ಹೇಳುವಂತೆ ಅವರು ಕರ್ತನ ಮನೆಯಲ್ಲಿ ಸ್ತಂಭಗಳಾಗಿರುತ್ತಾರೆ ಮತ್ತು ಎಲ್ಲಾ ಜನರಿಗೆ ಈ ಕೃಪೆಯ ಮತ್ತು ಸತ್ಯದ ಸೇವಕರಾಗಿರುತ್ತಾರೆ. ಈ ವಾಕ್ಯವು ಸಾವಿರ ವರ್ಷ ಯುಗದಲ್ಲಿ ಲೋಕದ ಜನರಿಗೂ ಅನ್ವಯಿಸುತ್ತದೆ. ಕರ್ತನನ್ನು ಆರಾಧಿಸಲು, ಆತ್ಮೀಕ ಆಲಯವನ್ನು ಅಂದರೆ ಕ್ರಿಸ್ತನನ್ನು ಸಮೀಪಿಸಲು ಮತ್ತು ಕ್ರಿಸ್ತನ ಮೂಲಕ ತಂದೆಯನ್ನು ಸಮೀಪಿಸಲು ಎಲ್ಲಾ ಮಾನವ ಕುಲವನ್ನು ಆಹ್ವಾನಿಸಲಾಗುತ್ತದೆ; ಮತ್ತು ಆ ಸಂದೇಶವನ್ನು ಕೇಳುವ ಮತ್ತು ಅದನ್ನು ಪಾಲಿಸುವವರೆಲ್ಲರೂ ನಿಜವಾಗಿಯೂ ಸಂತೋಷಪಡುತ್ತಾರೆ, ಯೇಸುವಿನ ಜನನದ ಸಮಯದಲ್ಲಿ ದೇವದೂತರು ತಂದ ಸಂದೇಶವು ತಿಳಿಸಿದ್ದೇನೆಂದರೆ ಅಂತಿಮವಾಗಿ ಅದು ಎಲ್ಲಾ ಜನರಿಗೂ ಮಹಾ ಸಂತೋಷದ ಶುಭ ಸಂದೇಶವಾಗಿರುತ್ತದೆ. **R 3284 : 4**

## 28 ನೇ

**"ಕರ್ತನನ್ನು ತನ್ನ ಭರವಸವಾಗಿ ಮಾಡಿಕೊಂಡಿರುವ ಮನುಷ್ಯನು ಧನ್ಯನು." (ಕೀರ್ತನೆಗಳು 40 : 4)**

ನಾವು ಕರ್ತನ ಜನರಾಗಲು ಈ ಲೋಕವನ್ನು ತೊರೆದರೆ ಮತ್ತು ಆತನಲ್ಲಿ ಸರಿಯಾದ ನಂಬಿಕೆಯೊಂದಿಗೆ ಅನುಭವದ ಪಾಠಗಳನ್ನು ಸ್ವೀಕರಿಸಿದರೆ, ಅದರ ಫಲಿತಾಂಶವು ಖಂಡಿತವಾಗಿಯೂ ಪೂರ್ಣ ಪ್ರತಿಷ್ಠೆ ಮಾಡಲು ಸಿದ್ಧತೆ ಮತ್ತು ತ್ವರಿತತೆಯನ್ನುಂಟುಮಾಡುತ್ತದೆ, ನಮ್ಮ ಸಂಪೂರ್ಣ ಅಧೀನತೆಯು ಕರ್ತನ ಚಿತ್ತವನ್ನು ನೆರವೇರಿಸಲು ಅನುವು ಮಾಡುತ್ತದೆ; ಆತನ ಮಾರ್ಗದರ್ಶನಗಳನ್ನು ಅನುಸರಿಸಲು; ಆತನು ನಮಗಾಗಿ ಏನನ್ನು ಇಟ್ಟಿದ್ದರೂ ಅದನ್ನು ಸ್ವಾಸ್ಥ್ಯವಾಗಿ ಪಡೆಯಲು ಸಾಧ್ಯವಾಗುತ್ತದೆ. ಮತ್ತು ನಂಬಿಕೆಯು ಸರಿಯಾದ ರೀತಿಯದ್ದಾಗಿದ್ದರೆ ನಾವು [ದಾವೀದ] ಪ್ರವಾದಿಯೊಂದಿಗೆ ಹೀಗೆ ಹೇಳುತ್ತೇವೆ, "ನಾನು ಯಾವ ಕೇಡಿಗೂ ಹೆದರೆನು; ಯಾಕಂದರೆ ನೀನು ನನ್ನ ಸಂಗಡ ಇದ್ದೀ; ನಿನ್ನ ಕೋಲೂ ದೊಣ್ಣೆಯೂ ನನ್ನನ್ನು ಆದರಿಸುತ್ತದೆ." ಈಗಿನ ಸುವಾರ್ತೆ ಯುಗದಲ್ಲಿ ಅಂಥವರು ಮಾತ್ರ ಕರ್ತನಿಂದ ನಡೆಸಲ್ಪಡುವರು, ಇದರಲ್ಲಿ ನಾವು ನೋಡಿ ನಡೆಯದೆ, ನಂಬಿ ನಡೆಯಬೇಕು. ಅಂಥವರು ಮಾತ್ರ ಪ್ರಸ್ತುತ ಸಮಯದಲ್ಲಿ ಒಳಗೆ ಮತ್ತು ಹೊರಗೆ ವಿವಿಧ ವಿರೋಧಗಳನ್ನು ಎದುರಿಸುವ ವಿಶ್ವಾಸವನ್ನು ಹೊಂದಿರುತ್ತಾರೆ. ಅಂಥವರು ಅಂತಿಮವಾಗಿ ಸಾವಿರ ವರ್ಷದ ಯುಗದಲ್ಲಿ ಲೋಕವನ್ನು ಆಶೀರ್ವದಿಸುವಲ್ಲಿ ದೇವರ ಪ್ರತಿನಿಧಿಗಳು ಮತ್ತು ನಾಯಕರಾಗಿರುತ್ತಾರೆ. ನಂಬಿಕೆಯ, ವಿಶ್ವಾಸದ ಪಾಠವನ್ನು ನಾವು ಚೆನ್ನಾಗಿ ಕಲಿಯೋಣ, ಏಕೆಂದರೆ ಈ ಗುಣದ ಬಗ್ಗೆ ದೇವರು ತನ್ನ ಮೆಚ್ಚುಗೆಯನ್ನು ನಮಗೆ ತಿಳಿಸುತ್ತಾನೆ ಮತ್ತು ನಾವು ಎಷ್ಟರ ಮಟ್ಟಿಗೆ ನಂಬಿಕೆಯನ್ನು ಹೊಂದಿರುತ್ತೇವೋ ಅಷ್ಟರ ಮಟ್ಟಿಗೆ ಮಾತ್ರ ಆತನು ನಮ್ಮೊಂದಿಗೆ ವ್ಯವಹರಿಸುತ್ತಾನೆ, ಆದ್ದರಿಂದ ನಮ್ಮ ಸ್ವಂತ ಅನುಭವಗಳಲ್ಲಿ ನಾವು ನೊಡುವುದೇನೆಂದರೆ ನಮ್ಮೊಂದಿಗೆ ವಿಶ್ವಾಸದಲ್ಲಿ ನೆಲೆಸಿರುವವರಿಗೆ ನಾವು ಅತ್ಯಧಿಕವಾದ ಪ್ರೀತಿಯಿಂದ ಅವರಿಗೆ ಸಹಾಯ ಮಾಡಿ ಪ್ರೋತ್ಸಾಹಿಸುತ್ತೇವೆ. **R 3064 : 6**

## 29 ನೇ

**"ಪಾಪವು ಹೆಚ್ಚಾದಾಗೆಲ್ಲಾ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು." (ರೋಮಾಪುರದವರಿಗೆ 5 : 20)**

ಈ ಮೇಲಿನ ವಾಕ್ಯವು ನಮ್ಮ ಎಲ್ಲಾ ನಿರೀಕ್ಷೆಗಳಿಗೆ ಮೂಲ ಕಾರಣವಾಗಿದೆ. ಪಾಪವು ನಮ್ಮ ಮೊದಲ ತಂದೆ ತಾಯಿಯಾದ ಆದಾಮ ಮತ್ತು ಹವ್ವಳ ವಿರುದ್ಧ ಮಾತ್ರವಲ್ಲ, ಅವರ ಎಲ್ಲಾ ಸಂತತಿಯವರ ವಿರುದ್ಧವೂ ಪಾಪವು ಹೆಚ್ಚಾಗುತ್ತಾ ಮರಣದಂಡನೆಗೆ ಗುರಿಯಾಯಿತು. ಆದರೆ ಎಲ್ಲರಿಗೂ ದೇವರ ಕೃಪೆಯು ಇನ್ನೂ ಹೆಚ್ಚಾಗುತ್ತಾ ಬಂದಿತು, ಅಂದರೆ ಕ್ರಿಸ್ತನ ಮೂಲಕ ಒದಗಿರುವ (ಈಡುಬಲಿಯ ಮೂಲಕ) ಪಾಪ ಮತ್ತು ಮರಣದ ದಂಡನೆಯಿಂದ (ನಿತ್ಯಜೀವವನ್ನು) ಮನುಕುಲವು ಮರಳಿ ಪಡೆಯುವುದು ಮಾತ್ರವಲ್ಲದೆ, ಮರುಸ್ಥಾಪನೆ ಮತ್ತು ಪರಿಪೂರ್ಣ ಹೊಂದಿದ ಮನುಕುಲವು, ತಾನು ಏದೆನಿನಲ್ಲಿ ಕಳೆದುಕೊಂಡಿದ್ದೆಲ್ಲವನ್ನೂ ಪೂರ್ತಿಯಾಗಿ ಹಾಗೂ ಸಂಪೂರ್ಣವಾಗಿ ಮತ್ತು ನಿತ್ಯವಾಗಿ ಮರಳಿ ಪಡೆದುಕೊಳ್ಳುವರು. ಇದಲ್ಲದೆ ಪಾಪಿಗಳ ಲೋಕದಿಂದ ಚಿಕ್ಕ ಹಿಂಡನ್ನು ದೇವರ ಬಾಧ್ಯಸ್ಥರಾಗಿ ಮತ್ತು ಯೇಸು ಕ್ರಿಸ್ತನ ಸಹ–ಬಾಧ್ಯಸ್ಥರನ್ನಾಗಿ ಮಾಡಲು ದೇವರ ಕೃಪೆಯು ಇನ್ನೂ ಹೆಚ್ಚಾಯಿತು, ಅವರ ಸ್ವಭಾವವು ಬದಲಾಗಬೇಕು, ಆದ್ದರಿಂದ ಅವರು ಇನ್ನೂ ಮನುಷ್ಯ ಸ್ವಭಾವದವರಾಗಿರದೆ, ದೈವಿಕ ಸ್ವಭಾವದಲ್ಲಿ ಭಾಗಿಗಳಾಗುವರು. ದೇವದೂತರು, ಪ್ರಭುತ್ವಗಳು ಮತ್ತು ಅಧಿಕಾರಿಗಳು ಮತ್ತು ಹೆಸರಿಡಲಾದ ಪ್ರತಿಯೊಂದು ನಾಮಕ್ಕೂ ಮೇಲಾದ ನಾಮ ಹೊಂದಿದ ಅವರ ಕರ್ತನಾದ ಕ್ರಿಸ್ತನೊಂದಿಗೆ ದೈವಿಕ ಮಹಿಮೆ, ಗೌರವ[ಘನತೆ] ಮತ್ತು ಕೆಲಸಗಳಲ್ಲಿ ಭಾಗಿಗಳಾಗುವರು. ಓಹ್, ನಾವು ಪಾಪಿಗಳಾಗಿದ್ದಾಗಲೂ ಸಹ ಎಂತಹ ಪ್ರೀತಿಯ–ದಯೆ ಮತ್ತು ಕೋಮಲ ಕರುಣೆಯು ನಮ್ಮ ಮೇಲೆ ಹೆಚ್ಚಾಯಿತು, ಮತ್ತು ಕ್ರಿಸ್ತನಲ್ಲಿ ನಮ್ಮ ಕಡೆಗೆ ಇನ್ನೂ ಹೆಚ್ಚಾಯಿತು, ಏಕೆಂದರೆ ಈಗ ನಾವು ಪ್ರಿಯ ಯೇಸುವಿನಲ್ಲಿ ಅಂಗೀಕರಿಸಲ್ಪಟ್ಟಿದ್ದೇವೆ–ಇದಕ್ಕಾಗಿ ಕರ್ತನ ಜನರು ನಿರಂತರವಾಗಿ ಕೃತಜ್ಞತೆ ಸಲ್ಲಿಸಲಿ ಮತ್ತು ಹೃದಯದ ಕೃತಜ್ಞತೆಯು ನಾವು ಮಾಡುವ ಮತ್ತು ಹೇಳುವ ಮಾತು ಮತ್ತು ನಡವಳಿಕೆಯಲ್ಲಿ ವಿಸ್ತಾರವಾಗಲಿ ಮತ್ತು ಪ್ರಕಟವಾಗಲಿ, ಇವೆಲ್ಲವೂ ನಮ್ಮನ್ನು ಅಂಧಕಾರದ ಕತ್ತಲೆಯಿಂದ ಆತನ ಆಶ್ಚರ್ಯಕರವಾದ ಬೆಳಕಿಗೆ ಕರೆದ ಆತನ ಮಹಿಮೆಗೆ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುವದಕ್ಕೆ ಕಾರಣವಾಗಲಿ. **R 2842 : 4**

## 30 ಮೇ

**"ಆದರೆ ಆತನು ಅಂದರೆ ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ಎಲ್ಲಾ ಸತ್ಯಕ್ಕೆ ನಡಿಸುವನು." ( ಯೋಹಾನನು 16 : 13 )**

ನಮ್ಮ ಕರ್ತನ ವಾಗ್ದಾನಕ್ಕೆ ಅನುಗುಣವಾಗಿ ಪ್ರತಿಷ್ಠಿತ ವರ್ಗದವರಿಗೆ ಮಾತ್ರ ಪವಿತ್ರಾತ್ಮವನ್ನು ಕಳುಹಿಸಲಾಯಿತು ಮತ್ತು ಇವರು ನಿಜವಾದ ಸಭೆಯ

ವರ್ಗವಾಗಿ, "ಕ್ರಿಸ್ತನ ಶರೀರ"ವಾಗಿ ನೆಲೆಯಾಗಿರಬೇಕು ಮತ್ತು ಅಂದಿನಿಂದ ನಮ್ಮ ಕರ್ತನು "ಆತನ ಶರೀರವಾಗಿರುವ ಸಭೆಗೆ ತಲೆ"ಯಾಗಿರುವಾತನೊಂದಿಗೆ ಐಕ್ಯತೆ ಮತ್ತು ಒಂದಾಗಿ ಸೇರಲು ಬಂದವರು ಪವಿತ್ರಾತ್ಮದ ಪ್ರಭಾವಕ್ಕೆ ಒಳಗಾಗಿದ್ದಾರೆ ಮತ್ತು ಇದು ನಮ್ಮ ಹಕ್ಕುಳ್ಳ ಪಾಲು ಮತ್ತು ಸವಲತ್ತು ಆಗಿದೆ. ಈ ಪವಿತ್ರಾತ್ಮದಿಂದ ನಾವು ಆತ್ಮೀಕ ಸ್ವಭಾವಕ್ಕೆ ಭ್ರೂಣಾಂಕುರ[ಆತ್ಮೀಕ ಗರ್ಭಧಾರಣೆ] ಹೊಂದಿದ್ದೇವೆ ಮತ್ತು "ಕ್ರಿಸ್ತನ ಶರೀರ"ಕ್ಕೆ ಸೇರಿದ ಅತ್ಯಂತ ಮಹತ್ವವುಳ್ಳ ಅಮೂಲ್ಯವಾದ ವಾಗ್ದಾನಗಳಿಗೆ ಬಾಧ್ಯಸ್ಥರಾಗುತ್ತೇವೆ. **R 2820 : 3**

## 31 ಮೇ

**"ನಾವಾದರೋ ಹಿಂದೆಗೆದವರಾಗಿ ನಾಶವಾಗುವವರಲ್ಲಿ ಅಲ್ಲ, ನಂಬುವವರಾಗಿ ಆತ್ಮ ರಕ್ಷಣೆಯನ್ನು ಹೊಂದುವವರಾಗಿದ್ದೇವೆ." ( ಇಬ್ರಿಯರಿಗೆ 10 : 39 )**

ಕರ್ತನನ್ನು ಹಿಂಬಾಲಿಸಲು ಎಲ್ಲವನ್ನು ತ್ಯಜಿಸಿದ ಎಲ್ಲರಿಗೂ ನಮ್ಮ ಬುದ್ಧಿವಾದ ಏನೆಂದರೆ ನಾವು ಹಿಂತಿರುಗಿ ನೋಡುವಂತಿಲ್ಲ, ನಾವು ದೊಡ್ಡ ಸಂಧಾನವನ್ನು ಮಾಡಿದ್ದೇವೆ ಎಂದು ನಾವು ಎಣಿಸುತ್ತೇವೆ, ನಮ್ಮ ಕರ್ತನ ಸಹಯೋಗದೊಂದಿಗೆ ಆತನ ಅದ್ಭುತ ಕಾರ್ಯಗಳಲ್ಲಿ ಮತ್ತು ದೈವಿಕ ಅನುಮೋದನೆಯೊಂದಿಗೆ ನಾವು ಮಹತ್ತರವಾದ ಬಹುಮಾನವನ್ನು ಪಡೆಯುವ ಹಾದಿಯಲ್ಲಿದ್ದೇವೆ. ನಮ್ಮ ನಂಬಿಕೆಗೆ ಕಾರಣನಾದ ಯೇಸುವನ್ನು ನೋಡುತ್ತಾ ಆತನೇ ಅದರ ಮುಕ್ತಾಯಕ್ಕೆ ಕಾರಣನಾಗುವವರೆಗೂ, ನಮ್ಮ ಮುಂದೆ ಇರುವ ಓಟವನ್ನು ತಾಳ್ಮೆಯಿಂದ ಓಡುತ್ತಾ, ಪ್ರತಿಯೊಂದು ಭಾರವನ್ನು ಮತ್ತು ಪಾಪದಲ್ಲಿ ಸಿಕ್ಕಿಕೊಳ್ಳುವ ವಿಚಾರವನ್ನು ಬದಿಗಿಡಬೇಕು ಎಂದು ಆತನು ನಮ್ಮನ್ನು ಒತ್ತಾಯಿಸಿದಾಗ, ಇದು ಅಪೋಸ್ತಲನ ಆಲೋಚನೆಯಂತೆ ತೋರುತ್ತದೆ. ನಾವು ಸಾಧ್ಯವಾದಷ್ಟು ತ್ವರಿತವಾಗಿ ನಮ್ಮ ಕ್ರೈಸ್ತ ಅನುಭವದ ಆರಂಭದಲ್ಲೇ ಕುರಿಮರಿಯ ಹಿಂಬಾಲಕರಾಗಿ ನಮ್ಮ ಚಿತ್ತವನ್ನು ಒಪ್ಪಿಸುವ ವಿಷಯದಲ್ಲಿ ಒಂದೇ ಸಲ ಪರಿಹರಿಸೋಣ; ನಮ್ಮ ತಾತ್ಕಾಲಿಕ ವ್ಯವಹಾರಗಳು ಮತ್ತು ಹಿತಾಸಕ್ತಿಗಳನ್ನು ಅದೇ ರೀತಿ ಗೌರವಿಸುವ ಇತರರ ಸಮಂಜಸವಾದ ಬೇಡಿಕೆಗಳಿಗೆ ಅನುಗುಣವಾಗಿ ಸಾಧ್ಯವಾದಷ್ಟು ಬುದ್ಧಿವಂತಿಕೆಯಿಂದ ವ್ಯವಸ್ಥೆಗೊಳಿಸೋಣ ಮತ್ತು [ಇದರ] ನಂತರ ನಾವು ಓಟಪಂದ್ಯದ ಕೊನೆಯವರೆಗೆ ನಿಷ್ಠೆಯಿಂದ ಮುಂದುವರಿಯೋಣ. **R 3721 : 5**

## 1 ಜೂನ್

**"ನಿನ್ನ ಭಾರವನ್ನು ಕರ್ತನ ಮೇಲೆ ಹಾಕು; ಆತನು ನಿನಗೆ ಆಧಾರವಾಗಿರುವನು." ( ಕೀರ್ತನೆಗಳು 55 : 22 )**

ದೇವರ ಯಾವುದೇ ಸಂತನಿಗೆ ಇಕ್ಕಟ್ಟಾದ ಮಾರ್ಗದಲ್ಲಿ ಪ್ರಯಾಣ ಮಾಡುವಾಗ ಶೋಧನೆಗಳ ಅನುಭವಗಳಲ್ಲಿ ಕಣ್ಣೀರು ಉಂಟಾಗಬಹುದು ಆದರೆ ಗುಣುಗುಟ್ಟುವಿಕೆಗೆ ಯಾವುದೇ ಕ್ಷಮೆಯಿಲ್ಲ. ಅದಕ್ಕೆ ಬದಲಾಗಿ ಪ್ರತಿಯೊಬ್ಬನು ತನ್ನ ಬೋಧಕನೊಂದಿಗೆ (ಕ್ರಿಸ್ತನೊಂದಿಗೆ) ಹೀಗೆ ಹೇಳಬೇಕು, " ನನ್ನ ತಂದೆಯು ನನಗೆ ಕೊಟ್ಟ ಪಾತ್ರೆಯನ್ನು ನಾನು ಕುಡಿಯಬಾರದೋ?" ಯಾರು ಮೋಶೆಯಂತೆ ದೇವರ ಮೇಲೆ ಸರಿಯಾದ ನಂಬಿಕೆಯೊಂದಿಗೆ ಕಹಿ ಬುಗ್ಗೆಗಳನ್ನು ಸಮೀಪಿಸುತ್ತಾರೋ, ಅಂಥವರಿಗೆ ಕರ್ತನು ಅಮೂಲ್ಯವಾದ ವಾಗ್ದಾನಗಳನ್ನು ತಿಳಿಯಪಡಿಸುತ್ತಾನೆ, ಅದು "ಜೀವನದ ದುಃಖಗಳಿಂದ ಕಹಿಯನ್ನು ಕದಿಯುತ್ತದೆ [ತೆಗೆಯುತ್ತದೆ]" ಹೇಗೆ ಇಸ್ರಾಯೇಲ್ ಜನರು ಕಹಿಯಾದ ನೀರುಗಳ ಎಲಿಮ್ ಕಡೆಗೆ ಹಾಗೂ ಅದರ ವಿಶ್ರಾಂತಿ ಮತ್ತು ನೆರಳಿನ ಕಡೆಗೆ ನಡೆಸಲ್ಪಟ್ಟರೋ, ಹಾಗೆಯೇ ದೇವರ ಆತ್ಮೀಕ ಇಸ್ರಾಯೇಲ್ಯರು ಸಹಿಸಲಾರದಕ್ಕಿಂತ ಹೆಚ್ಚಿನ ಶೋಧನೆ ಮತ್ತು ಪರೀಕ್ಷೆಗಳಿಗೆ ಒಳಪಡುವದಿಲ್ಲ. **R 5278 : 6**

## 2 ಜೂನ್

**"ನೀವು ಕರ್ತನಿಗೆ ಅರ್ಪಿಸಬೇಕಾದ ಅರ್ಪಣೆ ಏನೆಂದರೆ ನಿತ್ಯ ದಹನಬಲಿಗಾಗಿ ಪ್ರತಿದಿನ ಮಚ್ಚೆಯಿಲ್ಲದ ಒಂದು ವರುಷದ ಎರಡು ಕುರಿಮರಿಗಳು. ಒಂದು ಕುರಿಮರಿಯನ್ನು ಉದಯದಲ್ಲಿಯೂ ಮತ್ತೊಂದನ್ನು ಸಾಯಂಕಾಲದಲ್ಲಿಯೂ ಅರ್ಪಿಸಬೇಕು." ( ಅರಣ್ಯಕಾಂಡ 28 : 3 , 4 )**

ನಮ್ಮ ಬಲಿಯು ಎಷ್ಟೇ ಕುಂಟದ್ದಾಗಿಯೂ ಮತ್ತು ಅಪೂರ್ಣವಾಗಿದ್ದರೂ ಅದನ್ನು ನಮ್ಮ ವಿಮೋಚಕನ ಬಲಿಯ ಪುಣ್ಯದ (ಅರ್ಹತೆಯ) ಮೂಲಕ ನಾವು ತಂದೆಗೆ ಅರ್ಪಿಸಿದರೆ ಅದು ಪವಿತ್ರವೆಂದು ಮತ್ತು ದೋಷರಹಿತವಾದದ್ದೆಂದು ಎಣಿಸಲ್ಪಡುತ್ತದೆ; ಮತ್ತು ಆತನ ಮೂಲಕ "ಪರಿಶುದ್ಧವೂ ಮತ್ತು ದೇವರಿಗೆ ಮೆಚ್ಚಿಕೆಯೂ ಆಗಿದ್ದರೆ [ರೋಮಾಪುರದವರಿಗೆ 12:1 ; 1ಪೇತ್ರನು 2:5] ಆ ಕಾಣಿಕೆಯು ಎಷ್ಟೇ ಚಿಕ್ಕದಾಗಿದ್ದರೂ, ಆ ಬಲಿಯ ಮೂಲಕ ಉಂಟಾಗುವ ಬಹುಮಾನವು ನಮ್ಮದಾಗುತ್ತದೆ, ಆದರೆ ಅದು ಉಚಿತ ಕಾಣಿಕೆಯಾಗಿ ಮತ್ತು ಸಂಪೂರ್ಣ ದಹನ ಬಲಿಯಾಗಿ ಅರ್ಪಿಸಬೇಕು; ಯಜ್ಞವೇದಿಯ ಮೇಲೆ ಬೆಂಕಿಯಲ್ಲಿ

ದಹನವಾಗುವಾಗ ಒಂದು ಸಣ್ಣ ತುಂಡೂ ಸಹ ಹಿಂದಕ್ಕೆ ತೆಗೆಯುವಂತಿಲ್ಲ. ಮತ್ತು ಬೋಧಕನ [ಕ್ರಿಸ್ತನ] ಆತ್ಮವಿರುವ ಯಾರೇ ಆಗಲಿ ತಮಗಿರುವ ಎಲ್ಲಾದರಲ್ಲಿ, ಸ್ವಲ್ಪವನ್ನೂ ಹಿಂದಕ್ಕೆ ತೆಗೆಯುವಂತಿಲ್ಲ; ಅವರು ನಿಶ್ಚಯವಾಗಿಯೂ, ಅದಕ್ಕೆ ತದ್ವಿರುದ್ಧವಾಗಿ ಹೆಚ್ಚೆಂದರೆ ಆಭರಣಕ್ಕಾಗಿ, ಅತ್ಯಂತ ಬೆಲೆಯುಳ್ಳ ಮುತ್ತಿಗಾಗಿ ಕಸವನ್ನು ಅರ್ಪಿಸುತ್ತಿದ್ದಾರೆಂದು ಭಾವಿಸಲಾಗುತ್ತದೆ. **R 1133 : 1**

## 3 ಜೂನ್

**"ಪರಿಶುದ್ಧತೆಯನ್ನು ಅನುಸರಿಸಿರಿ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ." ( ಇಬ್ರಿಯರಿಗೆ 12:14 )**

ಪರಿಶುದ್ಧತೆ ಎಂದರೆ ನಮ್ಮ ಜೇಬಿನಲ್ಲಿ ತಾಯಿತವನ್ನು ಇಟ್ಟುಕೊಂಡಂತೆ ಅಲ್ಲ; ಅದು ಆಗಾಗ್ಗೆ ಬಟ್ಟೆಯನ್ನು ಧರಿಸಿಕೊಳ್ಳುವ ಹಾಗಲ್ಲ. ಪರಿಶುದ್ಧತೆಯು ಲೋಹದ ತುಂಡನ್ನು ಕಾಯಿಸುವದಕ್ಕೆ ಹೆಚ್ಚು ಹೋಲುತ್ತದೆ; ಅದು ಸಂಪೂರ್ಣ ನಾರಿನೊಳಗೆ ಪ್ರವೇಶಿಸಿ, ಅದರ ಸಾಮಾನ್ಯ ಗುಣಲಕ್ಷಣಗಳನ್ನು ಬದಲಾಯಿಸುತ್ತದೆ; ಅದು ತನ್ನ ಪ್ರಭಾವದಲ್ಲಿ ರೂಪಾಂತರಗೊಳಿಸುತ್ತದೆ. ನಿಜ, ಕ್ರಿಸ್ತನ ನೀತಿಯ ವಸ್ತ್ರವು ಕರ್ತನ ಜನರಲ್ಲಿ ಪರಿಶುದ್ಧವೆಂದು ಎಣಿಸಲ್ಪಡುತ್ತದೆ, ನಾವು ಮೊದಲು ಪಾಪದಿಂದ ಮನ ತಿರುಗಿದಾಗ, ವಿಮೋಚಕನನ್ನು ಅಂಗೀಕರಿಸಿ ನಮ್ಮನ್ನು ದೇವರಿಗೆ ಪ್ರತಿಷ್ಠೆಪಡಿಸಿದಾಗ ಕ್ರಿಸ್ತನ ನೀತಿಯ ವಸ್ತ್ರವು ನಮಗೆ ಕೊಡಲ್ಪಡುತ್ತದೆ. ಆದರೆ ಇಷ್ಟು ಮಾತ್ರ ಸಾಲದು. ನಾವು ಚಿತ್ತಗೊಂಡಿರುವ ನಮ್ಮ ಗುಣಲಕ್ಷಣಗಳಿಗಾಗಿ ಪ್ರಯಾಸ ಪಡಬೇಕು—ಅಥವಾ ಅಪೋಸ್ತಲನು ವ್ಯಕ್ತಪಡಿಸುವಂತೆ ನಮ್ಮಲ್ಲಿ ಕರ್ತನು ತನ್ನ ಪರಿಶುದ್ಧ ಚಿತ್ತವನ್ನು ನಡೆಸಲು ನಾವು ಅನುಮತಿಸಬೇಕು ಮತ್ತು ಪರಿಶುದ್ಧ ಚಿತ್ತದೊಂದಿಗೆ ಅವಕಾಶಗಳು ಮತ್ತು ಪರಿಸ್ಥಿತಿಗಳು ಅನುಮತಿಸುವಾಗ ಪರಿಶುದ್ಧ ನಡತೆಯೂ ಜೊತೆಗೂಡಬೇಕು. **R 5739 : 3**

## 4 ಜೂನ್

**"ನೀವು ಆತನನ್ನು ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ; ನೀವು ಈಗ ಆತನನ್ನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ಹೇಳಲಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ." ( 1 ಪೇತ್ರನು 1 : 8 )**

ಅನೇಕರು ಕ್ರಿಸ್ತನ ನಾಮವನ್ನು ಧರಿಸಿಕೊಂಡವರಾಗಿ ಭವಿಷ್ಯದ ಬಗ್ಗೆ ದೇವರಲ್ಲಿ ನಿರೀಕ್ಷೆಯುಳ್ಳವರಾಗಿದ್ದಾರೆ, ಆದರೆ ಸ್ವಲ್ಪ ಮಟ್ಟಿಗೆ ಮಾತ್ರ ಈಗಿನ [ಪ್ರಸ್ತುತ] ಸಮಯದ ಆತನ ರಕ್ಷಣೆಯ ಸಂತೋಷವನ್ನು ಹೊಂದಿದವರಾಗಿದ್ದಾರೆ. ಅಂಥವರು ತಮ್ಮ ಸವಲತ್ತುಗಳಿಗೆ ಅನುಗುಣವಾಗಿ ಜೀವಿಸುತ್ತಿಲ್ಲ. ಅವರು ತಮ್ಮ ಜೀವವುಳ್ಳ ತಲೆಯಾದ ಕ್ರಿಸ್ತನಲ್ಲಿ ಸರಿಯಾಗಿ ಬೆಳೆದಿಲ್ಲ. ಅವರು ತಮ್ಮ ನಂಬಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ನಂಬಿಕೆಯೊಂದಿಗೆ ಸದ್ಗುಣವನ್ನೂ, ಜ್ಞಾನವನ್ನೂ, ದಮೆಯನ್ನೂ, ತಾಳ್ಮೆಯನ್ನೂ, ಭಕ್ತಿಯನ್ನೂ, ಸಹೋದರ ಕರುಣೆಯನ್ನೂ ಮತ್ತು ಪ್ರೀತಿಯನ್ನೂ ಕೂಡಿಸಬೇಕು. ಆದ್ದರಿಂದ ಅವರು ಕ್ರಿಸ್ತನ ಶಾಲೆಯ ನಿಯಮಗಳನ್ನು ಅನುಸರಿಸುವಾಗ, ದೇವರು ಅವರ ಪಾದಗಳನ್ನು ಪಾಪ ಮತ್ತು ಮರಣವೆಂಬ ಭಯಂಕರವಾದ ಹಳ್ಳದಿಂದ ಎತ್ತಿ, ಕ್ರಿಸ್ತ ಯೇಸು ಎಂಬ ಬಂಡೆಯ ಮೇಲೆ ನಿಲ್ಲಿಸಿದ್ದಾನೆ ಎಂದು ಅತ್ಯಧಿಕವಾಗಿ ಹೇಳುವದು ಮಾತ್ರವಲ್ಲದೆ, "ಆತನು ನನ್ನ ಬಾಯಲ್ಲಿ ನೂತನ ಹಾಡನ್ನು ಇಟ್ಟಿದ್ದಾನೆ; ಅದು ನಮ್ಮ ದೇವರ ಸ್ತೋತ್ರವೇ [ಪ್ರೀತಿಯುಳ್ಳ ದಯೆ]" ಎಂದೂ ಸಹ ಹೇಳುವರು. **R 3496 : 5**

## 5 ಜೂನ್

**"ಆಗ ನನ್ನ ಜನರು ಸಮಾಧಾನದ ನಿವಾಸಗಳಲ್ಲಿಯೂ ಭದ್ರವಾದ ಸ್ಥಾನಗಳಲ್ಲಿಯೂ ನೆಮ್ಮದಿಯ ಆಶ್ರಯಗಳಲ್ಲಿಯೂ ನೆಲೆಗೊಳ್ಳುವರು." (ಯೆಶಾಯ 32:18)**

ನಾವು ಕರ್ತನಿಗೆ ಎಷ್ಟು ಹತ್ತಿರವಾಗಿ ಜೀವಿಸುತ್ತೇವೋ ಮತ್ತು ನಮ್ಮ ನಂಬಿಕೆ ಎಷ್ಟು ಹೆಚ್ಚಾಗಿದೆಯೋ, ಅಷ್ಟೇ ಅಧಿಕವಾಗಿ ದೈವಿಕ ಮಾರ್ಗವು ನಮಗೆ ಮನವರಿಕೆಯಾಗುತ್ತದೆ ಮತ್ತು ಅಷ್ಟೇ ಅಧಿಕವಾಗಿ ನಮ್ಮನ್ನು ಬಲಪಡಿಸಲು ಮತ್ತು ಎತ್ತಿಹಿಡಿಯಲು ಆತನು ನಮಗೆ ಒದಗಿಸಿರುವ ಸಾಧನಗಳನ್ನು ನಾವು ಉಪಯೋಗಿಸುತ್ತೇವೆ. ನಾವು ಆಪತ್ತಿನ ಕಾಲದಲ್ಲಿ ಆತನಿಗೆ ಮೊರೆಯಿಡಬಹುದು; ಪ್ರಾರ್ಥನೆ ಮೂಲಕ ಆತನ ಬಳಿಗೆ ಹೋಗಬಹುದು; ಮತ್ತು ಆತನ ಮೇಲೆ ನಂಬಿಕೆಯಿಟ್ಟು, ಆತನು ನೇಮಿಸಿರುವ ದಾರಿಯಲ್ಲಿ ನಡೆಯಲು ಅತ್ಯಾಸಕ್ತಿಯಿಂದ ಹುಡುಕುವಾಗ ಆತನು ನಮ್ಮನ್ನು ಎಂದಿಗೂ ಕೈಬಿಡುವದಿಲ್ಲ. ಇದು ಸತ್ಯವಾಗಿರುವುದರಿಂದ, ನಾವು ನಮ್ಮ ಪ್ರಯಾಣದಲ್ಲಿ ಪರಿಪೂರ್ಣ ನಂಬಿಕೆಯಿಂದ ಮತ್ತು ವಿಶ್ವಾಸದಿಂದ ಮುಂದೆ ಹೋಗಬಹುದು. ನಾವು ನಮ್ಮೆಲ್ಲವನ್ನೂ ಕರ್ತನಿಗೆ ಪ್ರತಿಷ್ಠೆಪಡಿಸಿರುವುದರಿಂದ, ಆತನ ಮಾರ್ಗದರ್ಶನವನ್ನು ನಾವು ಹುಡುಕಬೇಕು. ಏಕೆಂದರೆ ಆತನ ಪ್ರಸನ್ನತೆಯು ನಮ್ಮ ಜೀವಿತದ ಎಲ್ಲಾ ವಿಷಯಗಳಲ್ಲಿಯೂ ಇರುವದು. **R 5548 : 3**

## 6 ಜೂನ್

**“ಕರ್ತನನ್ನು ಸ್ತುತಿಸಿರಿ. ಕರ್ತನಿಗೆ ಹೊಸ ಹಾಡನ್ನೂ ಪರಿಶುದ್ಧರ ಸಭೆಯಲ್ಲಿ ಆತನ ಸ್ತೋತ್ರವನ್ನೂ ಹಾಡಿರಿ. ಉನ್ನತ ದೇವರ ಸ್ತೋತ್ರಗಳು ಅವರ ಬಾಯಿಯಲ್ಲಿಯೂ ಇರಲಿ.” ( ಕೀರ್ತನೆಗಳು 149:1, 6 )**

ಪರಿಶುದ್ಧರು ಹಿಂದೆಂದಿಗಿಂತಲೂ ಹೆಚ್ಚು ಬುದ್ಧಿವಂತಿಕೆಯಿಂದಲೂ ಮತ್ತು ಸಂಪೂರ್ಣವಾಗಿ ದೇವರನ್ನು ಸ್ತುತಿಸಬಹುದು. ನಮ್ಮ ಕರ್ತನ ಗುಣಲಕ್ಷಣವನ್ನು ಇನ್ನೂ ಉತ್ತಮವಾಗಿ ನೋಡಬಹುದು, ಏಕೆಂದರೆ ಅಧಿಕವಾದ ಅಜ್ಞಾನ, ತಪ್ಪು ಕಲ್ಪನೆ, ರಹಸ್ಯಗಳು ಮತ್ತು ಅಸ್ಪಷ್ಟತೆಗಳು ಓಡಿಹೋಗಿವೆ. ದೇವರ ವಾಕ್ಯವು ಹಿಂದೆಂದಿಗಿಂತಲೂ ಹೆಚ್ಚು ಪ್ರಕಾಶಮಾನವಾಗಿ ಹೊಳೆಯುತ್ತಿದೆ. ನಮ್ಮ ಸಹೋದರ ಜಾನ್‌ಕ್ಯಾಲ್ವಿನ್ ತನ್ನ ಬಾಯಿಯಲ್ಲಿ ದೇವರ ಸ್ತುತಿಗೀತೆಗಳನ್ನು ಹೆಚ್ಚು ಹೊಂದಿರಬಹುದೆಂದು ನಾವು ಹೇಳಲಾಗುವುದಿಲ್ಲ. ಏಕೆಂದರೆ ನಮ್ಮ ದೇವರು ಕೋಟ್ಯಾಂತರ ಮನುಷ್ಯರನ್ನು ನರಕದಲ್ಲಿ ಶಾಶ್ವತವಾಗಿ ಚಿತ್ರಹಿಂಸೆ ನೀಡುತ್ತಾನೆ ಎಂದು ಘೋಷಿಸುವುದು ಖಂಡಿತವಾಗಿಯೂ ಹೆಚ್ಚಿನ ಸ್ತುತಿಗೀತೆಗಳಾಗುವದಿಲ್ಲ. ಇಂತಹ ಭಯಾನಕ ಸಿದ್ಧಾಂತವನ್ನು ಕಲಿಸುವ ಜನರ ಬಗ್ಗೆ ಅವರ ಬಾಯಲ್ಲಿ ದೇವರ ಸ್ತುತಿಗೀತೆಗಳಿವೆ ಎಂದು ಹೇಳಲಾಗುವುದಿಲ್ಲ.... ಅಂತಹ ನಂಬಿಕೆಗಳೊಂದಿಗೆ ಮತ್ತು ಬೋಧನೆಗಳೊಂದಿಗೆ ಯಾವುದೇ ಹೆಚ್ಚಿನ ಸ್ತುತಿಗೀತೆಗಳು ಇಲ್ಲ. ಆದರೆ ಆತನ ಮಾತುಗಳಿಗೆ ಅನುಗುಣವಾಗಿ ನಡೆದು ಆತನಿಗೆ ಹತ್ತಿರವಿರುವ ಕರ್ತನ ಜನರು ಹಿಂದೆಂದಿಗಿಂತಲೂ ಈಗ ದೇವರ ಪ್ರೀತಿ, ಜ್ಞಾನ, ನೀತಿ ಮತ್ತು ಶಕ್ತಿಯ ಅದ್ಭುತ ಕಥೆಯನ್ನು(ವಿಚಾರವನ್ನು) ಹೇಳಲು ಸಮರ್ಥರಾಗಿದ್ದಾರೆ. **R 5804 : 4**

## 7 ಜೂನ್

**“ಆದರೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಹೇಗೆ ಮೋಸ ಹೋದಳೋ ಹಾಗೆಯೇ ನಿಮ್ಮ ಮನಸ್ಸುಗಳು ಕ್ರಿಸ್ತನ ವಿಷಯದಲ್ಲಿರಬೇಕಾದ ಸರಳತೆಯನ್ನು ಬಿಟ್ಟು ಕೆಟ್ಟು ಹೋದೀತೆಂದು ನನಗೆ ಭಯವುಂಟು.” ( 2 ಕೊರಿಂಥದವರಿಗೆ 11 : 3 )**

ಕರ್ತನ ಜನರು ಸಂತೋಷದಾಯಕ ಜೀವನವನ್ನು ನಡೆಸಲು ಶ್ರಮಿಸುತ್ತಿರುವದು ಒಳ್ಳೆಯದು, ಎಲ್ಲಾ ವಿಷಯಗಳಲ್ಲಿ ಯಾವಾಗಲೂ ತಂದೆಗೆ

ಧನ್ಯವಾದಗಳನ್ನು ಸಲ್ಲಿಸಬೇಕು, ಮತ್ತು ಕ್ರಿಸ್ತನ ನಿಮಿತ್ತ ಅವಮಾನವನ್ನು ಅನುಭವಿಸುವದು ಸಂತೋಷದಾಯಕವೆಂದು ಎಣಿಸಬೇಕು. ಆದರೆ ಅಪೋಸ್ತಲನು ಬೇರೆಡೆ ಹೇಳುವಂತೆ, ನಾವು ಭಯದೊಂದಿಗೆ ಸಂತೋಷಪಡೋಣ; ನಮ್ಮ ಸಂತೋಷದಾಯಕವು ಅಜಾಗರೂಕತೆಯ, ಸ್ವಯಂ ತೃಪ್ತಿಕರವಾದ ರೀತಿಯದ್ದಾಗಿರಬಾರದು. ಏಕೆಂದರೆ ಅದು ನಮ್ಮನ್ನು ಸಿಲುಕಿಸಬಹುದು ಮತ್ತು ಅದು ನಮಗೆ ಉರುಳಾಗಬಹುದು. ನಮ್ಮ ಸಂತೋಷವು ನಮ್ಮನ್ನು ಪ್ರೀತಿಸಿ, ನಮ್ಮನ್ನು ಕೊಂಡುಕೊಂಡಾತನಲ್ಲಿ ಇರಲಿ, ನಮ್ಮೊಂದಿಗೆ ಯಾವಾಗಲೂ ಇರುವ, ನಮ್ಮ ಉತ್ತಮ ಸ್ನೇಹಿತ ಮತ್ತು ನಿಜವಾದ ಮಾರ್ಗದರ್ಶಿಯ ಮೇಲಿರಲಿ. ನಮ್ಮ ಸಂತೋಷವು ನಮ್ಮ ಸ್ವಂತ ಬಲ, ಧೈರ್ಯ ಮತ್ತು ಜ್ಞಾನದ ಮೇಲೆ ನಮ್ಮ ಭಾವನೆಗಳು ಇರದೆ, ನಮಗೆ ರಕ್ಷಕನೂ ಮತ್ತು ದೊಡ್ಡವನೂ ಇದ್ದಾನೆಂದೂ, ತನ್ನ (ಯೇಸು) ಮೂಲಕ ತಂದೆಯ ಬಳಿಗೆ ಬರುವ ಎಲ್ಲರನ್ನೂ ಕಾಪಾಡಲು ಶಕ್ತನಾಗಿದ್ದಾನೆಂಬ ಭಾವನೆ ಇರಲಿ. ಆದ್ದರಿಂದ ಕರ್ತನು ನಮ್ಮ ಬಲವೂ, ನಮ್ಮ ನಂಬಿಕೆಯೂ, ನಮ್ಮ ಖೇಡ್ಯವೂ, ನಮ್ಮ ಗುರಾಣಿಯೂ ಆಗಿರಲಿ. **R 3886 : 3**

## 8 ಜೂನ್

**"ಒಬ್ಬನು ತನ್ನ ಸ್ನೇಹಿತರಿಗೋಸ್ಕರ ತನ್ನ ಪ್ರಾಣವನ್ನು ಕೊಡುವ ಪ್ರೀತಿಗಿಂತ ಹೆಚ್ಚಿನದು ಯಾವುದೂ ಇಲ್ಲ." ( ಯೋಹಾನನು 15 : 13 )**

ಕ್ರಿಸ್ತನ ಶರೀರದ ಯಾವುದೇ ಅಂಗಗಳಿಗೆ ಅಂದರೆ ಪ್ರತಿಷ್ಠೆ ಮಾಡಿದ ವಿಶ್ವಾಸಿಗೆ, ನಾವು ಏನೇ ಮಾಡಿದರೂ, ಕರ್ತನು ಅದು ತನಗೇ ಮಾಡಿದನೆಂದು ಎಣಿಸಿ ಆತನನ್ನು ಗೌರವಿಸುತ್ತಾನೆ. ಆದ್ದರಿಂದ ಅದು ನಮ್ಮ ಕರ್ತವ್ಯ ಮತ್ತು ನಮ್ಮ ಸವಲತ್ತು ಆಗಿರುವದರಿಂದ ಅದು ಕರ್ತನ ಸೇವೆಯಲ್ಲಿ ನಮ್ಮ ಜೀವವನ್ನೇ ಮುಡುಪಾಗಿಡುವದು ನಮಗೆ ಸಂತೋಷದಾಯಕವಾಗಿದೆ. ನಾವು ಸಹೋದರರಿಗೋಸ್ಕರ ಅಂತಹ ಪ್ರೀತಿಯನ್ನು ಹೊಂದಬೇಕಾಗಿದೆ. ಏಕೆಂದರೆ ಅವರೆಲ್ಲರೂ ಆತನವರು. ಕರ್ತನು ಮತ್ತು ಆತನ ನಿಮಿತ್ತವಾಗಿ ನಮ್ಮ ನಿಷ್ಠೆಯನ್ನು ಪ್ರದರ್ಶಿಸುವ ಸಾಧನವಾಗಿ, ಅವರಿಗಾಗಿ ನಮ್ಮ ಜೀವವನ್ನು ಬಲಿಯಾಗಿ ಸಲ್ಲಿಸಲು ನಾವು ಸಂತೋಷಪಡುತ್ತೇವೆ. ದೈಹಿಕ ಸೇವೆಗಳು ಮತ್ತು ಸಹೋದರರ ಸೇವೆಗಳಲ್ಲಿ ನಮ್ಮ ದೈಹಿಕ ಶಕ್ತಿ, ಆರೋಗ್ಯ ಮತ್ತು ಜೀವವನ್ನು ಸಹೋದರರಿಗಾಗಿ ಬಲಿಯಾಗಿ ಅರ್ಪಿಸುವದು ಎಂದರ್ಥವಲ್ಲ, ಇವುಗಳು ಅನೇಕ ಸಂದರ್ಭಗಳಲ್ಲಿ ಲಾಭದಾಯಕವಾಗಿರಬಹುದು. ಕರ್ತನ ಶಿಷ್ಯರು ಶರೀರ ಪ್ರಕಾರವಾಗಿ

ಸಹೋದರರಲ್ಲ, ಆದರೆ ಆತ್ಮೀಕವಾಗಿ ಸಹೋದರರಾಗಿದ್ದಾರೆ. ಆದ್ದರಿಂದ, ಸಹೋದರರಿಗಾಗಿ ನಮ್ಮ ಜೀವನವನ್ನು ಬಲಿಯಾಗಿ ಸಲ್ಲಿಸಬೇಕೆಂಬ ಆಜ್ಞೆಯು ಹೆಚ್ಚು ನಿರ್ಧಿಷ್ಟವಾಗಿ ಸೂಚಿಸುವದೇನೆಂದರೆ, ನಮ್ಮ ದೈಹಿಕ ಆರೋಗ್ಯ ಅಥವಾ ಶಕ್ತಿ, ಜ್ಞಾನ, ತಲಾಂತುಗಳು, ಮತ್ತು ಸಾಧನಗಳು ಕರ್ತನ ಜನರ ಆತ್ಮೀಕ ವಿಷಯದ ಆಸಕ್ತಿಯಿಂದ ನಮ್ಮ ಜೀವವನ್ನು ಬಲಿಯಾಗಿ ಸಲ್ಲಿಸುವುದಾಗಿದೆ. ಉದಾಹರಣೆಗೆ ಸತ್ಯವನ್ನು ಬೋಧಿಸುವಾಗ ಬಲಿಗಳು ಅಥವಾ ಸ್ವಂತ–ನಿರಾಕರಣೆ, ಶಕ್ತಿಯ ನಷ್ಟ ಇತರೆ., ಆತನ ಸೇವೆಯಲ್ಲಿ ಉಂಟಾಗಬಹುದು. ಹಾಗೆ ಮಾಡುವಾಗ ಅಷ್ಟರ ಮಟ್ಟಿಗೆ ಆತನ ಜೀವವನ್ನು ತನ್ನ ಸಹೋದರನಿಗಾಗಿ, ಕ್ರಿಸ್ತನ ಶರೀರದ ಅಂಗದವರಿಗಾಗಿ ಬಲಿಯಾಗಿ ಸಲ್ಲಿಸುವದಾಗಿದೆ. **R 3932 : 6**

## 9 ಜೂನ್

**"ಒಬ್ಬರಿಗೊಬ್ಬರು ಕರುಣೆಯುಳ್ಳವರಾಗಿದ್ದು ಸಹೋದರರಂತೆ ಪ್ರೀತಿಸಿರಿ; ಕಣಿಕರವೂ ದೀನ ಭಾವವೂ ಉಳ್ಳವರಾಗಿರಿ." ( 1 ಪೇತ್ರನು 3 : 8 )**

ನಾವು ಕ್ರಿಸ್ತನ ದೇಹದಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದ್ದೇವೆ ಎಂಬುದಕ್ಕೆ ನಿರ್ವಿವಾದದ(ವಾದವಿಲ್ಲದ) ಸಾಕ್ಷಿಯಾಗಿ ಸಹೋದರನ ಮೇಲಿನ ಪ್ರೀತಿಯನ್ನು ಕುರಿತು ಸತ್ಯವೇದದಲ್ಲಿ ತಿಳಿಸಲಾಗಿದೆ. ಈ ಪ್ರೀತಿಯು ವಿಭಿನ್ನ ಅಳತೆಯಲ್ಲಿರಬಹುದು. ಆದರೆ ನಾವು ಕರ್ತನವರಾಗಿದ್ದರೆ ಅದು ಸ್ವಲ್ಪ ಅಳತೆಲ್ಲಿಯಾದರು ನಮ್ಮಲ್ಲಿರಬೇಕು. ಏಕೆಂದರೆ "ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ." [ರೋಮಾಪುರದವರಿಗೆ 8 : 9] ಆದರೆ ಸಹೋದರನಿಗಾಗಿ ನಮ್ಮ ಹೃದಯದಲ್ಲಿ ಉರಿಯುತ್ತಿರುವ ಈ ಪವಿತ್ರ ಪ್ರೀತಿಯ ಜ್ವಾಲೆ ಸಾಕಾಗುವುದಿಲ್ಲ; ಅದು ನಮ್ಮಲ್ಲಿ ಪ್ರಜ್ವಲಿಸಬೇಕು, ಸುಡಬೇಕು ಮತ್ತು ಕೇವಲ ಪ್ರೀತಿಯ ಉಷ್ಣತೆಯು ಉತ್ಪತ್ತಿಯಾಗುವದು ಮಾತ್ರವಲ್ಲ, ಅದರೆ ಅದು ದಹಿಸುವ ಪ್ರೀತಿಯಾಗಿರಬೇಕು–ಈ ಪ್ರೀತಿಯು ಸಹೋದರತ್ವದ ವಿವಿಧ ಅಪೂರ್ಣತೆ, ಬಲಹೀನತೆಗಳನ್ನು ಕಡೆಗಣಿಸುವದು. ಆತನಲ್ಲಿರುವ ಪ್ರತಿಯೊಂದು ಒಳ್ಳೆಯ ಗುಣಗಳನ್ನು ಎಚ್ಚರಿಕೆಯಿಂದ ಗಮನಿಸುವದು ಮಾತ್ರವಲ್ಲ, ಆದರೆ ಆ ಪ್ರೀತಿಯು ತನ್ನ ಸಹೋದರನಿಗಾಗಿ ಪ್ರಾಣವನ್ನೇ ಬಲಿಯಾಗಿ ಅರ್ಪಿಸಲು ಸಿದ್ಧವಾಗಿರುತ್ತದೆ. ಏಕೆಂದರೆ ಅವರು ಪಾಪ ಮತ್ತು ಬಲಹೀನತೆಗಳ ವಿರುದ್ಧ ಎಷ್ಟೇ ಹೆಚ್ಚಾಗಿ ಹೋರಾಡುವವರಾದರೂ, ಅವರು ಕರ್ತನಲ್ಲಿ ಪ್ರತಿಷ್ಠೆ ಪಡಿಸಿಕೊಂಡಿರುವವರಾಗಿರುವರು. **R 3932 : 2**

## 10 ಜೂನ್

**"ಯಾವನಾದರೂ ಆತನ ಚಿತ್ತದಂತೆ ಮಾಡಿದರೆ ಈ ಬೋಧನೆಯು ದೇವರದೋ ಅಥವಾ ನನ್ನಷ್ಟಕ್ಕೆ ನಾನೇ ಹೇಳುತ್ತೇನೋ ಎಂಬದು ಅವನಿಗೆ ತಿಳಿಯುವದು." (ಯೋಹಾನನು 7 : 17 )**

ಸತ್ಯದ ಮೇಲೆ ಪ್ರೀತಿಯಿಲ್ಲದೆ ಯಾರಿಗೂ ಪ್ರಸ್ತುತ [ಈಗಿನ] ಸತ್ಯದ ಬೆಳಕನ್ನು ಹೊಂದುವ ದಯೆಯು ಉಂಟಾಗುವದಿಲ್ಲ ಎಂದು ನಾವು ನಂಬುತ್ತೇವೆ. ಇದಕ್ಕಿಂತಲೂ ಹೆಚ್ಚಾಗಿ, ಒಂದು ವೇಳೆ ಹೆಮ್ಮೆ, ಮಹತ್ವಾಕಾಂಕ್ಷೆ, ವ್ಯರ್ಥ ವೈಭವ [ವ್ಯರ್ಥ ಮಹಿಮೆ] ಅಥವಾ ಇನ್ನಾವುದೇ ವಿಷಯಗಳಿಗೋಸ್ಕರ, ಸತ್ಯಕ್ಕಾಗಿ ಇರುವ ಪ್ರಾಮಾಣಿಕವಾದ ಪ್ರೀತಿ–ಪ್ರಾಮಾಣಿಕವಾದ ಆಲೋಚನೆ ಮತ್ತು ಕ್ರಿಯೆಗಳನ್ನು ಬಲಿ ಸಲ್ಲಿಸಿದರೆ, ಇದರ ಫಲಿತಾಂಶವು ಪ್ರಸ್ತುತ(ಈಗಿನ) ಸತ್ಯವನ್ನು ನಷ್ಟಪಡಿಸಿಕೊಳ್ಳುವದಾಗಿದೆ. ಏಕೆಂದರೆ ಅಪೋಸ್ತಲರ ಮೂಲಕ ನಮ್ಮ ಕರ್ತನ ಸಂದೇಶವೇನೆಂದರೆ, ಈಗಿನ ಯುಗದ ಅಂತ್ಯದಲ್ಲಿ ಯಾರೆಲ್ಲಾ ಸುಳ್ಳನ್ನು ನಂಬಿ, ಅಸತ್ಯದಲ್ಲಿ ಸಂತೋಷಪಟ್ಟು–ಸತ್ಯವನ್ನು ಅದರ ಮೇಲಿರುವ ಪ್ರೀತಿಯಿಂದ ಹೊಂದಿಕೊಳ್ಳುವುದಿಲ್ಲವೋ ಅಂಥವರಿಗೆ ಕರ್ತನು ಬಲವಾದ ವಂಚನೆಯ ಆತ್ಮವನ್ನು ಕಳುಹಿಸುವನು ಎಂದು ನಾವು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಅದರ ವಿಕೃತತೆಯು ಖಂಡಿತವಾಗಿಯೂ ನಮಗೆ ಗಾಯವನ್ನು ಮಾಡುತ್ತದೆ ಮತ್ತು ನಾವು ಕರ್ತನಿಂದ ಅನ್ಯರಾಗಿ, ಆತನಿಗೆ ಸೇವೆಮಾಡುವ ವಿಚಾರದಲ್ಲಿ ನಾವು ಈಗ ಮತ್ತು ಮುಂದೆಂದೂ ನಿರಾಕರಿಸಲ್ಪಡುತ್ತೇವೆ ಎಂದು ಅರಿತುಕೊಂಡು ನಮ್ಮ ಆತ್ಮಸಾಕ್ಷಿಯನ್ನು ಕಾದುಕೊಳ್ಳೋಣ. **R 3847 : 5**

## 11 ಜೂನ್

**"ಇವುಗಳ ವಿಷಯವಾಗಿ ನೀವು ಸಾಕ್ಷಿಗಳಾಗಿದ್ದೀರಿ." (ಲೂಕನು 24 : 48)**

ನಮ್ಮ ವಿಮೋಚಕನು ಕನ್ಯೆಯಿಂದ ಜನಿಸಿದನು ಎಂದು ಅಪೋಸ್ತಲರು ಸಾಕ್ಷಿ ಹೇಳುವದು ಮಾತ್ರವಲ್ಲದೆ ಆತನ ಪರಿಶುದ್ಧತೆ, ದೇವಭಕ್ತಿಯ ಜೀವನವನ್ನು ಕುರಿತು ಮಾತ್ರವಲ್ಲದೆ, ನಮ್ಮ ಕರ್ತನ ಪುನರುತ್ಥಾನ, ಆತನು ಪರಲೋಕಕ್ಕೆ ಏರಿ ಹೋದದನ್ನು ಕುರಿತು ಸಾಕ್ಷಿ ಹೇಳುವದು ಮಾತ್ರವಲ್ಲದೆ, ಇವುಗಳೊಂದಿಗಿನ ನಿಜಾಂಶದ ಜೊತೆಗೆ, ಆತನು ಸರಿಯಾಗಿ ಅರ್ಹತೆ ಹೊಂದಿದ ವಿಮೋಚಕನು, ನ್ಯಾಯ ಪ್ರಮಾಣದ [ಧರ್ಮಶಾಸ್ತ್ರದ] ಎಲ್ಲಾ ನಿಯಮಗಳನ್ನು ನೆರವೇರಿಸಿದವನು ಮತ್ತು ಆತನ ಮೂಲಕ ತಂದೆಯ ಬಳಿಗೆ ಬರುವವರಿಗೆ ಸಹಾಯ ಮಾಡಲು

ಆತನು ಎಂದೆಂದಿಗೂ ಜೀವಿಸುತ್ತಾನೆ ಎಂದು ಸಾಕ್ಷಿ ಹೇಳುವವರಾಗಿದ್ದರು. ಅಪೋಸ್ತಲರು ತಮ್ಮ ಕಾರ್ಯವನ್ನು ಎಷ್ಟು ನಂಬಿಗಸ್ತಿಕೆಯಿಂದ ನಿರ್ವಹಿಸಿದರು! ಅಪೋಸ್ತಲನಾದ ಪೌಲನು ಘೋಷಿಸಿದ ಹಾಗೆ, ಅವರು ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವನ್ನೆಲ್ಲಾ ತಿಳಿಸಿದರು! ಲೌಕಿಕ ಜ್ಞಾನವು ಒಬ್ಬ ಅಪರಾಧಿ ಎಂದು ಮರಣದಂಡನೆಗೊಳಗಾದ ಒಬ್ಬ ಗುರು ಮತ್ತು ಬೋಧಕನನ್ನು ಹೊಂದುವದು ಅವರ ಅಪಖ್ಯಾತಿಗೆ ಕಾರಣವಾಗಬಹುದು ಎನ್ನುವಂತಿತ್ತು ಮತ್ತು ಅವರ ನಾಯಕನಿಗೆ ಹಿಂಬಾಲಕರನ್ನು ಒಟ್ಟುಗೂಡಿಸುವಲ್ಲಿ ಇರುವ ಪ್ರಗತಿಯಿಂದ ಅವರನ್ನು ಸಂಪೂರ್ಣವಾಗಿ ತಡೆಯುವ ಹಾಗಿತ್ತು. ಆದರೆ ಈ ನಂಬಿಗಸ್ತ ಸಾಕ್ಷಿಗಳಾದ ಅಪೋಸ್ತಲರು ಅವರು ಏನು ಬೋಧಿಸಬೇಕೆಂದು ಮಾಂಸ ಮತ್ತು ರಕ್ತವುಳ್ಳ ಮನುಷ್ಯರನ್ನು ವಿಚಾರಿಸದೆ–ಅವರು ನಿಜಾಂಶವನ್ನು, ಅದರಲ್ಲಿರುವ ಎಲ್ಲಾ ವಿವರಗಳನ್ನು ಸರಳವಾಗಿ ಹೇಳಿದರು, ಪೇತ್ರ ಮತ್ತು ಯೂದನನ್ನೂ ನಿರ್ಲಕ್ಷಿಸಲಿಲ್ಲ ಮತ್ತು ಅವರಲ್ಲಿ ಯಾರು ದೊಡ್ಡವರು ಎಂಬ ವಿವಾದದ ವಿಷಯವನ್ನೂ ಸಹ ನಿರ್ಲಕ್ಷಿಸಲಿಲ್ಲ, ಇತರೆ. ಸತ್ಯವನ್ನು ಸರಳ ರೀತಿಯಲ್ಲಿ ತಿಳಿಸಬೇಕೆಂಬ ದೇವರ ಉದ್ದೇಶವನ್ನು ಕುರಿತು ಸತ್ಯವೇದ ಪುಸ್ತಕವು ನಮಗೆ ಸಾಕ್ಷಿಕೊಡುತ್ತದೆ. **R 3911 : 3**

## 12 ಜೂನ್

### "ಯೇಸುವಿನ ಹೆಸರಿನಲ್ಲಿ [ಎಲ್ಲರೂ] ಅಡ್ಡಬಿದ್ದು...." (ಫಿಲಿಪ್ಪಿಯವರಿಗೆ 2 : 10)

ನಮ್ಮ ಬೋಧಕನ ಈ ಅತ್ಯುನ್ನತ ವಿಷಯವನ್ನು ಕುರಿತು ಆಲೋಚಿಸುವಾಗ, ಆತನ ಸಹ–ಬಾಧ್ಯಸ್ತರಾದ ಮದಲಗಿತ್ತಿಯು ಆತನ ಎಲ್ಲಾ ಮಹಿಮೆ, ಘನ ಮತ್ತು ಅಮರತ್ವ [ನಿರ್ಲಯತ್ವ]ವನ್ನು ಹೊಂದುತ್ತಾರೆ ಎಂಬುದನ್ನು ಮರೆಯದಿರೋಣ ಮತ್ತು ಈ ಸುವಾರ್ತಾ ಯುಗದಲ್ಲಿ "ಕರೆಯಲ್ಪಟ್ಟ, ಆರಿಸಲ್ಪಟ್ಟ, ನಂಬಿಗಸ್ತರ", "ಬಹಳವಾಗಿ ಆರಿಸಲ್ಪಟ್ಟ" [very elect] ಮದಲಗಿತ್ತಿಯ ವರ್ಗದವರಿಗೆ ಈ ಸವಲತ್ತು [ಭಾಗ್ಯ] ಉಂಟಾಗಿದೆ. ಒಂದು ವೇಳೆ ಈ ಆಲೋಚನೆಯು ನಮಗೆ ನಿರಂತರವಾಗಿದ್ದರೆ, ನಾವು ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕು–ಎಲ್ಲಾ ಲೌಕಿಕ ಸಂತೋಷಗಳು ಮತ್ತು ದುಃಖಗಳು, ಎಲ್ಲಾ ಐಶ್ವರ್ಯಗಳು ಮತ್ತು ಬಡತನಗಳು, ಎಲ್ಲಾ ಬಲಹೀನತೆಗಳು ಮತ್ತು ಅವನತಿಗಳು ನಮಗೆ ಎಷ್ಟು ಕ್ಷುಲ್ಲಕವಾಗಿ ತೋರುತ್ತದೆ! ಆ ಅತ್ಯಂತ ಮಹತ್ವವುಳ್ಳ ಮತ್ತು ಅಮೂಲ್ಯವಾದ ವಾಗ್ದಾನಗಳ ನಿಶ್ಚಯತೆಯು ನಮ್ಮ ಕರೆಯುವಿಕೆ ಮತ್ತು ಆರಿಸಿಕೊಳ್ಳುವಿಕೆಯ ಬಯಕೆಯ ವಿಷಯದಲ್ಲಿ ನಾವು ಎಷ್ಟೋ ತೀವ್ರತೆಯನ್ನು ತೋರಿಸುವವರಾಗುತ್ತೇವೆ. **R 3979 : 4**

## 13 ಜೂನ್

**"ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧತೆಯೇ ನಿಮಗೆ ಫಲ; ಅದರ ಅಂತ್ಯವು ನಿತ್ಯಜೀವವೇ." (ರೋಮಾಪುರದವರಿಗೆ 6 : 22)**

ಇವು ನಿಶ್ಚಯವಾಗಿಯೂ ಜೀವವುಳ್ಳ ಅದ್ಭುತ ವಾಕ್ಯಗಳಾಗಿವೆ! ಅವು ನಮ್ಮನ್ನು ನಿರೀಕ್ಷೆಯೊಂದಿಗೆ ಉತ್ತೇಜನ ನೀಡುತ್ತದೆ. ಒಂದು ವೇಳೆ ಪರಿಪೂರ್ಣ ಶರೀರಕ್ಕೆ ಬದಲಾಗಿ ಪರಿಪೂರ್ಣ ಹೃದಯದ ಉದ್ದೇಶಗಳನ್ನು ದೇವರು ಅಂಗೀಕರಿಸುವುದಾದರೆ, ನಿಶ್ಚಯವಾಗಿಯೂ ಆತನು ನಮಗಾಗಿ ಇಟ್ಟಿರುವ ಗುರಿಯನ್ನು ಅಂದರೆ ಪರಿಪೂರ್ಣತೆಯ ಗುಣಮಟ್ಟವನ್ನು ಸಾಧಿಸುವ ನಿರೀಕ್ಷೆಯನ್ನು ನಾವು ಹೊಂದಬಹುದು. ನಾವು ಆತ್ಮಕ್ಕೆ ತಕ್ಕ ಹಾಗೆ ನಡೆಯಬಹುದು. ನಮ್ಮ ಮರ್ತ್ಯ ದೇಹಗಳಿಗೆ ಸಂಬಂಧಿಸಿದಂತೆ ನಾವು ಆತ್ಮದ ಅವಶ್ಯಕತೆಗಳಿಗೆ ತಕ್ಕಂತೆ ನಡೆಯಲು ಸಾಧ್ಯವಿಲ್ಲ, ಆದರೆ ನಮ್ಮ ಮನಸ್ಸುಗಳು ಆತ್ಮದ ಅವಶ್ಯಕತೆಗಳಿಗೆ ತಕ್ಕಂತೆ ನಡೆಯಬಹುದು; ನಮ್ಮ ಉದ್ದೇಶಗಳು ಪರಿಪೂರ್ಣವಾಗಿರಬಹುದು; ಮತ್ತು ನಮ್ಮ ಪರಲೋಕದ ತಂದೆಯು ನಮ್ಮಲ್ಲಿ ಪರಿಪೂರ್ಣವಾದ ಉದ್ದೇಶ ಮತ್ತು ನಮ್ಮ ಶರೀರಗಳನ್ನು ಸಾಧ್ಯವಾದಷ್ಟು ಪರಿಪೂರ್ಣವಾಗಿ ಹತೋಟಿಯಲ್ಲಿಡಬೇಕೆಂದು ಎದುರುನೋಡುತ್ತಾನೆ. **R 4869 : 5**

## 14 ಜೂನ್

**"ಆಗ ಅವರು ಇಕ್ಕಟ್ಟಿನಲ್ಲಿ ಕರ್ತನಿಗೆ ಕೂಗಿದರು; ಆತನು ಅವರ ಸಂಕಟಗಳೊಳಗಿಂದ ಅವರನ್ನು ರಕ್ಷಿಸಿದನು." (ಕೀರ್ತನೆಗಳು 107 : 13)**

ಹೇಗೆ ಇಸ್ರಾಯೇಲಿನ ಸಂಕಟಗಳ ಉದ್ದೇಶವು ಅವರ ಹೃದಯಗಳನ್ನು ಕರ್ತನ ಕಡೆಗೆ ತಿರುಗಿಸುವದು ಮತ್ತು ಆತನ ವಾಗ್ದಾನದ ಸಹಾಯಕ್ಕಾಗಿ ಕೂಗಲು ಅವರನ್ನು ನಡೆಸಿತೋ ಹಾಗೆಯೇ ಈ ಲೋಕ, ಶರೀರ ಮತ್ತು ವಿರೋಧಿಯಾದ ಸೈತಾನ, ಪಾಪ ಮತ್ತು ಮರಣದ ಬಂಧನದಿಂದ ರಕ್ಷಿಸಲು, ಈ ಎಲ್ಲಾ ಶೋಧನೆಗಳ ಅನುಭವಗಳನ್ನು ತಂದೆಯ ವಾಗ್ದಾನಗಳನ್ನು ಹೊಂದಿರುವ, ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿರುವ ನಮಗೆ ಅನ್ವಯಿಸುತ್ತದೆ. ಇವೆಲ್ಲವೂ ನಮಗೆ ಸಹಾಯ ಬರುವಂತಹ ಕರ್ತನನ್ನು ಎದುರುನೋಡಲು ಮತ್ತು ಪರಲೋಕದಿಂದ ದೇವರ ಮಗನಿಗಾಗಿ ಕಾಯಲು ಮತ್ತು ಆತನ ಎರಡನೆಯ ಬರುವಿಕೆಯಲ್ಲಿ

ನರಳುತ್ತಿರುವ ಸೃಷ್ಟಿಗಳ ಬಿಡುಗಡೆಗಾಗಿ ಆತನನ್ನು ನಿರೀಕ್ಷಿಸುತ್ತದೆ. ಹಾಗಿರುವಾಗ ಈಗಿನ ಯಾತನೆ ಮತ್ತು ಸಂಕಟಗಳು, ನಾವು ಅವುಗಳನ್ನು ಸರಿಯಾದ ಪ್ರಯಾಸದೊಂದಿಗೆ ಅಭ್ಯಾಸಿಸುವಾಗ, ಅವುಗಳು ನಮಗೆ ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ. ಮತ್ತು ನಿಜವಾದ [ಆತ್ಮೀಕ] ಇಸ್ರಾಯೇಲ್ಯರಾಗಿ ನಮಗೆ ಅಬ್ರಹಾಮನ ವಾಗ್ದಾನಗಳಲ್ಲಿ ವಿಶ್ವಾಸವಿದ್ದರೆ ಅದು ನಮ್ಮದಾಗುತ್ತದೆ. ಅಪೋಸ್ತಲನು ನಮಗೆ ತಿಳಿಸಿರುವಂತೆ, ನಮ್ಮ ಆತ್ಮಗಳಿಗೆ ನಿಶ್ಚಯವಾದ ಮತ್ತು ಸ್ಥಿರಚಿತ್ತವಾದ ಲಂಗರು [ಆಧಾರ]ವಾಗಿದ್ದು, ನಮ್ಮ ಮುಂದಾಳಾಗಿರುವ ಕ್ರಿಸ್ತನು ತೆರೆಯ ಆ ಕಡೆಯಲ್ಲಿ ಪ್ರವೇಶಿಸಿ– ನಮಗಾಗಿ ಪ್ರಾಯಶ್ಚಿತ್ತ ಮಾಡಿ ಅಲ್ಲಿಂದ ಆತನು ನಮಗೆ ಆಶೀರ್ವಾದವುಳ್ಳ ಬಿಡುಗಡೆಯನ್ನು ಕೊಟ್ಟು, ನಾವು ನಿರೀಕ್ಷಿಸುತ್ತಿರುವ ಪುನರುತ್ಥಾನದ ಬದಲಾವಣೆಯನ್ನು ಹೊಂದಲು, ಕಣ್ಣು ಮಿಟುಕಿಸುವುದರೊಳಗೆ, ಕ್ಷಣಮಾತ್ರದಲ್ಲಿ ಬದಲಾವಣೆ ಹೊಂದಿ, ಆತನಂತೆಯೇ ನಾವೂ ಸಹ ಮಾರ್ಪಾಡು ಹೊಂದಿ, ಆತನಿರುವಂತೆಯೇ ಆತನನ್ನು ಕಾಣುತ್ತೇವೆ ಮತ್ತು ಆತನ ಮಹಿಮೆಯಲ್ಲಿ ಪಾಲು ಹೊಂದುತ್ತೇವೆ. **R 3983 : 6**

## 15 ಜೂನ್

**"ಕರ್ತನು ಕತ್ತಿಯಿಂದಲೂ ಈಟಿಯಿಂದಲೂ ರಕ್ಷಿಸುವದಿಲ್ಲ ಎಂದು ಸಭೆಯೆಲ್ಲಾ ತಿಳಿದುಕೊಳ್ಳುವದು; ಯಾಕಂದರೆ ಯುದ್ಧವು ಕರ್ತನದು; ಆತನು ನಿಮ್ಮನ್ನು ನಮ್ಮ ಕೈಯಲ್ಲಿ ಒಪ್ಪಿಸಿಕೊಡುವನು ಅಂದನು." (1 ಸಮುವೇಲನು 17 : 47)**

ಹಳೆಯ ಕಾಲದಲ್ಲಿನ ಈ ಕಥೆಯಿಂದ "ಹೊಸ ಸೃಷ್ಟಿ"ಯು ಎಂತಹ ಪಾಠವನ್ನು ಕಲಿತುಕೊಳ್ಳಬಹುದು? "ಪ್ರಿಯನು" ಎಂದು ಸೂಚಿಸಲ್ಪಡುವ ದಾವೀದನ ಹೆಸರು ಅನೇಕ ವಿಷಯಗಳಲ್ಲಿ ಕ್ರಿಸ್ತನು–ತಲೆ ಮತ್ತು ಶರೀರಕ್ಕೆ ಛಾಯೆಯಾಗಿದೆ. ದಾವಿದನೊಂದಿಗಿನ ಗೊಲ್ಯಾತನ ಅನುಭವಗಳು, ಮೊಟ್ಟಮೊದಲು ನಲ್ವತ್ತು ದಿನಗಳ ಅರಣ್ಯದ ಶೋಧನೆಯಲ್ಲಿ ನಮ್ಮ ಕರ್ತನು ಮತ್ತು ಎದುರಾಳಿಯೊಂದಿಗಿನ ಹೋರಾಟವನ್ನು ಸೂಚಿಸುವದಕ್ಕೆ ಉದಾಹರಣೆಯಾಗಿದೆ. ಆ ಸಂದರ್ಭದಲ್ಲಿ ಸೈತಾನನ ಮೇಲಿನ ನಮ್ಮ ಕರ್ತನ ಜಯವು, ದೇವರ ಮೇಲಿನ ಆತನ ನಿಷ್ಠೆ ಮತ್ತು ಆತನಿಗೆ ವಹಿಸಿಕೊಟ್ಟ ಕೆಲಸ, ಆತನ ಸ್ವಂತ–ಬಲಿ, ಈ ಲೋಕದ ಎಲ್ಲಾ ಮನುಕುಲವು ದೇವರು ಮತ್ತು ಆತನ ಏರ್ಪಾಡುಗಳಿಗೆ ಹೊಂದಾಣಿಕೆಯಾಗಿರಲು ಅಪೇಕ್ಷಿಸುವಾಗ ಸಿಗುವ ಜಯಕ್ಕೆ

ಸೂಚಿತವಾಗಿದೆ. "ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ." ಎಂದು ಆತನು ನಮಗೆ ಹೇಳಿದ್ದಾನಲ್ಲವೆ? ಈ ಲೋಕದ ಅಧಿಪತಿಯಾದ ಸೈತಾನನನ್ನು ಜಯಿಸಿದ ಅದೇ ಸಮಯದಲ್ಲಿ, ಆತನ ಎಲ್ಲಾ ದುಷ್ಟ ಸೇನೆಗಳು ಮತ್ತು ಪಾಪದ ಸೇವಕರನ್ನೂ ಜಯಿಸಿದ್ದಾನೆ. ಆತನು ದೇವರಿಗೆ ಮತ್ತು ಆತನ ಒಡಂಬಡಿಕೆಯ ಸಂಬಂಧ ಮತ್ತು ಜವಾಬ್ದಾರಿಗಳಿಗೆ ನಂಬಿಗಸ್ತಿಕೆಯಾಗಿದ್ದನು ಮತ್ತು "ಬರೆದದೆ" ಎಂಬ ಸತ್ಯದ ಬೆಣಚುಕಲ್ಲನ್ನು ಎದುರಾಳಿಯ ಮೇಲೆ ಎಸೆದನು. ಹೇಗೆ ಗೊಲ್ಯಾತನು ದಾವೀದನ ಮುಂದೆ ಬಿದ್ದುಹೋದನೋ, ಹಾಗೆಯೇ ನಮ್ಮ ಕರ್ತನಿಂದ ಸೈತಾನನು ಸೋತುಹೋದನು. ಮತ್ತು ನಮ್ಮ ಕರ್ತನು "ಸೈತಾನನು ಮಿಂಚಿನ ಹಾಗೆ ಆಕಾಶದಿಂದ ಬೀಳುವದನ್ನು ನಾನು ನೋಡಿದೆನು." ಎಂದು ಹೇಳಿದ್ದಾನೆ. ಮತ್ತು ಆತನು ಜಯ ಹೊಂದಿದ ಫಲವಾಗಿ "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರ ನನಗೆ ಕೊಡಲ್ಪಟ್ಟಿದೆ." ಎಂದು ಹೇಳಿದ್ದಾನೆ. ಮತ್ತು ಆತನ ನಾಮದಲ್ಲಿ ಆತನ ಶಿಷ್ಯರನ್ನು ಅದೇ ರೀತಿಯಾದ ಹೋರಾಟ ಮಾಡಲು ಆತನ ಬಲವನ್ನು ಅನುಗ್ರಹಿಸಿ, ಜಯಹೊಂದಿದವರಾಗಿ ಹಿಂದಿರುಗಿ ಬಂದು ಆತನ ರಾಜ್ಯದಲ್ಲಿ ಆತನೊಂದಿಗೆ ಪಾಲು ಹೊಂದಿದವರಾಗಿ "ಲೋಕದ ಎಲ್ಲಾ ಜನರನ್ನು ಆಶೀರ್ವದಿಸುವದಕ್ಕಾಗಿ" ಅವರನ್ನು [ಶಿಷ್ಯರನ್ನು] ಕಳುಹಿದನು.
**R 4216 : 4**

## 16 ಜೂನ್

**"ಸೇವೆಯು ದೂಷಿಸಲ್ಪಡದಂತೆ ಯಾವ ವಿಷಯದಲ್ಲಿಯೂ ನಿಂದೆಗೆ ಅವಕಾಶ ಕೊಡಬೇಡಿರಿ; ಶುದ್ಧತೆಯಿಂದ, ಜ್ಞಾನದಿಂದ, ದೀರ್ಘಶಾಂತಿಯಿಂದ, ದಯೆಯಿಂದ, ಪವಿತ್ರಾತ್ಮನಿಂದ, ಕಪಟವಿಲ್ಲದ ಪ್ರೀತಿಯಿಂದ... ಕೂಡಿದವರಾಗಿರಿ." (2 ಕೊರಿಂಥದವರಿಗೆ 6 : 3 , 6)**

ಒಬ್ಬ ವ್ಯಕ್ತಿಯು ಎಷ್ಟು ಹೆಚ್ಚಾಗಿ ಪರಿಶುದ್ಧನಾಗಿರುತ್ತಾನೋ, ಖಂಡಿತವಾಗಿಯೂ ಅವನು [ಸೈತಾನನಿಗೆ] ಗುರಿಯಾಗುತ್ತಾನೆ. ಚುಕ್ಕಿಯುಳ್ಳ ಹಕ್ಕಿಗಳು ಬೇಟೆಗಾರನಿಗೆ ಇತರ ಹಕ್ಕಿಗಳಿಗಿಂತ ಹೆಚ್ಚು ಗುರಿಯಾಗಿರುತ್ತದೆ. ಆದದರಿಂದ ಯಾರೆಲ್ಲಾ ಕರ್ತನ ಮನೆಯ ಪಾತ್ರೆಯನ್ನು ಹೊರುತ್ತಾರೋ, ವಿಶೇಷವಾಗಿ ಅವರು ದುಷ್ಟನ [ಸೈತಾನನ] ಅಗ್ನಿಯುಳ್ಳ ಬಾಣಗಳಿಗೆ ಗುರಿಯಾಗುತ್ತಾರೆ. ಆದ್ದರಿಂದ ನಾವು ಈ ಲೋಕ, ಶರೀರ ಮತ್ತು ಎದುರಾಳಿಗೆ ವಿರೋಧವಾಗಿ ಹೋರಾಡುವವರಾಗಿರಬೇಕು. ಯಾರೆಲ್ಲಾ ಸರಿಯಾದ ಮನಸ್ಥಿತಿ, ಹೃದಯದಲ್ಲಿ ಶುದ್ಧತೆ, ಕರ್ತನ ಮಕ್ಕಳಾಗಿ ಅತ್ಯಾಸಕ್ತಿ ಉಳ್ಳವರಾಗಿರುತ್ತಾರೋ ಅವರು ತಮ್ಮ ನಿಲುವಂಗಿಗಳನ್ನು ಕಾಪಾಡುಕೊಳ್ಳುವದರಲ್ಲಿ ಎಚ್ಚರಿಕೆಯಾಗಿರುತ್ತಾರೆ.

ಅವರು ಎಚ್ಚರಿಕೆಯಾಗಿ ಇಲ್ಲದಿದ್ದರೆ, ಖಂಡಿತವಾಗಿಯೂ ತಮ್ಮ ನಿಲುವಂಗಿಗಳನ್ನು ಅಪವಿತ್ರಗೊಳಿಸುತ್ತಾರೆ. ಸೈತಾನನು ವಿಶೇಷವಾಗಿ ಅವರನ್ನು ಮುಟ್ಟಲು ಪ್ರಯತ್ನಿಸುತ್ತಾನೆ; ನಮಗೆ ಗೊತ್ತಿರುವ ಹಾಗೆ ಅವನು ಎಲ್ಲೆಲ್ಲಿ ಮುಟ್ಟುತ್ತಾನೋ, ಅಲ್ಲೆಲ್ಲಾ ಅಶುದ್ಧವಾಗುತ್ತದೆ. ಯಾರನ್ನೆಲ್ಲಾ ದುಷ್ಟನು ಮುಟ್ಟುತ್ತಾನೋ ಅವನು ಸ್ವಲ್ಪ ಮಟ್ಟಿಗೆ ಗಾಯ ಹೊಂದುತ್ತಾನೆ. ಮತ್ತು ಸೈತಾನನು ಅವನನ್ನು ಮುಟ್ಟುವ ಮೊದಲು ಅವನಲ್ಲಿ ಸ್ವಲ್ಪ ಮಟ್ಟಿಗೆ ಅಪರಾಧವಿರುತ್ತದೆ. **R 5259 : 5**

## 17 ಜೂನ್

**"ತರುವಾಯ ಯೇಸು ಶಿಷ್ಯರ ಸಂಗಡ ಗೆತ್ಸೇಮನೆ ಎಂಬ ಸ್ಥಳಕ್ಕೆ ಬಂದು ಅವರಿಗೆ–ನಾನು ಆಚೇ ಕಡೆಗೆ ಹೋಗಿ ಪ್ರಾರ್ಥಿಸುವಾಗ ನೀವು ಇಲ್ಲೇ ಕೂತುಕೊಳ್ಳಿರಿ ಅಂದನು." ( ಮತ್ತಾಯನು 26 : 36 )**

ಕರ್ತನ ಜನರಾಗಿರುವ ನಾವು ಈ ಸುಗ್ಗಿಯ ಸಮಯದಲ್ಲಿ ಸಭೆಯ ಗೆತ್ಸೇಮನೆ ಗಳಿಗೆಗೆ ಹತ್ತಿರವಾಗುತ್ತಿಲ್ಲವೇ? ನಾವು ಈಗಾಗಲೇ ಸಾಕಷ್ಟು ಮಟ್ಟಿಗೆ ಶೋಧನೆಯ ಗಳಿಗೆಯಲಿಲ್ಲವೇ? ಶರೀರದ ಕೊನೆಯ ಸದಸ್ಯರು ಸಂಪೂರ್ಣ ಬಲಿಯನ್ನು ಸಲ್ಲಿಸಿ ಶೀಘ್ರದಲ್ಲೇ ತನ್ನ ಶಿರಸ್ಸನ್ನು ಹಿಂಬಾಲಿಸುವುದಿಲ್ಲವೇ? ಈ ಅಗ್ನಿಪರೀಕ್ಷೆಗೆ ನಾವು ಎಷ್ಟರ ಮಟ್ಟಿಗೆ ಸಿದ್ಧರಾಗಿದ್ದೇವೆ? ನಾವು ನಿದ್ರಿಸುತ್ತಿದ್ದೇವಾ ಅಥವಾ ಅಪೋಸ್ತಲನ ವಾಕ್ಯಗಳನ್ನು ಗಮನಿಸುತ್ತಿದ್ದೇವಾ? ಯಾರು ನಿದ್ರಿಸುತ್ತಾರೋ ಅವರು ರಾತ್ರಿಯಲ್ಲಿ ನಿದ್ರಿಸುತ್ತಾರೆ. ಆದರೆ ಹಗಲಿನವರಾದ ನಾವು ಎಚ್ಚರವಾಗಿ ಶಾಂತತೆಯಿಂದಿರಬೇಕು, ಈ ಕೆಟ್ಟ ದಿನಗಳಲ್ಲಿ ನಾವು ನಿಂತುಕೊಳ್ಳುವಂತೆ ದೇವರ ಸರ್ವಾಯುಧವನ್ನು ಧರಿಸಿಕೊಳ್ಳೋಣ. ಏಕೆಂದರೆ ಶೋಧನೆಯ ಕಾಲವು ಈಗಾಗಲೇ ನಮ್ಮ ಮೇಲಿದೆ ಮತ್ತು ಸಂದೇಹವಿಲ್ಲದೆ ಹತ್ತಿರದ ಭವಿಷ್ಯದಲ್ಲಿ ಇನ್ನೂ ತೀವ್ರವಾದ ಶೋಧನೆಗಳು ನಮ್ಮದಾಗಬಹುದು? "ಎಲ್ಲರೂ ಆತನನ್ನು ತೊರೆದು ಓಡಿಹೋದರು" ಹಾಗೆಯೇ ನಾವೂ ಸಹ ಸಾಮಾನ್ಯ ಚದುರಿ ಹೋಗುವಿಕೆಯ ಸಮಯಕ್ಕೆ ಸಿದ್ಧರಾಗಿದ್ದೇವಾ? ನಮ್ಮ ಶೋಧನೆಯ ಗಳಿಗೆಯಲ್ಲಿ ನಾವು ಎಷ್ಟು ಧೈರ್ಯವಾಗಿರುತ್ತೇವೆ ಎಂಬದು ಬಹುಶಃ ನಾವು ನಮ್ಮ ಬೋಧಕನ ಉದಾಹರಣೆಯನ್ನು ಮತ್ತು ಇದಕ್ಕೆ ಮೊದಲು ನಮಗೆ ದೈವಿಕ ಅನುಮೋದನೆ ಇದೆ ಎಂಬ ಸಕಾರಾತ್ಮಕ ಧೃಡೀಕರಣದ ಮೇಲೆ ಅವಲಂಬಿತವಾಗಿದೆ. ಹಾಗಿರುವಾಗ ನಾವು ಗೆತ್ಸೇಮನೆಯ ಆ ಕ್ಷಣಗಳನ್ನು ತಪ್ಪಿಸದೆ ಅದು ಕರ್ತನ ಏರ್ಪಾಡಿನಲ್ಲಿ ನಮಗೆ ಬಂದಿದೆ ಎಂದು ತಿಳಿದುಕೊಳ್ಳೋಣ. ಆದರೆ ಮರಣದಿಂದ ತಪ್ಪಿಸಿ ಮಹಿಮೆಯುಳ್ಳ

ಮೊದಲ ಪುನರುತ್ಥಾನದಲ್ಲಿ ಎಬ್ಬಿಸಲು ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ನಾವು ಎದುರು ನೋಡೋಣ. ನಮಗೆ ಒಬ್ಬ ಪಕ್ಷವಾದಿ ಇದ್ದಾನೆಂದು, ಸಹಾಯಕನು ಇದ್ದಾನೆಂದು ನೆನಪಿನಲ್ಲಿ ಇಟ್ಟುಕೊಳ್ಳೋಣ. ಕರ್ತನು ನಮ್ಮ ದೂತನಾಗಿದ್ದು ತಂದೆಯ ಸಂದೇಶವನ್ನು ನಮಗೆ ತಿಳಿಸುತ್ತಾನೆ, ಒಂದು ವೇಳೆ ನಾವು ಆತನ ಪ್ರೀತಿಯಲ್ಲಿ ನೆಲೆಸಿದ್ದರೆ ಕೊನೆಯಲ್ಲಿ ನಮಗೆ ಎಲ್ಲವೂ ಒಳ್ಳೆಯದಾಗುವದು ಮತ್ತು ಆತನ ಸ್ವಂತ ಬಲಿಯ ಪುಣ್ಯದ ಮೂಲಕ ಆತನು ನಮ್ಮನ್ನು ಜಯಶಾಲಿಗಳಾಗುವಂತೆ, ಹೌದು ಅಧಿಕ ಜಯಶಾಲಿಗಳಾಗುವಂತೆ ಮಾಡಲು ಆತನು ಚಿತ್ತವುಳ್ಳವನೂ ಮತ್ತು ಶಕ್ತನೂ ಆಗಿದ್ದಾನೆ. **R 3886 : 6**

## 18 ಜೂನ್

**"ನೀವು ಒಪ್ಪಿ ವಿಧೇಯರಾದರೆ ದೇಶದ ಮೇಲನ್ನು ಅನುಭವಿಸುವಿರಿ." (ಯೆಶಾಯ 1 : 19)**

ಸ್ವಯಂ–ನಿಯಂತ್ರಣದ ಕೆಲವು ಪಾಠಗಳನ್ನು ದೇವರು ನಮ್ಮ ಕಲಿಕೆಗಾಗಿ ವ್ಯವಸ್ಥೆ ಮಾಡಿದ್ದಾನೆ, ನಾವು ಸ್ವಯಂ–ಪ್ರೇರಿತವಾಗಿ ದೇವರಿಗೆ ಪೂರ್ಣ ವಿಧೇಯತೆಯಿಂದ ನಮ್ಮನ್ನು ನಾವು ಆತನ ಪ್ರತಿನಿಧಿಗಳು ಎಂಬ ದೃಷ್ಟಿಯಿಂದ ಒಪ್ಪಿಸುತ್ತೇವೆ, ನಂತರ ಲೋಕದವರು ದೇವರಿಗೆ ವಿಧೇಯರಾಗುವಂತೆ ಮಾಡುವದಕ್ಕೆ ಅವರಿಗೆ ಕೆಲವು ಪಾಠಗಳನ್ನು ವ್ಯವಸ್ಥೆ ಮಾಡಿದ್ದಾನೆ. ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುವ ನಿಯಮವೇನೆಂದರೆ, ತಾನೇ ವಿಧೇಯತೆಯನ್ನು ಕಲಿತುಕೊಳ್ಳದಿದ್ದರೆ ಬೇರೆಯವರನ್ನು ಆಳ್ವಿಕೆ ಮಾಡಲು ಅರ್ಹನಲ್ಲ. ನಮ್ಮ ಕರ್ತನಾದ ಯೇಸು ವಿಧೇಯತೆ ಎಂದರೇನು ಎಂದು ಕಲಿತುಕೊಳ್ಳಲು ಅತ್ಯಧಿಕವಾದ ಪಾಡುಗಳನ್ನು ಅನುಭವಿಸಿದನು. ಆತನು ತನ್ನನ್ನೇ ವಿಳಂಬವಿಲ್ಲದೆ, ಪೂರ್ಣವಾಗಿ ದೇವರಿಗೆ ಒಪ್ಪಿಸಿಕೊಟ್ಟನು. ಈ ಕ್ರಿಸ್ತನ ಆತ್ಮವು ನಮ್ಮಲ್ಲಿಯೂ ವ್ಯಕ್ತವಾಗಬೇಕು ಮತ್ತು ಅದು ನಮ್ಮಲ್ಲಿ ಬೆಳೆಯಬೇಕು. ಆಗ ಮಾತ್ರ ನಾವು ಸಾವಿರ ವರ್ಷ ಯುಗದ ಕೆಲಸದಲ್ಲಿ, ಭವಿಷ್ಯದಲ್ಲಿನ ಕ್ರಿಸ್ತನ ಕೆಲಸದಲ್ಲಿ ಪಾಲುಹೊಂದಲು ನಾವು ಸಿದ್ಧರಾಗುತ್ತೇವೆ. **R 5890 : 2**

## 19 ಜೂನ್

**"ಆದದರಿಂದ ಕೆಟ್ಟ ದಿನದಲ್ಲಿ ನೀವು ಅವುಗಳನ್ನು ಎದುರಿಸಿ ಮಾಡಬೇಕಾದದ್ದೆಲ್ಲವನ್ನು ಮಾಡಿ ನಿಲ್ಲಲು ಶಕ್ತರಾಗುವಂತೆ ದೇವರ ಸರ್ವಾಯುಧವನ್ನು ನಿಮಗಾಗಿ ತೆಗೆದುಕೊಳ್ಳಿರಿ." (ಎಫೆಸದವರಿಗೆ 6 : 13)**

ಯಾವುದೇ ಒಬ್ಬ ಮನುಷ್ಯನು ಯುದ್ಧವನ್ನು ನಿರೀಕ್ಷಿಸುವವರೆಗೂ ರಕ್ಷಾ ಕವಚವನ್ನು ಧರಿಸುವುದಿಲ್ಲ. ಒಂದು ವೇಳೆ ಆತನು ಶಿಲುಬೆಯ ಸೈನಿಕನಾಗಿದ್ದರೆ, "ಆತ್ಮವೆಂಬ ಕತ್ತಿ"ಯು ಆತನಿಗೆ ದೊಡ್ಡ ಆಯುಧವಾಗಿದ್ದು ಅದನ್ನು ಹಿಡಿದು ತನ್ನ ನಿಷ್ಠೆ ಮತ್ತು ಶಕ್ತಿಯನ್ನು ನಿರೂಪಿಸುವನು. ಸಹೋದರರು ಒಬ್ಬರನೊಬ್ಬರು ಅತಿಪರಿಶುದ್ಧವಾದ ನಂಬಿಕೆಯ ಮೇಲೆ ನಮ್ಮನ್ನು ನಾವೇ ಕಟ್ಟಿಕೊಂಡು, ಒಳ್ಳೆಯ ಹೋರಾಟವನ್ನು ಓಡಿ, ಕರ್ತನಿಗೂ ಮತ್ತು ಆತನ ಸತ್ಯಕ್ಕೂ ನಿಷ್ಠೆಯನ್ನು ತೋರಿಸಬೇಕು. [ಯೂದನು 20 ; 1 ತಿಮೊಥೆಯನಿಗೆ 6 : 12] ಯಾರೆಲ್ಲಾ ಅಂಧಕಾರದ ಪ್ರಭಾವಕ್ಕೆ ಒಳಗಾಗುತ್ತಾರೋ ಅವರು ಹೊಸ ಕ್ರಮದ ವಿಷಯಗಳಿಗೆ ಯೋಗ್ಯರಲ್ಲ ಮತ್ತು ಅವರು ರಾಜ್ಯದಲ್ಲಿ ಕ್ರಿಸ್ತನೊಂದಿಗೆ ಬಾಧ್ಯರಾಗಲು ನಿರೀಕ್ಷಿಸದಿರಲಿ, ಅಂಥವರು ಕರ್ತನಿಂದ ಅಯೋಗ್ಯರೆಂದು ಎಣಿಸಿ ನಿರಾಕರಿಸಲ್ಪಟ್ಟವರಾಗಿರುತ್ತಾರೆ. **R 5098 : 2**

## 20 ಜೂನ್

**"ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಹೀಗಿರಲಾಗಿ ದೇವರಿಗೆ ಒಳಗಾಗಿರಿ." (ಯಾಕೋಬನು 4 : 6 , 7)**

ಭವಿಷ್ಯದ ನಮ್ಮ ಮಹಿಮೆಯ ನೆಲೆಗಾಗಿ ನಾವು ಬಹಳ ಹಂಬಲದಿಂದ ಎದುರು ನೋಡುತ್ತಿದ್ದು, ಕರ್ತನ ಮಹಿಮೆಯು ಆಲಯದಲೆಲ್ಲಾ ತುಂಬಿದಾಗ, "ದೇವರು ನಮ್ಮನ್ನು ತಿಳಿದುಕೊಂಡಂತೆಯೇ ನಾವೂ ತಿಳಿದುಕೊಂಡಾಗ", ಕ್ರಿಸ್ತನ ಶಾಲೆಯ ಪ್ರಭಾವದಲ್ಲಿ ನಮ್ಮನ್ನು ರೂಪಿಸಿ, ಆಕಾರವನ್ನುಂಟುಮಾಡುವಾಗ ನಾವು ನಮ್ಮನ್ನು ಒಪ್ಪಿಸಿಕೊಡದಿದ್ದರೆ ನಮ್ಮನ್ನು ಪಕ್ಕಕ್ಕೆ ಇರಿಸಲಾಗುವದು [ನಿರಾಕರಿಸಲಾಗುವದು]. ಆ ವಿಶೇಷವಾದ ಪಾತ್ರದಿಂದ ನಮ್ಮ ಹೆಸರುಗಳನ್ನು ಅಳಿಸಿ, ನಮ್ಮ ಕಿರೀಟಗಳನ್ನು ಮತ್ತೊಬ್ಬರಿಗೆ ಕೊಡಲಾಗುವದು. ಆ ದೊಡ್ಡ ಬಹುಮಾನವನ್ನು ಕಳೆದುಕೊಳ್ಳುವ ಅಧಿಕವಾದ ಸಾಧ್ಯತೆಗಳಿರುವುದರಿಂದ ಅಪೋಸ್ತಲನು ಹೀಗೆ ಬರೆಯುತ್ತಾನೆ, "ಹೀಗಿರಲಾಗಿ ಆತನ ವಿಶ್ರಾಂತಿಯಲ್ಲಿ ಸೇರುವೆನೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಅದರಿಂದ ತಪ್ಪುವವನಾದಾನೋ ಎಂದು ನಾವು ಭಯಪಡೋಣ". ಈಗ ಜೀವವುಳ್ಳ ಕಲ್ಲುಗಳಾಗಿ ತಯಾರಾಗುತ್ತಿರುವವರಿಗೆ ಯಾವುದೇ ವಿಷಯದಲ್ಲಿ ಅಹಂಕಾರ ಉಂಟಾದರೆ, ಅಪವಿತ್ರತೆಯುಳ್ಳ ಮಹತ್ವಾಕಾಂಕ್ಷೆಗಳು ಬೆಳೆದರೆ ಅದು ಬಹಳ ಆಪತ್ತಾಗಿರುತ್ತದೆ. ಅಂತಹ ದೋಷಗಳು ನಮ್ಮಲ್ಲಿ ಬೆಳೆದುಕೊಂಡರೆ ಈ ವಿಶೇಷ ಸೇವೆಗೆ ನಾವು ಅರ್ಹರಾಗುವುದಿಲ್ಲ. ಅಂತಹ ಅಹಂಕಾರವನ್ನು ನಮ್ಮಲ್ಲಿ

ಬೆಳೆಸಿಕೊಂಡಿದ್ದರೆ, ಅಂಥವರು ಬಹುಶಃ ಹೊಟ್ಟೆಕಿಚ್ಚು, ಕೋಪ, ದ್ವೇಷ, ಜಗಳ, ಕೆಟ್ಟ ಮಾತುಗಳು, ಕೆಟ್ಟ ಆಲೋಚನೆಗಳು ಇವೆಲ್ಲವೂ ಕ್ರಿಸ್ತನ ಆತ್ಮಕ್ಕೆ ವಿರೋಧವಾಗಿವೆ ಮತ್ತು ಅಂಥವರನ್ನು "ಆತನವರಲ್ಲ" ಎಂದು ಬೇಗನೆ ಪರಿಗಣಿಸಲಾಗುವದು. **R 4297 : 5**

## 21 ಜೂನ್

**"ಯಾಕೆಂದರೆ ನನ್ನಲ್ಲಿ ಅಂದರೆ ನನ್ನ ಶರೀರದಲ್ಲಿ ಒಳ್ಳೆಯದೇನೂ ವಾಸವಾಗಿಲ್ಲವೆಂದು ನನಗೆ ತಿಳಿದದೆ; ಒಳ್ಳೇದನ್ನು ಮಾಡುವದಕ್ಕೆ ನನಗೇನೋ ಮನಸ್ಸುಂಟು; ಆದರೆ ಅದನ್ನು ಮಾಡುವದು ನನ್ನಿಂದಾಗದು." ( ರೋಮಾಪುರದವರಿಗೆ 7 : 18 )**

ಹೊಸ ಚಿತ್ತ, ನೂತನ ಮನಸ್ಸು ಹಾಗೂ ಶರೀರ ಮತ್ತು ಅದರ ಆಲೋಚನೆಗಳು ಇವುಗಳ ಮಧ್ಯೆ ವ್ಯತ್ಯಾಸವುಂಟು. ಶರೀರ ಮತ್ತು ಅದರ ಆಲೋಚನೆಗಳು ಸತ್ತದ್ದಾಗಿ ಎಣಿಸಲ್ಪಟ್ಟಿದೆ. ಆದರೂ ಅದು ನಿಜವಾಗಿಯೂ ಬದುಕಿದೆ, ಆದ್ದರಿಂದ ಅವುಗಳನ್ನು ಹತೋಟಿಯಲ್ಲಿಡಲು ಯಾವಾಗಲೂ ಎಚ್ಚರಿಕೆಯಾಗಿರಬೇಕು ಮತ್ತು ಹೊಸ ಸೃಷ್ಟಿಯ ಉದ್ದೇಶಕ್ಕೆ ಅನುಗುಣವಾಗಿ ಅದನ್ನು ನಡೆಸಬೇಕು, ಅದಕ್ಕಾಗಿ ಸತತವಾಗಿ ಹೋರಾಡಬೇಕು, ಈ ಹೋರಾಟದಲ್ಲಿ ಸಫಲ ಎಂದರೆ ಗೆಲುವು ಎಂದರ್ಥ. ಈ ಸುವಾರ್ತಾಯುಗದ ಹೋರಾಟದಲ್ಲಿ ಜಯಹೊಂದಿದವರಿಗೆ ಕರ್ತನು ಈ ಬಹುಮಾನದೊಂದಿಗೆ ವಿಶೇಷವಾದ ಗೌರವ [ಘನತೆ] ಮತ್ತು ಆಶೀರ್ವಾದಗಳನ್ನು ನೀಡುತ್ತಾನೆ. . . .ಇದರಲ್ಲಿ ಸ್ವಲ್ಪ ಮಟ್ಟಿಗಾದರೂ ಕಲ್ಮಶ ಇದ್ದರೆ ಅದು ಸ್ವಾರ್ಥತೆ ಎಂದಾಗುತ್ತದೆ, ಅದು ಆಗಾಗ್ಗೆ ಇದ್ದರೆ ಸ್ವತಃ ನಾಚಿಕೆಪಡುವದಕ್ಕೆ ಕಾರಣವಾಗುತ್ತದೆ ಮತ್ತು ಅದನ್ನು ಮರೆಮಾಡಲು ಉದಾರತೆ ಎಂಬ ನೆಪ ಹೊಡ್ಡಿ ಹೊರನೋಟಕ್ಕಾಗಿ ದಾನಮಾಡುತ್ತಾರೆ. ಮನಸ್ಸಿನ ಕಲ್ಮಶದ ಇತರ ಲಕ್ಷಣಗಳು ಯಾವುದೆಂದರೆ ಅಸೂಯೆ, ದುರಾಸೆ, ಮಹತ್ವಾಕಾಂಕ್ಷೆ. ಈ ವಿಧವಿಧವಾದ ಸ್ವಾರ್ಥತೆಗಳೆಲ್ಲವೂ ಕೆಡುಕನಿಂದ ಬಂದಿತೆಂದು ಗುರುತಿಸಬೇಕು ಎಂದು ಅಪೋಸ್ತಲನು ಹೇಳುತ್ತಾನೆ. ಅವುಗಳು ಶರೀರ ಮತ್ತು ಸೈತಾನನ ಕ್ರಿಯೆಗಳಾಗಿವೆ. ಕಾಮುಕತೆ ಅಥವಾ ಇಂದ್ರಿಯತೆ ಎಂಬುದು ಈ ಕಲ್ಮಶದ ಮುಂದುವರಿದ ಭಾಗವಾಗಿದೆ, ಇದು ಇನ್ನೊಂದು ವಿಧವಾದ ಸ್ವಾರ್ಥತೆ ಅಥವಾ ಸ್ವೇಚ್ಛಾಭೋಗದ ವಿಧವಾಗಿದೆ. ಮನಸ್ಸಿನಲ್ಲಿ ಈ ಎಲ್ಲಾ ವಿಧವಾದ ಪರಿಸ್ಥಿತಿಗಳು ಇರುವುದರಿಂದ, ನೂತನ ಸೃಷ್ಟಿಯು ಅವುಗಳನ್ನು ತಿರಸ್ಕರಿಸುವ ಮಟ್ಟಿಗೆ ವಿರೋಧಿಸಬೇಕು, ಅವುಗಳಿಗೆ ವಿರೋಧವಾಗಿ ಹೋರಾಡಬೇಕು, ಅವುಗಳನ್ನು ನಾಶಮಾಡಬೇಕು. **R 3986 : 2**

## 22 ಜೂನ್

**"ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನೂ ಪ್ರೀತಿಸಬೇಕೆಂಬ ಈ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ." (1 ಯೋಹಾನನು 4 : 21)**

ಹೇಗೆ ಪೂರ್ಣ ಪ್ರೀತಿಯು ಭಯವನ್ನು ಹೊರಡಿಸಿಬಿಡುತ್ತದೋ, ಹಾಗೆಯೇ ಅದು ನಮ್ಮಲ್ಲಿರುವ ಕೆಟ್ಟ ಕೆಲಸ ಅಥವಾ ಕೆಟ್ಟ ಉದ್ದೇಶದ ತಪ್ಪು ಅನಿಸಿಕೆಗಳನ್ನು ಹೊರಹಾಕುತ್ತದೆ. ಮತ್ತೊಬ್ಬರ ಮೇಲೆ ಪ್ರೀತಿ ತುಂಬಿದ ಪರೋಪಕಾರಿ ಹೃದಯವು, ಉದ್ದೇಶಪೂರ್ವಕವಲ್ಲದ ಮಾತು ಅಥವಾ ಕ್ರಿಯೆಗಳನ್ನು ಮನ್ನಿಸುವ ಭಾವನೆಗೆ ಆದ್ಯತೆ ನೀಡುತ್ತದೆ, ಅಥವಾ ಅವರ ಸ್ನೇಹಿತರ ನಡವಳಿಕೆಯ ಮೇಲೆ ಇದೇ ರೀತಿಯ ಉತ್ತಮ ತೀರ್ಮಾನವನ್ನು ಮಾಡಲು ಬಯಸುತ್ತದೆ, ಹಿಂಸೆಯ ಉದ್ದೇಶವು ತಪ್ಪು ಭಾವಿಸಲು ಅವಕಾಶವೇ ಇಲ್ಲದಿರುವಾಗ ಮಾತ್ರ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ಆಗಲೂ ಸಹ ಹಿಂಸಿಸುವವನನ್ನು ಕುರಿತು ಉದಾರತೆಯಿಂದ ನೋಡಬೇಕು, ಆತನೂ ಸಹ ಬಿದ್ದುಹೋದ ಸ್ಥಿತಿಯಲ್ಲಿ ಪಾಲು ಹೊಂದಿದ್ದಾನೆ ಎಂದು ಮನವರಿಕೆಯಾಗುತ್ತದೆ, ಮತ್ತು ಹಾಗೆ ಅವಮಾನ ಪಡಿಸಿ, ಹಿಂಸಿಸುವವರಿಗಾಗಿ ಪ್ರಾರ್ಥಿಸುವ ಮನಸ್ಥಿತಿ ಉಂಟಾಗುತ್ತದೆ. ಯಾರೆಲ್ಲಾ ನೀತಿಗಾಗಿ ನಿಂತು, ತಮ್ಮ ವಿರೋಧಿಗಳಿಗಾಗಿ ಮತ್ತು ಹಿಂಸಿಸುವವರಿಗಾಗಿ ಪ್ರೀತಿಯ ಆತ್ಮ ಉಳ್ಳವರು ಧನ್ಯರು ಮತ್ತು ನಿಶ್ಚಯವಾಗಿ ಯಾರೆಲ್ಲಾ ಸತ್ಯ ಮತ್ತು ನೀತಿಯ ನಿಮಿತ್ತ ನಿಷ್ಠೆಯುಳ್ಳವರಾಗಿರುತ್ತಾರೋ ಅವರು ಹಿಂಸೆಗೆ ಒಳಗಾಗುವರು ಮತ್ತು ವೈಯಕ್ತಿಕ ಮೂರ್ಖತನ ಮತ್ತು ವಿಶಿಷ್ಟತೆಗಳಿಗಾಗಿ ಅಲ್ಲ. ಅಂಥವರು ಧನ್ಯರು, ಯಾಕಂದರೆ ಪರಲೋಕ ರಾಜ್ಯವು ಅವರದು. ಯಾರೆಲ್ಲಾ ನೀತಿಯ ತತ್ವಗಳಿಗಾಗಿ ಬಹಳ ನಂಬಿಗಸ್ತರಾಗಿ ಹಿಂಸೆಗೆ ಒಳಗಾದರೂ ಅವರು ಶತ್ರುಗಳನ್ನು ಪ್ರೀತಿಸುತ್ತಾರೋ ಅಂತಹವರನ್ನು ಕರ್ತನು ಹುಡುಕುತ್ತಿದ್ದಾನೆ. ಪರಲೋಕ ರಾಜ್ಯವು ಅಂಥವರಿಗಾದರೆ ಅದು ನಿಶ್ಚಯವಾಗಿಯೂ ಇಂತಹ ಚಿಕ್ಕ ಹಿಂಡುಗಾಗಿದೆ. ನಮ್ಮ ಕರೆಯುವಿಕೆ ಮತ್ತು ಆರಿಸಲ್ಪಡುವಿಕೆಯನ್ನು ನಿಶ್ಚಯಪಡಿಸಿಕೊಳ್ಳಲು–ಆ ಚಿಕ್ಕ ಹಿಂಡುಗಳಾಗಿರಲು ನಾವು ಹೆಚ್ಚು ಶ್ರದ್ಧೆಯಿಂದ ಪ್ರಯತ್ನಿಸೋಣ. **R 3736 : 2**

## 23 ಜೂನ್

**"ಆದದರಿಂದ ನೀವು ಕರೆಯಲ್ಪಟ್ಟ ಕರೆಯುವಿಕೆಗೆ ಯೋಗ್ಯರಾಗಿ ನಡೆದು ಕೊಳ್ಳಬೇಕೆಂದು ಕರ್ತನ ಸೆರೆಯವನಾದ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ**

**ಪ್ರೀತಿಯಿಂದ ಒಬ್ಬರನೊಬ್ಬರು ಸಹಿಸಿಕೊಳ್ಳಿರಿ." (ಎಫೆಸದವರಿಗೆ 4 : 1,2)**

ದೇವರು ನಮ್ಮ ಮೇಲಿಟ್ಟಿರುವ ಕರುಣೆಯನ್ನು ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಆತನ ಸ್ವಭಾವದಲ್ಲಿ ನಾವು ಶಿಕ್ಷಣ ಹೊಂದಿ ನಾವು ವಿಶ್ವಾಸದ ಮನೆಯವರೆಲ್ಲರ ಮೇಲೆ ಅತ್ಯಧಿಕವಾದ ಕರುಣೆ ಮತ್ತು ಉದಾರತೆಯನ್ನು ತೋರಿಸೋಣ. ಸಹೋದರ ಮತ್ತು ಸಹೋದರಿಯರ ಮೇಲೆ ಕರುಣೆ ತೋರಿಸಿದರೆ ಸ್ವಾಭಾವಿಕವಾಗಿ ನಾವು ಎಲ್ಲಾ ಮನುಷ್ಯರ ಮೇಲೆ ಉದಾರತೆಯನ್ನು ತೋರಿಸುತ್ತೇವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಾವು ನಮ್ಮ ಸ್ವಂತ ಬಲಹೀನತೆಗಳು ಮತ್ತು ಕಲ್ಮಶಗಳನ್ನು ನೆನಪಿಸಿಕೊಂಡು ಅರಿತಿರುವುದರಿಂದ, ಅದು ನಮಗೆ ಸಹೋದರರೊಂದಿಗೆ ಮತ್ತು ಎಲ್ಲಾ ಮಾನವಕುಲದ ಬಗ್ಗೆ ಸಹಾನುಭೂತಿಯನ್ನುಂಟು ಮಾಡುತ್ತದೆ. ಕರುಣೆ, ಉದಾರತೆ ಮತ್ತು ಸಹಾನುಭೂತಿಯಲ್ಲಿ ದೇವರು ಸಂತೋಷಪಡುತ್ತಾನೆ. ಇಂತಹ ಕೃಪೆಯ ಆತ್ಮವನ್ನು ಬೆಳೆಸುವವರು ಕರ್ತನ ದೃಷ್ಟಿಯಲ್ಲಿ ಪ್ರಿಯವುಳ್ಳವರಾಗಿರುತ್ತಾರೆ ಮತ್ತು ಅವರು ಯೇಸುವಿನ ಮಹಿಮೆಯ ಸಿಂಹಾಸನದಲ್ಲಿ ಪಾಲುಹೊಂದುವದಕ್ಕೆ ಯೋಗ್ಯರಾಗಿರುತ್ತಾರೆ ಮತ್ತು ಸಿದ್ಧರಾಗಿರುತ್ತಾರೆ; ಏಕೆಂದರೆ ಆ ಮಹತ್ತಾದ ಮೆಸ್ಸೀಯನ ರಾಜ್ಯದಲ್ಲಿ ಸಾವಿರಾರು ಮನುಷ್ಯರಿಗೆ ಕರುಣೆ ತೋರಿಸುವ ಉದ್ದೇಶದಿಂದಲೇ ರಾಜ್ಯವು ಸ್ಥಾಪಿಸಲ್ಪಡುವದು, ಆಗ ಒದಗಿಸುವ ಸಹಾಯದೊಂದಿಗೆ ಸ್ಪಷ್ಟವಾದ ಜ್ಞಾನವನ್ನು ಹೊಂದಿಕೊಳ್ಳುವರು ಮತ್ತು ದೈವಿಕ ದಯೆ ಮತ್ತು ಆಶೀರ್ವಾದವನ್ನು ಹೊಂದಿಕೊಳ್ಳುವರು. **R 5135 : 2**

## 24 ಜೂನ್

**"ನಿಮ್ಮ ಕರ್ತನು ಯಾವ ಗಳಿಗೆಯಲ್ಲಿ ಬರುತ್ತಾನೋ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರಿ." ( ಮತ್ತಾಯನು 24 : 42 )**

ಬುದ್ಧಿವಂತ ಕನ್ಯೆಯ ವರ್ಗದವರೆಲ್ಲರೂ ಈ ಸಾಮ್ಯರೂಪದಲ್ಲಿ ಆಜ್ಞಾಪಿಸಿದ ಮನೋಭಾವದಲ್ಲಿರಬೇಕು. ಮದುಮಗನು ಬರುತ್ತಿದ್ದಾನೆ ಎಂಬ ಸತ್ಯದ ಬಗ್ಗೆ ಅವರಿಗೆ ಜ್ಞಾನವಿರಬೇಕು; ಅವರು ದೀಪ ಮತ್ತು ಅದರ ತುಂಬಾ ಎಣ್ಣೆಯನ್ನು ಹೊಂದಿರಬೇಕು. ಯಾರೆಲ್ಲಾ ಸಿದ್ಧರಾಗಿರುವ ಈ ಸ್ಥಿತಿಯಲ್ಲಿರುತ್ತಾರೋ ಅಂಥವರು "ಇಗೋ, ಮದಲಿಂಗನು ಬರುತ್ತಾನೆ." ಎಂಬ ಸಂದೇಶವು ಹೊರಬರುತ್ತಿರುವಾಗ ಅದನ್ನು ಕೇಳಿ ಅವರು ಗಾಬರಿಯಾಗುವುದಿಲ್ಲ ಅಥವಾ

ಆಶ್ಚರ್ಯಪಡುವುದಿಲ್ಲ. ನಾವು ಮನುಷ್ಯಕುಮಾರನ ಪ್ರತ್ಯಕ್ಷತೆಯ [ಪರೌಸಿಯಾ] ಕಾಲದಲ್ಲಿ ಜೀವಿಸುತ್ತಿದ್ದೇವೆ–ಬುದ್ಧಿವಂತ ಕನ್ಯೆಯರು ಈಗಾಗಲೇ ಮೆರವಣಿಗೆಯ ಸಾಲಿನಲ್ಲಿ ನಿಂತು ಮದುವೆ ಮನೆಯೊಳಗೆ ಪ್ರವೇಶಿಸುತ್ತಿದ್ದಾರೆ; ಪೂರ್ಣ ಸಂಖ್ಯೆಯು ಶೀಘ್ರದಲ್ಲೇ ಕಂಡುಬರುತ್ತದೆ ಮತ್ತು ಬಾಗಿಲು ಮುಚ್ಚಲ್ಪಡುತ್ತದೆ. ಈ ಮನೋಭಾವದೊಂದಿಗೆ ಎಚ್ಚರಿಕೆಯಿಂದ ಗಮನಿಸುತ್ತಿರುವವರೆಲ್ಲರೂ, ಅವರ ಹೃದಯಗಳಲ್ಲಿ ಕರ್ತನ ಆತ್ಮವು ತುಂಬಿದವರಾಗಿ ಮದುಮಗನು ಪ್ರತ್ಯಕ್ಷನಾಗಿದ್ದಾನೆ ಎಂಬ ಮೊದಲ ಮಾಹಿತಿಯಿಂದಲೇ ಅವರು ಬಹಳ ಬೇಗನೆ ಆಕರ್ಷಿತರಾಗುತ್ತಾರೆ. ಇವರು ತಮ್ಮ ದೀಪಗಳನ್ನು ಸರಿಪಡಿಸಿಕೊಂಡು, ಸತ್ಯವೇದವನ್ನು ಪರಿಶೋಧಿಸಿ, ಅವರು ಕ್ರಿಸ್ತನು ಪ್ರಕಟವಾದ ಸತ್ಯವನ್ನು ಶೀಘ್ರವಾಗಿ ಗ್ರಹಿಸುತ್ತಾರೆ ಮತ್ತು ತಮ್ಮನ್ನು ತ್ವರಿತವಾಗಿ ಸಿದ್ಧಪಡಿಸಿಕೊಂಡು ಬುದ್ಧಿವಂತ ಕನ್ಯೆಯರೊಂದಿಗೆ ಸೇರುತ್ತಾರೆ. ಸತ್ಯದ ಈ ವಿಷಯವನ್ನು ಕುರಿತ ಪ್ರಕಟನೆಯು ನಿಜಕ್ಕೂ ಒಂದು ಪರೀಕ್ಷೆಯಾಗಿದೆ, ಕರ್ತನ ಕನ್ಯೆಯೆಂದು ಹೇಳಿಕೊಳ್ಳುವವರು ತಮ್ಮ ಬಳಿ ಪಾತ್ರೆಯಲ್ಲಿ ಎಣ್ಣೆಯನ್ನು ಇಟ್ಟುಕೊಂಡಿರುವದನ್ನು ನಿರೂಪಿಸಬೇಕಾಗಿದೆ. ಅಂದರೆ ದೀನತೆ, ತಾಳ್ಮೆ, ಪ್ರೀತಿ, ದೇವಭಕ್ತಿ, ಮದುಮಗನ ವಿಷಯಗಳಲ್ಲಿ ಆಸಕ್ತಿ–ಇಂತಹ ಸರಿಯಾದ ಮನೋಭಾವಗಳು ಇರುವುದನ್ನು ನಿರೂಪಿಸಬೇಕಾಗಿದೆ. ಇಂಥವರನ್ನು ಮಾತ್ರ ಮದುಮಗನು ಬಯಸುತ್ತಾನೆ ಅಥವಾ ಒಳಗೆ ಪ್ರವೇಶಿಸಲು ಅನುಮತಿಸುತ್ತಾನೆ. **R 3869 : 4**

## 25 ಜೂನ್

**"ಪರಿಶುದ್ಧರಿಗೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನೀವು ಹೋರಾಡಬೇಕೆಂದು ಎಚ್ಚರಿಸಿ ಬರೆಯುವದು ಅವಶ್ಯವೆಂದು ತೋಚಿತು." (ಯೂದನು 3)**

ಕೆಲವು ಸಲ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನಾವು ಹೋರಾಡುವುದೆಂದರೆ, ಸತ್ಯವೇದದ ವಿಷಯದಲ್ಲಿ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯೊಂದಿಗೆ ವಾಗ್ವಾದ ಮಾಡುವದು ಎಂದು ತೋರಬಹುದು, ಆದರೂ ಆತನು ಹಾಗೆ ಮಾಡಿದರೆ ಅದು ಆತನಲ್ಲಿರುವ ಹೆಮ್ಮೆಯನ್ನು ಸೂಚಿಸಬಹುದು. ಹೆಮ್ಮೆಯು ಸ್ವಾರ್ಥತೆಯ ಒಂದು ಭಾಗವಾಗಿದೆ; ಆದ್ದರಿಂದ ತನ್ನ ಸ್ವಂತ ಆಲೋಚನೆಗಳಿಗಾಗಿ ಹೋರಾಡುವಾಗ ಒಬ್ಬನು ಹೆಮ್ಮೆಯನ್ನು ಬೆಳೆಸಿಕೊಳ್ಳಬಹುದು. ದೇವರು ಅನುಮೋದಿಸುವ ಹೋರಾಟವೇನೆಂದರೆ, ದೇವರ ವಾಕ್ಯವು ಏನನ್ನಾದರೂ ಬೋಧಿಸಿದರೆ ಅದನ್ನು

ಶ್ರದ್ಧೆಯಿಂದ ಬಯಸುವದಾಗಿದೆ. ನಮ್ಮ ನಾಲಿಗೆಯಿಂದ ತಪ್ಪಾದ ರೀತಿಯಲ್ಲಿ ಅಥವಾ ಕೆಟ್ಟ ಮಾತುಗಳನ್ನು ಆಡುವುದರ ಮೂಲಕ ಹೋರಾಡುವವರಾಗಿರಬಾರದು. ನಮ್ಮ ಎಲ್ಲಾ ಹೋರಾಟಗಳಲ್ಲಿ–ವಿನಯ, ಸಹೋದರ–ಸ್ನೇಹ, ಪ್ರೀತಿ ಎಂಬ ಆತ್ಮದ ಫಲಗಳನ್ನು ವ್ಯಕ್ತಪಡಿಸಬೇಕು. ಆದ್ದರಿಂದ ಸರಿಯಾದ ರೀತಿಯಲ್ಲಿ ಹೋರಾಡುವವರು ಕೋಪ, ದ್ವೇಷ, ಹಗೆತನ, ಅಥವಾ ಜಗಳ–ಇಂಥವುಗಳಲ್ಲಿ ಪಾಲ್ಗೊಳ್ಳುವದಿಲ್ಲ. **R 5057 : 4**

## 26 ಜೂನ್

**"ಆತನ ಸ್ವಚಿತ್ತದ ಆಲೋಚನೆಗನುಸಾರವಾಗಿ ಎಲ್ಲಾ ಕಾರ್ಯಗಳನ್ನು ಸಾಧಿಸುವ ಆತನ ಉದ್ದೇಶದ ಮೇರೆಗೆ ಮೊದಲೇ ನೇಮಿಸಲ್ಪಟ್ಟವರಾದ ನಾವು ಆತನಲ್ಲಿ ಬಾಧ್ಯತೆಯನ್ನು ಸಹ ಹೊಂದಿದೆವು." ( ಎಫೆಸದವರಿಗೆ 1: 11 )**

ನಮಗೆ ಸ್ವಾಭಾವಿಕವಾಗಿ ಉದ್ಭವಿಸುವ ಪ್ರಶ್ನೆ ಏನೆಂದರೆ ದೇವರು ಕ್ರಿಯೆಗಳಿಗಿಂತ ನಂಬಿಕೆಯನ್ನು ಏಕೆ ಪರೀಕ್ಷಿಸಬೇಕು? ಇದಕ್ಕೆ ಉತ್ತರ ಏನೆಂದರೆ ಎಲ್ಲಾ ರೀತಿಯ ಕ್ರಿಯೆಗಳು ಆ ಕೆಲಸಗಾರನ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಮತ್ತು ಆದಾಮನ ಎಲ್ಲಾ ಮನುಕುಲವು ಅವರ ಮೊದಲ ಹೆತ್ತವರಾದ ಆದಾಮ ಮತ್ತು ಹವ್ವಳ ಬೀಳುವಿಕೆಯ ಕಾರಣದಿಂದಾಗಿ ಪರಿಪೂರ್ಣ ಕ್ರಿಯೆಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಯಾರೇ ಆಗಲಿ ಸಂಪೂರ್ಣವಾಗಿ ನೀತಿವಂತರಾಗಿರಲು, ಸಂಪೂರ್ಣವಾಗಿ ಬುದ್ಧಿವಂತರಾಗಿರಲು, ಸಂಪೂರ್ಣವಾಗಿ ಪ್ರೀತಿಯಿಂದ ಇರಲು ಸಾಧ್ಯವಿಲ್ಲ; ಈಗಿನ ನಮ್ಮ ಅಪೂರ್ಣ ಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ. ಆದ್ದರಿಂದ ದೇವರ ಜ್ಞಾನ ಮತ್ತು ಪ್ರೀತಿಯಲ್ಲಿ, ನಾವು ಸಂಪೂರ್ಣವಾಗಿ ಅಸಮರ್ಥರಾಗಿರುವದನ್ನು ತಿಳಿದು ಆ ಮಾರ್ಗಗಳಲ್ಲಿ ದೇವರು ತನ್ನ ಪರೀಕ್ಷೆಯನ್ನು ಮಾಡುವುದನ್ನು ತಪ್ಪಿಸುತ್ತಾನೆ ಮತ್ತು ಅದನ್ನು ನಂಬಿಕೆಯ ಮಾರ್ಗಗಳಲ್ಲಿ ಮಾಡುತ್ತಾನೆ–ಅದು ಆತನ ಜ್ಞಾನದಲ್ಲಿ, ಆತನ ಪ್ರೀತಿಯಲ್ಲಿ ಮತ್ತು ಆತನ ವಾಗ್ದಾನಗಳಲ್ಲಿ ಒಳಗೊಂಡಿರುತ್ತದೆ. ಇವುಗಳಲ್ಲಿ ಯಾವುದನ್ನಾದರೂ ಅನುಮಾನಿಸಿದರೆ ನಮ್ಮ ಭರವಸೆಯ ಆಧಾರವನ್ನು ದುರ್ಬಲಗೊಳಿಸುವದು. ನಾವು ಬಿದ್ದುಹೋದ ಸ್ಥಿತಿಯಲ್ಲಿದ್ದೇವೆ, ಉಳಿದ ಮನುಕುಲದವರಂತೆ ನಾವು ಸಾಯುತ್ತಿದ್ದೇವೆ ಎಂದು ನಾವು ಅರಿತುಕೊಂಡಿದ್ದೇವೆ. ದೇವರು ನಮಗೆ ಒಬ್ಬ ರಕ್ಷಕನನ್ನು ಏರ್ಪಡಿಸಿದ್ದಾನೆಂದು ದೇವರ ವಾಕ್ಯದ ಮೂಲಕ ಕೇಳಿದ್ದೇವೆ. ಆದರೆ ದೇವರು ಮತ್ತು ಕ್ರಿಸ್ತನು ಮಾಡಿದ ಎಲ್ಲದರ ಹೊರತಾಗಿಯೂ ಅವುಗಳು

ಇದ್ದಂತೆಯೇ ಮುಂದುವರಿಯುತ್ತಿದೆ ಎಂದು ನಾವು ನೋಡುತ್ತೇವೆ. ನಮ್ಮ ನಂಬಿಕೆ ನಮಗೆ ಭರವಸೆ ನೀಡುವದೇನೆಂದರೆ, ಆದಿಯಲ್ಲೇ ಅಂತ್ಯವನ್ನು ತಿಳಿದಿರುವ ದೇವರು ತನ್ನ ಸ್ವಚಿತ್ತದ ಆಲೋಚನೆಗೆ ಅನುಸಾರವಾಗಿ ಎಲ್ಲಾ ಕಾರ್ಯಗಳನ್ನು ಸಾಧಿಸುತ್ತಾನೆ ಮತ್ತು ತಕ್ಕ ಕಾಲದಲ್ಲಿ ಭೂಮಿಯಲ್ಲಿ ಆತನ ನೀತಿಯನ್ನು ಸ್ಥಾಪಿಸುತ್ತಾನೆ. **R 5115 : 2**

## 27 ಜೂನ್

**"ಆಕಾಶವು ಭೂಮಿಯ ಮೇಲೆ ಎಷ್ಟು ಉನ್ನತವೋ ನನ್ನ ಮಾರ್ಗಗಳು ನಿಮ್ಮ ಮಾರ್ಗಗಳಿಗಿಂತಲೂ ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಿಂತಲೂ ಅಷ್ಟು ಉನ್ನತವಾಗಿವೆ." ( ಯೆಶಾಯ 55 : 9 )**

ವಿಶಾಲವಾದ ಅರ್ಥವ್ಯಾಪ್ತಿಯುಳ್ಳ ಭವ್ಯವಾದ ದೈವಿಕ ಯೋಜನೆಯನ್ನು ನಾವು ಸ್ವೀಕರಿಸಿದಾಗ, ಪಾಪವನ್ನು ಜಯಿಸಿ ಈ ಲೋಕದಲ್ಲಿರುವ ಎಲ್ಲಾ ಜನರನ್ನು ದೇವರ ಒಳ್ಳೆಯತನದ ಜ್ಞಾನದಿಂದ ಮತ್ತು ಸುಧಾರಣೆಗೆ ಅನುಕೂಲಕರ ಅವಕಾಶದೊಂದಿಗೆ ಆಶೀರ್ವದಿಸುವ ದೇವರ ಅಂತಿಮ ಉದ್ದೇಶವನ್ನು ನಾವು ನೋಡಬಹುದು–ನಾವು ಯೆಹೂದ್ಯ ಯುಗದ ಆಯ್ಕೆ ಮತ್ತು ಈ ಸುವಾರ್ತಾ ಯುಗದ ಆಯ್ಕೆಯು ಈ ಲೋಕವನ್ನು ಆಶೀರ್ವದಿಸುವ ಮಹತ್ತರವಾದ ಉದ್ದೇಶವಾಗಿದೆ ಎಂದು ನೋಡುತ್ತೇವೆ. ನಂತರ ನಾವು ಹೇಗೆ ದೇವರ ಮಾರ್ಗಗಳು ಮನುಷ್ಯರ ಮಾರ್ಗಗಳಿಗಿಂತ ಉನ್ನತವಾಗಿವೆ ಮತ್ತು ಮನುಷ್ಯರ ಯೋಜನೆಗಳಿಗಿಂತ ದೇವರ ಯೋಜನೆಯು ಉನ್ನತವಾಗಿವೆ ಎಂದು ಗ್ರಹಿಸಲು ಆರಂಭಿಸುತ್ತೇವೆ ಮತ್ತು ದೇವರ ಪ್ರೀತಿಯ ಎತ್ತರ, ಆಳ, ಅಗಲ ಮತ್ತು ಉದ್ದಗಳನ್ನು ಗ್ರಹಿಸಲು ಆರಂಭಿಸುತ್ತೇವೆ ಮತ್ತು ಲೋಕವನ್ನು ಆಶೀರ್ವದಿಸುವದಕ್ಕಾಗಿ ದೇವರು ಮಾಡಿರುವ ಏರ್ಪಾಡನ್ನು ಕುರಿತು ಗ್ರಹಿಸಲು ಆರಂಭಿಸುತ್ತೇವೆ. ಮತ್ತು ಎಷ್ಟರ ಮಟ್ಟಿಗೆ ಈ ಮಹಿಮೆಯುಳ್ಳ ಚಿತ್ರಣವನ್ನು ನಾವು ನೋಡುತ್ತೇವೋ ಅಷ್ಟರ ಮಟ್ಟಿಗೆ ನಮ್ಮ ಒಳಗಿನ ಮನುಷ್ಯನು ಆತನ ಶಕ್ತಿಯಿಂದ ಬಲಗೊಳುತ್ತದೆ ಮತ್ತು ನಮ್ಮ ಸಂಕುಚಿತತೆ (ಕಿರಿದಾದ ಮನಸ್ಸು) ಮತ್ತು ಸ್ವಾರ್ಥತೆಯಿಂದ ನಾವು ಮೇಲಕ್ಕೆ ಎತ್ತಲ್ಪಡುತ್ತೇವೆ ಹಾಗೂ ಅತ್ಯಧಿಕವಾಗಿ ದೇವರ ಪ್ರಿಯ ಮಗನ ಸ್ವರೂಪವುಳ್ಳವರನ್ನಾಗಿ ಮಾಡುತ್ತದೆ, ಮತ್ತು ಪರಲೋಕದ ತಂದೆ ಸ್ವಾರೂಪ್ಯ ಉಳ್ಳವರನ್ನಾಗಿ ಮಾಡುತ್ತದೆ. ಓ! ಹಾಗಾದರೆ ನಾವು ಒಬ್ಬೊಬ್ಬರೂ

"ಅತಿ ಆಯ್ಕೆ"ಯಾದವರು[very elect] ಎಂದು ಕರ್ತನಿಂದ ಆರಿಸಲ್ಪಟ್ಟವರೆಲ್ಲರೂ– ಈಗಿನ ಚಿಕ್ಕ ಹಿಂಡನ್ನು ಆಯ್ಕೆ ಮಾಡುವ ಕೆಲಸದಲ್ಲಿ ಆತನು ಉಪಯೋಗಿಸುತ್ತಾನೆ ಮತ್ತು ಲೋಕದ ಎಲ್ಲಾ ಸಂತತಿಯನ್ನು [ಜನರನ್ನು] ಆಶೀರ್ವದಿಸುವ ಮಹತ್ತರವಾದ ಆತನ ಕೆಲಸದಲ್ಲಿ ಲೋಕದವರನ್ನು ನಂತರ ಉಪಯೋಗಿಸುತ್ತಾನೆ. ಅಂತಹ ಮಹತ್ತರವಾದ ನಿರೀಕ್ಷೆಯೊಂದಿಗೆ ನಾವು ಪರೀಕ್ಷೆಗಳು ಮತ್ತು ತೊಂದರೆಗಳನ್ನು ಸಹಿಸಿಕೊಳ್ಳಬೇಕು! **R 3964 : 4**

## 28 ಜೂನ್

**"ನೀನು ಐಶ್ವರ್ಯವಂತನಾಗುವ ಹಾಗೆ ಬೆಂಕಿಯಲ್ಲಿ ಶೋಧಿಸಿದ ಚಿನ್ನವನ್ನೂ....... ನನ್ನಿಂದ ಕೊಂಡುಕೊಳ್ಳಬೇಕೆಂದು ನಿನಗೆ ಬುದ್ಧಿ ಹೇಳುತ್ತೇನೆ." ( ಪ್ರಕಟನೆ 3 : 18 )**

ಒಬ್ಬ ಕ್ರೈಸ್ತನಿಗೆ ಒಂದು ಹೊಸ ಶೋಧನೆ ಬರುವಾಗ ಆತನು ಕರ್ತನ ಈ ಆಜ್ಞೆಯನ್ನು ಮನಸ್ಸಿಗೆ ತಂದುಕೊಂಡರೆ ಅದು ಧೈರ್ಯವನ್ನು ಉತ್ತೇಜಿಸುತ್ತದೆ, ತಾಳ್ಮೆಯಿಂದ ಸಹಿಸುವಂತೆ ಮಾಡುತ್ತದೆ ಮತ್ತು ಸ್ವಂತ–ಬಲಿಯನ್ನು ಅರ್ಪಿಸಲು ತ್ವರಿತಗೊಳಿಸುತ್ತದೆ. "ಬೆಂಕಿಯಲ್ಲಿ ಶೋಧಿಸಿದ ಚಿನ್ನ"! ಬೆಂಕಿ ಮತ್ತು ಜ್ವಾಲೆಯಿಲ್ಲದೆ ಅದನ್ನು ಹೇಗೆ ಶೋಧಿಸಲು ಸಾಧ್ಯ? ಇಲ್ಲದಿದ್ದರೆ ಅಶುದ್ಧವನ್ನು ಹೇಗೆ ತೆಗೆದುಹಾಕಲು ಸಾಧ್ಯ? ಇದಕ್ಕೆ ಬೇರೆ ದಾರಿಯೇ ಇಲ್ಲ. ಆದ್ದರಿಂದ "ಅಪೂರ್ವವಾದ ಸಂಗತಿ ನಿಮಗೆ ಸಂಭವಿಸಿತೆಂದು ಯೋಚಿಸಬೇಡಿರಿ." ಬೆಂಕಿ ಉರಿಯಲಿ; ಎಲ್ಲಾ ಅಶುದ್ಧವು ನಾಶವಾಗಲಿ; ಪ್ರಿಯರೇ, ಆ ಬೆಂಕಿಯ ಜ್ವಾಲೆಯು ಹೊತ್ತಿ ಉರಿಯುವಾಗ ಬಲಿಪೀಠದ ಮೇಲಿಂದ ನಿಮ್ಮ "ಜೀವ ಬಲಿಯನ್ನು" ಹಿಂದಕ್ಕೆ ತೆಗೆಯದಂತೆ ನೋಡಿಕೊಳ್ಳಿರಿ. ಮಹಾ ಅಕ್ಕಸಾಲಿಗನ ಕಣ್ಣುಗಳು ನಿಮ್ಮ ಮೇಲಿದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿರಿ; ಹೇಗೆ ಚಿನ್ನದ ಅಕ್ಕಸಾಲಿಗನು ತನ್ನ ಸ್ವರೂಪವನ್ನು ಅದರಲ್ಲಿ ಪ್ರತಿಬಿಂಬಿಸುವದನ್ನು ನೋಡಲು ನಿರ್ಣಾಯಕವಾಗಿರುವ ಆ ಲೋಹವನ್ನು ವೀಕ್ಷಿಸುತ್ತಾನೋ, ಹಾಗೆಯೇ ಮಹಾ ಅಕ್ಕಸಾಲಿಗನಾದ ಕರ್ತನು ನಿನ್ನನ್ನು ನೋಡುತ್ತಿದ್ದಾನೆ. ನಿಮ್ಮ ಗುಣಲಕ್ಷಣವೆಂಬ ಅಮೂಲ್ಯವಾದ ಲೋಹವು ಆತನ ಸ್ವರೂಪವನ್ನು ಹೇಗೆ ಪ್ರತಿಬಿಂಬಿಸುತ್ತದೆ ಎಂಬುದನ್ನು ಆತನು ನೋಡುತ್ತಿದ್ದಾನೆ. ಅಥವಾ ಸರಳ ಭಾಷೆಯಲ್ಲಿ ಹೇಳಬೇಕಾದರೆ ಪ್ರತಿ ಶೋಧನೆಯಲ್ಲೂ ನಮ್ಮ ಕ್ರಿಯೆಗಳನ್ನು ಯಾವ ಪ್ರಭಾವಗಳು ನಿಯಂತ್ರಿಸುತ್ತದೆ ಎಂಬುದನ್ನು ಆತನು ನೋಡುತ್ತಿದ್ದಾನೆ, ಅವನ ಪ್ರಸ್ತುತ (ಈಗ ಸಿಗುವ) ಲಾಭ

ಅಥವಾ ಲೌಕಿಕ ನೀತಿಯ ಪ್ರಭಾವವಾಗಲಿ ಅಥವಾ ವೈಯಕ್ತಿಕ ಸ್ನೇಹವಾಗಲಿ, ಲೌಕಿಕ ಪ್ರೀತಿಗಳಾದ–ಗಂಡ ಅಥವಾ ಹೆಂಡತಿ ಅಥವಾ ಮಕ್ಕಳು ಅಥವಾ ಮನೆಗಳು ಅಥವಾ ಜಮೀನುಗಳು ಅಥವಾ ಅವರು ಜನರಿಂದ ಗೌರವಿಸಲ್ಪಡುವ ಅಥವಾ ಸುಖದ (ಆರಾಮದ) ಮೇಲೆ ಪ್ರೀತಿ ಅಥವಾ ಯಾವುದೇ ವೆಚ್ಚದಲ್ಲಿ ಸಮಾಧಾನದ ಮೇಲೆ ಪ್ರೀತಿ; ಅಥವಾ ಮತ್ತೊಂದೆಡೆ ಸತ್ಯ ಮತ್ತು ನೀತಿಯ ನಗ್ನ ತತ್ವಗಳಿಂದ ನಾವು ನಿಯಂತ್ರಿಸಲ್ಪಡುತ್ತೇವಾ; ಮತ್ತು ಶ್ರಮೆ ಅಥವಾ ಪಾಡುಗಳು ಬಂದರೂ ನಾವು ಈ ತತ್ವಗಳನ್ನು ಉತ್ಸಾಹ ಮತ್ತು ಶಕ್ತಿಯಿಂದ ಕಾಪಾಡುತ್ತೇವಾ ಅಥವಾ ಶ್ರಮೆ ಮತ್ತು ಪಾಡು–ಇವೆರಡುನಾ? ಮತ್ತು ಮರಣ ಪರ್ಯಂತ ನಂಬಿಕೆಯ ಶ್ರೇಷ್ಠ ಹೋರಾಟವನ್ನು ಕಹಿಯುಳ್ಳ ಅಂತ್ಯದವರೆಗು ಅಂದರೆ ಮರಣ ಪರ್ಯಂತ ಹೋರಾಡುತ್ತೇವಾ. **R 1944 : 5**

## 29 ಜೂನ್

**"ಆದದರಿಂದ ನೀವು ನಿಮ್ಮನ್ನು ಶುದ್ಧಪಡಿಸಿಕೊಂಡು ಪರಿಶುದ್ಧರಾಗಿರಿ; ನಿಮ್ಮ ದೇವರಾಗಿರುವ ಕರ್ತನು ನಾನೇ. ನೀವು ನನ್ನ ನಿಯಮಗಳನ್ನು ಕೈಕೊಂಡು ಅವುಗಳನ್ನು ಮಾಡಬೇಕು; ನಿಮ್ಮನ್ನು ಶುದ್ಧಪಡಿಸುವ ಕರ್ತನು ನಾನೇ." (ಯಾಜಕಕಾಂಡ 20 : 7, 8)**

ಇದರರ್ಥ ನಿಮ್ಮನ್ನು ದೇವರಿಗೆ ಪ್ರತ್ಯೇಕಿಸಿಕೊಳ್ಳಿರಿ ಮತ್ತು ಆತನು ನಿಮ್ಮನ್ನು ಪ್ರತ್ಯೇಕಿಸುವನು. ಈ ಕೆಲಸದಲ್ಲಿ ನಮಗೆ ಒಂದು ಭಾಗವಿದೆ ಮತ್ತು ದೇವರಿಗೆ ಒಂದು ಭಾಗವಿದೆ. ನಾವು ದೇವರಿಗೆ ಪೂರ್ಣ ಪ್ರತಿಷ್ಠೆಯನ್ನು ಮಾಡಿದರೆ, ದೇವರು ನಮ್ಮನ್ನು ಪ್ರತಿಷ್ಠೆಪಡಿಸುವನು; ಆತನು ನಮ್ಮನ್ನು ಸ್ವೀಕರಿಸುತ್ತಾನೆ ಮತ್ತು ಆತನೇ ನಮ್ಮನ್ನು ಪ್ರತ್ಯೇಕಿಸುತ್ತಾನೆ. ಆತನು ನಮ್ಮನ್ನು ಸ್ವೀಕರಿಸಿದ್ದಾನೆಂಬುದಕ್ಕೆ ಪವಿತ್ರಾತ್ಮದಿಂದ ಭ್ರೂಣಾಂಕುರ (ಗರ್ಭಧಾರಣೆ)(Begotten of the Holy Spirit) ಹೊಂದಿದ್ದನ್ನು ನಮಗೆ ಸೂಚನೆಯಾಗಿ ನೀಡುತ್ತಾನೆ. ಅಂಥವರು ಶೀಘ್ರದಲ್ಲೇ ಹೊಸ ಮನಸ್ಸು, ಹೊಸ ಸ್ವಭಾವ, ಹೊಸ ಹೃದಯವನ್ನು ಹೊಂದಿದ್ದಾರೆಂದು ತಿಳಿದುಕೊಳ್ಳಲು ಪ್ರಾರಂಭಿಸುತ್ತಾರೆ. ಈ ವರ್ಗದವರನ್ನು ಕುರಿತು ಅಪೋಸ್ತಲನಾದ ಪೌಲನು ವಾಕ್ಯದಲ್ಲಿ ಹೀಗೆ ಹೇಳುತ್ತಾನೆ, "ದೇವರ ಚಿತ್ತವೇನಂದರೆ, ನೀವು ಶುದ್ಧರಾಗಿರಬೇಕೆಂಬದೇ"– ನೀವು ನಿಮ್ಮನ್ನೆ ಆತನಿಗೆ ಪ್ರತಿಷ್ಠೆ ಮಾಡಿಕೊಂಡಿದ್ದೀರಿ ಮತ್ತು ಆತನು ಒಪ್ಪಿಕೊಂಡು ನಿಮ್ಮನ್ನು ಪ್ರತಿಷ್ಠಿಸಿ ಆತನ ಸೇವೆಗಾಗಿ ಪ್ರತ್ಯೇಕಿಸಿದ್ದಾನೆ. **R 5877 : 3**

## 30 ಜೂನ್

**“ಶಾಂತಿದಾಯಕವಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರ ಮಾಡಲಿ.” (1 ಥೆಸಲೋನಿಕದವರಿಗೆ 5 : 23)**

ಪ್ರತ್ಯೇಕಿಸಲ್ಪಡುವಿಕೆ (ಪರಿಶುದ್ಧತೆ) ಮತ್ತು ಪ್ರತಿಷ್ಠೆ ಪದಗಳ ನಡುವೆ ಒಂದು ನಿರ್ದಿಷ್ಟ ವ್ಯತ್ಯಾಸವಿದೆ, ಆದರೂ ಕೆಲವೊಮ್ಮೆ ಅವುಗಳನ್ನು ಅದಲು ಬದಲಾಗಿ ಉಪಯೋಗಿಸಲಾಗುತ್ತದೆ. ಪ್ರತಿಷ್ಠೆ ಎಂಬ ಪದವು ಶರಣಾಗತಿಯ ಚಿಂತನೆಯನ್ನು ಹೊಂದಿದೆ. ಪ್ರತಿಷ್ಠೆ ಎಂಬುದು ಒಂದು ನಿರ್ದಿಷ್ಟ ಹೆಜ್ಜೆಯಾಗಿದ್ದು, ಇದನ್ನು ಒಂದು ನಿರ್ದಿಷ್ಟ ಕ್ಷಣದಲ್ಲಿ ತೆಗೆದುಕೊಳ್ಳಲಾಗುತ್ತದೆ. ಇದು ನಮ್ಮ ಸ್ವಂತ–ಚಿತ್ತ ಮತ್ತು ಎಲ್ಲವನ್ನು ದೇವರಿಗೆ ಸಮರ್ಪಿಸುವಂತದಾಗಿದೆ. ಯಾರೆಲ್ಲಾ ಖಂಡಿತವಾಗಿಯೂ ಆತನ ಸ್ವಂತ–ಚಿತ್ತವನ್ನು, ತಮ್ಮನ್ನೇ ಕರ್ತನಿಗೆ ಒಪ್ಪಿಸಲಿಲ್ಲವೋ ಅಂಥವರು ಎಂದಿಗೂ ನಿಜವಾದ ಪ್ರತಿಷ್ಠೆಯನ್ನು ಮಾಡಿಲ್ಲ. ದೇವರ ಜನರೆಂದು ಹೇಳಿಕೊಳ್ಳುವವರಿಗೆ ಇದಕ್ಕಿಂತ ಸ್ಪಷ್ಟವಾಗಿ ಕಾಣಲು ಯಾವುದೇ ಹೆಚ್ಚಿನ ಹೆಜ್ಜೆ ಇಡಲು ಅಗತ್ಯವಿಲ್ಲ ಎಂದು ನಾವು ನಂಬುತ್ತೇವೆ, ಮತ್ತು ಇದಕ್ಕಿಂತ ಸರಳವಾಗಿ ತಿಳಿಸಲು ಅಗತ್ಯವಿಲ್ಲ. ಪ್ರತ್ಯೇಕಿಸಲ್ಪಡುವಿಕೆ ಎಂಬ ಪದವು ಆರಂಭದಲ್ಲಿ ಈ ನಿಶ್ಚಿತ ಮತ್ತು ಸಂಪೂರ್ಣ ಪ್ರತಿಷ್ಠೆಯ ಚಿಂತನೆಯನ್ನು ಹೊಂದಿರುವದು ಮಾತ್ರವಲ್ಲದೆ, ನಮ್ಮ ಗುಣಲಕ್ಷಣದ ರೂಪಾಂತರದ ವಿಧಾನವು ಮತ್ತು ರಾಜ್ಯಕ್ಕೆ ತಯಾರಾಗಲು ಇಡೀ ಜೀವನಕಾಲ ತೆಗೆದುಕೊಳ್ಳುತ್ತದೆ ಎಂಬ ಆಲೋಚನೆ ಇರಬೇಕು. ಗುಣಲಕ್ಷಣವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಫಲಕೊಡುವವರೆಗೆ ಅದು ಒಬ್ಬ ಕ್ರೈಸ್ತನ ಜೀವನವಿಡೀ ಮುಂದುವರಿಯುತ್ತದೆ ಮತ್ತು ಅದನ್ನು ಕೊನೆಯವರೆಗೂ ನಿರ್ವಹಿಸಬೇಕು. **R 5876 : 6**

## 1 ಜುಲೈ

**“ಇಸಾಕನು ಸಾಯಂಕಾಲ ಹೊಲದಲ್ಲಿ ಧ್ಯಾನ(ಪ್ರಾರ್ಥನೆ)ಮಾಡುವದಕ್ಕೆ ಹೋದಾಗ ...” (ಆದಿಕಾಂಡ 24 : 63)**

ನಮ್ಮ ಕರ್ತನು ತನ್ನ ಜ್ಞಾನದಿಂದ, ಕಾಳಜಿಯಿಂದ ಮತ್ತು ಖಚಿತತೆಯಿಂದ, ದೇವರ ಮಗುವಿಗೆ ಎಲ್ಲಾ ವಿಷಯಗಳು ಒಳ್ಳೆಯದಕ್ಕಾಗಿ ಕೆಲಸ ಮಾಡುತ್ತದೆ ಎಂಬ ಈ ದಿನದ ಘಟನೆಗಳನ್ನು ನೆನಪಿಸಿಕೊಳ್ಳದೆ ಇರುವದು ಮತ್ತು ಪ್ರಭಾವಿತರಾಗದೆ ಇರುವದು ಹೇಗೆ ಸಾಧ್ಯ–ಅಂತವನು ದಿನವಿಡೀ ದೇವರ ಶಕ್ತಿ ಮತ್ತು ವಾಗ್ದಾನಗಳಲ್ಲಿ

ಅವಲಂಬಿತವಾದ ಮೇಲೆ, ಅವನು ಹೃದಯದಲ್ಲಿ ಕೃತಜ್ಞತೆಯಿಲ್ಲದೆ ವಿಶ್ರಾಂತಿಗೆ ತೆರಳಲು[ನಿದ್ರಿಸಲು] ಹೇಗೆ ಸಾಧ್ಯ; (ಅಂಥವನು) ಹೃದಯವನ್ನು ಬಾಗಿ, ಮೊಣಕಾಲು ಊರುವುದು, ಗೌರವಿಸುವದು ಮತ್ತು ಧನ್ಯವಾದಗಳನ್ನು ಸಲ್ಲಿಸುವುದು ಎಷ್ಟು ಸೂಕ್ತವಾಗಿದೆ. **R 799 : 3**

## 2 ಜುಲೈ

**"ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ದೇವರೊಂದಿಗೆ ಸಮಾಧಾನ ಉಂಟಾಗಿದೆ:... ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಹೆಚ್ಚಳ ಪಡುತ್ತೇವೆ: ಉಪದ್ರವದಿಂದ ತಾಳ್ಮೆಯೂ; ತಾಳ್ಮೆಯಿಂದ ಅನುಭವವೂ; ಅನುಭವದಿಂದ ನಿರೀಕ್ಷೆಯೂ ಉಂಟಾಗುತ್ತವೆಂದು ಬಲ್ಲೆವು: ಈ ನಿರೀಕ್ಷೆಯು ನಾಚಿಕೆಪಡಿಸುವುದಿಲ್ಲ; ನಮಗೆ ಕೊಡಲ್ಪಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿಯು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆ." (ರೋಮಾಪುರದವರಿಗೆ 5 : 1 , 3-5)**

ಈ ಆಲೋಚನೆಯು ಹೊಸ ಸೃಷ್ಟಿಗಳಾದ ನಮಗೆ ಬಹಳ ಅಮೂಲ್ಯವಾಗಿದೆ. "ಎಲ್ಲಾ ಗ್ರಹಿಕೆಯನ್ನೂ ಮೀರುವ ದೇವರ ಶಾಂತಿಯು [ಸಮಾಧಾನವು]" ನಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ಆಳ್ವಿಕೆ ಮಾಡಬೇಕು ಮತ್ತು ಕಾಯಬೇಕು!... ಹೊರಗಿನ ಪರಿಸ್ಥಿತಿಗಳು ಏನೇ ಇದ್ದರೂ ನಮಗೆ ಸಮಾಧಾನ ಇದೆ. ಕರ್ತನ ಜನರಿಗೆ ಶೋಧನೆಗಳು ಮತ್ತು ತೊಂದರೆಗಳೊಂದಿಗೆ ಸಂತೋಷವೂ ಉಂಟಾಗುತ್ತದೆ–ಮಳೆ ಮತ್ತು ಚಂಡಮಾರುತ ಬಂದ ನಂತರ ಸೂರ್ಯನ ಬೆಳಕು ಬರುತ್ತದೆ. ಅವರು ತಮ್ಮ ಪ್ರತಿಷ್ಠೆಗೆ ಹೊಂದಿಕೆಯಾಗುವ ಎಲ್ಲಾ ನೀತಿಯುಳ್ಳ ಸಂತೋಷಗಳನ್ನು ಆನಂದಿಸುತ್ತಾರೆ. ಅವರು ಶೋಧನೆಗಳಲ್ಲಿ ತಾಳ್ಮೆಯನ್ನು ಬೆಳೆಸಲು ಕಲಿತುಕೊಳ್ಳುತ್ತಾರೆ. ಯಾಕಂದರೆ ತಾಳ್ಮೆ ಅನುಭವವನ್ನು ನೀಡುತ್ತದೆ ಎಂದು ತಿಳಿದಿರುತ್ತದೆ ಮತ್ತು ಆ ಅನುಭವವು ಹೆಚ್ಚೆಚ್ಚಾಗಿ ನಿರೀಕ್ಷೆಯನ್ನುಂಟು ಮಾಡುತ್ತದೆ ಮತ್ತು ಅದು ನಾಚಿಕೆಪಡಿಸುವುದಿಲ್ಲ. **R 5879 : 2**

## 3 ಜುಲೈ

**"ಕರ್ತನು ತನ್ನ ಜನರಿಗೆ ನ್ಯಾಯತೀರಿಸುವನು." (ಇಬ್ರಿಯರಿಗೆ 10 : 30)**

ಕರ್ತನ ಜನರು ಸಾಕಷ್ಟು ಜಾಗರೂಕರಾಗಿ ಇರದೆ ಇರುವ ಕಾರಣ

ತೊಂದರೆಗೆ ಸಿಲುಕುತ್ತಾರೆ, ಆಗ ಕರ್ತನು ಅವರಿಗೆ ಕೆಲವು ಅನುಭವಗಳನ್ನು ನೀಡುತ್ತಾನೆ, ಅದನ್ನು ಅವರು ಸರಿಯಾಗಿ ಸ್ವೀಕರಿಸಿದರೆ, ಅದು ಅವರಿಗೆ ಒಳ್ಳೆಯದು. ಅಪೋಸ್ತಲನಾದ ಪೌಲನ ಎಚ್ಚರಿಕೆ ಮಾತುಗಳನ್ನು ನಾವು ನೆನಪಿಸಿಕೊಳ್ಳೋಣ: "ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೆ ಒಳಗಾಗುವುದಿಲ್ಲ." [1 ಕೊರಿಂಥದವರಿಗೆ 11 : 31] ಇದರರ್ಥ ನಮ್ಮನ್ನು ನಾವು ವಿಚಾರಿಕೊಳ್ಳಲು ನಿರ್ಲಕ್ಷಿಸಿದಾಗ, ಆತನು ಅದನ್ನು ನಮಗಾಗಿ ಮಾಡಬೇಕಾಗುತ್ತದೆ. ನಮ್ಮನ್ನು ತಿದ್ದುಪಡಿಸುವ ದೃಷ್ಟಿಯಿಂದ ನಮಗೆ ಶಿಕ್ಷಿಸಲಾಗುತ್ತದೆ, ಒಂದು ವೇಳೆ ನಾವು ಮರಣ ಪರ್ಯಂತ ನಂಬಿಗಸ್ತರಾಗಿದ್ದರೆ ಮತ್ತು ತಗ್ಗಿಸಿಕೊಂಡರೆ, ಆಗ ಮಾತ್ರ ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ ನಮ್ಮದಾಗಬೇಕಾದ ಪರಲೋಕದ ಪ್ರತಿಫಲ ಮತ್ತು ದಯೆಯನ್ನು ಪಡೆಯಲು ಸಾಧ್ಯ. ಒಂದು ವೇಳೆ ನಾವು ಪ್ರಸ್ತುತ [ ಈಗಿನ ಲೌಕಿಕ] ಗೌರವ ಮತ್ತು ಉನ್ನತಿಯನ್ನು ಹಂಬಲಿಸದೆ, ಸಾತ್ವಿಕವಾಗಿಯೂ ಮತ್ತು ದೀನತೆಯ ಆತ್ಮದಿಂದ ತುಂಬಿದವರಾಗಿ ಮುಂದುವರಿದರೆ, ತನ್ನದೇ ಆದ ಕರ್ತನ ಒಳ್ಳೆಯ ಸಮಯಕ್ಕಾಗಿ ಪರಿಪೂರ್ಣ ತಾಳ್ಮೆಯಿಂದ ಕಾಯಲು ಚಿತ್ತವುಳ್ಳವರಾಗಿದ್ದರೆ, ನಮ್ಮ ಉನ್ನತ ಪದವಿಯು ನಮಗೆ ಸಿಗುತ್ತದೆ; ಮತ್ತು ನಮ್ಮ ರಕ್ಷಕನ ಸಿಂಹಾಸನದಲ್ಲಿ ಮತ್ತು ಆತನ ಮಹಿಮೆಯಲ್ಲಿ ಎಂದೆಂದಿಗೂ ನಾವು ಪಾಲು ಹೊಂದುವೆವು.
**R 5890 : 5**

## 4 ಜುಲೈ

**"ಸತ್ಯದ ನಿಮಿತ್ತ ಧ್ವಜವು ಎತ್ತಲ್ಪಡುವಂತೆ ನಿನಗೆ ಭಯಪಡುವವರಿಗೆ ನೀನು ಅದನ್ನು ಕೊಟ್ಟಿದ್ದೀ." ( ಕೀರ್ತನೆಗಳು 60 : 4 )**

ನಾವು ಈ ಮಹಿಮೆಯುಳ್ಳ ಸಂದೇಶವನ್ನು ಹೇಳಬೇಕಾಗಿದೆ. ನಾವು ಅದನ್ನು ನಮ್ಮ ಕ್ರಿಯೆಗಳಲ್ಲಿ, ನಮ್ಮ ಮಾತಿನಲ್ಲಿ, ಮುದ್ರಿತ ಪುಟಗಳಿಂದ, ಕಣ್ಣಿಗೆ ಕಾಣುವಂತೆ ಚಿತ್ರಾತ್ಮಕ ಪ್ರಸ್ತುತಿಗಳ ಮೂಲಕ ಮತ್ತು ಕರ್ತನು ನಮಗೆ ಅವಕಾಶ ನೀಡುವ ಎಲ್ಲಾ ರೀತಿಯಲ್ಲಿ ಹೇಳಬೇಕು.... ನಾವು ಸುವಾರ್ತೆ ಹೇಳುವುದನ್ನು ತಡೆಮಾಡಿದರೆ, ಇದರ ಪರಿಣಾಮವೇನೆಂದರೆ ದೇವರ ಪವಿತ್ರಾತ್ಮದ ಬೆಂಕಿ ನಮ್ಮೊಳಗೆ ನಂದಿಸಲ್ಪಡುತ್ತದೆ. ದೇವರ ಸಂದೇಶವಾದ–ಸತ್ಯವು ನಮ್ಮ ಸ್ವಾಧೀನದಲ್ಲಿರುವಾಗ–ಅದರೊಂದಿಗೆ ದೊಡ್ಡ ಜವಾಬ್ದಾರಿಯನ್ನು ತರುತ್ತದೆ. ನಾವು ಅದಕ್ಕೆ ನಂಬಿಗಸ್ತರೆಂದು ಸಾಬೀತುಪಡಿಸೋಣವೇ? ಆತನು ನಮಗೆ ನೀಡಿದಂತಹ ರಕ್ಷಣೆಯ ಅದ್ಭುತ ಸಂದೇಶದ ಜ್ಞಾನ, ಆತನ ಮಹಿಮೆಯುಳ್ಳ ಯೋಜನೆ, ಅದರ

ಸಮಯಗಳು ಮತ್ತು ಕಾಲಗಳ ಬಗ್ಗೆ ನಮಗೆ ಜ್ಞಾನವನ್ನು ನೀಡಿದಕ್ಕೆ, ಆತನ ಪ್ರೀತಿಯುಳ್ಳ–ದಯೆಯ ಬಗ್ಗೆ ನಮ್ಮ ಆಳವಾದ ಮೆಚ್ಚುಗೆಯನ್ನು ನಾವು ತೋರಿಸೋಣವೇ? **R 5489 : 5**

## 5 ಜುಲೈ

**"ಇಗೋ, ಇಸ್ರಾಯೇಲನ್ನು ಕಾಪಾಡುವಾತನು ತೂಕಡಿಸುವದಿಲ್ಲ, ನಿದ್ರಿಸುವದಿಲ್ಲ." (ಕೀರ್ತನೆಗಳು 121 : 4)**

ಎಂದಿಗೂ ನಶಿಸದ ಸ್ಮರಣಾಶಕ್ತಿಯ ಬಗ್ಗೆ ಒಂದು ಕ್ಷಣ ಆಲೋಚಿಸಿರಿ; ಎಂದಿಗೂ ತಪ್ಪಾಗದ ನ್ಯಾಯತೀರ್ಪು; ವಿಫಲವಾಗುವ ಸಾಧ್ಯತೆಯೇ ಇಲ್ಲದ ಹಾಗೆ ನಿರಂತರವಾಗಿರುವ ಸಂಕಲ್ಪಗಳನ್ನು ರೂಪಿಸುವ ಮತ್ತು ಅವುಗಳು ಮುಂದಿನ ಕಾಲಗಳಲ್ಲಿ ನಿಖರವಾಗಿ ಸಕಾಲದಲ್ಲಿ ತಪ್ಪದೆ ನೆರವೇರುವ ಹಾಗೆ ಮಾಡುವ ಜ್ಞಾನ; ವಿರೋಧಿಸಬಲ್ಲ ಎಲ್ಲಾ ಸಜೀವ, ನಿರ್ಜೀವ ವಸ್ತುಗಳನ್ನೂ ಸಹ ಅಧೀನಪಡಿಸಿ, ಅವೆಲ್ಲವೂ ಆತನ ಮಹೋನ್ನತ ಸಂಕಲ್ಪವನ್ನು ನೆರವೇರಿಸಲು ಸಹಕರಿಸುವಂತೆ ಮಾಡಬಲ್ಲ ಶಕ್ತಿ ಮತ್ತು ಕೌಶಲ್ಯ, ಎಂದೂ ನಿದ್ರಿಸದ, ಸದಾ ತೆರೆದಿರುವ ಕಿವಿಗಳುಳ್ಳ ಮತ್ತು ತನ್ನ ಆದಿಪತ್ಯದ ಪಾಲನೆಯಿಂದ ವಿಶ್ರಮ ಬಯಸದೆ, ಅದರ ಎಲ್ಲಾ ಅಗತ್ಯಗಳನ್ನು ಗ್ರಹಿಸಿಕೊಳ್ಳುವ ಹಾಗೂ ವಿಶಾಲವಾದ ತನ್ನ ಆದಿಪತ್ಯದಲ್ಲಿರುವ ಎಲ್ಲದರ ಹಿತಾಸಕ್ತಿಯನ್ನು ನೆರವೇರಿಸಲು ಸಕ್ರಿಯನಾಗಿ ಸದಾ ಎಂದಿಗೂ ಅಂತ್ಯವಾಗದ, ದಣಿವರಿಯದ ಜಾಗರೂಕತೆಯಿಂದಿರುವಾತನ ಬಗ್ಗೆ ಒಂದು ಕ್ಷಣ ಆಲೋಚಿಸಿರಿ. **R 1560 : 2**

## 6 ಜುಲೈ

**"ನೀನು ದೇವರಿಗೆ ಹರಕೆಯನ್ನು ಮಾಡಿದರೆ ಅದನ್ನು ತೀರಿಸಲು ತಡಮಾಡಬೇಡ." ( ಪ್ರಸಂಗಿ 5 : 4 )**

ಯಾರೆಲ್ಲಾ ತೀರ್ಮಾನ ಮಾಡುವ, ಕರ್ತನಿಗೆ ಪ್ರತಿಜ್ಞೆ ಮಾಡುವ ಅಗತ್ಯವನ್ನು ಅರಿತಿಲ್ಲವೋ ಅಂಥವರು ಕ್ರೈಸ್ತರು ಅಭಿವೃದ್ಧಿ ಹೊಂದುವ ಮೊದಲ ತತ್ವವನ್ನು ಅರಿತಿಲ್ಲ. ಯಾರೆಲ್ಲಾ ಶತ್ರುಗಳ ದಾಳಿಯಿಂದ ಎಲ್ಲಿ ತನ್ನ ಗೋಡೆಯು ಬಹಳ ದುರ್ಬಲವಾಗಿದೆ ಎಂದು ಕಂಡುಕೊಳ್ಳುತ್ತಾರೋ, ಅವರು ಕರ್ತನ ಬಳಿ ತೀರ್ಮಾನ ಮತ್ತು ಪ್ರತಿಜ್ಞೆ ಮಾಡುವುದರ ಮೂಲಕ, ಅವರು ದುರ್ಬಲ ಸ್ಥಳಗಳನ್ನು ಕಂಡು ಹಿಡಿದಷ್ಟು ಬೇಗ ಸರಿಪಡಿಸುತ್ತಾರೆ. ಯಾರೆಲ್ಲಾ ತನ್ನ

ಸ್ವಭಾವದಲ್ಲಿರುವ ಯಾವುದೇ ರೀತಿಯಾದ ಬಲಹೀನತೆಗಳನ್ನು ಕಂಡುಕೊಳ್ಳುವುದಿಲ್ಲವೋ, ಅಂಥವರು ಕುರುಡರಾಗಿದ್ದಾರೆ ಮತ್ತು "ದೂರವಿರುವುದನ್ನು ನೋಡಲು ಸಾಧ್ಯವಿಲ್ಲ." ಯಾರೆಲ್ಲಾ ತಮ್ಮ ಬಲಹೀನತೆಗಳನ್ನು ಕರ್ತನ ಬಳಿ ತೀರ್ಮಾನದ ಮೂಲಕ, ಕರ್ತನ ಬಳಿ ಪ್ರತಿಜ್ಞೆಯ ಮೂಲಕ ಸರಿಪಡಿಸಿಕೊಳ್ಳಲು ಪ್ರಯತ್ನಿಸುವುದಿಲ್ಲವೋ, ಅಂಥವರು ತಮ್ಮ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಲು ಇನ್ನೂ ಆರಂಭಿಸಲಿಲ್ಲ. ಅವರು ಜಯಶಾಲಿಗಳಾಗಿದ್ದಾರೆ ಎಂದು ಹೇಳಬೇಕಾದರೆ ಅವರು ಗುಣಲಕ್ಷಣಗಳನ್ನು ಬೆಳೆಸಿಕೊಂಡು ಪರಿಪೂರ್ಣರಾಗಿರಬೇಕು. **R 4348 : 3**

## 7 ಜುಲೈ

**"ಅಲ್ಲಿಂದ ಅವನು(ಅಬ್ರಹಾಮನು) ಹೊರಟು ಬೇತೇಲಿನ ಪೂರ್ವದಲ್ಲಿರುವ ಬೆಟ್ಟಕ್ಕೆ ಬಂದು ತನ್ನ ಗುಡಾರವನ್ನು ಹಾಕಿ ಇಳಿದುಕೊಂಡನು... ಅಲ್ಲಿ ಕರ್ತನಿಗೆ ಬಲಿಪೀಠವನ್ನು ಕಟ್ಟಿ ಕರ್ತನ ಹೆಸರನ್ನು ಹೇಳಿಕೊಂಡನು." (ಆದಿಕಾಂಡ 12 : 8)**

ಸಂದೇಹ ಇಲ್ಲದೆ ನಾವು ಕಾನಾನ್ಯರ ಅನೈತಿಕ ಪ್ರಭಾವಗಳಿಂದ ಮುಕ್ತರಾಗುವುದು ಅವಶ್ಯವಾಗಿದೆ ಮತ್ತು ಆತನ ಜನರನ್ನು ಇವುಗಳಿಂದ ಬೇರ್ಪಡಿಸಲು ಅಬ್ರಹಾಮನು ಪರ್ವತದ ಬಳಿಯಿರುವ ಬೇತೇಲ್ ಕಡೆಗೆ ಹೊರಟನು. ಅಲ್ಲಿ ಆತನು ತನ್ನ ಮನೆಯನ್ನು ಕಟ್ಟಿದನು, ಅಲ್ಲಿ ಆತನು ಕರ್ತನಿಗೆ ಬಲಿಪೀಠವನ್ನು ಕಟ್ಟಿಸಿ ಪ್ರಾರ್ಥನೆ ಮಾಡಿದನು. ಒಂದು ಕುಟುಂಬದ ಮುಖ್ಯಸ್ಥನು ತನ್ನ ಕೈ ಕೆಳಗಿರುವವರ ಹಿತಾಸಕ್ತಿಗಳನ್ನು ಜಾಗರೂಕನಾಗಿ ಗಮನಿಸಿದರೆ, ಈ ಆಸಕ್ತಿಗಳು ಅವರ ಹಿತಕ್ಕಾಗಿ ಎಲ್ಲೆಡೆ ಅನುಕೂಲವಾಗಿರುತ್ತದೆ! ತಮ್ಮ ಮನೆಯಲ್ಲಿ ಕರ್ತನಿಗೆ ಬಲಿಪೀಠ ಇರುವುದು ಎಷ್ಟು ಅನಿವಾರ್ಯ ಎಂದು ಅದು ಅಧಿಕ ಮನವರಿಕೆಯಾಗುತ್ತದೆ. ಆಗ ವಿಮೋಚಕನ ಬಲಿಯ–ಪುಣ್ಯದ(ಅರ್ಹತೆಯ)(merit) ಮೂಲಕ ಆ ಪ್ರಾರ್ಥನೆಯ ಧೂಪವು ಮೇಲಕ್ಕೆ, ತಂದೆಯ ಬಳಿಗೆ ಹೋಗುತ್ತದೆ. **R 3936 : 3**

## 8 ಜುಲೈ

**"ಕಡೆಯವರಾದ ಇವರು ಒಂದೇ ತಾಸು ಕೆಲಸ ಮಾಡಿದ್ದಾರೆ; ಆದರೆ ದಿನವೆಲ್ಲಾ ಬಿಸಿಲಿನಲ್ಲಿ ಭಾರ ಹೊತ್ತು ಕೆಲಸ ಮಾಡಿದ ನಮಗೆ ನೀನು ಅವರನ್ನು ಸಮಮಾಡಿದ್ದೀ ಅಂದರು." ( ಮತ್ತಾಯ 20 : 12 )**

ಯಾರೆಲ್ಲಾ ಆತ್ಮದಿಂದ ಭ್ರೂಣಾಂಕುರ (ಗರ್ಭಧಾರಣೆ) ಹೊಂದಿದ್ದಾರೋ [begotten of the spirit] ಮತ್ತು ಈ ಸುವಾರ್ತಾ ಯುಗದ "ಉನ್ನತ ಕರೆ"ಯ ಬಹುಮಾನವನ್ನು ಪ್ರಶಂಸಿಸಿ ಓಟವನ್ನು ಓಡುತ್ತಾರೋ, ಇನ್ನೂ ನೀಡದೆ ಇರುವ ಏಕೈಕ ಕರೆಯ ಬಹುಮಾನಕ್ಕಾಗಿ ಕರೆಯಲ್ಪಟ್ಟಿದ್ದಾರೆ ಎಂದು ತಿಳಿದುಕೊಳ್ಳಬಹುದು; ಮತ್ತು ಸ್ವೇಚ್ಛೆಯಿಂದ ಅವನು ತನ್ನೆಲ್ಲವನ್ನು ಬಲಿ ಸಲ್ಲಿಸಿದರೆ, ಹೇಗೆ ಬೇರೆಯವರು ಅದೇ ಓಟಕ್ಕಾಗಿ ಓಡಿ ಬಹುಮಾನವನ್ನು ಹೊಂದುತ್ತಾರೋ, ಹಾಗೆಯೇ ಅವನೂ ನಿಶ್ಚಯವಾಗಿ ಬಹುಮಾನವನ್ನು ಹೊಂದಿಕೊಳ್ಳುವನು. ಅಂತಹ ಮನಸ್ಥಿತಿಯುಳ್ಳವರು ಸರಿಯಾದ ಸಮಯದಲ್ಲಿ ಪ್ರತಿಷ್ಠೆಮಾಡಿ ಅಂಗೀಕರಿಸಿಕೊಂಡು ಆತ್ಮದಿಂದ ಭ್ರೂಣಾಂಕುರ (ಗರ್ಭಧಾರಣೆ) ಹೊಂದುವುದಕ್ಕೆ ಸಾಕ್ಷಿಯಾಗಿದೆ. ಹಾಗಿರುವಾಗ ಪ್ರಿಯ ಸಹ–ಸೇವಕರೇ, ಸುಗ್ಗಿಯ ಹೊಲದಲ್ಲಿ ನೀವು ಈಗ ತಾನೆ ಪ್ರವೇಶಿಸಿದ್ದೀರೋ ಅಥವಾ ಬಹಳ ಹಿಂದೆ ಪ್ರವೇಶಿಸಿದ್ದೀರೋ, ನಾವು ಶ್ರೇಷ್ಠ ಹೋರಾಟವನ್ನು ಹೋರಾಡೋಣ; ನಾವು ಒಬ್ಬನೇ ಕರ್ತನನ್ನು ಸೇವಿಸುತ್ತೇವೆ, ಒಂದೇ ನಂಬಿಕೆಯಲ್ಲಿದ್ದೇವೆ; ಆತನ ಮರಣದಲ್ಲಿ ಒಂದೇ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ; ಅಂತವರಿಗಾಗಿ ಜೀವ ಕಿರೀಟ ಕಾಯ್ದಿರಿಸಲಾಗಿದೆ. **R 1046 : 5**

## 9 ಜುಲೈ

**"ಕರ್ತನಿಗೆ ಒಂದು ಸ್ಥಳವನ್ನು ಕಂಡುಕೊಳ್ಳುವವರೆಗೆ.... ನನ್ನ ಕಣ್ಣುಗಳಿಗೆ ನಿದ್ದೆಯನ್ನೂ ನನ್ನ ರೆಪ್ಪೆಗಳಿಗೆ ತೂಕಡಿಕೆಯನ್ನೂ ಕೊಡೆನು." ( ಕೀರ್ತನೆಗಳು 132 : 4, 5 )**

ದೇವಾಲಯವನ್ನು ನಿರ್ಮಿಸುವ ಬಯಕೆ ದಾವೀದನ ಹೃದಯದಲ್ಲಿದ್ದಂತೆ, ಈಗಿನ ಕಾಲದಲ್ಲಿ ಕರ್ತನ ವಿಚಾರದಲ್ಲಿ ಮತ್ತು ಆತನ ರಾಜ್ಯವನ್ನು ಸ್ಥಾಪಿಸುವ ವಿಚಾರದಲ್ಲಿ ಕರ್ತನ ಜನರಿಗೆ ಸ್ವಾಭಾವಿಕವಾಗಿ ಬಯಕೆ ಬರುತ್ತದೆ.... ಚಿನ್ನ, ಬೆಳ್ಳಿ, ಅಮೂಲ್ಯವಾದ (ಗುಣಲಕ್ಷಣವೆಂಬ) ಕಲ್ಲುಗಳನ್ನು ಸಂಗ್ರಹಿಸುವ ಸಮಯ ಇದಾಗಿದೆ. ಇದರಿಂದ ಕರ್ತನ ದೇವಾಲಯವನ್ನು ರೂಪಿಸಲಾಗುತ್ತದೆ. ಈಗಿನ ಸಮಯ, ಕಲ್ಲುಗಳನ್ನು ಕೆತ್ತುವದು ಮಾತ್ರವಲ್ಲ, ದೇವರ ದೇವಾಲಯದಲ್ಲಿ ಅವರ ವಿವಿಧ ಸ್ಥಾನಗಳಿಗಾಗಿ ಅವುಗಳನ್ನು ರೂಪಿಸುವ ಸಮಯವಾಗಿದೆ. ಈಗ ಸತ್ಯವೇದವು ಹೇಳುವ ಹಾಗೆ, ನಾವು ಜೀವವುಳ್ಳ ಕಲ್ಲುಗಳಾಗಿದ್ದೇವೆ, ಪವಿತ್ರಾತ್ಮದ ಮೂಲಕ ದೇವರ ವಾಸಕ್ಕಾಗಿ ಒಟ್ಟಿಗೆ ಕಟ್ಟಲ್ಪಡುತ್ತಾ ಇದ್ದೇವೆ. **R 4261 : 3**

## 10 ಜುಲೈ

**"ಸಮಾಧಾನವಾಗಿ ಮಲಗಿ ನಿದ್ರೆ ಸಹ ಮಾಡುವೆನು; ಯಾಕಂದರೆ ಕರ್ತನೇ, ನೀನೊಬ್ಬನೇ ನನ್ನನ್ನು ಸುರಕ್ಷಿತವಾಗಿ ವಾಸಿಸುವಂತೆ ಮಾಡುತ್ತೀ." (ಕೀರ್ತನೆಗಳು 4 : 8)**

ಕರ್ತನು ನಮ್ಮ ಮೇಲೆ ಅಕ್ಕರೆಯುಳ್ಳವನಾಗಿದ್ದಾನೆ ಎಂದು ನಮಗೆ ಗೊತ್ತಿರುವುದರಿಂದ, ನಮ್ಮೆಲ್ಲಾ ಚಿಂತೆಯನ್ನು ಆತನ ಮೇಲೆ ಹಾಕಲು ನಮ್ಮನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ನಾವು ಅಚಲವಾದ ಸ್ಥಿರಚಿತ್ತದಿಂದ ಮತ್ತು ದೀನತೆಯಿಂದ ನಮ್ಮ ರಕ್ಷಣೆಯನ್ನು ಭಯದಿಂದ ಮತ್ತು ನಡುಕದಿಂದ ಕಾರ್ಯಸಾಧಿಸಿದರೆ, ಕ್ರಿಸ್ತನ ಅಮೂಲ್ಯ ರಕ್ತದಿಂದ ನಾವು ಮೊದಮೊದಲು ವಿಮೋಚನೆಗೊಂಡಿರುವುದರಿಂದ ಮತ್ತು ನಂಬಿಕೆಯ ಮೂಲಕ ಅದನ್ನು ಸಾಧಿಸಲು ಸವಲತ್ತು ಹೊಂದಿರುವುದರಿಂದ, ನಮ್ಮ ಈ ಕಾಲದ ಶೋಧನೆಗಳ ಮಧ್ಯದಲ್ಲಿಯೂ ನಾವು ಬಾಡದೆ ಇರುವ ಮಹಿಮೆಯುಳ್ಳ ಕಿರೀಟವನ್ನು ಪಡೆದುಕೊಳ್ಳುತ್ತೇವೆ ಎಂಬ ಪ್ರೋತ್ಸಾಹದ ಭರವಸೆ ನಮಗುಂಟು. ಮತ್ತು ಆಶೀರ್ವದಿಸಿದ ಆಶ್ವಾಸನೆಯೊಂದಿಗೆ ನಾವು ಶೋಧನೆಗಳ ಮಧ್ಯೆ ಆದರಣೆ ಹೊಂದಿದ್ದೇವೆ. ಏಕೆಂದರೆ ದೇವರು ಅಹಂಕಾರಿಯನ್ನು ಎದುರಿಸುತ್ತಾನೆ ಮತ್ತು ಅವರೂ ಸಹ ದೇವರನ್ನು ಎದುರಿಸುತ್ತಾರೆ, ಆದರೆ ದೇವರು ದೀನರಿಗೆ ಕೃಪೆಯನ್ನು ಅನುಗ್ರಹಿಸುತ್ತಾನೆ. **R 1054 : 1**

## 11 ಜುಲೈ

**"ಕತ್ತಲಲ್ಲಿ ಬಚ್ಚಿಟ್ಟಿರುವ ಬಂಡಾರವನ್ನೂ ಗುಪ್ತ ಸ್ಥಳಗಳಲ್ಲಿ ಮರೆ ಮಾಡಿದ ನಿಧಿ ನಿಕ್ಷೇಪಗಳನ್ನೂ ನಿನಗೆ ಕೊಡುವೆನು." (ಯೆಶಾಯ 45 : 3)**

ಈ ಗುಪ್ತವಾದ ನಿಧಿ ನಿಕ್ಷೇಪಗಳನ್ನೂ ಹುಡುಕುವ ಅಥವಾ ಅವುಗಳಲ್ಲಿ ಯಾವುದನ್ನಾದರೂ ಕಂಡುಹಿಡಿಯುವ ಅವಕಾಶವನ್ನು ಪಡೆಯುವ ಮೊದಲು ನಾವು ಕ್ರಿಸ್ತನೊಳಗೆ, ಆತನ ಶರೀರದ ಸದಸ್ಯರಾಗಿ, ನಿಜವಾದ ಸಭೆಯಾಗಿ, ಬಲಿಯ ಮೂಲಕ ಬರಬೇಕು. ತದ ನಂತರ ನಾವು ಯಾಜಕರಾಗಿ ನಮ್ಮ ಬಲಿಯ ಸೇವೆಯಲ್ಲಿ ನಿಷ್ಠೆಯಿಂದ ಪ್ರಗತಿಯಲ್ಲಿರುವಾಗ, ಮಹಾ ಪ್ರಧಾನ ಯಾಜಕನ ಹೆಜ್ಜೆಯ ಜಾಡಿನಲ್ಲಿ ನಡೆಯುವಾಗ ಮತ್ತು ನಾವು ಪ್ರಗತಿಯಲ್ಲಿರುವಾಗ ಅತ್ಯಧಿಕವಾಗಿ ಈ ನಿಜವಾದ "ಕೃಪೆಯ ಐಶ್ವರ್ಯಗಳನ್ನು" ದಿನದಿಂದ ದಿನಕ್ಕೆ ಮತ್ತು ವರ್ಷದಿಂದ ವರ್ಷಕ್ಕೆ ಕಂಡುಕೊಳ್ಳುತ್ತೇವೆ........ ಅಪೋಸ್ತಲನು ಹೇಳುವದೇನೆಂದರೆ ಈ ಜ್ಞಾನ ಮತ್ತು ಕೃಪೆಯ ಸಂಪತ್ತು–(ನಮಗೆ) ಮೀಸಲಾದ ದೈವಿಕ ಒಳ್ಳೆಯ ವಿಷಯಗಳ

ತಿಳುವಳಿಕೆ ಹೊಂದಲು ಮತ್ತು ನಾವು ಈ ಆಶೀರ್ವಾದಗಳನ್ನು ನಿರೀಕ್ಷಿಸಲು ಮತ್ತು ಈಗ ಒಂದು ಅಳತೆಯಲ್ಲಿ ಆನಂದಿಸಲು ನಮಗೆ ಅನುಮತಿಸಲಾದ ದೇವರೊಂದಿಗಿನ ಐಕ್ಯತೆ–ಎಲ್ಲವೂ ಕ್ರಿಸ್ತನಲ್ಲಿ ಮರೆಯಾಗಿದೆ, "ಕ್ರಿಸ್ತನಲ್ಲಿ ಜ್ಞಾನ ತಿಳುವಳಿಕೆಯ ಎಲ್ಲಾ ನಿಕ್ಷೇಪಗಳು ಅಡಕವಾಗಿವೆ." **R 2762 : 4**

## 12 ಜುಲೈ

**"ಆದರೆ ಯೇಸುವೇ ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕ ಜೀವವನ್ನು ಪಡೆದುಕೊಳ್ಳುವಂತೆಯೂ ಇವುಗಳು ಬರೆಯಲ್ಪಟ್ಟಿವೆ." (ಯೋಹಾನ 20 : 31)**

ನಾವು ಪರೀಕ್ಷೆಯಲ್ಲಿ ನಿಂತು ನಮ್ಮನ್ನು ಈ ಲೋಕದ ಆತ್ಮ, ಶರೀರ, ಮತ್ತು ಎದುರಾಳಿಯಿಂದ ಜಯಶಾಲಿಯನ್ನಾಗಿ ಮಾಡುವ ಏಕೈಕ ನಂಬಿಕೆ ಯಾವುದೆಂದರೆ, ಸುವಾರ್ತೆಯಲ್ಲಿ ನಮ್ಮ ಮುಂದೆ ಇಡಲಾದ ನಮ್ಮ ನಿರೀಕ್ಷೆ, ಅದರಲ್ಲಿ ಮೆಸ್ಸೀಯನಾದ ಯೇಸು ಕೇಂದ್ರೀಕೃತವಾಗಿದ್ದಾರೆ. ಅದೇ ಈ ಲೋಕದ ನಿರೀಕ್ಷೆಯಾಗಿದೆ. ಆ ನಿರೀಕ್ಷೆ ಯಾವುದೆಂದರೆ, ಕ್ರಿಸ್ತನು ತನ್ನ ಅಮೂಲ್ಯವಾದ ರಕ್ತದಿಂದ ಈ ಲೋಕವನ್ನು ವಿಮೋಚಿಸಿ ತಕ್ಕ ಕಾಲದಲ್ಲಿ ಪ್ರತಿಯೊಬ್ಬ ಜೀವಿಗೂ ಅವಕಾಶ ನೀಡಿ, ಆಶೀರ್ವಾದವನ್ನು ಅನುಗ್ರಹಿಸುತ್ತಾನೆ. ಯಾರು ಬೇಕಾದರು ಈ ಜ್ಞಾನ ಮತ್ತು ವಿಧೇಯತೆಯ ಮೂಲಕ ನಿತ್ಯ ಜೀವವನ್ನು ಹೊಂದಬಹುದು ಮತ್ತು ಅವಿಧೇಯರು ಎರಡನೆಯ ಮರಣದಲ್ಲಿ ನಾಶವಾಗುವರು. ಈ ಭರವಸೆಯ ಇನ್ನೊಂದು ಭಾಗವೆಂದರೆ ಮೆಸ್ಸೀಯನಾದ ಯೇಸು ಕೇಂದ್ರೀಕೃತವಾಗಿರಲಾಗಿ, ಈಗ ಕರೆಯಲ್ಪಟ್ಟವರು ನಂಬಿಕೆಯ ಮೂಲಕ ವಿಧೇಯರಾಗುವವರು, ಮಹತ್ತಾದ ರಾಜ್ಯದಲ್ಲಿ ಯಜಮಾನನೊಂದಿಗೆ ಸಹಬಾಧ್ಯಸ್ತರಾಗಿ ಈ ಲೋಕವನ್ನು ಆಶೀರ್ವದಿಸುವರು. ಈ ಮೆಸ್ಸೀಯನ ಭರವಸೆಯ ಬಗ್ಗೆ ಅಪೋಸ್ತಲನು ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ, ಈ ರಾಜ್ಯದ ಬಗ್ಗೆ "ಆತನಲ್ಲಿ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಆತನು(ಯೇಸು) ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ." **R 3580 : 5**

## 13 ಜುಲೈ

**"ಅದರಂತೆಯೇ ನಿಮ್ಮಲ್ಲಿ ಪ್ರತಿಯೊಬ್ಬನು ಹೃದಯಪೂರ್ವಕವಾಗಿ ತನ್ನ ಸಹೋದರನ ತಪ್ಪುಗಳನ್ನು ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು." (ಮತ್ತಾಯನು 18 : 35)**

ನಿಮ್ಮ ಹೃದಯದ ಸ್ಥಿತಿಯು ಯಾವಾಗಲೂ ಕ್ಷಮಿಸುವಂಥದಾಗಿರಬೇಕು; ಅವರು ನಮ್ಮ ವಿರುದ್ಧ ಎಷ್ಟೇ ಗಂಭೀರವಾಗಿ ಅತಿಕ್ರಮಣ (ತಪ್ಪು) ಮಾಡಿದ್ದರೂ ಸಹ, ಎಲ್ಲರ ಬಗ್ಗೆ ಕ್ಷಮೆ ಮತ್ತು ಒಳ್ಳೆಯ ಇಚ್ಛೆಯನ್ನು ಹೊರತುಪಡಿಸಿ ಬೇರೆ ಯಾವ ಭಾವನೆಯನ್ನು ನಾವು ಎಂದಿಗೂ ತೋರಿಸಬಾರದು; ಮತ್ತು ಈ ರೀತಿಯಾದರೆ, ನಾವು ಕ್ಷಮೆಯನ್ನು ಹೊರ ರೀತಿಯಾಗಿ ತೋರಿಸಲು ಮತ್ತು ಪಶ್ಚಾತ್ತಾಪ ಪಡುವವರಿಗೆ ಕ್ಷಮೆಯನ್ನು ವ್ಯಕ್ತಪಡಿಸಲು ಹಂಬಲ ಮತ್ತು ಆಸಕ್ತಿ ಇರುತ್ತದೆ. ಆದ್ದರಿಂದ ನಾವು ಪಶ್ಚಾತ್ತಾಪ ಪಡುವವರ ಕಡೆಯಿಂದ ಅತ್ಯಂತ ವಿಸ್ತಾರವಾದ ಹೇಳಿಕೆಯನ್ನು ಒತ್ತಾಯಿಸಲು ಪ್ರಯತ್ನಿಸುವುದಿಲ್ಲ, ಆದರೆ ದುಂದು ವೆಚ್ಚ ಮಾಡಿದವನ ತಂದೆಯು, ತನ್ನ ಮಗನು ಪಶ್ಚಾತ್ತಾಪ ಪಟ್ಟು ದೀನತೆಯಿಂದ ಬರುತ್ತಿರುವುದನ್ನು ನೋಡಿ ಆತನ ತಂದೆಯ ಹೃದಯವು ಕರಗಿ ಆತನು ಹೊರಗೆ ಹೋಗಿ ಮಗನನ್ನು ಭೇಟಿಯಾದಂತೆ, ನಾವೂ ಸಹ ಸಹೋದರರನ್ನು ಕ್ಷಮಿಸಲು ಮತ್ತು ಪೂರ್ಣ ಐಕ್ಯವನ್ನು ಮತ್ತು ಸಹೋದರತ್ವದ ನಿಲುವಂಗಿಯನ್ನು ಧರಿಸಲು ಪ್ರೇರೇಪಿಸುತ್ತದೆ. **R 2296 : 4**

## 14 ಜುಲೈ

**"ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು." (ಯೋಹಾನನು 16 : 24)**

ಸ್ತುತಿ, ಕೃಜ್ಞತೆಯುಳ್ಳ ಆತ್ಮವನ್ನು ಬೆಳೆಸಿಕೊಳ್ಳುವದು ಮತ್ತು ದೇವರ ಎಲ್ಲಾ ಸದ್ಗುಣವುಳ್ಳ ಪ್ರೀತಿಯ ಮೆಚ್ಚುಗೆಯನ್ನು ವ್ಯಕ್ತಪಡಿಸುವುದೇ ಕ್ರೈಸ್ತರ ಸಂತೋಷವುಳ್ಳ ಜೀವನದ ರಹಸ್ಯವಾಗಿದೆ. ಅಂತಹ ಆತ್ಮವನ್ನು ಬೆಳೆಸಿಕೊಳ್ಳಬೇಕಾದ ನಾವು ಯಾವಾಗಲೂ ಆತನ ಕರುಣೆ ಮತ್ತು ಕೃಪೆಯ ಕ್ರಿಯೆಗಳನ್ನು ನಮ್ಮ ಮನಸ್ಸಿಗೆ ತರಬೇಕು; ಮತ್ತು ನಮ್ಮ ಪ್ರಾರ್ಥನೆಗಳಲ್ಲಿ ನಾವು ಆಗಾಗ ಹೇಗೆ ಆತನ ಎಲ್ಲಾ ಸದ್ಗುಣಗಳನ್ನು ನೆನಪಿಸಿಕೊಳ್ಳುತ್ತೇವೆಂದು ಆತನಿಗೆ ತಿಳಿಸಬೇಕು, ಆತನ ಪ್ರೀತಿ ಮತ್ತು ಅಕ್ಕರೆಯ ಪ್ರತಿಯೊಂದು ಹೊಸ ಪುರಾವೆಗಳು(ಸಾಕ್ಷಿಗಳು) ನಂಬಿಕೆಯನ್ನು ಹೇಗೆ ಆಳವಾಗಿ ಬೇರೂರಿಸಲು ಕಾರಣವಾಗುತ್ತದೆ ಮತ್ತು ಆತನ ಪ್ರಸನ್ನತೆಯ ಅರಿವುಂಟಾಗಿ ಕರುಣೆಯನ್ನು ಅಧಿಕ ಪೂರ್ಣವಾಗಿ ಅರಿತುಕೊಂಡಿರುವುದನ್ನು ಮತ್ತು ಹೇಗೆ ಇಂತಹ ಅನುಭವಗಳ ಮೂಲಕ ನಮ್ಮ ಪ್ರೀತಿ ಮತ್ತು ಸಂತೋಷವು ಹೆಚ್ಚಾಗುತ್ತದೆ ಎಂದು ಆತನಿಗೆ ಹೇಳುತ್ತೇವೆ. ಆತನು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಆತನನ್ನು ಪ್ರೀತಿಸುತ್ತೇವೆ; ನಾವು ಪ್ರತಿ ಸಾರಿಯೂ ಆತನ ಹೊಸ ಪ್ರೀತಿಯ ಗುರುತನ್ನು ನೋಡುತ್ತೇವೆ, ನಿಜವಾಗಿಯೂ ಮೆಚ್ಚುಗೆಯನ್ನು

ವ್ಯಕ್ತಪಡಿಸುವ ಪ್ರೀತಿ ನಮ್ಮಲ್ಲಿದ್ದರೆ, ನಮ್ಮ ಹೊಸ ಪ್ರೀತಿಯ ಗುರುತನ್ನು ನೋಡುತ್ತೇವೆ ಮತ್ತು ನಾವು ಹೆಚ್ಚು ಹೆಚ್ಚಾಗಿ ದೇವರಲ್ಲಿ ಸಂತೋಷಪಡುತ್ತೇವೆ, ಏಕೆಂದರೆ ಆತನ ಪ್ರಸನ್ನತೆಯಲ್ಲಿ ಪರಿಪೂರ್ಣ ಆನಂದವಿದೆ. ಈ ನಿಟ್ಟಿನಲ್ಲಿ ನಮ್ಮ ಕರ್ತನು: "ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು" ಎಂದು ಪ್ರೋತ್ಸಾಹಿಸಿ ಆಗಾಗ ನಾವು ದೇವರ ಬಳಿ ಪ್ರಾರ್ಥಿಸಿ, ಆತನ ದಯೆ ನಮಗೆ ದೊರೆಯಲು ಅಧಿಕವಾಗಿ ಬೇಡಿಕೊಳ್ಳಬೇಕೆಂದು ಹೇಳುತ್ತಾನೆ. **R 2031 : 5**

## 15 ಜುಲೈ

**"ಈ ಮನುಷ್ಯನ ಮೂಲಕವಾಗಿ ಪಾಪಪರಿಹಾರವು ದೊರೆಯುತ್ತದೆಂಬದು ನಿಮಗೆ ಸಾರೋಣವಾಗುತ್ತದೆ." (ಅಪೋಸ್ತಲರಕೃತ್ಯಗಳು 13 : 38)**

ಇಲ್ಲಿ ನಮ್ಮ ಕರ್ತನು "ಶರೀರದಲ್ಲಿ ಉಂಟಾಗುವುದಕ್ಕೆ" ಮೊದಲು ಪ್ರಧಾನ ದೇವದೂತನಾಗಿ ಮಾಡಿದ ಕೆಲವು ವಿಷಯವನ್ನು ಕುರಿತು ಅಪೋಸ್ತಲನು ಸೂಚಿಸುತ್ತಿಲ್ಲ, ಅಥವಾ ಆತನ ಹೊಸದಾದ ಅತ್ಯಂತ ಉನ್ನತ ಸ್ಥಿತಿಯಲ್ಲಿ "ಆತನ ತಂದೆಯೊಂದಿಗೆ ಆತನ ಸಿಂಹಾಸನದಲ್ಲಿ ಕುಳಿತುಕೊಂಡ" ಸ್ಥಿತಿಯಲ್ಲಿ ಮತ್ತು ತಂದೆಯ ದೈವಿಕ ಸ್ವಭಾವದಲ್ಲಿ ಪಾಲುಹೊಂದಿದ ನಂತರ ಮಾಡುವ ವಿಷಯವನ್ನು ಕುರಿತು ಸೂಚಿಸುತ್ತಿಲ್ಲ; ಆದರೆ "ಮನುಷ್ಯನಾದ ಕ್ರಿಸ್ತ ಯೇಸು ಎಲ್ಲರಿಗಾಗಿ ತನ್ನನ್ನೇ ಈಡು ಬಲಿಯಾಗಿ" ಕೊಟ್ಟಂತಹ ಆತನ ಕ್ರಿಯೆಗಳನ್ನು ಕುರಿತು ಉಲ್ಲೇಖಿಸಿದ್ದಾನೆ. ಆದ್ದರಿಂದ ಅಪೋಸ್ತಲನು "ಮನುಷ್ಯನ ಮೂಲಕ ಮರಣವುಂಟಾದ ಕಾರಣ ಮನುಷ್ಯನ ಮೂಲಕವೇ ಸತ್ತವರಿಗೆ ಪುನರುತ್ಥಾನ ಉಂಟಾಗುವದು" ಎಂಬ ಅಂಶವನ್ನು ಮತ್ತೊಮ್ಮೆ ಒತ್ತಿಹೇಳುತ್ತಾನೆ. ಹೌದು, ಇದೇ ಸುವಾರ್ತೆ ಘೋಷಣೆಯ ಕೇಂದ್ರವಾಗಿದೆ. ಅಂದರೆ ಮೊದಲ ಪರಿಪೂರ್ಣ ಮನುಷ್ಯನ(ಆದಾಮನ) ವಿಫಲವು (ಎರಡನೆಯ) ಮನುಷ್ಯನಾದ ಕ್ರಿಸ್ತಯೇಸುವಿನ ಬಲಿಯ ಮೂಲಕ ಸಂಪೂರ್ಣವಾಗಿ ಸರಿದೂಗಿಸಲ್ಪಟ್ಟಿದೆ ಮತ್ತು ಈ ನಿಟ್ಟಿನಲ್ಲಿ ನಮ್ಮ ಕರ್ತನು ತನ್ನ ಮಹಿಮೆಯನ್ನು ತ್ಯಜಿಸುವದು ಅವಶ್ಯವಾಗಿತ್ತು, ಈ ಲೋಕವನ್ನು ಉಂಟುಮಾಡುವುದಕ್ಕೆ ಮೊದಲು ತಂದೆಯೊಂದಿಗೆ ಆ ಮಹಿಮೆ ಇತ್ತು, ನಂತರ ಬಡವನಾಗಿ [ಅಂದರೆ ನಮ್ಮಂತೆ ಕೀಳಾದ ಸ್ವಭಾವವನ್ನು ತೆಗೆದುಕೊಳ್ಳುವ ಅರ್ಥದಲ್ಲಿದೆ–ಆದರೆ ಅದರ ಕಲಂಕಗಳಲ್ಲ, ಏಕೆಂದರೆ ಆತನು "ಪರಿಶುದ್ಧನೂ ಕೇಡು ಮಾಡದವನೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವಾತನು ಆಗಿದ್ದಾನೆ"] ; ಮತ್ತು ಈ ಮಾನವ ಸ್ವಭಾವವನ್ನು ತಂದೆಯಾದ ಆದಾಮನು ತನ್ನ ಜೀವವನ್ನು ಕಳೆದುಕೊಂಡದ್ದರಿಂದ ಅವನಿಗೂ ಮತ್ತು

ಅವನ ಸಂತತಿಗೂ ಈಡುಬಲಿಯಾಗಿ ಕೊಟ್ಟನು. ಈ ಮೂಲ ಆಧಾರದ ಮೇಲೆ ಕೃಪೆಯ ಪ್ರತಿ ಪ್ರಸ್ತಾಪವನ್ನು ಸತ್ಯವೇದವು ಪ್ರಸ್ತುತಪಡಿಸುತ್ತದೆ. ಮತ್ತು ಈಗ, ವಿಮೋಚನಾ ಕಾರ್ಯದಲ್ಲಿ ತಂದೆಯ ಪ್ರತಿನಿಧಿಯಾಗಿದ್ದವನು, ದೈವಿಕ ದಯೆಗೆ ಹಿಂತಿರುಗಲು ಸಾಕಷ್ಟು ಅವಕಾಶಗಳೊಂದಿಗೆ ತಂದೆಯ ಪ್ರತಿನಿಧಿಯಾಗಿ ವಿಮೋಚನೆ ಹೊಂದಿದ ಎಲ್ಲರನ್ನೂ "ಆಶೀರ್ವದಿಸುವ" ಕೆಲಸದಲ್ಲಿ ತೊಡಗಿಸುವನು−−ಇದರ ಮೊದಲ ಹೆಜ್ಜೆಯಾಗಿ ಪಾಪಗಳ ಕ್ಷಮಾಪಣೆಯಾಗಿರುವದು.. **R 2150 : 1**

## 16 ಜುಲೈ

**"ನಾವು ಬಹು ಸಂಕಟಗಳನ್ನು ಅನುಭವಿಸಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಹೇಳಿ ನಂಬಿಕೆಯಲ್ಲಿ ಸ್ಥಿರವಾಗಿರಬೇಕೆಂದು ಅವರನ್ನು ಎಚ್ಚರಿಸಿದನು." (ಅಪೋಸ್ತಲರಕೃತ್ಯಗಳು 14 : 22)**

ನಮ್ಮ ಮೇಲಿನ ವಾಕ್ಯದಲ್ಲಿ "ಸಂಕಟ" ಎಂಬುದು ಲ್ಯಾಟಿನ್ ಭಾಷೆಯಾದ ಟ್ರಿಬ್ಯುಲಮ್‌ನಿಂದ ತೆಗೆಯಲಾಗಿದೆ. ಇದು ಗೋಧಿಯನ್ನು ಶುದ್ಧೀಕರಿಸಲು ಹಳೆಯ ಕಾಲದಲ್ಲಿ ಬಳಸಲಾಗುವ ರೋಲರ್ ಅಥವಾ ಕಾಳು ಒಕ್ಕುವ ಯಂತ್ರದ ಹೆಸರು, ಅದರಿಂದ ಹೊರಗಿನ ಹೊಟ್ಟನ್ನು ತೆಗೆದು ಹಾಕಲಾಗುತ್ತದೆ. ಸತ್ಯವೇದದಲ್ಲಿ ಗೋಧಿಗೆ ಸೂಚಿಸಲ್ಪಟ್ಟಿರುವ ಕರ್ತನ ಪ್ರತಿಷ್ಠಿತ ಜನರಿಗೆ ಅನ್ವಯಿಸಿದಾಗ ಈ ಆಲೋಚನೆಯು ಎಷ್ಟು ಸೂಕ್ತವಾಗಿದೆ. ನಮ್ಮ ಹೊಸ ಸ್ವಭಾವಗಳು ನಿಜವಾದ ಧಾನ್ಯ, ತಿರುಳು ಆಗಿದೆ; ಆದರೂ ಈ ನಿಧಿ ಅಥವಾ ಅಮೂಲ್ಯವಾದ ಭಾಗವು ಲೌಕಿಕ ಪರಿಸ್ಥಿತಿಗಳ ಹೊಟ್ಟುಗಳಿಂದ ಆವೃತವಾಗಿದೆ [ಮರೆಯಾಗಿದೆ] ಮತ್ತು ಗೋಧಿಯು "ಕಣಜ"ದಲ್ಲಿ ಸೇರಲು ಮತ್ತು ಉಪಯುಕ್ತವಾಗಲು ಸರಿಯಾಗಿ ಸಿದ್ಧಗೊಳ್ಳಲು, ಪ್ರತಿಯೊಂದು ಗೋಧಿಯು[ಧಾನ್ಯಗಳು] ಆ ಸಂಕಟಗಳೊಳಗೆ ಪ್ರವೇಶಿಸಿ ಆ ಗುಣಗಳನ್ನು ಬೇರ್ಪಡಿಸಲು ಅವಶ್ಯವಾಗಿದೆ. ಅದು ಬೇರ್ಪಡಿಸುವವರೆಗೂ ಭವಿಷ್ಯದ ಸೇವೆಗೆ ಕರ್ತನು ನಮ್ಮನ್ನು ಕರೆದದಕ್ಕೆ ಅರ್ಹತೆ ಇಲ್ಲದವರಾಗಿರುತ್ತೇವೆ. ನಮ್ಮ ಸ್ವಂತ ಅಪೂರ್ಣತೆಯನ್ನು ಕುರಿತು ಎಷ್ಟರ ಮಟ್ಟಿಗೆ ನಮಗೆ ಮನವರಿಕೆಯಾಗುತ್ತದೋ, ಮತ್ತು ಎಷ್ಟರ ಮಟ್ಟಿಗೆ ನಮ್ಮ ಅಪೂರ್ಣತೆಯನ್ನು ಕುರಿತು ಹಾಗೂ ದೇವರ ಪರಿಪೂರ್ಣ ಚಿತ್ತವನ್ನು ಕುರಿತು ಮನವರಿಕೆಯಾಗುತ್ತದೋ, ಅಷ್ಟರ ಮಟ್ಟಿಗೆ ನಾವು ಸಂಕಟಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವುದಕ್ಕೆ ಶಕ್ತರಾಗುತ್ತೇವೆ ಮತ್ತು ಬೋಧಕನು ನಮ್ಮ ಮೇಲೆ ಬರಬೇಕೆಂದಿರುವ ಎಲ್ಲಾ ಸಂಕಟಗಳ ಮಧ್ಯದಲ್ಲಿ ಒಂದು ನಿರ್ದಿಷ್ಟ ರೀತಿಯ ಸಂತೋಷದಿಂದ ಸಹಿಸಿಕೊಳ್ಳಲು ಸಹ ಶಕ್ತರಾಗುತ್ತೇವೆ. "ಅದು ಮಾತ್ರವಲ್ಲದೆ

ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಹೆಚ್ಚಳ ಪಡುತ್ತೇವೆ." **R 2213 : 5**

## 17 ಜುಲೈ

**"ನನ್ನ ಆಲಯದಲ್ಲಿ ಆಹಾರವಿರುವ ಹಾಗೆ ಹತ್ತನೇ ಪಾಲುಗಳನ್ನೆಲ್ಲಾ ಬೊಕ್ಕಸದ ಮನೆಯಲ್ಲಿ ತನ್ನಿರಿ; ಇದರಿಂದ ನನ್ನನ್ನು ಪರೀಕ್ಷಿಸಿರಿ; ನಾನು ನಿಮಗೆ ಆಕಾಶದ ಕಿಟಕಿಗಳನ್ನು ತೆರೆದು ಸಾಕಾಗುವಷ್ಟಕ್ಕಿಂತ ಹೆಚ್ಚಾಗುವಷ್ಟು ಆಶೀರ್ವಾದ ನಿಮಗೆ ಸುರಿಸದಿರುವೆನೇ? ಎಂದು ಸೈನ್ಯಗಳ ಕರ್ತನು ಹೇಳುತ್ತಾನೆ." (ಮಲಾಕಿಯ 3 : 10)**

ಪ್ರಿಯ ಸ್ನೇಹಿತರೇ, ನಮ್ಮ ಬಲಿಯ ಒಡಂಬಡಿಕೆಗೆ ನಾವು ಎಷ್ಟರ ಮಟ್ಟಿಗೆ ನಂಬಿಗಸ್ತರಾಗಿದ್ದೇವೆ ಮತ್ತು ಅದನ್ನು ಒಂದು ದಿನ ಅಥವಾ ಒಂದು ವರ್ಷದ ಬಲಿ ಮಾತ್ರವಲ್ಲ ಆದರೆ ಅದು "ಮರಣಪರ್ಯಂತ" ಎಂದು ನೆನಪಿಟ್ಟುಕೊಳ್ಳುವದು ನಮ್ಮ ಜವಾಬ್ದಾರಿಯಾಗಿದೆ. ಇನ್ನು ಸ್ವಲ್ಪ ಸಮಯದಲ್ಲಿ ಶೋಧನೆಗಳು ಮುಗಿದು ಹೋಗುತ್ತದೆ. ಆದರೆ ಆ ಸ್ವಲ್ಪ ಸಮಯ ಮುಗಿಯುವವರೆಗೆ, ನಾವು ಶೋಧನೆಯ ಕಾಲದಲ್ಲಿದ್ದೇವೆ ಮತ್ತು ಅದು ನಾವು ಹುಡುಕುವ [ಎದುರುನೋಡುವ] ಮಹಿಮೆಯುಳ್ಳ ದಯೆಗಳಿಗೆ ಅರ್ಹರೋ ಅಥವಾ ಅನರ್ಹರೋ ಎಂದು ಸಾಬೀತು ಪಡಿಸುತ್ತದೆ. ನಾವು ಅರ್ಹರಾದರೆ ಅದರಿಂದ ನಮಗೆ ಪ್ರಧಾನವಾದ ಆಶೀರ್ವಾದ ಮತ್ತು ಸಹಬಾಧ್ಯಸ್ಥಿಕೆ ಉಂಟಾಗುತ್ತದೆ. ನಾವು ಅದನ್ನು ಪ್ರಶಂಸಿಸಿದರೆ, ಅದನ್ನು ಕರ್ತನ ಮಾರ್ಗದಲ್ಲಿ ಹುಡುಕೋಣ, ನಮ್ಮ ಜೀವಿತದಲ್ಲಿ ಬೇರೆ ವಿಚಾರಗಳು ಎಷ್ಟರಮಟ್ಟಿಗೆ ಇವೆ ಎಂದು ನೋಡಿ ಅದನ್ನು ಕರ್ತನಿಗೆ ಸಲ್ಲಿಸೋಣ ಮತ್ತು ಕರ್ತನು ಅದನ್ನು ಅಂಗೀಕರಿಸುತ್ತಾನೆ. ಆದರೆ ನಮ್ಮ ಕ್ರಿಯೆಗಳ ಅರ್ಹತೆಯ ಮೂಲಕ ಅಥವಾ ಬಲಿಯ ಮೂಲಕ ಅಲ್ಲ, ಆದರೆ ಕ್ರಿಸ್ತನ ಅರ್ಹತೆಯ [ತ್ಯಾಗಬಲಿಯ] ಮೂಲಕವಾಗಿ ಅಂಗೀಕರಿಸುತ್ತಾನೆ. ನಾವು ಹಾದುಹೋದ ದಿನಗಳು ಮತ್ತು ಗಂಟೆಗಳು ನಾವು ಪ್ರತಿಷ್ಟೆ ಮಾಡಿದ ರೀತಿಯಲ್ಲೇ ಇದೆಯೇ ಎಂದು ಗಮನಿಸೋಣ. ದೈವಿಕ ವಾಕ್ಯದಲ್ಲಿ ಗುರುತಿಸಿರುವಂತೆ ಕ್ಷಣಗಳು ಮತ್ತು ದಿನಗಳನ್ನು ಎಷ್ಟರ ಮಟ್ಟಿಗೆ ಕೆಲವು ಸ್ವಾರ್ಥ ರೀತಿಯಲ್ಲಿ ಕಳೆದಿದ್ದೇವೆ, ಅಥವಾ ಕರ್ತವ್ಯಕ್ಕೆ ಸಮಂಜಸವಾದ ಅವಶ್ಯಕತೆಗಳನ್ನು ಮೀರಿ ಇತರರ ವಿಷಯದಲ್ಲಿ ಸಮಯವನ್ನು ಕಳೆದಿದ್ದೇವಾ ಎಂದು ಗಮನಿಸೋಣ. ನಾವು ಕರ್ತನಿಗೆ ಮಾಡಿದ ಪ್ರತಿಜ್ಞೆಯನ್ನು ಎಷ್ಟರ ಮಟ್ಟಿಗೆ ನಿರ್ವಹಿಸಿದ್ದೇವೆ ಎಂದು ನೋಡೋಣ; ದೈವಿಕ ಸೇವೆಯಲ್ಲಿ ನಾವು ಯಾವ ಸಮಯ ಅಥವಾ ಪ್ರಭಾವ ಅಥವಾ ಹಣವನ್ನು ಬಳಸುತ್ತಿದ್ದೇವೆ ಮತ್ತು ಇದು ಒಟ್ಟಾರೆಯಾಗಿ ಯಾವ ಪ್ರಮಾಣವನ್ನು ಹೊಂದಿದೆ ಎಂಬುದನ್ನು ನಾವು ಗಮನಿಸೋಣ. **R 3685 : 5**

## 18 ಜುಲೈ

**“ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುವವರೇ ಧನ್ಯರು.” (ಲೂಕನು 11 : 28)**

ಕರ್ತನ ವಾಕ್ಯವನ್ನು ಕೇಳುವದು ನಮಗೆ ಮುಖ್ಯವಾಗಿದೆ, ನಾವು ದೇವರ ಆಜ್ಞೆಗಳನ್ನು ಚೆನ್ನಾಗಿ ಅನುಸರಿಸುವಂತೆ ಸತ್ಯವೇದವನ್ನು ಹುಡುಕಬೇಕು, ಆಗ ನಮ್ಮಲ್ಲಿರುವ ನಿರೀಕ್ಷೆಗೆ ಏನು ಕಾರಣವೆಂದು ಕೇಳುವವನಿಗೆ ಉತ್ತರವನ್ನು ನೀಡಲು ನಮಗೆ ಸಾಧ್ಯವಾಗುತ್ತದೆ ಮತ್ತು ನಮಗೆ ಇದು ಎಲ್ಲಕ್ಕಿಂತ ಹೆಚ್ಚು ಅಗತ್ಯವಿದೆ. ನಾವು ವಾಕ್ಯಕ್ಕೆ ವಿಧೇಯರಾಗಬೇಕು, ನಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ಅದನ್ನು ಅನುಸರಿಸಬೇಕು. ನಿಜ, ಪರಿಪೂರ್ಣತೆಯ ಬೇಡಿಕೆಗಳಿಗೆ ತಕ್ಕ ಹಾಗೆ ಅನುಸರಿಸಲು ಸಾಧ್ಯವಿಲ್ಲ, ಏಕೆಂದರೆ ದೇವರ ಪ್ರಮಾಣವು ಪರಿಪೂರ್ಣವಾಗಿದೆ, ಆದರೆ ನಾವು ಹೃದಯದ ಪರಿಪೂರ್ಣ ಮನೋಭಾವವನ್ನು ಹೊಂದಬಹುದು ಮತ್ತು ಇದಕ್ಕಿಂತ ಕಡಿಮೆಯಾದದ್ದನ್ನು ಕರ್ತನು ಅಂಗೀಕರಿಸುವುದಿಲ್ಲ. ನಾವು ಕರ್ತನಿಗೂ ಮತ್ತು ಸ್ವಲ್ಪ ಮಟ್ಟಿಗೆ ಇತರರಿಗೂ ನಮ್ಮ ಜೀವನದ ಪ್ರಯತ್ನವು ನೀತಿಯ ದಿಕ್ಕಿನಲ್ಲಿ ಮತ್ತು ಪವಿತ್ರಾತ್ಮದ ಎಲ್ಲಾ ಫಲಗಳು ಮತ್ತು ಕೃಪೆಗಳ ದಿಕ್ಕಿನಲ್ಲಿ ಹೋಗಲು ಪ್ರಯತ್ನಿಸುತ್ತಿದ್ದೇವೆಂದು ತೋರಿಸಬಹುದು. ನಾವು ಎಲ್ಲಾ ಜ್ಞಾನ ಮತ್ತು ಉತ್ಸಾಹವನ್ನು ಹೊಂದಿದ್ದು, ವಿಧೇಯತ್ವದ ಆತ್ಮವು ಇಲ್ಲದಿದ್ದರೆ, ಪ್ರೀತಿಯ ಆತ್ಮದ ಕೊರತೆ ಇದೆ ಎಂದು ಸಾಕ್ಷಿಯಾಗುತ್ತದೆ ಮತ್ತು ದೈವಿಕ ದಯೆಯನ್ನು ಹೊಂದಲು ಅನರ್ಹರೆಂದು ನಮ್ಮನ್ನು ಸಾಬೀತುಪಡಿಸುತ್ತದೆ ಮತ್ತು ನಾವು ಮೇಲಿನ ಸಂದೇಶವನ್ನು [ವಾಕ್ಯವನ್ನು] ಸರಿಯಾಗಿ ಅಭ್ಯಾಸ ಮಾಡದೆ ಹೋದರೆ ವಾಗ್ದಾನ ಮಾಡಿರುವ ಆಶೀರ್ವಾದಗಳಿಗೆ ನಾವು ಅನರ್ಹರೆಂದು ಸಾಬೀತಾಗುತ್ತದೆ. **R 3678 : 4**

## 19 ಜುಲೈ

**“ದೇವರು... ನಮ್ಮನ್ನು ಹೊಸ ಒಡಂಬಡಿಕೆಗೆ ಸಮರ್ಥರಾದ ಸೇವಕರನ್ನಾಗಿ ಮಾಡಿದ್ದಾನೆ.” (2 ಕೊರಿಂಥದವರಿಗೆ 3 : 5 , 6)**

ನಮ್ಮ ಸ್ಥಾನವು ದೇವರ ರಾಯಭಾರಿಗಳಾಗಿದ್ದು, ಮನುಷ್ಯರಿಗೆ ದೇವರ ಕರುಣೆ ಮತ್ತು ಹೊಸ ಒಡಂಬಡಿಕೆಯ ಏರ್ಪಾಡನ್ನು ಕುರಿತು ವಿವರಿಸುವುದಾಗಿದೆ, ಅವರು ಬಯಸಿದರೆ ಎಲ್ಲರೂ ಆಶೀರ್ವದಿಸಲ್ಪಟ್ಟು ಗುಣಮುಖರಾಗುತ್ತಾರೆ [ಮರಳಿ ಪಡೆದುಕೊಳ್ಳುತ್ತಾರೆ]. ಯಾರೆಲ್ಲಾ ನಮ್ಮ ಸಂದೇಶವನ್ನು ಸಂತೋಷದಿಂದ

ಸ್ವೀಕರಿಸುತ್ತಾರೋ ಮತ್ತು ಪಾಪದಿಂದ ತಿರುಗಿ [ಮಾನಸಾಂತರ ಹೊಂದಿ] ನಮ್ಮ ಕರ್ತನನ್ನು ಹಿಂಬಾಲಿಸುತ್ತಾರೋ, ಅವರೆಲ್ಲರನ್ನೂ ಕ್ರಿಸ್ತನ ಶರೀರದ ಸದಸ್ಯರಾಗಲು, ಮೆಸ್ಸೀಯನ ಶರೀರವಾಗಲು, ಮಧ್ಯಸ್ತನ ಶರೀರವಾಗಲು, ಮಹಾ ಪ್ರವಾದಿಯ ಶರೀರವಾಗಲು, ಮಹಾಯಾಜಕನ ಶರೀರವಾಗಲು, ಸಾವಿರ ವರ್ಷ ಯುಗದ ಮಹಾರಾಜನ ಶರೀರವಾಗಲು ಅವರೆಲ್ಲರನ್ನೂ ಆಹ್ವಾನಿಸಬಹುದು. ಆದ್ದರಿಂದ ನಾವು ಹೊಸ ಒಡಂಬಡಿಕೆಯ ಸೇವಕರಾಗಿದ್ದೇವೆ, ಈಗ ಲೋಕದವರು ಇನ್ನೂ ಆ ಹೊಸ ಒಡಂಬಡಿಕೆಯ ಅಡಿಯಲ್ಲಿ ಇಲ್ಲದಿದ್ದರೂ, ಆ ಹೊಸ ಒಡಂಬಡಿಕೆಯು ಮುಂದೆ ಕೊಡುವ ವಾಗ್ದಾನವಾಗಿರುವುದರಿಂದ, ಅದರ ಹಿತದೃಷ್ಟಿಯಿಂದ, ಅದರ ಸೇವೆಗಾಗಿ ನಮ್ಮ ಜೀವವನ್ನು ಬಲಿಯಾಗಿ ಅರ್ಪಿಸುತ್ತಿದ್ದೇವೆ. ನಾವು ನಮ್ಮ ಜೀವವನ್ನು ಬಲಿಯಾಗಿ ಅರ್ಪಿಸುವದು ಮಾತ್ರವಲ್ಲದೆ, ಅಭಿಷೇಕಿಸಲ್ಪಟ್ಟವನ ಶರೀರದ ಸಹ–ಸದಸ್ಯರನ್ನು ಹುಡುಕುತ್ತಿದ್ದೇವೆ ಮತ್ತು ಅವರು ತಮ್ಮ ಜೀವಗಳನ್ನು ಸಮರ್ಪಿಸುವದಕ್ಕೆ ಸಹಾಯ ಮಾಡುತ್ತಿದ್ದೇವೆ, ಯಾವ ಭರವಸೆಯಲ್ಲಿ ಅಂದರೆ ಈ ಉತ್ತಮ ಬಲಿಗಳು ಬೇಗನೇ ಪೂರ್ಣಗೊಳ್ಳುತ್ತದೆ ಮತ್ತು ನಮ್ಮ ಮಹಿಮೆಯುಳ್ಳ ತಲೆಯ(ಕ್ರಿಸ್ತನ) ಮೂಲಕ ಅದು ಅವರಿಗೆ ಅನ್ವಯವಾಗುತ್ತದೆ ಮತ್ತು ನಾವು ಕ್ರಿಸ್ತನ ಮಹಿಮೆಯಲ್ಲಿ ಪಾಲುಹೊಂದುವೆವು. **R 4332 : 2**

## 20 ಜುಲೈ

**"ಹೀಗೆ ನಾನು ದೇವರ ಸಹಾಯವನ್ನು ಹೊಂದಿ ಈ ದಿವಸದವರೆಗೆ ಜೀವದಿಂದಿದ್ದೇನೆ..." (ಅಪೋಸ್ತಲರ ಕೃತ್ಯಗಳು 26 : 22)**

ತನ್ನ ಜೀವ ಸಂರಕ್ಷಣೆಯನ್ನು ಕುರಿತು ಉಲ್ಲೇಖಿಸುವಾಗ ಅಪೋಸ್ತಲನು ಯೆರೂಸಲೇಮಿನ ದಂಡಿನ ಪ್ರಧಾನ ನಾಯಕನಾದ ಲಿಸಿಯಾಸನಿಗೆ ಮನ್ನಣೆ ನೀಡುವುದಿಲ್ಲ, ಆದರೆ ಅವನು ಮಾತನಾಡುವ ಸಮಯದವರೆಗೆ ಅವನು ಜೀವದಿಂದ ಉಳಿದಿದ್ದು ದೇವರ ಸಹಾಯದಿಂದಲೇ ಎಂದು ಘೋಷಿಸುತ್ತಾನೆ...... ಎಲ್ಲಾ ಕರ್ತರ ಜನರಿಗೆ ಇದರಲ್ಲಿ ಒಂದು ಉತ್ತಮ ಪಾಠವಿದೆ. ಕರ್ತನ ಸಂತರು [ಪರಿಶುದ್ಧರು] ಆತನ ಆರೈಕೆಯ ವಿಶೇಷ ವ್ಯಕ್ತಿಗಳಾಗಿದ್ದಾರೆಂದು ಮತ್ತು ಆತನಿಗೆ ಭಯಪಡುವವರ ಸುತ್ತಲೂ ಕರ್ತನ ದೂತನು ಇಳುಕೊಂಡು ಅವರನ್ನು ಕಾಪಾಡುತ್ತಾನೆ ಎಂಬುವುದನ್ನು ಕಡೆಗಣಿಸಿ "ಅದೃಷ್ಟ" ಅಥವಾ "ಅವಕಾಶ" ಅಥವಾ ಮಾನವ ಸಾಧನಕ್ಕೆ ಮನ್ನಣೆ ನೀಡುವುದು ಎಷ್ಟು ಸೂಕ್ತವಾಗಿದೆ? **R 3197 : 3**

## 21 ಜುಲೈ

**“ಕೊಂಬೆಯು ದ್ರಾಕ್ಷೇಯಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲ ಕೊಡಲಾರದೋ ಹಾಗೆಯೇ ನೀವೂ ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ.” (ಯೊಹಾನನು 15 : 4)**

ನಮ್ಮ ಕರ್ತನು ನಮಗೆ ಮಾಹಿತಿ ನೀಡುವುದೇನೆಂದರೆ ನಾವು ಅಧಿಕ ಫಲಕೊಡುವದು ಅದು ನಮ್ಮ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿಲ್ಲ, ಮತ್ತು ನಾವು ಆತನಲ್ಲಿ ನೆಲೆಗೊಂಡಿದ್ದು ಫಲಕೊಡುವ ಕೊಂಬೆಗಳಾಗಿದ್ದರೂ ಸಹ, ನಮ್ಮ ಮನಸ್ಸಿನ ಮುಂದೆ ಸರಿಯಾದ ಆದರ್ಶಗಳನ್ನು ಹೊಂದುವ ಮೂಲಕ ಮತ್ತು ಅವು ಕೈಗೂಡುವುದನ್ನು ಶ್ರದ್ಧೆಯಿಂದ ಬಯಸುವುದರ ಮೂಲಕ ಫಲದ ಗುಣಮಟ್ಟ ಮತ್ತು ಪ್ರಮಾಣವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಆದ್ದರಿಂದ ಆತನು ಹೀಗೆ ಹೇಳುತ್ತಾನೆ, “ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ನಿಮಗೆ ಬೇಕಾದದ್ದನ್ನು ಬೇಡಿಕೊಳ್ಳಿರಿ, ಆಗ ನಿಮಗೆ ಅದು ದೊರೆಯುವದು.” ಇಲ್ಲಿ ನಮಗೆ ನೀಡಿರುವ ಮಾಹಿತಿ ಏನೆಂದರೆ ಪರಲೋಕದ ಕೃಪಾ ಸಿಂಹಾಸನದಲ್ಲಿರುವ ತಂದೆಯ ಬಳಿ ನಮ್ಮ ಬಯಕೆ ಮತ್ತು ಬೇಡಿಕೆಯ ಮೂಲಕ ನಾವು ಅಧಿಕ ಅಧಿಕವಾಗಿ ದ್ರಾಕ್ಷೆಯ ಬಳ್ಳಿಯ ಜೀವರಸ ಎಂಬುವ ಪವಿತ್ರಾತ್ಮವನ್ನು ಹೊಂದುವೆವು ಮತ್ತು ಆತ್ಮದ ಫಲಗಳನ್ನು ಅಭಿವೃದ್ಧಿಪಡಿಸಲು ಶಕ್ತರಾಗಬಹುದು. ಇಲ್ಲಿ ಏನೂ ಲೌಕಿಕ ಒಳ್ಳೆಯ ವಿಷಯಗಳನ್ನು ಹುಡುಕುವುದನ್ನು ಕುರಿತು ಸೂಚಿಸುತ್ತಿಲ್ಲ ಎಂದು ಗಮನಿಸಬಹುದು. ಇವುಗಳನ್ನು ಸಂಪೂರ್ಣವಾಗಿ ಕರ್ತನ ಜ್ಞಾನ ಮತ್ತು ಏರ್ಪಾಡಿಗೆ ಬಿಡಬೇಕು ಮತ್ತು ಆತನ ಜನರಾದ ನಿಜವಾದ ಬಳ್ಳಿಯ ಕೊಂಬೆಗಳು ಪವಿತ್ರಾತ್ಮವನ್ನು ಬಯಸಬೇಕು ಮತ್ತು ಹುಡುಕಬೇಕು. ಇದನ್ನು ಲೌಕಿಕ ಹೆತ್ತವರಿಗಿಂತ ಪರಲೋಕದ ತಂದೆಯು ತನ್ನ ಮಕ್ಕಳಿಗೆ ಒಳ್ಳೆಯ ವರಗಳನ್ನು ನೀಡಲು ಅಧಿಕ ಇಷ್ಟಪಡುವವನಾಗಿದ್ದಾನೆ. **R 2466 : 2**

## 22 ಜುಲೈ

**“ಕ್ರಿಯೆಗಳಿಲ್ಲದ ನಂಬಿಕೆಯು ಸತ್ತದ್ದು....” (ಯಾಕೋಬನು 2 : 20)**

ಈ ಮೇಲಿನ ವಾಕ್ಯದ ವಿಷಯದಲ್ಲಿ ಸ್ವಯಂ–ಪರೀಕ್ಷೆ ಅಧಿಕ ಸೂಕ್ತವಾಗಿದೆ. ಒಂದು ವೇಳೆ ನಾವು ದೇವರ ಕೃಪೆಯನ್ನು ಕೇಳಿ, ನೋಡಿ, ರುಚಿಸಿ ಮತ್ತು ಅದರಲ್ಲಿ ಆನಂದಿಸಿ, ತದನಂತರ ನಮ್ಮ ಕೃಪೆಯುಳ್ಳ ತಂದೆಗೆ ಸೇವೆ ಸಲ್ಲಿಸುವ

ಬಯಕೆ ಇಲ್ಲದಿದ್ದರೆ ಅಥವಾ ನಾವು ಆನಂದಿಸುವ ಅದೇ ಆಶೀರ್ವಾದಗಳೊಂದಿಗೆ ಇತರರಿಗೆ ಸಹಾಯ ಮಾಡುವ ಬಯಕೆ ವ್ಯಕ್ತವಾಗದಿದ್ದರೆ, ಅದು ನಮ್ಮ ಆತ್ಮೀಕ ಚೈತನ್ಯವು ಬಹಳ ದುರ್ಬಲವಾಗಿದೆ ಮತ್ತು ನಾಶವಾಗುವ ಅಪಾಯದಲ್ಲಿದೆ ಎಂದರ್ಥ. ಆದರೆ ಇದಕ್ಕೆ ತದ್ವಿರುದ್ಧವಾಗಿ ನಾವು ಕರ್ತನ ಮೇಲಿನ ದಹಿಸುವ ಪ್ರೀತಿಯ ಉತ್ಸಾಹದಿಂದ, ಆತನ ಮಹತ್ತಾದ ರಕ್ಷಣೆಯ ಯೋಜನೆಯನ್ನು ಮೆಚ್ಚುಗೆಯೊಂದಿಗೆ, ಮತ್ತು ಬಯಕೆಯೊಂದಿಗೆ ಈ ಶುಭ ಸಂದೇಶವನ್ನು ಇತರರಿಗೆ ಹೇಳಿ, ಅವರಿಗೆ ಆಶೀರ್ವಾದ, ಬಲಪಡುಸುವಿಕೆ, ಬೆಳೆಸುವಿಕೆ, ಮತ್ತು ದೈವೀಕ ನಂಬಿಕೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದರೆ, ಅದು ನಮಗೂ ಪ್ರೋತ್ಸಾಹವಾಗಿರಬೇಕು. ನಾವು ಇನ್ನೂ ಗಮನಿಸಬೇಕಾದದ್ದು ಏನೆಂದರೆ, ಅಪೋಸ್ತಲರಾದ ಪೇತ್ರ, ಯಾಕೋಬ ಮತ್ತು ಯೋಹಾನರನ್ನು ಯೇಸು ವಿಶೇಷವಾಗಿ ಪ್ರೀತಿಸಿದನು ಮತ್ತು ದಯೆತೋರಿದನು. ಏಕೆಂದರೆ ಇವರೆಲ್ಲರೂ ಬೇರೆ ಅಪೋಸ್ತಲರಿಗಿಂತ ಅಧಿಕವಾದ ಉತ್ಸಾಹ ಭರಿತ, ಹುರುಪಿನ ಮತ್ತು ಶಕ್ತಿಯುತವಾದ ಅಪೋಸ್ತಲರಾಗಿದ್ದರು ಮತ್ತು ಪೌಲನನ್ನೂ ಸಹ ಯೇಸು ವಿಶೇಷವಾಗಿ ಪ್ರೀತಿಸಿದನು ಮತ್ತು ದಯೆತೋರಿದನು ಎಂದು ನಾವು ಖಚಿತವಾಗಿ ಹೇಳಬಹುದು. **R 4377 : 6**

## 23 ಜುಲೈ

**"ಕರ್ತನು ಒಳ್ಳೆಯವನು; ಇಕ್ಕಟ್ಟಿನ ದಿನದಲ್ಲಿ ಬಲವಾದ ಕೋಟೆಯಾಗಿದ್ದಾನೆ; ತನ್ನಲ್ಲಿ ನಂಬಿಕೆಯಿಡುವವರನ್ನು ಬಲ್ಲನು." (ನಹೂಮ 1 : 7)**

ಪ್ರಪಂಚದ ಮಹಾ ಸಂಕಟದ ಮಧ್ಯೆ ನಮ್ಮ ಪರಲೋಕದ ತಂದೆಯು ನಮಗೆ ಒದಗಿಸಿರುವ ಸೌಕರ್ಯ, ಪ್ರೋತ್ಸಾಹ ಮತ್ತು ರಕ್ಷಣೆಯಲ್ಲಿ ಆತನ ಜನರಾಗಿ ನಮಗೆ ಈ ವಿಶೇಷ ಪ್ರೀತಿ ಮತ್ತು ಅಕ್ಕರೆಯನ್ನು ಕುರಿತು ನಾವು ಕೃತಜ್ಞತೆಯೊಂದಿಗೆ ಮೆಚ್ಚಿದ ನಂತರ, ಒಂದು ವೇಳೆ ನಾವು ಈ ವಿಷಯವನ್ನು ಸ್ವಯಂ–ತೃಪ್ತಿಯೆಂದು ಪರಿಗಣಿಸಿ, ಇಡೀ ಪ್ರಪಂಚದ ಮೇಲಿನ ಆತನ ಅಪಾರ ಪ್ರೀತಿಯನ್ನು ಕುರಿತು ಮರೆತುಬಿಟ್ಟರೆ ಆತನ ಆತ್ಮವನ್ನು ಹೊಂದುವುದರಲ್ಲಿ ಕೊರತೆಯುಳ್ಳವರಾಗುತ್ತೇವೆ. ಅವರ ಪಾಪಗಳ ವಿರುದ್ಧ ಆತನ ನೀತಿಯುಳ್ಳ ಕೋಪವು (ಛಾಯೆಯಲ್ಲಿ) ಮೋಡಗಳ ಹಿಂದೆ ಮರೆಯಾಗಿದೆ, ಆತನು ಬುದ್ಧಿವಂತಿಕೆಯಿಂದ ಅವರಿಗೆ ಭಾರೀ ಹೊಡೆತವನ್ನು ಹೊಡೆದು, ಅವರ ಎಲ್ಲಾ ವಿಗ್ರಹಗಳನ್ನು ಚೂರುಚೂರು ಮಾಡುತ್ತಾನೆ ಮತ್ತು ಅವರ ಹೆಮ್ಮೆಯನ್ನು ಧೂಳಿನಲ್ಲಿ ತಗ್ಗಿಸುತ್ತಾನೆ....ದೇವರು ತನ್ನ ಏಕೈಕ ಮಗನನ್ನು ಈ ಲೋಕಕ್ಕೆ ಕೊಟ್ಟಿರುವುದರಿಂದ ಆತನ ಪ್ರೀತಿಯು

ವ್ಯಕ್ತವಾಗುತ್ತದೆ.... ಆತನು ಅವರನ್ನು ಇನ್ನೂ ಪ್ರೀತಿಸುತ್ತಾನೆ ಮತ್ತು ಆತನ ಈ ಪ್ರೀತಿಯಿಂದಲೇ ಅವರ ತಿದ್ದುಪಾಡಿಗೆ ಕೋಲನ್ನು ಬಳಸುತ್ತಾನೆ. ಹಾಗೆಯೇ ಅವನು ತನ್ನ ಜನರನ್ನು ತನ್ನ ತೀರ್ಪುಗಳನ್ನು ಪರಿಗಣಿಸುವಂತೆ ಮಾಡುತ್ತಾನೆ ಮತ್ತು ಆತನ ದಯೆಯೆಂಬ ಸೂರ್ಯನ ಬೆಳಕಿನಲ್ಲಿ ಸಂತೋಷ ಪಡುವಾಗ,...ಆತನ ಆತ್ಮವನ್ನು ಲೋಕದೊಂದಿಗೆ ಅವರು ಹಂಚಿಕೊಳ್ಳುವಂತೆ ಮಾಡುತ್ತಾನೆ; ಮತ್ತು ಆತನ ನೀತಿಯುಳ್ಳ ಕೋಪದ ಹೊಡೆತಗಳು ಅವರ ಮೇಲೆ ಭಾರಿ ಪ್ರಮಾಣದಲ್ಲಿ ಬೀಳುವಾಗ, ಅವರ ವಿಪತ್ತುಗಳಿಗೆ ಕಾರಣವೇನು ಮತ್ತು ಅದರ ಏಕೈಕ ಪರಿಹಾರವೇನು ಎಂಬುದನ್ನು ಕುರಿತು ನಾವು ಅವರಿಗೆ ತೋರಿಸಬೇಕೆಂದು ಆತನು ಬಯಸುತ್ತಾನೆ. **R 1787 : 3**

## 24 ಜುಲೈ

**"ಇದಲ್ಲದೆ ಕರ್ತನಾದ ಯೇಸುವಿನ ಪುನರುತ್ಥಾನದ ವಿಷಯವಾಗಿ ಅಪೋಸ್ತಲರು ಬಹಳ ಬಲವಾಗಿ ಸಾಕ್ಷಿಕೊಟ್ಟರು; ದೊಡ್ಡ ಕೃಪೆಯು ಅವರೆಲ್ಲರ ಮೇಲೆ ಇತ್ತು." (ಅಪೋಸ್ತಲರಕೃತ್ಯಗಳು 4 : 33)**

ಈ ಸಾಕ್ಷಿಯನ್ನು ಶಕ್ತಿಯಿಂದ, ದೊಡ್ಡ ಶಕ್ತಿಯಿಂದ ಮಾಡಲಾಗಿದೆಯೆಂದು ನಮ್ಮ ವಾಕ್ಯವು ಹೇಳುತ್ತದೆ. ಮತ್ತು ಇದು ಪ್ರಮುಖವಾಗಿತ್ತು. ರಾಜಕೀಯ, ಸಾಮಾಜಿಕ ಪ್ರಶ್ನೆಗಳಿಗೆ, ವಿಕಸನೀಯ ಸಿದ್ಧಾಂತಗಳಿಗೆ ಅಥವಾ ಹೆಚ್ಚಿನ ವಿಮರ್ಶನಾತ್ಮಕ ಪ್ರಬಂಧಗಳಿಗಿಂತ ಪ್ರಮುಖವಾಗಿತ್ತು. ಅದು ಮಾತ್ರ ಅಪೋಸ್ತಲರ ಗುರಿಯಾಗಿತ್ತು. ಆದ್ದರಿಂದ ಅದೇ ಮನೋಭಾವ ನಮ್ಮೊಂದಿಗೆ ಇರಬೇಕು. ದೈವಿಕ ಯೋಜನೆಯ ಮೂಲಕ ಕರ್ತನ ಪುನರುತ್ಥಾನ, ಸಭೆಗೆ ಮತ್ತು ಲೋಕಕ್ಕೆ ಅದರ ಮೌಲ್ಯ ಮತ್ತು ಸೂಚನೆ, ನಮ್ಮ ಸಾಕ್ಷಿಯಲ್ಲಿ ಎಂದೆಂದಿಗೂ ಪ್ರಮುಖವಾಗಿರಬೇಕು. ಅವರ ಮಾತುಗಳು ಮತ್ತು ತರ್ಕದ ಪ್ರಸ್ತುತಿಗಳಿಂದ ಮಾತ್ರ ಅಪೋಸ್ತಲರು ಸಾಕ್ಷಿಯಾಗಿರಲಿಲ್ಲ, ಆದರೆ ಅವರ ಜೀವನವೇ ಸಾಕ್ಷಿಯಾಗಿತ್ತು. ಅಪೋಸ್ತಲನು ಹೇಳಿದಂತೆ, "ನೀವು ನಮ್ಮ ಪತ್ರಿಕೆಯಾಗಿದ್ದೀರಿ...ಅದನ್ನು ಎಲ್ಲಾ ಮನುಷ್ಯರು ತಿಳಿದುಕೊಂಡು ಓದುವಂಥದ್ದಾಗಿದೆ." ಆದಿ ಸಭೆಯವರ ಜೀವನವು ಕರ್ತನಿಗೆ ವಿಶೇಷವಾದ ಸಾಕ್ಷಿಯಾಗಿತ್ತು. ಕರ್ತನಿಗೆ ಮತ್ತು ಸತ್ಯಕ್ಕೆ ಅವರು ಸಲ್ಲಿಸಿದ ಪ್ರತಿಷ್ಠಿತ ಜೀವಿತದಲ್ಲಿ ಸ್ಥಿರತೆ ಇಲ್ಲದಿದ್ದರೆ, ಅವರು ನೀಡಿದಂತ ಸಂದೇಶವು ಅಷ್ಟು ಪ್ರಮುಖವಾಗುತ್ತಿರಲಿಲ್ಲ. ಹಾಗೆಯೇ ಈ ದಿನಗಳಲ್ಲಿ ನಮ್ಮೊಂದಿಗಿದೆ. ನಾವು ವಾಕ್ಯವನ್ನು ಬೋಧಿಸುವದು ಒಳ್ಳೆಯದು. ನಾವು ಅದರಂತೆ ಜೀವಿಸುವದು ಇನ್ನೂ ಮುಖ್ಯವಾಗಿದೆ. ಆದರೆ ಸತ್ಯವನ್ನು ಬೋಧಿಸುವುದು ಮತ್ತು ಅದರಂತೆ

ಬದುಕುವುದು ಎರಡೂ ಆದರ್ಶದ ವಿಷಯವಾಗಿದೆ. **R 4391 : 1**

## 25 ಜುಲೈ

**"ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ನಮಗೆ ಮಾದರಿಯನ್ನು ಬಿಟ್ಟು ಹೋದನು." (1 ಪೇತ್ರನು 2 : 21)**

ಈ ಮೇಲಿನ ವಾಕ್ಯವು ವಿಶೇಷವಾಗಿ ನಮಗೆ ಸೂಕ್ತವಾಗಿದೆ ಮತ್ತು ತೀವ್ರವಾದ ಉಪದ್ರವಗಳಲ್ಲಿ ಮಾತ್ರವಲ್ಲ, ನಮಗೆ ಉಂಟಾಗುವ ಸಾಮಾನ್ಯ ಸಂಕಟಗಳಲ್ಲಿಯೂ ಸಹ ಅದನ್ನು ಯಾವಾಗಲೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮನ್ನು ದುಷ್ಟರೆಂದು ಹೇಳಿ ಹೊರಹಾಕಿದಾಗ, "ಮನುಷ್ಯರು ಅವರ ಸಮೂಹದಿಂದ ನಮ್ಮನ್ನು ಬೇರ್ಪಡಿಸುವಾಗ", ನಾವು ಕರ್ತನಿಗೆ ಮತ್ತು ಆತನ ವಾಕ್ಯಕ್ಕೆ ಮತ್ತು ನೀತಿಯ ತತ್ವಗಳಿಗೆ ನಂಬಿಗಸ್ತಿಕೆಯಾಗಿರುವುದರಿಂದ ಅವರು ಎಲ್ಲಾ ವಿಧವಾದ ತಪ್ಪುಗಳನ್ನು ನಮ್ಮ ಮೇಲೆ ಹೊರಿಸಿದಾಗ ನಾವು ಈ ಮೇಲಿನ ವಾಕ್ಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಂತರ ಈ ವಾಕ್ಯವನ್ನು ನೆನಪಿಡಿರಿ, ಅದಕ್ಕೆ ಹೊಂದಾಣಿಕೆಯಾಗಿ ಮತ್ತು ಕರ್ತನ ಇತರ ವಾಕ್ಯಗಳನ್ನು ಕುರಿತು ನಿಮ್ಮ ಹೃದಯದಲ್ಲಿ ಭರವಸೆ ಇರಲಿ, ಅದೇನೆಂದರೆ ಈ ವಿರೋಧದ ಎಲ್ಲಾ ಅನುಭವಗಳು ನಮ್ಮ ಅತ್ಯುನ್ನತ ಒಳಿತಿಗಾಗಿ ಕರ್ತನು ಅದನ್ನು ರದ್ದುಗೊಳಿಸಲು ಚಿತ್ತವುಳ್ಳವರಾಗಿದ್ದಾರೆ, ಈ ವಿಚಾರವು ನಮಗೆ ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ. ಯಾರೆಲ್ಲಾ ಪರಲೋಕ ರಾಜ್ಯದ ವರ್ಗದವರಾಗಿರುತ್ತಾರೋ ಅವರೆಲ್ಲರೂ ತಮ್ಮ ಬೆಳವಣಿಗೆಗಾಗಿ ಮತ್ತು ತಮ್ಮ ಗುಣಲಕ್ಷಣದ ಪರೀಕ್ಷೆಗಾಗಿ ಇಂತಹ ಕೆಲವು ಅನುಭವಗಳನ್ನು ಹಾದುಹೋಗಬೇಕು. **R 3617 : 4**

## 26 ಜುಲೈ

**"ಅವರು....ಎಲ್ಲಾ ಕಡೆಗೂ ಹೋಗಿ ವಾಕ್ಯವನ್ನು ಸಾರುತ್ತಿದ್ದರು." (ಅಪೋಸ್ತಲರಕೃತ್ಯಗಳು 8 : 4)**

ಕೆಲವು ಪ್ರಿಯ ಕ್ರೈಸ್ತರು ಸಮಾಜಶಾಸ್ತ್ರ, ಪ್ರಕೃತಿಯ ಸುಂದರ, ಪ್ರಪಂಚದ

ವಿಷಯಗಳ ಬಗ್ಗೆ ಬೋಧಿಸುವ ತಪ್ಪನ್ನು ಮಾಡುತ್ತಾರೆ. ಇತರರು ನಿರಂತರವಾಗಿ ದೋಷಗಳು ಮತ್ತು ದೋಷವಾದಿಗಳ ಜೊತೆ ಬೆರೆಯುತ್ತಾರೆ. ಅಂತಹ ವಿಷಯಗಳು ಆ ಸಂದೇಶಕ್ಕೆ ಸಂಬಂಧಿಸಿದಂತೆ ಆ ಸ್ಥಳದಲ್ಲಿ ಅವರ ಸಮಯ ಕಳೆದುಹೋಗಬಹುದು; ಆದರೆ ಕರ್ತನನ್ನು ಸೇವಿಸುವವರೆಲ್ಲರೂ ಕ್ರಿಸ್ತನ ಸುವಾರ್ತೆಯನ್ನು ಮಾತ್ರ ಬೋಧಿಸಲು ನಾವು ನಿಯೋಜಿಸಲ್ಪಟ್ಟಿದ್ದೇವೆ ಎಂಬುದನ್ನು ನೆನಪಿನಲ್ಲಿಡಬೇಕು. ಕ್ರಿಸ್ತನು ಮತ್ತು ಆತನ ಸಂದೇಶವು ನಮ್ಮ ಮನಸ್ಸಿನಲ್ಲಿ ಬಂದು ಬೆಳಕನ್ನು ರೂಪಿಸುತ್ತದೆ–ಈ ಬೆಳಕನ್ನು ನಾವು ಇತರರ ಆಶೀರ್ವಾದಕ್ಕಾಗಿ ಪ್ರಕಾಶಿಸುವಂತೆ ಮಾಡಬೇಕು. ಕತ್ತಲೆ ಬೆಳಕನ್ನು ದ್ವೇಷಿಸುತ್ತದೆ ಮತ್ತು ಬೆಳಕಿನ ವಿರುದ್ಧ ಹೋರಾಡುತ್ತದೆ; ಆದರೆ ಬೆಳಕು ಪ್ರಕಾಶಿಸುತ್ತಲೇ ಇರಬೇಕು. ನಮ್ಮ ಕರ್ತನು ಹೀಗೆ ಹೇಳುತ್ತಾನೆ, "ಜನರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಮಹಿಮೆ ಪಡಿಸುವಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ." ಈ ಬೆಳಕು ನಮ್ಮ ತುಟಿಗಳಲ್ಲಿ ಹೇಳುವ ಸಂದೇಶ ಮಾತ್ರವಲ್ಲ, ಆದರೆ ನಮ್ಮ ದೈನಂದಿನ ಜೀವನದಿಂದ ಹೊರಹೊಮ್ಮುವ ಪ್ರಭಾವವೂ ಆಗಿದೆ. ಕರ್ತನ ಚಿತ್ತವು ಏನೆಂದರೆ ಯಾರೆಲ್ಲಾ ಶುದ್ಧ ಹೃದಯವುಳ್ಳವರಾಗಿದ್ದಾರೋ ಅವರು ಮಾತ್ರ ಆತನ ಸಂದೇಶವನ್ನು ಹೊರುವವರು ಎಂಬುದು ನಮಗೆ ಹೆಚ್ಚು ಹೆಚ್ಚಾಗಿ ಮನವರಿಕೆಯಾಗಿದೆ. "ಕರ್ತನ ಮನೆಯ ಸಂದೇಶವನ್ನು ಹೊರುವವರೇ, ನೀವು ಶುದ್ಧರಾಗಿರಿ." **R 4330 : 5**

## 27 ಜುಲೈ

**"ಕರ್ತನಿಗೆ ಹಾಡಿರಿ, ಆತನ ಹೆಸರನ್ನು ಸ್ತುತಿಸಿರಿ; ಆತನ ರಕ್ಷಣೆಯನ್ನು ದಿನದಿನಕ್ಕೆ ಸಾರಿ ಹೇಳಿರಿ. ಅನ್ಯಜನಾಂಗದಲ್ಲಿ ಆತನ ಘನವನ್ನೂ ಎಲ್ಲಾ ಜನಾಂಗಗಳಲ್ಲಿ ಆತನ ಅದ್ಭುತಗಳನ್ನೂ ವಿವರಿಸಿರಿ." (ಕೀರ್ತನೆಗಳು 96 : 2 , 3)**

ಸತ್ಯಕ್ಕೆ ಸಂಬಂಧಪಟ್ಟವರೆಲ್ಲರೂ ಸತ್ಯವನ್ನು ಕೇಳುತ್ತಾರೆ ಮತ್ತು ಸತ್ಯಕ್ಕೆ ಸಾಕ್ಷಿಯಾಗಿರಲು ಇಷ್ಟಪಡುತ್ತಾರೆ. ಆದರೂ ನಮ್ಮ ವಿಷಯದಲ್ಲಿ, ನಮ್ಮ ಬೋಧಕನನ್ನು ಈ ಜಗತ್ತು ತಿಳಿಯದಂತೆ ನಮ್ಮನ್ನು ತಿಳಿದಿಲ್ಲ. ಈ ಲೋಕವು ನಮ್ಮನ್ನು ತಿಳಿದಿಲ್ಲ ಏಕೆಂದರೆ ಅದು ಆತನನ್ನು ತಿಳಿದಿಲ್ಲ. ಈ ಲೋಕವು ವಿಶೇಷವಾಗಿ ಕ್ರೈಸ್ತ ಪ್ರಪಂಚದ ಧಾರ್ಮಿಕ ಜಗತ್ತು, ಆತನನ್ನು ಶಿಲುಬೆಗೇರಿಸಿದಂತೆ ನಮ್ಮನ್ನು ಶಿಲುಬೆಗೇರಿಸಲು ಭಾವವುಳ್ಳವರಾಗಿದ್ದಾರೆ, ನಾವು ಮಾತ್ರ ಹೆಚ್ಚು ಸುಸಂಸ್ಕೃತ ಕಾಲದಲ್ಲಿ ಜೀವಿಸುತ್ತಿದ್ದೇವೆ ಮತ್ತು ಶಾಸ್ತ್ರಿಗಳು, ಫರಿಸಾಯರು ಮತ್ತು

ಸದ್ದುಕಾಯರು ನಮ್ಮ ಜೀವವನ್ನು ನಾಶಪಡಿಸಲು ಜನರನ್ನು ಪ್ರಚೋದಿಸುವದು ಹಳೆಯ ಕಾಲಕ್ಕಿಂತ ಇಂದು ಬಹಳ ಕಷ್ಟಕರವೆಂದು ಕಂಡುಕೊಂಡಿದ್ದಾರೆ. ಆದರೆ ದೇವರ ಕೃಪೆಯಲ್ಲಿ ಆ ಅಂಧಕಾರದ ರಾತ್ರಿ ಬರುವವರೆಗೂ ನಾವು ಸತ್ಯಕ್ಕೆ ಸಾಕ್ಷಿ ಕೊಡುವುದನ್ನು ಮುಂದುವರಿಸುತ್ತೇವೆ, ಏಕೆಂದರೆ ಆ ರಾತ್ರಿಯಲ್ಲಿ "ಯಾರೂ ಕೆಲಸ ಮಾಡಲು ಸಾಧ್ಯವಿಲ್ಲ", ಅಲ್ಲಿಯವರೆಗೆ ನಮ್ಮ ಜೀವಗಳನ್ನು ಉಳಿಸಿಕೊಳ್ಳಬೇಕು. **R 5898 : 6**

## 28 ಜುಲೈ

**"ನಾನು ನಿಮಗೆ ಹೇಳುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಇವೆ." (ಯೋಹಾನನು 6 : 63)**

ನಮ್ಮ ಕರ್ತನ ಬೋಧನೆಗಳು ಎಷ್ಟೇ ಕತ್ತಲೆಮಯವಾದ ಮತ್ತು ಸಾಮ್ಯ ರೂಪದಲ್ಲಿ ಇದ್ದರೂ, ಸರಿಯಾಗಿ ಅರ್ಥಮಾಡಿಕೊಂಡರೆ ಆತನ ಸಂದೇಶವು ಆತ್ಮೀಕವಾಗಿ ಉಪಯುಕ್ತವಾಗಿಯೂ ಮತ್ತು ಯಾರೆಲ್ಲಾ ಅದನ್ನು ಅರ್ಥಮಾಡಿಕೊಳ್ಳುತ್ತಾರೋ ಅವರಿಗೆ ಅದು ಜೀವ–ನೀಡುವಂಥದ್ದಾಗಿಯೂ ಇರುವುದು. ಕರ್ತನ ಸಂದೇಶದ ಈ ಗುಣಮಟ್ಟವೇ ಅನ್ಯಜನಾಂಗದ ಧರ್ಮಕ್ಕಿಂತ ನಮ್ಮ ಸತ್ಯವೇದವನ್ನು ವಿಭಿನ್ನವಾಗಿಸುತ್ತದೆ. ಇದು ಜೀವದ ಸಂದೇಶ ಮತ್ತು ಪವಿತ್ರತೆಯ ಸಂದೇಶವಾಗಿದೆ. ಇದು ಕ್ಷಮೆಯ ಸಂದೇಶ ಮತ್ತು ಖಂಡನೆಯ ಸಂದೇಶವಾಗಿದೆ. ಇದು ಪ್ರೀತಿಯ ಸಂದೇಶ ಮತ್ತು ನ್ಯಾಯತೀರ್ಪಿನ ಸಂದೇಶವಾಗಿದೆ. ಆತನ ಅದ್ಭುತವಾದ ಜೀವವುಳ್ಳ ವಾಕ್ಯವು–ಆಕರ್ಷಕ, ಸುಂದರ, ಬಲಯುತವಾಗಿವೆ! ನಾವು ಅವುಗಳನ್ನು ವರ್ಷ ವರ್ಷವೂ ಓದಬಹುದು ಮತ್ತು ಅವುಗಳಲ್ಲಿ ಇನ್ನೂ ಅಧಿಕವಾದ ಸುಂದರತೆಯನ್ನು ಕಾಣುತ್ತೇವೆ, ಇನ್ನೂ ಆಳವಾದ ಸೂಚನೆಗಳನ್ನು ಕಾಣುತ್ತೇವೆ, ಮತ್ತು ಅಷ್ಟೇ ಅಳತೆಯಲ್ಲಿ ನಾವು ಕೃಪೆಯಲ್ಲಿ, ಜ್ಞಾನದಲ್ಲಿ, ಮತ್ತು ನಮ್ಮ ಬೋಧಕನ ಆತ್ಮದಲ್ಲಿ ಬೆಳವಣಿಗೆ ಹೊಂದುತ್ತೇವೆ. **R 4644 : 6**

## 29 ಜುಲೈ

**"ಪ್ರಾರ್ಥನೆಯಲ್ಲಿ ನಿರತರಾಗಿರಿ." (ರೋಮಾಪುರದವರಿಗೆ 12 : 12)**

ಪ್ರಾರ್ಥನೆ ಎಂದರೆ ದೇವರೊಂದಿಗೆ ಇರುವ ಐಕ್ಯತೆಯಾಗಿದ್ದು ಅದು ನಮ್ಮ

ಆತ್ಮೀಕ ಒಳಿತಿಗಾಗಿ ಅನಿವಾರ್ಯವಾಗಿದೆ; ಮತ್ತು ಅತ್ಯುನ್ನತ ದೇವರೊಂದಿಗೆ ಮತ್ತು ನಮ್ಮ ವಿಮೋಚಕನೊಂದಿಗಿನ ಐಕ್ಯತೆಯ ಸವಲತ್ತಿನ ಮೆಚ್ಚುಗೆಯಾಗಿದೆ, ಅಥವಾ ಅಂತಹ ಮೆಚ್ಚುಗೆಯಲ್ಲಿ ಕೊರತೆಯಿದ್ದರೆ, ಕರ್ತನ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಉತ್ಸಾಹವನ್ನು ಅಥವಾ ನಮ್ಮ ಶೀತಲತೆಯನ್ನು ಕುರಿತು ಸಹನೀಯವಾಗಿ ಸ್ಪಷ್ಟವಾಗಿ ಸೂಚಿಸುತ್ತದೆ. ಜನರು ತಮ್ಮದೇ ಆದ ಸಿದ್ಧಾಂತಗಳು, ಯೋಜನೆಗಳು, ಮಾನವ ವ್ಯವಸ್ಥೆಗಳನ್ನು ಪೂರೈಸುವಲ್ಲಿ [ಸೇವೆ ಸಲ್ಲಿಸುವದರಲ್ಲಿ] ಉತ್ಸುಕರಾಗಿರಬಹುದು ಮತ್ತು ಪ್ರಾರ್ಥನೆಯ ಬಗ್ಗೆ ಸ್ವಲ್ಪ ಮಟ್ಟಿಗೆ ಮಾತ್ರ ಆಸೆ ಹೊಂದಿರಬಹುದು, ಆದರೆ ಕರ್ತನ ಮತ್ತು ಆತನ ಸತ್ಯವನ್ನು ಬೆಚ್ಚಗಿನ, ಉತ್ಸಾಹಭರಿತ ಹೃದಯದಿಂದ ಸೇವೆ ಮಾಡುವವರು, ದೈವಿಕ ಸೇವೆ ಮಾಡುವುದರಲ್ಲಿ ತಮ್ಮ ಅಪೂರ್ಣತೆ ಮತ್ತು ತಮ್ಮ ಸ್ವಂತ ಅಸಮರ್ಥತೆಯ ಬಗ್ಗೆ ಎಷ್ಟು ಮನವರಿಕೆಯಾಗಿರುತ್ತದೆಂದರೆ, ಅವರು ಬೋಧಕನಿಗಾಗಿ ತಾವು ಸಲ್ಲಿಸುವ ಸೇವೆಯನ್ನು ಕುರಿತು ಆತನ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ಬಯಸುತ್ತಾರೆ ಮತ್ತು ನಿರಂತರವಾಗಿ ಅದನ್ನೇ ಹುಡುಕುತ್ತಾರೆ. **R 2213 : 6**

## 30 ಜುಲೈ

**"ನಿನ್ನ ಹಾಗೆ ದೇವರು ಯಾರು? ಆತನು ತನ್ನ ಕೋಪವನ್ನು ಎಂದೆಂದಿಗೂ ಇಟ್ಟುಕೊಳ್ಳುವದಿಲ್ಲ; ಯಾಕೆಂದರೆ ಆತನು ಕರುಣೆಯಲ್ಲಿ ಸಂತೋಷಪಡುತ್ತಾನೆ." (ಮೀಕ 7 : 18)**

ಅನ್ಯದೇವರುಗಳೆಲ್ಲಾ ಸೇಡಿನ ಮನೋವೃತ್ತಿ ಉಳ್ಳವರಾಗಿದ್ದಾರೆ. ಸತ್ಯವೇದದ ದೇವರನ್ನು ಮಾತ್ರ ಕುರಿತು ಹೇಳುವುದೇನೆಂದರೆ– ಆತನು ಪ್ರೀತಿಯುಳ್ಳ ದೇವರು, "ಆತನ ಕೃಪೆಯು ಶಾಶ್ವತವಾದದ್ದು" ಎಂದು ಕೀರ್ತನೆಗಳಲ್ಲಿ ಮತ್ತೆ ಮತ್ತೆ ಹೇಳುತ್ತದೆ. ಅಯ್ಯೋ! ಜ್ಞಾನ, ನೀತಿ, ಪ್ರೀತಿ ಮತ್ತು ಶಕ್ತಿಯುಳ್ಳ ನಮ್ಮ ದೇವರನ್ನು ಕುರಿತು ಈ ಲೋಕಕ್ಕೆ ಮತ್ತು ಸಭೆಗೆ ಎಷ್ಟು ಭೀಕರವಾಗಿ ನಿರೂಪಿಸಲಾಗಿದೆ, ಅಂದರೆ ದೇವರು ಆತನು ಸೃಷ್ಟಿಸಿದ ಬಹುಪಾಲು ಜನರನ್ನು ನಿತ್ಯಯಾತನೆ ಪಡಿಸುವುದರಲ್ಲಿ ಸಂತೋಷಿಸುತ್ತಾನೆಂದು ತಪ್ಪಾಗಿ ಸೂಚಿಸಲಾಗಿದೆ; ಏಕೆಂದರೆ ಒಂದು ವೇಳೆ ಅವರಿಗಾಗಿ ಆತನು ಈ ರೀತಿಯಾಗಿ ಏರ್ಪಾಡು ಮಾಡಿದ್ದರೆ ಮತ್ತು ಅಂತ್ಯವನ್ನು ಕುರಿತು ಆದಿಯಲ್ಲೇ ತಿಳಿದಿರುವಾತನು, ಅದರಲ್ಲಿ ಆತನು ಸಂತೋಷಿಸುತ್ತಾನೆಂದು ಮತ್ತು ಅವರನ್ನು ಯಾತನೆ ಪಡಿಸಬೇಕೆಂಬ ಉದ್ದೇಶ ಹೊಂದಿದ್ದಾನೆಂದು ನಿರೂಪಣೆಯಾಗುತ್ತದೆ. ಆದರೆ ದೇವರ ವಾಕ್ಯಗಳ ಸರಿಯಾದ ವ್ಯಾಖ್ಯಾನಗಳನ್ನು ಕುರಿತು ನಮ್ಮ ಕಣ್ಣುಗಳು ತೆರೆದಾಗ, ಆತನ ಸ್ವಭಾವವು ನಮ್ಮ ಕಣ್ಣುಗಳ ಮುಂದೆ

ಮಹಿಮೆಯುಳ್ಳದ್ದಾಗಿ ಕಾಣುತ್ತದೆ ಮತ್ತು ಅದು ನಮ್ಮ ಪ್ರೀತಿ ಹಾಗೂ ನಮ್ಮ ಭಕ್ತಿಯನ್ನು ಆತನಿಗೆ ಸಲ್ಲಿಸಲು ಆದೇಶಿಸುತ್ತದೆ! ಅಪೋಸ್ತಲನು ಹೇಳುವ ಹಾಗೆ ದೈವಿಕ ಪ್ರೀತಿಯು ನಮ್ಮನ್ನು ನಂಬಿಗಸ್ತರಾಗಿರಲು ಮತ್ತು ವಿಧೇಯರಾಗಿರಲು ನಿರ್ಬಂಧ ಪಡಿಸುತ್ತದೆ. **R 4892 : 3**

## 31 ಜುಲೈ

**"ನಿನ್ನ ಪರಿಶುದ್ಧರು ನಿನ್ನನ್ನು ಸ್ತುತಿಸುವರು. ನಿನ್ನ ರಾಜ್ಯದ ಘನವನ್ನು ಹೇಳುವರು; ನಿನ್ನ ಪರಾಕ್ರಮವನ್ನು ನುಡಿಯುವರು. ಮನುಷ್ಯನ ಮಕ್ಕಳಿಗೆ ಆತನ ಪರಾಕ್ರಮ ಕ್ರಿಯೆಗಳನ್ನೂ ಆತನ ರಾಜ್ಯದ ಪ್ರಭಾವವನ್ನೂ ಘನವನ್ನೂ ತಿಳಿಯಪಡಿಸುವರು." (ಕೀರ್ತನೆಗಳು 145 : 10-12)**

ಎಲ್ಲಾ ಪರಿಶುದ್ಧರು ಹೀಗೆ ರಾಜ್ಯವನ್ನು ಘೋಷಿಸುವ ಮತ್ತು ದೇವರ ಹೆಸರನ್ನು ಗೌರವಿಸುವ ಭಾಗ್ಯವನ್ನು ಹೊಂದಿರುತ್ತಾರೆ ಎಂದು ಪ್ರವಾದಿ ತಿಳಿಸುತ್ತಾನೆ; ಮತ್ತು ಇದು ಇಂದು ಅಕ್ಷರಶಃ ನೆರವೇರಿದಂತೆ ತೋರುತ್ತದೆ, ಏಕೆಂದರೆ ಕರ್ತನು ತನ್ನ ಎಲ್ಲಾ ಪರಿಶುದ್ಧರನ್ನು [ಎಲ್ಲೆಡೆ ಇರುವ ಆತನ ಪ್ರತಿಷ್ಠಿತ ಜನರನ್ನು] ಪ್ರಸ್ತುತ ಸತ್ಯದ ಗಮನಕ್ಕೆ ತರುತ್ತಿದ್ದಾನೆಂದು ತೋರುತ್ತದೆ; ಅವರು ತಮ್ಮ ಹಾದಿಯಲ್ಲಿ ಅದರ ಬೆಳಕನ್ನು ಹೊಂದಿರಬೇಕೆಂಬ ಉದ್ದೇಶದಿಂದ, ನಮ್ಮ ದೇವರ ಮಹಿಮೆಯುಳ್ಳ ಗುಣಲಕ್ಷಣವನ್ನು ಅವರಿಗೆ ಯುಗಯುಗಾಂತರದ ಮಹತ್ತಾದ ಯೋಜನೆಯ ಜ್ಞಾನದ ಮೂಲಕ ದೇವರು ಸ್ಪಷ್ಟಪಡಿಸುತ್ತಾರೆ. ಇದಲ್ಲದೆ ಕರ್ತನು ತನ್ನ ಪ್ರತಿಯೊಬ್ಬ ಪರಿಶುದ್ಧನಿಗೆ ಅಧಿಕಾರ ಕೊಟ್ಟು, ಅವರ ಮೂಲಕ ತನ್ನ ಹೆಸರನ್ನು ಹೀಗೆ ಮಹಿಮೆಪಡಿಸುತ್ತಾನೆಂದು ಮತ್ತು ಸತ್ಯವನ್ನು ಇತರರಿಗೆ ತಿಳಿಸುತ್ತಾನೆಂದು ತೋರುತ್ತದೆ. ಕೆಲವರಿಗೆ ಆತನು ವಾಕ್ಚಾತುರ್ಯ ಮತ್ತು ಅದನ್ನು ಬಳಸುವ ಅವಕಾಶ ಮತ್ತು ಆತನ ಸ್ತುತಿಗಳನ್ನು ಕುರಿತು ಈ ರೀತಿಯಾಗಿ ಮಾತನಾಡಲು ಅವಕಾಶ ನೀಡಿದ್ದಾನೆ; ಇತರರಿಗೆ ಆತನು ಖಾಸಗಿಯಾಗಿ ಸಂಭಾಷಿಸುವ ತಲಾಂತು ನೀಡಿರಬಹುದು ಮತ್ತು ಆತನ ರಾಜ್ಯವನ್ನು ಕುರಿತು ತಿಳಿಸಬಹುದು ಮತ್ತು ಆತನ ಅದ್ಭುತವಾದ ಮಹಿಮೆಯ ಬಗ್ಗೆ ಮಾತನಾಡಲು ಮತ್ತು ಕೇಳುವ ಕಿವಿಯುಳ್ಳವರಿಗೆ ಆತನ ಯೋಜನೆಗಳನ್ನು ತಿಳಿಸಬಹುದು. ಇನ್ನೂ ಕೆಲವರಿಗೆ ಆತನು ಮುದ್ರಿತ ಪುಟಗಳನ್ನು ಹಂಚುವ ಮೂಲಕ ತನ್ನ ಸಂದೇಶವನ್ನು ಘೋಷಿಸುವ ಭಾಗ್ಯವನ್ನು ನೀಡಿದ್ದಾನೆ; ಮತ್ತು ಕೆಲವರಿಗೆ ಆತನು ಮೋಶೆ ಮತ್ತು ಕುರಿಮರಿಯ ಹಾಡನ್ನು ಹಾಡುವ ಈ ವಿವಿಧ ವಿಧಾನಗಳನ್ನು ಬಳಸುವ ಅವಕಾಶಗಳನ್ನು ನೀಡಿದ್ದಾನೆಂದು

ತೋರುತ್ತದೆ. ಮತ್ತು ಆತನ ಸದ್ಗುಣ ಮತ್ತು ಆತನ ಅದ್ಭುತವಾದ ಗೌರವ ಮತ್ತು ಮಹಿಮೆಯನ್ನು ತಿಳಿದುಕೊಂಡು, ಕೇಳುವ ಕಿವಿಯುಳ್ಳವರಿಗೆ ಮಹಾ ಸಂತೋಷವನ್ನುಂಟು ಮಾಡುವ ಸುವಾರ್ತೆಯನ್ನು ಹೇಳುವ ಬಯಕೆ ಇಲ್ಲದಿದ್ದರೆ, ಈ ಸಮಯದಲ್ಲಿ ಯಾರೂ ಕರ್ತನ ಪರಿಶುದ್ಧರ [ಸಂತರ] ವರ್ಗದಲ್ಲಿ ಜೊತೆಯಾಗಲು ಸಾಧ್ಯವಿಲ್ಲ ಎಂದು ನಾವು ನಿಶ್ಚಯವಾಗಿ ಹೇಳಬಹುದು; ಮತ್ತು ಈ ಸಂದೇಶವನ್ನು ಘೋಷಿಸುವಲ್ಲಿ ಅತ್ಯಧಿಕ ಶ್ರದ್ಧೆಯಿಂದ, ಅತ್ಯಧಿಕ ಉತ್ಸಾಹದಿಂದ ಇರುವವರು ತಮ್ಮ ಸ್ವಂತ ಹೃದಯಗಳಲ್ಲಿ ಮತ್ತು ತಮ್ಮ ಅನುಭವಗಳಲ್ಲಿ ಹೆಚ್ಚು ಆಶೀರ್ವಾದ ಪಡೆಯುವದು ಮತ್ತು ಕೃಪೆಯಲ್ಲಿ, ಜ್ಞಾನದಲ್ಲಿ ಮತ್ತು ಪ್ರೀತಿಯಲ್ಲಿ ಹೆಚ್ಚಾಗಿ ಬೆಳೆಯುವುದು ಖಚಿತ. **R2714 :6**

## 1 ಆಗಸ್ಟ್

**"ಯಾವನಾದರೂ ನನ್ನನ್ನು ಸೇವಿಸುವವನಾದರೆ ಅವನು ನನ್ನನ್ನು ಹಿಂಬಾಲಿಸಲಿ." (ಯೋಹಾನನು 12 : 26)**

ಇದು ನಿಜವಾದ ರಾಜ್ಯದ ಸ್ಥಾಪನೆಯ ಸಮಯ—ಅದು ಬಹಳ ಹತ್ತಿರವಿದೆ. ಇದು (ಲೋಕದ) ಪ್ರತಿ ಮೂಲೆಯಿಂದಲೂ ಆಯ್ದುಕೊಂಡವರನ್ನು ಒಟ್ಟುಗೂಡಿಸುವ ಸಮಯವಾಗಿದೆ, ಈ ಸಾಂಕೇತಿಕ ಬ್ಯಾಬಿಲೋನಿನ ಪ್ರತಿಯೊಂದು ಸ್ಥಳದಲ್ಲೂ ಕರ್ತನ ಜನರು ಸೈತಾನನ ಈ ಸಾಧನಗಳಿಗೆ ಸೆರೆಯಾಳುಗಳಾಗಿದ್ದಾರೆ; ಇದು ಕ್ರಿಸ್ತನು ನಮ್ಮನ್ನು ಬಿಡುಗಡೆಗೊಳಿಸಿದ ವಿಷಯವನ್ನು ಮತ್ತೆ ದೃಢೀಕರಿಸುವ ಸಮಯ; ಇದು ಕರ್ತನ ಜನರು ಆತನನ್ನು ತಮ್ಮ ಏಕೈಕ ರಾಜ ಮತ್ತು ಮಾರ್ಗದರ್ಶಕನಾಗಿ [ನಿರ್ದೇಶಕನಾಗಿ] ಗುರುತಿಸಬೇಕಾದ ಸಮಯ; "ಉಸಿರು ಮೂಗಿನಲ್ಲಿ ಇರುವವರೆಗೆ ಬದುಕುವ ನರಮನುಷ್ಯನನ್ನು [ನಂಬುವದನ್ನು] ಬಿಟ್ಟು ಬಿಡಿರಿ; ಅವನು ಎಷ್ಟರವನೆಂದು ಎಣಿಸಬಹುದು? [ಯೆಶಾಯನು **2 : 22**] ಎಂಬ ವಾಕ್ಯವನ್ನು ಕೇಳುವ ಕಾಲ ಇದು. ಇದು ಕರ್ತನು ತನಗೆ ತುಂಬಾ ಇಷ್ಟವಾದ ರೀತಿಯಲ್ಲಿ ತನ್ನ ಸ್ವಂತ ಕ್ರಿಯೆಯನ್ನು ಅತ್ಯಂತ ಸಂತೋಷಕರವಾಗಿ ಮಾಡಲು ಶಕ್ತನಾಗಿದ್ದಾನೆ ಮತ್ತು ಇದು ನಿಜವಾಗಿಯೂ ಆತನವರಿಗೆ ಹೆಚ್ಚು ಅನುಕೂಲಕರವಾಗುವಂತೆ ಮಾಡುತ್ತದೆ ಎಂದು ಕರ್ತನ ಜನರು ಅರಿತುಕೊಳ್ಳುವ ಸಮಯ; ಇದು ಯಾವ ಪ್ರತಿನಿಧಿಗಳು, ಸತ್ಯದ ಯಾವ ಸಾಧನಗಳು, ಯಾವ ಸೇವೆಯನ್ನು ಆತ್ಮೀಕ ಇಸ್ರಾಯೇಲ್ಯರಿಗೆ ಕರ್ತನು ಒದಗಿಸಿದ್ದಾನೆ ಅಥವಾ ಒದಗಿಸುತ್ತಿದ್ದಾನೆಂದು ಕರ್ತನನ್ನು ನೋಡುವ ಕಾಲವಾಗಿದೆ. ನಾವು ಈ

ಪರಿಸ್ಥಿತಿಯನ್ನು ಅರಿತುಕೊಳ್ಳುವಾಗ ಪೋಪ್‌ಗಳು, ಕಾರ್ಡಿನಲ್ ಗಳು, ಸಭಾಧ್ಯಕ್ಷರು, ಸತ್ಯವೇದ ಶಾಸ್ತ್ರಿಗಳು– ಇವರೆಲ್ಲರ ವಿಷಯಗಳು ದೈವಿಕ ಏರ್ಪಾಡುಗಳಿಗೆ ವಿರೋಧವಾಗಿವೆ ಎಂದು ನಾವು ನೋಡುತ್ತೇವೆ – ಅದಕ್ಕೆ ನೇರ ವೈರತ್ವದಲ್ಲಿದೆ; ಆದರೆ ಅದೇನೆ ಇದ್ದರೂ ಹೆಸರಿಗೆ ಮಾತ್ರ ಇರುವ ಇಸ್ರಾಯೇಲ್ಯರಿಂದ ನಿಜವಾದ ಇಸ್ರಾಯೇಲ್ಯರು, ಆಯ್ಕೆಯಾಗುತ್ತಿರುವ ಅಮೂಲ್ಯವಾದ ಕರ್ತನ ಆಭರಣಗಳು, ಕರ್ತನ ಕೆಲಸವು ಅಡ್ಡಿಯಾಗಿಲ್ಲ ಮತ್ತು ಅಡ್ಡಿಯಾಗಲು ದೇವರು ಅನುಮತಿಸುವುದಿಲ್ಲ. ಸಾಮಾನ್ಯವಾಗಿ ಜನರು ಏನು ಮಾಡಿದರೂ ಕರ್ತನ ಈ ಕೆಲಸವು ಕ್ರಮೇಣವಾಗಿ ನಡೆಯುತ್ತಿದೆ. **R 3217 : 3**

## 2 ಆಗಸ್ಟ್

**"ನನ್ನ ಪ್ರಾಣವೇ, ಕುಗ್ಗಿಹೋಗಿರುವದೇನು? ಯಾಕೆ ನನ್ನಲ್ಲಿ ವ್ಯಾಕುಲ ಪಡುತ್ತೀ? ದೇವರನ್ನು ನಿರೀಕ್ಷಿಸು. ನನ್ನ ಮುಖದ ಲಕ್ಷಣವೂ ನನ್ನ ದೇವರೂ ಆಗಿರುವಾತನನ್ನು ನಾನು ಇನ್ನೂ ಕೊಂಡಾಡುವೆನು." (ಕೀರ್ತನೆಗಳು 42 : 11)**

ಕ್ರಿಸ್ತನ ನಿಮಿತ್ತ ಉಪದ್ರವದಲ್ಲಿ ನಂಬಿಗಸ್ತರಾಗಿರುವ ಯಾರಿಗಾದರೂ ಇನ್ನೂ ಸಮಾಧಾನ ಇಲ್ಲವೇ? ವಾಗ್ದಾನಗಳನ್ನು ದೃಢವಾಗಿ ಹಿಡಿದಿಡಲು ನಿಮಗೆ ನಂಬಿಕೆಯಿಲ್ಲದಿರುವುದು ಇದಕ್ಕೆ ಕಾರಣ – ಆತನೊಂದಿಗೆ ಪಾಡುಪಡಲು–ಯಾರೆಲ್ಲಾ ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನ ಹೆಜ್ಜೆಯ ಜಾಡನ್ನು ಹಿಂಬಾಲಿಸುತ್ತಾರೋ ಅವರೆಲ್ಲರಿಗೂ ಅತ್ಯಂತ ಮಹತ್ವದ ಮತ್ತು ಅಮೂಲ್ಯವಾದ ವಾಗ್ದಾನಗಳನ್ನು ಕೊಡಲ್ಪಟ್ಟಿದೆ.... ಆದರೆ ಪಾಡುಗಳಿಲ್ಲದೆ ನೀವು ಸಮಾಧಾನವನ್ನು ಹೊಂದಿದ್ದರೆ, ಎಲ್ಲಾ ಜನರು ನಿಮ್ಮನ್ನು ಕುರಿತು ಚೆನ್ನಾಗಿ ಮಾತನಾಡುವಾಗ, ಹುಷಾರಾಗಿರಿ! ಅದು ತನ್ನ ಕನಸಿನಲ್ಲಿ ಬರುವ ಸಮಾಧಾನವಾಗಿದ್ದು ನಿದ್ರೆಯಲ್ಲಿ ಅವನು ಕಿರೀಟವನ್ನು ಹೊಂದಿರುತ್ತಾನೆ. ಆದರೆ ಅವನು ನಿದ್ರೆಯಿಂದ ಎಚ್ಚರಗೊಂಡಾಗ ಅವನು ಬರಿದಾಗಿರುವುದನ್ನು ಕಂಡುಕೊಳ್ಳುತ್ತಾನೆ– ಅದು ಸಮುದ್ರದ ಮೇಲೆ ಸತ್ತವನಿಗೆ ಉಂಟಾಗುವ ಸಮಾಧಾನದಂತೆ ಅವನ ಶಾಂತತೆ ಇರುವದು. **R347 :6**

## 3 ಆಗಸ್ಟ್

**"ಹಿಂದಿನಂತೆ ಕರ್ತನು ಬಂದು ನನಗೆ ಕಾಣಿಸಿಕೊಂಡು–ಹೌದು, ಶಾಶ್ವತವಾದ ಪ್ರೀತಿಯಿಂದ ನಿನ್ನನ್ನು ಪ್ರೀತಿಮಾಡಿದ್ದೇನೆ; ಆದದರಿಂದ ಪ್ರೀತಿ ದಯೆಗಳಿಂದ ನಿನ್ನನ್ನು ಎಳೆದಿದ್ದೇನೆ." (ಯೆರೆಮೀಯ 31 : 3)**

ಇಡೀ ಜಗತ್ತು ಸಂತೋಷವನ್ನು ಹುಡುಕುತ್ತಿದೆ. ಯೇಸುವನ್ನು ನಿಜವಾಗಿಯೂ ಕಂಡುಕೊಂಡ ಕೆಲವರು ಮತ್ತು ಅವರ ಹೃದಯಗಳನ್ನು ಆತನಿಗೆ ಪೂರ್ಣವಾಗಿ ಪ್ರತಿಷ್ಠೆಪಡಿಸಿದವರು, ಮತ್ತು ಆತನಿಂದ ಜೀವದ ನೀರನ್ನು ಪಡೆದ– ಇಂತಹ ಕೆಲವರು ಮಾತ್ರ ಆ ಸಂತೋಷವನ್ನು ಕಂಡುಕೊಂಡಿದ್ದಾರೆ. ಆದರೆ ಲೋಕದವರು ವ್ಯರ್ಥವಾಗಿ [ಆ ಸಂತೋಷವನ್ನು] ಇತರ ಮಾರ್ಗಗಳಲ್ಲಿ ಹುಡುಕುತ್ತಿದ್ದಾರೆ. ಪರಿಶುದ್ಧರು ತಮ್ಮ ಹೃದಯಗಳಲ್ಲಿ ತೃಪ್ತಿಯನ್ನು ಕಂಡುಕೊಂಡಿದ್ದಾರೆ, ಇದರಿಂದ ಅವರ ಶೋಧನೆಗಳು, ದುಃಖಗಳು, ತೊಂದರೆಗಳು ಮತ್ತು ನಿರಾಶೆಗಳನ್ನು ಸರಿದೂಗಿಸಲು ಸಾಧ್ಯವಾಗುತ್ತದೆ ಮತ್ತು ಈ ರೀತಿಯಾಗಿ ಮನವರಿಕೆಯಾಗುವುದರಿಂದ ಮಹಿಮೆ ಹೊಂದಿ, ಅವರ ಅನುಭವಗಳಿಂದ ಒಳಿತನ್ನು ಸಾಧಿಸುತ್ತಾರೆ ಮತ್ತು ಇದರ ನಂತರ ಇನ್ನೂ ಹೆಚ್ಚಾದ ಮಹಿಮೆಯ ಐಶ್ವರ್ಯವನ್ನು ಹೊಂದುವುದಕ್ಕಾಗಿ ತಯಾರಾಗಲು ಇವು ಸಾಬೀತು ಪಡಿಸುತ್ತದೆ. **R 3496 : 4**

## 4 ಆಗಸ್ಟ್

**"ದೇವರು ಸಮಸ್ತವನ್ನೂ ಆತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು." (ಎಫೆಸದವರಿಗೆ 1 : 22)**

ಅತಿ ಪ್ರಿಯರೇ, ಸಮಯವು ಕಡಿಮೆಯಾಗಿದೆ, ನಾವು ಬಯಸುವ ದೊಡ್ಡ ಬಹುಮಾನವು ಹತ್ತಿರದಲ್ಲಿದೆ, ಸಾಧಿಸಬೇಕಾದ "ಗುರಿ" ಅಥವಾ ಗುಣಲಕ್ಷಣದ ಮಾನದಂಡವನ್ನು ಸ್ಪಷ್ಟವಾಗಿ ನಮ್ಮ ಮುಂದೆ ಇಡಲಾಗಿದೆ, ಮತ್ತು ಕರ್ತನಿಗೆ ಸಂಪೂರ್ಣ ಪ್ರತಿಷ್ಠೆಯ ಅವಶ್ಯಕತೆಯ ವಿವರಣೆಗಳೊಂದಿಗೆ ಸತ್ಯವೇದವು ಪ್ರಕಾಶಮಾನವಾಗಿದೆ, ಅದು ಸ್ವಯಂ ಮರಣವನ್ನು ಸೂಚಿಸುತ್ತದೆ ಎಂದು ನಮಗೆ ತೋರಿಸುತ್ತದೆ. ದೇವರ ಕೃಪೆಯಿಂದ, ಬೇರೆ ಎಲ್ಲಾ ತಲೆ ಮತ್ತು ಅಧಿಕಾರವನ್ನು ಸಂಪೂರ್ಣವಾಗಿ ಕತ್ತರಿಸಿ ಪಕ್ಕಕ್ಕೆ ಎಸೆಯಲಾಗಿದೆ ಮತ್ತು ಇನ್ನು ಮುಂದೆ ಅಪೋಸ್ತಲನು ವ್ಯಕ್ತಪಡಿಸಿದಂತೆ "ನಾನು ಇನ್ನೂ ಬದುಕುವದು ಕ್ರಿಸ್ತನಿಗಾಗಿಯೇ." –ಕ್ರಿಸ್ತನ ಶರೀರದ ಅಂಗವಾಗಿ, ಆತನ ಚಿತ್ತದಿಂದ ಮಾರ್ಗದರ್ಶನ ಹೊಂದಿಕೊಂಡು, ಆತನ ವಾಕ್ಯದ ಮೂಲಕ ಗ್ರಹಿಸಿಕೊಂಡು ಮತ್ತು ಆತನ ಏರ್ಪಾಡಿನ ಮೂಲಕ ಮತ್ತು ಆತನ ಉದಾಹರಣೆಯ ಮೂಲಕ ನಾವು ಗ್ರಹಿಸಿಕೊಳ್ಳುವಂತೆ ನಾವು ಒಬ್ಬೊಬ್ಬರು ನೋಡಿಕೊಳ್ಳಬೇಕಲ್ಲವೆ? ಇದು ನಮ್ಮ ಕರ್ತನ ಸ್ವರೂಪದ ಸಂಪೂರ್ಣ ಗುಣಲಕ್ಷಣದ ಇನ್ನೊಂದು ಚಿತ್ರಣವಾಗಿದೆ. ಆತನು ತನ್ನ ಸ್ವಂತ ನಾಯಕತ್ವವನ್ನು,

ತನ್ನ ಸ್ವಂತ ಚಿತ್ತವನ್ನು ತಂದೆಯ ಚಿತ್ತಕ್ಕೆ ಸಂಪೂರ್ಣವಾಗಿ ಒಪ್ಪಿಸಿಕೊಡಲಿಲ್ಲವೇ? ಆತನು ಖಂಡಿತವಾಗಿಯೂ ಹಾಗೆಯೇ ಮಾಡಿದನು; ಮತ್ತು ಆ ಪೂರ್ಣ ಪ್ರತಿಷ್ಠೆ ಮಾಡಿದ್ದರಿಂದ ತಂದೆಯಿಂದ ಪ್ರತಿಫಲ ಹೊಂದಿದಂತೆ, ನಮ್ಮ ಪೂರ್ಣ ಪ್ರತಿಷ್ಠೆಯು [ಮತ್ತು ಇದಕ್ಕಿಂತ ಕಡಿಮೆ ಎಂದಿಗೂ ಇಲ್ಲ] ನಮ್ಮ ಕರ್ತನು ಮತ್ತು ಶಿರಸ್ಸು ಆಗಿರುವಾತನಿಂದ ರಾಜ್ಯದಲ್ಲಿ ಸಂಪೂರ್ಣವಾಗಿ ಪ್ರತಿಫಲವನ್ನು ಪಡೆಯುತ್ತೇವೆ ಎಂಬ ಭರವಸೆ ನಮಗಿದೆ. **R 2846 : 1**

## 5 ಆಗಸ್ಟ್

**"ಆತನು ನನ್ನನ್ನು ನಂಬಿಗಸ್ತನೆಂದು ಎಣಿಸಿ ಈ ಸೇವೆಯಲ್ಲಿ ನೇಮಿಸಿಕೊಂಡದ್ದಕ್ಕಾಗಿ ನಾನು ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ." (1 ತಿಮೊಥೆಯನಿಗೆ 1 : 12)**

ಆಹಾ! ಹೌದು ನಮ್ಮ ಪ್ರತಿಯೊಂದು ಮಾತು ಮತ್ತು ಪ್ರತಿಯೊಂದು ಕ್ರಿಯೆಯ ಬಗ್ಗೆ ಕರ್ತನು ತಿಳಿದಿರುವಾಗ, ನಮ್ಮ ಮಾತುಗಳಿಂದಲೂ ಮತ್ತು ನಮ್ಮ ಕ್ರಿಯೆಗಳಿಂದಲೂ ಏನೋ ಉತ್ತಮವಾಗಿದೆ ಎಂದು ಎಣಿಸಲು ಆತನು ಸಂತೋಷಪಡುತ್ತಾನೆ ಎಂದು ತಿಳಿದುಕೊಳ್ಳುವದು ನಮಗೆ ಎಷ್ಟು ಆಶೀರ್ವಾದದ ತೃಪ್ತಿಯನ್ನುಂಟು ಮಾಡುತ್ತದೆ! ನಮ್ಮ ಮಾತುಗಳು ಯಾವಾಗಲೂ ನಮ್ಮ ಹೃದಯದ ಪೂರ್ಣ ಭಾವನೆಗಳನ್ನು ಪ್ರತಿನಿಧಿಸುವುದಿಲ್ಲ; ನಮ್ಮ ನಡತೆಯು ಮಾನದಂಡಕ್ಕೆ ತಕ್ಕಂತೆ ಇರುವುದಿಲ್ಲ; ಬಹುಶಃ ನಮ್ಮ ಅತ್ಯುತ್ತಮ ಸಾಮರ್ಥ್ಯದಿಂದ–ಮಾತನಾಡಿದ ನಂತರ ಮತ್ತು ಕ್ರಿಯೆಗಳನ್ನು ಮಾಡಿದ ನಂತರ – ಅವು ದೇವರ ಮಹಿಮೆಗೆ ತಕ್ಕಂತೆ ಇರದೆ ಕೊರತೆಯುಳ್ಳದ್ದಾಗಿದೆ ಮತ್ತು ನಮ್ಮ ಆದರ್ಶಗಳು, ಆಸೆಗಳು ಮತ್ತು ಪ್ರಯತ್ನಗಳು ಕೊರತೆಯುಳ್ಳದ್ದಾಗಿದೆ ಎಂದು ಅರಿತುಕೊಳ್ಳುತ್ತೇವೆ. ಹಾಗಾದರೆ, ನಮ್ಮ ಅಪರಿಪೂರ್ಣ ಕಾರ್ಯವು ಕ್ರಿಸ್ತನ ಮೂಲಕ ದೇವರಿಗೆ ಅಂಗೀಕಾರವಾಗಿದೆ ಎಂದು ತಿಳಿಯುವುದು ನಮಗೆ ಎಷ್ಟು ಸಮಾಧಾನಕರವಾಗಿದೆ; ಏಕೆಂದರೆ ಕರ್ತನು ನಮ್ಮ ಉದ್ದೇಶಗಳು ಮತ್ತು ನಮ್ಮ ಚಿತ್ತಗಳನ್ನು ಎಣಿಸುತ್ತಾನೆ. ಆತನ ನಾಮಕ್ಕೆ ಸ್ತೋತ್ರವಾಗಲಿ! ಆತನು ಅಂಗೀಕರಿಸುವ ಯಾವುದೇ ಮಾನದಂಡದ ಪರಿಪೂರ್ಣತೆಗೆ ಬರುವ ಭರವಸೆ ನಮಗಿರಲಿಲ್ಲ. ಆತನ ಕೃಪೆಯ ಏರ್ಪಾಡಿನಿಂದ, ನಮ್ಮ ಅಪೂರ್ಣತೆಯು ನಮ್ಮ ವಿಮೋಚಕನ ಪರಿಪೂರ್ಣತೆ ಹಾಗೂ ತ್ಯಾಗಬಲಿಯ ಮೂಲಕ ಮರೆಯಾಗಿದೆಯಲ್ಲವೆ ಮತ್ತು ನಮ್ಮ ಹೃದಯದ ಉದ್ದೇಶಗಳಿಂದ ಹಾಗೂ ನಮ್ಮ ಹೃದಯದ ಬಯಕೆಗಳಿಂದಲೇ ನಮ್ಮ ಕ್ರಿಯೆಗಳು ಅಂಗೀಕರಿಸಲ್ಪಡುತ್ತದೆ. **R 3002 : 1**

## 6 ಆಗಸ್ಟ್

**"ಒಬ್ಬ ಮನುಷ್ಯನಿಗೆ ಸರಿಯೆಂದು ತೋರುವ ಮಾರ್ಗವಿದೆ. ಅದರ ಅಂತ್ಯವು ಮರಣದ ಮಾರ್ಗಗಳೇ." (ಜ್ಞಾನೋಕ್ತಿಗಳು 14 : 12)**

ಈ ವಾಕ್ಯವನ್ನು ಎಲ್ಲರೂ ಸ್ಮರಿಸುವುದಕ್ಕೆ ಯೋಗ್ಯವಾಗಿದೆ. ನಮ್ಮ ಸ್ವಂತ ವ್ಯವಹಾರಗಳನ್ನು ಮಾರ್ಗದರ್ಶನ ಮಾಡಲು ಮತ್ತು ನಿರ್ದೇಶಿಸಲು ನಾವು ಸಮರ್ಥರಲ್ಲ ಎಂಬುದು ಇದರ ಪಾಠವಾಗಿದೆ; ಅಂದರೆ ನಮಗೆ ದೈವಿಕ ಸಲಹೆ ಬೇಕು. ಸಂಪೂರ್ಣ ಜ್ಞಾನದಿಂದ ಬೆಂಬಲಿತವಾಗಿದ್ದರೂ ಮನುಷ್ಯನ ತೀರ್ಪು ವಿಶ್ವಾಸಾರ್ಹವಲ್ಲ; ಆದರೆ ನಮ್ಮ ಜ್ಞಾನದ ಕೊರತೆ ಮತ್ತು ನ್ಯಾಯತೀರ್ಪಿನ ಕೊರತೆಯ ದೃಷ್ಟಿಯಿಂದ, ಮನುಷ್ಯನಿಗೆ ಬಹಳ ಸ್ಪಷ್ಟವಾಗಿ ಅನೇಕ ವಿಧಗಳು ಸರಿಯಾದ, ಬುದ್ಧಿವಂತ, ಅನುಕೂಲಕರ ಮತ್ತು ಬಯಸುವಂಥದೆಂದು ತೋರುತ್ತದೆ, ಅದನ್ನು ಮುಂದುವರಿಸಿದರೆ ನಿರಾಶೆ ಹಾಗೂ ಕುಚೋದ್ಯಕ್ಕೆ ಕಾರಣವಾಗುತ್ತದೆ ಮತ್ತು ಅಂತಿಮವಾಗಿ ಮರಣಕ್ಕೆ ಕೊಂಡೊಯ್ಯುತ್ತದೆ – ಎರಡನೆಯ ಮರಣಕ್ಕೆ ಕೊಂಡೊಯ್ಯುತ್ತದೆ. ಆದ್ದರಿಂದ ಎಲ್ಲರಿಗೂ ಬುದ್ಧವಂತಿಕೆಯ ಮತ್ತು ಸರಿಯಾದ ನಡತೆ ಯಾವುದೆಂದರೆ ನಮ್ಮ ಸ್ವಂತ ಕೊರತೆಯನ್ನು, ಜ್ಞಾನಹೀನತೆಯನ್ನು ಅರಿತುಕೊಳ್ಳುವದು ಮತ್ತು ಅಂಗೀಕರಿಸುವದಾಗಿದೆ ಹಾಗೂ ಮಾರ್ಗದರ್ಶನಕ್ಕಾಗಿ ನಮ್ಮ ಮಹಾನ್ ಸೃಷ್ಟಿಕರ್ತನನ್ನು ನೋಡುವುದು ಸೂಕ್ತವಾಗಿದೆ. "ನಿನ್ನ ಯೌವನದ ಕಾಲದಲ್ಲಿ ನಿನ್ನ ಸೃಷ್ಟಿಕರ್ತನನ್ನು ಈಗ ನೆನೆಸು" ಎಂಬ ಸತ್ಯವೇದದ ಆಜ್ಞೆಯನ್ನು ಗಮನಿಸುವವರು ಧನ್ಯರು. ಎಷ್ಟು ಬೇಗನೆ ಈ ಸರಿಯಾದ ಶಿಕ್ಷಣವನ್ನು ಆರಂಭಿಸುತ್ತೇವೋ ಅದರ ಫಲಿತಾಂಶಗಳು ಎಲ್ಲಾ ರೀತಿಯಲ್ಲಿ ಅಷ್ಟೇ ಉತ್ತಮವಾಗಿರುತ್ತದೆ, ಕರ್ತನ ಚಿತ್ತಕ್ಕೆ ನಮ್ಮ ಚಿತ್ತವನ್ನು ಒಪ್ಪಿಸುವುದು ಸುಲಭವಾಗಿರುತ್ತದೆ; ಮತ್ತು ಕರ್ತನ ಮಾರ್ಗದರ್ಶನದ ಮೂಲಕ ನಮಗೆ ಬರುವ ಪಾಠಗಳು ತೃಪ್ತಿ ಮತ್ತು ಸಮಾಧಾನವು ನಮಗೆ ಹೆಚ್ಚು ಅಮೂಲ್ಯವಾಗಿರುತ್ತದೆ. ಕರ್ತನ ಚಿತ್ತದಂತೆ ಎಲ್ಲಾ ವಿಷಯಗಳು ನಮ್ಮಲ್ಲಿ ನೆರವೇರಲಿ ಎಂದು ನಮ್ಮ ಹೃದಯ ಮತ್ತು ಜೀವನ ಮತ್ತು ನಮ್ಮ ಎಲ್ಲಾ ಹಿತಾಸಕ್ತಿಗಳನ್ನು ಪೂರ್ಣವಾಗಿ ಪ್ರತಿಷ್ಠೆಪಡಿಸುವದು ಪ್ರತಿಯೊಬ್ಬ ನೀತಿವಂತನಾದ ವಿಶ್ವಾಸಿಗೆ ಅವಶ್ಯವಾಗಿದೆ, ಏಕೆಂದರೆ ಅವರು ಕ್ರಿಸ್ತನ ಶರೀರದ ಅಂಗವಾಗಿ ಐಕ್ಯವಾಗುವಂತಹ ಸಭೆಯಾಗಿದ್ದಾರೆ **R 3241 : 1**

## 7 ಆಗಸ್ಟ್

**"ನೀವು ಲೋಕಕ್ಕೆ ಬೆಳಕಾಗಿದ್ದೀರಿ." ( ಮತ್ತಾಯನು 5 : 14 )**

ಪವಿತ್ರಾತ್ಮವನ್ನು ಅಧಿಕ ಪ್ರಮಾಣದಲ್ಲಿ ಹೊಂದಲು ನಾವು ಕರ್ತನ ಹತ್ತಿರ ಇರಬೇಕು, ಏಕೆಂದರೆ ನಾವು ಆತನಿಂದ ದೂರವಾದರೆ ಬೆಳಕು ನಮ್ಮಿಂದ ಹೊರಟು ಹೋಗುತ್ತದೆ. ಪ್ರಾರ್ಥನೆಯ ಸವಲತ್ತು ಅಥವಾ ಸತ್ಯವೇದದ ಅಧ್ಯಯನ ಅಥವಾ ಕರ್ತನೊಂದಿಗಿನ ಐಕ್ಯತೆಯ ಮೂಲಕ ಆತನ ಬಗ್ಗೆ ಯೋಚಿಸುವಲ್ಲಿ ವಿಫಲವಾದರೆ, ಆತ್ಮದ ಬೆಳಕು ಮಂಕಾಗುತ್ತದೆ. ಮತ್ತೊಂದೆಡೆ, ಇದು ನಮ್ಮದೇ ಆದ ಅಪೂರ್ಣತೆಗಳ ಮನವರಿಕೆಗೆ ಅನುಗುಣವಾಗಿ ಮತ್ತು ಕರ್ತನಿಗಾಗಿ ಎಷ್ಟರ ಮಟ್ಟಿಗೆ ನಮ್ಮ ಪ್ರತಿಷ್ಟೆ ಇದೆಯೋ ಅಷ್ಟರ ಮಟ್ಟಿಗೆ ಆ ಬೆಳಕು ಪ್ರಕಾಶಮಾನವಾಗಿರುತ್ತದೆ. ಆತನ ವಾಕ್ಯದಲ್ಲಿ ವ್ಯಕ್ತಪಡಿಸಿದಂತೆ, ನಾವು ಆತನ ಚಿತ್ತವನ್ನು ಅಧ್ಯಯನ ಮಾಡುವ ಉತ್ಸಾಹದಿಂದ ನಾವು ಇದನ್ನು ಪ್ರಕಟಿಸುತ್ತೇವೆ ಮತ್ತು ಜೀವನದ ವ್ಯವಹಾರಗಳಲ್ಲಿ ಆ ಚಿತ್ತವನ್ನು ನಾವು ಅಭ್ಯಾಸ ಮಾಡುತ್ತೇವೆ. ನಮ್ಮ ಬೆಳಕು ಪ್ರಕಾಶಮಾನವಾಗಿ ಉರಿಯುವಂತೆ ಮಾಡಲು, ನಾವು ಎಣ್ಣೆಯನ್ನು ಪೂರೈಸುವ ವಿಧಾನಗಳು ಇವುಗಳಾಗಿವೆ. **R 5129 : 3**

## 8 ಆಗಸ್ಟ್

**"ತನ್ನನ್ನು ಹುಟ್ಟಿಸಿದಾತನನ್ನು ಪ್ರೀತಿಸುವ ಪ್ರತಿಯೊಬ್ಬನು ಆತನಿಂದ ಹುಟ್ಟಿದವನನ್ನು ಸಹ ಪ್ರೀತಿಸುತ್ತಾನೆ." ( 1 ಯೋಹಾನನು 5 : 1 )**

ಯಾರು ತಂದೆಯನ್ನು ಪ್ರೀತಿಸುತ್ತಾನೋ ಅವನು ಮಗನನ್ನು ಸಹ ಪ್ರೀತಿಸಬೇಕು, ಆತನು ತಂದೆಯ ತತ್ವದ ಸ್ವರೂಪನಾಗಿದ್ದಾನೆ ಮತ್ತು ತನ್ನ ಸ್ವಂತ ಶರೀರದಲ್ಲಿ ತಂದೆಯ ಮಹಿಮೆಯುಳ್ಳ ಗುಣಲಕ್ಷಣವನ್ನು ಪ್ರಕಟಪಡಿಸಿದ್ದಾನೆ. ಹೇಗೆ ಮಗನು ತಂದೆಯನ್ನು ಪ್ರೀತಿಸಿದನೋ, ತಂದೆಯ ಬಳಿ ಪ್ರಾರ್ಥಿಸಿದನೋ, ಮತ್ತು ಆತನು ತಂದೆಯ ವ್ಯವಹಾರದಲ್ಲಿ ನಿರತನಾಗಿರಬೇಕೆಂದು ಭಾವಿಸಿದನೋ, ಮತ್ತು ಅಂತಿಮವಾಗಿ ತಂದೆಯ ಚಿತ್ತವನ್ನು ನೆರವೇರಿಸುವದಕ್ಕಾಗಿ – ತಂದೆಯು ತನ್ನನ್ನು ಕಳುಹಿಸಿದ ಕೆಲಸವನ್ನು ನೆರವೇರಿಸುವದಕ್ಕಾಗಿ ಸತ್ತನೋ, ಹಾಗೆಯೇ ನಮ್ಮ ಪ್ರೀತಿಯ ವಿಮೋಚಕನ, ನಮ್ಮ ತಲೆಯ [ಶಿರಸ್ಸಿನ] ಆತ್ಮದೊಂದಿಗೆ ನಾವು ತುಂಬಿದವರಾಗಿರಬೇಕು. ಆತನ ಸದಸ್ಯರಾದ ನಾವು ತಂದೆಯ ಬಗ್ಗೆ ಮತ್ತು ಇಲ್ಲಿ ನಿರ್ದಿಷ್ಟ ಪಡಿಸಿರುವಂತೆ ಆತನ ಚಿತ್ತವನ್ನು ನೆರವೇರಿಸಲು ಅಂತಹ ಭಯ ಭಕ್ತಿಯನ್ನು ಹೊಂದಿರಬೇಕು. ಇಸ್ರಾಯೇಲ್ ಜನಾಂಗವು ಕರ್ತನನ್ನು [ತಂದೆಯಾದ ದೇವರನ್ನು] ಪೂರ್ಣ ಹೃದಯದಿಂದ, ಆತ್ಮದಿಂದ, ಬಲದಿಂದ ಪ್ರೀತಿಸಲು ಸಾಧ್ಯವಾಗಲಿಲ್ಲ; ಈ ಉಪದೇಶವು ವೈಯಕ್ತಿಕ ರೀತಿಯದ್ದಾಗಿದೆ ಎಂದು ಅರ್ಥಮಾಡಿಕೊಳ್ಳಬೇಕು. ಅದೇ ರೀತಿ ಸಭೆ, ಆತ್ಮೀಕ ಇಸ್ರಾಯೇಲ್, [ಒಟ್ಟಾಗಿ]

ಕರ್ತನನ್ನು ಹೃದಯದಿಂದ, ಆತ್ಮದಿಂದ, ಅಸ್ತಿತ್ವದಿಂದ, ಬಲದಿಂದ ಪ್ರೀತಿಸುವಂತೆ ಕರೆಯಲಾಗಿಲ್ಲ, ಆದರೆ ಕರ್ತನವರಾದ ಒಬ್ಬೊಬ್ಬರನ್ನು ವೈಯಕ್ತಿಕವಾಗಿ ಕರೆಯಲಾಗಿದೆ, ಅವರು ಆತನನ್ನು ಮೆಚ್ಚಿಸಲು, ಆತನಿಗೆ ಸೇವೆ ಮಾಡಲು, ವಿಧೇಯತೆಯಿಂದ ತಮ್ಮ ಜೀವನವನ್ನು ತ್ಯಾಗಮಾಡಲು ಬಯಸುವ ವ್ಯಕ್ತಿಗಳಾಗಿ ಆತನ ಚಿತ್ತಕ್ಕೆ ಮತ್ತು ದೈವಿಕ ಉದ್ದೇಶಕ್ಕಾಗಿ ಮುಂದೆ ಬರುವವರನ್ನು ಕರೆಯಲಾಗುತ್ತಿದೆ. **R 4052 : 2**

## 9 ಆಗಸ್ಟ್

**"ಲೋಟನ ಹೆಂಡತಿಯನ್ನು ಜ್ಞಾಪಕಮಾಡಿಕೊಳ್ಳಿರಿ." ( ಲೂಕನು 17 : 32 )**

ನಮ್ಮ ಕರ್ತನು ಛಾಯೆಯಲ್ಲಿ ಸೂಚಿಸಿರುವ ಈ ವಿಶಿಷ್ಟ ಘಟನೆಯ ನಿಜಸ್ವರೂಪಕ್ಕೆ ಗಮನ ಹರಿಸಬೇಕಾದ ಕೆಲವರು ಈಗ ಇದ್ದಾರೆ ಎಂದು ನಾವು ನಂಬುತ್ತೇವೆ. ದೈವಿಕ ಖಂಡನೆಗೆ ಒಳಗಾದವರ ಬಗ್ಗೆ ಸಹಾನುಭೂತಿ ತೋರಿಸಲು ಮತ್ತು ಸಹೋದರತ್ವವನ್ನು ಹೊಂದುವ ಮನೋಭಾವನೆ ಇರಬೇಕಾಗಿದೆ. ಸೊದೋಮಿನ ವಿನಾಶವನ್ನು "ಉದಾಹರಣೆಯಾಗಿ ರೂಪಿಸಲಾಗಿದೆ" ಅಥವಾ ಛಾಯೆಯಾಗಿದೆ ಎಂದು ಪರಿಶುದ್ಧ ಯೂದನು ನಮಗೆ ತಿಳಿಸಿದ್ದಾರೆ. ಕರ್ತನಿಗಿಂತ ಹೆಚ್ಚು ಕೃಪೆಯುಳ್ಳವರು ಅಥವಾ ದೀರ್ಘಶಾಂತರು ಎಂದು ಭಾವಿಸುವವರು ತಮ್ಮನ್ನು ತಾವೇ ವಿರೋಧಿಗಳನ್ನಾಗಿ ಮಾಡಿಕೊಳ್ಳುತ್ತಾರೆ, ಅವರು ನೀತಿಯ ತತ್ವಗಳ ವಿದ್ಯಾರ್ಥಿಗಳಾಗುವ ಬದಲು ಯೆಹೋವನಿಗೇ ನ್ಯಾಯಾಧೀಶರು ಮತ್ತು ಬೋಧಕರಾಗಲು ಪ್ರಯತ್ನಿಸುತ್ತಾರೆ. ನಮ್ಮ ನೀತಿಗಿಂತ ಹೆಚ್ಚಾಗಿ ದೇವರ ನಿರ್ಧಾರಗಳು ಬುದ್ಧಿವಂತಿಗೆಯಾಗಿದೆ ಮಾತ್ರವಲ್ಲದೆ, ಅಧಿಕ ನೀತಿಯುಳ್ಳದ್ದಾಗಿದೆ ಎಂಬ ಸರಿಯಾದ ಹೃದಯದ ವರ್ತನೆ ಇರುವವರು ಈ ವಿಚಾರವನ್ನು ಅಂಗೀಕರಿಸುತ್ತಾರೆ. ಇದರ ಪರಿಣಾಮವಾಗಿ ಯಾರಾದರೂ ಪ್ರಸ್ತುತ(ಈಗಿನ) ಬೆಳಕನ್ನು ಅನುಭವಿಸಿ ನಂತರ ಕರ್ತನನ್ನು ಅಗಲಿ, ಇದರಿಂದಾಗಿ ಹೊರಗಿನ ಕತ್ತಲೆಗೆ ಕರೆದೊಯ್ಯಲ್ಪಟ್ಟರೆ, ಇಂಥವರು ಹೀಗೆ ಬಿಟ್ಟುಹೋಗುವ ಮೊದಲು "ಜೀವವುಳ್ಳ ದೇವರನ್ನು ಬಿಟ್ಟು ಹೋಗುವುದಕ್ಕೆ ಕೆಟ್ಟ ಹೃದಯವುಳ್ಳ ಅಪನಂಬಿಕೆಯೇ" ಕಾರಣ ಎಂಬ ತೀರ್ಮಾನಕ್ಕೆ ನಾವು ಬರಬೇಕು. **R 5948 : 3**

## 10 ಆಗಸ್ಟ್

**"ಆದರೆ ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ." ( 1 ಥೆಸಲೋನಿಕದವರಿಗೆ 5 : 4 )**

ಪ್ರಿಯ ಸಹೋದರರೇ, ನಮ್ಮ ಪ್ರಸ್ತುತ(ಈಗಿನ) ಮನೋಭಾವವು ದೇವರ ಬಗ್ಗೆ ಅಪಾರವಾದ ಕೃತಜ್ಞತೆಯುಳ್ಳದ್ದಾಗಿರಬೇಕು, ಸುಂದರವಾದ ಸತ್ಯದ ಬಗ್ಗೆ ಅಧಿಕವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ಆತನು ಈ ವಿಚಾರವನ್ನು ನಾವು ನೋಡುವ ಹಾಗು ಗುರುತಿಸುವ ಭಾಗ್ಯವನ್ನು ನೀಡಿದ್ದಾರೆ ಮತ್ತು ಈ ಸತ್ಯವನ್ನು ಇತರರಿಗೆ ತಿಳಿಸಲು ಸಹಾಯ ಮಾಡುವಲ್ಲಿ ಉತ್ಸಾಹವನ್ನು ಹೆಚ್ಚಿಸಬೇಕು. ಈ ಮಧ್ಯೆ ನಮ್ಮ ತಿಳುವಳಿಕೆಯ ಕಣ್ಣುಗಳು ಈಗ ಪ್ರಗತಿಯಲ್ಲಿರುವ ಸರ್ವಶಕ್ತ ದೇವರ, ಮಹಾ ದಿನದ ಯುದ್ಧವನ್ನು ಸ್ಪಷ್ಟವಾಗಿ ಗ್ರಹಿಸಬೇಕು; ಮತ್ತು ನಮ್ಮ ನಂಬಿಕೆಯು ನಮ್ಮ ತಿಳುವಳಿಕೆಯ ದೃಷ್ಟಿಗೆ ವಾಕ್ಯದ ಮೂಲಕ ಮಾರ್ಗದರ್ಶನ ನೀಡುವುದರಿಂದ–ಮೆಸ್ಸೀಯನ ರಾಜ್ಯದ ಮಹಿಮೆಯುಳ್ಳ ಫಲಿತಾಂಶವನ್ನು ನೋಡಲು ನಮಗೆ ಅನುವು ಮಾಡಿಕೊಡಬೇಕು. ಇದಲ್ಲದೆ ಸುಗ್ಗಿಯ ಕೆಲಸವು ಎಷ್ಟು ಕಾಲ ಉಳಿಯುತ್ತದೆ ಎಂದು ನಮಗೆ ತಿಳಿಯದು–ದೈವಿಕ ನೇಮಕಾತಿಯ ಮೂಲಕ ಇಡೀ ವಿಷಯವನ್ನು ಜವಾಬ್ದಾರಿ ವಹಿಸಿರುವ ಮಹಾನ್‌ನಾಯಕನು ತಪ್ಪು ಮಾಡಲು ಸಾಧ್ಯವೇ ಇಲ್ಲದಿರುವ ಬುದ್ಧಿವಂತನಾಗಿರುವುದರಿಂದ, ಆತನು ನಮಗೆ ವಾಗ್ದಾನ ಮಾಡಿರುವುದೇನೆಂದರೆ, ನಮಗೆ ಬರುವ ಎಲ್ಲಾ ಅನಭವಗಳು, ಆತನನ್ನು ನಾವು ಪ್ರೀತಿಸುತ್ತಿರುವುದರಿಂದ ಎಲ್ಲವೂ ಒಳ್ಳೇದಕ್ಕಾಗಿ ಒಟ್ಟಾಗಿ ಸಂಭವಿಸುತ್ತವೆಯೆಂದು ನಾವು ಬಲ್ಲೆವು ಮತ್ತು ಆತನ ಉದ್ದೇಶಕ್ಕೆ ತಕ್ಕಂತೆ ಕರೆಯಲ್ಪಡುವವರಾಗಿದ್ದರೆ, ನಮ್ಮ ಕರೆಯನ್ನು ಮತ್ತು ಆರಿಸಲ್ಪಡುವಿಕೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. **R 5951 : 4**

## 11 ಆಗಸ್ಟ್

**"ಉತ್ಸಾಹ ಧ್ವನಿಯನ್ನು ತಿಳಿದ ಜನರು ಧನ್ಯರು; ಕರ್ತನೇ, ನಿನ್ನ ಮುಖದ ಬೆಳಕಿನಲ್ಲಿ ಅವರು ನಡೆದುಕೊಳ್ಳುವರು." ( ಕೀರ್ತನೆಗಳು 89 : 15 )**

ಈ ಸುವಾರ್ತೆ ಯುಗದ ಅಂತಿಮ ದಿನಗಳಲ್ಲಿ ಆತನ ಕೃಪೆಯ ಸಂದೇಶವು ಸಾಮಾನ್ಯವಾಗಿ ಸ್ವೀಕರಿಸಲ್ಪಟ್ಟ ಸಂದೇಶಕ್ಕಿಂತ ವಿಭಿನ್ನವಾಗಿರುತ್ತದೆ, ಇದನ್ನು ಸುವಾರ್ತೆ ಎಂದು ತಪ್ಪಾಗಿ ಹೆಸರಿಡಲಾಗಿದೆ, ಇದನ್ನು ಹೊಸ ಹಾಡು ಎಂದು ಸರಿಯಾಗಿ ಕರೆಯುವದು ಸೂಕ್ತವಾಗಿದೆ ಎಂಬ ಅಂಶವನ್ನು ನಮ್ಮ ಕರ್ತನು ಸಾಂಕೇತಿಕವಾಗಿ ನಮಗೆ ತೋರಿಸಿದನು. ಇದು ಮೋಶೆಯ ಹಳೆಯ ಹಾಡು ಆಗಿದ್ದರೂ–ಆಶೀರ್ವಾದದ ಸಂದೇಶವನ್ನು ಮೋಶೆಯ ಬರವಣಿಗೆಯಲ್ಲಿ ಮತ್ತು ನ್ಯಾಯ ಪ್ರಮಾಣದ ಎಲ್ಲಾ ಸಂಪ್ರದಾಯದ ಆಚರಣೆಗಳಲ್ಲಿ ಛಾಯೆಯಾಗಿ ತೋರಿಸಲಾಗಿದೆ;....ಮತ್ತು ದೇವರ ಕುರಿಮರಿಯಾದಾತನನ್ನು ಕುರಿತು ಎಲ್ಲಾ

ಅಪೋಸ್ತಲರು ಸಾಕ್ಷಿ ಹೇಳಿರುವುದನ್ನು ಮತ್ತು "ಲೋಕದ ಪಾಪವನ್ನು ತೆಗೆದು ಹಾಕುವದಕ್ಕಾಗಿ" ಆತನಿಂದ ನೆರವೇರಿಸಬೇಕಾದ ಮಹತ್ತರವಾದ ಕೆಲಸವಾಗಿದೆ. ಈಗಿನ ಸತ್ಯದ ಜ್ಞಾನದಿಂದ ದೇವರ ಆಶೀರ್ವಾದವನ್ನು ಹೊಂದಿದವರು ಈಗ ಹಾಡುತ್ತಿರುವ ಹಾಡು ಇದೇ ಹಾಡಾಗಿದೆ. ಇದು "ಉತ್ಸಾಹ ಧ್ವನಿಯ" ಹಾಡಾಗಿದೆ. ಇದು ಆಶೀರ್ವಾದ ಹೊಂದಿದ ಜನರಿಗೆ ಮಾತ್ರ ತಿಳಿದಿದೆ ಅಥವಾ ಅವರು ಮಾತ್ರ ಹಾಡಬಹುದು.....ನಮ್ಮ ವಾಕ್ಯವು ಸೂಚಿಸುವುದೇನೆಂದರೆ "ಉತ್ಸಾಹ ಧ್ವನಿ"ಯನ್ನು ತಿಳಿದಿರುವ ಜನರಾಗಿರಬೇಕಾದರೆ ದೇವರ ಮುಖದ ಬೆಳಕಿನಲ್ಲಿ ನಡೆಯುವುದು ಅವಶ್ಯವಾಗಿದೆ. ಅಥವಾ ಈ ಹೇಳಿಕೆಯನ್ನು ತಿರುಗಿಸಿ ಹೇಳಿದರೆ, ದೇವರ ಮುಖದ ಬೆಳಕಿನಲ್ಲಿ ನಡೆಯುವವರೆಲ್ಲರೂ ಆತನಿಂದ ಆಶೀರ್ವದಿಸಲ್ಪಟ್ಟ ಜನರಾಗಿರುವರು, ಮತ್ತು ಉತ್ಸಾಹ ಧ್ವನಿಯನ್ನು ಕುರಿತು ತಿಳಿದಿರುವರು. **R 2569 : 6**

## 12 ಆಗಸ್ಟ್

**"ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ದೇವರೊಂದಿಗೆ ಸಮಾಧಾನ ಉಂಟಾಗಿದೆ." (ರೋಮಾಪುರದವರಿಗೆ 5 : 1)**

ಪ್ರತಿಷ್ಠೆ ಮತ್ತು ಅಂಗೀಕಾರದ ಹಂತಕ್ಕೆ ಬರದೆ ಇರುವ, ಮತ್ತು ಕೇವಲ ಗುಡಾರದ ಪ್ರಾಕಾರದ ಮೂಲಕ ಸಮೀಪಿಸುತ್ತಿರುವ, ಯಾರಿಗೇ ಆಗಲಿ ಈ ವಾಕ್ಯವು ಅನ್ವಯಿಸುವುದಿಲ್ಲ. ಆದರೂ ಇವರು ಪ್ರಗತಿಯಲ್ಲಿರುವಾಗ ಸ್ವಲ್ಪ ಅಳತೆಯಲ್ಲಿ ಸಮಾಧಾನವನ್ನು ಹೊಂದಿರುತ್ತಾರೆ. ಪಾಪವನ್ನು ದೂರವಿಟ್ಟು ಆತನ ಹತ್ತಿರಕ್ಕೆ ಬರುವ ಪ್ರಯತ್ನದ ಮೂಲಕ ದೇವರ ಕಡೆಗೆ ತಿರುಗಿ ಹೋಗಲು ಒಂದು ಮಾರ್ಗವಿದೆ ಎಂದು ಕಂಡುಕೊಳ್ಳುವುದರಿಂದ ಒಂದು ನಿರ್ಧಿಷ್ಟ ಅಳತೆಯ ಸಮಾಧಾನ ಮತ್ತು ಸಂತೋಷ ಬರುತ್ತದೆ; ಆದರೆ ಈ ವಾಕ್ಯದಲ್ಲಿ ಅಪೋಸ್ತಲನು ಹೇಳಿರುವ ಸಭೆಯ ಸಮಾಧಾನವು ದೇವರ ಪುತ್ರರ ಸ್ಥಿತಿಗೆ ಬಂದವರಿಗೆ ಮಾತ್ರ ಅನ್ವಯಿಸುತ್ತದೆ. ದೇವರು ಬೇರೆ ಯಾರೊಂದಿಗೂ ಸಮಾಧಾನ ಹೊಂದಿಲ್ಲ. **R 5960 : 1**

## 13 ಆಗಸ್ಟ್

**"ಆಗ ಅಪೋಸ್ತಲರು ಕರ್ತನಿಗೆ-ನಮ್ಮ ನಂಬಿಕೆಯನ್ನು ಹೆಚ್ಚಿಸು ಅಂದರು" ( ಲೂಕನು 17 : 5 )**

ನಾವು ಈ ಯುಗದ ಸುಗ್ಗಿಯ ಕಾಲದಲ್ಲಿದ್ದೇವೆ, ಮತ್ತು ಸುಗ್ಗಿಯ ಕೆಲಸವು ಪ್ರಗತಿಯಲ್ಲಿದೆ ಎಂದು ನಾವು ನಂಬಿದರೆ, ಮತ್ತು ನಾವು ಈ ಸುಗ್ಗಿಯಲ್ಲಿ ಭಾಗವಹಿಸುವವರಾಗಿದ್ದರೆ, ಮಹಾನ್ ಕೊಯ್ಯುವವನು ನಮ್ಮನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಮತ್ತು ಆಶೀರ್ವದಿಸಲು ಸಮರ್ಥನಾಗಿದ್ದಾನೆಂದು ನಾವು ನಂಬೋಣ. ಮತ್ತು ಯಾರೂ ಮೋಡಗಳು ಮತ್ತು ನಿರುತ್ಸಾಹಗಳನ್ನು ನೋಡಬಾರದು, ಆದರೆ ಪ್ರತಿಯೊಬ್ಬರೂ ತನ್ನ ಕೈಗಳಿಂದ ಏನು ಮಾಡಲು ಸಾಧ್ಯವೋ ಅದನ್ನು ತನ್ನ  ಪೂರ್ಣಶಕ್ತಿಯಿಂದ ಮಾಡಲಿ, ನಂಬಿಕೆಯ ಕಣ್ಣಿನಿಂದ ನಮ್ಮ ನಾಯಕನಾದ "ಯೇಸುವಿನ ಕಡೆಗೆ ನೋಡುತ್ತಾ", ನಾವು ಅನೇಕರನ್ನು ರಾಜ್ಯದ ಕಡೆಗೆ ತರಲು ಸಾಧ್ಯವೋ ಅಥವಾ ಇಲ್ಲವೋ, (ಯೇಸು)ರಾಜನಿಗೆ ಕನಿಷ್ಟ ಪಕ್ಷ ನಮ್ಮ ಪ್ರೀತಿ ಮತ್ತು ಉತ್ಸಾಹದ ಬಗ್ಗೆ ಸಾಕ್ಷಿ ಇದೆ ಮತ್ತು ಹಾಗೆ ಮಾಡಲು ನಾವು ಶ್ರಮವನ್ನು ಹೊಂದಿದ್ದೇವೆ ಎಂಬ ತೀರ್ಮಾನದೊಂದಿಗೆ ಇರೋಣ. **R 2513 : 4**

## 14 ಆಗಸ್ಟ್

**"ಆಗ ಸೈತಾನನು ಆತನನ್ನು ಬಿಟ್ಟನು; ಮತ್ತು ಇಗೋ, ದೇವದೂತರು ಬಂದು ಆತನನ್ನು ಉಪಚರಿಸಿದರು." ( ಮತ್ತಾಯನು 4 : 11 )**

ನಮ್ಮ ಕರ್ತನು ತಂದೆಯಾದ ದೇವರು ಗುರುತಿಸಿದ್ದ ಮಾರ್ಗವನ್ನು ಬಿಟ್ಟು ಬೇರೆ ಎಲ್ಲಾ ಮಾರ್ಗಗಳನ್ನು ಸಂಪೂರ್ಣವಾಗಿ ನಿರಾಕರಿಸಿ, ಸ್ವಯಂ–ತ್ಯಾಗಬಲಿ, ಇಕ್ಕಟ್ಟಾದ ದಾರಿಯನ್ನು ಮಾತ್ರ ಅನುಸರಿಸಿದ್ದರಿಂದ ಅದು ನಿಜಕ್ಕೂ ಒಂದು ದೊಡ್ಡ ವಿಜಯವಾಗಿದೆ. ಎದುರಾಳಿಯು ಆತನನ್ನು ಹಿಡಿದಿಡಲು ಅಥವಾ ಕೆಲಸ ಮಾಡಲು ಆತನಿಗೆ ಏನೂ ಸಿಗಲಿಲ್ಲ. ಆದ್ದರಿಂದ ಆತನನ್ನು ಬಿಟ್ಟು ಹೋದನು. ಏಕೆಂದರೆ ನಮ್ಮ  ಕರ್ತನು ಯೆಹೋವನ ವಾಕ್ಯಕ್ಕೆ ಮತ್ತು  ಯೆಹೋವನ ಆತ್ಮಕ್ಕೆ ಸಂಪೂರ್ಣವಾಗಿ ನಿಷ್ಠಾವಂತನಾಗಿದ್ದನು. ಇದಾದ ಮೇಲೆ ಅಂದರೆ ಈ ಶೋಧನೆಗಳು ಮುಗಿದ ಮೇಲೆ, ಪವಿತ್ರ ದೇವದೂತರು ಬಂದು ಕರ್ತನಿಗೆ ಉಪಚರಿಸಿದರು – ನಿಸ್ಸಂದೇಹವಾಗಿ ತನಗಾಗಿ ದೈವಿಕ ಶಕ್ತಿಯನ್ನು ಉಪಯೋಗಿಸಲು ನಿರಾಕರಿಸಿದ್ದರಿಂದ, ದೂತರು ಬಂದು ಆತನನ್ನು ಉಲ್ಲಾಸಪಡಿಸುತ್ತಾರೆ ಅಥವಾ ಉಪಚಾರ ಮಾಡುತ್ತಾರೆ. ಮತ್ತು ಅಂತವುಗಳನ್ನು ನಾವು ನಮ್ಮ ಕರ್ತನ ಶಿಷ್ಯರ ಅನುಭವವೆಂದು ಗ್ರಹಿಸಬಹುದು: ಜಯದೊಂದಿಗೆ ನಮ್ಮ ಕರ್ತನ ಆಶೀರ್ವಾದ ಬರುತ್ತದೆ, ಆತ್ಮದ ಐಕ್ಯತೆ, ಹೃದಯದ ಉಲ್ಲಾಸ, ದೈವಿಕ ದಯೆಯ ಮನವರಿಕೆಯು ಮುಂದೆ ಬರುವ ಶೋಧನೆಗಳಿಗಾಗಿ ಇನ್ನೂ ಹೆಚ್ಚು ಬಲವನ್ನು ನೀಡುತ್ತದೆ. **R 2568 : 4**

## 15 ಆಗಸ್ಟ್

**“ನಿಜವಾದ ಆರಾಧಕರು ತಂದೆಯನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸುವ ಗಳಿಗೆಯು ಬರುತ್ತದೆ; ಯಾಕಂದರೆ ತನ್ನನ್ನು ಆರಾಧಿಸುವದಕ್ಕೆ ತಂದೆಯು ಅಂಥವರನ್ನು ಹುಡುಕುತ್ತಾನೆ.” ( ಯೋಹಾನನು 4 : 23 )**

ಆತ್ಮದಿಂದಲೂ ಮತ್ತು ಸತ್ಯದಿಂದಲೂ ಆರಾಧಿಸುವದು ಅಂದರೆ ಕೇವಲ ಪ್ರಾರ್ಥಿಸುವದು, ಸ್ತುತಿಸುವದು, ವಿಜ್ಞಾಪನೆ ಮಾಡುವದು ಮತ್ತು ಕೃತಜ್ಞತೆ ಸಲ್ಲಿಸುವದು ಇವುಗಳು ಮಾತ್ರ ಅನ್ವಯಿಸುವುದಿಲ್ಲ. ಇದು ಈ ಎಲ್ಲಕ್ಕಿಂತಲೂ ಆಳವಾಗಿದೆ ಮತ್ತು ಇದು ಪ್ರೀತಿ–ವಾತ್ಸಲ್ಯದ ಮೇಲೆ, ಹೃದಯದ ಮೇಲೆ ಹಿಡಿತವಿರುತ್ತದೆ. ಆದ್ದರಿಂದ ಇದು “ಆರಾಧನೆಯ ಕ್ರಿಯೆ”ಯಲ್ಲ, ಬದಲಿಗೆ ಜೀವನವೇ ಆರಾಧನೆ ಎಂದು ಸೂಚಿಸುತ್ತದೆ–ಈ ಜೀವನದಲ್ಲಿ ಅಂದರೆ ಆತ್ಮದ ಮೂಲಕ ಭ್ರೂಣಾಂಕುರ (ಗರ್ಭಧಾರಣೆ)(begotten of the Spirit) ಹೊಂದಿದ ಮತ್ತು ದೈವಿಕ ಯೋಜನೆಯ ಜ್ಞಾನ ಹೊಂದಿದ ವ್ಯಕ್ತಿಯು ದೇವರೊಂದಿಗೆ ಎಷ್ಟರ ಮಟ್ಟಿಗೆ ಒಂದಾಗುತ್ತಾನೆ ಮತ್ತು ದೇವರ ಯೋಜನೆಯ ಎಲ್ಲಾ ವೈಶಿಷ್ಟ್ಯಗಳಿಗೆ ಹೊಂದಿಕೊಂಡಿರುತ್ತಾನೆ ಎಂದರೆ ಅದು ನಮ್ಮ ಕರ್ತನ ವಾಕ್ಯದಲ್ಲಿ ಹೇಳಿರುವಂತೆ ತಂದೆಯ ಚಿತ್ತವನ್ನು ಮಾಡುವುದೇ ಆತನ ಆಹಾರವೂ ಆತನ ನೀರೂ ಆಗಿರುತ್ತದೆ. ಇದೇ ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸುವದೂ ಆಗಿದೆ. ಇದನ್ನು ಮೊಣಕಾಲು ಊರುವುದರಲ್ಲಿ ವ್ಯಕ್ತಪಡಿಸಲಾಗುತ್ತದೆ. ವೈಯಕ್ತಿಕ ಪ್ರಾರ್ಥನೆಯಲ್ಲಿ ಭಯಭಕ್ತಿಯುಳ್ಳ ನಡತೆಯಿಂದ ದೇವರ ಬಳಿಗೆ ಹೋಗುವದು, ಮತ್ತು ಕುಟುಂಬ ಪ್ರಾರ್ಥನೆಯಲ್ಲಿ, ನಂಬಿಕೆಯ ಮನೆವಾರ್ತೆಯವರೊಂದಿಗೆ, ಮತ್ತು ಇದು ಜೀವನದ ಎಲ್ಲಾ ಕಾರ್ಯಗಳಲ್ಲಿಯೂ ಮತ್ತು ಮಾತುಗಳಲ್ಲಿಯೂ ಸಹ ಅದರ ಭಾವನೆಯನ್ನು ವ್ಯಕ್ತಪಡಿಸುತ್ತದೆ. ದೇವರ ಮತ್ತು ಕ್ರಿಸ್ತನ ಚಿತ್ತಕ್ಕೆ ವಶವಾದ ಹೃದಯವು ದೇಹದ ಪ್ರತಿಯೊಂದು ತಲಾಂತನ್ನು ಸಂಪೂರ್ಣ ಅಧೀನಕ್ಕೆ ತರಲು ಹುಡುಕುತ್ತದೆ. ಇವೆಲ್ಲವೂ ಸೇರಿ ದೇವರು ಹುಡುಕುವ ಆರಾಧನೆಯಾಗಿದೆ; ನಿಶ್ಚಯವಾಗಿಯೂ ಹೀಗೆ ಕರ್ತನಿಗೆ ಹೃದಯದಲ್ಲಿ ವಶವಾದವರು ಆತನನ್ನು ಆತ್ಮದಿಂದ ಮತ್ತು ಸತ್ಯದಿಂದ ಸೇವೆ ಮಾಡುವವರು ಆತನ ಚಿತ್ತವನ್ನು ಅವರ ಹೃದಯದಲ್ಲಿ, ಮಾತುಗಳಲ್ಲಿ, ನಡವಳಿಕೆಯಲ್ಲಿ ಪೂರೈಸಲು ಪ್ರಯತ್ನಿಸುವವರು ಮಾತ್ರ ಪೂರ್ಣ ಅರ್ಥದಲ್ಲಿ ನಿಜವಾದ ಆರಾಧಕರಾಗಿದ್ದಾರೆ. ಇಂಥವರನ್ನೇ ಕರ್ತನು ಹುಡುಕುತ್ತಿದ್ದಾರೆ; ಇಂಥವರೇ “ಚಿಕ್ಕ ಹಿಂಡಾಗಿದ್ದಾರೆ” ಮತ್ತು ನಂಬಿಗಸ್ತರಾದ “ರಾಜವಂಶಸ್ಥ ಯಾಜಕರಾಗಿದ್ದಾರೆ.”

**R 2071 : 6**

## 16 ಆಗಸ್ಟ್

**“ಯೆರೂಸಲೇಮಿನ ಸಮಾಧಾನಕ್ಕಾಗಿ ಪ್ರಾರ್ಥಿಸಿರಿ” ( ಕೀರ್ತನೆಗಳು 122 : 6 )**

ಈ ವಾಕ್ಯಗಳು ಲೌಕಿಕ ಯೆರೂಸಲೇಮಿಗೆ ಎಷ್ಟು ನಿಜವೋ, ಉನ್ನತ ಯೆರೂಸಲೇಮ್ ಮತ್ತು ಆಕೆಯ ಸಮಾಧಾನದ ಮಕ್ಕಳಿಗೆ ಅಷ್ಟೇ ನಿಜವಾಗಿದೆ. ಕರ್ತನ (ಕೆಲಸದ) ನಿಮಿತ್ತವಾಗಿ ಆತನ ಆಶೀರ್ವಾದಕ್ಕಾಗಿ ಪ್ರಾರ್ಥಿಸುವವರು ಆ ಸೇವೆ ಮಾಡುವುದಕ್ಕಾಗಿ ಪ್ರಯತ್ನಿಸುತ್ತಾರೆ ಮತ್ತು ಅಷ್ಟೇ ಪ್ರಮಾಣದಲ್ಲಿ ಆಶೀರ್ವಾದವನ್ನು ಹೊಂದುತ್ತಾರೆ. ಚೀಯೋನಿನ ಹಿತಕ್ಕಾಗಿ ಮತ್ತು ಕರ್ತನ ಕೆಲಸದ ಬಗ್ಗೆ ಈಗ ಅಸಡ್ಡೆಮಾಡುವವರು  ಇಳಿಜಾರು ಸ್ಥಳದಲ್ಲಿ ನಿಂತಿದ್ದಾರೆ ಮತ್ತು ಬೀಳುವ ಅಪಾಯದಲ್ಲಿದ್ದಾರೆ....ಕರ್ತನು ನಮಗೆ ಸಾಕಾಗಿದ್ದಾನೆ ಎಂದು ನೆನಪಿಸಿಕೊಳ್ಳುವಾಗ ನಾವು ಬೀಳುವ ಅಪಾಯದಲ್ಲಿದ್ದೇವೆ ಎಂಬ ಈ ವಿಚಾರ ನಮ್ಮನ್ನು ತಗ್ಗಿಸುವಂತೆ ಮಾಡುತ್ತದೆ. ಮತ್ತು ನಮ್ಮ ಪ್ರಾರ್ಥನೆಗಳಿಗೆ ಉತ್ತರವಾಗಿ ಆತನ ಆಶೀರ್ವಾದವನ್ನು ನಮ್ಮ ಮೇಲೆ ಸುರಿಯಲು ಆತನು ಚಿತ್ತವುಳ್ಳವನಾಗಿದ್ದಾನೆ ಎಂದು ನಾವು ನೆನಪಿಸಿಕೊಳ್ಳುವಾಗ ಅದು ನಮ್ಮನ್ನು ಬಲಪಡಿಸುತ್ತದೆ. ಈ ಪ್ರಾರ್ಥನೆಗಳು ಮತ್ತು ಅವುಗಳ ಜೊತೆ ಸೇರಿರುವ ದೈವಿಕ ಶಕ್ತಿಯು ನಮ್ಮ ಹೃದಯಗಳಿಗೆ ಕರ್ತನು ಮತ್ತು ಆತನ ವಾಕ್ಯದ ಮೇಲಿನ ನಿಷ್ಠೆಯಿಂದಾಗಿ, ನಿರಂತರವಾಗಿ ನಮ್ಮನ್ನು ಆವರಿಸಿರುವ ಸೈತಾನನಿಂದ ಕುರುಡಾದ ಅನೇಕ ವೈರಿಗಳ ವಿರುದ್ಧ ಒಂದು ಭದ್ರ ಕೋಟೆಯಾಗಿದೆ. **R 2576 : 2**

## 17 ಆಗಸ್ಟ್

**“ನನ್ನ ಚಿಕ್ಕ ಮಕ್ಕಳೇ, ನೀವು ಮಾತಿನಿಂದಾಗಲಿ ನಾಲಿಗೆಯಿಂದಾಗಲಿ ಪ್ರೀತಿಸುವವರಾಗಿರದೆ ಕ್ರಿಯೆಯಲ್ಲಿಯೂ ಸತ್ಯದಲ್ಲಿಯೂ ಪ್ರೀತಿಸುವವರಾಗಿರಬೇಕು.” (1 ಯೋಹಾನನು 3 : 18)**

ಇದೊಂದು ವೈಯಕ್ತಿಕ ವಿಷಯವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಈ ಪರೀಕ್ಷೆಯ ಅಥವಾ ಶೋಧನೆಯ ಅಡಿಯಲ್ಲಿದ್ದೇವೆ. ಹಾಗೆ (ಪರೀಕ್ಷೆಯಲ್ಲಿ) ಇನ್ನೂ ಇಲ್ಲದಿದ್ದರೆ, ಅದು ಬೇಗನೆ ಅಥವಾ ನಂತರ ನಿಸ್ಸಂದೇಹವಾಗಿ ಬರುತ್ತದೆ. ಸಹೋದರರ ಹಿತಾಸಕ್ತಿಗಾಗಿ ಬಲಿ ಸಲ್ಲಿಸುವ ಇಚ್ಛೆಯು ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ಒಡಂಬಡಿಕೆಗೆ ನಂಬಿಗಸ್ತರಾಗಿದ್ದೇವೋ, ಅಥವಾ ಇದಕ್ಕೆ ವಿರುದ್ಧವಾಗಿ ಅಪನಂಬಿಗಸ್ತರಾಗಿದ್ದೇವೋ ಎಂದು ಸಾಬೀತು ಪಡಿಸುತ್ತದೆ. ನಾವು ಸಹೋದರರ ಮೇಲಿನ ಪ್ರೀತಿಯ ವಿಷಯಕ್ಕಾಗಿ ಮತ್ತು ಸಹೋದರರಿಗಾಗಿ ನಮ್ಮ ಜೀವವನ್ನು

ಬಲಿಯಾಗಿ ಸಲ್ಲಿಸುವ ವಿಷಯಕ್ಕಾಗಿ, ವೈಯಕ್ತಿಕ ಅಧ್ಯಯನ ಮಾಡೋಣ ಮತ್ತು ನಮ್ಮ ಹೃದಯ, ಮನಸ್ಸು, ಆಲೋಚನೆಗಳು, ಮಾತುಗಳು ಮತ್ತು ಕ್ರಿಯೆಗಳನ್ನು ಕಾರ್ಯರೂಪದಲ್ಲಿ ತರೋಣ. ಮತ್ತು ನಾವು ಒಬ್ಬರಿಗೊಬ್ಬರು ಪ್ರಾರ್ಥಿಸೋಣ, ಹಾಗೆಯೇ ಈ ವಿಷಯಗಳಲ್ಲಿ ಒಬ್ಬರಿಗೊಬ್ಬರು ಉತ್ಸಾಹ ಪಡಿಸೋಣ ಮತ್ತು ನಮ್ಮ ಬೋಧಕನ ಆತ್ಮದಿಂದ ತುಂಬಲು ಪ್ರಯತ್ನಿಸೋಣ. **R 5948 : 5**

## 18 ಆಗಸ್ಟ್

**'ಆದಕಾರಣ ಪ್ರಿಯರೇ, ನೀವು ಈ ಸಂಗತಿಗಳನ್ನು ಮುಂದಾಗಿ ತಿಳಿದುಕೊಂಡಿರುವದರಿಂದ ದುಷ್ಟರ ತಪ್ಪಿನಂತೆ ನಡಿಸಲ್ಪಟ್ಟು ನಿಮ್ಮ ಸ್ಥಿರಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ ಎಚ್ಚರಿಕೆಯಾಗಿರಿ.' (2 ಪೇತ್ರನು 3 : 17)**

ದೈವಿಕ ಯೋಜನೆಗಳನ್ನು ಇತರರಿಗೆ ಬೋಧಿಸಲು ಪ್ರಯತ್ನಿಸುವವರೆಲ್ಲರೂ ವಿಶೇಷವಾದ ಶೋಧನೆಗಳಿಗೆ ಗುರಿಯಾಗುತ್ತಾರೆ, ಆದ್ದರಿಂದ ಕರ್ತನಿಗೆ ಮತ್ತು ಆತನ ಜನರಿಗೆ ಸೇವೆ ಸಲ್ಲಿಸುವದಕ್ಕೆ ಪವಿತ್ರಾತ್ಮದ ಕೃಪೆಗಳ ಜೊತೆಗೆ ಜ್ಞಾನವು ದೊಡ್ಡ ಅಳತೆಯಲ್ಲಿ ಅವಶ್ಯವಿದೆ. ಜ್ಞಾನದ ಪ್ರವೃತ್ತಿಯು ಅಪೋಸ್ತಲನು ನಮ್ಮ ಗಮನಕ್ಕೆ ತರುವ ಹಾಗೆ ಅದು ಕೇವಲ ಉಬ್ಬಿಕೊಳ್ಳುವಂತೆ ಮಾಡುವುದು, ವ್ಯರ್ಥ ಮತ್ತು ಅಹಂಕಾರಿಯಾಗುವಂತೆ ಮಾಡುವದು ಹಾಗೂ ಎದುರಾಳಿಯ ಶೋಧನೆಗೆ ಒಳಗಾಗುವದು ಮಾತ್ರವಲ್ಲದೆ ಅವರು ಒಳಗಾದ ನಂತರ, ಹಿಂಬಾಲಕರನ್ನು ಅವರ ಹಿಂದೆ ಸೆಳೆಯುವಂತೆ ಮಾಡುತ್ತದೆ [ಅಪೋಸ್ತಲರ ಕೃತ್ಯಗಳು 20 : 30] ಆದ್ದರಿಂದ ಯಾರೆಲ್ಲಾ ಇತರರಿಗೆ ಬೋಧಕರಾಗುತ್ತಾರೋ, ಕರ್ತನ ಮುಖವಾಣಿ [ಬಾಯಿ]ಯಾಗಿರುತ್ತಾರೋ, ಅಂಥವರು ಸಾತ್ವಿಕತೆ ಸೇರಿದಂತೆ ಪವಿತ್ರಾತ್ಮದ ಎಲ್ಲಾ ವಿವಿಧ ಕೃಪೆಗಳನ್ನು ಬೆಳಸಿಕೊಳ್ಳಬೇಕು; ಆದ್ದರಿಂದ ಇವು ಜ್ಞಾನದೊಂದಿಗೆ ಪ್ರೀತಿಯನ್ನು ಕೂಡಿಸಿದರೆ, ತನಗೆ ತಾನೇ ಭಕ್ತಿವೃದ್ಧಿಯನ್ನುಂಟುಮಾಡಿಕೊಳ್ಳಬಹುದು ಮತ್ತು ಆತನು ಯಾರಿಗೆ ಸೇವೆ ಮಾಡುತ್ತಾನೋ ಅವರಲ್ಲಿಯೂ ಭಕ್ತಿವೃದ್ಧಿಯನ್ನುಂಟಾಗುವಂತೆ ಮಾಡುತ್ತಾರೆ. "ಜ್ಞಾನವು [ಮಾತ್ರ] ಉಬ್ಬಿಕೊಳ್ಳುತ್ತದೆ, ಆದರೆ ಪ್ರೀತಿಯು ಭಕ್ತಿವೃದ್ಧಿಯನ್ನುಂಟು ಮಾಡುತ್ತದೆ." **R 2219 : 5**

## 19 ಆಗಸ್ಟ್

**"ದೇಶದ ಜನರೆಲ್ಲರೇ, ಬಲವಾಗಿರಿ ಎಂದು ಕರ್ತನು ಹೇಳುತ್ತಾನೆ; ಕೆಲಸ ಮಾಡಿರಿ; ನಾನು ನಿಮ್ಮ ಸಂಗಡ ಇದ್ದೇನೆ" (ಹಗ್ಗಾಯ 2 : 4)**

ಕರ್ತನಲ್ಲಿ ವಿಶ್ವಾಸ ಹೊಂದಿರುವ ಎಲ್ಲರೂ ಕರ್ತನ ಉದ್ದೇಶಗಳ ನೆರವೇರಿಕೆಗೆ ಅಗತ್ಯವಿರುವ ಎಲ್ಲವನ್ನು ಹೊಂದಿದ್ದಾರೆ ಎಂಬ ಕರ್ತನ ಭರವಸೆಯನ್ನು ಅವಲಂಬಿಸಬಹುದು. "ಕರ್ತನು ತನ್ನವರನ್ನು ಅರಿತಿರುವನು." ಆದ್ದರಿಂದ ಈ ವಾಕ್ಯದ ಅರ್ಥದಲ್ಲಿ ಹೇಳಿರುವ ಪ್ರಕಾರ ನಾವೆಲ್ಲರೂ ಬಲವಾಗಿದ್ದು ಕೆಲಸ ಮಾಡೋಣ, ಏಕೆಂದರೆ ದೇವರು ನಮ್ಮೊಂದಿಗಿದ್ದಾರೆ; ನಾವು ಆತನನೊಂದಿಗೆ ಕೇವಲ ಸಹ–ಕೆಲಸದವರು. ಆತನು ವಾಗ್ದಾನ ಮಾಡಿದ ಮಹತ್ತರ ಕಾರ್ಯಗಳನ್ನು ಖಂಡಿತವಾಗಿಯೂ ಸಾಧಿಸುವನು; ಆತ್ಮೀಕ ಆಲಯವು ಕಟ್ಟಲ್ಪಡುವದು. ಆದರೆ ಅದಕ್ಕೆ ಸಂಬಂಧಿಸಿದಂತೆ ನಾವು ಎಷ್ಟರ ಮಟ್ಟಿಗೆ ಕರ್ತನಲ್ಲಿ ಬಲಶಾಲಿಯಾಗಿದ್ದೇವೋ, ಪೂರ್ಣ ನಂಬಿಕೆಯುಳ್ಳವರಾಗಿದ್ದೇವೋ, ಉತ್ಸಾಹದಿಂದ ತುಂಬಿದ್ದೇವೋ ಮತ್ತು ಆತನೊಂದಿಗೆ ಎಷ್ಟರ ಮಟ್ಟಿಗೆ ಸಹ–ಕೆಲಸದವರಾಗಿರುತ್ತೇವೋ ಅಷ್ಟರ ಮಟ್ಟಿಗೆ ನಮ್ಮ ವೈಯಕ್ತಿಕ ಆಶೀರ್ವಾದಗಳು ಇರುವವು. **R 2521 : 4**

## 20 ಆಗಸ್ಟ್

**"ಕರ್ತನು ನನ್ನನ್ನು ಮುರಿದ ಹೃದಯವುಳ್ಳವರನ್ನು ಕಟ್ಟುವದಕ್ಕೆ.... ಕಳುಹಿಸಿದ್ದಾನೆ." (ಯೆಶಾಯನು 61 : 1)**

ಅಭಿಷೇಕ ಹೊಂದಿದವರು ಈ ಲೋಕದ ಜನರ ಕಠಿಣ ಹೃದಯಗಳನ್ನು ಮುರಿಯುವ ಪ್ರಯತ್ನದಲ್ಲಿ ತಮ್ಮ ಸಮಯವನ್ನು ಕಳೆಯಬಾರದು. ಏಕೆಂದರೆ ಇದು ಅವರ ಕೆಲಸದ(ಆಯೋಗದ) ಒಂದು ಭಾಗವಲ್ಲ.... ಇಲ್ಲಿ ಕೊಟ್ಟಿರುವ ಸಂದೇಶವು "ಮುರಿದ ಹೃದಯವುಳ್ಳವರನ್ನು ಕಟ್ಟುವದಾಗಿದೆ." ಈ ರೀತಿ ಮಾಡಬೇಕಾದ ಕೆಲಸವು ಎಷ್ಟೋ ಇದೆ ! ಆತ್ಮದಲ್ಲಿ ಬಡವರು, ಜಜ್ಜಿಹೋದ ಮತ್ತು ಮೃದುವಾದ ಹೃದಯವುಳ್ಳವರು, ಲೋಕದೊಂದಿಗೆ ನಿರಾಶೆ ಹೊಂದಿದವರು, ಶರೀರದಿಂದ ಮತ್ತು ಎದುರಾಳಿಯಿಂದ ಬೇಸರ ಹೊಂದಿದ ಜನರನ್ನು ಬಹುಶಃ ಈ ಲೋಕದ ಎಲ್ಲಾ ಮೂಲೆಯಲ್ಲಿಯೂ ಕಾಣಬಹುದು; ಯಾರೆಲ್ಲಾ ಪವಿತ್ರಾತ್ಮದ ಅಭಿಷೇಕವನ್ನು ಹೊಂದಿದ್ದಾರೋ, ಈ ಅವಶ್ಯಕತೆಯುಳ್ಳ ವರ್ಗದವರ ಮೇಲೆ ಅವರು ಹೊಂದಿರುವ ಈ ಶಕ್ತಿಯನ್ನು ಉಪಯೋಗಿಸಬೇಕೆಂದು ಅರಿತುಕೊಳ್ಳಬೇಕು–ದೈವಿಕ ವಾಗ್ದಾನಗಳಾದ ಎಣ್ಣೆ ಮತ್ತು ದ್ರಾಕ್ಷಾರಸವನ್ನು ಸುರಿಯುವುದು, ಹುರಿದುಂಬಿಸುವುದು ಹಾಗೂ ಸಾಂತ್ವನ ಹೇಳುವುದು ಮತ್ತು ಆಶೀರ್ವಾದ ಮಾಡುವುದು, ರಾಜ್ಯದಲ್ಲಿ ಸಹ–ಬಾಧ್ಯಸ್ಥರಾಗಲು ಸಿದ್ಧತೆ ಮಾಡುವ ಇಂಥವರನ್ನೇ ಕರ್ತನು ಸ್ವೀಕರಿಸಲು ಸಂತೋಷಪಡುತ್ತಾನೆ. **R 2580 : 2**

## 21 ಆಗಸ್ಟ್

**"ಶಾಂತವಾಗಿರಿ, ನಾನೇ ದೇವರಾಗಿದ್ದೇನೆಂದು ತಿಳುಕೊಳ್ಳಿರಿ; (ಅನ್ಯ) ಜನಾಂಗಗಳಲ್ಲಿ ಉನ್ನತನಾಗಿರುವೆನು; ಭೂಮಿಯಲ್ಲಿ ನಾನು ಹೆಚ್ಚಿಸಲ್ಪಡುವೆನು." (ಕೀರ್ತನೆಗಳು 46 : 10)**

"ಶಾಂತವಾಗಿರಿ" ಎಂಬ ಈ ಆಜ್ಞೆಯು ಎಲೀಯನು ಕೇಳಿದ ಅತಿ ಸಣ್ಣ ಧ್ವನಿಗೆ ಅನುರೂಪವಾಗಿದೆ –ನಿಜರೂಪದ ಎಲೀಯ ಆಗಿರುವ ನಾವು ಈಗ ದೇವರ ವಾಕ್ಯದ ಮೂಲಕ ಕೇಳುತ್ತಿದ್ದೇವೆ. ಅಂದರೆ ಈ ಲೋಕದ ಶಕ್ತಿಯಿಂದ ಅಥವಾ ಈ ಲೋಕದ ಅಧಿಕಾರದಿಂದ ಕರ್ತನು ತನ್ನ ಆಳ್ವಿಕೆಯನ್ನು ಸ್ಥಾಪಿಸುವುದಿಲ್ಲ, ಆದರೆ ಮುಂಬರುವ ಸಮಯದಲ್ಲಿ ಅವನ [ನಿಜರೂಪದ ಎಲೀಯನ] ರಾಜನು ಚೀಯೋನಿನಲ್ಲಿ ಆಳ್ವಿಕೆ ನಡೆಸಿ ಭೂಮಿಯಲ್ಲಿ ನ್ಯಾಯತೀರ್ಪನ್ನು ಜಾರಿಗೊಳಿಸುವನು, ನೀತಿವಂತರಿಗೆ ಪ್ರತಿಫಲವನ್ನು ಕೊಡುವನು ಮತ್ತು ದುಷ್ಕರ್ಮಿಯನ್ನು ಶಿಕ್ಷಿಸುವನು, ಇದರ ಪರಿಣಾಮವಾಗಿ ಎಲ್ಲರೂ ಅಂದರೆ ಚಿಕ್ಕವರಿಂದ ದೊಡ್ಡವರವರೆಗೆ ಕರ್ತನ ಜ್ಞಾನವನ್ನು ಪಡೆದುಕೊಳ್ಳುತ್ತಾರೆ; ನೀರು ಹೇಗೆ ಸಮುದ್ರವನ್ನು ಆವರಿಸಿದೆಯೋ ಹಾಗೆಯೇ ಕರ್ತನ ಜ್ಞಾನವು ಇಡೀ ಭೂಮಿಯನ್ನು ತುಂಬಿರುವದು. ಮತ್ತು ಮುಂದಿನ ಫಲಿತಾಂಶವೇನೆಂದರೆ ಕರ್ತನ ಆತ್ಮವು ಎಲ್ಲಾ ಶರೀರಗಳ ಮೇಲೆ ಸುರಿಸಲ್ಪಡುವುದು, ಈ ವಾಗ್ದಾನವನ್ನು ಕರ್ತನ ಬಾಯಿಯೇ ನುಡಿದಿದೆ. **R 3414 : 6**

## 22 ಆಗಸ್ಟ್

**"ಕ್ರಿಸ್ತನಲ್ಲಿ ಬೆಳೆಯಿರಿ... : ದೇಹವೆಲ್ಲಾ ಆತನ ಮುಖಾಂತರ ಪ್ರತಿ ಕೀಲುಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯಹೊಂದಿ ಪ್ರೀತಿಯಿಂದ ತನ್ನಲ್ಲಿ ಐಕ್ಯವಾಗಿದ್ದು ಭಕ್ತಿವೃದ್ಧಿಯನ್ನು ಹೊಂದುತ್ತದೆ." ( ಎಫೆಸದವರಿಗೆ 4 : 15 , 16 )**

ಇಲ್ಲಿ ಅಪೋಸ್ತಲನ ಆಲೋಚನೆಯ ಬಗ್ಗೆ ಏನು ತೋರುತ್ತದೆಂದರೆ, ಪ್ರತಿ ಹೊಸ [ನೂತನ] ಸೃಷ್ಟಿಯು ಕ್ರಿಸ್ತನ ಸಂಪೂರ್ಣ ಸದಸ್ಯರೆಂದು ಪರಿಗಣಿಸಬಹುದು, ಮತ್ತು ಎಲ್ಲಾ ಅಂಗಗಳು ಪ್ರೀತಿಯ ಆತ್ಮದೊಂದಿಗೆ ತನ್ನದೇ ಆದ ಸ್ವಭಾವದಿಂದ ಚೆನ್ನಾಗಿ [ಸಂಪೂರ್ಣವಾಗಿ] ನಯಗೊಳಿಸಬಹುದು, ಇದರ ಜೊತೆಗೆ ಎಲ್ಲಾ ಹೊಸ ಸೃಷ್ಟಿಗಳು ಒಬ್ಬರಿಗೊಬ್ಬರು ತಮ್ಮನ್ನು ಸದಸ್ಯರೆಂದು ಗುರುತಿಸಿಕೊಳ್ಳಬೇಕು, ಮತ್ತು

ಕ್ರಿಸ್ತನ ಶರೀರವಾಗಿರುವ ಸಭೆಯು, ಕ್ರಿಸ್ತನ ಚಿತ್ತಕ್ಕೆ ವಿಧೇಯರಾಗಿ ತಮ್ಮ ವಿವಿಧ ಪ್ರಯತ್ನಗಳಲ್ಲಿ ಒಬ್ಬರಿಗೊಬ್ಬರು ಪರಸ್ಪರ ಸಹಕರಿಸಲು ಪ್ರಯಾಸಪಡಬೇಕು. ಅಂತಹ ಪ್ರೀತಿ, ಅಂತಹ ಅಭಿಷೇಕ, ಅಂತಹ ನಯಗೊಳಿಸುವಿಕೆಯು ಘರ್ಷಣೆಯನ್ನು (friction) ತಡೆಯುತ್ತದೆ ಮತ್ತು ಕ್ರಿಸ್ತನ ಇಡೀ ಶರೀರವನ್ನು ಕೃಪೆಗಳಲ್ಲಿ ಹಾಗೆಯೇ ತನ್ನ ಸ್ವಂತ ಉನ್ನತಿಗಾಗಿ ಮತ್ತು ಆ [144000] ಸಂಖ್ಯೆಯಲ್ಲಿ ತನ್ನದೇ ಆದ ಪೂರ್ಣಗೊಳಿಸುವಿಕೆಗಾಗಿ ಸಹಕರಿಸಲು ಅನುವು ಮಾಡಿಕೊಡುತ್ತದೆ. **R 2227 : 5**

## 23 ಆಗಸ್ಟ್

**"ನಾವು ಆತ್ಮನಲ್ಲಿ ಜೀವಿಸುವವದಾದರೆ ನಾವು ಸಹ ಆತ್ಮನಲ್ಲಿ ನಡೆಯೋಣ" (ಗಲಾತ್ಯದವರಿಗೆ 5 : 25)**

ಕ್ರಿಸ್ತನ ಹಿಂಬಾಲಕರು ತಮ್ಮ ಶರೀರವನ್ನು ಮತ್ತು ಅದರ ಅಭಿಲಾಷೆಗಳು ಮತ್ತು ಆಸೆಗಳನ್ನು ಶಿಲುಬೆಗೇರಿಸಿದ್ದಾರೆ ಎಂದು ಅಪೋಸ್ತಲನು ವಿವರಿಸುತ್ತಾನೆ. ಬಿದ್ದುಹೋದ ಶರೀರದ ಭಾವನೆಗಳು ಮತ್ತು ಆಸೆಗಳಿಗೆ ವಿರುದ್ಧವಾಗಿ ಬದುಕುತ್ತೇವೆ ಎಂದು ಅವರು ಸ್ವಯಂ ಪ್ರೇರಣೆಯಿಂದ ಒಪ್ಪಿಕೊಂಡಿದ್ದಾರೆ. ನಾವು ಆತ್ಮದಿಂದ ಜೀವಿಸುತ್ತಿದ್ದರೆ, ಆತ್ಮದಿಂದ ನಾವು ಸಹ ನಡೆಯೋಣ ಎಂದು ಅಪೋಸ್ತಲನಾದ ಪೌಲನು ನಮಗೆ ಪ್ರೇರೇಪಿಸುತ್ತಾನೆ! ದೇವರ ಆತ್ಮವೇ ನಮ್ಮನ್ನು ಬೆಳೆಯುವಂತೆ [ಬದುಕುವಂತೆ] ಮಾಡುತ್ತದೆ ಮತ್ತು ಅಂತಿಮವಾಗಿ ನಮ್ಮನ್ನು ಪರಿಪೂರ್ಣಗೊಳಿಸುತ್ತದೆ. ಆದರೆ ಆತ್ಮದ ಮಾರ್ಗದರ್ಶನದಿಂದ ಅದರ ಮಾರ್ಗಗಳಲ್ಲಿ ನಡೆದರೆ ಮಾತ್ರ ಅದು ನಮ್ಮನ್ನು ಪರಿಪೂರ್ಣಗೊಳಿಸುತ್ತದೆ. ಇಲ್ಲದಿದ್ದರೆ ದೇವರ ಏರ್ಪಾಡಿನಲ್ಲಿ ಬೇರೆ ಯಾವುದೇ ಸ್ಥಳವನ್ನು ಹೊಂದಿರಲಿ, ನಾವು ರಾಜ್ಯದಲ್ಲಿ ಸ್ಥಾನ ಪಡೆಯಲು ಯೋಗ್ಯರಾಗಿರುವುದಿಲ್ಲ. ಒಬ್ಬ ಕ್ರೈಸ್ತನ ಅತ್ಯಂತ ಅಪಾಯಕಾರಿ ಅಂಶವೆಂದರೆ ಅದು ಒಣಜಂಬ. ಇದು ಹೆಚ್ಚಿನ ತೊಂದರೆಗಳಿಗೆ ಕಾರಣವಾಗುತ್ತದೆ, ಸಾಮಾನ್ಯವಾಗಿ ಭಾವಿಸುವುದಕ್ಕಿಂತ ಹೆಚ್ಚು ಜಗಳಗಳು, ಅಸೂಯೆಗಳನ್ನು ಪ್ರಚೋದಿಸುತ್ತದೆ. ನಾವು ನಮ್ಮ ಬೋಧಕನ [ಕ್ರಿಸ್ತನ] ಆತ್ಮದ ಪ್ರಕಾರ ನಡೆಯುತ್ತಿದ್ದರೆ, ನಮ್ಮಲ್ಲಿ ಒಣಜಂಬ ಇರುವ ಬದಲು ಸಾತ್ವಿಕತೆ, ದೀನತೆ ಮತ್ತು ಕಲಿತುಕೊಳ್ಳುವ ಗುಣವುಳ್ಳವರಾಗಿರುತ್ತೇವೆ ಎಂದು ಅರ್ಥೈಸುತ್ತದೆ. ಅಂಥವರು ಮಾತ್ರ ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸು ಕ್ರಿಸ್ತನ ಎರಡನೆಯ ಬರುವಿಕೆಯಲ್ಲಿ ನಂಬಿಗಸ್ತರಿಗೆ ದೇವರು ದಯಪಾಲಿಸುವ ಮಹಿಮೆ, ಗೌರವ ಮತ್ತು ಅಮರತ್ವವನ್ನು ಹೊಂದಲು ಸಿದ್ಧರಾಗಿರುತ್ತಾರೆ. **R 4688 : 4**

## 24 ಆಗಸ್ಟ್

**"ಆತನ ಕೋಪವು ಕ್ಷಣಮಾತ್ರ; ಆತನ ಕಟಾಕ್ಷವು ಜೀವವೇ; ರಾತ್ರಿಯಲ್ಲಿ ದುಃಖವು ತಂಗಬಹುದಾದರು ಬೆಳಗ್ಗೆ ಆನಂದವು ಬರುವದು." ( ಕೀರ್ತನೆಗಳು 30 : 5 )**

ಮುಂಜಾನೆಯ ಅದ್ಭುತ ದಿನದ ಈ ಜ್ಞಾನದ ದೃಷ್ಟಿಯಿಂದ, ಆ ದಿನದ ರಾಜ್ಯವರ್ಗದವರಾಗಬೇಕೆಂದು ನಿರೀಕ್ಷಿಸುತ್ತಿರುವ ನಾವು ಈಗ ನಮ್ಮ ನಡವಳಿಕೆಯನ್ನು ಹೇಗೆ ಕಾದುಕೊಳ್ಳಬೇಕು ? ನಾವು ಹೇಗೆ ಬದುಕಬೇಕು? ಆಹಾ! ಅಪೋಸ್ತಲನು ಹೇಳುವಂತೆ ನಾವು "ಹಗಲಿನ ಮಕ್ಕಳಾಗಿದ್ದರೆ" ಹಗಲಿನ ಮಕ್ಕಳಂತೆ ನಾವು ನಡೆದು ತೋರಿಸಬೇಕು. ನಾವು ದೇವರ ಪ್ರತಿನಿಧಿಗಳು ಮತ್ತು ರಾಯಭಾರಿಗಳಾಗಿದ್ದೇವೆ. ಬೇಗನೆ ಬರಲಿರುವ ದೇವರ ಬೆಳಕು, ಜ್ಞಾನ ಮತ್ತು ಮಹಿಮೆಯ ಬಗ್ಗೆ ನಾವು ಜನರಿಗೆ ತಿಳಿಸಬೇಕು. ನಂತರ ಅದು ಇಡೀ ಭೂಮಿಯನ್ನು ಆವರಿಸುವದು. ಆಗ ಬರುವ ಮಹಿಮೆಯುಳ್ಳ ಪರಿಸ್ಥಿತಿಯು, ಈಗಿರುವ ದುಸ್ಥಿತಿಗೆ ವಿರುದ್ಧವಾಗಿದೆ ಎಂದು ಅವರು ಅರಿತುಕೊಳ್ಳಲು ನಾವು ಸಹಾಯಮಾಡಬೇಕು, ಇದರಿಂದಾಗಿ ಬೆಳಕನ್ನು ಪ್ರೀತಿಸುವವರೆಲ್ಲರೂ ದೇವರ ವಾಕ್ಯವನ್ನು ಗಮನಿಸಿ, ಆ ರಾಜ್ಯವರ್ಗದ ಸದಸ್ಯರಾಗಲು ಸಾಧ್ಯವಾಗುತ್ತದೆ.... ನಾವು ಹಳೆಯ ಯುಗಕ್ಕೆ ಸೇರಿದವರಲ್ಲ, ಆದರೆ ಹೊಸ ಯುಗಕ್ಕೆ ಸೇರಿದವರು ಎಂದು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ಆದ್ದರಿಂದ ನಮ್ಮ (ಹೊಸ) ನಾಗರಿಕತ್ವಕ್ಕೆ ಅನುಗುಣವಾಗಿ ನಾವು ಬದುಕಬೇಕು ಮತ್ತು ಬೆಳಕಿನ ಅಧಿಪತಿಯ ಕಡೆಗೆ ನಮ್ಮ ಜವಾಬ್ದಾರಿಗಳಿರಬೇಕು ಮತ್ತು ಕತ್ತಲೆಯ ಅಧಿಪತಿ, ಆತನ ಕ್ರಿಯೆ ಮತ್ತು ಆತನ ಮಾರ್ಗಗಳಿಗೆ ವಿರುದ್ಧವಾಗಿ ಬದುಕಬೇಕು. **R 5339 : 5**

## 25 ಆಗಸ್ಟ್

**"ಕರ್ತನನ್ನು ಕೊಂಡಾಡುವದೂ; ಮಹೋನ್ನತನೇ, ನಿನ್ನ ಹೆಸರನ್ನು ಕೀರ್ತಿಸುವದೂ...ಒಳ್ಳೇದು." ( ಕೀರ್ತನೆಗಳು 92 : 1 )**

ದೇವರ ಅದ್ಭುತವಾದ ಯೋಜನೆಯ ಬಗ್ಗೆ ಕೇಳದೆ ಇರುವ ಲಕ್ಷಾಂತರ ಜನರು ಈ ಲೋಕದಲ್ಲಿದ್ದಾರೆ; ಆದ್ದರಿಂದ ದೇವರನ್ನು ಸ್ತುತಿಸುವಲ್ಲಿ ನಮ್ಮ ಬಾಯಿಗಳನ್ನು ಉಪಯೋಗಿಸಬೇಕು. ಹಾಸಿಗೆಯ ಮೇಲಿರಲಿ, ಅಥವಾ ಎಲ್ಲೇ ಇರಲಿ, ನಮ್ಮ ಎಲ್ಲಾ ವಿಶ್ರಾಂತಿ ಕ್ಷಣಗಳಲ್ಲಿ ನಾವು ನಿರಂತರವಾಗಿ ಕರ್ತನನ್ನು

ಸ್ಮರಿಸಬೇಕು. ದೇವರ ಮಹತ್ತರವಾದ ಮತ್ತು ಪವಿತ್ರ ನ್ಯಾಯಪ್ರಮಾಣಗಳು ಆತನಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು. ನಾವು ದೇವರ ಗುಣಲಕ್ಷಣ ಮತ್ತು ತತ್ವಗಳನ್ನು ಆತನ ಎಲ್ಲಾ ನೀತಿ, ಪ್ರೀತಿ, ದಯೆ, ಜ್ಞಾನದಲ್ಲಿ ವ್ಯಕ್ತವಾಗುವುದನ್ನು ಕುರಿತು ನಾವು ಆಲೋಚಿಸಬೇಕು. ಇದು ನಾವು ಆತನಂತೆಯೇ ಇರಲು ನಮ್ಮನ್ನು ಉತ್ತೇಜಿಸಬೇಕು. ಆತನ ಶ್ರೇಷ್ಠವಾದ ಗುಣಲಕ್ಷಣವನ್ನು ಎಷ್ಟು ಅಧಿಕವಾಗಿ ಮೆಚ್ಚುತ್ತೇವೋ, ಅಷ್ಟೇ ಅಧಿಕವಾಗಿ ಆ ಗುಣಲಕ್ಷಣಗಳನ್ನು ಅನುಕರಿಸಲು ನಾವು ಬಯಸುತ್ತೇವೆ. ಪ್ರಕೃತಿಯಲ್ಲಿ ದೇವರ ಶಕ್ತಿಯುಳ್ಳ ಕಾರ್ಯಗಳನ್ನು ಮತ್ತು ನಮ್ಮ ಕಡೆಗೆ ಆತನು ಕರುಣಿಸುತ್ತಿರುವುದನ್ನು ನಾವು ಎಷ್ಟು ಹೆಚ್ಚಾಗಿ ನೋಡುತ್ತೇವೋ, ಅದೇ ಪ್ರಮಾಣದಲ್ಲಿ ನಮ್ಮ ಹೃದಯಗಳು ಮತ್ತು ತುಟಿಗಳು ಆತನನ್ನು ಸ್ತುತಿಸುತ್ತವೆ. ಈ ವಾಕ್ಯದಲ್ಲಿ ಒಂದು ಪ್ರವಾದನೆಯ ಆಲೋಚನೆ ಇದ್ದರೆ, ಅದು ದೇವರ ನಿಷ್ಠಾವಂತ ಜನರು  ಕತ್ತಲೆ ಯುಗದಲೆಲ್ಲಾ ಅಂದರೆ ಈ ಯುಗದ ರಾತ್ರಿಯಿಡೀ ಆತನನ್ನು ಸ್ತುತಿಸುತ್ತಿದ್ದಾರೆ. ಆತನ ನಿಜವಾದ ಜನರೆಲ್ಲರೂ ಆತನನ್ನು ಹೊಗಳಿದ್ದಾರೆ ಮತ್ತು ಸಂತೋಷದ ತುಟಿಗಳಿಂದ ಹಾಗೆ ಹೊಗಳಿದ್ದಾರೆ. ಇದನ್ನು ಹೀಗೆ ಮಾಡದವರು ಈ ವರ್ಗದವರಲ್ಲ. ಆದ್ದರಿಂದ ನಾವು ನಮ್ಮ ದೇವರನ್ನು ಸ್ತುತಿಸಬೇಕು. ಆತನ ಪವಿತ್ರ ಚಿತ್ತ ಮತ್ತು ಮಾರ್ಗಗಳ ಬಗ್ಗೆ ನಾವು ಹೆಚ್ಚು ಹೆಚ್ಚಾಗಿ ಧ್ಯಾನಿಸಬೇಕು ಮತ್ತು ಅದಕ್ಕೆ ತಕ್ಕಂತೆ ನಡೆಯಲು ಪ್ರಯತ್ನಿಸಬೇಕು. ಹೀಗೆ ಮಾಡಿದರೆ ಅತ್ಯಧಿಕವಾಗಿ ನಾವು ಪರಲೋಕದ ನಮ್ಮ ತಂದೆಯಂತೆ ಆಗಲು ಸಾಧ್ಯವಾಗುತ್ತದೆ. **R 5785 : 5**

## 26 ಆಗಸ್ಟ್

**"ಹೀಗೆ ಕ್ರಿಸ್ತ ಯೇಸುವಿನಲ್ಲಿರುವ ಕರುಣೆಯ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ನಮಗೆ ತೋರಿಸಬೇಕೆಂದಿದ್ದನು." (ಎಫೆಸದವರಿಗೆ 2 : 7)**

ಈ ಸಮೃದ್ಧಿಯಾದ ಕೃಪೆ ಮತ್ತು ಮಹಿಮೆಯು ಅತಿ ಬಲಹೀನನಾದ ಸಂತನಿಗೂ ಸಾಧ್ಯತೆಯುಳ್ಳ ಸ್ವಾಸ್ಥ್ಯವಾಗಿದೆ, ಆತನು ತನ್ನ ಕರೆಯನ್ನು ಮತ್ತು ಆರಿಸುವಿಕೆಯನ್ನು ಖಚಿತಪಡಿಸಲು ತನ್ನ ಸ್ವಂತ ಸಾಮರ್ಥ್ಯವನ್ನು ನಂಬದೆ, ಉತ್ತಮ ಸೈನಿಕನಾಗಿ ಕಠಿಣತನವನ್ನು ಸಹಿಸಿಕೊಳ್ಳಲು, ದಿನದಿಂದ ದಿನಕ್ಕೆ ಶಕ್ತಿಯನ್ನು ಹೊಂದಿಕೊಳ್ಳುವುದಕ್ಕಾಗಿ ತಗ್ಗಿಸುವಿಕೆಯಿಂದ ದೇವರನ್ನು ಎದುರು ನೋಡುತ್ತಾನೆ. ಯಾವ ಮನುಷ್ಯನಾಗಲಿ ತನ್ನ ಸ್ವಂತ ಶಕ್ತಿಯಿಂದ ಇದನ್ನು ಮಾಡಲು ಪ್ರಯತ್ನಿಸಿದರೆ ಆತನು ಖಂಡಿತವಾಗಿಯೂ ವಿಫಲನಾಗುತ್ತಾನೆ. ಏಕೆಂದರೆ

ಪ್ರತಿಯೊಬ್ಬರನ್ನು ಪರಿಶೋಧಿಸುವ ಈ ಅಗ್ನಿಮಯವಾದ ಶೋಧನೆಯು ಶಾರೀರಿಕ ಮನಸ್ಸಿಗೆ ಅತ್ಯಧಿಕವಾಗಿರುತ್ತದೆ ಎಂದು ಸಾಬೀತುಪಡಿಸುತ್ತದೆ; ಆದರೆ ಪ್ರತಿಷ್ಠೆ ಹೊಂದಿದವರಲ್ಲಿ ಕ್ರಿಯೆ ಮಾಡುವ ದೇವರು ತನ್ನ ಸುಚಿತ್ತದ ಪ್ರಕಾರ ಉದ್ದೇಶವನ್ನು ಮತ್ತು ಕಾರ್ಯವನ್ನು ಸಾಧಿಸುವಾತನು ತನ್ನ ಕೃಪೆಯನ್ನು ಅವಲಂಬಿಸಿರುವವರನ್ನು ಬಲಪಡಿಸುತ್ತಾನೆ ಮತ್ತು ಸಜ್ಜುಗೊಳಿಸುತ್ತಾನೆ ಎಂದು ಕೀರ್ತನೆಗಾರನೊಂದಿಗೆ ಅವರು ಹೇಳಬಹುದು "ಪರಾಕ್ರಮದಿಂದ ನನ್ನ ನಡುವನ್ನು ಕಟ್ಟುವಾತನೂ ದೇವರೆ...... ನಿನ್ನಿಂದ ನಾನು ದಂಡಿನ ಮೇಲೆ ಬಿದ್ದೆನು; ನನ್ನ ದೇವರಿಂದ ಗೋಡೆ ನೆಗೆದೆನು" ಮತ್ತು ಪೌಲನೊಂದಿಗೆ ಹೀಗೆ ಹೇಳಬಹುದು "ನನ್ನನ್ನು ಬಲಪಡಿಸುವ ಕ್ರಿಸ್ತನ ಮೂಲಕ ನಾನು ಎಲ್ಲವುಗಳನ್ನು ಮಾಡಬಲ್ಲೆನು." **R 2154 : 3**

## 27 ಆಗಸ್ಟ್

**"ನಿನ್ನ ಮನೆಗೂ ಸ್ನೇಹಿತರ ಬಳಿಗೂ ಹೋಗಿ ಕರ್ತನು ನಿನ್ನ ಮೇಲೆ ಕರುಣೆಯಿಟ್ಟು ಎಂಥಾ ಮಹತ್ಕಾರ್ಯಗಳನ್ನು ಮಾಡಿದ್ದಾನೆಂದು ಅವರಿಗೆ ಹೇಳು ಅಂದನು." (ಮಾರ್ಕನು 5 : 19)**

ಓಹ್, ನಾವೆಲ್ಲರೂ ದೇವರ ಕೃಪೆಗೆ ನಂಬಿಗಸ್ತ ಸೇವಕರಾಗಿ ಮತ್ತು ಮಹಾ ವಿಮೋಚಕನ ನಂಬಿಗಸ್ತರಾದ ಪ್ರತಿನಿಧಿಗಳಾಗಿರಲು ಶ್ರದ್ಧೆಯಿಂದಿರಬೇಕು–ನಮ್ಮ ತುಟಿಗಳಿಂದ ಸಾಕ್ಷಿ ಹೇಳುವುದು ಮಾತ್ರವಲ್ಲ, ಆದರೆ ಜೀವನದ ಎಲ್ಲಾ ವಿಭಾಗಗಳಲ್ಲಿ ಈಗ ನಾವು ವಿವೇಕಿಗಳಾಗಿದ್ದೇವೆ ಎಂದು ಸಾಕ್ಷಿ ಹೇಳುತ್ತೇವೆ. ಈಗ ನಾವು ಸ್ವಸ್ಥಚಿತ್ತವುಳ್ಳ ಆತ್ಮವನ್ನು ಹೊಂದಿದ್ದೇವೆ. ಅಂದರೆ ಸರಿಯಾದ, ನಿಜವಾದ, ಶ್ರೇಷ್ಠವಾದ ಮತ್ತು ಒಳ್ಳೆಯ ವಿಷಯವನ್ನು ನಾವು ಪ್ರೀತಿಸುತ್ತೇವೆ, ಮತ್ತು ಕ್ರಿಸ್ತನ ಮನಸ್ಸಿಗೆ, ನೀತಿಯ ಮಾರ್ಗಗಳಿಗೆ ಯಾವುದೆಲ್ಲಾ ವಿರುದ್ಧವಾಗಿದೆಯೋ ಮತ್ತು ಯಾವ ವಿಷಯಗಳು ಪಾಪವುಳ್ಳದ್ದಾಗಿದೆಯೋ ಅಂಥಹ ವಿಷಯಗಳನ್ನು ದ್ವೇಷಿಸುತ್ತೇವೆ ಮತ್ತು ಅಂಥಹ ವಿಷಯಗಳಿಗೆ ವಿರುದ್ಧವಾಗಿ ಜೀವಿಸುತ್ತೇವೆ. **R 3773 : 5**

## 28 ಆಗಸ್ಟ್

**"ನಮ್ಮ ದೇವರಾದ ಕರ್ತನೇ, ನಮಗೆ ಸಹಾಯ ಕೊಡು; ಯಾಕಂದರೆ ನಾವು ನಿನ್ನ ಮೇಲೆ ಆತುಕೊಂಡಿದ್ದೇವೆ** [ವಿಶ್ರಾಂತಿ ಪಡೆದಿದ್ದೇವೆ]." **( 2 ಪೂರ್ವಕಾಲವೃತ್ತಾಂತ 14 : 11 )**

ಈ ಲೋಕವು ತನ್ನ ಹೋರಾಟವನ್ನು ಹೋರಾಡಲಿ; ಕರ್ತನು ಮೇಲ್ವಿಚಾರಣೆ ಮಾಡುತ್ತಾನೆ ಮತ್ತು ಅಂತಿಮವಾಗಿ ಅದರ ಫಲಿತಾಂಶಗಳು ಮಹಿಮೆಯುಳ್ಳದ್ದಾಗಿರುತ್ತದೆ. ಹೊಸ ದೇಶಕ್ಕೆ ಸೇರಿದವರಾದ ನಾವು ಈ ಲೋಕಕ್ಕೆ ಸೇರದೆ, ಹೊಸ ರಾಜ್ಯಕ್ಕೆ ಸೇರಿದವರಾಗಿದ್ದೇವೆ. ನಾವು ಯಾವುದೇ ಶಾರೀರಿಕ ಆಯುಧಗಳನ್ನು ಬಳಸದೆ, ಆತ್ಮದ ಕತ್ತಿಯನ್ನು ಉಪಯೋಗಿಸುತ್ತೇವೆ– ನಾವು ನಂಬಿಕೆಯ ಒಳ್ಳೆಯ ಹೋರಾಟವನ್ನು ಹೋರಾಡೋಣ, ನಮ್ಮ ಮುಂದೆ ಇರುವ ಮಹಿಮೆಯಾದ ವಿಷಯಗಳನ್ನು ಹಿಡಿದಿಟ್ಟುಕೊಳ್ಳೋಣ. ನಾವು ನಿಲ್ಲುವದು ಮಾತ್ರವಲ್ಲದೆ ಅದೇ ಆತ್ಮದಿಂದ ಗರ್ಭಧಾರಣೆ (ಭ್ರೂಣಾಂಕುರ) (begotten of the Spirit)ಹೊಂದಿದ ಎಲ್ಲರಿಗೂ ಮತ್ತು ಅದೇ ಪರಲೋಕ ಸೈನ್ಯದ ಸದಸ್ಯರು ನಿಲ್ಲುವ ಹಾಗೆ ಸಹಾಯ ಮಾಡೋಣ, ನಮ್ಮ ಶರೀರದ ತಲೆಯಾಗಿರುವಾತನೂ ಮತ್ತು ನಮ್ಮ ರಕ್ಷಣೆಯ ನಾಯಕನಾಗಿರುವಾತನಲ್ಲಿ ಪೂರ್ಣಗೊಳ್ಳಲು ಸಹಾಯ ಮಾಡೋಣ. ಆತನ ಪ್ರೀತಿಯ ಮಗನ ಮಹಿಮೆಯ ರಾಜ್ಯದಲ್ಲಿ ಎಲ್ಲಾ ಸೃಷ್ಠಿಗಳ ಮೇಲೆ ದೇವರ ಪ್ರೀತಿಯ ಆರೈಕೆಯು ವ್ಯಕ್ತವಾಗುತ್ತದೆ. ಆತನು ಮನುಕುಲವನ್ನು ಆಶೀರ್ವದಿಸಿ, ಆಳ್ವಿಕೆಮಾಡಿ, ಬೋಧಿಸಿ, ಉನ್ನತಿಗೆ ಏರಿಸುತ್ತಾನೆ. "ನರಳುತ್ತಿರುವ ಸೃಷ್ಟಿಯೆಲ್ಲವು" ಆಗ ನಾಶನದ ಬಂಧನದಿಂದ ಬಿಡುಗಡೆ ಹೊಂದಿ, ಯಾರೆಲ್ಲಾ ಆ ಆಶೀರ್ವಾದವನ್ನು ಸ್ವೀಕರಿಸುತ್ತಾರೋ ಅಂಥವರು ದೇವಪುತ್ರರ ಮಹಿಮೆಯುಳ್ಳ ಸ್ವಾತಂತ್ರ್ಯದೊಳಗೆ ಪ್ರವೇಶಿಸುವರು. ದೇವರು ಈ ಲೋಕವನ್ನು ಎಷ್ಟೋ ಪ್ರೀತಿಸಿ, ತನ್ನ ಮಗನನ್ನು ನಮಗೋಸ್ಕರ ಸಾಯುವುದಕ್ಕೆ ಕಳುಹಿಸಿ, ಆತನ ರಾಜ್ಯದ ಆಶೀರ್ವಾದಗಳ ಮಾರ್ಗವನ್ನು ತೆರೆಯುವಂತೆ ಮಾಡಿದ್ದನ್ನು ಆಗ ಎಲ್ಲರೂ ನೋಡುತ್ತಾರೆ. **R 3393 : 5**

## 29 ಆಗಸ್ಟ್

**"ನೀವು ಯಾವದನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಹೃದಯಪೂರ್ವಕವಾಗಿ ಮಾಡಿರಿ." (ಕೊಲೊಸ್ಸೆಯವರಿಗೆ 3 : 23)**

ಕರ್ತನು ತನ್ನ ಜನರನ್ನು ನಿರ್ಬಂಧದಿಂದ ಮುಕ್ತಗೊಳಿಸುತ್ತಾನೆ; ಬೆದರಿಕೆಗಳಿಂದ, ಬಲವಂತದಿಂದ ಮುಕ್ತಗೊಳಿಸುತ್ತಾನೆ; ಅನುದಿನ ತಮ್ಮ ಶರೀರಗಳನ್ನು ಸಜೀವ ಯಜ್ಞವಾಗಿ ಅರ್ಪಿಸುವ ಉದ್ದೇಶಕ್ಕಾಗಿ ಇವುಗಳಿಂದ ಮುಕ್ತಗೊಳಿಸುತ್ತಾನೆ. ಈಗ ಮೊದಲಿನಂತೆ ಯಾರೆಲ್ಲಾ ತಣ್ಣಗಾಗುತ್ತಾರೋ ಅವರು ತನ್ನ ಬಲಿ ಸಲ್ಲಿಸುವುದನ್ನು ನಿಲ್ಲಿಸಬಹುದು, ಆದರೆ ತಾನು ಸ್ವತಃ ಸೋತವನಾಗುತ್ತಾನೆ. ದೇವರು ಪಾಪವನ್ನು ಖಂಡಿಸುತ್ತಾನೆ ಮತ್ತು ಆತನ ಜನರಿಗೆ ಪಾಪ ಮಾಡುವ ವಿಷಯದಲ್ಲಿ ಯಾವುದೇ ಸ್ವಾತಂತ್ರ್ಯವಿಲ್ಲದಿದ್ದರೂ, ಪಾಪವನ್ನು

ವಿರೋಧಿಸಲು ತಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡಲು ಬದ್ಧರಾಗಿದ್ದಾರೆ, ಬಲಿ ಸಲ್ಲಿಸುವ ವಿಷಯದಲ್ಲಿ ಅದು ವಿಭಿನ್ನವಾಗಿರುತ್ತದೆ ಎಂದು ನಾವು ನಮ್ಮ ಮನಸ್ಸಿನ ಮುಂದೆ ಸ್ಪಷ್ಟವಾಗಿ ಇಡಬೇಕಾಗಿದೆ. ಕರ್ತನು ಉಚಿತ ಕಾಣಿಕೆಯ ಅರ್ಪಣೆಗಳಿಗಾಗಿ ಕರೆಯುತ್ತಿದ್ದಾನೆ ಮತ್ತು ಯಾವುದನ್ನಾಗಲಿ ಹೃದಯ ಪೂರ್ವಕವಾದ ಒಳ್ಳೆಯ ಚಿತ್ತದಿಂದ ಹೌದು ಅತ್ಯುತ್ಸಾಹದಿಂದ ಕೊಡದಿದ್ದರೆ ಅದನ್ನು ಹಾಗೆಯೇ ಇಟ್ಟುಕೊಳ್ಳಬಹುದು–ಆದರೆ ಬಲಿ ಸಲ್ಲಿಸದೆ ಇರುವವರು, ಬೋಧಕನ ಆತ್ಮವನ್ನು ಮತ್ತು ಆತನ ಭಕ್ತಿಯನ್ನು ಅನುಕರಿಸುವವರಿಗೆ ವಾಗ್ದಾನ ಮಾಡಿರುವ ಬಹುಮಾನಗಳನ್ನು ಕಳೆದುಕೊಳ್ಳುತ್ತಾರೆ. **R 3009 : 2**

## 30 ಆಗಸ್ಟ್

**"ಕರ್ತನಲ್ಲಿ ಭರವಸವಿಟ್ಟು ಒಳ್ಳೆಯದನ್ನು ಮಾಡು; ಆಗ ದೇಶದಲ್ಲಿ ವಾಸಮಾಡಿ ನಿಜವಾಗಿ ತೃಪ್ತಿ ಹೊಂದುವಿ." ( ಕೀರ್ತನೆಗಳು 37 : 3 )**

ಕರ್ತನ ಒಳ್ಳೆಯತನವನ್ನು [ಸದ್ಗುಣವನ್ನು] ತನ್ನದೇ ಆದ ಸಮಯದಲ್ಲಿ ಅಂದರೆ ಬರುವ [ಮೆಸ್ಸೀಯನ] ಯುಗದಲ್ಲಿ ಈ ಲೋಕಕ್ಕೆ ವಾಗ್ದಾನ ಮಾಡಿರುವ ಬಗ್ಗೆ ಮತ್ತು ನಾವು ಹಿಂದಿನ ಯುಗವನ್ನು ಕುರಿತು ತಿರುಗಿ ನೋಡಿ, ಆತನ ಕೃಪೆಯ ಆರೈಕೆಯನ್ನು ನಂಬಿದ ಆ ಪೂರ್ವ ಕಾಲವನ್ನು ಕುರಿತು ನೋಡುವಾಗ, ಈ ಸುವಾರ್ತಾ ಯುಗದಲ್ಲಿರುವ ನಮ್ಮನ್ನು ಕುರಿತು ಏನು ಹೇಳೋಣ, ನಾವು ಹಿಂದಿನ ಕಾಲದವರಿಗಿಂತಲೂ ಮತ್ತು ಬರುವ ಯುಗದ ಜನರಿಗಿಂತಲೂ ಎಲ್ಲಾ ರೀತಿಯಲ್ಲಿಯೂ ಅಧಿಕ ಪ್ರಯೋಜನವನ್ನು ಹೊಂದಿದ್ದೇವೆ, ಅಂದರೆ ಆತನ ಕೃಪೆಯ ಯೋಜನೆಯ ಜ್ಞಾನದಲ್ಲಿ ಮತ್ತು ಆತನ ಕುಟುಂಬದಲ್ಲಿ ದತ್ತು ಪಡೆದ ವಿಶೇಷವಾದ ದಯೆ ಮತ್ತು ಆಶೀರ್ವಾದ ಪಡೆದವರಾಗಿದ್ದೇವಲ್ಲವೇ? ಹಿಂದೆ ಜಾಗರೂಕನಾಗಿದ್ದ(ದೇವರು), ಭವಿಷ್ಯದಲ್ಲಿ ಆಶೀರ್ವಾದ ನೀಡುವದಕ್ಕೆ ಸಂತೋಷಪಡುವಾತನು(ದೇವರು), ಈಗ ನಮ್ಮಲ್ಲಿ ಪ್ರತಿಯೊಬ್ಬರಿಗೂ ಆತನ ಮಕ್ಕಳ ಆಶೀರ್ವಾದಗಳನ್ನು ಸುರಿಸಲು, ವಿಶೇಷವಾಗಿ ಆತ್ಮೀಕ ವಿಷಯಗಳನ್ನು ಪಡೆದುಕೊಳ್ಳಲು ನಾವು ತೋರಿಸುವ ನಮ್ಮ ಚಿತ್ತಕ್ಕೆ ತಕ್ಕಂತೆ ಮತ್ತು ನಂಬಿಕೆಗೆ ತಕ್ಕಂತೆ ದೇವರು ಆಶೀರ್ವದಿಸುವುದನ್ನು ಕುರಿತು ನಾವು ಎಣಿಸಬಾರದೆ? ನಾವು ಇನ್ನೂ ಪಾಪಿಗಳಾಗಿದ್ದಾಗಲೇ ದೇವರು ನಮ್ಮನ್ನು ಪ್ರೀತಿಸಿ, ವಿಮೋಚಿಸಿರುವಲ್ಲಿ ಈಗ ಇದಕ್ಕಿಂತಲೂ ಹೆಚ್ಚಾಗಿ ನಾವು ಕ್ಷಮಿಸಲ್ಪಟ್ಟು ಆತನ ಕುಟುಂಬದಲ್ಲಿ ಸ್ವೀಕರಿಸಲ್ಪಟ್ಟಿದ್ದೇವೆ ಮತ್ತು ನಮ್ಮ ಕರ್ತನಾದ ಯೇಸುವಿನೊಂದಿಗೆ ಸಹ–ಬಾಧ್ಯಸ್ಥರಾಗಲು ದತ್ತು ಪಡೆದಿದ್ದೇವೆ. ನಾವು ಕರ್ತನನ್ನು ನಿರಂತರವಾಗಿ ದಿನದಿಂದ ದಿನಕ್ಕೆ, ಆತನು ನಮಗೆ

ಭರವಸೆ ನೀಡುವ ಆಶೀರ್ವಾದಗಳು ಮತ್ತು ದಯೆಗಳನ್ನು ನಮಗೆ ಕೊಡಲು ಸಂತೋಷವುಳ್ಳವನಾಗಿದ್ದಾನೆಂದು ನಾವು ನಿರೀಕ್ಷಿಸಬಾರದೆ? ನಿಶ್ಚಯವಾಗಿ ಏನೇ ಬಂದರೂ ಆತನಲ್ಲಿ ದೃಢವಾದ ನಂಬಿಕೆ ನಮಗುಂಟು! ಕರ್ತನು ಈಗ ತನ್ನ ಸೇವಕರು ಮತ್ತು ದಾಸಿಯರ ಮೇಲೆ ತನ್ನ ಆತ್ಮವನ್ನು ಸುರಿಯುತ್ತಿದ್ದಾನೆ, ಅವರು ತಮ್ಮನ್ನು ಖಾಲಿ ಪಾತ್ರೆಗಳನ್ನಾಗಿ ಮಾಡಿ–ಅದು ತುಂಬುವಂತೆ ಬರಿದು ಮಾಡಿ–ಅದರಲ್ಲಿ ದೇವರ ಆತ್ಮವು ಹೆಚ್ಚು ಹೆಚ್ಚಾಗಿ ತುಂಬುವಂತೆ ನೋಡಿಕೊಳ್ಳಬೇಕು. **R 3431 : 5**

## 31 ಆಗಸ್ಟ್

**"ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ." ( ಯೂದನು 21 )**

ದೇವರ ಲೆಕ್ಕದಲ್ಲಿ ನಾನು ಏನಾದರೂ ಆಗಿದ್ದೇನೋ ಅಥವಾ ಏನೂ ಆಗಿಲ್ಲವೋ ಎಂಬದು ಆತನಿಗಾಗಿ, ಆತನ ಸಹೋದರರಿಗಾಗಿ, ಆತನ ನಿಮಿತ್ತವಾಗಿ, ಈ ಲೋಕಕ್ಕಾಗಿ, ಮತ್ತು ಶತ್ರುಗಳ ಬಗ್ಗೆಯೂ ಸಹ ನನಗಿರುವ ಪ್ರೀತಿಯಲ್ಲಿ ಅಳತೆಮಾಡಬೇಕೇ ಹೊರತು ನನ್ನ ಜ್ಞಾನ, ಕೀರ್ತಿ ಅಥವಾ ವಾಕ್ಚಾತುರ್ಯದಿಂದಲ್ಲ! ಆದರೂ ಪ್ರೀತಿಯ ಪವಿತ್ರಾತ್ಮದಿಂದ ಗರ್ಭಧಾರಣೆ ಹೊಂದದೆ, ಒಬ್ಬನು ದೇವರ ಆಳವಾದ ರಹಸ್ಯಗಳ ಬಗ್ಗೆ ಜ್ಞಾನವನ್ನು ಹೊಂದಬಹುದೆಂದು ನಾವು ಅರ್ಥಮಾಡಿಕೊಳ್ಳಬಾರದು; ದೇವರ ಆಳವಾದ ವಿಷಯಗಳನ್ನು ದೇವರ ಆತ್ಮವಿಲ್ಲದೆ ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ; ಆದರೆ ಒಬ್ಬನು ಆತ್ಮವು ಕೊಟ್ಟಂತಹ ಜ್ಞಾನವನ್ನು ಕಳೆದುಕೊಳ್ಳುವ ಮೊದಲು ಆ ಆತ್ಮವನ್ನೇ ಕಳೆದುಕೊಳ್ಳಬಹುದು. ಆದ್ದರಿಂದ ಗುಣಲಕ್ಷಣವನ್ನು ಅಳತೆಮಾಡುವಾಗ, ನಾವು ಪ್ರೀತಿಯನ್ನು ಮೊದಲ ಸ್ಥಾನದಲ್ಲಿರಿಸಬೇಕು, ಕರ್ತನೊಂದಿಗೆ ನಾವು ಹತ್ತಿರವಾಗುವುದಕ್ಕೆ ಮತ್ತು ಆತನು ನಮ್ಮನ್ನು ಸ್ವೀಕರಿಸುವುದಕ್ಕೆ ಪ್ರೀತಿಯು ಮುಖ್ಯ ಪರೀಕ್ಷೆಯೆಂದು ಪರಿಗಣಿಸಬೇಕು. **R 4917 : 6**

## 1 ಸೆಪ್ಟೆಂಬರ್

**"ಹೀಗೆ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಆದರೆ ಇವುಗಳಲ್ಲಿ ದೊಡ್ಡದು ಪ್ರೀತಿಯೇ." ( 1 ಕೊರಿಂಥದವರಿಗೆ 13 : 13 )**

ಪ್ರೀತಿಯನ್ನು ವಿವರಿಸಲು ಅಸಾಧ್ಯವೆಂದು ತೋರುತ್ತದೆ, ಈ ಅದ್ಭುತ ಗುಣವಿಲ್ಲದೆ ದೇವರ ದೃಷ್ಟಿಯಲ್ಲಿ ಏನ್ನನ್ನೂ ಸ್ವೀಕರಿಸಲು ಸಾಧ್ಯವಿಲ್ಲ!

ಅಪೋಸ್ತಲನು ಪ್ರೀತಿಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಿಲ್ಲ, ಆದರೆ ಅದರಲ್ಲಿರುವ ಕೆಲವನ್ನು ನಮಗೆ ವ್ಯಕ್ತಪಡಿಸುವುದರಲ್ಲಿ ತೃಪ್ತಿ ಹೊಂದುತ್ತಾನೆ. ಅಂತಹ ಪ್ರೀತಿಯ ಗುಣಲಕ್ಷಣಗಳನ್ನು ಯಾರು ಹೊಂದಿರುತ್ತಾರೋ ಅಂಥವರು ಅದನ್ನು ಪ್ರಶಂಸಿಸಲು ಸಮರ್ಥರಾಗಿದ್ದಾರೆ, ಅದಿಲ್ಲದಿದ್ದರೆ ಅದನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ನಿಜಾಂಶವೇನೆಂದರೆ, ಜೀವ ಮತ್ತು ಬೆಳಕಿನಂತೆ ಪ್ರೀತಿಯನ್ನು ವ್ಯಾಖ್ಯಾನಿಸುವುದು ಕಷ್ಟ; ಮತ್ತು ಪ್ರೀತಿಯನ್ನು ಗ್ರಹಿಸುವ ನಮ್ಮ ಅತ್ಯುತ್ತಮ ಪ್ರಯತ್ನಗಳು ಅದರ ಪರಿಣಾಮಗಳ ಹಾದಿಯಲ್ಲಿವೆ. ಅದು ದೇವರದ್ದಾಗಿದೆ; ಅದು ಹೃದಯದಲ್ಲಿ, ನಾಲಿಗೆಯಲ್ಲಿ, ಕೈಯಲ್ಲಿ, ಆಲೋಚನೆಗಳಲ್ಲಿ ದೇವರ ಸ್ವಾರೂಪ್ಯವುಳ್ಳದ್ದಾಗಿದೆ–ಅದು ಎಲ್ಲಾ ಮಾನವ ಗುಣಲಕ್ಷಣಗಳನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ಪ್ರೀತಿಯಲ್ಲಿ ಕೊರತೆಯಿದ್ದರೆ ಅದರ ಫಲಿತಾಂಶಗಳು ಹೆಚ್ಚು ಕಡಿಮೆ ಕೆಟ್ಟದ್ದಾಗಿರುತ್ತದೆ; ಎಲ್ಲಿ ಪ್ರೀತಿಯಿದಯೋ, ಆ ಪ್ರೀತಿಯು ಎಷ್ಟರ ಮಟ್ಟಿಗೆ ಇದೆಯೋ ಅಷ್ಟರ ಮಟ್ಟಿಗೆ ಅದರ ಫಲಿತಾಂಶಗಳು ಭಿನ್ನವಾಗಿರುತ್ತದೆ ಮತ್ತು ಅದರ ಪ್ರಮಾಣಕ್ಕೆ ಅನುಗುಣವಾಗಿ ಉತ್ತಮವಾಗಿರುತ್ತದೆ. **R 4917 : 2.**

## 2 ಸೆಪ್ಟೆಂಬರ್

### "ಪ್ರೀತಿಯು ಕರುಣೆಯುಳ್ಳದ್ದು." ( 1 ಕೊರಿಂಥದವರಿಗೆ 13 : 4 )

ನನ್ನ ನಡವಳಿಕೆ ಮತ್ತು ನನ್ನ ಮಾತನ್ನು ಜಾಗರೂಕನಾಗಿ ಕಾಪಾಡಲು ಪ್ರಯತ್ನಿಸುತ್ತಿದ್ದೇನಾ? ಏಕೆಂದರೆ ನನ್ನ ಜೀವನದ ಪ್ರತಿಯೊಂದು ವ್ಯವಹಾರದಲ್ಲಿ ಅದು ಪರಿಣಾಮ ಬೀರುತ್ತದೆ; ನನ್ನ ಕ್ರಿಯೆಗಳು, ಮಾತುಗಳು ಮತ್ತು ಆಲೋಚನೆಗಳನ್ನು ವ್ಯಾಪಿಸಿರುವ ಪ್ರೀತಿಯ ಈ ಗುರಿ ನನ್ನಲ್ಲಿ ಇದೆಯೇ? ನಾನು ಇತರರ ಬಗ್ಗೆ ಯೋಚಿಸುತ್ತಿದ್ದೇನಾ ಮತ್ತು ಪರಿಗಣಿಸುತ್ತಿದ್ದೇನಾ? ಮಾತಿನಲ್ಲಿ, ನೋಟದಲ್ಲಿ, ಕ್ರಿಯೆಯಲ್ಲಿ ನಾನು ಅವರ ಬಗ್ಗೆ ದಯೆಯನ್ನು ಭಾವನೆಗಳಲ್ಲಿ ವ್ಯಕ್ತಪಡಿಸುತ್ತೇನೆಯೇ? ಬೇರೆ ಎಲ್ಲರಿಗಿಂತ ಒಬ್ಬ ಕ್ರೈಸ್ತನು ಮನೆಯಲ್ಲಿ, ಆತನ ವ್ಯವಹಾರದ ಸ್ಥಳಗಳಲ್ಲಿ , ಸಭೆಯಲ್ಲಿ, ಎಲ್ಲಾ ಸ್ಥಳಗಳಲ್ಲಿಯೂ ದಯೆ, ವಿನಯಶೀಲತೆ ಮತ್ತು ಶಾಂತಗುಣವುಳ್ಳವರಾಗಿರಬೇಕು. ಎಷ್ಟರ ಮಟ್ಟಿಗೆ ಪರಿಪೂರ್ಣ ಪ್ರೀತಿಯನ್ನು ಸಾಧಿಸುತ್ತೇವೋ ಅಷ್ಟರ ಮಟ್ಟಿಗೆ ಹೃದಯದ ನಿರಂತರ ಪ್ರಯತ್ನವು ಪ್ರತಿಯೊಂದು ಮಾತು ಮತ್ತು ಕ್ರಿಯೆಯು, ಅವರನ್ನು ಪ್ರೇರೇಪಿಸುವ ಆಲೋಚನೆಗಳಂತೆ ತಾಳ್ಮೆ ಮತ್ತು ದಯೆಯಿಂದ ತುಂಬಿರುತ್ತದೆ. **R 4918 : 1**

## 3 ಸೆಪ್ಟೆಂಬರ್

**"ಪ್ರೀತಿಯು ಹೊಟ್ಟೇಕಿಚ್ಚು ಪಡುವದಿಲ್ಲ." ( 1 ಕೊರಿಂಥದವರಿಗೆ 13 : 4 )**

"ಹೊಟ್ಟೇಕಿಚ್ಚು ಪಡದೆ" ಇರುವ ಪ್ರೀತಿ, ಉದಾರವಾದ ಪ್ರೀತಿ ನನ್ನಲ್ಲಿದೆಯೇ? ಒಂದು ವೇಳೆ ನನ್ನ ಸ್ವಂತ ವ್ಯವಹಾರಗಳಲ್ಲಿ ಅಷ್ಟೊಂದು ಸಮೃದ್ಧವಾಗಿಲ್ಲದಿದ್ದರೂ ಸಹ, ಇತರರು ಸಮೃದ್ಧಿಯಾಗುವುದನ್ನು ಮತ್ತು ಅವರ ಸಮೃದ್ಧಿಯಲ್ಲಿ ನಾವು ಸಂತೋಷಪಡುವ "ಉದಾರವಾದ ಪ್ರೀತಿಯನ್ನು ನಾನು ಹೊಂದಿದ್ದೇನೆಯೇ? ಇದು ನಿಜವಾದ ಉದಾರತೆಯಾಗಿದ್ದು, ಅಸೂಯೆ ಮತ್ತು ಹೊಟ್ಟೇಕಿಚ್ಚಿಗೆ ವಿರುದ್ಧವಾಗಿದೆ, ಈ ಅಸೂಯೆ ಮತ್ತು ಹೊಟ್ಟೇಕಿಚ್ಚು ವಿಕೃತ ಸ್ವಭಾವದಿಂದ ಹುಟ್ಟುತ್ತದೆ. ಹೊಟ್ಟೇಕಿಚ್ಚಿನ ಮೂಲವು ಸ್ವಾರ್ಥತೆಯಾಗಿದೆ; ಪ್ರೀತಿಯ ಬೇರಿನ ಮೇಲೆ ಹೊಟ್ಟೇಕಿಚ್ಚು ಬೆಳೆಯುವುದಿಲ್ಲ. ಪ್ರತಿಯೊಂದು ಒಳ್ಳೆಯ ಮಾತು ಕ್ರಿಯೆಯ ಸಮೃದ್ಧಿಯಲ್ಲಿ ಮತ್ತು ಕ್ರೈಸ್ತ ಕೃಪೆಯ ಬೆಳೆವಣಿಗೆಯಲ್ಲಿ ಮತ್ತು ಯಾರೆಲ್ಲಾ ದೈವಿಕ ಆತ್ಮದಿಂದ ದೈವಿಕ ಸೇವೆಯಲ್ಲಿ ಕಾರ್ಯರೂಪಕ್ಕೆ ಬಂದು ಅದರಲ್ಲಿ ಸಂತೋಷಪಡುತ್ತಾರೋ, ಅವರೊಂದಿಗೆ ಪ್ರೀತಿಯು ಸಂತೋಷಪಡುತ್ತದೆ. **R 4918 : 2**

## 4 ಸೆಪ್ಟೆಂಬರ್

**"ಪ್ರೀತಿಯು [ತನ್ನನ್ನೇ] ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ." ( 1 ಕೊರಿಂಥದವರಿಗೆ 13 : 4 )**

ನನ್ನಲ್ಲಿ ಹೊಗಳಿಕೊಳ್ಳದ, ಉಬ್ಬಿಕೊಳ್ಳದ, ತಗ್ಗಿಸುವಿಕೆಯ ಪ್ರೀತಿ ಇದೆಯೇ? ಶಾಂತತೆಗೆ ಒಲವು ತೋರುವ, ಹೆಮ್ಮೆ ಪಡದಂತಹ, ಹಿಗ್ಗದಂತಹ ಪ್ರೀತಿ ನನ್ನಲ್ಲಿದೆಯೇ? ಒಳ್ಳೆಯ ಕ್ರಿಯೆಗಳನ್ನು ತಡವಿಲ್ಲದೆ ಮಾಡುವ ಪ್ರೀತಿ ನನ್ನಲ್ಲಿದೆಯೇ? ಮನುಷ್ಯರು ನೋಡಬೇಕೆಂದು ಮಾಡದೆ, ದೇವರು ಮಾತ್ರ ನೋಡುವ ಹಾಗೆ ಅಥವಾ ತಿಳಿಯುವ ಹಾಗೆ ಇರುವ ಪ್ರೀತಿ ನನ್ನಲ್ಲಿದೆಯೇ? ಅದು ತನ್ನ ಜ್ಞಾನ ಅಥವಾ ಅದರ ಕೃಪೆಗಳನ್ನು ಕುರಿತು ಬಡಾಯಿಕೊಚ್ಚಿಕೊಳ್ಳುವುದಿಲ್ಲ [ಹೆಮ್ಮೆಪಡುವುದಿಲ್ಲ], ಆದರೆ ಪ್ರತಿಯೊಂದು ಒಳ್ಳೇದಾನವೂ, ಸಂಪೂರ್ಣವಾದ ಪ್ರತಿವರವೂ ತಂದೆಯಿಂದ ಇಳಿದು ಬರುತ್ತದೆ ಎಂದು ಒಪ್ಪಿಕೊಳ್ಳುತ್ತದೆಯೇ? ಮತ್ತು ಆತನು ತೋರಿದ ಪ್ರತಿಯೊಂದು ದಯೆಗೆ ಪ್ರೀತಿಯಿಂದ ಮತ್ತು ಸೇವೆಯ ಮೂಲಕ ಬದಲು ಸಲ್ಲಿಸುತ್ತೇನೆಯೇ? **R 4918 : 2**

## 5 ಸೆಪ್ಟೆಂಬರ್

**“[ಪ್ರೀತಿಯು] ಮರ್ಯಾದೆಗೆಟ್ಟು ನಡೆಯುವದಿಲ್ಲ.” (1 ಕೊರಿಂಥದವರಿಗೆ 13 : 5)**

“ಮರ್ಯಾದೆಗೆಟ್ಟು ನಡೆಯದ”, ಸೌಜನ್ಯವುಳ್ಳ ಪ್ರೀತಿ ನನ್ನಲ್ಲಿದೆಯೇ? ಹೆಮ್ಮೆ ಎಂಬುದು ಬೇರಿನಂತಿದ್ದು ಅದರಿಂದ ಮರ್ಯಾದೆ ಗೆಟ್ಟು ನಡೆಯುವ ವಿನಯವಿಲ್ಲದ ನಡವಳಿಕೆಗಳು ಹೆಚ್ಚಾಗಿ ಬೆಳೆಯುತ್ತದೆ. ಬುದ್ಧಿವಂತಿಕೆಯಲ್ಲಿ ಅಥವಾ ಹಣಕಾಸಿನ ವಿಷಯದಲ್ಲಿ ತಮ್ಮನ್ನು ಹೆಚ್ಚಿನವರು ಎಂದು ಅಂದುಕೊಳ್ಳುವವರಲ್ಲಿ ಇದು ಸಾಮಾನ್ಯವಾಗಿದೆ. ವಿನಯವನ್ನು ಪ್ರೀತಿಯಲ್ಲಿನ ಕ್ಷುಲ್ಲಕ ವಿಷಯವೆಂದೂ, ಸೌಜನ್ಯವನ್ನು ಪ್ರೀತಿಯಲ್ಲಿನ ಚಿಕ್ಕ ವಿಷಯಗಳೆಂದು ವ್ಯಾಖ್ಯಾನಿಸಲಾಗಿದೆ. ವಿನಯತೆಯ ರಹಸ್ಯವು ಮೇಲ್ನೋಟಕ್ಕೆ ಹೊಳಪಾಗಿರುತ್ತದೆ ಅಥವಾ ಹೃದಯದೊಳಗೆ ಪ್ರೀತಿಯಿರುತ್ತದೆ. ಕ್ರೈಸ್ತರಾದ ನಾವು ಹೃದಯದಲ್ಲಿ ಪ್ರೀತಿಯನ್ನು ಹೊಂದಿರಬೇಕು. ಅದು ದಯೆ ಮತ್ತು ಸೌಜನ್ಯತೆಯ ಕ್ರಿಯೆಗಳನ್ನು ಮಾಡಲು ಪ್ರೇರೇಪಿಸುತ್ತದೆ, ಅದು ವಿಶ್ವಾಸದ ಮನೆವಾರ್ತೆಯವರಲ್ಲಿ ಮಾತ್ರವಲ್ಲದೆ, ನಮ್ಮ ಮನೆಗಳಲ್ಲಿ ಮತ್ತು ಈ ಲೋಕದ ವ್ಯವಹಾರಗಳಲ್ಲಿಯೂ ನಮ್ಮನ್ನು ಪ್ರೇರೇಪಿಸುತ್ತದೆ. **R 4918 : 2**

## 6 ಸೆಪ್ಟೆಂಬರ್

**“[ಪ್ರೀತಿಯು] ಸ್ವಾರ್ಥತೆಯನ್ನು ಬಯಸುವದಿಲ್ಲ.” (1 ಕೊರಿಂಥದವರಿಗೆ 13 : 5)**

ಸ್ವಾರ್ಥತೆಯಿಲ್ಲದ ಪ್ರೀತಿ ನನ್ನಲ್ಲಿದೆಯೇ?, ಅದು ಪ್ರತ್ಯೇಕವಾಗಿ “ತನ್ನ ಸ್ವಂತ ಆಸಕ್ತಿಯನ್ನು ಬಯಸದೆ”, ಇತರರ ಒಳಿತಿಗಾಗಿ ತನ್ನ ಕೆಲವು ಸ್ವಂತ ಹಕ್ಕುಗಳನ್ನು ತ್ಯಾಗ ಮಾಡಲು ಸಿದ್ಧವಾಗಿರುತ್ತದೆಯೇ? ಅಥವಾ ಇದಕ್ಕೆ ವಿರುದ್ಧವಾಗಿ, ಪ್ರತಿ ಸಂದರ್ಭದಲ್ಲೂ ನನ್ನ ಸ್ವಂತ ಹಕ್ಕುಗಳನ್ನು ಬೇಡಿಕೊಳ್ಳುವದು ಮಾತ್ರವಲ್ಲದೆ ಇತರರ ಅನುಕೂಲಗಳು, ಸೌಕರ್ಯಗಳು ಮತ್ತು ಹಕ್ಕುಗಳನ್ನು ಲೆಕ್ಕಿಸದೆ ಆ ಹಕ್ಕುಗಳನ್ನು ಕಸಿದುಕೊಳ್ಳುವ ಸ್ವಾರ್ಥವನ್ನು ನಾನು ಹೊಂದಿದ್ದೇನೆಯೇ? ಈ ಪ್ರೀತಿಯನ್ನು ಹೊಂದುವ ವಿಚಾರದಲ್ಲಿ ಇತರರಿಂದ ನಾವು ಯಾವುದೇ ಲಾಭವನ್ನು ಅನ್ಯಾಯವಾಗಿ ತೆಗೆದುಕೊಳ್ಳದಂತೆ ಎಚ್ಚರವಹಿಸುತ್ತೇವೆ ಮತ್ತು ತಪ್ಪು ಮಾಡುವುದಕ್ಕಿಂತ ಕೇಡನ್ನು ಅನುಭವಿಸಲು ಆದ್ಯತೆ(ಮುಖ್ಯತ್ವ) ನೀಡುತ್ತೇವೆ; ನಾವು ಇತರರಿಗೆ ಅನ್ಯಾಯ ಮಾಡುವುದಕ್ಕಿಂತಲೂ, ಇತರರಿಂದ ನಾವು ಅನ್ಯಾಯವನ್ನು ಸಹಿಸಿಕೊಳ್ಳುತ್ತೇವೆ. **R 4918 : 3**

## 7 ಸೆಪ್ಟೆಂಬರ್

**"[ಪ್ರೀತಿಯು] ಬೇಗನೆ ಕೋಪಗೊಳ್ಳುವದಿಲ್ಲ."** (1 ಕೊರಿಂಥದವರಿಗೆ 13 : 5)

"ಬೇಗನೆ ಕೋಪಗೊಳ್ಳದಂತಹ" ಸಹನಶೀಲತೆಯುಳ್ಳ ಪ್ರೀತಿ ನನ್ನಲ್ಲಿದೆಯೇ? ಆ ಪ್ರೀತಿಯು ವಿಚಾರಣೆಯ ಎರಡೂ ಬದಿಗಳನ್ನು ವಿವೇಚಿಸಿ ನೋಡಲು ನನಗೆ ಶಕ್ತಗೊಳಿಸುತ್ತದೆ. ಅದು ಸ್ವಸ್ಥಬುದ್ಧಿಯ ಆತ್ಮವನ್ನು ನನಗೆ ಕೊಡುತ್ತದೆ. ಉದ್ವೇಗ ಮತ್ತು ಹಿಂಸಾತ್ಮಕವು [ನಮ್ಮನ್ನು] ಉದ್ರೇಕಗೊಳಿಸುವದು ಮಾತ್ರವಲ್ಲದೆ ಅದಕ್ಕಿಂತಲೂ ಕೆಟ್ಟದಾಗಿದೆ ಎಂದು ಗ್ರಹಿಸುವಂತೆ ನನ್ನನ್ನು ಶಕ್ತಗೊಳಿಸುತ್ತದೆ. ಅವರು ಯಾವ ಕಡೆಗೆ ನಡೆಸುತ್ತಾರೋ ಅದು ಅವರಿಗೆ ಹಾನಿಕರವಾಗುವದು ಮಾತ್ರವಲ್ಲದೆ, ಅದರ ಪರಿಣಾಮದಿಂದ ನನ್ನ ಸ್ವಂತ ಹೃದಯ ಮತ್ತು ಶರೀರಕ್ಕೆ ಹಾನಿಕಾರಕವಾಗಿದೆ ಎಂದು ಗ್ರಹಿಸುವಂತೆ ಶಕ್ತಗೊಳಿಸಿದೆಯೇ?
**R 4918 : 3**

## 8 ಸೆಪ್ಟೆಂಬರ್

**"[ಪ್ರೀತಿಯು] ಕೆಟ್ಟದ್ದನ್ನು ಯೋಚಿಸುವದಿಲ್ಲ."** (1 ಕೊರಿಂಥದವರಿಗೆ 13 : 5)

"ಯಾವುದೇ ಕೆಟ್ಟದ್ದನ್ನು ಯೋಚಿಸದಿರುವ" ನಿಷ್ಕಪಟವಾದ, ಇತರರನ್ನು ಕೆಟ್ಟದ್ದಾಗಿ ಅನುಮಾನಿಸದೆ ಇರುವ ಅಥವಾ ಇತರರಲ್ಲಿ ತಪ್ಪು ಕಂಡುಹಿಡಿಯದೆ ಇರುವ ಅಥವಾ ಕೆಟ್ಟ ಉದ್ದೇಶದ ಮನೋಭಾವ ಇಲ್ಲದಿರುವ ಪ್ರೀತಿ ನನ್ನಲ್ಲಿದೆಯೇ? ಇತರರ ನಡವಳಿಕೆಯನ್ನು ಪ್ರೀತಿಯಿಂದ ವ್ಯಾಖ್ಯಾನಿಸಲು, ಇತರರ ಹೃದಯದ ಉದ್ದೇಶಗಳನ್ನು ಪ್ರಚೋದಿಸುವ ಬದಲು ಅವರ ತೀರ್ಪಿನಲ್ಲಿನ ದೋಷಗಳನ್ನು ಮರೆ ಮಾಡುವ ಪ್ರೀತಿಯನ್ನು ಹೊಂದಿದ್ದೇನೆಯೇ? ಪರಿಪೂರ್ಣ ಪ್ರೀತಿಯು ಸ್ವತಃ ಒಳ್ಳೆಯ ಉದ್ದೇಶವನ್ನು ಹೊಂದಿದೆ; ಅದು ಸಾಧ್ಯವಾದಷ್ಟು ಇತರರ ಮಾತುಗಳನ್ನು ಮತ್ತು ನಡವಳಿಕೆಯನ್ನು ಒಂದೇ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸುವ ಆದ್ಯತೆ ಹೊಂದಿರುತ್ತದೆ. ಅದು ದ್ವೇಷ ಮತ್ತು ಅನುಮಾನಗಳನ್ನು ನಿಧಿಯಂತೆ ಸೇರಿಸಿಕೊಳ್ಳುವದಿಲ್ಲ, ಅಥವಾ ಕ್ಷುಲ್ಲಕ ವಿಷಯಗಳಿಗಾಗಿ ಕೆಟ್ಟ ಉದ್ದೇಶಗಳ ಸಾಂದರ್ಭಿಕ ಪುರಾವೆಗಳ ಸರಪಣಿಯನ್ನು ಉಂಟುಮಾಡುವುದಿಲ್ಲ. "ಪ್ರೀತಿ ತೆಳ್ಳಗಿರುವಾಗ (ಕಡಿಮೆಯಿರುವಾಗ) ತಪ್ಪುಗಳು ದಪ್ಪವಾಗಿರುತ್ತದೆ(ಹೆಚ್ಚಾಗಿರುತ್ತದೆ)" ಎಂಬುದು ಬಹಳ ಬುದ್ಧಿವಂತ ಗಾದೆಯಾಗಿದೆ.
**R 4918 : 5**

## 9 ಸೆಪ್ಟೆಂಬರ್

**"[ಪ್ರೀತಿಯು] ಅನ್ಯಾಯದಲ್ಲಿ ಸಂತೋಷಪಡದೆ ಸತ್ಯದಲ್ಲಿಯೇ ಸಂತೋಷಪಡುತ್ತದೆ." (1 ಕೊರಿಂಥದವರಿಗೆ 13 : 6)**

ತಪ್ಪು ಎಂಬುದು ಎಷ್ಟೇ ಲಾಭದಾಯಕವಾಗಿದ್ದರೂ, ಪ್ರೀತಿಯು ಅದರಲ್ಲಿ ಭಾಗವಹಿಸಲು(ಸಂತೋಷಿಸಲು) ಸಾಧ್ಯವಿಲ್ಲ, ಮತ್ತು ಕೆಟ್ಟತನದ ಪ್ರತಿಫಲವನ್ನು ಬಯಸುವುದಿಲ್ಲ. ಆದರೆ ಅದು ಸತ್ಯದಲ್ಲಿ ಸಂತೋಷಪಡುತ್ತದೆ–ಸತ್ಯದ ಎಲ್ಲಾ ವಿಷಯಗಳಲ್ಲಿ ಸಂತೋಷಪಡುತ್ತದೆ. ವಿಶೇಷವಾಗಿ ಸತ್ಯದ ದೈವಿಕ ಪ್ರಕಟನೆಗಳಲ್ಲಿ ಸತ್ಯವು ಎಷ್ಟೇ ಜನಪ್ರಿಯವಾಗಿಲ್ಲದಿದ್ದರೂ ಪ್ರೀತಿಯು ಆ ಸತ್ಯದಲ್ಲಿ ಸಂತೋಷಪಡುತ್ತದೆ; ಆದಾಗ್ಯೂ ಅದರ ಪರಿಣಾಮ ಎಷ್ಟೇ ಹಿಂಸೆಯನ್ನು ಒಳಗೊಂಡಿರಬಹುದು; ಅದು ಇಹಲೋಕ ಸ್ನೇಹವನ್ನು ನಷ್ಟಪಡಿಸಿಕೊಳ್ಳಬೇಕಾಗಬಹುದು ಮತ್ತು ಈ ಲೋಕದ ದೇವರಿಂದ ಕುರುಡಾದವರಿಂದ ನಷ್ಟವನ್ನು ಅನುಭವಿಸಬೇಕಾಗಬಹುದು. ಪ್ರೀತಿಯ ಆತ್ಮವು ಸತ್ಯದ ಬಗ್ಗೆ ಎಂತಹ ಸಂಬಂಧವನ್ನು ಹೊಂದಿದೆಯೆಂದರೆ, ಸತ್ಯ ಅಥವಾ ಅದರ ಸೇವಕರ ವಿರುದ್ಧವಾಗಿ ಬರುವ ಯಾವುದೇ ವಿಧವಾದ ನಷ್ಟ, ಹಿಂಸೆ, ಯಾತನೆಗಳ ಮಧ್ಯದಲ್ಲೂ ಸಂತೋಷಪಡುತ್ತದೆ. ನಾವು ಕರ್ತನ ಬಗ್ಗೆ ನಾಚಿಕೆಪಡುತ್ತೇವೆಯೇ ಅಥವಾ ಆತನ ವಾಕ್ಯದ ಬಗ್ಗೆ ನಾಚಿಕೆಪಡುತ್ತೇವೆಯೇ–ಕರ್ತನ ದೃಷ್ಟಿಯಲ್ಲಿ ಎಲ್ಲಾ ಒಂದೇ ಆಗಿದೆ; ಮತ್ತು ಆತನು ತನ್ನ ಸಂತರ ಜೊತೆ ಮಹಿಮೆಯಲ್ಲಿ ಬರುವಾಗ, ನಾಚಿಕೆಪಡುವ ಅಂಥವರನ್ನು ಕುರಿತು ತಾನೂ ನಾಚಿಕೆಪಡುವನೆಂದು ಹೇಳುತ್ತಾನೆ. **R 4918 : 6**

## 10 ಸೆಪ್ಟೆಂಬರ್

**"[ಪ್ರೀತಿಯು] ಎಲ್ಲವನ್ನೂ ಸಹಿಸಿಕೊಳ್ಳುತ್ತದೆ." (1 ಕೊರಿಂಥದವರಿಗೆ 13 : 7)**

"ಎಲ್ಲವನ್ನೂ ಸಹಿಸಿಕೊಳ್ಳುವ" ಪ್ರೀತಿ ನನ್ನಲ್ಲಿದೆಯೇ? ಅದು ದುಷ್ಟ ಆಕ್ರಮಣಗಳ ವಿರುದ್ಧ ಅಜೇಯವಾಗಿದೆ; ಅದು ಕೆಟ್ಟತನಕ್ಕೆ, ಅಶುದ್ಧತೆಗೆ, ಪಾಪಕ್ಕೆ ವಿರುದ್ಧವಾಗಿದೆ ಹಾಗೂ ಪ್ರೀತಿಗೆ ವಿರುದ್ಧವಾದ ಎಲ್ಲವನ್ನೂ ವಿರೋಧಿಸುತ್ತದೆ; ನಮ್ಮಲ್ಲಿರುವ ಆ ಪ್ರೀತಿಯು ದೇವರ ನಿಮಿತ್ತವಾಗಿ ನಿಂದೆಯನ್ನು, ಖಂಡನೆಯನ್ನು, ಅವಮಾನವನ್ನು, ನಷ್ಟವನ್ನು, ತಪ್ಪಾಗಿ ಪ್ರತಿನಿಧಿಸಲ್ಪಡುವದನ್ನು ಮತ್ತು ಸಾವನ್ನೂ ಸಹ ಸಹಿಸಲು ಸಮರ್ಥವಾಗಿದೆಯೇ ಮತ್ತು ಚಿತ್ತವುಳ್ಳದ್ದಾಗಿದೆಯೇ? "ಲೋಕವನ್ನು ಜಯಿಸಿದಂಥ ಆ ಜಯವು ನಮ್ಮ ನಂಬಿಕೆಯೇ." ಎಂಬ ವಾಕ್ಯವು

ನಂಬಿಕೆಗೆ ಜೀವವೂ ಮತ್ತು ಕೇಂದ್ರಬಿಂದುವೂ ಆಗಿದ್ದು ಕರ್ತನಿಗಾಗಿ, ಆತನವರಿಗಾಗಿ ಮತ್ತು ಸಹಾನುಭೂತಿಯಿಂದ ಈ ಲೋಕದವರಿಗಾಗಿ, ನಂಬಿಕೆಯೇ ಪ್ರೀತಿಯ ಪವಿತ್ರಾತ್ಮವಾಗಿದೆ. ಪರಿಪೂರ್ಣ ಪ್ರೀತಿಯು ಈ ಎಲ್ಲಾ ಸನ್ನಿವೇಶಗಳನ್ನು ಸಹಿಸಿಕೊಳ್ಳುತ್ತದೆ, ಮತ್ತು ದೇವರ ಕೃಪೆಯಿಂದ, ನಮ್ಮನ್ನು ಜಯಶಾಲಿಗಳನ್ನಾಗಿ ಮಾಡುತ್ತದೆ ಮತ್ತು "ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲವುಗಳಲ್ಲಿ ಅಧಿಕ ಜಯಶಾಲಿಗಳಾಗಿದ್ದೇವೆ." **R 4919 : 1**

## 11 ಸೆಪ್ಟೆಂಬರ್

**"[ಪ್ರೀತಿಯು] ಎಲ್ಲವನ್ನೂ ನಂಬುತ್ತದೆ." ( 1 ಕೊರಿಂಥದವರಿಗೆ 13 : 7 )**

"ಎಲ್ಲವನ್ನು ನಂಬುವ" ಪ್ರೀತಿಯು ನನ್ನಲ್ಲಿದೆಯೇ? ವಿವಾದವಿಲ್ಲದ ಸಾಕ್ಷ್ಯಗಳಿಂದ ಹಾಗೆ ಮಾಡಲು ಒತ್ತಾಯಪಡಿಸದ ಹೊರತು ಅದು ಇನ್ನೊಬ್ಬರಿಗೆ ಕೆಟ್ಟದ್ದನ್ನು ಮಾಡಲು ಇಷ್ಟ ಪಡುವುದಿಲ್ಲ; ಅದು ಎಲ್ಲರ ಬಗ್ಗೆ ಕೆಟ್ಟದ್ದಕ್ಕಿಂತ ಒಳ್ಳೆಯದನ್ನು ನಂಬುತ್ತದೆ; ಅದು ಕೆಟ್ಟದ್ದನ್ನು ಕೇಳುವಲ್ಲಿ ಯಾವುದೇ ರೀತಿಯಲ್ಲಿ ಸಂತೋಷಪಡುವುದಿಲ್ಲ, ಆದರೆ ಅದನ್ನು ಕುರಿತು ಅಸಮಧಾನವನ್ನು ವ್ಯಕ್ತಪಡಿಸುವ ಪ್ರವೃತ್ತಿ ಹೊಂದಿದೆಯೇ? ಪರಿಪೂರ್ಣ ಪ್ರೀತಿಯು ಅನುಮಾನಪಡುವುದಿಲ್ಲ, ಆದರೆ ಇದಕ್ಕೆ ವಿರುದ್ಧವಾಗಿ ನಂಬಬಹುದಾದ ಸ್ವಭಾವವನ್ನು ಹೊಂದಿರುತ್ತದೆ. ಅದು ಯಾವ ತತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ ಅಂದರೆ ಅನುಮಾನಾಸ್ಪದ ಮನಸ್ಸಿನಿಂದ ಜೀವಿಸುವಕ್ಕಿಂತ [ಅಗತ್ಯವಿದ್ದರೆ] ನೂರು ಸಾರಿ ಮೋಸ ಹೋಗುವುದು ಉತ್ತಮ—ಒಬ್ಬನನ್ನಾದರೂ ಸಹ ಅನ್ಯಾಯವಾಗಿ ಆರೋಪಿಸುವುದು ಅಥವಾ ಅನುಮಾನ ಪಡುವುದಕ್ಕಿಂತ ನಾವು ಮೋಸ ಹೋಗುವುದು ಎಷ್ಟೋ ಉತ್ತಮವಾಗಿದೆ. ಇದು ಕರುಣೆಯುಳ್ಳ ಮನಸ್ಸಾಗಿದೆ. ಈ ಆಲೋಚನೆಗಳಿಗೆ ಅನ್ವಯಿಸುವಂತೆ—"ಕರುಣೆಯುಳ್ಳವರು ಧನ್ಯರು; ಯಾಕೆಂದರೆ ಅವರು ಕರುಣೆ ಹೊಂದುವರು." ಎಂದು ನಮ್ಮ ಬೋಧಕನು ಹೇಳಿದ್ದಾರೆ. **R 4919 : 1**

## 12 ಸೆಪ್ಟೆಂಬರ್

**"[ಪ್ರೀತಿಯು] ಎಲ್ಲವನ್ನೂ ನಿರೀಕ್ಷಿಸುತ್ತದೆ." (1 ಕೊರಿಂಥದವರಿಗೆ 13 : 7)**

ಪ್ರೀತಿಯ ಈ ಭರವಸೆಯ ಅಂಶವು ಸಂತರ ಪರಿಶ್ರಮದಲ್ಲಿ ಗಮನಿಸಬೇಕಾದ ಲಕ್ಷಣಗಳಲ್ಲಿ ಒಂದಾಗಿದೆ. ಪ್ರೀತಿಯು ಉತ್ತಮ ಸೈನಿಕರಾಗಿ

ಕಠಿಣತನವನ್ನು ಸಹಿಸಿಕೊಳ್ಳಲು ಅವರಿಗೆ ಅನುವು ಮಾಡಿಕೊಡುತ್ತದೆ. ಅದರ ನಿರೀಕ್ಷೆಯುಳ್ಳ ಗುಣವು ಸುಲಭವಾಗಿ ಮನಸ್ಸು ನೊಂದುಹೋಗದಂತೆ ಅಥವಾ ಕರ್ತನ ಕೆಲಸವು ಸುಲಭವಾಗಿ ನಿಲ್ಲದಂತೆ ತಡೆಯುತ್ತದೆ. ಆದರೆ ಬೇರೆಯವರು ನಿರುತ್ಸಾಹಗೊಳ್ಳುತ್ತಾರೆ ಅಥವಾ ಓಡಿಹೋಗುತ್ತಾರೆ. ಪ್ರೀತಿಯ ಆತ್ಮವು ಸಹಿಷ್ಣುತೆಯನ್ನು ನೀಡುತ್ತದೆ. ಅದರಿಂದ ನಾವು ಒಳ್ಳೆಯ ಹೋರಾಟವನ್ನು ಹೋರಾಡಿ, ನಮ್ಮ ರಕ್ಷಣೆಯ ನಾಯಕನನ್ನು ಮೆಚ್ಚಿಸಲು ಸಾಧ್ಯವಾಗುತ್ತದೆ. ನಿರೀಕ್ಷೆಯುಳ್ಳ ಪ್ರೀತಿಯು ಯಾವುದೇ ಹತಾಶೆಯನ್ನು ತಿಳಿದಿಲ್ಲ. ಏಕೆಂದರೆ ಪ್ರೀತಿಯ ಲಂಗರು [ಆಧಾರವು] ತೆರೆಯನ್ನು ದಾಟಿ ಮುಂದೆ ಪ್ರವೇಶಿಸುತ್ತದೆ ಮತ್ತು ಯುಗಗಳ ಬಂಡೆಯನ್ನು(ಕ್ರಿಸ್ತನನ್ನು) ದೃಢವಾಗಿ ಹಿಡಿದಿರುತ್ತದೆ. **R 4919 : 4**

## 13 ಸೆಪ್ಟೆಂಬರ್

**"ಇವು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪರಿಜ್ಞಾನದಲ್ಲಿ ನಿಮ್ಮನ್ನು ಬಂಜೆಯರೂ ನಿಷ್ಫಲರೂ ಆಗದಂತೆ ಮಾಡುತ್ತವೆ. ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ನಿಮಗೆ ಧಾರಾಳವಾಗಿ ಅನುಗ್ರಹಿಸಲ್ಪಡುವದು." ( 2 ಪೇತ್ರನು 1 : 8 , 11 )**

ದೇವರ ಜನರೆಲ್ಲರೂ ಅಂದರೆ ಪವಿತ್ರಾತ್ಮದಿಂದ ಭ್ರೂಣಾಂಕುರ [ಗರ್ಭಧಾರಣೆ] ಹೊಂದಿದವರೆಲ್ಲರೂ ತಂದೆಯ ಆತ್ಮದಿಂದ, ಪ್ರೀತಿಯ ಆತ್ಮದಿಂದ, ನೀತಿ ಮತ್ತು ನಿಷ್ಠೆಯ ಆತ್ಮದಿಂದ ಪ್ರೇರಿತರಾಗಿರುತ್ತಾರೆ. ಆದರೆ ಎಷ್ಟರ ಮಟ್ಟಿಗೆ, ಎಷ್ಟು ಹೇರಳವಾಗಿ ಈ ಪ್ರೀತಿ ಹೊಂದಿಕೊಂಡು ಜೀವಿತದ ಎಲ್ಲಾ ವಿಷಯಗಳಲ್ಲಿ ವ್ಯಾಪಿಸುತ್ತದೆ? ಕರ್ತನ ಈ ಆತ್ಮವು ನಮ್ಮಲ್ಲಿ ಹೇರಳವಾಗಿದ್ದರೆ ಅದು ನಮ್ಮ ವ್ಯವಹಾರ, ನಮ್ಮ ಸಂತೋಷ, ನಮ್ಮ ಮನೆಗಳು, ನಮ್ಮ ಕೆಲಸದ ಸ್ಥಳಗಳು, ನಮ್ಮ ಅಡಿಗೆ ಮನೆಗಳು, ನಮ್ಮ ಊಟದ ಕೋಣೆಗಳು, ನಮ್ಮ ಮಲಗುವ ಕೋಣೆಗಳು, ಈ ಎಲ್ಲಾ ಸ್ಥಳಗಳಲ್ಲಿಯೂ ನಮ್ಮ ಆಲೋಚನೆಗಳ ಮೇಲೂ ಸಹ ಪ್ರಭಾವ ಬೀರುತ್ತದೆ. ಈ ಯಥೇಚ್ಛವಾದ ಪ್ರೀತಿ ಮೆಸ್ಸೀಯನ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ಧಾರಾಳವಾಗಿ ಅನುಗ್ರಹಿಸಲ್ಪಟ್ಟ ಮದಲಗಿತ್ತಿಯ ವರ್ಗದ ಅಂಗದವರ ಜೀವಿತದಲ್ಲಿ ಮತ್ತು ಜೀವಿತದ ಎಲ್ಲಾ ವಿಷಯಗಳಲ್ಲಿ ನಮ್ಮ ಕರ್ತನ ಎಲ್ಲಾ ವ್ಯಾಪಕವಾದ ಪ್ರೀತಿಯು ಅವಶ್ಯವಾಗಿದೆ. **R 4929 : 3**

## 14 ಸೆಪ್ಟೆಂಬರ್

**"ನಮ್ಮ ಸಂಗಡ ನಮಗೆ ಸಹಾಯ ಮಾಡುವುದಕ್ಕೂ ನಮ್ಮ ಯುದ್ಧಗಳನ್ನು ನಡಿಸುವುದಕ್ಕೂ ನಮ್ಮ ದೇವರಾದ ಕರ್ತನು ತಾನೇ ಇದ್ದಾನೆ." ( 2 ಪೂರ್ವಕಾಲವೃತ್ತಾಂತ 32 : 8 )**

ಇಲ್ಲಿ ಆತ್ಮೀಕ ಇಸ್ರಾಯೇಲಿನ ಕರ್ತನ ಜನರಿಗೆ ಇಂದು ಎಂತಹ ಪಾಠವಾಗಿದೆ! ನಮ್ಮ ವೈರಿಗಳು ಹೆಮ್ಮೆಯಿಂದ, ಬಲಿಷ್ಠವಾಗಿ ಹೆಚ್ಚು ಜಯಶಾಲಿಯಾಗಿರುವಂತೆ ತೋರುವಾಗ, ಅವರು ಕರ್ತನನ್ನು ಮತ್ತು ಆತನ ವಾಗ್ದಾನಗಳನ್ನು ಬಹಳವಾಗಿ ವಿರೋಧಿಸುವಾಗ, ನಮ್ಮ ಕರ್ತನ ವಾಗ್ದಾನಗಳನ್ನು ಈಗ ನಾವು ಅತ್ಯಂತ ಆತ್ಮ ವಿಶ್ವಾಸದಿಂದ ಹಿಡಿದಿಟ್ಟುಕೊಳ್ಳಬೇಕಾದ ಸಮಯವಾಗಿದೆ. ನಿಜವಾಗಿಯೂ ನಾವು ಅದನ್ನು ಸಂಪೂರ್ಣವಾಗಿ ನಮ್ಮ ಅನುಭವವಾಗಿ ನೋಡುತ್ತೇವೆ. ಅದೇನೆಂದರೆ ಯಾರೆಲ್ಲಾ ಚೆನ್ನಾಗಿ ಬೇರೂರಿ ನೆಲೆಯಾಗಿ ನಿಂತಿದ್ದಾರೋ, ಯಾರ ನಿರೀಕ್ಷೆಗಳು ಅತ್ಯಂತ ನಿಶ್ಚಯವಾಗಿ ತೆರೆಯೊಳಗೆ ಲಂಗರು ಹಾಕಿದೆಯೋ, ಅಂಥವರೇ ಶೋಧನೆಗೆ ಒಳಗಾಗುವರು, ಅಂಥವರು ಇಹಲೋಕದಲ್ಲಿ ತೋಳಿನ ಮೇಲೆ ಒರಗಲು ಯಾರೂ ಇಲ್ಲದಿದ್ದಾಗ ಸಹಾಯಕ್ಕಾಗಿ ಕರ್ತನನ್ನು ಬಲವಾಗಿ ಕರೆಯುವ ಸಂದರ್ಭವನ್ನು ಹೊಂದಿದ್ದಾರೆ. ಇಹಲೋಕದ ಬಂಧನಗಳನ್ನು ಮುರಿಯುವುದರಿಂದ ಪರಲೋಕದ ಬಂಧನಗಳು ಬಲಪಡುವುದು ಎಂದು ಎಷ್ಟು ಜನರು ಕಂಡುಕೊಂಡಿದ್ದಾರೆ, ಈ ಪ್ರಪಂಚದ ಮತ್ತು ಎದುರಾಳಿಯ ವಿರೋಧತ್ವವಿದೆಯೆಂದರೆ ಆತ್ಮೀಕ ದಯೆ ಹೆಚ್ಚಾಗುತ್ತದೆ ಎಂದು ಎಷ್ಟು ಜನರು ಕಂಡುಕೊಂಡಿದ್ದಾರೆ. ಏಕೆಂದರೆ "ನಮಗೆ ಎದುರಾಗಿ ಇರುವವರೆಲ್ಲರಿಗಿಂತ ನಮಗಾಗಿ ಇರುವಾತನು ದೊಡ್ಡವನಾಗಿದ್ದಾನೆ." **R 3582 : 6**

## 15 ಸೆಪ್ಟೆಂಬರ್

**"ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನ ಕರೆಯುವಿಕೆಯ ನಿರೀಕ್ಷೆಯು ಎಂಥದೆಂಬದನ್ನೂ ಪರಿಶುದ್ಧರಲ್ಲಿರುವ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ." ( ಎಫೆಸದವರಿಗೆ 1: 18 )**

ಆಯಲ್ಪಟ್ಟವರಿಗೆ ದೇವರು ಒದಗಿಸಿರುವಂತಹ ಅದ್ಭುತ ಆಶೀರ್ವಾದದ ಒಂದು ಮಿನುಗು ನೋಟವನ್ನು ಪಡೆದು, ಅದನ್ನು ವಿಸ್ತರಿಸಲು ಹೃದಯ ಮತ್ತು

ತಲೆಗೆ ಸಮಯ ಬೇಕಾಗುತ್ತದೆ. ಆದರೆ ಸಭೆಗೆ ಇರುವ ದೇವರ ಮಹತ್ತರವಾದ ದಯೆಯ ಬಗ್ಗೆ ಮಬ್ಬಾದ ನೋಟವನ್ನು ಸಹ ಯಾರು ನೋಡುತ್ತಾರೋ ಅವರು ದೈವಿಕ ಯೋಜನೆಯಲ್ಲಿ ಸುಮಾರು ಹತ್ತೊಂಬತ್ತು ಶತಮಾನಗಳಷ್ಟು ಉದಾರವಾದ ಕಾಲವನ್ನು ಮಹತ್ತಾದ ಮತ್ತು ಮಹಿಮೆಯುಳ್ಳ ಕೆಲಸವನ್ನು ಮೆಸ್ಸೀಯನೊಂದಿಗೆ ಸಹ–ಬಾದ್ಯಸ್ಥರಾಗಿ ಕೆಲಸ ಮಾಡಲು ಕರೆಯಲ್ಪಟ್ಟು, ಶಿಕ್ಷೆಯನ್ನು ಹೊಂದಿಕೊಂಡು, ಪರಿಶುದ್ಧ ಸಂತರನ್ನು ಪರಿಪೂರ್ಣತೆ ಮಾಡಿದ್ದರಲ್ಲಿ ಆಶ್ಚರ್ಯ ಪಡಬೇಕಾಗಿಲ್ಲ. ನಮ್ಮ ದೇವರಾದ ಕರ್ತನು ಕರೆದು, ಅಂಗೀಕರಿಸಿಕೊಳ್ಳುವ ರಾಜ್ಯವರ್ಗದ ಪರೀಕ್ಷಾ ಅವಧಿಯಲ್ಲಿ ಸದಸ್ಯರಾಗಿ ಸ್ವೀಕರಿಸುವ ಎಲ್ಲರನ್ನೂ ಶೋಧಿಸುವದಕ್ಕೆ ಅಗ್ನಿಯಂತಿರುವ ಪರಿಶೋಧನೆಗಳನ್ನು ಕುರಿತು ಅವರು ಆಶ್ಚರ್ಯಪಡುವುದಿಲ್ಲ. ನಮ್ಮ ಕರ್ತನಾದ ಯೇಸು ಪರಲೋಕದ ಆಸ್ಥಾನದಲ್ಲಿ ತನ್ನ ಎಲ್ಲಾ ಅನುಭವದ ಜೊತೆಗೆ, ಈ ಭೂಮಿಯಲ್ಲಿ "ಆತನು ಅನುಭವಿಸಿದ ವಿಷಯಗಳಿಂದ ವಿಧೇಯತೆಯನ್ನು ಕಲಿಯಬೇಕಿತ್ತು" ಮತ್ತು ಮರಣ ಪರ್ಯಂತ ನಂಬಿಗಸ್ತನಾಗಿದ್ದು ತಂದೆಗೆ ನಿಷ್ಠಾವಂತನೆಂದು ಸಾಬೀತು ಪಡಿಸಬೇಕೆಂಬುದು ಅವಶ್ಯವಾದರೆ, ಆತನ ಶಿಷ್ಯರು ಅಂದರೆ ಹಿಂದೆ ಪಾಪಿಗಳೆಂದು ಇತಿಹಾಸ ಹೊಂದಿದವರು–ಇದಕ್ಕಿಂತಲೂ ಹೆಚ್ಚಾಗಿ ಶೋಧಿಸಲ್ಪಟ್ಟು ಕರ್ತನಿಗೆ ನಿಷ್ಠಾವಂತರಾಗಿದ್ದಾರೆಯೇ ಎಂದು ಚೆನ್ನಾಗಿ ಪರೀಕ್ಷಿಸಲ್ಪಡುವದು ಸೂಕ್ತವಾಗಿದೆ ಮತ್ತು ಅವಶ್ಯವಾಗಿದೆ ಎಂದು ಅವರು ಸುಲಭವಾಗಿ ಗ್ರಹಿಸುತ್ತಾರೆ. **R 3168 : 1**

## 16 ಸೆಪ್ಟೆಂಬರ್

**"ಚಿಕ್ಕ ಮಕ್ಕಳೇ, ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ." (1 ಯೋಹಾನನು 5 : 21)**

ಕೆಟ್ಟತನವು ವಂಚನೆಯುಳ್ಳದ್ದಾಗಿದೆ ಮತ್ತು ಪ್ರತಿಯೊಂದು ಮಾರ್ಗಗಳಿಂದ ಬೇರ್ಪಡುವುದು ಅಂದರೆ ದೈವಿಕ ಮಾರ್ಗದಿಂದ ದೂರ ಹೋಗುವದು–ಈ ವಿಚಾರವು ಆರಂಭದಲ್ಲಿ ನಮಗೆ ಅಂದಾಜು ಮಾಡಲು ಸಾಧ್ಯವಾಗದ ಮಟ್ಟಿಗೆ ನೀತಿಯಿಂದ ಬೇರ್ಪಡುವುದನ್ನು ಸೂಚಿಸುತ್ತದೆ. ಕರ್ತನಲ್ಲಿ ನಂಬಿಕೆಯಿಡುವದು ಮತ್ತು ಆತನು ನಮಗಾಗಿ ಗುರುತಿಸಿ ಇಟ್ಟಿರುವ ಯಾವುದನ್ನಾದರೂ ಹೊಂದಲು ಸಂತೋಷವುಳ್ಳವರಾಗಿದ್ದು, ಆತನ ಚಿತ್ತಕ್ಕೆ ವಿರೋಧವಾಗಿರುವ ಯಾವುದೇ ವಿಷಯವನ್ನು ನಿರಾಕರಿಸಬೇಕು. ಅದು ಎಷ್ಟೇ ಅಪೇಕ್ಷಿಸತಕ್ಕದಾಗಿದ್ದರೂ, ಅದು ಮಾನವ ಮಹತ್ವಾಕಾಂಕ್ಷೆಗೆ ಎಷ್ಟೇ ಸಂತೋಷಕರವಾಗಿದ್ದರೂ, ಅವುಗಳನ್ನು ನಿರಾಕರಿಸಿ, ಕರ್ತನಲ್ಲಿ ನಂಬಿಕೆಯಿಂದಿರುವದೇ ಸುರಕ್ಷಿತ ಮಾರ್ಗವೆಂದು ನಾವು

ಕಲಿತುಕೊಳ್ಳೋಣ. ಎಲ್ಲೆಲ್ಲಾ ನಮ್ಮ ತೀರ್ಪುಗಳು ಬಿದ್ದುಹೋದ ಸ್ವಭಾವದಿಂದ ಹೆಚ್ಚು ಕಡಿಮೆ ವಕ್ರವಾಗಿದೆಯೋ, ಎಲ್ಲೆಲ್ಲಾ ನಮ್ಮ ಜ್ಞಾನವು ಅಪೂರ್ಣವಾಗಿದೆಯೋ ಮತ್ತು ನಿಶ್ಚಯವಾಗಿ ಎಲ್ಲೆಲ್ಲಾ ಸೈತಾನನು ಬೆಳಕನ್ನು ಕತ್ತಲೆಯನ್ನಾಗಿ, ಕತ್ತಲೆಯನ್ನು ಬೆಳಕನ್ನಾಗಿಯೂ ಮಾಡುತ್ತಾನೋ, ಅಲ್ಲಿ ಮಹತ್ವಾಕಾಂಕ್ಷೆಯು ಒಂದು ಅಪತ್ತಿನ ವಿಷಯವಾಗಿದೆ ಎಂಬ ಪಾಠವನ್ನು ನಾವು ಕಲಿತುಕೊಳ್ಳೋಣ–ವಿಶೇಷವಾಗಿ ನಮ್ಮ ಪ್ರಸ್ತುತ (ಈಗಿನ) ಅಪೂರ್ಣ ಸ್ಥಿತಿಯಲ್ಲಿ, ನಮ್ಮ ಮಹತ್ವಾಕಾಂಕ್ಷೆಗಳನ್ನು ನಿಗ್ರಹಿಸಬೇಕು. ಹೌದು ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಗಳಾದ ನಾವು ಸುರಕ್ಷಿತವಾಗಿ ನೆಲೆಯಾಗಿರಬೇಕೆಂದರೆ, ಪ್ರತಿಯೊಂದು ಆಲೋಚನೆಯನ್ನು ಕ್ರಿಸ್ತನಲ್ಲಿ ದೇವರ ಚಿತ್ತಕ್ಕೆ ಅಧೀನ ಪಡಿಸಬೇಕು. **R 3386:4**

## 17 ಸೆಪ್ಟೆಂಬರ್

**"ಕರ್ತನ ಪರ್ವತವನ್ನು ಹತ್ತುವವನು ಯಾರು? ಇಲ್ಲವೆ ಆತನ ಪರಿಶುದ್ಧ ಸ್ಥಳದಲ್ಲಿ ನಿಲ್ಲುವವನು ಯಾರು? ಶುದ್ಧ ಹಸ್ತಗಳೂ ನಿರ್ಮಲವಾದ ಹೃದಯವೂ ಉಳ್ಳವನಾಗಿದ್ದು ತನ್ನ ಪ್ರಾಣವನ್ನು [ಆತ್ಮವನ್ನು] ವ್ಯರ್ಥತ್ವಕ್ಕೆ ಎತ್ತದೆಯೂ, ಇಲ್ಲವೆ ಮೋಸದಿಂದ ಆಣೆ ಇಡದೆಯೂ ಇರುವವನೇ." (ಕೀರ್ತನೆಗಳು 24 : 3, 4)**

ಪ್ರೀತಿಯ ಪ್ರಮಾಣದ ಅಡಿಯಲ್ಲಿ, ತಮ್ಮ ಹೃದಯವನ್ನು ಪೂರ್ಣವಾಗಿ ಕರ್ತನಿಗೆ ಅರ್ಪಿಸಿದವರು ಹೃದಯದಲ್ಲಿ ಶುದ್ಧರಾಗಿದ್ದಾರೆ. ಆದರೂ ಅವರ ಹೃದಯಗಳ ಶುದ್ಧತೆ, ಅವರ ಉದ್ದೇಶಗಳು, ಅವರ ಚಿತ್ತಗಳು, ರಾಜವಂಶಸ್ಥರ ಪ್ರೀತಿಯ ಪ್ರಮಾಣವನ್ನು ನೆರವೇರಿಸಲು, ಇವರು ಹೋರಾಡಬೇಕಾದ ಒಂದು ಯುದ್ಧವಿದೆ. ಅವರ ಅವಯವಗಳ ಪ್ರಮಾಣವು, ಅನುವಂಶಿಕ ಪಾಪದ ಮೂಲಕ ದುಷ್ಟತನಕ್ಕೆ ಒಳಗಾಗಿ, ಅದು ಸ್ವಾರ್ಥತೆಯ ಬಲವಾದ ಪ್ರಮಾಣವಾಗಿದ್ದು, ಹೊಸ ಪ್ರಮಾಣ ಅಂದರೆ ಅವರು ತಮ್ಮನ್ನೇ ಪ್ರತಿಜ್ಞೆ ಮಾಡಿಕೊಂಡಿರುವ ಪ್ರೀತಿಯ ಪ್ರಮಾಣಕ್ಕೆ ವಿರುದ್ಧವಾಗಿದೆ. ಆದರೂ ಆ ಹೊಸ ಪ್ರಮಾಣದ ಅವಶ್ಯಕತೆಗಳಿಗೆ ಅನುಗುಣವಾಗಿ ಬದುಕಲು ಅವರು ಅಸಮರ್ಥರಾಗಲು ಚಿತ್ತದಲ್ಲಿ ಕೊರತೆ, ಶುದ್ಧವಾದ ಉದ್ದೇಶದಲ್ಲಿ ಕೊರತೆ, ನಿಷ್ಠಾವಂತ ಹೃದಯದಲ್ಲಿ ಕೊರತೆಯಿರುವುದೇ ಕಾರಣವಾಗಿದೆ. ಅವರು ಯಾವುದೇ ವೈಫಲ್ಯವನ್ನು ಹೊಂದಿದ್ದರೂ, ಜಯವನ್ನು ಹೊಂದುವುದರ ಸಮಯದಲ್ಲಿ ಎಷ್ಟೇ ಕೊರತೆಯುಳ್ಳವರಾಗಿದ್ದರೂ, ಅದು ಕೇವಲ ಶರೀರದ ಬಲಹೀನತೆ ಮತ್ತು ಎದುರಾಳಿಯ ಆಕ್ರಮದಿಂದಾಗಿರಬೇಕು, ಏಕೆಂದರೆ ಆ ಆಕ್ರಮವನ್ನು ಅವರ ಶುದ್ಧ ಹೃದಯಗಳು ವಿರೋಧಿಸಲು ವಿಫಲವಾಗಿದೆ. ಇಲ್ಲಿ

ಕರ್ತನ ವಾಗ್ದಾನಗಳು ಅವರಿಗೆ ಸಹಾಯಕವಾಗಿದೆ, ಆ ವಾಗ್ದಾನಗಳು ಅವರ ಬಲಹೀನತೆಗಳು ಮತ್ತು ದುರ್ಬಲತೆಗಳನ್ನು ಕುರಿತು ಆತನು ತಿಳಿದಿದ್ದಾನೆ ಎಂದು ಭರವಸೆ ನೀಡುತ್ತದೆ, ಇದಲ್ಲದೆ ಕೆಡುಕನ ಕುತಂತ್ರಗಳು, ಈ ಲೋಕದ ಆತ್ಮದ ಪ್ರಭಾವಗಳು ಈ ಪ್ರೀತಿಯ ಆತ್ಮಕ್ಕೆ ವಿರುದ್ಧವಾಗಿದೆ. ಅವರು ಪರಲೋಕದ ಕೃಪೆಯ ಸಿಂಹಾಸನದ ಮುಂದೆ ಮುಕ್ತವಾಗಿ [ಧೈರ್ಯವಾಗಿ] ಹೋಗಿ, ಅವರ ಹೃದಯಗಳನ್ನು ಅಂಗೀಕರಿಸುವಂತೆ ಮತ್ತು ಅವರಿಗಿರುವ ವೈಫಲ್ಯಗಳಿಗೆ ಸಂಬಂಧಿಸಿದಂತೆ ಕರುಣೆಯನ್ನು ಹೊಂದಬಹುದು. ಅಗತ್ಯವಿರುವ ಪ್ರತಿಯೊಂದು ಸಮಯದಲ್ಲೂ ಸಹಾಯ ಮಾಡಲು ಅವರು ಕೃಪೆಯನ್ನು ಹೊಂದಿಕೊಳ್ಳಬಹುದೆಂದೂ ಸಹ ಕರ್ತನು ಅವರಿಗೆ ಭರವಸೆ ನೀಡುತ್ತಾನೆ. **R 5123 : 4**

## 18 ಸೆಪ್ಟೆಂಬರ್

**"ಅದೇ ದಿವಸದ ಅಂದರೆ ವಾರದ ಮೊದಲನೆಯ ದಿವಸದ ಸಂಜೆಯಲ್ಲಿ ಶಿಷ್ಯರು ಯೆಹೂದ್ಯರ ಭಯದಿಂದ ತಾವು ಇದ್ದ ಮನೆಯ ಬಾಗಲುಗಳನ್ನು ಮುಚ್ಚಿಕೊಂಡಿರಲು ಯೇಸು ಬಂದು ನಡುವೆ ನಿಂತು–ನಿಮಗೆ ಸಮಾಧಾನವಾಗಲಿ ಅಂದನು." (ಯೋಹಾನನು 20 : 19)**

ಅನೇಕರು ಹೇಗೆ ನೆಲೆಸಿದ್ದಾರೆಂದರೆ ಇತರರೊಂದಿಗೆ ಆಗಾಗ್ಗೆ ಒಟ್ಟುಗೂಡಿ ಅಮೂಲ್ಯವಾದ ನಂಬಿಕೆಯ ವಿಷಯವನ್ನು ಮತ್ತು ಒಳ್ಳೆಯ ವಿಷಯಗಳಾದ ಕರ್ತನ ವಾಗ್ದಾನದ ವಾಕ್ಯಗಳನ್ನು ಕುರಿತು ಮಾತನಾಡುವ ಅವರ ಹೃದಯದ ಆಸೆಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ; ಆದರೆ ಪ್ರತ್ಯೇಕವಾದವರು ನಿರಾಶಾಭಾವದವರಾಗಬಾರದು. ಏಕೆಂದರೆ ಕರ್ತನ ವಾಕ್ಯವು ಏನು ಹೇಳುತ್ತದೆಂದರೆ "ಎಲ್ಲಿ ಇಬ್ಬರಾಗಲೀ ಮೂವರಾಗಲೀ ನನ್ನ ಹೆಸರಿನಲ್ಲಿ ಕೂಡಿಬರುತ್ತಾರೋ ಅವರ ಮಧ್ಯದಲ್ಲಿ ನಾನು ಇದ್ದೇನೆ" ಮತ್ತು ಒಂಟಿಯಾಗಿರುವವರಿಗೆ ಈ ವಾಗ್ದಾನವು ಅನ್ವಯಿಸುವದಿಲ್ಲ. ಅಂಥವರು ಕರ್ತನು ಯಾವ ಏರ್ಪಾಡನ್ನು ಮಾಡಿದ್ದಾನೆಂದು ಗಮನ ಹರಿಸಬೇಕು ಮತ್ತು ಆ ಮೂಲಕ ಕನಿಷ್ಠ ಪಕ್ಷ ಇಬ್ಬರು ಸೇರಿ ಆತನ ವಾಕ್ಯವನ್ನು ಕುರಿತು ಚರ್ಚಿಸಬೇಕು.... ಯಾರಿಗೆಲ್ಲಾ ಒಟ್ಟಿಗೆ ಸೇರುವುದಕ್ಕೆ ಮತ್ತು ಒಟ್ಟಿಗೆ ಮಾತನಾಡುವುದಕ್ಕೆ ಅವಕಾಶವಿದ್ದು ಅದನ್ನು ಬಳಸದೆ ಹೋದರೆ, ನಮ್ಮ ಮಹಾ ರಕ್ಷಣೆಯ ಆಸಕ್ತಿಯಲ್ಲಿ ಕೊರತೆಯಿರುವುದನ್ನು ವ್ಯಕ್ತಪಡಿಸುತ್ತಿದ್ದಾರೆ ಎಂದು ನಾವು ಖಚಿತವಾಗಿ ಹೇಳಬಹುದು, ಮತ್ತು ಅಂಥವರು ತಮ್ಮಲ್ಲಿ ಇನ್ನು ಸ್ವಲ್ಪ ಉಳಿದ ಆಸಕ್ತಿಯನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ ಮತ್ತು ಅಂಥವರಿಗೆ ನೀಡಲಾದ

ಕರ್ತನ ಆಲೋಚನೆಗಳನ್ನು  ಅವರು ಅನುಸರಿಸಲು ವಿಫಲರಾದರೆ, ಕರ್ತನು ಒಟ್ಟುಗೂಡಿಸುವ "ಆಭರಣಗಳಲ್ಲಿ" ಸೇರುವುದಕ್ಕೆ ಅವರು ವಿಫಲರಾಗುವರು. ಒಂದು ವೇಳೆ ಇದಕ್ಕೆ ತದ್ವಿರುದ್ಧವಾಗಿ ಒಬ್ಬನು ಪರಲೋಕದ ವಿಷಯದಲ್ಲಿ ಸ್ವಲ್ಪ ಮಾತ್ರ ಆಸಕ್ತಿ ಹೊಂದಿದ್ದರೆ, ದೈವಿಕ ಯೋಜನೆಯ ವೈಶಿಷ್ಟ್ಯಗಳು ಮತ್ತು ಅದರ ವಾಗ್ದಾನಗಳನ್ನು ಕುರಿತು ಚರ್ಚಿಸುವುದರಲ್ಲಿ ಸ್ವಲ್ಪವೇ ಮನಸ್ಸು ಹೊಂದಿದ್ದರೆ, ಮತ್ತು ಲೌಕಿಕ ವಿಷಯಗಳು, ವ್ಯವಹಾರ, ಇತ್ಯಾದಿಗಳ ಬಗ್ಗೆ ಸಂಭಾಷಿಸುವಾಗ ಮಾತ್ರ ಸಂತೋಷವಾಗಿದ್ದರೆ, ಅದು ಪ್ರತಿಕೂಲವಾದ ಸಂಕೇತವಾಗಿದೆ. ಕರ್ತನು ಅಂಥವರನ್ನು ಸಮೀಪಿಸಿ, ಸತ್ಯವೇದದ ಬಗ್ಗೆ ಅವರ ತಿಳುವಳಿಕೆಯ ಕಣ್ಣುಗಳನ್ನು ತೆರೆಯಲು ಸಾಧ್ಯತೆಯಿಲ್ಲ. ಅದೇ ಸಮಯದಲ್ಲಿ ಯಾರೆಲ್ಲಾ ಸತ್ಯಕ್ಕಾಗಿ ಹಸಿದು ಬಾಯಾರಿದ್ದಾರೋ ಅಂಥವರನ್ನು ಕುರಿತು ಕರ್ತನು ಖಂಡಿತವಾಗಿಯೂ ಸಂತೋಷವುಳ್ಳವನಾಗಿದ್ದಾನೆ. **R2802:1 ; 2801:6**

## 19 ಸೆಪ್ಟೆಂಬರ್

**"ಸಹೋದರರೇ, ನಮಗೋಸ್ಕರ ಪ್ರಾರ್ಥನೆ ಮಾಡಿರಿ." (1 ಥೆಸಲೋನಿಕದವರಿಗೆ 5 : 25 )**

ನಮ್ಮ ಹಕ್ಕುಗಳ ಬಗ್ಗೆ ನಮಗೆ ವಿರೋಧ ಬರುವಾಗ ನಮ್ಮ ಬಲವನ್ನು ಹೇರುವುದು, ಜೋರಾಗಿ ಕೂಗುವುದು ನಾವು ಮಾಡಕೂಡದು. ಮರಣ ಪರ್ಯಂತ ತನ್ನ ಎಲ್ಲಾ ಹಕ್ಕುಗಳನ್ನು ಆತನಿಂದ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟ ನಮ್ಮ ರಕ್ಷಣೆಯ ನಾಯಕನೊಂದಿಗೆ ಪಾಲ್ಗೊಳ್ಳುವವರಾಗಿರಲು ನಾವು ಶಿಲುಬೆಯ ಸೈನಿಕರಾಗುವುದಕ್ಕೆ ನಮ್ಮ ಎಲ್ಲಾ ಲೌಕಿಕ ಹಕ್ಕುಗಳನ್ನು ಸ್ವಯಂ ಪ್ರೇರಣೆಯಿಂದ ತ್ಯಜಿಸಿದ್ದೇವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಯೇಸುವಿನ ಹಿಂಬಾಲಕರು ಲೋಕಕ್ಕೆ ಮತ್ತು ದೇವದೂತರಿಗೆ ಪ್ರದರ್ಶಕರಾಗಿದ್ದಾರೆ. ಅದು ಮಾತ್ರವಲ್ಲದೆ ಕರ್ತನು ಮತ್ತು ಆತನ ವಾಕ್ಯದ ಮೇಲಿನ ಪ್ರೀತಿ ಮತ್ತು ಉತ್ಸಾಹದಿಂದ ಒಬ್ಬರನೊಬ್ಬರು ಅತಿ ಪರಿಶುದ್ಧವಾದ ನಂಬಿಕೆಯಲ್ಲಿ ಬಲಪಡಿಸಲು ಮತ್ತು ಕಟ್ಟಿ ಎಬ್ಬಿಸಲೂ ಸಹ ಅವರಿಗೆ ಅನುಮತಿ ನೀಡಲಾಗಿದೆ. ಅಂತಹ ಸಂದರ್ಭದಲ್ಲಿ ನಾವು ಒಬ್ಬರಿಗೊಬ್ಬರು ಪ್ರಾರ್ಥಿಸುವ ಸವಲತ್ತನ್ನು  ಹೊಂದಿದ್ದೇವೆ ಎಂದು ಚೆನ್ನಾಗಿ ನೆನಪಿಸಿಕೊಳ್ಳಬಹುದು. ಈ ಮಾರ್ಗಗಳಲ್ಲಿ ಇತರರಿಗೆ ಅಥವಾ ನಮಗೆ ಬರುವ ಶೋಧನೆಗಳು ಅಥವಾ ಪರೀಕ್ಷೆಗಳು ತಡೆಯಾಗಬೇಕೆಂದು ನಾವು ಪ್ರಾರ್ಥಿಸಬಾರದು. ಏಕೆಂದರೆ ಇವುಗಳು ದೈವಿಕ ಜ್ಞಾನದಿಂದ ನಿರ್ಧರಿಸಲಾಗಿದೆ.

ಆದರೆ ನಮಗಾಗಿ ಮತ್ತು ಮತ್ತೊಬ್ಬರಿಗಾಗಿ ಪ್ರಾರ್ಥಿಸುವದು ನಮ್ಮ ಭಾಗ್ಯವಾಗಿದೆ– ಅಗತ್ಯವಿರುವ ಪ್ರತಿಯೊಂದು ಸಮಯದಲ್ಲೂ ಸಹಾಯ ಮಾಡಲು ಕರ್ತನು ವಾಗ್ದಾನ ಮಾಡಿದ್ದನ್ನು ನೀಡಲು ಬೇಕಾದ ಕೃಪೆಗಾಗಿ ಪ್ರಾರ್ಥಿಸುವದು ನಮ್ಮ ಭಾಗ್ಯವಾಗಿದೆ. **R 5928 : 5**

## 20 ಸೆಪ್ಟೆಂಬರ್

**"ಪರಲೋಕದಿಂದ ಕೆಳಗೆ ಬಂದು ಲೋಕಕ್ಕೆ ಜೀವವನ್ನು ಕೊಡುವಾತನೇ ದೇವರ ರೊಟ್ಟಿಯಾಗಿದ್ದಾನೆ." (ಯೋಹಾನನು 6 : 33)**

ಈ ಲೋಕದ ವಿಷಯದಲ್ಲಿ ಜನರು ಎಷ್ಟು ಹೆಚ್ಚಾಗಿ ತೃಪ್ತರಾಗಿರುತ್ತಾರೋ ಅವರು ಪರಲೋಕದ ವಿಷಯದಲ್ಲಿ ಅಷ್ಟೇ ಕಡಿಮೆ ಆಸಕ್ತಿ ಹೊಂದಿರುತ್ತಾರೆ. ಮತ್ತು ನಾವು ಎಷ್ಟು ಹೆಚ್ಚಾಗಿ ಪರಲೋಕದ ವಿಷಯಗಳಲ್ಲಿ ತೃಪ್ತರಾಗಿರುತ್ತೇವೋ, ಭೂಲೋಕದ ವಿಷಯಗಳಲ್ಲಿ ಅಷ್ಟೇ ಕಡಿಮೆ ಹಸಿವನ್ನು ಹೊಂದಿರುತ್ತೇವೆ. ಹಳೆಯ ಸ್ವಭಾವವನ್ನು ಬಲಿ ಸಲ್ಲಿಸುವಾಗ ಹೊಸ ಸ್ವಭಾವವು ಏಳಿಗೆಗೆ ಬರುತ್ತದೆ ಮತ್ತು ಹಳೆಯ ಸ್ವಭಾವದ ಮಹತ್ವಾಕಾಂಕ್ಷೆಗಳು, ನಿರೀಕ್ಷೆಗಳು ಮತ್ತು ಆಸೆಗಳನ್ನು ಬಲಿ ಸಲ್ಲಿಸುವಾಗ ಹೊಸ ಸ್ವಭಾವದ ಮಹತ್ವಾಕಾಂಕ್ಷೆಗಳು, ನಿರೀಕ್ಷೆಗಳು ಮತ್ತು ಆಸೆಗಳು ಏಳಿಗೆಗೆ ಬರುತ್ತದೆ. ಅದೇ ರೀತಿ ಹಳೆಯ ಸ್ವಭಾವವು ಏಳಿಗೆಗೆ ಬರುವುದಕ್ಕೆ, ಹೊಸ ಸ್ವಭಾವವು ತನ್ನ ಜೀವನದ ಎಲ್ಲಾ ವ್ಯವಹಾರಗಳು ಬಲಿಯಾಗಿರುವುದೇ ಕಾರಣವಾಗಿರುತ್ತದೆ. ಆದ್ದರಿಂದ (ಮೊದಲನೆಯದಾದ) ಅಳಿದು ಹೋಗುವ ಆಹಾರ ಮತ್ತು (ಎರಡನೆಯದಾದ) ದೈವಿಕ ಆಶೀರ್ವಾದಗಳಾದ–ನಿತ್ಯ ಜೀವವನ್ನು ತರುವ ಆಹಾರ– ಇವುಗಳ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳೋಣ. ಎರಡನೆಯದಾದ ನಿತ್ಯಜೀವವನ್ನೇ ಆರಿಸಿಕೊಳ್ಳೋಣ. ನಾವು ಅತ್ಯಧಿಕವಾಗಿ ಕರ್ತನನ್ನು ಮತ್ತು ಆತನ ವಾಕ್ಯವನ್ನು ಸೇವಿಸೋಣ, ಮತ್ತು ಕರ್ತನಲ್ಲಿ ಆತನ ಅತ್ಯಧಿಕವಾದ ಶಕ್ತಿಯಲ್ಲಿ ಬಲಗೊಳ್ಳೋಣ ಮತ್ತು ಈ ಲೋಕ, ಅದರ ಆತ್ಮ, ಅದರ ನಿರೀಕ್ಷೆಗಳು, ಅದರ ಮಹತ್ವಾಕಾಂಕ್ಷೆಗಳಿಂದ ಆದಷ್ಟು ದೂರವಾಗಿರೋಣ. ಆ ಪರಲೋಕದ ಸ್ವಭಾವಕ್ಕೆ ಯೋಗ್ಯರಾಗುವದಕ್ಕೆ ಮತ್ತು ಸಿದ್ಧರಾಗುವುದಕ್ಕೆ ನಾವು ಪರಲೋಕ ದೇಶವನ್ನು, ಪರಲೋಕ ರಾಜ್ಯವನ್ನು, ಪರಲೋಕದ ಸ್ವಭಾವವನ್ನು, ಪರಲೋಕದ ಗುಣಲಕ್ಷಣಗಳನ್ನು ಹುಡುಕುವವರಾಗಿದ್ದೇವೆ. ಪರಲೋಕದಿಂದ ಈ ರೊಟ್ಟಿಯನ್ನು ಒದಗಿಸಬಲ್ಲ ಮತ್ತು ಒದಗಿಸುತ್ತಿರುವ ಮಹಾ ಜೀವ ನೀಡುವಾತನನ್ನು ನಾವು ಕಂಡುಕೊಂಡಿದ್ದೇವೆ. ಈ ರೊಟ್ಟಿಯನ್ನು ಇತರರಿಗೆ ನಾವು ವಿತರಿಸುವದು ನಮಗೆ ದೊರೆತ ದೊಡ್ಡ ಭಾಗ್ಯವಾಗಿದೆ. "ನೀವು ಅವರಿಗೆ ತಿನ್ನಲು ಕೊಡಿರಿ." "ಕಿವಿಯುಳ್ಳವನು ಕೇಳಲಿ." **R 3334 : 4**

## 21 ಸೆಪ್ಟೆಂಬರ್

**"ನೀವು ಸೈತಾನನ ತಂತ್ರೋಪಾಯಗಳನ್ನು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ." (ಎಫೆಸದವರಿಗೆ 6 : 11)**

ಕರ್ತನ ಮಕ್ಕಳು ತಾವು ಪಾಪಕ್ಕೆ ಮತ್ತು ಪಾಪದ ಸೇವೆಯಲ್ಲಿ ಮೋಸ ಹೋಗದಂತೆ ನೋಡಿಕೊಳ್ಳಬೇಕು; ಎಷ್ಟರ ಮಟ್ಟಿಗೆ ಅಂದರೆ ಪಾಪವು ತಮ್ಮ ಬಣ್ಣಗಳನ್ನು ತೋರೆದು ಕರ್ತನ ವಿರೋಧಿಗಳಾಗಿ ತಮ್ಮ ನಿಲುವನ್ನು ತೆಗೆದುಕೊಳ್ಳುತ್ತಿರುವುದನ್ನು ನಾವು ಅರಿತುಕೊಳ್ಳಬೇಕು. ಕ್ರೈಸ್ತರು ತಮ್ಮ ವಿರೋಧಿಯಾದ ಸೈತಾನ ಮತ್ತು ಅವನ ಕುತಂತ್ರಗಳಿಗೆ ವಿರುದ್ಧವಾಗಿ ದೃಢವಾದ ನಿಲುವನ್ನು ತೆಗೆದುಕೊಂಡಾಗ ಅವರು ಆತನ ಆಕ್ರಮದಿಂದ ಬಿಡುಗಡೆ ಹೊಂದುತ್ತಾರೆ–ಅಂದರೆ ಅವನು ತನಗೆ ಹಾನಿಯಾಗಬಹುದೆಂಬ ಭಯದಿಂದ ಅವರಿಂದ ಓಡಿಹೋಗುತ್ತಾನೆ ಎಂದರ್ಥವಲ್ಲ, ಆದರೆ ಸೈತಾನನು ಅವರನ್ನು ಬಿಟ್ಟು ಹೋಗುತ್ತಾನೆ. ಹೇಗೆ ಒಬ್ಬ ಸೇನಾಧಿಪತಿಯು ಒಂದು ನಗರದ ದ್ವಾರಗಳು ಬಲವಾಗಿ ರಕ್ಷಿಸಲಾಗಿದೆ ಮತ್ತು ಅದನ್ನು ದಾಳಿಮಾಡುವದು ನಿಷ್ಪ್ರಯೋಜನವಾಗಿದೆ ಎಂದು ಕಂಡು ಹಿಡಿದ ನಂತರ ಹಿಂಜರಿಯುತ್ತಾನೋ ಹಾಗೆಯೇ ಸೈತಾನನು ಅವರನ್ನು ಬಿಟ್ಟು ಹಿಂಜರಿಯುತ್ತಾನೆ. ಎದುರಾಳಿಯು ಒಬ್ಬನು ಚೆನ್ನಾಗಿ ರಕ್ಷಿಸಲ್ಪಟ್ಟಿರುವುದನ್ನು ಮತ್ತು ದೃಢವಾದ ಇಚ್ಛಾಶಕ್ತಿಯಿಂದ ಅವನನ್ನು ವಿರೋಧಿಸಿರುವುದನ್ನು ಕಂಡುಕೊಂಡರೆ, ಅವನು ಒಮ್ಮೆಗೆ ಹಿಂಜರಿಯುತ್ತಾನೆ. ಆದರೆ ಪಾಪದೊಂದಿಗೆ ಯಾವುದೇ ರೀತಿಯಾದ ಸಂಧಾನ ಮಾತುಕತೆ ಇದ್ದರೆ, ಯಾವುದೇ ವಿಷಯವನ್ನು ಪಾಪವೆಂದು ಕಂಡುಕೊಂಡು, ಅದನ್ನು ಪರಿಗಣಿಸುವ ಯಾವುದೇ ಪ್ರವೃತ್ತಿ ಇದ್ದರೆ, ಎದುರಾಳಿಗೆ ಒಮ್ಮೆಗೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ; ಸೈತಾನನು ಆ ದಾಳಿಯನ್ನು ನವೀಕರಿಸಿ, ವಿಷಯವನ್ನು ಒತ್ತಿ ಹಿಡಿದು, ಅದನ್ನು ಅತ್ಯಂತ ಆಕರ್ಷಕ ಬೆಳಕಿನಲ್ಲಿ ತೋರಿಸಿ, ಅವನನ್ನು ನಿಯಂತ್ರಣ ತೆಗೆದುಕೊಳ್ಳುವ ಸಲುವಾಗಿ, ಅವನ ದೌರ್ಬಲ್ಯವನ್ನು ಕಂಡುಕೊಂಡು ಅವನ ಹೃದಯವನ್ನು ಪ್ರವೇಶಿಸುವನು. ಆದುದರಿಂದ ದೇವರ ಮಗನು/ಮಗಳು ತಾನು ಕೆಟ್ಟದ್ದಕ್ಕೆ ಆಕರ್ಷಿತನಾಗುತ್ತಿದ್ದಾನೆಂದು ತಿಳಿದಾಗ ಸಕಾರಾತ್ಮಕ ಮತ್ತು ತ್ವರಿತ ನಿರ್ಧಾರ ತೆಗೆದುಕೊಳ್ಳುವುದು ಅತ್ಯಂತ ಮಹತ್ವವುಳ್ಳದ್ದಾಗಿದೆ. ಒಂದು ಕ್ಷಣ ಹಿಂಜರಿದರೂ ಅದು ತುಂಬಾ ಅಪಾಯಕಾರಿಯಾಗಿರುತ್ತದೆ. ಕರ್ತನಿಗಾಗಿ ತಮ್ಮ ನಿಲುವನ್ನು ತೆಗೆದುಕೊಳ್ಳುವವರು, ತಮ್ಮನ್ನು ಸಂಪೂರ್ಣವಾಗಿ ಮತ್ತು ಕಾಯ್ದಿರಿಸದೆ ಆತನಿಗೆ

ಸಮರ್ಪಿಸುವವರನ್ನು ಕರ್ತನು ರಕ್ಷಿಸಲು ಒಪ್ಪಿದ್ದಾನೆ. ಸ್ವಲ್ಪ ಸಮಯದವರೆಗೆ ಅವರನ್ನು ಆಕ್ರಮಣ ಮಾಡಲು ಆತನು ಅನುಮತಿಸಬಹುದು, ಆದರೆ ಅವರು ಎಲ್ಲಿಯವರೆಗೂ ನಿಷ್ಠಾವಂತರು ಮತ್ತು ಸತ್ಯವಾಗಿ ಉಳಿಯುತ್ತಾರೋ, ಅಲ್ಲಿಯವರೆಗೆ ಆತನು ಅವರನ್ನು ಬಿಡುಗಡೆ ಮಾಡುತ್ತಾನೆ; ಮತ್ತು ಆ ಶೋಧನೆಗಳ ನಿಮಿತ್ತ ಅವರನ್ನು ಬಲಶಾಲಿಯಾಗುವಂತೆ ಮಾಡುತ್ತಾನೆ. **R 5896 : 6**

## 22 ಸೆಪ್ಟೆಂಬರ್

**"ಆಗ ಮೋಶೆಯೂ ಇಸ್ರಾಯೇಲ್ ಮಕ್ಕಳೂ ಕರ್ತನಿಗೆ ಈ ಹಾಡನ್ನು ಹಾಡಿ ಹೇಳಿದ್ದೇನೆಂದರೆ– ಕರ್ತನು ನನ್ನ ಬಲವೂ ಕೀರ್ತನೆಯೂ ಆಗಿದ್ದಾನೆ, ಆತನು ನನ್ನ ರಕ್ಷಣೆಯಾದನು, ಆತನು ನನ್ನ ದೇವರು, ಆತನಿಗಾಗಿ ನಾನು ಒಂದು ನಿವಾಸವನ್ನು ಸಿದ್ಧಮಾಡುವೆನು. ಆತನು ನನ್ನ ತಂದೆಯ ದೇವರು, ನಾನು ಆತನನ್ನು ಘನಪಡಿಸುವೆನು." (ವಿಮೋಚನಕಾಂಡ 15 : 1,2)**

ಐಗುಪ್ತದ ಬಂಧನದಿಂದ ಬಿಡುಗಡೆ ಮಾಡಿದ್ದಕ್ಕಾಗಿ ಇಸ್ರಾಯೇಲ್ಯರು ದೇವರಿಗೆ ಮಹಿಮೆ ಪಡಿಸುವದು ಸೂಕ್ತವೆಂದು ನಾವೆಲ್ಲರೂ ಒಪ್ಪಿಕೊಂಡರೆ, ಇದಕ್ಕಿಂತಲೂ ಹೆಚ್ಚಾಗಿ ಆತ್ಮೀಕ ಇಸ್ರಾಯೇಲ್ಯರು ಸೈತಾನನ ಶಕ್ತಿಯಿಂದ ಮತ್ತು ಪಾಪದ ಗುಲಾಮಗಿರಿಯಿಂದ, ನಮ್ಮ ಪಾಪಗಳಿಗಾಗಿ ದೇವರ ಕುರಿಮರಿಯ ರಕ್ತದಿಂದ ಇನ್ನೂ ಹೆಚ್ಚಾದ ಬಿಡುಗಡೆ ಸಾಧಿಸಿದ್ದನ್ನು ಕುರಿತು ಅರಿಯುವದು ಎಷ್ಟು ಸೂಕ್ತವಾಗಿದೆ. ಅನಕ್ಷರಸ್ಥ ಜನರು ದೀರ್ಘಕಾಲದವರೆಗೆ ಒಂದು ಅಳತೆಯಲ್ಲಿ ಗುಲಾಮರಾಗಿದ್ದು ಈ ಸುವಾರ್ತಾ ಯುಗದ ಅನುಕೂಲತೆಗಳಿಲ್ಲದಿದ್ದರೂ ಕರ್ತನಿಗೆ ಕೃತಜ್ಞತೆ ಸಲ್ಲಿಸಲು ಪ್ರೇರೇಪಿಸಲ್ಪಟ್ಟಿರುವಾಗ, ಕತ್ತಲೆಯೊಳಗಿದ್ದ ನಮ್ಮನ್ನು ತನ್ನ ಆಶ್ಚರ್ಯಕರವಾದ ಬೆಳಕಿಗೆ ಸೇರಿಸಿದಾತನ ಸ್ತುತಿಗಳನ್ನು ಪ್ರಕಟಿಸುವವರಾಗುವಂತೆ, ಆತನ ಸದ್ಗುಣವನ್ನು ರುಚಿನೋಡಿರುವ ನಾವು ಇನ್ನೂ ಎಷ್ಟೋ ಅಧಿಕವಾಗಿ ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸುವವರಾಗಬೇಕು! [1 ಪೇತ್ರನು 2:9]. ಕರ್ತನ ಜನರನ್ನು ಸತ್ಯವೇದದ ಎಲ್ಲಾ ಸ್ಥಳಗಳಲ್ಲಿ ಸತ್ಯದ ಸೇವಕರೆಂದು ಕರೆದಿರುವಲ್ಲಿ ಆಶ್ಚರ್ಯವೇನಿದೆ, ಮತ್ತು ನಮ್ಮ ಕಾಲುಗಳನ್ನು ನಾಶನದ ಗುಂಡಿಯೊಳಗಿಂದ ಕೆಸರಿನ ಹಾಗಿರುವ ಪಾಪ ಮತ್ತು ಮರಣದಿಂದ ಮೇಲಕ್ಕೆ ಎತ್ತಿರುವುದು ಮಾತ್ರವಲ್ಲದೆ ನಮ್ಮ ಬಾಯಲ್ಲಿ ನೂತನ ಹಾಡನ್ನು ಇಟ್ಟಿದ್ದಾನೆ, ಅದು ನಮ್ಮ ದೇವರ ಸ್ತೋತ್ರವೇ. [ಕೀರ್ತನೆಗಳು 40:2, 3] **R3998:6**

## 23 ಸೆಪ್ಟೆಂಬರ್

**"ನೀನು ಬಲವಾಗಿರು, ಬಹು ಧೈರ್ಯದಿಂದಿರು." (ಯೆಹೋಶುವನು 1 : 7)**

ಹಿಂದೆಂದಿಗಿಂತಲೂ ಹೆಚ್ಚಾದ ಗುಣಲಕ್ಷಣದ ಬಲ ಮತ್ತು ಧೈರ್ಯ ಈ ದಿನಗಳಲ್ಲಿ ನಮಗೆ ಬೇಕಾಗಿದೆ. ಕರ್ತನಲ್ಲಿ ಮತ್ತು ಆತನ ಅತ್ಯಧಿಕವಾದ ಶಕ್ತಿಯಲ್ಲಿ ನಾವು ಬಲಗೊಳ್ಳಬೇಕಾಗಿದೆ.... ನಮಗೆ ಬರುವ ಶೋಧನೆಗಳು ಮತ್ತು ಸಂಕಟಗಳು ಯಾವ ರೀತಿಯಾಗಿರುತ್ತದೆ ಎಂದು ನಮಗೆ ಗೊತ್ತಿಲ್ಲ. ಆದರೆ ಈ "ಕೆಟ್ಟ ದಿನಗಳಲ್ಲಿ" ನಾವು ವಾಸಿಸುತ್ತಿದ್ದೇವೆ, ಹೌದು, ಈ ದಿನದ ಕೊನೆಯಲ್ಲಿ–ಅಂದರೆ ಅಂತಿಮ "ಶೋಧನೆಯ ಸಮಯದಲ್ಲಿ"ದ್ದೇವೆ–ಖಂಡಿತವಾಗಿಯೂ ದೇವರ ಸರ್ವಾಯುಧಗಳನ್ನು ಹೊಂದಿರಬೇಕು. ನಮ್ಮ ಸೊಂಟಕ್ಕೆ ಸತ್ಯವೆಂಬ ನಡುಕಟ್ಟನ್ನು ಧರಿಸಿರಬೇಕು; ತಪ್ಪಾದ ದಂಡಗಳಿಂದ ನಮ್ಮ ಮನಸ್ಸನ್ನು, ನಮ್ಮ ಬುದ್ಧಿಗಳನ್ನು ರಕ್ಷಿಸಲು ನಮಗೆ ಶಿರಸ್ತ್ರಾಣದ ಅವಶ್ಯವಿದೆ; ನಮಗೆ ನೀತಿಯೆಂಬ ಎದೆ ಕವಚದ ಅವಶ್ಯವಿದೆ; ನಮಗೆ ಆತ್ಮದ ಕತ್ತಿ–[ಅಂದರೆ] ಅಗಲವಾದ ಇಬ್ಬಾಯಿಯ ಕತ್ತಿಯು ಅವಶ್ಯವಾಗಿದೆ; "ಸಮಾಧಾನದ ವಿಷಯವಾದ ಸುವಾರ್ತೆಯನ್ನು ಸಾರುವುದರಲ್ಲಿ ಸಿದ್ಧವಾದ" ಮನಸ್ಸೆಂಬ ಕೆರಗಳು ಅವಶ್ಯವಿದೆ. ನಮ್ಮ ಸ್ವಂತ ಎದೆಗಳಲ್ಲಿ ಕಾನಾನ್ಯರನ್ನು ಜಯಗೊಳ್ಳುವುದಕ್ಕೆ, ಮತ್ತು ಸುತ್ತಮುತ್ತಲಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಲು ನಮಗೆ ಇವೆಲ್ಲವೂ ಬೇಕಾಗಿದೆ. **R5707:5**

## 24 ಸೆಪ್ಟೆಂಬರ್

**"ಸಾರದಿಂದಲೂ ಕೊಬ್ಬಿನಿಂದಲೂ ನನ್ನ ಆತ್ಮವು ತೃಪ್ತಿಯಾಗುವದು; ಆಗ ನನ್ನ ಬಾಯಿಯು ಉತ್ಸಾಹದ ತುಟಿಗಳಿಂದ ನಿನ್ನನ್ನು ಸ್ತುತಿಸುವದು; ನಾನು ಹಾಸಿಗೆಯ ಮೇಲಿದ್ದುಕೊಂಡು ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು." (ಕೀರ್ತನೆಗಳು 63 : 5 , 6)**

ಯಾರಿಗೆಲ್ಲಾ ಧ್ಯಾನ ಮಾಡಲು ಸಮಯವಿದೆಯೋ ಅವರು ಒಂದು ದೊಡ್ಡ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಆತನ ಆಲೋಚನೆಗಳು ಸರ್ವಶಕ್ತನ ಕಡೆಗೆ ತಿರುಗಿ, ದೇವರ ಸದ್ಗುಣವನ್ನು ಅರಿತು, ದೇವರ ಅತ್ಯಧಿಕವಾದ ಕರುಣೆಗಳಿಗಾಗಿ ದೇವರನ್ನು ಸ್ತುತಿಸಲು ಹುಡುಕುತ್ತಾನೆ, ರಾತ್ರಿಯ ಜಾವದಲ್ಲಿ ದೇವರನ್ನು ಧ್ಯಾನಿಸುತ್ತಾನೆ...... ದೇವರು ಗುಣಲಕ್ಷಣಗಳಲ್ಲಿ ಮತ್ತು ತತ್ವಗಳಲ್ಲಿ ನೀತಿವಂತನು, ಪ್ರೀತಿಯುಳ್ಳವನು, ದಯೆಯುಳ್ಳವನು, ಜ್ಞಾನವುಳ್ಳವನು ಎಂದು

ನಾವು ನೆನಪಿಸಿಕೊಳ್ಳಬೇಕು. ಇವು ಆತನಂತೆಯೇ ನಾವಿರಲು ನಮ್ಮನ್ನು ಉತ್ತೇಜಿಸಬೇಕು. ಆತನ ಶ್ರೇಷ್ಠವಾದ ಗುಣಲಕ್ಷಣವನ್ನು ನಾವು ಎಷ್ಟು ಹೆಚ್ಚಾಗಿ ಮೆಚ್ಚುತ್ತೇವೋ, ಅಷ್ಟೇ ಹೆಚ್ಚಾಗಿ ಅದನ್ನು ಅನುಕರಿಸಲು ನಾವು ಬಯಸುತ್ತೇವೆ. ಪ್ರಕೃತಿಯಲ್ಲಿ ತೋರಿಬರುವ ದೇವರ ಪ್ರಬಲವಾದ ಕಾರ್ಯಗಳು ಮತ್ತು ನಮ್ಮ ಕಡೆಗೆ ಆತನು ತೋರಿಸಿದ ಕರುಣೆಯನ್ನು ನಾವು ಎಷ್ಟು ಹೆಚ್ಚಾಗಿ ನೋಡುತ್ತೇವೋ, ಅಷ್ಟೇ ಅಳತೆಯಲ್ಲಿ ನಮ್ಮ ಹೃದಯಗಳು ಮತ್ತು ತುಟಿಗಳು ಆತನನ್ನು ಸ್ತುತಿಸುವವು. **R 5785 : 5**

## 25 ಸೆಪ್ಟೆಂಬರ್

**"ಕರ್ತನನ್ನು ನಿರೀಕ್ಷಿಸುತ್ತೇನೆ; ನನ್ನ ಆತ್ಮವು ನಿರೀಕ್ಷಿಸುತ್ತದೆ; ಆತನ ವಾಕ್ಯದಲ್ಲಿ ನಿರೀಕ್ಷಿಸುತ್ತೇನೆ; ಉದಯಕ್ಕಾಗಿ ಕಾದುಕೊಳ್ಳುವವರಿಗಿಂತ ಹೌದು, ಉದಯಕ್ಕಾಗಿ ಕಾದುಕೊಳ್ಳುವವರಿಗಿಂತ ನನ್ನ ಆತ್ಮವು ಕರ್ತನಿಗಾಗಿ ನಿರೀಕ್ಷಿಸುತ್ತದೆ." ( ಕೀರ್ತನೆಗಳು 130 : 5, 6 )**

ದುಃಖ ಮತ್ತು ಸಂಕಟಗಳ ಪ್ರತಿಯೊಂದು ಅನುಭವದಲ್ಲೂ ಹಾಗೂ ಆಘಾತಕಾರಿ ಅಪಶ್ರುತಿಗಳು ಮತ್ತು ಹೃದಯವು ರಕ್ತಸ್ರಾವವಾಗುವಂತೆ ಮಾಡುವ ಕಟುವಾದ ಕೆರಳಿಸುವಿಕೆಯು ಮತ್ತು ಗಾಯಗಳು, ಮನಸ್ಸನ್ನು ಅಗಾಧವಾಗುವಂತೆ ಮಾಡುವ ಬೆದರಿಕೆಗಳು ಉಂಟಾಗುವಾಗ, ದೇವರು ನಮ್ಮನ್ನು "ಅರಿತಿದ್ದಾನೆ, ಪ್ರೀತಿಸುತ್ತಾನೆ ಮತ್ತು ಕಾಳಜಿ ವಹಿಸುತ್ತಾನೆ" ಎಂದು ನೆನಪಿಡಬೇಕು. ಮತ್ತು ಆತನ ಸೇವೆ ಮಾಡುವ ದೂತರು ಯಾವಾಗಲೂ ನಮ್ಮ ಹತ್ತಿರದಲ್ಲಿದ್ದಾರೆ ಹಾಗೂ ಯಾವುದೇ ಶೋಧನೆಗಳನ್ನು ತುಂಬಾ ತೀವ್ರವಾಗಿ ಅನುಮತಿಸಲಾಗುವುದಿಲ್ಲ ಎಂದು ದೇವರ ಮಕ್ಕಳು ನೆನಪಿನಲ್ಲಿಡಬೇಕು. ನಮ್ಮ ಪ್ರಿಯ ಯಜಮಾನನು ಕುಲುಮೆಯ ಬಳಿ ನಿಂತಿದ್ದಾನೆ, ಮತ್ತು ನಮ್ಮ ಅಮೂಲ್ಯವಾದ ಬಂಗಾರದಂತಹ ಗುಣಕಲ್ಷಣಗಳು ನಾಶವಾಗುವುದಕ್ಕೆ ಅಥವಾ ಗಾಯವಾಗುವುದಕ್ಕೂ ಸಹ ಆ ಕುಲುಮೆಯ ಶಾಖವನ್ನು ತೀವ್ರವಾಗಿ ಬೆಳೆಯಲು ಎಂದಿಗೂ ಅನುಮತಿಸುವುದಿಲ್ಲ. ಆಹ್ ಇಲ್ಲ! ಆತನ ಕೃಪೆಯಿಂದ ನಮಗೆ ಬರುವ ಅನುಭವಗಳು ನಮ್ಮ ಒಳಿತಿಗಾಗಿ ಕೆಲಸ ಮಾಡದಿದ್ದರೆ ಅವುಗಳನ್ನು ಪಕ್ಕಕ್ಕೆ ತಿರುಗಿಸಲಾಗುತ್ತದೆ. ಆತನು ನಮ್ಮನ್ನು ಎಷ್ಟು ಹೆಚ್ಚಾಗಿ ಪ್ರೀತಿಸುತ್ತಾನೆಂದರೆ, ಯಾವುದೇ ಅನಗತ್ಯ ದುಃಖ, ಯಾವುದೇ ಅನಗತ್ಯ ಉಪದ್ರವಗಳನ್ನೂ ಸಹ ಅನುಮತಿಸುವುದಿಲ್ಲ. **R 5802 : 6**

## 26 ಸೆಪ್ಟೆಂಬರ್

**"ನೀವು ಹೋಗಿ...ಎಲ್ಲಾ ಜನಾಂಗಗಳಿಗೆ ಬೋಧಿಸಿರಿ...." ( ಮತ್ತಾಯ 28 : 19 )**

ನಿಶ್ಚಯವಾಗಿ ಬಿತ್ತನೆ ಕಾರ್ಯವನ್ನು ಮೇಲ್ವಿಚಾರಣೆ ಮಾಡಲು ಜಾಗರೂಕರಾಗಿದ್ದವನು ಕೊಯ್ಲು ಮಾಡುವ ವಿಷಯದಲ್ಲಿ ಕಡಿಮೆ ಆಸಕ್ತಿ ಮತ್ತು ಕಡಿಮೆ ಜಾಗರೂಕನಾಗಿರಲು ಸಾಧ್ಯವಿಲ್ಲ. ಆದ್ದರಿಂದ ನಾವು ಕರ್ತನಾದ ಕ್ರಿಸ್ತನನ್ನು ಸೇವಿಸುತ್ತೇವೆಂದು ನೆನಪಿನಲ್ಲಿಟ್ಟುಕೊಂಡು, ಸುಗ್ಗಿಗೆ ನಾವು ಜವಾಬ್ದಾರರಲ್ಲ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ನಾವು ಕಂಡುಕೊಳ್ಳಬಹುದಾದ ಮಾಗಿದ [ಹಣ್ಣಾದ] "ಗೋಧಿ"ಯನ್ನು ಸಂಗ್ರಹಿಸುವದಕ್ಕಾಗಿ ಬಲದಿಂದ ಮತ್ತು ಧೈರ್ಯದಿಂದ ಸತ್ಯದ ಕುಡುಗೋಲನ್ನು ಒತ್ತೋಣ. ಮಾಗಿದ [ಹಣ್ಣಾದ] ಗೋಧಿಯ ಕೆಲವು ಧಾನ್ಯಗಳನ್ನು ಕಂಡುಹಿಡಿಯುವುದು ಅಧಿಕ ಶ್ರಮವೆಂದು ತಿಳಿದುಕೊಂಡರೆ, ನಾವು ಕಂಡುಕೊಂಡವರಲ್ಲಿ ಹೆಚ್ಚು ಸಂತೋಷ ಪಡಬೇಕು. ಅದು ವಿರಳ ಮತ್ತು ಅಮೂಲ್ಯವಾದದ್ದೆಂದು ತಿಳಿದು ಹೆಚ್ಚಾಗಿ ಪ್ರೀತಿಸಲು ಮತ್ತು ಪ್ರಶಂಸಿಸಲು ಕಲಿಯಬೇಕು. ಈ ಸೇವೆಯಲ್ಲಿ ನಮಗೆ ಸಾಧ್ಯವಾಗುವಂತಹ ಎಲ್ಲಾ ಬುದ್ಧಿವಂತಿಕೆಯನ್ನು ಬಳಸುವಾಗ, ಕರ್ತನು ತನ್ನ ಕೆಲಸದಲ್ಲಿ ನಮಗೆ ಒಂದು ಪಾಲನ್ನು ಕೊಡುವ ಉದ್ದೇಶವು ಏನೆಂದರೆ ನಮಗೆ ಬರುವ ಶ್ರಮವು ನಮಗೆ ದೊರೆಯುವ ಆಶೀರ್ವಾದಕ್ಕಿಂತ ಹೆಚ್ಚೇನು ಅಲ್ಲ ಎಂದೂ ಸಹ ನಾವು ನೆನಪಿನಲ್ಲಿಟ್ಟುಕೊಳ್ಳೋಣ. "ತಾವಾಗಿಯೇ" ಕೆಲಸದಲ್ಲಿ ತೊಡಗಿರುವ ಪ್ರಿಯರಿಗೆ ಇದು ಪ್ರೋತ್ಸಾಹದಾಯಕವಾದ ಚಿಂತನೆಯಾಗಿದೆ; ಮತ್ತು ಅವರು ಅನೇಕ ನಿರುತ್ಸಾಹಗಳನ್ನು ಆದರೆ ಸಣ್ಣ ಫಲಿತಾಂಶಗಳನ್ನು ಕಂಡುಕೊಂಡರೆ, ಬೋಧಕನು ಅವರು ತನ್ನವರನ್ನು ಅರಿತಿದ್ದಾನೆ ಮತ್ತು ಕ್ರಿಸ್ತನ ನಿಮಿತ್ತವಾಗಿ ಹಾಗೂ ನಮ್ಮ ಜೀವನವನ್ನು ಸಹೋದರ ನಿಮಿತ್ತವಾಗಿ ಬಲಿಯಾಗಿ ಸಲ್ಲಿಸಲು ಮಾಡಿದ ಪ್ರತಿಯೊಂದು ಪ್ರಾಮಾಣಿಕ ಪ್ರಯತ್ನವನ್ನು ಆತನು ಮೆಚ್ಚುತ್ತಾನೆ ಎಂಬ ಪ್ರತಿಬಿಂಬವು, ಅವರಿಗೆ ಧೈರ್ಯವನ್ನು ಮತ್ತು ಬಲವನ್ನು ಕೊಡುತ್ತದೆ, ಹೀಗೆ ಇಲ್ಲದಿದ್ದರೆ ಅವರು ಬಲಹೀನರಾಗಿಬಿಡುತ್ತಾರೆ. **R 2811 : 4**

## 27 ಸೆಪ್ಟೆಂಬರ್

**"ನಾನು ತಿರಿಗಿ ಬಂದು ನಿಮ್ಮನ್ನು ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಆಗ ನಾನಿರುವಲ್ಲಿ ನೀವು ಸಹ ಇರುವಿರಿ." ( ಯೋಹಾನನು 14 : 3 )**

ಪ್ರಿಯ ಸಹೋದರರೇ, ನಮ್ಮ ಮನಸ್ಸಿನ ಮುಂದೆ ಬೋಧಕನ [ಕ್ರಿಸ್ತನ] ಹಿಂತಿರುಗುವ ವಾಗ್ದಾನವನ್ನು ನಾವು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳೋಣ ಮತ್ತು ಈಗ ಆತನ ಪರೌಸಿಯಾ (parousia) ಸಮಯದಲ್ಲಿ [ಕಣ್ಣಿಗೆ ಕಾಣದೆ ಇರುವ ಪ್ರಸನ್ನತೆಯ ಸಮಯದಲ್ಲಿ] ಅದು ನಮ್ಮ ಪ್ರತಿಯೊಂದು ಮಾತು ಮತ್ತು ಕ್ರಿಯೆಯ ಮೇಲೆ ಸಂಪೂರ್ಣ ತೂಕ ಮತ್ತು ಪ್ರಭಾವವನ್ನು ಬೀರಲಿ; ಹೌದು, ನಮ್ಮ ಆಲೋಚನೆಗಳ ಮೇಲೆಯೂ ಪ್ರಭಾವ ಬೀರಲಿ. ನಾವು ಬೇಗನೆ ನಮ್ಮ ಪುನರುತ್ಥಾನದ ಬದಲಾವಣೆಯ ಅನುಭವವನ್ನು ಕಾಣುತ್ತೇವೆ, ಆತನಿರುವಂತೆಯೇ ಆತನನ್ನು ಕಾಣುತ್ತೇವೆ ಮತ್ತು ಮಹಾ ಎಪಿಫಾನಿಯಾದಲ್ಲಿ(epiphania) ಆತನ ಮಹಿಮೆಯಲ್ಲಿ ಪಾಲು ಹೊಂದುತ್ತೇವೆ, ಅಥವಾ ಮಹಿಮೆಯ ರಾಜ್ಯದಲ್ಲಿ ದೇವಪುತ್ರರಾಗಿ ಪ್ರಕಾಶಿಸುತ್ತೇವೆ ಎಂಬ ವಿಷಯವು ನಮ್ಮನ್ನು ಉತ್ತೇಜನಗೊಳಿಸುತ್ತದೆ–ಇದು ನಮ್ಮ ಹೃದಯಗಳನ್ನು ಚೈತನ್ಯಗೊಳಿಸಲಿ, ನಮ್ಮ ತುಟಿಗಳನ್ನು ಸಡಿಲಗೊಳಿಸಲಿ, ಮತ್ತು ನಮ್ಮ ಬೋಧಕನಿಗೆ ಮತ್ತು ವಿಶ್ವಾಸದ ಮನೆವಾರ್ತೆಯವರಿಗೆ ಸೇವೆ ಮಾಡುವ ಪ್ರತಿಯೊಂದು ಕರ್ತವ್ಯ, ಸವಲತ್ತು ಮತ್ತು ಅವಕಾಶಗಳು ನಮ್ಮನ್ನು ಬಲಪಡಿಸಲಿ. ಈ ನಿರೀಕ್ಷೆಯು ಅನೇಕ ಶತಮಾನಗಳಿಂದ ಕರ್ತನ ಜನರಿಗೆ ಆಧಾರವಾಗಿದ್ದಲ್ಲಿ, ಆತನ ಪ್ರಸನ್ನತೆಯ ಸಮಯದಲ್ಲಿ ಈಗ ಜೀವಿಸುತ್ತಿರುವ ನಮಗೆ ಆತನ ಅಪೋಕಲುಪ್ಸಿಸ್‌ಗಾಗಿ (apokalupsis) ಕಾಯುತ್ತಿರುವ ನಮಗೆ–ಆತನ ಮಹಿಮೆಯ ರಾಜ್ಯವು ಪ್ರಕಟವಾಗುತ್ತಿರುವ ಈ ಸಮಯದಲ್ಲಿ ಅದು ಇನ್ನೂ ಎಷ್ಟೋ ಹೆಚ್ಚಾಗಿ ನಮಗೆ ಅರ್ಥಪೂರ್ಣವಾಗಿರಬೇಕು. **R 3193 : 6**

## 28 ಸೆಪ್ಟೆಂಬರ್

**"ಅರಸನ ಮಗಳು ತನ್ನಲ್ಲಿ ಪೂರ್ಣ ಘನವುಳ್ಳವಳಾಗಿದ್ದಾಳೆ. ಅವಳ ವಸ್ತ್ರವು ಚಿನ್ನದಿಂದ ನೆಯಿದದೆ." (ಕೀರ್ತನೆಗಳು 45 : 13)**

ತನ್ನ ಎಲ್ಲಾ ಆತ್ಮದಿಂದಲೂ, ಎಲ್ಲಾ ಶಕ್ತಿಯಿಂದಲೂ ಮತ್ತು ಪೂರ್ಣ ಮನಸ್ಸಿನಿಂದಲೂ ತನ್ನನ್ನು ಆರಾಧಿಸುವವರನ್ನು ಕರ್ತನು ಹುಡುಕುತ್ತಿದ್ದಾನೆ. ಈ ಸಂಪೂರ್ಣ ಆತ್ಮವುಳ್ಳವರು ಕರ್ತನಿಗೆ ವಿಶೇಷವಾಗಿ ಸಾವಿರ ವರ್ಷದ ರಾಜ್ಯದಲ್ಲಿ ತನ್ನ ರಾಣಿಯಾಗಿ, ಮದಲಗಿತ್ತಿಯಾಗಿ, ಕುರಿಮರಿಯ ಹೆಂಡತಿಯಾಗಿ, ಮತ್ತು ಆತನೊಂದಿಗೆ ಸಹಬಾಧ್ಯಸ್ತರಾಗುವ ವರ್ಗದವರಾಗಿದ್ದಾರೆ. ಅಂತವರು ಮಾತ್ರ ರಾಜವಂಶಸ್ಥರ ಕುಟುಂಬದ ಸದಸ್ಯರಾಗಬಹುದು. ಮತ್ತು ದೈವಿಕ ಸ್ವಭಾವದಲ್ಲಿ ಪಾಲುಹೊಂದಬಹುದೆಂದು ಆತನು ಮೊದಲೇ ನಿರ್ಧರಿಸಿದ್ದಾನೆ. "ತಾನು ಯಾರನ್ನು ಮೊದಲು ತಿಳುಕೊಂಡನೋ ಅವರನ್ನು ಮಗನ ಸ್ವಾರೂಪ್ಯವುಳ್ಳವರಾಗುವಂತೆ

ಮೊದಲೇ ನೇಮಿಸಿದನು." ಇಂತವರಿಗೆ ಆತನು ಕೃಪೆಯನ್ನು ಮತ್ತು ಮಹಿಮೆಯನ್ನು ಕೊಡುವನು ಮತ್ತು ಅವರಿಗೆ ಒಳ್ಳೆಯದನ್ನು ಮಾಡುವುದರಲ್ಲಿ ಯಾವುದೇ ತಡೆ ಮಾಡುವುದಿಲ್ಲ. ಏಕೆಂದರೆ ಅವರು ನಿಷ್ಠಾವಂತರಾಗಿ ನಡೆಯುತ್ತಾರೆ. **R 4256 : 1**

## 29 ಸೆಪ್ಟೆಂಬರ್

**"ನೀವು ಇವುಗಳನ್ನು ತಿಳುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು." (ಯೋಹಾನನು 13 : 17)**

ನಾವು ಶರೀರದಲ್ಲಿರುವಾಗ ನಮ್ಮ ಆಲೋಚನೆ, ಮಾತು ಮತ್ತು ಕ್ರಿಯೆಗಳಲ್ಲಿ ನಮಗೆ ಎಂದಿಗೂ ಸಂಪೂರ್ಣ ತೃಪ್ತಿಯಾಗುವುದಿಲ್ಲ; ಮತ್ತು ನಾವು ಎಂದಿಗೂ ಇತರರಿಗೆ ಸಂಪೂರ್ಣವಾಗಿ ತೃಪ್ತಿಪಡಿಸಲು ಸಾಧ್ಯವಿಲ್ಲ; ಆದರೆ ದೇವರ ಕೃಪೆಯಿಂದ ನಾವು ಪ್ರತಿಯೊಬ್ಬರೂ ನಮ್ಮ ಹೃದಯಕ್ಕೆ ಸಂಬಂಧಪಟ್ಟಂತೆ ಈ ಎಲ್ಲವನ್ನು ಸಾಧಿಸಬಹುದು ಎಂದು ನಿರ್ಧರಿಸೋಣ. ನಾವು ಹೀಗೆ ಮಾಡಬಹುದು, ಮಾಡಬೇಕು ಮತ್ತು ಖಂಡಿತವಾಗಿಯೂ ಮಾಡಬೇಕು. ಇದಕ್ಕಿಂತ ಕಡಿಮೆಯಾಗಿ ನಾವು ಏನು ಮಾಡಿದರೂ ನಮ್ಮ ಕರ್ತನಿಗೆ ತೃಪ್ತಿಕರವಾಗಿರುವುದಿಲ್ಲ, ಏಕೆಂದರೆ ನಮ್ಮ ಕರ್ತನಿಗೆ ನಾವು ಪರಿಶುದ್ಧ ಕನ್ಯೆಯಾಗಿ, ಸಭೆಯ ಸದಸ್ಯರಾಗಿ "ನಿಶ್ಚಿತಾರ್ಥ" ಮಾಡಿಕೊಂಡಿದ್ದೇವೆ. ನಾವು ಈ ಸಮಂಜಸವಾದ ಸಾಧ್ಯವಾಗುವ, ಮಾನದಂಡದ ಮಟ್ಟಕ್ಕೆ ಬರಲು ವಿಫಲರಾದರೆ, ನಮ್ಮ ಕರೆಯನ್ನು ಮತ್ತು ಆಯ್ದುಕೊಳ್ಳುವಿಕೆಯನ್ನು ವಧುವಿನ ವರ್ಗದಲ್ಲಿ ಖಚಿತಪಡಿಸಿಕೊಳ್ಳಲು ನಾವು ವಿಫಲರಾಗುತ್ತೇವೆ. ಆದರೆ ನಾವು ಈ ಕೆಲಸಗಳನ್ನು [ವಿಷಯಗಳನ್ನು] ಮಾಡಿದರೆ, ಹೃದಯದಲ್ಲಿ ನಾವು ಈ ಮಾನದಂಡದ ಮಟ್ಟದಲ್ಲಿದ್ದರೆ ಮತ್ತು ಪ್ರತಿದಿನ ಅದನ್ನು ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಜೀವಿಸಲು ಬಯಸುತ್ತಿದ್ದರೆ, ಪರಲೋಕದ ಮದಲಿಂಗನು [ಕ್ರಿಸ್ತನು] ತಾನು ಆಯ್ಕೆಮಾಡಿಕೊಂಡ ಸದಸ್ಯರಾಗಿ ನಮ್ಮನ್ನು ಸ್ವೀಕರಿಸಲು ಸಂತೋಷಪಡುತ್ತಾನೆ. ಓಹ್, ನಾವು ಈ ಪಾಠವನ್ನು ಕಲಿಯುವುದಕ್ಕೆ ಎಷ್ಟು ಅವಲಂಬಿತರಾಗಿರಬೇಕು! **R 4460 : 6**

## 30 ಸೆಪ್ಟೆಂಬರ್

**"ಇದಲ್ಲದೆ ಅವರು ಹಗಲಿರುಳು ಪ್ರಯಾಣ ಮಾಡುವ ಹಾಗೆ ಕರ್ತನು ಹಗಲಲ್ಲಿ ಅವರಿಗೆ ದಾರಿ ತೋರಿಸುವದಕ್ಕೆ ಮೇಘಸ್ತಂಭದಲ್ಲಿಯೂ ರಾತ್ರಿಯಲ್ಲಿ ಅವರಿಗೆ ಬೆಳಕು ಕೊಡುವದಕ್ಕೆ ಅಗ್ನಿಸ್ತಂಭದಲ್ಲಿಯೂ ಅವರ ಮುಂದೆ ಹೋದನು." (ವಿಮೋಚನಕಾಂಡ 13 : 21)**

ಸ್ವಾಭಾವಿಕ [ಶಾರೀರಿಕ] ಇಸ್ರಾಯೇಲಿನಲ್ಲಿ ಕರ್ತನ ನಿರ್ದೇಶನದಿಂದ [ಮಾರ್ಗದರ್ಶನದಿಂದ] ಪ್ರತಿದಿನ ಏನೆಲ್ಲಾ ನಡೆಯಿತೋ ಅದು ಖಂಡಿತವಾಗಿಯೂ ಆತ್ಮೀಕ ಇಸ್ರಾಯೇಲಿನಲ್ಲಿ ಸಮಾನ ಕ್ರಮಬದ್ಧತೆಯೊಂದಿಗೆ ನಡೆಯುತ್ತದೆ. ನಂಬಿಗಸ್ತರಾಗಿ ಕಾಣುವವರೆಲ್ಲರೂ, ಎಲ್ಲಾ ನಿಜವಾದ ಇಸ್ರಾಯೇಲ್ಯರು, ಅವರು ಪ್ರತಿದಿನ ಬೆಳಿಗ್ಗೆ ಜೀವನದ ಪ್ರಯಾಣಕ್ಕೆ ಸಾಗುವಾಗ, ಜೀವನದ ಯುದ್ಧಕ್ಕೆ ಹೊರಡುವಾಗ, ಶೋಧನೆಗಳು ಮತ್ತು ಪರೀಕ್ಷೆಗಳಲ್ಲಿ ಹಾದು ಹೋಗುವಾಗ, ಖಂಡಿತವಾಗಿಯೂ ಕರ್ತನನ್ನು ತಮ್ಮ ರಕ್ಷಣೆಯ ನಾಯಕನಾಗಿ ನೋಡಲು ಕಲಿತುಕೊಳ್ಳಬೇಕು, ಆತನೊಬ್ಬನ ಮೂಲಕವಾಗಿ ಮಾತ್ರ ಸೈತಾನ ಮತ್ತು ಆತನ ಸೇನೆಗಳನ್ನು ಸೋಲಿಸಬಹುದು, ಆತನ ಮೂಲಕವಾಗಿ ಮಾತ್ರ ನಾವು ಜಯವನ್ನು ಹೊಂದಬಹುದು....ಯಾವ ಆತ್ಮೀಕ ಇಸ್ರಾಯೇಲ್ಯನು ತನ್ನ ದಿನದ ಅಂತ್ಯದಲ್ಲಿ ಹಿಂದಿನ ಘಟನೆಗಳನ್ನು ಪರಿಗಣನೆಯೊಂದಿಗೆ ಕರ್ತನ ಸದ್ಗುಣವನ್ನು ಮನಸ್ಸಿಗೆ ತರದೆ ಮತ್ತು ರಾತ್ರಿಯ ನೆರಳಿನಲ್ಲಿ ಆತನ ನಿರಂತರವಾದ ದಯೆ ಮತ್ತು ಕಾಪಾಡುವಿಕೆಯನ್ನು ಬಯಸದೆ ಇರಲು ಸಾಧ್ಯ? **R 4039 : 1**

## 1 ಅಕ್ಟೋಬರ್

**"ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು." (ಗಲಾತ್ಯದವರಿಗೆ 6 : 7)**

ಪ್ರತಿಯೊಂದು ಕ್ರಿಯೆ, ಮಾತು ಮತ್ತು ಆಲೋಚನೆಯು ಪ್ರತಿಯೊಬ್ಬ ಕ್ರೈಸ್ತರ ಜೀವನದ ಅಂತಿಮ ಫಲಿತಾಂಶಗಳ ಮೇಲೆ ಪ್ರಭಾವ ಬೀರುತ್ತದೆ. ಆದರೂ ಯಾವುದೇ ಒಂದೇ ಒಂದು ಯೋಚನೆ ಮಾತ್ರ, ಯಾವುದೇ ಒಂದೇ ಒಂದು ಮಾತು ಮಾತ್ರ ಅಥವಾ ಯಾವುದೇ ಒಂದೇ ಒಂದು ಕ್ರಿಯೆ ಮಾತ್ರ, ಅದು ಒಳ್ಳೆಯದಾಗಲಿ ಅಥವಾ ಕೆಟ್ಟದ್ದಾಗಲಿ ನಿರ್ಧರಿಸುವ ತೂಕವನ್ನು ಹೊಂದಿರುವುದಿಲ್ಲ. ನಾವು ಎಷ್ಟು ಅಧಿಕವಾಗಿ ನಿಷ್ಠಾವಂತರಾಗಿರುತ್ತೇವೋ, ಎಷ್ಟು ಅಧಿಕವಾಗಿ ನಂಬಿಗಸ್ತರಾಗಿತ್ತೇವೋ, ಅಷ್ಟೇ ಕಡಿಮೆಯಾಗಿ ನಮ್ಮ ಜೀವನದ ಹಾದಿಯಲ್ಲಿ ಜಾರಿ ಬೀಳುತ್ತೇವೆ, ಅಷ್ಟೇ ಹೆಚ್ಚಾಗಿ ನಮ್ಮ ವಿಮೋಚಕನಂತಿರುತ್ತೇವೆ ಮತ್ತು ನಮ್ಮ ಪ್ರತಿಫಲವು ಪ್ರಕಾಶಮಾನವಾಗಿರುತ್ತದೆ, ಏಕಂದರೆ ಅಪೋಸ್ತಲನು ಘೋಷಿಸಿದಂತೆ, "ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಹೆಚ್ಚು ಕಡಿಮೆಯುಂಟಷ್ಟೆ. ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವುದು." ಮೆಸ್ಸೀಯನ ರಾಜ್ಯದ ವ್ಯವಸ್ಥೆಗಳ ಅಡಿಯಲ್ಲಿ ಜೀವ ಅಥವಾ ಮರಣದ ವಿಚಾರಣೆಗೆ ಸಂಬಂಧಿಸಿದಂತೆ ಲೋಕದವರ ಪ್ರತಿಯೊಂದು ಒಳ್ಳೆಯ ಮತ್ತು ಪ್ರತಿಯೊಂದು ದುಷ್ಟ

ಕೃತ್ಯವು ತೂಕ ಮತ್ತು ಪ್ರಭಾವವನ್ನು ಹೊಂದಿರುತ್ತದೆ ಎಂದು ಲೋಕದವರು ತಿಳಿದುಕೊಳ್ಳುವರು. ಮತ್ತು ಕ್ರಿಸ್ತನ ಜೊತೆ ಮರಣ ಹೊಂದಲು ಒಡಂಬಡಿಕೆಯನ್ನು ಮಾಡಿಕೊಂಡ ಪ್ರತಿಯೊಬ್ಬ ಕ್ರೈಸ್ತನೂ, ಆತನೊಂದಿಗೆ ಬದುಕಿ ಆಳ್ವಿಕೆ ಮಾಡಬಹುದು–ಅಂತಹವರ ಪ್ರತಿಯೊಂದು ಮಾತು, ಪ್ರತಿಯೊಂದು ಆಲೋಚನೆ, ಪ್ರತಿಯೊಂದು ಕ್ರಿಯೆಯು ಮಹತ್ತರವಾದ ಫಲಿತಾಂಶಗಳನ್ನು ಹೊಂದಿರುತ್ತದೆ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಅಪೋಸ್ತಲನು ಹೇಳುವಂತೆ ತಮ್ಮ ಜೀವನದಲ್ಲಿ ಜಾಗರೂಕತೆಯಿಂದ, ಬುದ್ಧಿವಂತಿಕೆಯಿಂದ ನಡೆದು, ದೇವರನ್ನು ಮೆಚ್ಚಿಸುವ ವಿಷಯಗಳನ್ನು ತಿಳಿದುಕೊಳ್ಳಲು ಮತ್ತು ಅದರಂತೆ ನಡೆಯಲು ಹಾಗೂ ಅತ್ಯುನ್ನತ ಪ್ರತಿಫಲವನ್ನು ಪಡೆಯಲು ಪ್ರಯತ್ನಿಸಬೇಕು. **R 5226 : 5**

## 2 ಅಕ್ಟೋಬರ್

**"ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದಂತೆಯೇ ನೀವು ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರಿ." (ಎಫೆಸದವರಿಗೆ 4 : 32)**

ನೂತನ ಸೃಷ್ಟಿಗಳಾದ ಪ್ರತಿಯೊಬ್ಬರೂ ಅಂದರೆ ದೇವರ ಪುತ್ರರು, ಕ್ರಿಸ್ತನ ಬಲಿಯ (ಅರ್ಹತೆಯ)(merit) ಮೂಲಕವಾಗಿ ಅಂಗೀಕರಿಸಲ್ಪಟ್ಟಿರಲಾಗಿ, ಅವರ ಸ್ವಂತ ಬಲಹೀನತೆಗಳಿಗೆ ಅವರೇ ಕಾರಣರಾಗಿದ್ದಾರೆ. ಆದರೆ ಅವರು ತಮ್ಮ ಬಲಹೀನತೆಗಳನ್ನು ತಿಳಿದುಕೊಂಡು ಅದರ ಕ್ಷಮೆಗಾಗಿ ಬೇಡಿಕೊಂಡರೆ, ಕ್ರಿಸ್ತನ ನಿಮಿತ್ತವಾಗಿ ಅವುಗಳನ್ನು ಉಚಿತವಾಗಿ ರದ್ದು ಮಾಡಲು (ಮನ್ನಿಸಲು) ದೈವಿಕ ಶಕ್ತಿಯನ್ನು ಒದಗಿಸಲಾಗಿದೆ. ಆದರೆ ದೇವರ ಮಕ್ಕಳಿಗೆ ಈ ಅಪರಾಧಗಳನ್ನು ದೇವರು ಕ್ಷಮಿಸಬೇಕಾದರೆ ಅವರು ಸಹೋದರರ ಬಗ್ಗೆ ಕ್ಷಮಿಸುವ ಮನೋಭಾವವನ್ನು ಹೊಂದಿರುವುದರ ಮೇಲೆ ಅವಲಂಬಿಸಿರುತ್ತದೆ. ಏಕೆಂದರೆ "ನೀವು ಒಬ್ಬರಿಗೊಬ್ಬರು ನಿಮ್ಮ ತಪ್ಪುಗಳನ್ನು ಹೃದಯ ಪೂರ್ವಕವಾಗಿ ಕ್ಷಮಿಸದೆ ಹೋದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮನ್ನು ಕ್ಷಮಿಸುವುದಿಲ್ಲ." "ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು: ಮತ್ತು ನೀವು ಯಾವ ಅಳತೆಯಲ್ಲಿ" ಇತರರಿಗೆ ಉಪಕಾರವನ್ನು ಮಾಡುತ್ತೀರೋ ಅದೇ ಅಳತೆಯಲ್ಲಿ ನಿಮಗೆ ಉಪಕಾರ ಮಾಡಲಾಗುವದು. ದೈವಿಕ ಏರ್ಪಾಡುಗಳು ಎಷ್ಟು ಅದ್ಭುತವಾಗಿವೆ! ಇವುಗಳು ನಾವು ರಾಜ್ಯಕ್ಕೆ ತಯಾರಾಗುವದಕ್ಕೆ ನಮಗೆ ಎಷ್ಟು ಆಶೀರ್ವದಿಸಲ್ಪಟ್ಟದ್ದಾಗಿಯೂ, ಎಷ್ಟು ಲಾಭದಾಯಕವಾಗಿಯೂ ಮತ್ತು ನಮಗೆ ಎಷ್ಟು ಸಹಾಯಕವಾಗಿಯೂ ಇವೆ! **R 5135 : 4**

## 3 ಅಕ್ಟೋಬರ್

**"ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ಆತನ ಪ್ರೀತಿಯಲ್ಲಿ ನೆಲೆಯಾಗಿರುವಂತೆಯೇ ನೀವು ನನ್ನ ಆಜ್ಞೆಗಳನ್ನು ಕೈಕೊಂಡರೆ ನನ್ನ ಪ್ರೀತಿಯಲ್ಲಿ ನೆಲೆಯಾಗಿರುವಿರಿ" (ಯೋಹಾನನು 15 : 10)**

ಅತಿ ಪ್ರಿಯರೇ, ಕರ್ತನ ವಾಕ್ಯವನ್ನು ಗೌರವಿಸುವುದರ ವಿಷಯದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಜಾಗರೂಕರಾಗಿರೋಣ; ನಾವು ನಿರ್ಲಕ್ಷ್ಯದಿಂದ ಪ್ರೀತಿಯ ಕೊಳೆಯುವಿಕೆಯ ಪುರಾವೆಗಳನ್ನು(ಸಾಕ್ಷಿಗಳನ್ನು) ನೀಡಬಾರದು. ನಮ್ಮ ಕರ್ತನು ಸೂಚಿಸುವುದೇನೆಂದರೆ, ಆತನು ತಂದೆಯ ಪ್ರೀತಿಯಲ್ಲಿ ನೆಲೆಗೊಂಡು ತಂದೆಯ ಚಿತ್ತಕ್ಕೆ ವಿಧೇಯನಾಗಿರುವುದೇ ಅತಿ ಪ್ರೀತಿಯ ಮಗನಾಗಿರುವದಕ್ಕೆ ಕಾರಣವಾಗಿದೆ; ಮತ್ತು ಅದೇ ದಾರಿಯನ್ನು ಅನುಸರಿಸಿ, ನಾವು ಆತನ ಪ್ರೀತಿಯಲ್ಲಿ ನೆಲೆಗೊಂಡು ಆತನಿಗೆ ವಿಧೇಯರಾಗಿದ್ದು, ಆತನ ಸಿಂಹಾಸನ ಮತ್ತು ಮಹಿಮೆಯಲ್ಲಿ ಪಾಲು ಹೊಂದಬೇಕೆಂದು ಆತನು ಬಯಸುತ್ತಾನೆ. ನಮ್ಮ ಕರ್ತನ ಬೋಧನೆ ಮತ್ತು ಆಜ್ಞೆಗಳು ನಮ್ಮನ್ನು ಭಯಭೀತರನ್ನಾಗಿಸುವುದಕ್ಕಾಗಲೀ, ಸಂತೋಷವನ್ನು ಕಸಿದುಕೊಳ್ಳುವುದರ ಉದ್ದೇಶದಿಂದಾಗಲಿ ನೀಡಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ, "ನನ್ನ ಆನಂದವು ನಿಮ್ಮಲ್ಲಿರುವ ಹಾಗೆಯೂ ನಿಮ್ಮ ಆನಂದವು ಸಂಪೂರ್ಣವಾಗುವ ಹಾಗೆಯೂ ನಾನು ಇವುಗಳನ್ನು ನಿಮಗೆ ಹೇಳಿದ್ದೇನೆ." (ಯೋಹಾನ 15 : 11) ಕರ್ತನ ಹತ್ತಿರ ವಾಸಿಸುತ್ತೇನೆಂದು ಖಚಿತವಾದ ಸಾಕ್ಷ್ಯವನ್ನು ನೀಡುವವರು ಕರ್ತನ ವಾಕ್ಯಗಳಿಗೆ ವಿಧೇಯರಾಗುವುದು. ಆತನಲ್ಲಿ ಮತ್ತು ಆತನ ಪ್ರೀತಿಯಲ್ಲಿ ನೆಲೆಗೊಳ್ಳುವುದರ ಜೊತೆಗೆ ಆ ಭಾಗ್ಯವನ್ನು ಪಡೆದವರು ಅತ್ಯಂತ ಸಂತೋಷವುಳ್ಳವರಾಗಿದ್ದಾರೆ. ಈ ಸಂತೋಷವು ಲೋಕವು ನೀಡುವ ಎಲ್ಲಾ ಅತ್ಯಲ್ಪ ಸಂತೋಷಗಳನ್ನು ಮೀರಿಸುತ್ತದೆ. ಇದು "ಎಲ್ಲಾ ಗ್ರಹಿಕೆಯನ್ನೂ ಮೀರುವ" ದೇವರ ಸಂತೋಷ ಮತ್ತು ಸಮಾಧಾನವಾಗಿದ್ದು ನಮ್ಮ ಹೃದಯಗಳನ್ನು ಕಾಯುವದು [ಆಳುವದು] ಮತ್ತು ಅದು "ಈಗಿರುವ ಜೀವಿತದಲ್ಲಿ ಮಾತ್ರವಲ್ಲ, ಬರಲಿರುವ ಜೀವಿತದ" ಬಗ್ಗೆಯೂ ವಾಗ್ದಾನವನ್ನು ಮತ್ತು ಭರವಸೆಯನ್ನುಂಟು ಮಾಡುತ್ತದೆ. **R 5082 : 6**

## 4 ಅಕ್ಟೋಬರ್

**"ಹಗಲಿರುವಾಗ ಕೆಲಸಗಳನ್ನು...ಮಾಡತಕ್ಕದ್ದು; ರಾತ್ರಿ ಬರುತ್ತದೆ, ಆಗ ಯಾವ ಮನುಷ್ಯನೂ ಕೆಲಸಮಾಡಲಾರನು." (ಯೋಹಾನನು 9 : 4)**

ನಾನು ಏನು ಮಾಡುತ್ತಿದ್ದೇನೆ? ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿರಿ. ನಂತರ [ಲೌಕಿಕ] ಭಾರಗಳು ಮತ್ತು ಅಡೆತಡೆಗಳನ್ನು ಪಕ್ಕಕ್ಕೆ ಇರಿಸಿ, ನಿಮ್ಮ ಪ್ರಯತ್ನಗಳನ್ನು ಹೆಚ್ಚಿಸಿರಿ. ಈಗ ತೆರೆದಿರುವ ಅನೇಕ ಮಾರ್ಗಗಳಲ್ಲಿ ಕೆಲವೊಂದಕ್ಕೆ ನೀವು ಸತ್ಯದ ಸೇವಕರಾಗಿರದಿದ್ದರೆ, ನೀವು ಸತ್ಯಕ್ಕೆ ಅನರ್ಹರು ಎಂದು ಮತ್ತು ಅದರ ಮೇಲೆ ನಿಮ್ಮ ಹಿಡಿತವನ್ನು ಕಳೆದುಕೊಳ್ಳುವದು ಖಚಿತವಾಗಿದೆ ಎಂಬುದನ್ನು ತಿಳಿದುಕೊಳ್ಳಿರಿ. ಏಕೆಂದರೆ ಈಗ ಸುಗ್ಗಿ [ಕೊಯ್ಲು] ಮತ್ತು ಬೇರ್ಪಡಿಸುವ ಸಮಯವಾಗಿದೆ. ಅನೇಕ ವಿಷಯಗಳು ನಿಮ್ಮನ್ನು ಸತ್ಯದಿಂದ ದೂರ ಸೆಳೆಯುತ್ತವೆ; ತಂದೆ–ತಾಯಿಯರು, ಪುತ್ರರು ಮತ್ತು ಪುತ್ರಿಯರು, ಸಹೋದರರು ಮತ್ತು ಸಹೋದರಿಯರು ನಿಮ್ಮನ್ನು ವಿರೋಧಿಸುತ್ತಾರೆ ಹಾಗೂ ಸತ್ಯ ಮತ್ತು ಅದರ ಸೇವೆಯಿಂದ ನಿಮ್ಮನ್ನು ಪ್ರತ್ಯೇಕಿಸಲು ಪ್ರಯತ್ನಿಸುತ್ತಾರೆ. "ಸುಗ್ಗಿ" ಎಂಬುದು ಸಮಾಧಾನದ ಸಮಯವಲ್ಲ. ಆದರೆ ಅದಕ್ಕೆ ತದ್‌ವಿರುದ್ಧವಾಗಿ ಇದು ನಿಜವಾದ ಗೋಧಿ ಮತ್ತು ಬೇರೆ ಎಲ್ಲದರ ನಡುವೆ ಪ್ರತ್ಯೇಕತೆ ಮತ್ತು ಅನ್ಯತೆಯನ್ನು ಖಂಡಿತವಾಗಿ ಉಂಟು ಮಾಡುತ್ತದೆ ಎಂಬ ಕರ್ತನ ಮಾತುಗಳನ್ನು ನೀವು ನೆನಪಿಟ್ಟುಕೊಳ್ಳಬೇಕು. ಈ ವಿಷಯವನ್ನು ಕುರಿತ ಕ್ರಿಸ್ತನ ಮಾತುಗಳನ್ನು ಗಮನಿಸಿರಿ ಮತ್ತು ಅದನ್ನು ನಿಧಿ ಎಂದು ಎಣಿಸಿಕೊಂಡು ನಿಮ್ಮದಾಗಿಸಿಕೊಳ್ಳಿರಿ. [ಮತ್ತಾಯ 10:30-39 ಮತ್ತು ಲೂಕ 18:28-30] **R 969 : 5**

## 5 ಅಕ್ಟೋಬರ್

**"ನನ್ನನ್ನು ಬಲಪಡಿಸುವ ಕ್ರಿಸ್ತನ ಮೂಲಕ ನಾನು ಎಲ್ಲವುಗಳನ್ನು ಮಾಡಬಲ್ಲೆನು." (ಫಿಲಿಪ್ಪಿಯರಿಗೆ 4 : 13)**

ನಾವು ತುಂಬಾ ಅಧಿಕವಾದ ಅಥವಾ ತುಂಬಾ ಕಡಿಮೆಯಾದ ಸ್ವಾಭಿಮಾನದಿಂದ ಹುಟ್ಟಿದ್ದರೂ, ಯಾರೆಲ್ಲಾ ದೇವರ ಕುಟುಂಬಕ್ಕೆ ಬರುತ್ತಾರೋ ಅಂಥವರನ್ನು ಕಲಿಸಲು, ತಿದ್ದಲು–ಸರಿಮಾಡಲು, ದೈವಿಕ ಮಾನದಂಡಗಳಿಗೆ ಅನುಗುಣವಾಗಿ ನಡೆಯಲು ಕ್ರಿಸ್ತನ ಶಾಲೆಯಲ್ಲಿ ಸೇರಿಸಲಾಗುತ್ತದೆ. ಸ್ವಾಭಾವಿಕವಾಗಿ ಅಹಂಕಾರವುಳ್ಳವರು, ಅವರು ಬಯಸಿದರೆ ಬೋಧನೆಗಳ ಮೂಲಕ ಸಾತ್ವಿಕತೆಯನ್ನು ಕಲಿಯಬಹುದು–ಇಲ್ಲದಿದ್ದರೆ ಅನುಭವಗಳ ಮೂಲಕ ಸಾತ್ವಿಕತೆಯನ್ನು ಕಲಿಯಬೇಕು. ಮತ್ತು ಅವರು ತಗ್ಗಿಸುವಿಕೆಯ [ಅವಮಾನಕರ] ಅನುಭವಗಳಲ್ಲಿಯೂ ಸಹ ಆನಂದಿಸಲು ಕಲಿಯಬೇಕು. ದೇವರ ಏರ್ಪಾಡಿನಲ್ಲಿ ಅವರ ವ್ಯವಹಾರಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಮತ್ತು ರಾಜ್ಯಕ್ಕಾಗಿ ಅವರನ್ನು ಸಿದ್ಧಪಡಿಸುತ್ತಿದೆ ಎಂಬುದಕ್ಕೆ ಅವುಗಳೇ ಸಾಕ್ಷಿಗಳಾಗಿವೆ; ಏಕೆಂದರೆ

ದೀನತೆ ಮತ್ತು ಸಾತ್ವಿಕತೆ ಇಲ್ಲದಿದ್ದರೆ ಯಾರೂ ರಾಜ್ಯಕ್ಕೆ ಯೋಗ್ಯರಾಗುವುದಿಲ್ಲ. ಅಹಂಕಾರಿಗಳು ದೇವರನ್ನು ತಾಳ್ಮೆಯಿಂದ ನಂಬಲು ಕಲಿಯಬೇಕು ಹಾಗೂ ತಮ್ಮ ಮೇಲೆ ತಾವೇ ಅವಲಂಬಿತರಾಗಿರಬಾರದು ಮತ್ತು ಸಮತೋಲನವನ್ನು ಕಾದುಕೊಳ್ಳಬೇಕು. ಆದ್ದರಿಂದ ಸ್ವಾಭಾವಿಕವಾಗಿ ಸ್ವಯಂ–ಸವಕಳಿಯುಳ್ಳವರು ವಿಶ್ವಾಸದ ಪಾಠವನ್ನು ಕಲಿಯಬೇಕು. ಆತ್ಮವಿಶ್ವಾಸದ ಮೇಲಲ್ಲ, ಸ್ವಾವಲಂಬನೆಯು ಅತ್ಯಂತ ಅಪೇಕ್ಷಿಸುವಂಥದಲ್ಲ, ಅದಕ್ಕೆ ಬದಲಾಗಿ ದೇವರಲ್ಲಿ ಮತ್ತು "ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ಅವಶ್ಯವಿರುವ ಎಲ್ಲಾ ಸಮಯಗಳಲ್ಲಿಯೂ" ಸಿಗುವ ಆತನ ವಾಗ್ದಾನದಲ್ಲಿ ಅವಲಂಬಿತರಾಗಿರಬೇಕು. ಇದರಿಂದ ನಾವು ಅಪೇಕ್ಷಿಸುವ ದೀನತೆ ಮತ್ತು ಸಾತ್ವಿಕತೆಯನ್ನು ಕಾದುಕೊಳ್ಳಲು ಸಾಧ್ಯವಾಗುತ್ತದೆ, ಆದರೂ ಅಪೋಸ್ತಲನ ಮಾತುಗಳಾದ; "ನನ್ನನ್ನು ಬಲಪಡಿಸುವ ಕ್ರಿಸ್ತನ ಮೂಲಕ ನಾನು ಎಲ್ಲವುಗಳನ್ನು ಮಾಡಬಲ್ಲೆನು" ಎಂಬುದು ನಮಗೆ ಧೈರ್ಯ ಮತ್ತು ಬಲವನ್ನು ನೀಡುತ್ತದೆ. ಪೌಲನು ಮತ್ತೊಮ್ಮೆ ಹೇಳಿದಂತೆ, "ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು!" **R 5113 : 3**

## 6 ಅಕ್ಟೋಬರ್

**"ಸಹೋದರ ಪ್ರೀತಿಯಿಂದ ಒಬ್ಬರಿಗೊಬ್ಬರು ಕರುಣಾ ವಾತ್ಸಲ್ಯವುಳ್ಳವರಾಗಿರಿ; ಸನ್ಮಾನಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ." (ರೋಮಾಪುರದವರಿಗೆ 12 : 10)**

ಸತ್ಯವು ದುರ್ಬಲ ಗುಣವುಳ್ಳವರಿಗಿಂತ ಬಲವುಳ್ಳ ಗುಣವುಳ್ಳವರೊಂದಿಗೆ ನೆಲೆಯಾಗಿರುವುದು ಎಂದು ತೋರುತ್ತದೆ, ಗುಣದಲ್ಲಿ ಬಲವುಳ್ಳವರು ತಮ್ಮ ಶರೀರದಲ್ಲಿ ಇತರರಿಗಿಂತ ಅಧಿಕವಾದ ದೃಢತೆ, ಗಡಸುತನ ಮತ್ತು ಹೋರಾಡುವ ಮನೋಭಾವವನ್ನು ಹೊಂದಿರುತ್ತಾರೆ. ದುರ್ಬಲರು ತುಂಬಾ ಬಗ್ಗುವವರೂ ಮತ್ತು "ಬಲಹೀನರೂ" ಆಗಿದ್ದು ಕರ್ತನು ಅಂಗೀಕರಿಸುವ "ಚಿಕ್ಕ ಹಿಂಡಿನ" ಸದಸ್ಯರಾಗುವುದಕ್ಕೆ ಜಯಶಾಲಿಯಾಗದೆ ಇರುತ್ತಾರೆ. ಆದ್ದರಿಂದ ಕರ್ತನು ನಮ್ಮಲ್ಲಿ ಅಂಗೀಕರಿಸುವ ಗುಣಗಳು ಮತ್ತು ನಾವು ಜಯಿಸುವ ಸ್ಥಾನಕ್ಕೆ ಬೇಕಾದ ಕೆಲವು ಅರ್ಹತೆಯುಳ್ಳ ವಿಷಯಗಳು, ಅಧಿಕ ಸಂಖ್ಯೆಯಲ್ಲಿ ಸಭೆಯಾಗಿ ಒಟ್ಟುಗೂಡಿ ಬರುವಾಗ ಈ ದುರ್ಬಲತೆಗಳು ಒಂದು ಗಂಭೀರವಾದ ಅನಾನುಕೂಲವಾಗಿರುತ್ತದೆ. ಮಣ್ಣಿನಿಂದ ಸುತ್ತುವರಿದ ವಜ್ರ ಕೂಡ ಏನನ್ನೂ ಕತ್ತರಿಸಲು ಸಾಧ್ಯವಿಲ್ಲ, ಏನನ್ನೂ ಗೀಚಲು ಸಾಧ್ಯವಿಲ್ಲ; ಆದರೆ ಒಂದು

ಡಜನ್[ಹನ್ನೆರಡು] ವಜ್ರಗಳನ್ನು ಒಟ್ಟಿಗೆ ಇರಿಸಿ, ನೀವು ಮಣ್ಣಿನ ಅಂಶವನ್ನು ತೊಡೆದುಹಾಕಿದಷ್ಟೂ ಹೆಚ್ಚು ಗಟ್ಟಿಯಾಗುವುದು, ಉಜ್ಜುವುದು ಮತ್ತು ಕತ್ತರಿಸುವ ಸಾಧ್ಯತೆ ಇರುತ್ತದೆ. ಅದೇ ರೀತಿ ಕರ್ತನ ಆಭರಣಗಳೊಂದಿಗೆ ಇರುತ್ತದೆ–ಅವರು ಹೆಚ್ಚು ಹೆಚ್ಚಾಗಿ ಸೇರಿದಷ್ಟು, ಅವರು ಅಧಿಕವಾಗಿ ಎಚ್ಚರವಾದಷ್ಟೂ ಘರ್ಷಣೆಗೆ ಅಧಿಕವಾದ ಅವಕಾಶಗಳಿರುತ್ತದೆ ಮತ್ತು ಎಲ್ಲರೂ ಪವಿತ್ರಾತ್ಮದಿಂದ ಅಂತರ್ಗವಾಗಿ ಮರೆಮಾಡುವುದು ಅತ್ಯಧಿಕ ಅವಶ್ಯವಾಗಿದೆ. ಪವಿತ್ರಾತ್ಮವು ಎಣ್ಣೆಯಂತೆ ನಯವಾದ, ತೈಲ ಲೇಪನದಂತಿದ್ದು ಘರ್ಷಣೆಯನ್ನು ತಡೆಯುತ್ತದೆ. **R 4995 : 5**

## 7 ಅಕ್ಟೋಬರ್

**"ಗುಣಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ. ಹೀಗೆ ನೀವು ದೋಷವಿಲ್ಲದವರೂ ಕೇಡುಮಾಡದವರೂ ನಿಂದಾರಹಿತರೂ ಆದ ದೇವಪುತ್ರರಾಗಿ ವಕ್ರವುಳ್ಳ ದುಷ್ಟ ಜನಾಂಗದ ಮಧ್ಯದಲ್ಲಿ ಜೀವದಾಯಕ ವಾಕ್ಯವನ್ನು ಹಿಡುಕೊಂಡು ಲೋಕದಲ್ಲಿ ಬೆಳಕುಗಳಂತೆ ಹೊಳೆಯುವವರಾಗಿದ್ದೀರಿ." (ಫಿಲಿಪ್ಪಿಯವರಿಗೆ 2 : 14,15)**

ನಮ್ಮ ಕರ್ತನಾದ ಯೇಸುವಿನ ಹೆಜ್ಜೆಯ ಜಾಡನ್ನು ಹಿಂಬಾಲಿಸಿ ಈ ಸುವಾರ್ತಾ ಯುಗದಲ್ಲಿ ನಮ್ಮ ಮುಂದಿರುವ ಶ್ರೇಷ್ಠ ಬಹುಮಾನಕ್ಕಾಗಿ ಓಟವನ್ನು ಓಡುವಾಗ ಅದರ ಮಾರ್ಗದ ಮೂಲಕ ಬರುವ ಕಷ್ಟಗಳು ಮತ್ತು ಇಕ್ಕಟ್ಟುಗಳಲ್ಲಿ ತಪ್ಪುಗಳನ್ನು ಕಂಡು ಹಿಡಿದು ನಾವು ಗುಣುಗುಟ್ಟಬಾರದು; ಕ್ರಿಸ್ತನ ಶಾಲೆಯಲ್ಲಿ ನಮ್ಮ ಬೆಳವಣಿಗೆಗೆ ಯಾವ ಅನುಭವಗಳು ಅಗತ್ಯವೆಂದು ಕರ್ತನಿಗೆ ಚೆನ್ನಾಗಿ ತಿಳಿದಿದೆ ಎಂಬುದನ್ನು ಅರಿತುಕೊಂಡು ಅದನ್ನು ಗೌರವಿಸಬೇಕು. ನಾವು ವಿವಾದಿಸುವುದಾಗಲೀ ಅಥವಾ ದೈವಿಕ ಏರ್ಪಾಡಿನಲ್ಲಿ ನಮಗೆ ಗುರುತಿಸಿರುವುದಕ್ಕಿಂತ ಬೇರೆ ಯಾವುದೇ ಮಾರ್ಗವನ್ನು ಹುಡುಕಲು ಪ್ರಯತ್ನಿಸಬಾರದು; ಮತ್ತು ಇನ್ನೂ ನಮಗೆ ಮನವರಿಕೆಯಾಗುವುದೇನೆಂದರೆ ನಾವು ವಿಧೇಯರಾಗಿರಲು ಸಾಧ್ಯವಾಗಿದ್ದು, ಆತನು ನಮಗೆ ಅನುಮತಿಸಿದ ಪಾಲುಗಳಲ್ಲಿ ಕರ್ತನ ಮೇಲೆ ನಮ್ಮ ಬಾಯಿ ತುಂಬಾ ದೂರುಗಳು ಮತ್ತು ಅತೃಪ್ತಿಯಿದ್ದರೆ, ನಾವು ಕನಿಷ್ಠ ಪಕ್ಷ ಆತನ ಏರ್ಪಾಡಿನ ಮನೋಭಾವದ ಬಗ್ಗೆ ಸಹಾನುಭೂತಿಯಿಲ್ಲದವರಾಗಿದ್ದೇವೆ ಎಂಬುದನ್ನು ಇದು ಸೂಚಿಸುತ್ತದೆ; ಮತ್ತು ಅಂತಹ ವಿಧೇಯತೆ, ಸಾಧ್ಯವಾದರೆ [ಆದರೆ ಅದು ಸಾಧ್ಯವಿಲ್ಲ], ಅದು ದೈವಿಕ ಅನುಮೋದನೆಯನ್ನೂ ಪೂರೈಸುವುದಿಲ್ಲ ಮತ್ತು ನಮಗೆ ಬಹುಮಾನವೂ ಸಿಗುವುದಿಲ್ಲ. **R 4929 : 5**

## 8 ಅಕ್ಟೋಬರ್

**"ಆದರೆ ನೀವು ಕರ್ತನಿಗೆ ಭಯಪಟ್ಟು ನಿಮ್ಮ ಪೂರ್ಣ ಹೃದಯದಿಂದ ಸತ್ಯದಲ್ಲಿ ಆತನನ್ನು ಸೇವಿಸಿರಿ. ಆತನು ನಿಮಗೋಸ್ಕರ ಎಂಥ ಮಹತ್ತಾದ ಕಾರ್ಯಗಳನ್ನು ಮಾಡಿದನೆಂದು ಆಲೋಚಿಸಿರಿ (ಪರಿಗಣಿಸಿರಿ)." (1 ಸಮುವೇಲನು 12 : 24)**

ನಮ್ಮ ದುರ್ಬಲಗೊಂಡಿರುವ ಉತ್ಸುಕತೆಗೆ ಸಹಾಯವಾಗಿ, ನಮಗೆ ದೊರೆತಿರುವ ನಮ್ಮ ಕರ್ತನ ಮಹಾ ಆಶೀರ್ವಾದಗಳನ್ನು ನಾವು ನಿರಂತರವಾಗಿ ನೆನಪಿಸಿಕೊಳ್ಳಬೇಕು. ನಾವು ಕರ್ತನ ಒಳ್ಳೆಯತನ(ಸದ್ಗುಣ)ವನ್ನು ಪ್ರಶಂಸಿಸಲು ಕಲಿಯುತ್ತಿದ್ದಂತೆ, ಅದನ್ನು ಸರಿಯಾಗಿ ಅರಿತುಕೊಂಡರೆ, ಅದರ ಪ್ರಭಾವವು ನಮ್ಮನ್ನು ಬಲಪಡಿಸುತ್ತದೆ ಮತ್ತು ನಾವು ಆತನಿಗೆ ಹೆಚ್ಚೆಚ್ಚಾಗಿ ನಿಷ್ಠಾವಂತರಾಗುವಂತೆ ಮಾಡುತ್ತದೆ. ನಾವು ಆತನ ಜನರಾದ ನಂತರ, ಆತನೊಂದಿಗೆ ಒಡಂಬಡಿಕೆಯ ಸಂಬಂಧದಲ್ಲಿ ಪ್ರವೇಶಿಸಿದ ನಂತರ, ಈ ಜೀವನದಲ್ಲಿ ಆತನ ಕೃಪೆಗಳು ಹಾಗೂ ಆಶೀರ್ವಾದಗಳನ್ನು ಪಡೆದ ನಂತರ ಮತ್ತು ಮುಂದಿನ ಜೀವನದಲ್ಲಿ ಹೊಂದಬೇಕಾದ ಆಶೀರ್ವಾದಗಳಿಗಾಗಿ ವಾಗ್ದಾನವನ್ನು ಹೊಂದಿದ ನಂತರ, ಕರ್ತನ ಸೇವೆಯನ್ನು ನಮ್ಮ ಪೂರ್ಣ ಹೃದಯದಿಂದ ಮಾಡಲು ವಿಫಲವಾದರೆ ಅದು ದುಷ್ಟತನವನ್ನು ಅರ್ಥೈಸುತ್ತದೆ [ತೋರಿಸುತ್ತದೆ]. ಒಂದು ವೇಳೆ ಆ ದುಷ್ಟತನವು ಮುಂದುವರಿದರೆ ಖಂಡಿತವಾಗಿಯೂ ಅದು ವಿನಾಶವನ್ನು ತರುತ್ತದೆ. ದೇವರಿಗೆ ನಂಬಿಗಸ್ತಿಕೆಯಾಗಿರುವುದು ನಮ್ಮ ಎಲ್ಲಾ ಆಸೆಗಳ ಪ್ರಮುಖ ಅಂಶವಾಗಿರಬೇಕು. **R 3224 : 4**

## 9 ಅಕ್ಟೋಬರ್

**"ಓ ನನ್ನ ಮನವೇ, ಕರ್ತನನ್ನು ಸ್ತುತಿಸು. ಆತನ ಉಪಕಾರಗಳಲ್ಲಿ ಒಂದನ್ನೂ ಮರೆತುಬಿಡಬೇಡ. ಆತನು ನಿನ್ನ ಅಪರಾಧಗಳನ್ನೆಲ್ಲಾ ಮನ್ನಿಸಿ ನಿನ್ನ ರೋಗಗಳನ್ನೆಲ್ಲಾ ಸ್ವಸ್ಥಮಾಡುತ್ತಾನೆ." (ಕೀರ್ತನೆಗಳು 103 : 2 , 3)**

ಪ್ರವಾದಿಯಾದ ದಾವೀದನು ಒಬ್ಬ ಯೆಹೂದ್ಯನಾಗಿ ಈ ಮಾತುಗಳನ್ನು ತನ್ನದಾಗಿಸಿಕೊಂಡಿರಬಹುದು ಮತ್ತು ನ್ಯಾಯ ಪ್ರಮಾಣದ ಒಡಂಬಡಿಕೆಯ ಅಡಿಯಲ್ಲಿ ಕರ್ತನ ದಯೆಗೆ ಸಾಕ್ಷಿಯಾಗಿ, ತನಗೆ ಆದ ದೈಹಿಕ ಗುಣಪಡಿಸುವಿಕೆ ಮತ್ತು ಆಶೀರ್ವಾದವನ್ನು ಕುರಿತು ಯೋಚಿಸಿರಬಹುದು. ಆದರೆ ಆತ್ಮೀಕ ಇಸ್ರಾಯೇಲಿಗೆ ಕೀರ್ತನೆಯಲ್ಲಿರುವ ಈ ಪ್ರವಾದನೆಯ ಅನ್ವಯವು ಇನ್ನೂ ಹೆಚ್ಚು ಆಸಕ್ತಿಯುಳ್ಳದ್ದಾಗಿದೆ. ಆತ್ಮೀಕ ಇಸ್ರಾಯೇಲ್ಯರು ನೂತನ ಸೃಷ್ಟಿಗಳಾಗಿದ್ದಾರೆ, ಮತ್ತು

ಈ ನಿಧಿಯನ್ನು ಮಣ್ಣಿನ ಪಾತ್ರೆಗಳಲ್ಲಿ (ಶರೀರದಲ್ಲಿ) ಹೊಂದಿದ್ದಾರೆ. ಇವುಗಳೊಂದಿಗೆ ಆ ನೂತನ ಮನಸ್ಸು ಆತನ ಗುಣಪಡಿಸುವಿಕೆ, ಕ್ಷಮೆ ಮತ್ತು ದೇವರೊಂದಿಗೆ ಸಾಮರಸ್ಯವನ್ನು ಗುರುತಿಸುವಂತದ್ದಾಗಿದೆ; ಮತ್ತು ದೇವರ ವಾಗ್ದಾನದ ಪ್ರಕಾರ, ಎಲ್ಲವೂ ಒಳ್ಳೆಯದಕ್ಕಾಗಿ ಒಟ್ಟಾಗಿ ಕೆಲಸ ಮಾಡತ್ತಾ ಇವೆ. ಏಕೆಂದರೆ ಅವನು ದೇವರನ್ನು ಪ್ರೀತಿಸುತ್ತಾನೆ ಮತ್ತು ದೈವಿಕ ಉದ್ದೇಶದ ಪ್ರಕಾರ ಕರೆಯಲ್ಪಟ್ಟಿದ್ದಾನೆ. ನಿರಂತರವಾಗಿ ನೂತನ ಸೃಷ್ಟಿಯು ನಮ್ಮ ಮೇಲಿನ ಆಧಾರ ವಾಕ್ಯಗಳನ್ನು ಹೇಳಲು ಕಾರಣವಾಗಿದೆ. ಅಪೋಸ್ತಲನಾದ ಪೌಲನು ಇದೇ ಆಲೋಚನೆಯನ್ನು ಕುರಿತು ಹೇಳುತ್ತಾ, ಮಹಾ ವಿಮೋಚಕನು ಅಂತಿಮವಾಗಿ ತನ್ನ ಸಭೆಯನ್ನು ತಂದೆಯ ಮುಂದೆ ದೋಷರಹಿತವಾಗಿ ಮತ್ತು ಪ್ರೀತಿಯಲ್ಲಿ ಪರಿಪೂರ್ಣವಾಗಿ ಪ್ರಸ್ತುತಪಡಿಸುತ್ತಾನೆ ಎಂದು ಘೋಷಿಸಿದನು—ಬಲಹೀನತೆಯಲ್ಲಿ ಬಿತ್ತಿ ಪೂರ್ಣಬಲದಿಂದ ಎಬ್ಬಿಸಲ್ಪಡುತ್ತಾರೆ; ಅಪಮಾನದಲ್ಲಿ ಬಿತ್ತಿ ಮಹಿಮೆಯಲ್ಲಿ ಎಬ್ಬಿಸಲ್ಪಡುತ್ತಾರೆ; ಶಾರೀರಿಕ ದೇಹದಲ್ಲಿ ಬಿತ್ತಿ ಆತ್ಮೀಕ ದೇಹದಲ್ಲಿ ಎಬ್ಬಿಸಲ್ಪಡುತ್ತಾರೆ. ನಾವು ಕ್ರಿಸ್ತನಂತೆಯೇ ಇರುತ್ತೇವೆ ಮತ್ತು ಆತನು ಇರುವ ಹಾಗೆಯೇ ಆತನನ್ನು ನೋಡುತ್ತೇವೆ ಹಾಗೂ ಆತನ ಮಹಿಮೆಯಲ್ಲಿ ಪಾಲು ಹೊಂದುತ್ತೇವೆ. **R 4981 : 4**

## 10 ಅಕ್ಟೋಬರ್

**"ಕ್ರಿಸ್ತ ಯೇಸುವಿನಲ್ಲಿ ದೇವರ ಉನ್ನತವಾದ ಕರೆಯುವಿಕೆಯ ಬಹುಮಾನವನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ." ( ಫಿಲಿಪ್ಪಿಯವರಿಗೆ 3 : 14 )**

ಯಾವುದೇ ಕ್ರೈಸ್ತನು ತನ್ನ ಗುರಿಯನ್ನು ತಲುಪಲು ದೀರ್ಘ ವಿಳಂಬವಾದದ್ದರಿಂದ ತೃಪ್ತರಾಗಿರಬಾರದು. ವಾಕ್ಯವೆಂಬ ಹಾಲನ್ನು ಸ್ವೀಕರಿಸಬೇಕು, ಅದರ ಶಕ್ತಿಯನ್ನು ನಮ್ಮದಾಗಿಸಿಕೊಳ್ಳಬೇಕು, ಆತ್ಮೀಕ ದೃಷ್ಟಿ ಮತ್ತು ಆತ್ಮೀಕ ಶಕ್ತಿಯನ್ನು ಶೀಘ್ರವಾಗಿ ಹೊಂದಿಕೊಳ್ಳಬೇಕು ಮತ್ತು ದೈವಿಕ ಸತ್ಯದ ಬಲವಾದ ಆಹಾರವು ಒಬ್ಬ ಕ್ರೈಸ್ತನ ಗುಣಲಕ್ಷಣದಲ್ಲಿ ಪೂರ್ಣ ಪಕ್ವತೆಯನ್ನು ತರಬೇಕು. ಒಮ್ಮೆ ಅದನ್ನು ಸಾಧಿಸಿದ ನಂತರ ಎದುರಾಳಿ, ಲೋಕ ಮತ್ತು ಶರೀರವನ್ನು ನಮಗೆ ವಿರುದ್ಧವಾಗಿ ಅನುಮತಿಸಿದಾಗ, ಎಂಥಾ ಶೋಧನೆಗಳು ಮತ್ತು ತೊಂದರೆಗಳು ಬಂದರೂ ನಮ್ಮ ಗುಣ ಲಕ್ಷಣದ ಪೂರ್ಣ ಪಕ್ವತೆಯನ್ನು ಬಿಡದೆ ಹಿಡಿದಿಟ್ಟುಕೊಳ್ಳಬೇಕು. ನಾವು ಗುರಿಯನ್ನು ತಲುಪಿದ ನಂತರ ತೀವ್ರವಾದ ಶೋಧನೆಗಳು ಬರುತ್ತವೆ—ದೇವರ ಸೇವೆಯನ್ನು ನಿಧಾನವಾಗಿ ಮಾಡಬೇಕೆಂಬ ಶೋಧನೆಗಳು ಬರುತ್ತದೆ; ನಮ್ಮ ಬಲಿಯ ಕೆಲವು ಭಾಗಗಳನ್ನು ತಡೆಹಿಡಿಯುವ ಶೋಧನೆಗಳು ಬರುತ್ತದೆ; ಸಹೋದರರೊಂದಿಗೆ ನಿರ್ದಯವಾಗಿ, ಪ್ರೀತಿಯಿಲ್ಲದೆ

ನಡೆದುಕೊಳ್ಳುವಂತಹ ಬೋಧನೆಗಳು ಬರುತ್ತದೆ, ಅಥವಾ ನಮ್ಮ ನೆರೆಹೊರೆಯವರೊಂದಿಗೆ ಅನ್ಯಾಯವಾಗಿ ನಡೆದುಕೊಳ್ಳುವಂತಹ ಬೋಧನೆಗಳು, ಅಥವಾ ನಮ್ಮ ಶತ್ರುಗಳೊಂದಿಗೆ ಉದಾರತೆಯಿಲ್ಲದೆ ನಡೆದುಕೊಳ್ಳುವಂತಹ ಬೋಧನೆಗಳು ಬರುತ್ತವೆ. ನಾವು ನಿತ್ಯಜೀವವನ್ನು ಬಹುಮಾನವಾಗಿ ಹೊಂದಬೇಕಾದರೆ, ನಮ್ಮ ವಿಮೋಚಕನ ರಾಜ್ಯದಲ್ಲಿ ಸಹಬಾಧ್ಯಸ್ಥರಾಗುವ ಮತ್ತು ಐಕ್ಯತೆ ಹೊಂದುವ ವಾಗ್ದಾನವನ್ನು ಬಹುಮಾನವಾಗಿ ಹೊಂದಬೇಕಾದರೆ ಇವೆಲ್ಲವನ್ನೂ ವಿರೋಧಿಸಬೇಕು. ಈ ವಿಷಯವನ್ನು ಯಾರು ಸ್ಪಷ್ಟವಾಗಿ ನೋಡುತ್ತಾರೋ ಅವರಿಗೆ ಮನವರಿಕೆಯಾಗಬೇಕಾದದ್ದು ಏನೆಂದರೆ, ಒಬ್ಬ ಕ್ರೈಸ್ತನಾಗಿ ತನ್ನ ನಿಷ್ಠೆ, ಧೈರ್ಯ, ಉತ್ಸಾಹ ಮತ್ತು ಪ್ರೀತಿಯನ್ನು ಸಂಪೂರ್ಣವಾಗಿ ಪರೀಕ್ಷಿಸುವ ಒಂದು ದೊಡ್ಡ ಪ್ರತಿಪಾದನೆಯೊಂದಿಗೆ ನೆರವೇರಿಸಬೇಕಾಗಿದೆ. ಅವನು ಭಯಭೀತನಾಗಿರದೆ ವಿಜಯಶಾಲಿಯಾಗಿ ಹೊರಬರಲು, ಎದುರಾಳಿಯ ದಾಳಿಯಿಂದ ಅವನ ಧೈರ್ಯವು ಹೊಡೆದೊಯ್ಯದ ಹಾಗೆ, ಅಗತ್ಯವಿರುವ ಪ್ರತಿಯೊಂದು ಸಮಯದಲ್ಲೂ ಸಹಾಯ ಮಾಡಲು ಕರ್ತನ ಕೃಪೆಯ ಭರವಸೆಗಳುಂಟೆಂದು ಅವನು ನೆನಪಿಟ್ಟುಕೊಳ್ಳಬೇಕು. **R 4470 : 5**

## 11 ಅಕ್ಟೋಬರ್

**"ಮಹೋನ್ನತನಾದ ಕರ್ತನನ್ನು ನಿನ್ನ ಆಶ್ರಯವಾಗಿಯೂ ನಿವಾಸಸ್ಥಾನವಾಗಿಯೂ ಮಾಡಿಕೊಂಡದ್ದರಿಂದ ಕೇಡು ನಿನ್ನನ್ನು ಮುಟ್ಟದು" ( ಕೀರ್ತನೆಗಳು 91:9, 10 )**

ಈ ಕೆಟ್ಟ ದಿನಗಳಲ್ಲಿ ನಿಜವಾಗಿ ಪ್ರತಿಷ್ಠೆಮಾಡಿದವರು ಮಾತ್ರ ತಪ್ಪಾದ ಬೋಧನೆಗಳಿಗೆ ಸಿಲುಕದಂತೆ ದೇವರು ವ್ಯವಸ್ಥೆ ಮಾಡಿದ್ದಾರೆ. ಪ್ರತಿದಿನ ನಾವು ನಮ್ಮ ತಿಳುವಳಿಕೆಯ ಕಣ್ಣುಗಳನ್ನು ಅಭಿಷೇಕಿಸಿದ ದೈವಿಕ ಅನುಗ್ರಹವನ್ನು ಕುರಿತು ಹೆಚ್ಚೆಚ್ಚಾಗಿ ಪ್ರಶಂಸಿಸಲು ಕಲಿಯುತ್ತಿದ್ದೇವೆ, ಮತ್ತು ದೈವಿಕ ವಾಕ್ಯ ಮತ್ತು ಯೋಜನೆಯ ಆಂತರಿಕ ಶಕ್ತಿ ಮತ್ತು ಸೌಂದರ್ಯವನ್ನು ನೋಡಲು ಅನುಮತಿಸಿದ್ದರಿಂದ ಹೆಚ್ಚೆಚ್ಚಾಗಿ ಪ್ರಶಂಸಿಸಲು ಕಲಿಯುತ್ತಿದ್ದೇವೆ. ಹಾಗಿರುವಾಗ ನಾವು ದೈವಿಕ ಅನುಗ್ರಹದಿಂದ ಕರ್ತನಲ್ಲಿ ಬಲಗೊಂಡಿದ್ದರೆ ಮತ್ತು ಸಾವಿರಾರು ಜನರು ತಮ್ಮ ನಂಬಿಕೆ ಮತ್ತು "ಸ್ಥಿರತೆ"ಯಿಂದ ಬೀಳುತ್ತಿರುವಾಗ, ಕರ್ತನು ನಮ್ಮನ್ನು "ಸ್ಥಿರವಾಗಿ ನಿಲ್ಲುವಂತೆ" ಮಾಡಿದ್ದರಿಂದ ನಾವು "ಭಯಭಕ್ತಿಯಿಂದ ಸಂತೋಷಪಡೋಣ". ಯಾರು ತಾವು ಬಲಶಾಲಿಗಳು ಅಂದುಕೊಂಡಿದ್ದಾರೋ ಹಾಗೂ ಕರ್ತನಿಂದ ಉತ್ತಮ ಬೆಂಬಲವನ್ನು ಹೊಂದಿದ್ದೇವೆ ಎಂದುಕೊಂಡಿದ್ದಾರೋ, ಅಂಥವರು "ಹೆಮ್ಮೆ"ಯುಳ್ಳವರಾಗಿರದೆ ಇರಲಿ ಮತ್ತು "ತಾನು ಬೀಳದಂತೆ

ಎಚ್ಚರವಹಿಸಲಿ." ಕರ್ತನಿಗಾಗಿ ನಾವು ದೀನಸ್ವಭಾವದವರು ಮತ್ತು ಉತ್ಸಾಹ ಉಳ್ಳವರಾಗಿರುವುದಕ್ಕೆ ನಾವು ಪಾಲಿಸುವ ನಿಯಮದಿಂದಲೇ ನಾವು ದೊಡ್ಡ ಆಶೀರ್ವಾದಗಳನ್ನು ಪಡೆದಿದ್ದೇವೆ ಮತ್ತು ಅದೇ ನಿಯಮಗಳನ್ನು ಕೊನೆಯವರೆಗು ಅಂದರೆ ನಾವು "ಮಾರ್ಪಡುವವರೆಗು" ಮತ್ತು ನಮ್ಮ ಬಲಹೀನತೆಯಲ್ಲಿ ಆರಂಭವಾದ ಕೃಪೆಯು ನಮ್ಮ ಮಹಿಮೆಯಲ್ಲಿ ಸ್ಥಾಪಿತವಾಗುವವರೆಗೂ ದೀನಸ್ವಭಾವವುಳ್ಳವರೂ ಮತ್ತು ಉತ್ಸಾಹವುಳ್ಳವರೂ ಆಗಿರಬೇಕು. **R 4926 : 5**

## 12 ಅಕ್ಟೋಬರ್

**"ಬುದ್ಧಿವಂತರು ಅರ್ಥಮಾಡಿಕೊಳ್ಳುವರು." ( ದಾನಿಯೇಲನು 12 : 10 )**

ಅತಿ ಪ್ರಿಯರೇ, ಅದ್ಭುತವಾದ ವಿಷಯಗಳನ್ನು ಆನಂದಿಸಲು ನಮಗೆ ಅನುಮತಿಸಲಾಗಿದೆ. ದೇವರ ಕೃಪೆಯಿಂದ ನಮಗೆ ಮಾತ್ರವಲ್ಲದೆ ನಮ್ಮ ಪಿತೃಗಳಿಗೂ ಒಮ್ಮೆ ರಹಸ್ಯವಾಗಿದ್ದ ವಿಷಯಗಳ ಅರ್ಥಗಳನ್ನು ನೋಡುವ ಭಾಗ್ಯವನ್ನು ಈಗ ನಾವು ಹೊಂದಿದ್ದೇವೆ. ಬಾಬಿಲೋನಿನಲ್ಲಿ (ಬಾಬೇಲಿನಲ್ಲಿ) ಕೆಲವರು ಧರ್ಮನಿಂದೆಗೆ ಹೋಗುತ್ತಿದ್ದರೆ, ಅದೇ ಬಾಬಿಲೋನಿನಿಂದ ಬೇರೆ ಕೆಲವರು ಆತ್ಮೀಕವಾಗಿ ಬಲಶಾಲಿಗಳಾಗಿ "ತೆರೆಯೊಳಗೆ" ನಿರೀಕ್ಷೆಯಿಂದ ಪ್ರವೇಶಿಸುತ್ತಿದ್ದಾರೆ. ಕ್ರಿಸ್ತನು ನಮ್ಮ ಮುನ್ಸೂಚಕನಾಗಿದ್ದರೆ, ನಾವು ಆತನೊಂದಿಗೆ ಅಲ್ಲಿಗೆ ಪ್ರವೇಶಿಸುತ್ತೇವೆ. ಹಾಗೆ ಮಾಡುವದು ಸಾಂಕೇತಿಕವಾಗಿ ಪ್ರತಿನಿಧಿಸಿದಂತೆ ಮೆಸ್ಸೀಯನ ಜೊತೆ ಪಾಲುಗಾರರಾಗುವದು ಎಂದರ್ಥ. ನಿಜವಾದ ಸಭೆಯು ಕ್ರಿಸ್ತನೊಂದಿಗೆ ಆತನ ರಾಜ್ಯದಲ್ಲಿ ಪಾಲುಹೊಂದುವರು. ಆಗ "ಭೂಮಿಯ ಎಲ್ಲಾ ಸಂತತಿಗಳಿಗೆ" ವಾಗ್ದಾನ ಮಾಡಲ್ಪಟ್ಟ ಆಶೀರ್ವಾದಗಳು ಬರುವವು. ಯುಗಗಳ ದೈವಿಕ ಯೋಜನೆಯ ಸ್ಥಿರತೆಯನ್ನು ನಾವು ಗ್ರಹಿಸಿದಂತೆಲ್ಲಾ, ನಮ್ಮ ಹೃದಯಗಳು ದೇವರಿಗೆ ಕೃತಜ್ಞತೆಯಿಂದ ತುಂಬಿರುತ್ತವೆ. ಹೊಸ ಯುಗವು "ಹಿಂದೆಂದೂ ಇಲ್ಲದಂತಹ ಇಕ್ಕಟ್ಟಿನ ಕಾಲ ದೊಂದಿಗೆ ಆರಂಭವಾಗುತ್ತದೆ ಎಂದು ನಾವು ನೋಡುತ್ತೇವೆ; ಮತ್ತು ಈ ಇಕ್ಕಟ್ಟಿನ ಕಾಲವನ್ನು ಬೇರೆ ರೀತಿಯಲ್ಲಿ ಪ್ರವಾದನೆಯ ಮೂಲಕ ನಮಗೆ ತಿಳಿಸುವುದೇನೆಂದರೆ–"ಅನೇಕರು ಅತ್ತಿತ್ತ ಓಡಾಡುವರು ಮತ್ತು ಜ್ಞಾನವು ಹೆಚ್ಚಾಗುವದು."; ಅಂದರೆ ಇಕ್ಕಟ್ಟಿನ ಕಾಲವಿರುತ್ತದೆ; ಆದರೆ ಅದನ್ನು "ಬುದ್ಧಿವಂತನು ಮಾತ್ರ ಅರ್ಥಮಾಡಿಕೊಳ್ಳುವನು." ಆದರೆ ಬುದ್ಧಿವಂತರು ತಮಗೆ ಬರಬೇಕಾದ ಈ ಬೋಧನೆಯನ್ನು ಯಾವ ಮೂಲದಿಂದ ಪಡೆಯುತ್ತಾರೆ? ಅವರು ಉನ್ನತದಿಂದ ಬರುವ ಜ್ಞಾನದ ಪ್ರಕಾರವೇ ಅರ್ಥಮಾಡಿಕೊಳ್ಳುತ್ತಾರೆ–ಧೀನತೆಯಿಂದ ದೈವಿಕ ವಾಕ್ಯವನ್ನು ಸ್ವೀಕರಿಸುತ್ತಾರೆ ಮತ್ತು ಹಾಗೆ ಮಾಡುವುದರಿಂದ ಆಶೀರ್ವದಿಸಲ್ಪಡುತ್ತಾರೆ. **R 5092 : 6**

## 13 ಅಕ್ಟೋಬರ್

**"ನೀವು ಬದುಕುವ ಹಾಗೆಯೂ ಕೆಟ್ಟದ್ದನ್ನಲ್ಲ, ಒಳ್ಳೆಯದನ್ನು ಹುಡುಕಿರಿ." (ಆಮೋಸನು 5 : 14)**

ದೇವರ ಸಂತರು ಆಯಲ್ಪಟ್ಟ ವರ್ಗಕ್ಕೆ ಪ್ರವೇಶಿಸುವುದು ಪ್ರಸ್ತುತ(ಈಗಿನ) ಸಮಯದ ಬಹುದೊಡ್ಡ ಭಾಗ್ಯವಾಗಿದೆ. ಈ ವರ್ಗಕ್ಕೆ ಪ್ರವೇಶಿಸಲು ನಂಬಿಕೆ ಮತ್ತು ವಿಧೇಯತೆಯು ಬಹಳ ಅವಶ್ಯವಾಗಿದೆ. ಆ ನಂಬಿಕೆಯು ಯೇಸುವನ್ನು ದೇವರ ಕುರಿಮರಿ, ಪಾಪವನ್ನು ಹೊತ್ತುಕೊಳ್ಳುವವನು ಎಂದು ಗುರುತಿಸಬೇಕು. ಅದು ಆತನನ್ನು ಮಾದರಿ ಮತ್ತು ಉದಾಹರಣೆ ಎಂದೂ ಸಹ ಗುರುತಿಸಬೇಕು. ಯಾರಿಗೆಲ್ಲಾ ಆತನ ಆತ್ಮವಿದೆಯೋ, ಆತನ ಮನಸ್ಸು ಇದೆಯೋ ಮತ್ತು ಯಾರೆಲ್ಲಾ ಈ ಪ್ರಸ್ತುತ(ಈಗಿನ) ಜೀವಿತದಲ್ಲಿ ಆತನ ಹೆಜ್ಜೆಯ ಜಾಡನ್ನು ಹಿಂಬಾಲಿಸುತ್ತಾರೋ ಅವರಿಗೆ ಬಹುಮಾನವು ದೊರೆಯುತ್ತದೆ. ಅಂಥವರು ಅಂತಿಮವಾಗಿ ಮಹಿಮೆ, ಮಾನ [ಘನ] ಮತ್ತು ನಿರ್ಲಯತ್ವವನ್ನು–ರಾಜ್ಯವನ್ನು ಪಡೆದುಕೊಳ್ಳುತ್ತಾರೆ. ಈ ಪ್ರಸ್ತುತ ಸಮಯದಲ್ಲಿ ಅವರು ಲೋಕಕ್ಕೆ ಪ್ರತಿಕೂಲವಾದವರಂತೆ ತೋರುತ್ತದೆ. ಈ ಲೋಕ, ಶರೀರ ಮತ್ತು ಎದುರಾಳಿಗೆ ವಿರುದ್ಧವಾಗಿ ಯುದ್ಧಮಾಡುವವರಾಗಿದ್ದಾರೆ. ದೇವರ ಚಿತ್ತಕ್ಕೆ ತಮ್ಮ ಚಿತ್ತವನ್ನು ಒಪ್ಪಿಸಿದ ಕಾರಣದಿಂದಾಗಿ ಮತ್ತು ಕರ್ತನ ಆತ್ಮ ಇವರಲ್ಲಿ ಇರುವ ಕಾರಣದಿಂದಾಗಿ ಇವರು ನಿಜವಾಗಿಯೂ ಎಂತಹ ಸಂತೋಷ, ಆಶೀರ್ವಾದವನ್ನು ಆನಂದಿಸುತ್ತಿದ್ದಾರೆಂದು ಈ ಲೋಕಕ್ಕೆ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಇವರಿಗೆ ಮಾತ್ರ ಸಮಾಧಾನ ಮತ್ತು ಸಂತೋಷವಿರುತ್ತದೆ. ಅವುಗಳನ್ನು ಈ ಲೋಕವು ಕೊಡಲು ಅಥವಾ ತೆಗೆದುಕೊಳ್ಳಲು ಸಾಧ್ಯವಿಲ್ಲ. ಇತರರು ಸಮಾಧಾನ ಮತ್ತು ಸಂತೋಷವನ್ನು ಹುಡುಕಿದರೂ ಅದು ಸಿಗುತ್ತಿಲ್ಲ, ಆದರೆ ದೇವರ ಸಂತರು ಅದನ್ನು ಹೊಂದಿಕೊಂಡು ಅದರಲ್ಲಿ ಆನಂದಿಸುತ್ತಾರೆ. **R 5243 : 5**

## 14 ಅಕ್ಟೋಬರ್

**"ನನ್ನ ದೇಹವನ್ನು ಅಧೀನತೆಯಲ್ಲಿಟ್ಟು ಅದನ್ನು ಸ್ವಾಧೀನಪಡಿಸಿಕೊಳ್ಳುತ್ತೇನೆ." (1 ಕೊರಿಂಥದವರಿಗೆ 9 : 27)**

ಮೇಲಿನ ವಾಕ್ಯವು ಸ್ವತಃ ನಮಗೆ ಒಂದು ದೊಡ್ಡ ಪಾಠವಾಗಿದೆ. ಅಪೋಸ್ತಲನಂತೆ ನಾವು ನಮ್ಮನ್ನು ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಗಳೆಂದು

ಗುರುತಿಸಿಕೊಳ್ಳಬೇಕು ಎಂಬ ಸತ್ಯವನ್ನು ಇದು ನಮ್ಮ ಗಮನಕ್ಕೆ ತರುತ್ತದೆ, ನಮ್ಮಲ್ಲಿ "ಹಳೆಯವುಗಳು ಅಳಿದು ಹೋದವು ಮತ್ತು ಎಲ್ಲವೂ ನೂತನವಾದವು." ಮತ್ತು ಈ ದೃಷ್ಟಿಕೋನದಿಂದ ನೂತನ ಸೃಷ್ಟಿಯು ಹಳೆಯ ಸ್ವಭಾವವನ್ನು, ಅದರ ಬಯಕೆ ಮತ್ತು ವಾತ್ಸಲ್ಯವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಬೇಕು. ಅವುಗಳನ್ನು ನಿರಂತರವಾಗಿ ಹೊಸ ಸ್ವಭಾವಕ್ಕೆ ಒಳಪಡಿಸಬೇಕು ಮತ್ತು ಉನ್ನತ ನ್ಯಾಯಪ್ರಮಾಣವು ಹಳೆಯ ಸ್ವಭಾವವನ್ನು ಕ್ರಮೇಣವಾಗಿ ಪೂರ್ಣ ಅಧೀನಕ್ಕೆ ತರಬೇಕು. ಆದರೂ ಮೊದಲ ಪುನರುತ್ಥಾನದ ಮಹಿಮೆಯುಳ್ಳ ಪೂರ್ಣಗೊಳಿಸುವಿಕೆಗಾಗಿ, ಆ ನೂತನ ಸೃಷ್ಟಿಯು, ಹೊಸ ಮನಸ್ಸು ಅಥವಾ ಹೊಸ ಚಿತ್ತವು ಆತ್ಮೀಕ ಶರೀರವನ್ನು ಧರಿಸುವುದಕ್ಕಾಗಿ ನಿರೀಕ್ಷಿಸುವವರಾಗಿದ್ದೇವೆ, ಪ್ರಾರ್ಥಿಸುವವರಾಗಿದ್ದೇವೆ. ಹೀಗೆ ದೇಹವನ್ನು ಸ್ವಾಧೀನ ಪಡಿಸುವದು ಅಂದರೆ ನಾವು ಏನು ತಿನ್ನುವದು, ಹಾಗೆಯೇ ನಾವು ಏನು ಕುಡಿಯುವದು, ನಾವು ಏನು ಉಡುವದು ಮತ್ತು ನಮ್ಮ ಪ್ರತಿಯೊಂದು ಕ್ರಿಯೆ, ಮಾತು ಮತ್ತು ಆಲೋಚನೆಯ ನಿಯಂತ್ರಣವನ್ನು ಒಳಗೊಂಡಿರುತ್ತದೆ ಮತ್ತು ಅದು ಬುದ್ಧಿವಂತಿಕೆಯ ವಿಚಾರವಾಗಿದೆ. **R 4289 : 1**

## 15 ಅಕ್ಟೋಬರ್

**"ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಸಾತ್ವಿಕತ್ವದಿಂದಲೂ ಭಯದಿಂದಲೂ ಉತ್ತರ ಹೇಳುವದಕ್ಕೆ ಯಾವಾಗಲೂ ಸಿದ್ಧವಾಗಿರಿ" (1 ಪೇತ್ರನು 3 : 15)**

ಈ ನಡವಳಿಕೆಯನ್ನು ಅನುಸರಿಸಿ ನಿರೀಕ್ಷೆಯ ಸುವಾರ್ತೆಯನ್ನು ಸಾರುವ ನಾವು, ಬೋಧಕನಾದ ಯೇಸು ಮತ್ತು ಅಪೋಸ್ತಲರನ್ನು ಹಿಂಬಾಲಿಸುತ್ತಿದ್ದೇವೆ. ಅವರಲ್ಲಿ ಅತ್ಯಧಿಕವಾದ ನಿರೀಕ್ಷೆ, ನಂಬಿಕೆ, ವಿಶ್ವಾಸ, ಪ್ರೀತಿ, ಸಂತೋಷ ಮತ್ತು ಸಮಾಧಾನದ ಈ ಮನೋಭಾವನೆ ಇದದ್ದರಿಂದಲೇ ಅವರು ಉಪದ್ರವದಲ್ಲಿಯೂ ಆನಂದಿಸಿದರು; ಮತ್ತು ಅವರು ಹಾಗೆಯೇ ಮಾಡಿದರು. ಅಪೋಸ್ತಲರು ಮುಂದೆ ಬರಲಿರುವ ಮಹಿಮೆಯಲ್ಲಿಯೂ ಪಾಲು ಹೊಂದಲು, ಈಗ ಕ್ರಿಸ್ತನ ಪಾಡುಗಳಲ್ಲಿ ಪಾಲುಗೊಳ್ಳಲು ಅರ್ಹರೆಂದು ಪರಿಗಣಿಸಲ್ಪಟ್ಟು ದೇವರನ್ನು ಸ್ತುತಿಸಿ ಹಾಡಿದರು. ಹಾಗಾದರೆ ಪ್ರಿಯ ಸಹೋದರರೇ, ಲೋಕದಲ್ಲಿ ಸಾಕಷ್ಟು ಕಣ್ಣೀರು ಮತ್ತು ಭಯಗಳಿವೆ, ಬಹಳಷ್ಟು ದುಃಖಗಳಿವೆ ಎಂಬದನ್ನು ನಾವು ಅರಿತುಕೊಳ್ಳೋಣ. ನಾವು ಹೆಚ್ಚೆಚ್ಚಾಗಿ ನಮ್ಮ ಸಮಯ, ಬಲ, ತಲಾಂತುಗಳು ಮತ್ತು ಸಂತೋಷ, ಇತರೆಗಳನ್ನು ಈ ಬಡಲೋಕದ ಮಾನಸಿಕ ಯಾತನೆಯನ್ನು ನಿವಾರಿಸಲು

ಉಪಯೋಗಿಸೋಣ. ಯೇಸುವಿನ ವಾಕ್ಯಗಳನ್ನು ಗಮನಿಸಿ: "ದೇವರು ಅವರ ಎಲ್ಲಾ ಕಣ್ಣೀರನ್ನು ಒರೆಸಿಬಿಡುವನು." "ಪರಲೋಕದಲ್ಲಿರುವ ನಿಮ್ಮ ತಂದೆಯು ಪರಿಪೂರ್ಣವಾಗಿರುವಂತೆ ನೀವು ಪರಿಪೂರ್ಣರಾಗಿರಿ." ಭವಿಷ್ಯದಲ್ಲಿ ಕ್ರಿಸ್ತನು ಮತ್ತು ಸಭೆಯ ಮೂಲಕ ದೇವರು ಮಹತ್ಕಾರ್ಯವಾಗಿ ಭೂಮಿಯಲ್ಲಿರುವವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು, ಪ್ರಸ್ತುತ(ಈಗಿನ) ಸಮಯದಲ್ಲಿ ಆ ಕೆಲವು ಕಣ್ಣೀರನ್ನು ಒರೆಸೋಣ. ಆದ್ದರಿಂದ ಈ ಲೋಕದವರು ದೇವರೊಂದಿಗೆ ಐಕ್ಯತೆ ಹೊಂದಲು, ಮರಳಿ ಬಂದು ದೇವರ ಮಾರ್ಗಕ್ಕೆ ತಿರುಗಲು ನಾವು ಭವಿಷ್ಯದಲ್ಲಿ ಸಹಾಯ ಮಾಡುತ್ತೇವೆ. ಇದು ಮಾತ್ರವಲ್ಲದೆ ಪ್ರಸ್ತುತ(ಈಗಿನ) ಕಾಲದ ನಂಬಿಗಸ್ತರು ಯೇಸುವಿನ ಹೆಜ್ಜೆಯ ಜಾಡಿನಲ್ಲಿ ಅಧಿಕ ಎಚ್ಚರದಿಂದ ನಡೆಯಲು ಮತ್ತು ಒಳ್ಳೆಯ ರೀತಿಯಲ್ಲಿ ನಡೆಯಲು ಒಬ್ಬರಿಗೊಬ್ಬರು ಪ್ರೋತ್ಸಾಹಿಸಲು ಸಹಾಯ ಮಾಡೋಣ. **R 5214 : 4**

## 16 ಅಕ್ಟೋಬರ್

**"ನೀವು ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ."  (ರೋಮಾಪುರದವರಿಗೆ 13 : 14)**

ನಮ್ಮ ಹೃದಯಗಳು ಈಗಾಗಲೇ ಕರ್ತನಿಗೆ ಪ್ರತಿಷ್ಠಿಸಲ್ಪಟ್ಟಿದೆ. ಆತನ ಪವಿತ್ರಾತ್ಮದ ಭ್ರೂಣಾಂಕುರದಿಂದ (ಗರ್ಭಧಾರಣೆಯಿಂದ)(begotten of the Holy Spirit) ನಾವು ಈಗಾಗಲೇ ಆತನ ಕುಟುಂಬಕ್ಕೆ ದತ್ತು ಮಕ್ಕಳಾಗಿ ಸ್ವೀಕರಿಸಲ್ಪಟ್ಟಿದ್ದೇವೆ. ಆದರೆ ನಮ್ಮ ಶರೀರವು ಪರಿಪೂರ್ಣವಲ್ಲ ಮತ್ತು ಅದು ಹಳೆಯ ಸ್ವಭಾವವೆಂಬ ಅನೇಕ ವಸ್ತ್ರಗಳನ್ನು ಪ್ರೀತಿಸುತ್ತಲೇ ಇದೆ, ಅದನ್ನು ನಾವು ತೆಗೆದಿಡಬೇಕು. ಕ್ರಮೇಣವಾಗಿ ನಾವು ಹೊಸ ವಸ್ತ್ರಗಳನ್ನು ಅಂದರೆ ಪರಲೋಕದ ವಸ್ತ್ರಗಳನ್ನು ಧರಿಸಬೇಕು, ಇದರ ಮೂಲಕ ಎಲ್ಲರೂ ನಮ್ಮನ್ನು ಹೊರರೀತಿಯಲ್ಲಿ ಹಾಗೂ ವೃತ್ತಿಯಲ್ಲಿ ನಾವು ದೇವರ ಮಕ್ಕಳು, ಕ್ರಿಸ್ತನ ಸಹೋದರರು, "ದೇವರ ಬಾಧ್ಯಸ್ಥರು ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸಹ–ಬಾಧ್ಯಸ್ಥರು" ಎಂದು ತಿಳಿಯಬಹುದು. ಕರ್ತನಾದ ಯೇಸುವನ್ನು ಧರಿಸಿಕೊಳ್ಳುವುದು ಒಂದು ಕ್ಷಣದ, ಒಂದು ಗಂಟೆಯ, ಒಂದು ತಿಂಗಳ ಕೆಲಸವಲ್ಲ, ಒಂದು ವರ್ಷದ ಕೆಲಸವಲ್ಲ; ಅದು ಜೀವನ ಪರ್ಯಂತ ಮಾಡುವ ಕೆಲಸವಾಗಿದೆ. ಆದರೆ ಅದನ್ನು ಪ್ರಾರಂಭಿಸದೆ ಹೋದರೆ ಅದು ಎಂದಿಗೂ ಪೂರ್ಣಗೊಳ್ಳುವುದಿಲ್ಲ. ಕ್ರಿಸ್ತನ ಗುಣಲಕ್ಷಣಗಳನ್ನು ನಾವು ಎಂದಿಗೂ ಸಂಪೂರ್ಣವಾಗಿ ಧರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ನಾವು ಖಚಿತವಾಗಿ

ಹೇಳಬಹುದು. ಆದರೂ ಕರ್ತನು ನಮ್ಮ ಪ್ರಯತ್ನವನ್ನು ನೋಡುತ್ತಾನೆ, ಹಳೆಯ ಸ್ವಭಾವವನ್ನು ತೆಗೆದು ಹಾಕಲು, ಶರೀರದ ಕ್ರಿಯೆಗಳನ್ನು ತೆಗೆದು ಹಾಕಲು ಮತ್ತು ನೀತಿಯ ವಸ್ತ್ರಗಳನ್ನು ಧರಿಸಿಕೊಂಡು ಆತನೊಂದಿಗೆ ಸೂಕ್ತವಾದ ಸಂಬಂಧ ಹೊಂದಲು, ಅದರಿಂದ ನಾವು ಲೋಕದೊಳಗಿಂದ ಪ್ರತ್ಯೇಕವಾಗಿ, ದೇವರಿಗಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಪ್ರತ್ಯೇಕವಾಗುವುದಕ್ಕೆ ಇರುವ ನಮ್ಮ ಶ್ರಮದಾಯಕ ಹೋರಾಟವನ್ನು ಕರ್ತನು ನೋಡುತ್ತಾನೆ. **R 4402 : 3**

## 17 ಅಕ್ಟೋಬರ್

**"[ಸತ್ಯವೇದದ] ಬರಹಗಳನ್ನು ಪರಿಶೋಧಿಸಿರಿ; ಅವುಗಳಲ್ಲಿ ನಿಮಗೆ ನಿತ್ಯಜೀವವು ಉಂಟೆಂದು ನೀವು ನೆನಸುತ್ತೀರಲ್ಲಾ; ಅವುಗಳೇ ನನ್ನ ವಿಷಯವಾಗಿ ಸಾಕ್ಷಿಕೊಡುವವುಗಳಾಗಿವೆ." ( ಯೋಹಾನನು 5 : 39 )**

ನಮ್ಮ ಮೇಲಿನ ವಾಕ್ಯವು ಸೂಚಿಸುವಂತೆ ಪವಿತ್ರ ಸತ್ಯವೇದದಲ್ಲಿ ಕರ್ತನು ಪ್ರಕಟಗೊಂಡಿದ್ದಾನೆ ಮತ್ತು ಆತನನ್ನು ತಿಳಿದಿರುವವರು ಅದರ ಮೂಲಕ ಆ ಮಾಹಿತಿಯನ್ನು ಕುರಿತು ಹುಡುಕಬೇಕು. ದೈವಿಕ ಏರ್ಪಾಡಿನ ಅಡಿಯಲ್ಲಿ ಅಪೋಸ್ತಲರು, ಪ್ರವಾದಿಗಳು ಮತ್ತು ಬೋಧಕರು ಅವಶ್ಯಕ ಮತ್ತು ಅನಿವಾರ್ಯವುಳ್ಳವರಾಗಿದ್ದಾರೆ. ಆದರೆ ದೇವರ ವಾಕ್ಯದ ಬದಲು ಮನುಷ್ಯನ ಯಾವುದೇ ಮಾತುಗಳನ್ನು ತೆಗೆದುಕೊಳ್ಳಬಾರದು. ಇದಕ್ಕೆ ತದ್ವಿರುದ್ಧವಾಗಿ ಅವರ ಪ್ರಸ್ತುತಿಗಳು [ಅಂದರೆ ಅವರ ಮಾತುಗಳು] ಎಷ್ಟರ ಮಟ್ಟಿಗೆ ಸತ್ಯವೇದಕ್ಕೆ ಹೊಂದಾಣಿಕೆಯಾಗಿದೆಯೋ, ಅಷ್ಟರ ಮಟ್ಟಿಗೆ ಮಾತ್ರ ಅದನ್ನು ಸ್ವೀಕರಿಸಬಹುದಾಗಿದೆ ಮತ್ತು ಈ ಹೊಂದಾಣಿಕೆಯನ್ನು ಗ್ರಹಿಸಲು ಪವಿತ್ರಾತ್ಮವು ಅವಶ್ಯವಾಗಿದೆ. ಸತ್ಯವೇದವನ್ನು ಹುಡುಕಬೇಕು, ಆದರೆ ದೇವರೊಂದಿಗೆ ಹೃದಯದ ಸಾಮರಸ್ಯ ಮತ್ತು ಕಲಿಸಬಹುದಾದ ಸ್ಥಿತಿಗೆ ಬರಬೇಕು, ಹಾಗೂ ನಂತರ ಸಂಪೂರ್ಣ ಪ್ರತಿಷ್ಠೆಯ ಮೂಲಕ ಪವಿತ್ರಾತ್ಮವನ್ನು ಪಡೆದುಕೊಂಡರೆ ಮಾತ್ರ ದೈವಿಕ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಎಂದು ನಾವು ನಿರೀಕ್ಷಿಸಬಹುದು ಮತ್ತು ಅದರಿಂದ ಯಾರೆಲ್ಲಾ ಕರ್ತನ ಮಾರ್ಗದರ್ಶನ ಹೊಂದಿಕೊಂಡು ಬೋಧಿಸಲ್ಪಡುತ್ತಾರೋ ಅವರಿಗೆ ವಾಗ್ದಾನ ಮಾಡಿರುವ ನಿತ್ಯಜೀವವನ್ನು ಹೊಂದಿಕೊಳ್ಳಬಹುದು. **R 4334 : 4**

## 18 ಅಕ್ಟೋಬರ್

**"ದೇವರು ಆತ್ಮನಾಗಿದ್ದಾನೆ; ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸತಕ್ಕದ್ದು." ( ಯೋಹಾನನು 4 : 24 )**

ನಾವು ಆರಾಧಿಸುವ ದೇವರು ಅಪರಿಮಿತ ಶಕ್ತಿಯ ಆತ್ಮೀಕ ಜೀವಿ ಎಂಬ ಚಿಂತನೆಯನ್ನು ನಾವು ನಿರಂತರವಾಗಿ ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಆತನು ನಮ್ಮ ಹೃದಯದ ಆಲೋಚನೆಗಳು ಮತ್ತು ಉದ್ದೇಶಗಳನ್ನು ತಿಳಿದುಕೊಳ್ಳಬಲ್ಲನು ಮತ್ತು ನಾವು ಸಲ್ಲಿಸಬಹುದಾದ ಯಾವುದೇ ಆರಾಧನೆ ಅಥವಾ ಸೇವೆಯನ್ನು ಆತನು ಒಪ್ಪಿಕೊಳ್ಳುವುದಕ್ಕಾಗಿ, ಅದು ಆತ್ಮದಲ್ಲಿಯೂ ಮತ್ತು ಸತ್ಯದಲ್ಲಿಯೂ ಇದ್ದು, ಪ್ರಾಮಾಣಿಕ ಹೃದಯ ಉಳ್ಳವರಾಗಿರಬೇಕು. ಆತನನ್ನು ಆರಾಧಿಸಲು ಆತನು ಅಂಥವರನ್ನು ಮಾತ್ರ ಹುಡುಕುತ್ತಾನೆ ಮತ್ತು ಈ ವರ್ಗದವರು ಪ್ರಸ್ತುತ(ಈಗಿನ) ಸಮಯದಲ್ಲಿ ಕೆಲವರು ಮಾತ್ರ ಇದ್ದಾರೆ. ಕೃಪೆಯ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ಎಲ್ಲಾ ನಂಬಿಕೆಯ ಮನೆವಾರ್ತೆಯವರನ್ನು, ಅಂದರೆ ರಾಜವಂಶಸ್ಥರಾದ ಯಾಜಕರನ್ನು ಒಟ್ಟುಗೂಡಿಸಿದ ನಂತರ ಹಾಗೂ ನಿಜಸ್ವರೂಪದ ಲೇವಿಯರಾದ ಮಹಾ ಸಮೂಹವನ್ನು ಒಟ್ಟುಗೂಡಿಸಿದ ನಂತರ ದೇವರ ದಯೆಯನ್ನು ವಿಸ್ತರಿಸುವ ಸಾಧನವಾಗಿ, ಹೊಸ ಒಡಂಬಡಿಕೆಯು ಲೋಕದ ಸಾವಿರಾರು ಜನರು ನೀತಿಯನ್ನು ಅನುಸರಿಸಲು ಒತ್ತಾಯಿಸುವದಕ್ಕೆ ಸಾಕ್ಷಿಯಾಗಿರುತ್ತದೆ–ಎಲ್ಲರೂ ದೇವರ ಪ್ರೀತಿಯನ್ನು ನೋಡುವ ಹಾಗೆಯೂ ಮತ್ತು ನೀತಿಯ ಆಶೀರ್ವಾದಗಳನ್ನು ಅನುಭವಿಸಲು ಇಚ್ಛಿಸುವವರೆಲ್ಲರೂ ಆತನೊಂದಿಗೆ ಹೃದಯದಲ್ಲಿ ಸಾಮರಸ್ಯಕ್ಕೆ ಬರಲು ಮತ್ತು ಆ ಪ್ರಮಾಣಕ್ಕೆ ಅನುಗುಣವಾಗಿ ಮರು ಸ್ಥಾಪನೆಯನ್ನು ಅನುಭವಿಸಬಹುದು ಎಂಬ ಉದ್ದೇಶದಿಂದ ಸ್ವಭಾವದಲ್ಲಿ ಮತ್ತು ಅಸ್ತಿತ್ವದಲ್ಲಿ ದೈವಿಕ ನ್ಯಾಯಪ್ರಮಾಣವನ್ನು ಮತ್ತೆ ಬರೆಯುವುದನ್ನು ನೋಡುವರು. ಆದರೂ ಕೊನೆಯಲ್ಲಿ ಲೋಕದವರೂ ಸಹ ದೇವರನ್ನು ಆತ್ಮದಿಂದಲೂ ಮತ್ತು ಸತ್ಯದಿಂದಲೂ ಆರಾಧಿಸುವವರನ್ನು ಮಾತ್ರ ಅನುಮೋದಿಸಲಾಗುತ್ತದೆ ಹಾಗೂ ಸಾವಿರ ವರ್ಷ ಯುಗದ ನಂತರ ನಿತ್ಯಜೀವ ನೀಡಲಾಗುವದು. **R 4410 : 6**

## 19 ಅಕ್ಟೋಬರ್

**"ಚದುರಿಸಿದಾಗ್ಯೂ ವೃದ್ಧಿಯಾಗುತ್ತದೆ; ಬೇಕಾದದ್ದಕ್ಕಿಂತ ಹೆಚ್ಚಿನದನ್ನು ಬಿಗಿಹಿಡಿಯುವಂಥದ್ದು ಬಡತನಕ್ಕೆ ನಡಿಸುತ್ತದೆ. ಉದಾರಿಯು ಪುಷ್ಟನಾಗುವನು; ನೀರು ಹಾಯಿಸುವವನಿಗೆ ನೀರು ದೊರೆಯುವದು." (ಜ್ಞಾನೋಕ್ತಿಗಳು 11 : 24, 25)**

ಇಲ್ಲಿ ನಮಗೆ ಸ್ಪಷ್ಟವಾದ ಪಾಠವೇನೆಂದರೆ ತನ್ನ ಜನರು ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಪ್ರೀತಿಯ ಅಗಲವನ್ನು ಬೆಳೆಸಿಕೊಳ್ಳುವುದನ್ನು ನೋಡಿ ಕರ್ತನು ಸಂತೋಷಪಡುತ್ತಾನೆ. ಕರ್ತನ ಬಗ್ಗೆ ಮತ್ತು ಆತನ ಉದಾರತೆಯ ಬಗ್ಗೆ ತಿಳಿದಿರುವ ಜ್ಞಾನಕ್ಕೆ ಅನುಗುಣವಾಗಿ ತಮ್ಮ ಉದಾರತೆಯನ್ನು ಬೆಳೆಸಿಕೊಳ್ಳುತ್ತಾರೆ. ಕರ್ತನ ಜನರು ತಮ್ಮ ಹಿಂದಿನ ಜೀವನದ ವೈಯಕ್ತಿಕ ವಿಷಯಗಳಲ್ಲಿ ಕೆಲವು ಸಮಯದಲ್ಲಿ ಸಾಧನಗಳನ್ನು [ಹಣಕಾಸು, ಇತರೆ] ಹೊಂದಿದ್ದಾಗ, ಅದರಲ್ಲಿ ಒಂದು ಭಾಗವನ್ನು ದಾನದಲ್ಲಿ, ಕರ್ತನ ಸೇವೆಯಲ್ಲಿ ಬಳಸಲು ವಿಫಲರಾದರು ಎಂಬುದಕ್ಕೆ ಸಾಕ್ಷಿಗಳು ಇದೆ ಎಂದು ಸತ್ಯವೇದದಲ್ಲಿ ಎಲ್ಲಿಯೂ ಹೇಳಿಲ್ಲ. ಆದರೆ ಮೇಲೆ ಹೇಳಿರುವ ಪ್ರೇರಿತ ವಾಕ್ಯಗಳು ಈ ಪಾಠಕ್ಕೆ ಅದೇ ಅರ್ಥ ನೀಡುತ್ತದೆ. ಎಲ್ಲಾ ಘಟನೆಗಳಲ್ಲೂ ನಾವು ಈ ಸಾಕ್ಷಿಯನ್ನು ಹೃದಯದಲ್ಲಿಡುವದು ಲಾಭದಾಯಕವಾಗಿವೆ ಮತ್ತು ಇನ್ನೂ ಮುಂದೆ ದೇವರ ಪ್ರತಿಯೊಬ್ಬ ಮಗುವೂ ದಿನದಿಂದ ದಿನಕ್ಕೆ ನಮ್ಮ ಬಳಿಗೆ ಬರುವ ಕರ್ತನ ಆಶೀರ್ವಾದದಿಂದ ಕೆಲವನ್ನು ಎಚ್ಚರಿಕೆಯಿಂದ, ಪ್ರಾರ್ಥನೆಯಿಂದ, ಪ್ರೀತಿಯಿಂದ, ಕರ್ತನು ಕೊಡುವ ಅತ್ಯುತ್ತಮ ಬುದ್ಧಿವಂತಿಕೆ ಮತ್ತು ತೀರ್ಪಿನ ಪ್ರಕಾರ ಕರ್ತನ ಸೇವೆಯಲ್ಲಿ ಬೀಜವಾಗಿ ಬಿತ್ತನೆ ಮಾಡುವುದಕ್ಕೆ ಬದಿಗಿಡಬೇಕು. **R 5927 : 2**

## 20 ಅಕ್ಟೋಬರ್

**"ನೀತಿಯ ನಿಮಿತ್ತವಾಗಿ ಹಿಂಸಿಸಲ್ಪಡುವವರು ಧನ್ಯರು; ಯಾಕೆಂದರೆ ಪರಲೋಕ ರಾಜ್ಯವು ಅವರದು." ( ಮತ್ತಾಯ 5 : 10 )**

ಈ ಮೇಲಿನ ವಾಕ್ಯವು ನಮ್ಮ ಕರ್ತನಿಂದ ಹೇಳಲ್ಪಟ್ಟ ಸಾಮಾನ್ಯ ತತ್ವವನ್ನು ಅನ್ವಯಿಸುತ್ತದೆ. ಅದೇನೆಂದರೆ "ನಾವು ಬಹು ಸಂಕಟಗಳನ್ನು ಅನುಭವಿಸಿ ದೇವರ ರಾಜ್ಯದೊಳಗೆ ಸೇರಬೇಕು...." ಇದು ದೈವಿಕ ಶಕ್ತಿಯು ನಮ್ಮನ್ನು ಸಂಕಟಗಳಿಂದ ರಕ್ಷಿಸಲು ಸಾಧ್ಯವಾಗದೆ ಇರುವುದಕ್ಕೆ ಕಾರಣವಲ್ಲ ಅಥವಾ ನಮ್ಮ ಕರ್ತನು ನಮ್ಮ ಒಳಿತಿನಲ್ಲಿ ಆಸಕ್ತಿ ತೋರಿಸುತ್ತಿಲ್ಲ ಎಂದರ್ಥವಲ್ಲ. ಆದರೆ ಇದಕ್ಕೆ ತದ್ವಿರುದ್ಧವಾಗಿ, ಸಭೆಯ ಮೇಲೆ ಇರುವ ದೈವಿಕ ಪರೀಕ್ಷೆಗಳ ಪ್ರಕಾರ ನೂತನ ಸ್ವಭಾವವು ಬೆಳವಣಿಗೆ ಹೊಂದಲು, ಬೋಧಿಸಲ್ಪಡಲು, ಸ್ಫಟಿಕದಂತಾಗಲು ಪರೀಕ್ಷೆಗಳು ಮತ್ತು ಶೋಧನೆಗಳ ಮೂಲಕ ಮಾತ್ರ ಸಾಧ್ಯವಾಗುತ್ತದೆ. ಇದು ಈ ಲೋಕದಲ್ಲಿರುವ ಶಾರೀರಿಕ ಸದಸ್ಯರ ಮೂಲಕ ಪರೀಕ್ಷೆ ಮತ್ತು ಶೋಧನೆಗಳನ್ನು ಸಹಿಸಿಕೊಂಡು ಕರ್ತನಿಗೆ ನಿಷ್ಠಾವಂತನಾಗಿರಲು ಸಾಧ್ಯವಾಗುತ್ತದೆ. ಈ ಪರೀಕ್ಷೆಗಳು ವಿವಿಧ

ಹಂತಗಳಲ್ಲಿ ಬರುತ್ತದೆ–ನಂಬಿಕೆ, ವಿಧೇಯತೆ, ಸಹಿಷ್ಣುತೆ, ಪ್ರೀತಿ ಇತ್ಯಾದಿ. ಮತ್ತು ಜಯಶಾಲಿಗಳಿಗೆ ಮಾತ್ರ ಬಹುಮಾನವನ್ನು ವಾಗ್ದಾನ ಮಾಡಲಾಗಿದೆ. ಆದರೆ ದೇವರಿಗೆ ಸ್ತೋತ್ರ, ಅವಶ್ಯವಿರುವ ಸಮಯಗಳಲ್ಲಿ ಸಹಾಯ ಮಾಡುವ ಕೃಪೆಯನ್ನು ನಮಗೆ ವಾಗ್ದಾನ ಮಾಡಲಾಗಿದೆ. ನಮ್ಮ ಹೃದಯಗಳು ನಿಷ್ಠೆಯಿಂದಿದ್ದರೆ ಮತ್ತು ನಾವು ನಮ್ಮ ಕೈಲಾದಷ್ಟು ಮಾಡಿದರೆ, ಕರ್ತನು ಉಳಿದದ್ದನ್ನು ನೋಡಿಕೊಳ್ಳುತ್ತಾನೆ. **R 4326 : 1**

## 21 ಅಕ್ಟೋಬರ್

**"ನಮ್ಮ ದೇವರಾದ ಕರ್ತನು ಸೂರ್ಯನೂ ಗುರಾಣಿಯೂ ಆಗಿದ್ದಾನೆ; ಕರ್ತನು ಕೃಪೆಯನ್ನೂ ಮಹಿಮೆಯನ್ನೂ ಕೊಡುತ್ತಾನೆ; ಸಂಪೂರ್ಣವಾಗಿ ನಡೆದುಕೊಳ್ಳುವವರಿಗೆ ಆತನು ಯಾವ ಒಳ್ಳೇದನ್ನು ಹಿಂದೆಗೆಯುವದಿಲ್ಲ." ( ಕೀರ್ತನೆಗಳು 84 : 11 )**

ನಮ್ಮ ಮೇಲಿನ ವಾಕ್ಯವು ದಾವೀದನ ವರ್ಗದವರಿಗೆ, ಪ್ರೀತಿಯ ವರ್ಗದವರಿಗೆ, ಅಭಿಷೇಕ ಹೊಂದಿದವರಿಗೆ, ಕ್ರಿಸ್ತನ ಸದಸ್ಯರಿಗೆ ಒಂದು ದೊಡ್ಡ ಪ್ರೋತ್ಸಾಹವಾಗಿದೆ. ಇವರಿಗೆ ಕರ್ತನಾದ ದೇವರು ಸೂರ್ಯನೂ ಮತ್ತು ಗುರಾಣಿಯೂ ಆಗಿದ್ದಾನೆ; ಆತನು ಇವರನ್ನು ಜ್ಞಾನೋದಯ ಪಡಿಸುವದು ಮಾತ್ರವಲ್ಲದೆ ಆತನು ಇವರಿಗೆ ಆಶೀರ್ವಾದಗಳು ದಯಪಾಲಿಸಿದ ನಂತರ, ಇದರಿಂದ ಗಾಯಗೊಳ್ಳದಂತೆ ನೋಡಿಕೊಳ್ಳುತ್ತಾನೆ. ಆತನು ಇವರನ್ನು ಎಲ್ಲಾ ಶತ್ರುಗಳಿಂದ ಕಾಪಾಡುವನು ಮತ್ತು ಯಾವುದೇ ರೀತಿಯಲ್ಲಿ ಗಾಯ ಉಂಟಾಗದಂತೆ ರಕ್ಷಿಸುವನು; ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲವುಗಳು (ಒಳ್ಳೆಯದಕ್ಕಾಗಿ) ಒಟ್ಟಾಗಿ ಸಂಭವಿಸುತ್ತವೆಂದು ನಾವು ಬಲ್ಲೆವು. ಅಂಥಹ ಆಶೀರ್ವಾದದ ಭರವಸೆಗಳೊಂದಿಗೆ, ನಾವು ಭವಿಷ್ಯವನ್ನು ಸಂತೋಷದಿಂದ ಮತ್ತು ಆತ್ಮವಿಶ್ವಾಸದಿಂದ, ದೇವರು ನಂಬಿಗಸ್ತರಿಗೆ ವಾಗ್ದಾನ ಮಾಡಿದ ಮಹಿಮೆಯುಳ್ಳ ಪ್ರತಿಫಲಗಳಲ್ಲಿ ಪಾಲು ಹೊಂದುತ್ತೇವೆಂದು ಎದುರು ನೋಡಬಹುದು. **R 4219 : 6**

## 22 ಅಕ್ಟೋಬರ್

**"ಆದರೆ ಕರುಣಾನಿಧಿಯಾದ ದೇವರು ತನ್ನ ಅಪಾರವಾದ ಪ್ರೀತಿಯ ನಿಮಿತ್ತ ನಮ್ಮನ್ನು ಪ್ರೀತಿಸಿ, ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು." (ಎಫೆಸದವರಿಗೆ 2 : 4, 5)**

ಈ ದೇವರ ಪ್ರೀತಿ ಮತ್ತು ಕ್ರಿಸ್ತನ ಪ್ರೀತಿ ಎಷ್ಟು ಅದ್ಭುತವಾಗಿದೆ! ಆ ಪ್ರೀತಿಯ ಉದ್ದ, ಅಗಲ, ಎತ್ತರ ಮತ್ತು ಆಳವನ್ನು ಅಳೆಯುವುದು ನಮಗೆ ಎಷ್ಟು ಅಸಾಧ್ಯವೆಂದು ತೋರುತ್ತದೆ! ಯಾರೆಲ್ಲಾ ಕರ್ತನನ್ನು ಅವರ ವಿಮೋಚಕನಾಗಿ ಸ್ವೀಕರಿಸಿ, ಆತನೊಂದಿಗೆ ಒಡಂಬಡಿಕೆಯ ಸಂಬಂಧದೊಳಗೆ ಪ್ರವೇಶಿಸಿ, ಅವರಲ್ಲಿದ್ದ ಸ್ವಲ್ಪವನ್ನೆಲ್ಲಾ ಆತನಿಗೆ ಕೊಟ್ಟು, ಆತನ ಏರ್ಪಾಡಿನ ಈ ಎಲ್ಲಾ ಆಶೀರ್ವಾದಗಳಲ್ಲಿ ಪಾಲ್ಗೊಳ್ಳಲು ಕರ್ತನನ್ನು ಸ್ವೀಕರಿಸಿದ ನಂತರ, ಬಲಹೀನತೆ ಅಥವಾ ವಿರೋಧತ್ವ ಅಥವಾ ಬೇರೆ ಯಾವುದೇ ಕಾರಣದಿಂದಾಗಿ ನಿರಾಶೆಗೊಂಡರೆ, ತಂದೆಯು ನಮ್ಮ ಮೇಲಿಟ್ಟಿರುವ ಮಹಾ ಪ್ರೀತಿಯನ್ನು ಮತ್ತು ಮಗನು ಆ ಪ್ರೀತಿಯನ್ನು ನಮ್ಮೊಂದಿಗೆ ಹಂಚಿಕೊಂಡಿರುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆ ಪ್ರೀತಿಯು ನಾವು ಪಾಪಿಗಳಾಗಿದ್ದಾಗ ನಮ್ಮನ್ನು ವಿಮೋಚಿಸಿದ್ದು ಮಾತ್ರವಲ್ಲದೆ ಅಂದಿನಿಂದ ಅಂತಹ ಅದ್ಭುತವಾದ ಆಶೀರ್ವಾದಗಳು ಮತ್ತು ಸವಲತ್ತುಗಳನ್ನು ನಾವು ಹೊಂದಿಕೊಳ್ಳಲು, ನಮ್ಮ ಕರ್ತನಾದ ಕ್ರಿಸ್ತನೊಂದಿಗೆ ಸಹ–ಬಾಧ್ಯಸ್ತರಾಗುವಂತೆ ಮಾಡಲು, ಈಗ ಆತನೊಂದಿಗೆ ಬಾಧೆಗಳನ್ನು ಅನುಭವಿಸಲು ಕರೆದಿದ್ದಾನೆ. **R 3553 : 5**

## 23 ಅಕ್ಟೋಬರ್

**"ಪ್ರಿಯರೇ ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ನಂಬಿಕೆಯ ಮೇಲೆ ನಿಮ್ಮನ್ನು ನೀವೇ ಕಟ್ಟಿಕೊಂಡು ಪರಿಶುದ್ಧಾತ್ಮದಲ್ಲಿ ಪ್ರಾರ್ಥಿಸಿರಿ." ( ಯೂದನು 20 )**

ಕೆಲವರಿಗೆ ಯಾವುದೇ ಸಮಯದಲ್ಲಿ ಪ್ರಾರ್ಥನೆಯು ಜಿಗುಪ್ಸೆಗೊಳಿಸುವ ಬೇಸರದ ಸಂಗತಿಯಾಗಿದೆ. ಆದರೆ ನಿಜವಾದ ಕ್ರೈಸ್ತರಿಗೆ ಪ್ರಾರ್ಥನೆಯು ದೇವರ ಮಹತ್ತರವಾದ ಆಶೀರ್ವಾದಗಳಲ್ಲಿ ಒಂದಾಗಿದೆ. ಆತನ ಕರುಣೆಯನ್ನು ಪಡೆಯಲು ಪರಲೋಕದ ಕೃಪೆಯ ಸಿಂಹಾಸನವನ್ನು ಸಮೀಪಿಸುವ ಸವಲತ್ತಾಗಿದೆ ಮತ್ತು ಅಗತ್ಯವಿರುವ ಪ್ರತಿಯೊಂದು ಸಮಯದಲ್ಲೂ ಸಹಾಯವನ್ನು ಕಂಡುಕೊಳ್ಳುವ ಕೃಪೆಯ ಒಂದು ಸವಲತ್ತಾಗಿದೆ.ಆದರೆ ಕೆಲವರು ಅದರ ಮೌಲ್ಯವನ್ನು ಹೆಚ್ಚು ಗೌರವಿಸುವುದಿಲ್ಲ... ಈ ಆಶೀರ್ವದಿಸಲ್ಪಟ್ಟ ಪ್ರಾರ್ಥನೆಯ ಸವಲತ್ತು ಕರ್ತನ ಕುಟುಂಬಕ್ಕೆ ಸೇರಿದೆ, ಏಕೆಂದರೆ ಅವರು ಆತನವರಾಗಿದ್ದಾರೆ ಮತ್ತು ಅವರ ಪರವಾಗಿ ಬೇಡಿಕೊಳ್ಳುವಾತನೂ, ಅವರ ವಿಮೋಚಕನ ಮೂಲಕ ದೇವರೊಂದಿಗೆ ನಿರಂತರವಾಗಿ ಐಕ್ಯವಾಗಿರಲು ಸಾಧ್ಯವಾಗುತ್ತದೆ. **R 4419 : 2**

## 24 ಅಕ್ಟೋಬರ್

**"ನನ್ನಲ್ಲಿ ನಂಬಿಕೆಯಿಟ್ಟ ಒಬ್ಬನಾದರೂ ಕತ್ತಲೆಯಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ." ( ಯೋಹಾನನು 12 : 46 )**

ಪವಿತ್ರಾತ್ಮವು ಸಭೆಗೆ ಬೆಳಕಾಗಿದ್ದು, ಅದರ ಮೂಲಕ ನಾವು ವಿಶೇಷವಾಗಿ ಸತ್ಯದಲ್ಲಿ ಮಾರ್ಗದರ್ಶನ ಹೊಂದುತ್ತಿದ್ದೇವೆ. ಅಪೋಸ್ತಲನಾದ ಪೇತ್ರನು ನಮಗೆ ಬಹು ದೃಢವಾದ ಪ್ರವಾದನೆಯ ವಾಕ್ಯವಿದೆ ಎಂದು ಹೇಳುತ್ತಾನೆ. ಅದು ಕತ್ತಲೆಯ ಸ್ಥಳದಲ್ಲಿ ಪ್ರಕಾಶಿಸುವ ಬೆಳಕಾಗಿರುವುದರಿಂದ ಅದಕ್ಕೆ ನಾವು ಲಕ್ಷ್ಯಕೊಡುವದು ಒಳ್ಳೇದು.[2 ಪೇತ್ರನು 1 : 19]. ನೀತಿವಂತರ ಮಾರ್ಗದಲ್ಲಿ ಬೆಳಕು "ಸಂಪೂರ್ಣವಾದ ದಿನಕ್ಕಾಗಿ ಹೆಚ್ಚೆಚ್ಚಾಗಿ ಹೊಳೆಯುತ್ತದೆ." ನಾವು ಇನ್ನೂ ಕತ್ತಲೆಯ ಸ್ಥಳದಲ್ಲಿದ್ದೇವೆ ಮತ್ತು ಕತ್ತಲೆಯು ನಮಗೆ ದಾರಿ ಮಾಡಿಕೊಡುವವರೆಗೂ ಅಂದರೆ ಆ ದಿನವು ಬರುವವರೆಗೆ ನಾವು ಕತ್ತಲೆಯ ಸ್ಥಳದಲ್ಲಿರುತ್ತೇವೆ. ಆದ್ದರಿಂದ ಪೇತ್ರನು ಹೇಳಿದಂತೆ, ಆ "ದಿನವು ಉದಯವಾಗುವವರೆಗೆ" ನಮಗೆ ಪ್ರವಾದನಾ ವಾಕ್ಯವು ಅವಶ್ಯವಾಗಿದೆ. ಆದ್ದರಿಂದ ಒಂದು ವಾಕ್ಯವು ಇನ್ನೊಂದು ವಾಕ್ಯವನ್ನು ಸ್ಪಷ್ಟಪಡಿಸಲು ಸಹಾಯ ಮಾಡುತ್ತದೆ ಎಂದು ನಾವು ನೋಡುತ್ತೇವೆ. **R 5339 : 1**

## 25 ಅಕ್ಟೋಬರ್

**"ಕರ್ತನೇ ನೀನು ಅಕ್ರಮಗಳ ಮೇಲೆ ಕಣ್ಣಿಟ್ಟರೆ [ನಮ್ಮ ಅಕ್ರಮಗಳನ್ನು ನಮ್ಮ ಮೇಲೆ ಹೊರಿಸಿದರೆ] ಓ ಕರ್ತನೇ, ಯಾರು ನಿಲ್ಲುವರು? ಆದರೆ ಜನರು ನಿನಗೆ ಭಯಪಡುವ ಹಾಗೆ ನಿನ್ನಲ್ಲಿ ಕ್ಷಮಾಪಣೆ ಉಂಟು." (ಕೀರ್ತನೆಗಳು 130 : 3, 4)**

ಆತ್ಮವು ನೋವಿನಿಂದ ತನ್ನ ದೌರ್ಬಲ್ಯಗಳ ಬಗ್ಗೆ ಅರಿತುಕೊಂಡಾಗ, ನೀತಿಯ ಪರಿಪೂರ್ಣ ಪ್ರಮಾಣವನ್ನು ಸಂಪೂರ್ಣವಾಗಿ ಅಳೆಯಲು, ಸಂಪೂರ್ಣವಾಗಿ ಅಸಮರ್ಥವಾಗಿರುವುದನ್ನು ಕುರಿತು ಜಾಗೃತಗೊಂಡಾಗ, ನಮ್ಮ ಆಧಾರ ವಾಕ್ಯದಲ್ಲಿರುವ ಭರವಸೆಗಳು ಎಷ್ಟು ಅಮೂಲ್ಯವಾಗಿವೆ! ನಮ್ಮ ಹೃದಯಗಳು ನಿಷ್ಠಾವಂತ ಮತ್ತು ಪ್ರಾಮಾಣಿಕವಾಗಿರುವಾಗ, ನಮ್ಮ ಮಣ್ಣಿನ ಪಾತ್ರೆಯಾದ ಈ ಶರೀರದಲ್ಲಿರುವ ತಪ್ಪಿಸಲಾಗದ ಕಲೆಗಳನ್ನು ನಮ್ಮ ದೇವರು ನಮ್ಮ ಮೇಲೆ ಹೊರಿಸುವುದಿಲ್ಲ ಎಂದು ತಿಳಿದುಕೊಳ್ಳುವುದು ಎಷ್ಟು ಆಶೀರ್ವಾದದಾಯಕವಾಗಿದೆ! ನಮ್ಮ ವಿಮೋಚಕನ ಬಲಿಯ ಪುಣ್ಯಗಳ(ಅರ್ಹತೆಯ)(merit) ಮೂಲಕ, ಶುದ್ಧೀಕರಣಕ್ಕಾಗಿ ನಾವು ಪ್ರತಿದಿನ ದೇವರ ಬಳಿಗೆ ಬಂದರೆ, ಆತನು ನಮ್ಮ

ವೈಫಲ್ಯಗಳನ್ನು ನಮ್ಮ ಲೆಕ್ಕಕ್ಕೆ ಹಾಕುವುದಿಲ್ಲ, ಆದರೆ ಮುಕ್ತವಾಗಿ ಕ್ಷಮಿಸಿ ನಮ್ಮ ಪಾಪಗಳನ್ನು ತೊಳೆಯಲಾಗುತ್ತದೆ. ನಮ್ಮ ರಕ್ಷಕನ ಪರಿಪೂರ್ಣ ನೀತಿಯು ನಮಗೆ ಮಹಿಮೆಯುಳ್ಳ ವಸ್ತ್ರವಾಗಿದೆ, ಇದನ್ನು ನಾವು ಧರಿಸಿಕೊಂಡು ತಗ್ಗಿಸುವಿಕೆಯೊಂದಿಗೆ ಧೈರ್ಯದಿಂದ ದೇವರ ಬಳಿ ಬರಬಹುದು–ಹೌದು! ಮಹಾ ಯೆಹೋವನ ಬಳಿಗೂ, ರಾಜಾಧಿರಾಜನ ಕರ್ತಾಧಿಕರ್ತನ ಸಮ್ಮುಖದಲ್ಲಿಯೂ ಸಹ ಬರಬಹುದು. **R 5802 : 5**

## 26 ಅಕ್ಟೋಬರ್

**"ಪರಿಶುದ್ಧ ಹಬ್ಬವನ್ನು ಆಚರಿಸುವ ರಾತ್ರಿಯಲ್ಲಿ ಹೇಗೋ ಹಾಗೆ ನಿಮಗೆ ಹಾಡುವಿರಿ." (ಯೆಶಾಯ 30 : 29)**

ಕರ್ತನು ಕೃಪೆಯುಳ್ಳವನು ಎಂದು ರುಚಿನೋಡಿದವರು, ಅವರಿಂದ ಯಾರೂ ತೆಗೆದುಕೊಳ್ಳಲಾಗದ ಸಂತೋಷವನ್ನು ಪಡೆದವರು, ಕ್ರಿಸ್ತನಲ್ಲಿ ದೇವರ ಕೃಪೆಯನ್ನು ರುಚಿ ನೋಡಿದವರು, ಸಂತೋಷಪಡುವದು ಮತ್ತು ಅಕ್ಷರಶಃ ಸಂಗೀತ ಗೀತೆಗಳನ್ನು ತಮ್ಮ ತುಟಿಗಳಿಂದ ಹಾಡುವದು ಮಾತ್ರವಲ್ಲದೆ, ಅವರು ತಮ್ಮ ಇಡೀ ಜೀವನವನ್ನು ದೇವರಿಗೆ ಸ್ತುತಿಗೀತೆಗಳು ಮತ್ತು ಕೃತಜ್ಞತೆಯನ್ನು ಸಲ್ಲಿಸುವುದರಲ್ಲಿ ಸಂತೋಷಪಡುತ್ತಾರೆ ಎಂಬುವುದು ನಿಜಾಂಶವಾಗಿದೆ. ಎಲ್ಲೆಲ್ಲಾ ಕೇಳುವ ಕಿವಿಗಳು ಕಂಡುಬರುತ್ತದೋ, ಈ ಹಾಡು ಪ್ರತಿ ಸಂದರ್ಭದಲ್ಲೂ ನೀರು ಬುಗ್ಗೆಯಂತೆ ಉಕ್ಕುತ್ತದೆ: ಆದ್ದರಿಂದ ಶುದ್ಧೀಕರಿಸಲ್ಪಟ್ಟ, ನೀತಿವಂತಿಕೆಯಾಗಲ್ಪಟ್ಟ ಮತ್ತು ಪ್ರತಿಷ್ಟಿಸಲ್ಪಟ್ಟ ಹೃದಯವು ದೇವರ ಸದ್ಗುಣವನ್ನು ಸಂಪೂರ್ಣವಾಗಿ ಪ್ರಶಂಸಿಸುತ್ತದೆ. **R 2232 : 5**

## 27 ಅಕ್ಟೋಬರ್

**"ಕರ್ತನು ತನಗಾಗಿ ಕಾಯುವವನಿಗೂ ಹುಡುಕುವ ಆತ್ಮಕ್ಕೂ ಒಳ್ಳೆಯವನಾಗಿದ್ದಾನೆ. ಮನುಷ್ಯನು ನಿರೀಕ್ಷೆಯಿಂದ ಮೌನವಾಗಿ ಕರ್ತನ ರಕ್ಷಣೆಗಾಗಿ ಕಾಯುವದು ಒಳ್ಳೆಯದು." (ಪ್ರಲಾಪಗಳು 3 : 25, 26)**

ನಾವು ಯಾವುದೇ ತಪ್ಪು ಮಾಡದೆ ಇರೋಣ. ಇದು ಪರಿಶುದ್ಧತೆಗೆಂದು ಪ್ರತ್ಯೇಕಿಸಲ್ಪಟ್ಟವರು ಬಾಧ್ಯಸ್ಥರಾಗುವರೋ ಅಥವಾ ಬಾಧ್ಯಸ್ಥರಾಗುವುದಿಲ್ಲವೋ ಎಂಬ ಪ್ರಶ್ನೆಯಾಗಿದೆ. ಸ್ವಲ್ಪದರಲ್ಲಿ ನಂಬಿಗಸ್ತನಾಗಿರುವವನು ಕರ್ತನನ್ನು ಮತ್ತು ಆತನ ಎಲ್ಲಾ ತಾತ್ಕಾಲಿಕ ಮತ್ತು ಆತ್ಮೀಕ ಆಶೀರ್ವಾದಗಳಿಗೆ ಸಂಬಂಧಿಸಿದ ಎಲ್ಲಾ ಏರ್ಪಾಡುಗಳನ್ನು ಅಂಗೀಕರಿಸುತ್ತಾನೆ.ಆತನು ನಿರಂತರವಾಗಿ ಉತ್ಸಾಹದಿಂದ

ಎದುರುನೋಡಲು ಸಿದ್ಧನಾಗಿರುತ್ತಾನೆ ಮತ್ತು ಅದಕ್ಕೆ ಅನುಗುಣವಾಗಿ ಕುರುಬನ ಆರೈಕೆಯನ್ನು ಪಡೆಯುತ್ತಾನೆ. ಮತ್ತೊಂದೆಡೆ ಯಾರೆಲ್ಲಾ "ತಕ್ಕ ಕಾಲದಲ್ಲಿ ಸಿಗುವ ಆಹಾರವನ್ನು" ಮತ್ತು ಈ ವಿಶೇಷವಾದ ಸುಗ್ಗಿಕಾಲದ ಏರ್ಪಾಡುಗಳನ್ನು ಪ್ರಶಂಸಿಸುವುದಿಲ್ಲವೋ ಅಂಥವರು ತಯಾರಾಗಿ ಇರುವುದಿಲ್ಲ; ಇವರನ್ನು ಮೋಸಗೊಳಿಸಲು ಪ್ರಯತ್ನಿಸುವಾಗ ಮತ್ತು ತಮ್ಮೆಡೆಗೆ ಸೆಳೆಯಲು ಪ್ರಯತ್ನಿಸುವಾಗ ಇವರು ಮೋಸ ಹೋಗಲು ಸಾಧ್ಯತೆ ಇದೆ. **R 4459 : 6**

## 28 ಅಕ್ಟೋಬರ್

**"ನನ್ನ ಪ್ರಾರ್ಥನೆ ನಿನ್ನ ಮುಂದೆ ಧೂಪವಾಗಿಯೂ, ನನ್ನ ಕೈ ಎತ್ತುವದು ಸಾಯಂಕಾಲದ ಬಲಿಯಾಗಿಯೂ ಸಿದ್ಧವಾಗಿರಲಿ." ( ಕೀರ್ತನೆಗಳು 141 : 2 )**

ಪ್ರತಿದಿನದ ಕೊನೆಯಲ್ಲಿ ಕರ್ತನ ಕೃಪೆಯ ಸಿಂಹಾಸನದ ಮುಂದೆ ನಮ್ಮ ದಿನದ ಲೆಕ್ಕವನ್ನು ಒಪ್ಪಿಸೋಣ, ನಮಗೆ ಸಾಧ್ಯವಾದಷ್ಟು ಅದರ ಅವಕಾಶಗಳನ್ನು ನಾವು ಬಳಸಿಕೊಂಡದ್ದು ಮತ್ತು ನಿರ್ಲಕ್ಷಿಸಿದ್ದು, ಅದರ ವಿಜಯಗಳು ಅಥವಾ ಅದರ ಸೋಲುಗಳು, ಅದರ ಸ್ವಯಂ–ಬಲಿಗಳು ಮತ್ತು ಅದರ ಸ್ವಾರ್ಥತೆಗಳ ಲೆಕ್ಕವನ್ನು ಒಪ್ಪಿಸೋಣ–ಅಗತ್ಯವಿರುವ ಸಮಯದಲ್ಲಿ ಸಹಾಯ ಮಾಡಿದ ಕೃಪೆಗೆ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಎಲ್ಲಾ ತಪ್ಪುಗಳಿಗಾಗಿ ಮತ್ತು ಸೋಲುಗಳಿಗಾಗಿ ಕ್ಷಮೆಯಾಚಿಸುತ್ತಾ, ನಮ್ಮ ರಕ್ಷಕನ ಹೆಸರಿನಲ್ಲಿ ಮತ್ತು ಬಲಿಯ ಅರ್ಹತೆಯಲ್ಲಿ ಕ್ಷಮಾಪಣೆಯನ್ನು ಹಂಬಲಿಸುತ್ತಾ, ಮರುದಿನ ಕರ್ತನ ಕೃಪೆಯಿಂದ ಇನ್ನೂ ಹೆಚ್ಚಾದ ನಂಬಿಗಸ್ತಿಕೆ ಮತ್ತು ಉತ್ಸಾಹವನ್ನು ವ್ಯಕ್ತಪಡಿಸುತ್ತೇವೆಂದು ವಾಗ್ದಾನ ಮಾಡೋಣ. **R 2240 : 4**

## 29 ಅಕ್ಟೋಬರ್

**"ಆಗ ಜಕ್ಕಾಯನು ನಿಂತುಕೊಂಡು ಕರ್ತನಿಗೆ–ಕರ್ತನೇ, ಇಗೋ, ನನ್ನ ಸೊತ್ತಿನಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ; ನಾನು ಯಾರಿಂದಲಾದರೂ ಸುಳ್ಳಾಗಿ ದೂರು ಹೇಳಿ ಏನಾದರೂ ತಕ್ಕೊಂಡಿದ್ದರೆ ಅವನಿಗೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ ಅಂದನು." (ಲೂಕನು 19 : 8)**

ಇಂದು ಅನೇಕರು ಒಂದು ತಪ್ಪನ್ನು ಮಾಡುತ್ತಾರೆ ಎಂದು ನಾವು ನಂಬುತ್ತೇವೆ. ಅಂದರೆ ಅವರು ಜಕ್ಕಾಯನ ಮಾರ್ಗವನ್ನು ಹೆಚ್ಚಾಗಿ

ಅನುಸರಿಸುವುದಿಲ್ಲ–ಅಂದರೆ ಅವರು ನಿಜವಾಗಿಯೂ ನ್ಯಾಯಸಮ್ಮತವಾದ ಇನ್ನೊಬ್ಬರಿಗೆ ಸೇರಿದ ಯಾವುದನ್ನಾದರೂ ಹಿಡಿದಿಟ್ಟುಕೊಳ್ಳುತ್ತಾರೆ; ಮತ್ತು ಎರಡನೆಯದಾಗಿ, ಅವರು ತಮ್ಮ ಅಧಿಕವಾದ ಸಂಪತ್ತಾದ ಹಣ ಅಥವಾ ಆಸ್ತಿ ಅಥವಾ ಸಮಯ ಅಥವಾ ಪ್ರತಿಭೆಯನ್ನು(ತಲಾಂತನ್ನು) ಕರ್ತನಿಗೆ ಪ್ರತಿಷ್ಠಿಸುವುದಿಲ್ಲ. ಜಕ್ಕಾಯನು ಒಬ್ಬ ಯೆಹೂದ್ಯನು ಮತ್ತು ನ್ಯಾಯಪ್ರಮಾಣದ ಅಡಿಯಲ್ಲಿ ಅವನ ವಾರ್ಷಿಕ ಆದಾಯದಲ್ಲಿ ಹತ್ತನೇ ಒಂದು ಭಾಗವು ಧಾರ್ಮಿಕ ವಿಷಯಗಳಿಗೆ ಕೊಡುವದು ಕರ್ತವ್ಯವಾಗಿತ್ತು. ಆದರೆ ಅವನು ಇದನ್ನು ಮೀರಿ, ಅವನ ವಾರ್ಷಿಕ ಆದಾಯದ ಅರ್ಧದಷ್ಟು ಮಾತ್ರವಲ್ಲ, ಅವನು ಹೊಂದಿದ್ದ ಎಲ್ಲಾ ಹಣ ಮತ್ತು ಆಸ್ತಿ ಹಾಗೂ ಅವನಲ್ಲಿದ್ದ ವಸ್ತುಗಳಲ್ಲಿ ಅರ್ಧ ಭಾಗದಷ್ಟು ನೀಡುತ್ತಾನೆ. ಕೆಲವರು ನಮ್ಮನ್ನು ಹೀಗೆ ವಿಚಾರಿಸಿದ್ದಾರೆ, ಒಬ್ಬ ಕ್ರೈಸ್ತನ ವಿವೇಕಪೂರ್ವಕವಾದ ಕರ್ತವ್ಯವೇನು? ನಮ್ಮ ವಿವೇಕಪೂರ್ವಕವಾದ ಸೇವೆಯು ಖಂಡಿತವಾಗಿಯೂ ಯೆಹೂದ್ಯರು ಕೊಟ್ಟಂತಹ ಹತ್ತನೇ ಒಂದು ಭಾಗಕ್ಕಿಂತ ಹೆಚ್ಚಾಗಿರಬೇಕು ಎಂದು ನಾವು ಉತ್ತರಿಸುತ್ತೇವೆ. ನಮ್ಮ ತಿಳಿವಳಿಕೆಯ ಪ್ರಕಾರ ಜಕ್ಕಾಯನು ಸಂಪೂರ್ಣ ತ್ಯಾಗ–ಬಲಿಯನ್ನು ಸಲ್ಲಿಸಿರಲಿಲ್ಲ ಎಂದು ನೋಡುತ್ತೇವೆ. **R 3849:4**

## 30 ಅಕ್ಟೋಬರ್

**"ಚದರಿಹೋದವರು ಎಲ್ಲಾ ಕಡೆಗೂ ಹೋಗಿ ವಾಕ್ಯವನ್ನು ಸಾರುತ್ತಿದ್ದರು." (ಅಪೋಸ್ತಲರ ಕೃತ್ಯಗಳು 8 : 4)**

ಪ್ರಿಯ ಸಹೋದರರೇ, ಆದಿ ಸಭೆಯೊಂದಿಗೆ ಇದ್ದು ಮಾರ್ಗದರ್ಶನ ನೀಡಿದವನು ನಮ್ಮೊಂದಿಗೆ ಅದೇ ಶಕ್ತಿಯೊಂದಿಗೆ ಇದ್ದಾನೆ. ಆ ಸುಗ್ಗಿಯ ಸಮಯದಲ್ಲಿ ಮಾರ್ಗದರ್ಶನ ನೀಡಿದವನು, ಈಗ ನಮಗೆ ಮಾರ್ಗದರ್ಶನ ನೀಡುತ್ತಿದ್ದಾನೆ ಮತ್ತು ತನ್ನ ಮಾರ್ಗದರ್ಶನದ ಕೆಲಸವನ್ನು ಕೊನೆಯವರೆಗೂ ಮಾಡುತ್ತಾನೆ. ಜುದಾಸ್, ಅಲೆಕ್ಸಾಂಡರ್ ದಿ ಕಾಪರ್‌ಸ್ಮಿತ್, ಜೇನ್ಸ್ ಮತ್ತು ಜಾಂಬ್ರೆಸ್ ಅವರ ಗುಣಲಕ್ಷಣಗಳಿಗೆ ಹೋಲುವ ಅನುಭವವನ್ನು ನಾವು ಹೊಂದಬಹುದು. ಆದರೆ ಕರ್ತನು ಈ ಎಲ್ಲಾ ಕೆಲಸಗಳನ್ನು ನಮ್ಮ ಒಳ್ಳೆಯದಕ್ಕಾಗಿ ಮತ್ತು ಅದರ ಮೂಲಕ ತನ್ನ ಕೃಪೆಯ ವಾಗ್ದಾನಗಳನ್ನು ಪೂರೈಸಲು ಶಕ್ತನಾಗಿದ್ದಾನೆ. ನಮಗೆ ಬೇರೆ ನೆಲೆಯಲ್ಲಿ ಹಿಂಸೆ, ಸೆರೆವಾಸ ಅಥವಾ ಅದಕ್ಕೆ ಅನುಗುಣವಾದ ವಿಷಯಗಳನ್ನು ಆತನು ಅನುಮತಿಸಬಹುದು, ಆದರೆ ನಮ್ಮ ಕರ್ತನ ಪ್ರಸನ್ನತೆ ಮತ್ತು ಶಕ್ತಿಯನ್ನು ನಾವು ಎಂದಿಗೂ ಅನುಮಾನಿಸಬಾರದು. ಮುಂದೆ ಬರುವ ಮಹಿಮೆಯುಳ್ಳ ಫಲಿತಾಂಶಗಳು, ಈಗಿನ ಶೋಧನೆಗಳು ಮತ್ತು ಸಂಕಷ್ಟಗಳನ್ನು

ಸರಿದೂಗಿಸುವುದಕ್ಕಿಂತ ಬಹಳ ಅಧಿಕವಾಗಿರುತ್ತದೆ. "ಯಾಕೆಂದರೆ ನನಗೆ ಏನೇನು ಸಂಭವಿಸಿದರೂ ದೇವರ ಮೇಲಣ ನನ್ನ ನಂಬಿಕೆಯು ಆತನಲ್ಲಿ ದೃಢವಾದ ಭರವಸವುಳ್ಳವನಾಗಿರುವಂತೆ ಮಾಡುವುದು." **R 4337 : 5**

## 31 ಅಕ್ಟೋಬರ್

**"ನನ್ನ ಬಳಿಗೆ ತಿರುಗಿಕೊಳ್ಳಿರಿ; ಆಗ ನಾನು ನಿಮ್ಮ ಬಳಿಗೆ ತಿರುಗುವೆನೆಂದು ಸೈನ್ಯಗಳ ಕರ್ತನು ಹೇಳುತ್ತಾನೆ." ( ಮಲಾಕಿಯ 3 : 7 )**

ಸತ್ಯವೇದದ ಎಲ್ಲಾ ಕಡೆಗಳಲ್ಲಿ ಇರುವ ಆಲೋಚನೆ ಏನೆಂದರೆ ದೇವರ ದಯೆಯು ಶಾಶ್ವತವಾದದ್ದು–ಅಂದರೆ "ಓಲಂ" ಅಥವಾ ಪೂರ್ಣಗೊಳ್ಳುವವರೆಗೆ ಇರುತ್ತದೆ. ಪ್ರಸ್ತುತ(ಈಗಿನ) ಸಮಯದಲ್ಲಿ ಈ ಲೋಕದ ಮನುಕುಲದಲ್ಲಿ ಕೆಲವರು ಮಾತ್ರ ದೇವರ ದಯೆಯನ್ನು ಪಡೆದು ನೀತಿವಂತರಾಗಿ ದೈವಿಕ ದಯೆ ಮತ್ತು ಕರುಣೆಗೆ ಪಾತ್ರರಾಗಿದ್ದಾರೆ. ಕರ್ತನು ಇವರೊಂದಿಗೆ ವ್ಯವಹರಿಸುವಾಗ ಬಹಳ ಕೃಪೆಯುಳ್ಳವನಾಗಿದ್ದಾನೆ, ಪಾಪದ ಮಾರ್ಗಗಳಿಂದ ಹಿಂದಿರುಗುವವರೆಲ್ಲರಿಗೂ ಆತನು ಹಾಗೆಯೇ ಇರುತ್ತಾನೆ ಮತ್ತು ಪ್ರೀತಿಯ, ಕ್ಷಮೆಯ ಮನೋಭಾವವಿಲ್ಲದವರೊಂದಿಗೂ ಸಹ ಆತನು ತಾಳ್ಮೆಯಿಂದಿರುತ್ತಾನೆ ಮತ್ತು ಆತನ ಕೃಪೆಯುಳ್ಳ ಯೋಜನೆಗಳು ಮತ್ತು ಏರ್ಪಾಡುಗಳಲ್ಲಿ ಅವರು ಸೇರಿಕೊಳ್ಳಲು ಅವರನ್ನು ಮನವಿ ಮಾಡಲು ಅವರ ಬಳಿಗೆ ಬರುತ್ತಾನೆ. ಪ್ರಸ್ತುತ(ಈಗಿನ) ಕಾಲದ ವಿಶ್ವಾಸಿಗಳಿಗೆ ದಯಪಾಲಿಸಿದ ಈ ಪ್ರೀತಿಯ–ದಯೆಯು ಕರ್ತನ ಆತ್ಮವನ್ನು ಸೂಚಿಸುತ್ತದೆ. ಭವಿಷ್ಯದಲ್ಲಿ ಆತನ ವಾಗ್ದಾನವು ನೆರವೇರುತ್ತದೆ ಎಂದು ನಮಗೆ ಒಂದು ಭರವಸೆಯಿದೆ. ಅಂದರೆ ತಕ್ಕ ಕಾಲದಲ್ಲಿ ಭೂಮಿಯ ಎಲ್ಲಾ ಜನರನ್ನು ಆತನ ಒಳ್ಳೆಯತನದ ಜ್ಞಾನಕ್ಕೆ ತರಲಾಗುವುದು, ಯಾರನ್ನು ಸರಿಯಾಗಿ ತಿಳಿದುಕೊಳ್ಳಬೇಕೋ ಅವರನ್ನು ಅಂದರೆ ದೇವರನ್ನು ತಿಳಿದುಕೊಂಡು ಪ್ರಶಂಸಿಸಿದರೆ ಅವರಿಗೆ ನಿತ್ಯಜೀವ ಉಂಟಾಗುತ್ತದೆ. **R 3836 : 4**

## 1 ನವೆಂಬರ್

**"ಪರ್ವತಗಳು ಹೊರಟುಹೋಗುವವು ಮತ್ತು ಗುಡ್ಡಗಳು ತೆಗೆದುಹಾಕಲ್ಪಡುವವು; ಆದರೆ ನನ್ನ ದಯೆಯು ನಿನ್ನನ್ನು ಬಿಟ್ಟುಹೋಗದು ಇಲ್ಲವೆ ನನ್ನ ಸಮಾಧಾನದ ಒಡಂಬಡಿಕೆಯು ತೆಗೆಯಲ್ಪಡುವುದಿಲ್ಲ ಎಂದು ನಿನ್ನ ಮೇಲೆ ಕರುಣೆಯನ್ನು ಇಟ್ಟಿರುವ ಕರ್ತನು ಹೇಳುತ್ತಾನೆ." (ಯೆಶಾಯ 54 : 10)**

ಕರ್ತನು ಎಷ್ಟು ಅದ್ಭುತವಾಗಿ ತನ್ನ ಜನರಿಗೆ ಮಾರ್ಗದರ್ಶನ ನೀಡಿದ್ದಾನೆ! ಆತನ ಮಕ್ಕಳನ್ನು ಎಂದೆಂದಿಗೂ ಆರೈಕೆ ಮಾಡುತ್ತಾನೆ. ಆತನು ಅವರಿಗೆ ಒಳ್ಳೆಯದನ್ನು ಮಾಡುವ ಯಾವ ವಿಷಯವನ್ನೂ ತಡೆಹಿಡಿದಿಲ್ಲ ಮತ್ತು ಆತನಿಗೆ ವಿಧೇಯರಾದರೆ ಅವರಿಗೆ ಎಲ್ಲವನ್ನು ಒಟ್ಟಾಗಿ ಒಳ್ಳೆಯ ಕೆಲಸವಾಗುವಂತೆ ಮಾಡುತ್ತಾನೆ. ಯಾರೆಲ್ಲಾ ಅನೇಕ ವರ್ಷಗಳಿಂದ ಸೂರ್ಯನ ಬೆಳಕು ಮತ್ತು ನೆರಳು, ನಗು ಮತ್ತು ಕಣ್ಣೀರು, ಶಾಂತವಾದ ನೀರು ಮತ್ತು ಚಂಡಮಾರುತ ಹಾಗೂ ಬಿರುಗಾಳಿ ಬಂದರೂ ಕರ್ತನನ್ನು ನಂಬಿದವರು ಆತನ ಅಮೂಲ್ಯವಾದ ವಾಗ್ದಾನಗಳನ್ನು ಮತ್ತು ಆತನ ನಂಬಿಗಸ್ತಿಕೆಯನ್ನು ಕರ್ತನು ಸಾಬೀತುಪಡಿಸಲಿಲ್ಲವೆ! ಖಂಡಿತವಾಗಿಯೂ "ನಿಮ್ಮ ದೇವರಾದ ಕರ್ತನು ನಿಮಗೋಸ್ಕರ ಹೇಳಿದ ಎಲ್ಲಾ ಒಳ್ಳೇ ಮಾತುಗಳಲ್ಲಿ ಒಂದು ಮಾತಾದರೂ ತಪ್ಪಲಿಲ್ಲ"! (ಯೆಹೋಶುವನು 23 : 14) ನಮ್ಮ ಜೀವನದ ಅತ್ಯಂತ ಚಿಕ್ಕ ಮತ್ತು ದೊಡ್ಡ ವ್ಯವಹಾರಗಳಲ್ಲಿಯೂ ಸದಾ ಆತನು ನಮ್ಮ ಹಿತಾಸಕ್ತಿಗಳನ್ನು ಕುರಿತು ಗಮನಿಸುತ್ತಾನೆ. ಪ್ರತಿಯೊಂದು ಮೋಡವು ಚಿನ್ನದ ಪದರವನ್ನು ಹೊಂದಿದೆ ! (ಅಂದರೆ ನೀವು ಎಂದಿಗೂ ಹತಾಶರಾಗಬಾರದು ಏಕೆಂದರೆ ಕಷ್ಟದ ಸಮಯಗಳು ಯಾವಾಗಲೂ ಉತ್ತಮ ದಿನಗಳಿಗೆ ಕಾರಣವಾಗುತ್ತದೆ.) **R 5538 : 3**

## 2 ನವೆಂಬರ್

**"ಭೂಲೋಕವೆಲ್ಲಾ ಶಾಂತವಾಗಿ ವಿಶ್ರಾಂತಿಗೊಂಡಿದೆ. ಅವರು ಉತ್ಸಾಹ ಧ್ವನಿಯನ್ನು ಎತ್ತುತ್ತಾರೆ." (ಯೆಶಾಯ 14 : 7)**

ಅಚಲವಾದ ರಾಜ್ಯದ ನಿರೀಕ್ಷೆಗಾಗಿ ದೇವರಿಗೆ ಕೃತಜ್ಞತೆಗಳು, ಅವರ ರಾಜನು ನೀತಿಗನುಸಾರವಾಗಿ ಆಳುವನು ಮತ್ತು ಆತನ ಅಧಿಪತಿಗಳು ನ್ಯಾಯದಿಂದ ದೊರೆತನ ಮಾಡುವರು. (ಯೆಶಾಯ 32 : 1 ; ಜ್ಞಾನೋಕ್ತಿಗಳು 8 : 15) ಮತ್ತು ಇವರ ಆಳ್ವಿಕೆಯ ಅಡಿಯಲ್ಲಿ ಭೂಲೋಕವೆಲ್ಲಾ ಶಾಂತವಾಗಿ ವಿಶ್ರಾಂತಿಗೊಳ್ಳುವದು (ಯೆಶಾಯ 14 : 7) . ಪ್ರವಾದಿಯು ಹೇಳುವಂತೆ ಈ ರಾಜ್ಯವು ಒಮ್ಮೆ ಸ್ಥಾಪಿಸಲ್ಪಟ್ಟು ಅದರ ಆಶೀರ್ವಾದಗಳು ಈ ಲೋಕದಲ್ಲಿ ಸಕಾರಗೊಳ್ಳಲು ಪ್ರಾರಂಭವಾದಾಗ ಇದು ನಿಜವಾಗಿಯೂ "ಎಲ್ಲಾ ಜನಾಂಗಗಳ ಬಯಕೆ"ಯಂತೆ ಇರುವುದನ್ನು ಲೋಕವು ಗ್ರಹಿಸುವುದು. ಹೌದು, ನಿಜವಾಗಿಯೂ "ಎಲ್ಲಾ ಜನಾಂಗಗಳ ಬಯಕೆಗಳು ಬರಲಿವೆ."– ಇದರೊಂದಿಗೆ ಜೀವನದ ಆಶೀರ್ವಾದಗಳು, ಆರೋಗ್ಯ, ಸಮಾಧಾನ, ಸಮೃದ್ಧಿ ಮತ್ತು ಉತ್ತಮ ಆಳ್ವಿಕೆಗಳೂ ಸಹ ಇರುವುದು. **R 3053 : 4**

## 3 ನವೆಂಬರ್

**"ಸಂಜೆಯಲ್ಲಿ ಮುಂಜಾನೆಯಲ್ಲಿ ಮಧ್ಯಾಹ್ನದಲ್ಲಿ ಪ್ರಾರ್ಥಿಸಿ ಕೂಗುವೆನು; ಆತನು ನನ್ನ ಸ್ವರವನ್ನು ಕೇಳುವನು." (ಕೀರ್ತನೆಗಳು 55 : 17)**

ನಿಸ್ಸಂದೇಹವಾಗಿ ಈ ಲೋಕದ ಅತ್ಯುತ್ತಮ ಪುರುಷರು ಮತ್ತು ಮಹಿಳೆಯರು ಯಾರೆಂದರೆ, ದಾನಿಯೇಲನಂತೆ ಪ್ರಾರ್ಥನೆಮಾಡುವವರು, ನಿಯಮಿತವಾಗಿ ಮೊಣಕಾಲೂರಿ ಪ್ರಾರ್ಥಿಸುವವರಾಗಿದ್ದಾರೆ (ದಾನಿಯೇಲನು 6:10). ನಿಸ್ಸಂದೇಹವಾಗಿ ಈ ರೀತಿಯ ಲೌಕಿಕ ವ್ಯವಹಾರಗಳಿಂದ ತೆಗೆದುಕೊಳ್ಳಲ್ಪಟ್ಟ ಕ್ಷಣಗಳು (ಕರ್ತನಿಗಾಗಿ) ಚೆನ್ನಾಗಿ ಖರ್ಚು ಮಾಡುವ ಆರಾಧಕನಿಗೆ ಆತನು ಮಾಡುವ ಎಲ್ಲಾ ವಿಷಯದಲ್ಲಿ ಅಧಿಕ ಆಶೀರ್ವಾದವನ್ನು ತರುತ್ತದೆ. ನಿಸ್ಸಂದೇಹವಾಗಿ ಪ್ರಾರ್ಥನೆಯನ್ನು ನಿರ್ಲಕ್ಷಿಸಿ ಪ್ರತಿಷ್ಠಿತ ಜೀವನವನ್ನು ನಡೆಸುವುದು ಅಸಾಧ್ಯ.... ಒಬ್ಬ ಕ್ರೈಸ್ತನಿಗೆ ಈ ಸವಲತ್ತು ಇನ್ನೂ ಅಧಿಕವಾಗಿದ್ದು ಆತನಿಗೆ ಮನವರಿಕೆಯಾಗುವುದೇನೆಂದರೆ "ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನು ನಮಗೆ ಪಕ್ಷವಾದಿಯಾಗಿದ್ದಾನೆ," ಎಲ್ಲಾ ನಾಮದಲ್ಲಿಯೂ ಮೇಲಾದ ನಾಮದಲ್ಲಿ ನಾವು ಕರುಣೆಯನ್ನು ಹೊಂದುವಂತೆಯೂ, ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾ ಸಿಂಹಾಸನದ ಬಳಿಗೆ ಹೋಗಬಹುದು. **R 4875 : 4**

## 4 ನವೆಂಬರ್

**"ಇಗೋ ಮದಲಿಂಗನು ಬರುತ್ತಾನೆ" (ಮತ್ತಾಯನು 25 : 6)**

ಸತ್ಯವನ್ನು ಕುರಿತ ಈ ಪ್ರಕಟನೆಯು ನಿಜಕ್ಕೂ ಒಂದು ಪರೀಕ್ಷೆಯಾಗಿದೆ. ಕರ್ತನ ಕನ್ಯೆಯರೆಂದು ಹೇಳಿಕೊಳ್ಳುವವರು ತಮ್ಮ ಪಾತ್ರೆಗಳಲ್ಲಿ ಎಣ್ಣೆಯನ್ನು ಹೊಂದಿದ್ದಾರೆಯೇ, ಮದಲಿಂಗನ ವಿಷಯದಲ್ಲಿ ಸರಿಯಾದ ಮನಸ್ಥಿತಿಯುಳ್ಳ ತಗ್ಗಿಸುವಿಕೆ, ತಾಳ್ಮೆ, ಪ್ರೀತಿ, ಭಕ್ತಿ ಮತ್ತು ಆಸಕ್ತಿಯುಳ್ಳವರಾಗಿದ್ದಾರೆಯೇ ಎಂಬ ಪರೀಕ್ಷೆಯಾಗಿದೆ. ಅಂಥವರನ್ನು ಮಾತ್ರ ಮದಲಿಂಗನು ಬಯಸುತ್ತಾನೆ ಅಥವಾ ಒಳಗೆ ಪ್ರವೇಶಿಸಲು ಅನುಮತಿಸುತ್ತಾನೆ. ಈ ದೃಷ್ಟಿಕೋನದಿಂದ ಗಮನಿಸಿದಾಗ, ಪ್ರಸ್ತುತ(ಈಗಿನ) ಸಮಯದಲ್ಲಿ ನಮ್ಮ ಕೆಲಸವು ಮದಲಿಂಗನ ಪ್ರಸನ್ನತೆಯನ್ನು ಕುರಿತು ಪ್ರಚುರಪಡಿಸುವದು ಮಾತ್ರವಲ್ಲದೆ, ತಮ್ಮ ಪಾತ್ರೆಗಳಲ್ಲಿ ತೈಲವನ್ನು ಹೊಂದಿರುವವರಿಗೆ ತಮ್ಮ ದೀಪಗಳನ್ನು ಸರಿಪಡಿಸುವುದಕ್ಕೆ ಸಹಾಯ

ಮಾಡಬೇಕಾಗಿದೆ. ತೈಲವನ್ನು ಕೊಂಡುಕೊಳ್ಳಲು ಈಗಾಗಲೇ ತಡವಾಗಿಲ್ಲದಿದ್ದರೆ ಅದು ಶೀಘ್ರದಲ್ಲೇ ತಡವಾಗುತ್ತದೆ. ಆದ್ದರಿಂದ ಕರ್ತನ ಆತ್ಮವನ್ನು ಹೊಂದಿರುವವರ ಮೇಲೆ ನಮ್ಮ ವಿಶೇಷ ಕಾಳಜಿ ಇರಬೇಕಾಗಿದೆ. ಆದರೆ ಇನ್ನೂ ನಿದ್ದೆ ಅಥವಾ ಅರೆ–ನಿದ್ರಾವಸ್ಥೆಯಲ್ಲಿರುವವರಿಗೆ ಸಂಬಂಧಿಸಿದಂತೆ, ಕರ್ತನ ಪ್ರಸನ್ನತೆಯನ್ನು ಕುರಿತು ಅವರಿಗೆ ಪ್ರಕಟಿಸಲು ದಯೆಯಿಂದ, ತಾಳ್ಮೆಯಿಂದ, ಮತ್ತು ಪರಿಶ್ರಮದಿಂದ ಅವರ ಗಮನಕ್ಕೆ ತರಬೇಕು. **R 3869 : 5**

## 5 ನವೆಂಬರ್

**"ಬಾಯಿಂದ ಅರಿಕೆಮಾಡುವುದರ ಮೂಲಕ ರಕ್ಷಣೆಯಾಗುತ್ತದೆ." (ರೋಮಾಪುರದವರಿಗೆ 10 : 10)**

ಮೂಕ ನಂಬಿಕೆಯುಳ್ಳವನು ತನ್ನ ಕರೆಯುವಿಕೆಯನ್ನು ಮತ್ತು ಆಯ್ಕೆಯನ್ನು ಎಂದಿಗೂ ದೃಢಪಡಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ. ನಾವು ಸ್ವಾಭಾವಿಕವಾದ ಮೂಕರನ್ನು ಸೂಚಿಸುತ್ತಿಲ್ಲ; ಆದರೆ "ಬಾಯಿ" ಎಂಬ ಪದವನ್ನು ನಮ್ಮ ಹೃದಯದ "ಕಿವಿಗಳು" ಮತ್ತು "ತಿಳುವಳಿಕೆಯ ಕಣ್ಣುಗಳು" ಎಂಬ ಅದೇ ಅರ್ಥದಲ್ಲಿ ನಾವು ಅರ್ಥಮಾಡಿಕೊಳ್ಳುತ್ತೇವೆ. ದೇವರ ಕೃಪೆಯನ್ನು ನೋಡುವ ಮತ್ತು ಕೇಳುವ ಹೃದಯವು ಮತ್ತು ಅದನ್ನೇ ಸ್ವೀಕರಿಸುವ ಹೃದಯವು ತಕ್ಕ ಸಮಯದಲ್ಲಿ ಕೇಳಿದ ಮತ್ತು ನೋಡಿದ ವಿಷಯಗಳಲ್ಲಿ ಎಷ್ಟು ಉತ್ಸುಕವಾಗಬೇಕು ಎಂದರೆ ಅದು ತನ್ನ ಸಂತೋಷ, ಸಮಾಧಾನ, ನಿರೀಕ್ಷೆ, ನಂಬಿಕೆ ಮತ್ತು ಕೃತಜ್ಞತೆಯನ್ನು ಕೆಲವು ಬಾಹ್ಯಾ(ಹೊರ) ರೀತಿಯಲ್ಲಿ ವ್ಯಕ್ತಪಡಿಸದೇ ಇರಲು ಸಾಧ್ಯವಿಲ್ಲ. ಅಪೋಸ್ತಲರು ಹೇಳಿದಂತೆ "ನಾವು ಕಂಡು ಕೇಳಿದವುಗಳನ್ನು ಮಾತನಾಡದೆ ಇರಲಾರೆವು" ಎಂದು ನಾವೂ ಹೇಳುವವರಾಗಿರಬೇಕು. ಎಲ್ಲಾ ಕ್ರೈಸ್ತರು ಸತ್ಯದ ಬೆಳಕನ್ನು ಸ್ವೀಕರಿಸಿದ ನಂತರ, ದೈವಿಕ ಯೊಜನೆಯಲ್ಲಿ ದೇವರ ಕೃಪೆಯನ್ನು ನೋಡಿದ ನಂತರ, ಕರ್ತನು ಕೃಪೆಯುಳ್ಳವನು ಎಂದು ರುಚಿನೋಡಿದ ನಂತರ, "ಎಷ್ಟೋ ದೊಡ್ಡ ರಕ್ಷಣೆಯ ಅದ್ಭುತಗಳ ಮಾತುಗಳನ್ನು ಕರ್ತನಿಂದ ಮೊದಲುಗೊಂಡು ಆತನಿಂದ ಕೇಳಿದ ಅಪೋಸ್ತಲರು ಇದನ್ನು ನಮಗೆ ಸ್ಥಿರಪಡಿಸಿದವುಗಳನ್ನು" ನಾವು ಕೇಳಿದ ನಂತರ– ಇವುಗಳನ್ನು ಹೇಳದೆ ಇರಲು ಸಾಧ್ಯವಿಲ್ಲ. ಅದರ ಬೆಳಕನ್ನು ಕೊಳಗದೊಳಗೆ ಇಡಲು ಸಾಧ್ಯವಿಲ್ಲ. ಹಾಗೇನಾದರೂ ಅವರು ಮಾಡಿದರೆ, ಅವರ ಬೆಳಕನ್ನು ನಂದಿಸುತ್ತಾರೆ, ಅವರ ಬೆಳವಣಿಗೆಯನ್ನು ನಿಲ್ಲಿಸಿದ್ದಾರೆ ಎಂದರ್ಥ; ಮತ್ತು ಇದನ್ನು ಹೀಗೆಯೇ ಮುಂದುವರಿಸಿದರೆ ಅಂತಿಮವಾಗಿ ಎರಡನೆಯ ಮರಣದಲ್ಲಿ

ಅವರಿಗೆ ವಿನಾಶ ಉಂಟಾಗುತ್ತದೆ ಎಂದರ್ಥ; ಕರ್ತನನ್ನು ಮತ್ತು ಆತನ ವಾಕ್ಯದ ಬಗ್ಗೆ ಸ್ಪಷ್ಟವಾಗಿ ವಿವೇಚಿಸಿದ ನಂತರ ಅದರ ಬಗ್ಗೆ ನಾಚಿಕೆ ಪಡುವವರು ರಾಜ್ಯಕ್ಕೆ ಯೋಗ್ಯರಲ್ಲ. ಇದಲ್ಲದೆ ಅಂಥವರ ಬಗ್ಗೆ ಕರ್ತನೂ ಸಹ ಯಾವುದೇ ಸ್ಥಿತಿಯಲ್ಲಿ ಮತ್ತು ಎಲ್ಲಾ ಪರಿಸ್ಥಿತಿಗಳಲ್ಲಿ ನಾಚಿಕೆಪಡುತ್ತಾನೆ. **R2966 : 5**

## 6 ನವೆಂಬರ್

**"ರಕ್ಷಣೆಗೆ ನಂಬಿಕೆಯ ಮುಖಾಂತರ ದೇವರು ನಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ." (1 ಪೇತ್ರನು 1 : 5)**

ನಮ್ಮ ಜೀವನದ ಪ್ರಯಾಣದಲ್ಲಿ ಬಹುಶಃ ಪ್ರತಿದಿನವೂ ಕೆಲವು ಸ್ಥಳಗಳು ಮತ್ತು ಸಂದರ್ಭಗಳಲ್ಲಿ ಹಾದು ಹೋಗುತ್ತೇವೆ, ಒಂದು ವೇಳೆ ನಾವು ತಪ್ಪಾದ ದಾರಿಯಲ್ಲಿ ಹೋದರೆ ಅದು ನಮ್ಮ ಸಂಪೂರ್ಣ ಹಾದಿಯನ್ನು ಬದಲಾಯಿಸಬಹುದು ಮತ್ತು ದೇವರೊಂದಿಗಿನ ಐಕ್ಯತೆ ಮತ್ತು ಸಂಬಂಧವನ್ನು ತೊರೆದು, ಪಾಪ ಮಾಡಿ, ಆತನಿಗೆ ವಿರೋಧವಾಗಿ ನಡೆಯುವಂತೆ ಮಾಡುವದು. ಯಾವ ಕ್ರೈಸ್ತನು ತನ್ನ ಜೀವನದಲ್ಲಿ ಎರಡು ಧ್ವನಿಗಳು ಆತನೊಂದಿಗೆ ಮಾತನಾಡುವುದನ್ನೂ ಅದರೊಂದಿಗೆ ಕೆಲವು ಬಿಕ್ಕಟ್ಟುಗಳು ಸಹ ಬರುವುದನ್ನೂ ಅರಿಯದೆ ಇದ್ದಾನೆ? ಅದರಲ್ಲಿ ಮೊದಲನೆಯ ಧ್ವನಿ ಯಾವುದೇ ಸಂದರ್ಭದಲ್ಲಿಯಾದರೂ ದೇವರಿಗೆ ದೀನತೆ ಮತ್ತು ವಿಧೇಯತೆಯನ್ನು ತೋರಿಸುವುದು; ಮತ್ತೊಂದು ಧ್ವನಿ ಹೆಮ್ಮೆಯಿಂದ ತನ್ನ ಸ್ವಂತ ಚಿತ್ತವನ್ನು ಹುಡುಕುವುದು? ನಾವು ಮುಂದುವರಿದ ಕ್ರೈಸ್ತರಾಗಿದ್ದರೆ ಹಲವಾರು ವಿಜಯಗಳ ಮೂಲಕ ಅಂತಹ ಅಡೆತಡೆಗಳು ನಮ್ಮ ಜೀವನದಲ್ಲಿ ಅಪರೂಪವಾಗಿದ್ದರೂ ಸಹ ನಾವು ಇನ್ನೂ ಎಚ್ಚರದಿಂದಿರಬೇಕು. ಏಕೆಂದರೆ ಬಹಳ ಕುತಂತ್ರವುಳ್ಳ ಎದುರಾಳಿ ನಮಗೆ ವಿರೋಧಿಯಾಗಿದ್ದಾನೆ. ಏಕೆಂದರೆ ನೂತನ ಮನಸ್ಸಿನ ನಿಕ್ಷೇಪವು ಈ ಮಣ್ಣಿನ ಘಟಕದಲ್ಲಿದೆ (ಪಾತ್ರೆಯಲ್ಲಿದೆ) ಮತ್ತು ನಮ್ಮ ಮಾಂಸದಲ್ಲಿ ಯಾವುದೇ ಪರಿಪೂರ್ಣತೆ ನೆಲೆಸಿಲ್ಲವಾದ್ದರಿಂದ ಎಚ್ಚರದಿಂದಿರಬೇಕು. ಈ ಆಲೋಚನೆಗಳು [ವಿಚಾರಗಳು] ನಮ್ಮನ್ನು ಅತ್ಯಂತ ದೀನರನ್ನಾಗಿ ಮಾಡಬೇಕು ಮತ್ತು ಕರ್ತನಿಗೆ ನಿಕಟವಾಗಿ ಅಂಟಿಕೊಳ್ಳುವಂತೆ ಮಾಡಬೇಕು. ಯಾವುದೇ ನಡವಳಿಕೆಯ ವರ್ತನೆ ಮತ್ತು ಯಾವುದೇ ರೀತಿಯಲ್ಲಿ ದೈವಿಕ ಚಿತ್ತವನ್ನು ವಿರೋಧಿಸುವಂತೆ ತೋರುವ ಆಲೋಚನೆಗಳು ಬಂದರೆ ಭಯಪಡಬೇಕು ಮತ್ತು ಅಸಹ್ಯಪಡಬೇಕು. **R 4233 : 6**

## 7 ನವೆಂಬರ್

**"ಸಹೋದರನು ತನ್ನ ಸಹೋದರನನ್ನು ಮರಣಕ್ಕೆ ಒಪ್ಪಿಸುವರು." (ಮತ್ತಾಯನು 10 : 21)**

ಅಯ್ಯೋ, ದೇವರ ಪ್ರೀತಿಯು ಯಾವುದೇ ಸಮಯದಲ್ಲಿ ನಮ್ಮನ್ನು ನಿರ್ಬಂಧಿಸಲು ವಿಫಲವಾದರೆ, ನಾವು ಆತನ ಪ್ರೀತಿ ಮತ್ತು ಐಕ್ಯದಿಂದ ಹೊರ ಉಳಿಯುವದು ಮಾತ್ರವಲ್ಲದೆ, ಸಹೋದರನ್ನು ಕೊಲ್ಲಲು ಕತ್ತಿಯನ್ನು ಉಪಯೋಗಿಸಿದರೆ–ಅದು ಹೀಗೆಯೇ ಮೇಲಿನ ವಾಕ್ಯದಂತೆ ಆಗುವದು! ಆತ್ಮೀಕ ಇಸ್ರಾಯೇಲ್‌ನೊಂದಿಗೆ ಮುಂದೆ ಬರುವ ದಿನಗಳಲ್ಲಿ ನಡೆಯುವ ವಿಷಯಗಳನ್ನು ನಮ್ಮ ಮನಸ್ಸಿನಲ್ಲಿ ಪ್ರಭಾವ ಬೀರುವ ಚಿತ್ರಣವನ್ನು (ಆತ್ಮೀಕ ದೃಷ್ಟಿಯಿಂದ) ನೋಡಿ ನಮ್ಮ ಹೃದಯಗಳಲ್ಲಿ ಮುದ್ರಿಸಿಕೊಳ್ಳಬೇಕು, ಈ ವಿಚಾರವನ್ನು ಕರ್ತನು ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕೆ ಸ್ವಲ್ಪ ಮುಂಚೆ, ಸಹೋದರನು (ಇತರ) ಸಹೋದರನಿಗೆ ವಿರೋಧವಾಗುವುದನ್ನು ಅನುಮತಿಸುತ್ತಾನೆ. ಇತರರು ಹೇಗೆ ಹೋರಾಡಿದರೂ ಸರಿ, ನಮ್ಮ ಯುದ್ಧದ ಆಯುಧಗಳು ಶರೀರಕ್ಕೆ ಸಂಬಂಧ ಪಟ್ಟದ್ದಲ್ಲ ಮತ್ತು ನಮ್ಮ ಹೋರಾಟವು ಕರ್ತನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡವರ ವಿರುದ್ಧವಲ್ಲ, ಆದರೆ ನಮಗೆ ಮಹಾ ವಿರೋಧಿಯಾದ (ಸೈತಾನನಿಗೆ) ವಿರುದ್ಧವಾಗಿದೆ ಎಂದು ನಾವು ನಿರ್ಧರಿಸೋಣ. ಶರೀರಕ್ಕೆ (ಲೋಕಕ್ಕೆ) ಸಂಬಂಧಪಟ್ಟ ಆಯುಧಗಳು ಕೇವಲ ಬಂದೂಕುಗಳು ಮತ್ತು ಕತ್ತಿಗಳು ಮಾತ್ರವಲ್ಲ, ಆದರೆ ನಮ್ಮ ನಾಲಿಗೆಯು ಮತ್ತೊಬ್ಬರನ್ನು ನಿಂದಿಸುವುದಕ್ಕೆ ಮತ್ತು ಅವರ ಹೃದಯವನ್ನು ಗಾಯಪಡಿಸುವುದಕ್ಕೆ ಬಳಸಿದಾಗ ಹೆಚ್ಚು ಹಾನಿಕರ ಮತ್ತು ಮರಣವನ್ನುಂಟು ಮಾಡುತ್ತದೆ. ನಾವು ದೇವರನ್ನು ಸ್ತುತಿಸುವ ನಮ್ಮ ನಾಲಿಗೆಯನ್ನು ಯಾವುದೇ ವ್ಯಕ್ತಿಗೆ, ವಿಶೇಷವಾಗಿ ನಂಬಿಕೆಯ ಮನೆವಾರ್ತೆಯವರಿಗೆ ಹಾನಿಯಾಗದಂತೆ ದೇವರು ಅದನ್ನು ನಿಷೇಧಿಸುತ್ತಾನೆ. **R 4235 : 5**

## 8 ನವೆಂಬರ್

**"ಸಹೋದರರೇ, ದೇವರು ನಿಮ್ಮನ್ನು ಕರೆದಾಗ ಎಂಥವರನ್ನು ಕರೆದನೆಂದು ಆಲೋಚಿಸಿರಿ; ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳೂ ಅನೇಕರಿಲ್ಲ, ಬಲಿಷ್ಠರೂ ಅನೇಕರಿಲ್ಲ, ಕುಲೀನರೂ(ಶ್ರೇಷ್ಠರೂ) ಅನೇಕರಿಲ್ಲ." (1 ಕೊರಿಂಥದವರಿಗೆ 1 : 26)**

ಎಷ್ಟು ವಿಚಿತ್ರವಾಗಿದೆ! ಆದರೂ ಸ್ವನೀತಿ ಮತ್ತು ಅಹಂಕಾರವುಳ್ಳ ಜನರ ಹಾದಿಯಲ್ಲಿ ಕರ್ತನು ಹಾದು ಹೋಗುವಾಗ, ಅಂಥವರಲ್ಲಿ ಯಾರೆಲ್ಲಾ ತಮ್ಮನ್ನು

ತಗ್ಗಿಸಿಕೊಳ್ಳುತ್ತಾರೋ ಅಂಥವರು ಮಾತ್ರ ಹೆಚ್ಚಿಸಲ್ಪಡುವರು ಮತ್ತು ಯಾರೆಲ್ಲಾ ತಮ್ಮನ್ನೇ ಹೆಚ್ಚಿಸಿಕೊಳ್ಳುತ್ತಾರೋ ಅಂಥವರು ತಗ್ಗಿಸಲ್ಪಡುವರು. ಇಲ್ಲಿ ನಿಜಾಂಶವೇನೆಂದರೆ ದೇವರು ತಾಳ್ಮೆಯುಳ್ಳವರನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಮುಖ್ಯವಾಗಿ ಯಾರೆಲ್ಲಾ ಸಂದೇಶವನ್ನು (ಸುವಾರ್ತೆಯನ್ನು) ದೀನತೆಯಿಂದ ಸ್ವೀಕರಿಸುತ್ತಾರೋ ಅವರೆಲ್ಲರೂ ಮುಖ್ಯವಾಗಿ ಸಾಧಾರಣರೂ, ಶ್ರೇಷ್ಟರಲ್ಲದವರೂ ಆಗಿದ್ದಾರೆ. ದೀನ ಮನಸ್ಸುಳ್ಳವರು ಮಾತ್ರ ಕ್ರಿಸ್ತನ ಶಾಲೆಯಲ್ಲಿ ಕಲಿಸಲ್ಪಡುತ್ತಾರೆ. ಅಂಥವರು ಕರ್ತನ ಮಾನದಂಡದ ಮಟ್ಟಕ್ಕೆ ನಡೆಯುವವರನ್ನು, ಸಾಮಾನ್ಯರನ್ನು (ಅಜ್ಞಾನಿಗಳನ್ನು) ಸ್ವೀಕರಿಸಲು ಸಮರ್ಥರು ಮತ್ತು ಸಿದ್ಧರಿರುತ್ತಾರೆ. ಶ್ರೇಷ್ಟರಲ್ಲದವರನ್ನು ಪ್ರೀತಿಸುವುದು ಎಂದರೆ ನಾವು ಅವರನ್ನು ದೈವಿಕ ದೃಷ್ಟಿಕೋನದಿಂದ ನೋಡಬೇಕು ಮತ್ತು ಅವರಲ್ಲಿ ಅಜ್ಞಾನ ಮತ್ತು ಕೆಟ್ಟಗುಣಗಳಿದ್ದರೂ ಸಹ, ದೇವರು ಅವರನ್ನು ಪ್ರೀತಿಸಿದಂತೆ ನಾವೂ ಸಹ ಅವರನ್ನು ಪ್ರೀತಿಸಬೇಕು; ಏಕೆಂದರೆ ಅವರ ಹೃದಯದ ಬಯಕೆಯು ದೇವರು ಮತ್ತು ನೀತಿಯ ಕಡೆಗೆ ಇದೆ. ಯಾರೆಲ್ಲಾ ಆ ತತ್ವಗಳ ಪರವಾಗಿ ನಿಲ್ಲುತ್ತಾರೋ ಮತ್ತು ಪ್ರಯಾಸ ಪಡುತ್ತಾರೋ ಅಂಥವರನ್ನು ನಾವು ದೇವರ ಸ್ಥಾನದಲ್ಲಿ ನಿಂತು, ಆ ಪರಿಸ್ಥಿತಿಯನ್ನು ದೈವಿಕ ದೃಷ್ಟಿಕೋನದಿಂದ ನೋಡುತ್ತೇವೆ. ಯಾರೆಲ್ಲಾ ಬಲಹೀನರೂ, ದಾರಿ ತಪ್ಪಿದವರೂ ಆಗಿದ್ದಾರೋ, ಒಂದು ವೇಳೆ ಅವರು ನೀತಿಯನ್ನು ಪ್ರೀತಿಸಿ, ಅಕ್ರಮವನ್ನು ದ್ವೇಷಿಸುವವರಾಗಿದ್ದು ಅದರ ಆದರ್ಶಗಳೊಂದಿಗೆ ಸಾಮರಸ್ಯದಿಂದ ಪ್ರಯಾಸ ಪಡುತ್ತಿದ್ದರೆ ಅಂಥವರಿಗಾಗಿ ಸಹಾನುಭೂತಿ ಹೊಂದಿದ್ದೇವೆ ಮತ್ತು ನಮ್ಮಿಂದ ಸಾಧ್ಯವಾದಷ್ಟು ಸಹಾಯ ಮಾಡುತ್ತೇವೆ. **R 4269 : 4**

## 9 ನವೆಂಬರ್

**"ಸಭೆಯಾಗಿ ಕೂಡಿಕೊಳ್ಳುವದನ್ನು ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ." (ಇಬ್ರಿಯರಿಗೆ 10 : 25)**

ಹೇಗೆ ದಾವೀದನು ಗುಡಾರದ ಹತ್ತಿರ ಅಂದರೆ ಕರ್ತನ ಹತ್ತಿರವಿರಲು ಬಯಸಿದನೋ, ಹಾಗೆಯೇ ಪ್ರೀತಿಯ (ಯೇಸುವಿನ ಸಭೆಯ) ಸದಸ್ಯರಾಗಿರುವ ನಾವು ದೇವರೊಂದಿಗೆ ಹತ್ತಿರವಾಗಿ ನಡೆಯಲು, ಯೇಸು ಕ್ರಿಸ್ತನ ಕೃಪಾಸನದ ವ್ಯವಸ್ಥೆಗೆ ಹತ್ತಿರ ನಡೆಯಲು ನಾವು ಹಾತೊರೆಯಬೇಕು (ದಾಹದಿಂದಿರಬೇಕು.) ಇದು ಆತನ ಶರೀರವಾದ ಸಭೆಯ ಸದಸ್ಯರೊಂದಿಗೆ ಹತ್ತಿರವಿರುವುದನ್ನು, ಅವರೊಂದಿಗೆ ಐಕ್ಯವಾಗಿರುವುದನ್ನು ಸೂಚಿಸುತ್ತದೆ. ಏಕೆಂದರೆ ಈ ವಿಷಯಗಳ ಸ್ಥಿತಿಯನ್ನು ಕುರಿತು ಗುಡಾರದ "ಪರಿಶುದ್ಧ" ಸ್ಥಳವನ್ನು ಪ್ರತಿನಿಧಿಸಲಾಗಿದೆ. ತೆರೆಯ

ಈ ಕಡೆ ಮತ್ತು ತೆರೆಯ ಆ ಕಡೆಯಲ್ಲಿರುವ ಮಹಿಮೆಯುಳ್ಳ ಸ್ಥಿತಿಗೆ ನಡುವೆ ಇರುವ ಒಂದೇ ಒಂದು ತೆರೆಗೆ ಸೂಚಿತವಾಗಿದೆ. ಮತ್ತು ಯಾರೆಲ್ಲಾ ಈ ಹೊಸ ಸ್ವಭಾವದ ಹಾದಿಲ್ಲಿದ್ದು ಕರ್ತನ ಹತ್ತಿರವಿರಲು ಮತ್ತು ಆತನೊಂದಿಗೆ ಐಕ್ಯದಿಂದಿರುವವರೊಂದಿಗೆ ಸಹ ಹತ್ತಿರವಿರಲು ಬಯಸುತ್ತಾರೋ, ಅಂಥವರು ಸಹೋದರರ ಮೇಲೆ ಮತ್ತು ಕರ್ತನಲ್ಲಿ ಅವರ ಆತ್ಮವಿಶ್ವಾಸ ಹಾಗೂ ನಂಬಿಕೆಯನ್ನು ಮತ್ತು ಆತನಲ್ಲಿರುವ ಬೆಳಕು ಮತ್ತು ಜ್ಞಾನ ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವ ಮೂಲಕ, ಆತನ ಸ್ತುತಿಯನ್ನು ತೋರಿಸುವ ಸವಲತ್ತು(ಭಾಗ್ಯ)ಗಳ ಕಡೆಗೆ ಗಮನ ಹರಿಸುವುದಿಲ್ಲವೇ? **R 4260 : 5**

## 10 ನವೆಂಬರ್

**"ಅದಕ್ಕಾತನು–ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ನನ್ನ ಬಲವು ಪರಿಪೂರ್ಣವಾಗುತ್ತದೆ ಎಂದು ನನಗೆ ಹೇಳಿದನು. ಹೀಗಿರಲಾಗಿ ಕ್ರಿಸ್ತನ ಬಲವು ನನ್ನಲ್ಲಿ ನೆಲೆಸಿಕೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಬಹು ಸಂತೋಷವಾಗಿ ಹೆಚ್ಚಳಪಡುವೆನು." (2 ಕೊರಿಂಥದವರಿಗೆ 12 : 9)**

ಆಹಾ! ಅಪೋಸ್ತಲನು ಹೀಗೆನ್ನುತ್ತಾನೆ: ಈ ಸಂಕಟದಿಂದ ನನಗೆ ಅಧಿಕವಾದ ದೈವಿಕ ಕೃಪೆಯು ಸಿಗುವುದಾದರೆ, ನಾನು ಈ ಸಂಕಟದಿಂದ ದೂರವಾಗಿ ದುಃಖವಾಗುವುದಕ್ಕೆ ಬದಲು ಅದನ್ನು ಉಳಿಸಿಕೊಳ್ಳುವುದರಲ್ಲಿ ನನಗೆ ತೃಪ್ತಿ ಇದೆ. ಆತ್ಮೀಯ ಸ್ನೇಹಿತರೇ ನಮಗೆ ಬರುವ ಶೋಧನೆಗಳು, ಸಂಕಟಗಳು, ಕಷ್ಟಗಳೆಲ್ಲವೂ ನಮ್ಮ ಒಳಿತಿಗಾಗಿ ದೈವಿಕ ಅನುಮತಿಯಾಗಿದೆ ಎಂಬ ದೃಷ್ಟಿಕೋನದಿಂದ ನೋಡೋಣ. ನಮ್ಮನ್ನು ಪ್ರೀತಿಯ ಬಂಧನದಲ್ಲಿ ಸ್ವೀಕರಿಸಿದಾತನು ಮತ್ತು ಆತನ ಆತ್ಮದಿಂದ ಆತ್ಮೀಕ ಗರ್ಭಧಾರಣೆಯನ್ನು [ಭ್ರೂಣಾಂಕುರವನ್ನು] ಉಂಟುಮಾಡಿದಾತನು ಮತ್ತು ನಮ್ಮನ್ನು ಪುತ್ರರು ಎಂದು ಕರೆದಾತನು ನಮ್ಮ ಉನ್ನತ ಹಿತಾಸಕ್ತಿಗಳನ್ನು ನಿರ್ಲಕ್ಷಿಸುವುದಿಲ್ಲ ಮತ್ತು ನಮಗೆ ಬರುವ ಎಲ್ಲಾ ಅನುಭವಗಳು, ಶೋಧನೆಗಳು ಮತ್ತು ಪರೀಕ್ಷೆಗಳನ್ನು ಒಳಪಡಿಸುವುದು ನಮ್ಮ ಉನ್ನತ ಒಳಿತಿಗಾಗಿ ಅದು ಸಾಮರಸ್ಯದಿಂದ ಕೆಲಸ ಮಾಡುತ್ತದೆ ಎಂಬ ಭರವಸೆಯಿಂದ ಇರೋಣ. **R 4356 : 6**

## 11 ನವೆಂಬರ್

**"ಕರ್ತನ ಹಸ್ತವು ಅವರೊಂದಿಗಿದ್ದದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು." (ಅಪೊಸ್ತಲರಕೃತ್ಯಗಳು 11 : 21)**

ಕೈ ಎಂಬ ಪದವು ಸಾಂಕೇತಿಕವಾಗಿ (ದೇವರ) ಶಕ್ತಿ ಮತ್ತು ಮಾರ್ಗದರ್ಶನವನ್ನು ಸೂಚಿಸುತ್ತದೆ. ಇಲ್ಲಿ ಎಲ್ಲಾ ಕ್ರೈಸ್ತರ ಯಶಸ್ವಿಯುಳ್ಳ ಕೆಲಸಕ್ಕೆ ನಿಜವಾದ ರಹಸ್ಯವು, ಅದು ದೈವಿಕ ಅನುಮೋದನೆಯನ್ನು ಹೊಂದಿರುವುದೇ ಕಾರಣವೆಂದು ನಾವು ನೋಡುತ್ತೇವೆ. ಹೇಳಬೇಕೆಂದರೆ ಪ್ರತಿಯೊಬ್ಬ ಕ್ರೈಸ್ತನು ಕರ್ತನ ಬೆರಳಾಗಿದ್ದಾನೆ....ನಾವು ದೇವರ ಪ್ರತಿನಿಧಿಗಳಾಗಿ, ರಾಯಭಾರಿಗಳಾಗಿ ಉಪಯೋಗಿಸಲ್ಪಡಬೇಕಾದರೆ, ನಾವು ಆತನಿಂದ ಪ್ರೇರಿತರಾಗಲು ಮತ್ತು ಮಾರ್ಗದರ್ಶನ ಹೊಂದಲು ಪ್ರಯತ್ನಿಸಬೇಕು. ನಾವು ಸತ್ಯವೇದದ ಮೂಲಕ ಆತನ ಧ್ವನಿಯನ್ನು ಕೇಳಬೇಕು ಮತ್ತು ಸತ್ಯದ ಆತ್ಮದಲ್ಲಿ ಆತನ ಚೈತನ್ಯದಾಯಕ ಶಕ್ತಿಯನ್ನು ಕುರಿತು ನಾವು ಅರಿತುಕೊಳ್ಳಬೇಕು..... ಅಥವಾ ಈ ವಿಷಯವನ್ನು ಅಂದರೆ ಸತ್ಯದ ಆತ್ಮದಲ್ಲಿ ಆತನ ಚೈತನ್ಯದಾಯಕ ಶಕ್ತಿಯನ್ನು ಹೊರತುಪಡಿಸಿ ನಾವು ನಮ್ಮ ಸಫಲತೆಯನ್ನು ಪ್ರಯತ್ನಗಳ ಅಧಿಕ ಎಣಿಕೆಯ ಮೂಲಕ ಅಳೆಯಬಾರದು. ಆದರೂ ನಮ್ಮ ಪ್ರಯಾಸಕ್ಕೆ ಕೆಲವು ಫಲವನ್ನು ನಿರೀಕ್ಷಿಸಬೇಕು ಮತ್ತು ಬಹುಶಃ ಅವಿವೇಕದಿಂದ ಸತ್ಯ ಸಂದೇಶದ ವಿಧಾನವನ್ನು ತಪ್ಪಾಗಿ ಪ್ರಸ್ತುತಪಡಿಸಿ ನಾವು "ದೇವರ ರಾಯಭಾರಿಗಳು" ಎಂಬ ಪ್ರಭಾವವನ್ನು ಕಳೆದುಕೊಂಡಿದ್ದರೆ, ನಾವು ಹೆಚ್ಚಿನ ಬುದ್ಧಿವಂತಿಕೆಯ ಪಾಠವನ್ನು ಕಲಿಯಲು ಪ್ರಯತ್ನಿಸಬೇಕು ಮತ್ತು ನಮ್ಮ ಅನುಭವದ ಪಾಠಗಳನ್ನು ಕಾರ್ಯರೂಪದಲ್ಲಿ ಪರಿಣಾಮ ಬೀರಬಹುದಾದ ಕೆಲವು ಇತರ ಮಾರ್ಗಗಳಲ್ಲಿ ಅಥವಾ ಬೇರೆ ಯಾವುದಾದರೂ ಸ್ಥಳದಲ್ಲಿ ಸೇವೆ ಮಾಡಲು ಬಾಗಿಲು ತೆರೆಯುವುದಕ್ಕಾಗಿ ಕರ್ತನನ್ನು ಹುಡುಕಬೇಕು. **R 4357 : 2**

## 12 ನವೆಂಬರ್

**"ನಿಶ್ಚಯವಾಗಿ ನಾನು ನಿನ್ನ ಸಂಗಡ ಇರುವೆನು." (ವಿಮೋಚನಕಾಂಡ 3 : 12)**

ನಾವು ಕರ್ತನ ವಾಕ್ಯದ ಮೂಲಕ ಆತನ ಕರೆಗೆ ಗಮನ ಕೊಡುವಾಗ, ಕರ್ತನ ಕೆಲಸದ ಯಾವುದೇ ಭಾಗವನ್ನು ಸರಿಯಾಗಿ ಮಾಡಲು ಪ್ರಯತ್ನಿಸುವಾಗ, ನಮ್ಮ ಮೇಲಿನ ವಾಕ್ಯವು ಕರ್ತನ ಜನರಿಗೆ ಎಲ್ಲಾ ಸ್ಥಳದಲ್ಲಿಯೂ ಮತ್ತು ಎಲ್ಲಾ ಸಮಯದಲ್ಲಿಯೂ ಎಷ್ಟೋ ಸ್ಫೂರ್ತಿದಾಯಕವಾಗಿದೆ. ದೇವರು ನಮ್ಮ ಪರವಾಗಿದ್ದರೆ ಮತ್ತು ದೇವರು ನಮ್ಮೊಂದಿಗಿದ್ದರೆ, ಅಂತಿಮವಾಗಿ ನಮ್ಮ ವಿರುದ್ಧವಾಗಿ ಜಯಗೊಳಿಸಲು ಯಾರಿಂದ ಸಾಧ್ಯ? ಮೋಶೆ ಮತ್ತು ಆತನ ಸೇವೆಯಲ್ಲಿ ಇದ್ದಂತಹ ವಿವಿಧ ತೊಂದರೆಗಳು, ಪರೀಕ್ಷೆಗಳು, ಕಿರಿಕಿರಿಗಳು ಮತ್ತು ನಿರಾಶೆಗಳು ನಮ್ಮೊಂದಿಗೂ ಇರಬಹುದು. ಏಕೆಂದರೆ ನಾವು ಮಣ್ಣಿನ ಪಾತ್ರೆಗಳಲ್ಲಿ

ಹೊಸ ಸ್ವಭಾವದ ನಿಧಿಯನ್ನು ಹೊಂದಿದ್ದೇವೆ ಮತ್ತು ಬಲಹೀನತೆಗಳು, ಅಪೂರ್ಣತೆಗಳು, ದೂರದೃಷ್ಟಿಯ ಕೊರತೆಗಳು ಕೆಲವೊಮ್ಮೆ ಖಂಡಿತವಾಗಿಯೂ ನಮಗೆ ತೊಂದರೆಗಳು ಮತ್ತು ನಿರಾಶೆಗಳನ್ನು ಉಂಟುಮಾಡುತ್ತದೆ. ಅಂತಹ ಸಂದರ್ಭಗಳಲ್ಲಿ ನಾವು ಯಾರಿಗೆ ಸೇವೆ ಸಲ್ಲಿಸುತ್ತಿದ್ದೇವೆ, ನಾವು ಯಾರ ರಾಯಭಾರಿಗಳು ಮತ್ತು ಪ್ರತಿನಿಧಿಗಳು ಎಂದು ಅರಿತುಕೊಳ್ಳುವದಕ್ಕಾಗಿ ನಮ್ಮ ತಿಳುವಳಿಕೆಯ ಮನೋನೇತ್ರಗಳನ್ನು ಆತನ ಕಡೆಗೆ ತಿರುಗಿಸುವದು ನಮ್ಮ ಕರ್ತವ್ಯವಾಗಿದೆ ಮತ್ತು "ನಿಶ್ಚಯವಾಗಿ ನಾನು ನಿನ್ನ ಸಂಗಡ ಇರುವೆನು" ಎಂಬ ಆತನ ವಾಗ್ದಾನವನ್ನು ನೆನಪಿಸಿಕೊಳ್ಳಬೇಕಾಗಿದೆ. ಇದರ ಅರ್ಥವೇನೆಂದರೆ ಅಂತಿಮವಾದ ಗೆಲುವು ನಮ್ಮದಾಗಿದೆ. ಬಹುಶಃ ನಮಗೆ ತಿಳಿದಿಲ್ಲದ ಮತ್ತು ನಿರೀಕ್ಷಿಸದೆ ಇರುವ ವಂಚಕ ಮಾರ್ಗಗಳ ಮೂಲಕ ಅದು ನಮಗೆ ಅನುಕೂಲಕರವಾಗುತ್ತದೆ ಮತ್ತು ನಮ್ಮ ಬೋಧಕನ (ಕರ್ತನ) ಮಹಿಮೆಗೆ ಕಾರಣವಾಗುತ್ತದೆ ಎಂದು ಅಂತಿಮವಾಗಿ ಸಾಬೀತುಪಡಿಸುತ್ತದೆ. **R 2910 : 1**

## 13 ನವೆಂಬರ್

**"ನೀನು ನಿನ್ನ ದೇವರನ್ನು ಎದುರುಗೊಳ್ಳಲು ಸಿದ್ಧಮಾಡಿಕೊ." (ಆಮೋಸನು 4 : 12)**

ದೇವರನ್ನು ಭೇಟಿಯಾಗಲು ಮತ್ತು ಗುಣಲಕ್ಷಣವನ್ನು ಕುರಿತು ಆತನ ತೀರ್ಮಾನವನ್ನು ಕೇಳಿ ತಯಾರಾಗಲು ಸರಿಯಾದ ಮಾರ್ಗವು ಸಾಮಾನ್ಯವಾಗಿ ಭಾವಿಸಿದಂತೆ ಇರುವುದಿಲ್ಲ. ಅಂದರೆ ನಾವು ಅನಾರೋಗ್ಯ ಅಥವಾ ಸಾವಿನ ಸಮೀಪದ ಅನುಭವವನ್ನು ಪಡೆದಾಗ ಅಥವಾ ವಿಪತ್ತಿನ ಸಮಯದಲ್ಲಿ ಮಾತ್ರ ದೇವಭಕ್ತಿಯಾಗಿರಲು ಪ್ರಾರಂಭಿಸುವದು ಸರಿಯಾದ ಮಾರ್ಗವಲ್ಲ. ನಾವು ಕ್ರಿಸ್ತನಲ್ಲಿ ನಂಬಿಕೆಯುಳ್ಳವರಾದ ಕ್ಷಣದಿಂದ ಮತ್ತು ಪಾಪದಿಂದ ತಿರುಗಿಕೊಂಡು, ಕ್ಷಮೆಗಾಗಿ ಬೇಡಿಕೊಂಡು, ದೇವರ ದಯೆಗೆ ಅರ್ಹರಾದ ನಂತರ ನಮ್ಮ ಶರೀರಗಳನ್ನು ಸಜೀವ ಯಜ್ಞಗಳಾಗಿ ಆತನಿಗೆ ಅರ್ಪಿಸಲು ಮತ್ತು ಆತನ ಆತ್ಮದಿಂದ ಅನ್ಯೋನ್ಯತೆಯ ಪುತ್ರ ಸ್ವೀಕಾರವನ್ನು ಆತನಿಂದ ಹೊಂದಲು ಪ್ರೇರೇಪಿಸಲ್ಪಡುತ್ತೇವೆ. ಇದು ಕ್ರಿಸ್ತನ ಶಾಲೆಗೆ ಪ್ರವೇಶ ಮಾಡುವುದಕ್ಕೆ ಮಾರ್ಗವಾಗಿದೆ ಎಂದು ಸಾಬೀತುಪಡಿಸುತ್ತದೆ. ಅಲ್ಲಿ ಅವರು ದೇವರ ಮಕ್ಕಳಾಗಿ ಕಲಿತುಕೊಳ್ಳಬೇಕು, ಕ್ರಿಸ್ತನ ಮಹಿಮೆಯುಳ್ಳ ರಾಜ್ಯದಲ್ಲಿ ಅವರ ವಿಮೋಚಕನ ಸಹಾಯದೊಂದಿಗೆ ಮಹಿಮೆಯುಳ್ಳ ಕೆಲಸಕ್ಕೆ ಸಿದ್ಧರಾಗುತ್ತಾರೆ. ಅವರು ಕೃಪೆಯಲ್ಲಿ ಮತ್ತು ಜ್ಞಾನದಲ್ಲಿ ಬೆಳೆದಂತೆಲ್ಲಾ ಅವರು ದೈವಿಕ ದಯೆಯ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರಲ್ಲಿ ಬೆಳೆಯುತ್ತಾರೆ. ಇಂತಹ

ಹೃದಯದ ಮನೋಭಾವದಲ್ಲಿರುವವರು ತಮ್ಮ ದೇವರನ್ನು ಯಾವುದೇ ಸಮಯದಲ್ಲಿ ಭೇಟಿಯಾಗಲು ಸಿದ್ಧರಾಗಿರುತ್ತಾರೆ. ವಾಸ್ತವವಾಗಿ ಹೇಳಬೇಕೆಂದರೆ ಆತನೊಂದಿಗೆ ಅವರು ಭೇಟಿಯಾಗುವದು ಈಗಾಗಲೇ ಪ್ರಾರಂಭವಾಗಿದೆ ಮತ್ತು ಅದರಲ್ಲಿ ಸಂತೋಷಕರವಾಗಿ ಮುಂದುವರಿಯುವಾಗ ಯಾವುದೇ ಮಟ್ಟದಲ್ಲಿ ಅಡ್ಡಿಯಾಗುವ ಯಾವ ವಿಷಯ ಬಂದರೂ ಅದು ನಿಜವಾಗಿಯೂ ಒಂದು ದುರಂತವಾಗಿದೆ. **R 4234 : 5**

## 14 ನವೆಂಬರ್

**"ನೋಡದೆ ನಂಬಿದವರು ಧನ್ಯರು." (ಯೋಹಾನನು 20 : 29)**

ಈಗ ಇನ್ನೂ ಕತ್ತಲೆಯಾಗಿರುವಾಗ, ನೀತಿಯ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವುದಕ್ಕೆ ಮೊದಲು, ಎಲ್ಲಾ ಅನುಮಾನಗಳು, ಭಯಗಳು ಮತ್ತು ಅಡೆತಡೆಗಳನ್ನು ಚದುರಿಸಲು, ನಂಬಿಕೆಯ ಮೇಲೆ ಯಾರೆಲ್ಲಾ ಅಭ್ಯಾಸ ಮಾಡುತ್ತಾರೋ, ಅಂಥವರಿಗೆ ಕರ್ತನು ಕೆಲವು ಪ್ರತಿಫಲಗಳು, ಸವಲತ್ತುಗಳು (ಭಾಗ್ಯಗಳು), ಅವಕಾಶಗಳು ಮತ್ತು ಆಶೀರ್ವಾದಗಳನ್ನು ನೀಡುತ್ತಾನೆ. ಸುವಾರ್ತಾ ಯುಗದ ಚಿಕ್ಕ ಹಿಂಡಿನ ಬಗ್ಗೆ ಹೀಗೆ ಬರೆಯಲಾಗಿದೆ, "ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ." ನಾವು "ಅದೃಶ್ಯನಾಗಿರುವಾತನನ್ನು ದೃಷ್ಟಿಸುವವನೋ ಎಂಬಂತೆ" ಸಹಿಸಿಕೊಳ್ಳುತ್ತೇವೆ; ನಾವು ನಂಬಿಕೆಯ ಕಣ್ಣಿನಿಂದ ಮಾತ್ರ ನೋಡಬಹುದಾದ ಕಿರೀಟ ಮತ್ತು ಸಿಂಹಾಸನಕ್ಕಾಗಿ ಓಡುತ್ತೇವೆ; ಪರಲೋಕದಿಂದ ಮಾತನಾಡುವವನ ಧ್ವನಿಗೆ ನಾವು ವಿಧೇಯರಾಗುತ್ತೇವೆ. ಆದರೆ ಈಗ ಆತನ ಧ್ವನಿ ಇನ್ನೂ ಚಿಕ್ಕದಾಗಿದೆ, ನಂಬಿಕೆಯನ್ನು ಅಭ್ಯಾಸ ಮಾಡುವ ಕೆಲವರು ಮಾತ್ರ ಆ ಧ್ವನಿಯನ್ನು ಕೇಳುತ್ತಾರೆ, ಪ್ರಶಂಸಿಸುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ. ಮುಂದೆ ಒಂದು ಕಾಲ ಬರುತ್ತದೆ, ಆಗ ಈ ಧ್ವನಿಯು ಭೂಮಿಯನ್ನು ನಡುಗಿಸುತ್ತದೆ ಮತ್ತು ಇಡೀ ಭೂಮಿಯಲ್ಲಿ ಕರ್ತನ ಜ್ಞಾನವು ತುಂಬಲು ಇದು ಕಾರಣವಾಗಿರುತ್ತದೆ. ಆಗ ವಿಧೇಯತೆಯು ತಕ್ಕದ್ದಾಗಿರುತ್ತದೆ ಮತ್ತು ಆಶೀರ್ವಾದವನ್ನು ತರುತ್ತದೆ; ಆದರೆ ಈಗ ವಿಧೇಯತೆಗೆ ಮಾದರಿಯಾಗಿರುವ ಆತನ ಹೆಜ್ಜೆಯ ಜಾಡನ್ನು ನಾವು ಹಿಂಬಾಲಿಸಲು ಈ ಲೋಕದ ಹಿತಾಸಕ್ತಿಗಳನ್ನೂ ಸಹ ಬಲಿಯಾಗಿ ಅರ್ಪಿಸಿದರೆ, ಅದು ನಮಗೆ ಅಧಿಕವಾದ ಆಶೀರ್ವಾದಗಳನ್ನು ತರುತ್ತದೆ–ಆ ಆಶೀರ್ವಾದಗಳು ಈಗ ಇರುವ ಜೀವನಕ್ಕೆ ಮಾತ್ರವಲ್ಲ, ಮುಂದೆ ಬರುವ ಮಹಿಮೆ, ಘನ ಮತ್ತು ಅಮರತ್ವಗಳೆಂಬ ಆಶೀರ್ವಾದಗಳನ್ನು ಸಹ ನಮಗೆ ತರುತ್ತದೆ. **R 2804 : 5**

## 15 ನವೆಂಬರ್

**"ನಿಮ್ಮ ಪಾದಗಳಿಗೆ ನೀಟಾದ ದಾರಿಗಳನ್ನು ಮಾಡಿರಿ; ಹೀಗೆ ಮಾಡಿದರೆ ಕುಂಟಕಾಲು ಉಳುಕಿ ಹೋಗದೆ ವಾಸಿಯಾಗುವದು." (ಇಬ್ರಿಯರಿಗೆ 12 : 13)**

ಇಲ್ಲಿ ಅಪೋಸ್ತಲನು ಹೇಳಿರುವುದರ ಅರ್ಥವೇನು? ನಾವು ಅಕ್ಷರಶಃ ದಾರಿಯನ್ನು ಸುಗಮಗೊಳಿಸಬೇಕೆಂದು ಆತನು ಹೇಳಿದಕ್ಕೆ ಅರ್ಥವಲ್ಲ, ಅಥವಾ ಆತನು ನಮ್ಮ ಅಕ್ಷರಶಃ ಪಾದಗಳನ್ನು ಕುರಿತು ಹೇಳುತ್ತಿಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳುವರು. ಸ್ಪಷ್ಟವಾಗಿ ಅಪೋಸ್ತಲನು ಬೋಧಿಸುವುದೇನೆಂದರೆ, ಕರ್ತನ ಪ್ರತಿಯೊಂದು ಕುರಿಯು ಹೆಚ್ಚು ಕಡಿಮೆ ಲೌಕಿಕ ಅಪೂರ್ಣತೆಯನ್ನು ಹೊಂದಿದೆ, ಇದರ ಪರಿಣಾಮವಾಗಿ ನಮ್ಮ ಕರ್ತನ ಹೆಜ್ಜೆಯ ಜಾಡಿನಲ್ಲಿ ಸ್ಥಿರವಾದ ಪ್ರಗತಿಯನ್ನು ಹೊಂದುವದು ಕಷ್ಟಕರವಾಗಿದೆ. ಅಪೋಸ್ತಲನು ನಮಗೆ ಒತ್ತಾಯಿಸುವುದೇನೆಂದರೆ, ನಮ್ಮ ದೈಹಿಕ ಮತ್ತು ಮಾನಸಿಕ ಬಲಹೀನತೆಗಳನ್ನು ಕಂಡುಹಿಡಿದು, ನಮ್ಮ ಜೀವನದ ದಾರಿಯನ್ನು ರೂಪಿಸಲು ಪ್ರಯತ್ನಿಸಬೇಕು, ಹಾಗೆ ಮಾಡಿದರೆ ನಮ್ಮ ದಾರಿಯಲ್ಲಿ ಬರುವ ತೊಂದರೆಗಳು ಮತ್ತು ಎದುರಾಳಿಯ ಆಕ್ರಮಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ. ನಮ್ಮ ಬಲಹೀನತೆಗಳನ್ನು ಅನಗತ್ಯವಾಗಿ ಉಲ್ಬಣಗೊಳಿಸದ ಹಾಗೆ (ಹೆಚ್ಚಾಗದ ಹಾಗೆ) ಮತ್ತು ನಮ್ಮ ಬಲಹೀನತೆಯನ್ನು ಪ್ರಚೋದಿಸದ ಹಾಗೆ ಮತ್ತು ನಾವು ಇನ್ನೂ ಹೆಚ್ಚು ಕುಂಟರನ್ನಾಗಿ ಮಾಡದ ಹಾಗೆ ನಮ್ಮ ಜೀವನದಲ್ಲಿ ನೇರವಾದ ದಾರಿಯನ್ನು ಸಿದ್ಧಮಾಡಬೇಕು. ನಾವು ಕುಂಟತನವನ್ನು ಜಯಿಸಲು ಪ್ರಯತ್ನಿಸಬೇಕು ಮತ್ತು ಹಾಗೆ ಮಾಡಲು "ನಮ್ಮನ್ನು ಶೋಧನೆಯೊಳಗೆ ಸೇರಿಸಬೇಡ" ಎಂದು ಪ್ರಾರ್ಥಿಸುವದು ಮಾತ್ರವಲ್ಲದೆ, ನಮ್ಮ ಮಾರ್ಗದಲ್ಲಿ ಬರುವ ಎಲ್ಲಾ ಶೋಧನೆಗಳನ್ನು ತಡೆಗಟ್ಟಲು ಪ್ರಯತ್ನಿಸಬೇಕು. ನಾವು ಇದನ್ನು ಹೇಗೆ ಮಾಡಬೇಕು? ನಮ್ಮ ಚಿತ್ತವನ್ನು ಅಥವಾ ನಿರ್ಣಯಗಳನ್ನು ಮಾನಸಿಕ ತೀರ್ಮಾನಗಳ ಮೇಲೆ ಅಭ್ಯಾಸ ಮಾಡಬೇಕೆಂದು ನಾವು ಉತ್ತರ ನೀಡುತ್ತೇವೆ; ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ, ಸರಿಯಾದ ದಾರಿಯನ್ನು ತೆಗೆದುಕೊಳ್ಳುತ್ತೇವೆಂಬ ನಮ್ಮ ತೀರ್ಮಾನಗಳನ್ನು ಕುರಿತು ಕರ್ತನಿಗೆ ಪ್ರತಿಜ್ಞೆ ಅಥವಾ ದೃಢವಾದ ವಾಗ್ದಾನ ಮಾಡಬೇಕು. ಆದ್ದರಿಂದ ನಮ್ಮ ಮೇಲಿನ ವಾಕ್ಯದಲ್ಲಿ ಹೇಳಿರುವ ಅಪೋಸ್ತಲನ ಆಜ್ಞೆಯನ್ನು ಅನುಸರಿಸುವ ಯಾರಾದರೂ ಸರಿ ಕರ್ತನಿಗೆ ಪ್ರತಿಜ್ಞೆ ಮಾಡಿದ್ದರೆ ಅವರು ಜಯಶಾಲಿಗಳಾಗಿ ದೈವಿಕ ಅನುಮೋದನೆಯನ್ನು (ಅಂಗೀಕಾರವನ್ನು) ಹೊಂದಬೇಕಾದರೆ ಪ್ರತಿಜ್ಞೆಯನ್ನು ನಿರ್ವಹಿಸುವಲ್ಲಿ ನಿಷ್ಠಾವಂತರಾಗಿರಬೇಕು. **R 4348 : 2**

## 16 ನವೆಂಬರ್

**"ಅವರು ದೇವರ ಸೇವಕನಾದ ಮೋಶೆಯ ಹಾಡನ್ನೂ ಕುರಿಮರಿಯಾದಾತನ ಹಾಡನ್ನೂ ಹಾಡುತ್ತಾ..." (ಪ್ರಕಟನೆ 15 : 3)**

ಮದಲಗಿತ್ತಿ ವರ್ಗದ ಸದಸ್ಯರಾಗಲು ಮತ್ತು ಕರ್ತನೊಂದಿಗೆ ಸಹ–ಬಾಧ್ಯಸ್ಥರಾಗಲು ನಿರೀಕ್ಷಿಸುತ್ತಿರುವ ನಾವು, ಸೇವಕನಾದ ಮೋಶೆಯ ಹಾಡನ್ನು ಮತ್ತು ಕುರಿಮರಿಯ ಹಾಡನ್ನು ಹಾಡಲು ಕಲಿಯಬೇಕೆಂದು ನಿರೀಕ್ಷಿಸಲಾಗುತ್ತದೆ. ಏಕೆಂದರೆ "ವಧಿತನಾದ ಕುರಿಯಾದಾತನು ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ, ಪ್ರಭಾವ, ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು." ಈ ಹೊಸ ಹಾಡು ಎಲ್ಲಾ ಜನರಿಗೆ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಂದೇಶವೆಂದು ಅರಿತುಕೊಂಡು, ಈಗ ನಾವು ಅದನ್ನು ಎಷ್ಟರ ಮಟ್ಟಿಗೆ ಕಲಿತುಕೊಂಡಿದ್ದೇವೆ ಎಂದು ತಿಳಿದುಕೊಳ್ಳಲು ನಾವು ಆಸಕ್ತಿ ಹೊಂದಿದ್ದೇವೆ–ಈಗ ನಾವು ಆ ಹಾಡನ್ನು ಎಷ್ಟರ ಮಟ್ಟಿಗೆ ಹಾಡುತ್ತೇವೆ. ನಿಜವಾಗಿಯೂ ಈ ಪಾಠವನ್ನು ಕಲಿಯುವುದು ಇಡೀ ಜೀವನದ ಅಧ್ಯಯನ ಎಂದು ನಾವು ನೋಡುತ್ತೇವೆ. ಕೇಳುವ ಕಿವಿಯುಳ್ಳವರಿಗೆ ನಮ್ಮ ದೇವರನ್ನು ಕುರಿತು ಸಾಕ್ಷಿ ಹೇಳುವ ಸವಲತ್ತು ಹೊಂದಿರುವಾಗ ನಿಂದೆ, ನಿರಾಕರಣೆ, ವಿರೋಧಗಳು ಬಂದರೂ ನಾವು ಸಂತೋಷಪಡುತ್ತೇವೆ. ನಾವು ನಮ್ಮ ತಾಳ್ಮೆ ಮತ್ತು  ನಂಬಿಕೆಯಲ್ಲಿ ಮುಂದುವರಿಯಬೇಕು ಮತ್ತು ಆಶೀರ್ವದಿಸಲ್ಪಟ್ಟ ಶುಭ ಸಂದೇಶವನ್ನು ಎಂದಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಇತರರಿಗೆ ಹೇಳಬೇಕು. ನಾವು ರಾಜ್ಯದ ಸೌಂದರ್ಯದೊಂದಿಗೆ ನಮ್ಮಲ್ಲಿ ಮಹಿಮೆಯುಳ್ಳ "ಬದಲಾವಣೆ" ಹೊಂದುವವರೆಗೆ ರಾಜ್ಯಕ್ಕಾಗಿ ಕಾಯಬೇಕಾಗಿದೆ. **R 4236 : 5**

## 17 ನವೆಂಬರ್

**"ಯೇಸು ಕ್ರಿಸ್ತನು ನಿನ್ನನ್ನು ವಾಸಿಮಾಡುತ್ತಾನೆ." (ಅಪೋಸ್ತಲರಕೃತ್ಯಗಳು 9 : 34)**

ನಮ್ಮ ಮೇಲಿನ ವಾಕ್ಯವು ಪೇತ್ರನು ಐನೇಯನಿಗೆ ಹೇಳಿದ ಮಾತಾಗಿದೆ, ಪಾರ್ಶ್ವವಾಯು ರೋಗಿಯಾಗಿದ್ದ ಈತನನ್ನು ಅಪೋಸ್ತಲನು ಲುದ್ದದಲ್ಲಿ ಕಂಡು ವಾಸಿಮಾಡಿದನು. ಈತನು ಸಂತರಲ್ಲಿ ಒಬ್ಬನೆಂದು ನಮಗೆ ಹೇಳಲಾಗಿಲ್ಲ; ಆದ್ದರಿಂದ ನಮ್ಮ ಊಹೆ ಏನೆಂದರೆ ಈತನು ಸಂತನಾಗಿರಲಿಲ್ಲ, ಅವನು ಅವರಲ್ಲಿ ಕೆಲವರಿಗೆ ಸ್ನೇಹಿತನಾಗಿದ್ದನು. ಆದ್ದರಿಂದ ಹೀಗೆ ಅಪೋಸ್ತಲನ ಗಮನವು ಅವನತ್ತ ಸೆಳೆಯಲ್ಪಟ್ಟಿತು. ನಿಜಾಂಶ ಏನೆಂದರೆ ಎಂಟು ವರ್ಷಗಳ ಕಾಲ ಆತನು (ಹಿಂದೆ)

ಅಸಹಾಯಕನಾಗಿ ಹಾಸಿಗೆ ಹಿಡಿದಿದ್ದು, (ಈಗ) ಗುಣಮುಖನಾಗಿರುವುದು ಒಂದು ಅದ್ಭುತ ಎಂಬುದಕ್ಕೆ ಸಾಕ್ಷಿಯಾಗಿದೆ. ಈ ಅದ್ಭುತದ ಖ್ಯಾತಿಯು ವಿದೇಶಗಳಲ್ಲಿಯೂ ಹರಡಿತು ಹಾಗೂ ಕರ್ತನ ಕಡೆಗೆ ಮತ್ತು ಸಭೆಯ ಕಡೆಗೆ ಅನೇಕರನ್ನು ಸೆಳೆಯುವಲ್ಲಿ ಇದು ಕಾರಣವಾಯಿತು ಎಂದು ನಮಗೆ ಹೇಳಲಾಗುತ್ತದೆ. ಈಗ ಬೇರೆ ವಿಧಾನಗಳನ್ನು ಬಳಸಿಕೊಂಡು ಸಭೆಯನ್ನು ಆಕರ್ಷಿಸಿದ ಹಾಗೆ, ಆಗ ಕರ್ತನು ಸರಿಯಾದ ಮನೋಭಾವದಲ್ಲಿದ್ದವರಿಗೆ ಅದ್ಭುತಗಳನ್ನು ಮಾಡಿ, ಅವರನ್ನು ಆಕರ್ಷಿಸಿ ತನ್ನ ಸಭೆಯನ್ನು ಸ್ಥಾಪಿಸಿದನು. ಆ ಅದ್ಭುತಗಳು, ಗುಣಪಡಿಸುವ ವರಗಳು ಇತ್ಯಾದಿ ಅಪೋಸ್ತಲರ ಕಾಲದ ನಂತರ ಉಳಿಯಲಿಲ್ಲ, ಅಪೋಸ್ತಲರು ಕೈಗಳನ್ನು ಇಡುವುದರ ಮೂಲಕ ಮಾತ್ರ ನೀಡಲಾಯಿತು ಮತ್ತು ಹನ್ನೆರಡು ಮಂದಿ ಬಿಟ್ಟು ಬೇರೆ ಯಾವ ಉತ್ತರಾಧಿಕಾರಿಗಳು ಇರಲಿಲ್ಲ–ಪರಲೋಕದ ಯೆರುಸಲೇಮಿಗೆ ಹನ್ನೆರಡು ಅಡಿಪಾಯಗಳು ಇತ್ತು ಮತ್ತು ಇದಕ್ಕಿಂತ ಹೆಚ್ಚಾಗಿ ಇಲ್ಲ ಹಾಗೂ ಅವುಗಳಲ್ಲಿ ಹನ್ನೆರಡು ಅಪೋಸ್ತಲರ ಹೆಸರುಗಳನ್ನು ಬರೆಯಲಾಗಿದೆ ಮತ್ತು ಇನ್ಯಾರ ಹೆಸರು ಇಲ್ಲ. **R 2987 : 5**

## 18 ನವೆಂಬರ್

**"ನಾನು ನಿನ್ನನ್ನು ಆಶೀರ್ವದಿಸಿ ನಿನ್ನ ಹೆಸರನ್ನು ದೊಡ್ಡದಾಗಿ ಮಾಡುವೆನು, ನೀನು ಆಶೀರ್ವಾದವಾಗಿರುವಿ." (ಆದಿಕಾಂಡ 12 : 2)**

ನಮ್ಮ ಹೃದಯಗಳಲ್ಲಿ ಈ ನೆರವೇರಿಕೆ ಈಗಾಗಲೇ ಪ್ರಾರಂಭವಾಗಿದೆ. ಆದರೆ ಅದುವೇ ಅಂತ್ಯವಲ್ಲ, ಪೂರ್ಣತೆಯಲ್ಲ, ಅದುವೇ ವಾಗ್ದಾನಗಳ ಅಂತಿಮ ಎಂದು ಅರ್ಥವಲ್ಲ; ಏಕೆಂದರೆ ಭವಿಷ್ಯದಲ್ಲಿ ಈ ಪರಿಶುದ್ಧ ದೇಶದ (ಕ್ರಿಸ್ತನ ಶರೀರವಾಗಿರುವ ಸಭೆಯು) ದೇವರ ಮಹಿಮೆಯುಳ್ಳ ರಾಜ್ಯವಾಗಿ ದೈವಿಕ ಆಶೀರ್ವಾದ ಮತ್ತು ಶಕ್ತಿಯೊಂದಿಗೆ ತುಂಬಿರುವಾಗ ನಿಜವಾಗಿಯೂ ಬಹಳ ಮಹತ್ತರವಾಗಿರುತ್ತದೆ. ಕರ್ತನು ತನ್ನ ಆತ್ಮದ ಮೂಲಕ ನಮ್ಮ ಹೃದಯದಲ್ಲಿ ದಯೆಯಿಂದ ಬೆಳಗಿದ ಬೆಳಕನ್ನು ಇತರರ ಮೇಲೆ ಬೆಳಗಿಸುವದು ನಮ್ಮ ಆಶೀರ್ವಾದದ ಸವಲತ್ತಾಗಿದೆ ಎಂದು ನಾವು ಅರಿತುಕೊಳ್ಳುತ್ತೇವೆ, ಆದರೂ ಮಹತ್ತರವಾದ ಆಶೀರ್ವಾದವನ್ನು ನೀಡುವ ನಮ್ಮ ಸಮಯವು ಇನ್ನೂ ಭವಿಷ್ಯದಲ್ಲಿದೆ–"ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಭೂಮಿಯಲ್ಲಿ ನೆರವೇರಲಿ" ಎಂದು ಇನ್ನೂ ಪ್ರಾರ್ಥಿಸುತ್ತಿದ್ದೇವೆ, ಅದು ಭವಿಷ್ಯದ ಆ ಅವಧಿಗೆ ಸೇರಿದೆ. ನಮ್ಮ ಹೆಸರು ಈಗ ಕೆಟ್ಟದ್ದಾಗಿದ್ದರೂ ಮತ್ತು ನಮ್ಮ ಶರೀರದ ತಲೆಯಾದ ಕ್ರಿಸ್ತನ ಮೇಲೆ

ಮಾಡಿದ ನಿಂದೆಗಳು ಆತನ ಅಂಗಗಳಾದ ನಮ್ಮ ಮೇಲೆಯೂ ಬರಬಹುದು ಎಂಬ ಕಾರಣಗಳಿದ್ದರೂ, ಮುಂದೆ ಕ್ರಿಸ್ತನ ಹೆಸರು ಭೂಮಿಯಲ್ಲೆಲ್ಲಾ ಮಹತ್ತರವಾಗುವ ಸಮಯವು ಖಂಡಿತವಾಗಿಯೂ ಹತ್ತಿರವಾಗುತ್ತಿದೆ ಮತ್ತು ಅದು ನಮ್ಮ ಮದಲಿಂಗನ ಹೆಸರಾಗಿರುವುದರಿಂದ, ಅದು ಆತನ ಮದಲಗಿತ್ತಿ ಮತ್ತು ಸಹ–ಬಾಧ್ಯಸ್ಥರು ಎಂಬ ಹೆಸರೂ ಸಹ ನಮಗಾಗಲಿದೆ. ಈ ಪರಿಶುದ್ಧ ದೇಶವು ಈಗ ತಪ್ಪಾಗಿ ಗ್ರಹಿಸಲ್ಪಟ್ಟಿದ್ದರೂ, ಈ ವಿಶೇಷ ಜನರು (ಸಭೆಯು) ಮುಂದೆ ಸೈತಾನನಿಂದ ವಂಚನೆಗೆ ಒಳಗಾದ ಬಡವರು, ಕುರುಡರು ಆಗಿರುವ ಲೋಕದ ಜನರನ್ನು ಮತ್ತು ಹೆಸರಿಗೆ ಮಾತ್ರದ ಸಭೆಯನ್ನು, ದೇಹ ಮತ್ತು ಶರೀರವಾಗಿರುವ ಕ್ರಿಸ್ತನ ಮೇಲೆ ಉಂಟುಮಾಡಿದ ಎಲ್ಲಾ ಕೆಡುಕುಗಳಿಗೆ ಬದಲಾಗಿ ಅವರನ್ನು ಆಶೀರ್ವದಿಸಿ, ಉನ್ನತ ಮಟ್ಟದಲ್ಲಿ ಕೆಟ್ಟದಕ್ಕೆ ಬದಲಾಗಿ ಒಳ್ಳೆಯದನ್ನು ಮಾಡಿ–ದೈವಿಕ ದಯೆಗೆ ಹಿಂದಿರುಗುವ ಎಲ್ಲರಿಗೂ ಮಾರ್ಗದರ್ಶನ ನೀಡಿ, ಅವರನ್ನು ಮೇಲಕ್ಕೆ ಎತ್ತುವ (ಉನ್ನತಿಗೆ ತರುವ) ಸಮಯಕ್ಕಾಗಿ ನಾವು ಸಂತೋಷದಿಂದ ಎದುರು ನೋಡುತ್ತಿದ್ದೇವೆ. **R 2847:2**

## 19 ನವೆಂಬರ್

**"ಜಯಹೊಂದುವವನು ಎಲ್ಲವುಗಳಿಗೆ ಬಾಧ್ಯನಾಗುವನು; ನಾನು ಅವನ ದೇವರಾಗಿರುವೆನು. ಅವನು ನನ್ನ ಮಗನಾಗಿರುವನು." (ಪ್ರಕಟನೆ 21 : 7)**

ಮೇಲಿನ ವಾಕ್ಯದಲ್ಲಿ ಹೇಳಲ್ಪಟ್ಟವರು ಸುವಾರ್ತಾ ಯುಗದಲ್ಲಿ ಆಯ್ಕೆಯಾದ ಮದಲಗಿತ್ತಿ ವರ್ಗದವರಲ್ಲ, ಆದರೆ ಮತ್ತಾಯ **25**ನೇ ಅಧ್ಯಾಯದ ಕುರಿ ವರ್ಗದವರು–ಸಾವಿರ ವರ್ಷದ ಯುಗದಲ್ಲಿ ಅಂತಹ ಮನುಕುಲದವರು ಕರ್ತನ ಕುರಿಗಳಾಗಿ ಆತನ ಧ್ವನಿಗೆ ಕಿವಿಗೊಡುತ್ತಾರೆ. ಸಾವಿರ ವರ್ಷದ ಕೊನೆಯಲ್ಲಿ ತಂದೆಯ ಯೋಜನೆಗೆ ಹೊಂದಾಣಿಕೆಯುಳ್ಳ ಇಂಥವರಿಗೆ ಆತನು ಹೀಗೆ ಹೇಳುತ್ತಾನೆ, "ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತೆಗೆದುಕೊಳ್ಳಿರಿ." ಪರಲೋಕ ರಾಜ್ಯದಲ್ಲಿ ಕರ್ತನೊಂದಿಗೆ ಸಹ–ಬಾಧ್ಯಸ್ಥರಾಗಲು ನಮಗೋಸ್ಕರ ಸಿದ್ಧಪಡಿಸಲಾದ ರಾಜ್ಯವನ್ನು ಸ್ವಾಸ್ಥ್ಯವಾಗಿ ಪಡೆಯಲು ಅವರನ್ನು ಆಹ್ವಾನಿಸಲಾಗಿಲ್ಲ. ಆದರೆ ಕರ್ತನು ಕೊಂಡುಕೊಂಡ ಭೂಮಿಯನ್ನು ಸ್ವಾಸ್ಥ್ಯವಾಗಿ ಪಡೆಯುತ್ತಾರೆ–ಅವರು ಅವಿಧೇಯತೆಯ ಮೂಲಕ ಆದಾಮನು ಮತ್ತು ಅವನ ಮಕ್ಕಳು ಕಳೆದುಕೊಂಡ ಉತ್ತಮ ನೆಲೆಯನ್ನು ಮರಳಿ ಪಡೆಯುವರು. ಅದನ್ನು ಯೇಸು ತನ್ನ ಸ್ವಂತ ಅಮೂಲ್ಯವಾದ ರಕ್ತದಿಂದ ಪುನಃ ವಿಮೋಚಿಸಿದನು ಮತ್ತು

ಸಾವಿರ ವರ್ಷದ ಕೊನೆಯಲ್ಲಿ ಆದಾಮನ ಎಲ್ಲಾ ಮಕ್ಕಳಲ್ಲಿ ಯಾರೆಲ್ಲಾ ಆತನ ಕೃಪೆಯುಳ್ಳ ದಯೆಯನ್ನು ಸ್ವೀಕರಿಸಿ ಆತನಿಂದ ಪುನರುಜ್ಜೀವನಗೊಂಡು ಆತನ ಮಕ್ಕಳಾಗುತ್ತಾರೋ, ಅಂಥವರಿಗೆ ಆತನು ದೇವರೂ–ಅವರ ತಂದೆಯೂ ಆಗಿರುತ್ತಾನೆ. ಮತ್ತು ಅವರು ಆದಾಮನಲ್ಲಿ ಕಳೆದುಕೊಂಡದ್ದೆಲ್ಲವನ್ನು ಮರಳಿ ಪಡೆದುಕೊಳ್ಳುವರು. **R 2833 : 5**

## 20 ನವೆಂಬರ್

**"ಕರ್ತನಿಗಾಗಿ ಕಾದಿರು ಎಂದು ನಾನು ಹೇಳುವೆನು." (ಕೀರ್ತನೆಗಳು 27 : 14)**

ಯಾವುದೇ ವಿಷಯಕ್ಕಾಗಿ ಕರ್ತನ ಮುಂದೆ ಹೋಗಲು ಪ್ರಯತ್ನಿಸುವುದು ಅಪಾಯಕಾರಿ ಎಂದು ನಮ್ಮಲ್ಲಿ ಕೆಲವರು ಅನುಭವದಿಂದ ಕಲಿತಿದ್ದಾರೆ. ನಮಗೆ ನಾವೇ ಮಾರ್ಗದರ್ಶನ ನೀಡುವಷ್ಟು ನಾವು ಬುದ್ಧಿವಂತರಲ್ಲ. ವಾಸ್ತವವಾಗಿ ಕವಿ ವ್ಯಕ್ತಪಡಿಸಿದಂತೆ "ಅಧಿಕವಾಗಿ ಒಳಗೊಂಡಿರುವ ವಿಷಯಗಳನ್ನು ಸ್ಪರ್ಶಿಸಲು (ಮುಟ್ಟಲು) ನಾವು ಭಯಪಡುತ್ತೇವೆ." ಕೆಲವೊಮ್ಮೆ ನಮ್ಮ ಪರಿಸ್ಥಿತಿಯ ಸೂಕ್ಷ್ಮತೆಯನ್ನು ನಾವು ಗುರುತಿಸುವಾಗ ಅದು ನಮ್ಮನ್ನು ಇನ್ನೂ ತಗ್ಗಿಸಿಕೊಂಡು ಜಾಗರೂಕರಾಗಿರುವಂತೆ ಮಾಡುತ್ತದೆ. ಹಾಗಿಲ್ಲದಿದ್ದರೆ ಅದು ನಮ್ಮ ಸ್ವಂತ ಹಿತಾಸಕ್ತಿ ಮತ್ತು ನಿತ್ಯ ಮಹಿಮೆಗೆ ಮಾತ್ರವಲ್ಲದೆ, ಕ್ರಿಸ್ತನ ಶರೀರದ ಇತರ ಸಹ–ಸದಸ್ಯರ ಹಿತಾಸಕ್ತಿಗಳೂ ಸಹ ಅಪಾಯಕ್ಕೊಳಗಾಗುತ್ತದೆ. ಕಠಿಣವಾದ ಮಾತು, ಆಲೋಚನಾರಹಿತ ಕ್ರಿಯೆ, ಮಾತಿನ ಯಾವುದೇ ಅರ್ಥದಲ್ಲಿ ಅಜಾಗರೂಕತೆಯಿದ್ದರೆ ಅದು ಹೃದಯದ ಪ್ರತಿಕೂಲ (ನೀತಿಗೆ ವಿರುದ್ಧವಾದ) ಪರಿಸ್ಥಿತಿಗಳಿಗೆ ಕಾರಣವಾಗಬಹುದು ಮತ್ತು ನಾವು ವಾಗ್ದಾನವನ್ನು ಪಡೆದಿದ್ದರೂ ಸಹ ಅದು ಕರ್ತನು ನಡೆಸುವ ಮಾರ್ಗಕ್ಕಿಂತ ಹೆಚ್ಚಾಗಿ ಉಪದ್ರವದಿಂದ ಕೂಡಿರಬಹುದು. **R 4235 : 2**

## 21 ನವೆಂಬರ್

**"ನಿದ್ರೆ ಮಾಡುವವನೇ, ಎಚ್ಚರವಾಗು, ಸತ್ತವರಿಂದ ಎದ್ದೇಳು; ಕ್ರಿಸ್ತನು ನಿನಗೆ ಪ್ರಕಾಶಕೊಡುವನು." (ಎಫೆಸದವರಿಗೆ 5 : 14)**

ನಂಬುವವನಾದ, ಮಾರ್ಪಟ್ಟ, ಪ್ರತಿಷ್ಠಿಸಲ್ಪಟ್ಟ, ಪವಿತ್ರಾತ್ಮದಿಂದ ಗರ್ಭಧರಿಸಿದ (ಭ್ರೂಣಾಂಕುರಗೊಂಡು) (begotten of the Holy Spirit) ನಿದ್ರಿಸುತ್ತಿದ್ದ "ನೂತನ ಸೃಷ್ಟಿ"ಯು

ಎಚ್ಚರಗೊಂಡಾಗ–ಲೋಕದ ನಿಜವಾದ ಪರಿಸ್ಥಿತಿಗಳನ್ನು ಮತ್ತು ಕ್ರಿಸ್ತನಲ್ಲಿ ತನ್ನನ್ನು ತಾನು ನೂತನ ಸೃಷ್ಟಿಯಾಗಿ ಅರಿತುಕೊಳ್ಳಲು ಆತನ ತಿಳುವಳಿಕೆಯ ಕಣ್ಣುಗಳು ಮತ್ತು ಕಿವಿಗಳು ತೆರೆದ ನಂತರ–ಆತನ ಮುಂದಿನ ಕರ್ತವ್ಯ ಏನೆಂದರೆ "ಎದ್ದೇಳುವುದು." ಸತ್ತವರಿಂದ ಎದ್ದೇಳುವುದು ಎಂದರೆ ನೂತನ ಮನಸ್ಸು, ನೂತನ ಚಿತ್ತವನ್ನು ತನ್ನ ಮರ್ತ್ಯ (ಸತ್ತ) ದೇಹವನ್ನು ನಿರ್ದೇಶಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಚಟುವಟಿಕೆಯಿಂದಿರಿಸುವುದನ್ನು ಸೂಚಿಸುತ್ತದೆ. ಇದು ನಾವು ಮಾಡಬೇಕಾದ ಪ್ರಯಾಸವನ್ನು ಸೂಚಿಸುತ್ತದೆ; ಇದು ನೂತನ ಸೃಷ್ಟಿಯ ಎಲ್ಲಾ ಶಕ್ತಿಯನ್ನು ವ್ಯಯಗೊಳಿಸುವುದನ್ನು ಸೂಚಿಸುತ್ತದೆ. ನಿದ್ರಿಸಲು ಯಾವ ಪ್ರಯಾಸವು ಅಗತ್ಯವಿಲ್ಲ ಅಥವಾ ಒಬ್ಬನು ಎಚ್ಚರಗೊಂಡ ಮೇಲೆ ಮತ್ತೆ ನಿದ್ರಿಸಲು ಯಾವ ಪ್ರಯಾಸವು ಅಗತ್ಯವಿಲ್ಲ; ಆದರೆ ಎದ್ದೇಳಲು ಪ್ರತಿ ಸ್ನಾಯುವಿನ ಪ್ರಯಾಸದ ಅವ್ಯಶವಿದೆ. ಎದ್ದೇಳುವುದು ಎಂದರೆ ತಕ್ಷಣದ ಕ್ರಿಯೆಯಲ್ಲ ಆದರೆ ಅದು ಸಂಪೂರ್ಣಗೊಳ್ಳುವವರೆಗೆ ಒಂದರ ನಂತರ ಮತ್ತೊಂದರ ಚಲನೆಯ ಅಗತ್ಯವಿರುವ ಪ್ರಕ್ರಿಯೆಯಾಗಿದೆ; ಅದೇ ರೀತಿ ನೂತನ ಸೃಷ್ಟಿಯು ಪಾಪದ ಸತ್ತ ಪರಿಸ್ಥಿತಿಗಳಿಂದ ನೀತಿಯ, ಸತ್ಯದ ಮತ್ತು ಶುದ್ಧತೆಯ ಪ್ರಮಾಣ (ನಿಯಮ)ಗಳ ವಿರುದ್ಧ ನಾವು ಮಾಡುವ ಅಪರಾಧಗಳಿಂದ ಎದ್ದೇಳುವುದು ಒಂದು ಕ್ರಮೇಣವಾದ ಕ್ರಿಯೆಯಾಗಿದೆ; ಅದಕ್ಕೆ ತನ್ನ ಪ್ರತಿ ಪ್ರಯತ್ನದ ಅಗತ್ಯವಿದೆ ಮತ್ತು ಇದು ಸಮಯ ತೆಗೆದುಕೊಳ್ಳುವ ಕೆಲಸವಾಗಿದೆ. ಸತ್ತವರೊಳಗಿಂದ ಎದ್ದೇಳಲು ಅಪೋಸ್ತಲನ ಆಜ್ಞೆಯನ್ನು ಅನುಸರಿಸುವ ಎಲ್ಲಾ ಅನುಭವವುಳ್ಳ ಕ್ರೈಸ್ತರು ಲೋಕದ ಮನುಕುಲದವರಿಗೆ ಸಾಮಾನ್ಯವಾದ, ಅವನ ಸ್ವಂತ ಶರೀರದ ಬಿದ್ದುಹೋದ ಪ್ರವೃತ್ತಿಗಳಿಗಿಂತ ಮೇಲೆ, ಉನ್ನತಕ್ಕೆ ಎದ್ದೇಳಲು ದಿನಗಳು, ತಿಂಗಳುಗಳು, ವರ್ಷಗಳು ಶಕ್ತಿಯುತ ಪ್ರಯತ್ನದ ಅವಶ್ಯವಿದೆ ಎಂದು ಕಂಡುಕೊಂಡಿದ್ದಾರೆ. ಅವನು ಸಂಪೂರ್ಣವಾಗಿ ಎದ್ದ ನಂತರವೂ ಆತನು ಉದ್ದೇಶಪೂರ್ವಕವಾಗಿ ಪಾಪ ಮಾಡದೆ ಇರಲು, ಯಾವುದೇ ಅರ್ಥದಲ್ಲಿ ಅಥವಾ ಅಳತೆಯಲ್ಲಿ ಪಾಪ ಮಾಡದೆ ಇರಲು, ಅವನು ಇನ್ನೂ ಎಚ್ಚರವಾಗಿರಬೇಕು, ಇಲ್ಲದಿದ್ದರೆ ಅವನು ತನ್ನ ಮರ್ತ್ಯ ಶರೀರದ ಬಲಹೀನತೆಗಳಿಂದ ಸಿಕ್ಕಿ ಹಾಕಿಕೊಳ್ಳುತ್ತಾನೆ; ಅಥವಾ ಲೋಕದ ಆಕರ್ಷಣೆಗಳಿಂದ; ಅಥವಾ ಎದುರಾಳಿಯ ಶೋಧನೆಗಳಿಂದ ಪಾಪ ಮಾಡದೆ ಇರಲು ಇನ್ನೂ ಎಚ್ಚರವಾಗಿರಬೇಕು; ಹೀಗೆ ಪಾಪ ಮತ್ತು ಮರಣದ ಕೆಲವು ವಿಷಯಗಳ ಮೇಲೆ ಕರ್ತನ ಕೃಪೆಯಿಂದ ಆತನು ಎದ್ದೇಳಿದ ವಿಚಾರವನ್ನು ಅರಿತುಕೊಂಡು ಮತ್ತೆ ಮುಗ್ಗರಿಸಿ ಬೀಳದ ಹಾಗೆ ಎಚ್ಚರವಾಗಿರಬೇಕು. **R 2967 : 1**

## 22 ನವೆಂಬರ್

**"ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ ಇರಿ." (ಎಫೆಸದವರಿಗೆ 5 : 20)**

ಪರಲೋಕ ರಾಜ್ಯದ ಪ್ರಜೆಗಳಾದ ನಮಗೆ ರಾಷ್ಟ್ರೀಯ ಕೃತಜ್ಞತಾ ದಿನಗಳನ್ನು (national thanksgiving) ವಿಶೇಷವಾಗಿ ಅನುಸರಿಸುವ ಅಗತ್ಯವಿಲ್ಲ; ಯಾಕೆಂದರೆ ಪ್ರತಿದಿನವೂ ನಮಗೆ ಎಲ್ಲಾ ವಿಷಯಗಳಲ್ಲಿಯೂ ಅದು ಕೃತಜ್ಞತೆಯ ದಿನಗಳಾಗಿರಬೇಕು. ಯಾಕೆಂದರೆ ನಮ್ಮ ರಾಜನಾದ ಕ್ರಿಸ್ತನ ನೀತಿಯ ಅಧಿಕಾರದಲ್ಲಿರುವ ನಮ್ಮ "ಪವಿತ್ರ ರಾಷ್ಟ್ರ" (ಪರಿಶುದ್ಧ ದೇಶ) ಕ್ಕಾಗಿ, ಅದರ ಸಮಾಧಾನ, ಸಂತೋಷಕ್ಕಾಗಿ ಮತ್ತು ಅದರ ಮಹಿಮೆಯುಳ್ಳ ನಿರೀಕ್ಷೆಗಾಗಿ, ಅದರ ಆತ್ಮೀಕ ಜ್ಞಾನೋದಯದ ಸವಲತ್ತುಗಳಿಗಾಗಿ (ಭಾಗ್ಯಕ್ಕಾಗಿ) ಮತ್ತು ಆಶೀರ್ವಾದಗಳಿಗಾಗಿ, ಅದರ ನಿಯಮಗಳ (ನ್ಯಾಯಪ್ರಮಾಣಗಳ) ಪರಿಪೂರ್ಣತೆ ಮತ್ತು ಅದರ ಓಟವನ್ನು ಓಡಿ ಗುರಿ ಮುಟ್ಟುವುದಕ್ಕಾಗಿ ಮತ್ತು ಅದಕ್ಕೆ ಅಗತ್ಯವಿರುವ ಶಿಸ್ತಿಗಾಗಿ, ಅದರ ಭವಿಷ್ಯದ ಉನ್ನತಿ ಮತ್ತು ಮಹಿಮೆ ಹೊಂದುವುದಕ್ಕೆ ತಯಾರಾಗುವುದಕ್ಕಾಗಿ ಪ್ರತಿದಿನವೂ ಕೃತಜ್ಞತೆಯ ದಿನವಾಗಿರಬೇಕು. ಈ ಲೋಕದ ಜನರು ಮತ್ತು ಸ್ವಲ್ಪ ಮಟ್ಟಿಗೆ ಜ್ಞಾನೋದಯಗೊಂಡಿರುವ ಕ್ರೈಸ್ತರು ಧನ್ಯವಾದಗಳನ್ನು ಸಲ್ಲಿಸಲಿ, ನಿಸ್ಸಂದೇಹವಾಗಿ ಅವರಲ್ಲಿ ಅನೇಕರು ಪ್ರಾಮಾಣಿಕ ಹೃದಯದಿಂದ ಧನ್ಯವಾದಗಳನ್ನು ಸಲ್ಲಿಸುತ್ತಾರೆ. ಏಕೆಂದರೆ ಈ ಪ್ರಸ್ತುತ(ಈಗಿನ) ಜೀವಿತದ ಸಾಮಾನ್ಯ ಆಶೀರ್ವಾದಗಳಿಗಾಗಿ–ಗಾಳಿ, ಬಿಸಿಲು ಮತ್ತು ಮಳೆಗಾಗಿ, ಸಮೃದ್ಧವಾದ ಫಸಲು ಮತ್ತು ಋತುಗಳಿಗಾಗಿ, ವಿದೇಶದಲ್ಲಿರುವ ಜನರೊಂದಿಗೆ ಬಹುಮಟ್ಟಿಗೆ ಸಮಾಧಾನದಿಂದಿರುವುದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಲಿ, ನಿಸ್ಸಂದೇಹವಾಗಿ ಅವರಲ್ಲಿ ಅನೇಕರು ಧನ್ಯವಾದಗಳನ್ನು ಸಲ್ಲಿಸುತ್ತಾರೆ. ಹೌದು ದೇವರಿಗೆ ಸ್ತೋತ್ರವಾಗಲಿ, ಆತನ ಹೇರಳವಾದ ಕರುಣೆಯಿಂದ ಈ ಅತ್ಯಧಿಕವಾದ ಆಶೀರ್ವಾದಗಳು ಎಲ್ಲರಿಗೂ ಸಾಮಾನ್ಯವಾಗಿ ಸಿಕ್ಕಿದೆ–ನೀತಿಯುಳ್ಳವರಿಗೆ ಮತ್ತು ಅನೀತಿಯುಳ್ಳವರಿಗೂ ಸಹ ಮತ್ತು ಅವುಗಳನ್ನು ಗುರುತಿಸಲು ಮತ್ತು ಪರಿಗಣಿಸಲು ಎಲ್ಲಾ ಜನರ ಗಮನವನ್ನು ಸೆಳೆಯುವುದು ಒಳ್ಳೆಯದು.... ಮತ್ತು ಲೋಕದ ಜನರು ಹೀಗೆ ಅದನ್ನು ಗುರುತಿಸಿ, ಸಂತೋಷಪಟ್ಟು, ಕೆಲವು ಸಂದರ್ಭಗಳಲ್ಲಿ ನಮ್ಮ ಪ್ರೀತಿಯ ಮತ್ತು ಕರುಣೆಯುಳ್ಳ ತಂದೆಯು, ಕೆಟ್ಟವರ ಮತ್ತು ನೀತಿವಂತರ ಮೇಲೆ ಸಮಾನವಾಗಿ ನಿಜವಾದ ಮಹಿಮೆಯುಳ್ಳ ಸಾಮಾನ್ಯ

ಆಶೀರ್ವಾದಗಳನ್ನು ನೀಡಿರುವುದಕ್ಕಾಗಿ ದೇವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಾರೆ. ನಮ್ಮ ಹೃದಯಗಳು ಈ ವಿಷಯಗಳಲ್ಲಿ ಮಾತ್ರ ಸಂತೋಷಪಡದೆ, ದೇವರ ಪುತ್ರರಿಗೆ ನೀಡಲಾದ ಉನ್ನತ ಆತ್ಮೀಕ ದಯೆಗಳಿಗಾಗಿಯೂ ಸಹ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಯಾವಾಗಲೂ, ಎಲ್ಲದಕ್ಕೂ ಕೃತಜ್ಞತೆಯನ್ನು ಸಲ್ಲಿಸುವವರಾಗೋಣ. **R 1490 : 1**

## 23 ನವೆಂಬರ್

**"ದಾರಿಯಲ್ಲಿ ಹಳ್ಳದ ನೀರು ಕುಡಿಯುವನು; ಆದದರಿಂದ ಆತನು ತಲೆ ಎತ್ತುವನು." (ಕೀರ್ತನೆಗಳು 110 : 7)**

ನಮ್ಮ ಮಹಿಮೆಯುಳ್ಳ ಕರ್ತನು ಪರಲೋಕದ ಆಸ್ಥಾನಗಳಿಂದ ಇಳಿದು, ಅನುಭವದ ಹಳ್ಳದಲ್ಲಿ ನೀರು ಕುಡಿಯುವುದು ಮತ್ತು ಆತನು ಅನುಭವಿಸಿದ, ಸಹಿಸಿಕೊಂಡ ಮತ್ತು ಆ ಮೂಲಕ ದೇವರಲ್ಲಿ ತನ್ನ ವಿಶ್ವಾಸವನ್ನು ಪ್ರದರ್ಶಿಸುವ ಮೂಲಕ ಜ್ಞಾನವನ್ನು ಪಡೆಯುವುದು ಅಗತ್ಯವಿದ್ದರೆ, ಅದಕ್ಕೆ ಸಮಾನವಾಗಿ ಆತನ ಶರೀರದ ಎಲ್ಲಾ ಅಂಗದವರು ಅದೇ ರೀತಿ ಕರ್ತನೊಂದಿಗೆ ರಾಜ್ಯದ ಆಶೀರ್ವಾದಗಳಾದ – ಮಹಿಮೆ, ಘನತೆ ಮತ್ತು ಅಮರತ್ವ, ದೈವಿಕ ಸ್ವಭಾವದಲ್ಲಿ ಪಾಲು ಹೊಂದಬೇಕೆಂದು ನಿರೀಕ್ಷಿಸಿದರೆ ಅವರೂ ಸಹ ಹಳ್ಳದಲ್ಲಿ ನೀರು ಕುಡಿಯಬೇಕು ಎಂದು ನಾವು ಗ್ರಹಿಸುತ್ತೇವೆ. ನಮ್ಮ ಪ್ರಿಯ ಬೋಧಕನು ಹಳ್ಳದಲ್ಲಿ ನೀರು ಕುಡಿಯುವ ಸಮಯ ಕಳೆದಿದೆ, ಆದರೂ ಅದರಿಂದ ಪಾಠಗಳು ಮತ್ತು ಪ್ರೋತ್ಸಾಹಗಳು ಸತ್ಯವೇದದ ದಾಖಲೆಗಳಲ್ಲಿ ಈಗಲೂ ನಮ್ಮ ಮುಂದೆ ಇವೆ. ಅನುಭವದ ಹಳ್ಳದಲ್ಲಿ ನೀರು ಕುಡಿಯುವುದು ಈಗ ನಮ್ಮ ಸಮಯವಾಗಿದೆ–ರಾಜ್ಯಕ್ಕಾಗಿ ನಮ್ಮ ಸಿದ್ಧತೆಗೆ ಅಗತ್ಯವಾದ ಪಾಠಗಳನ್ನು ಕಲಿಯುವುದು ಅಗತ್ಯವಾಗಿದೆ. ನಾವು ಅನುಭವದ ಹಳ್ಳವನ್ನು ರುಚಿನೋಡುವದು ಮಾತ್ರ ಸಾಲದು, ನಾವು ಏನಾದರೂ ಕೆಲವು ವಿಧೇಯತೆಯನ್ನು ಕಲಿತಿರುವುದು ಮಾತ್ರ ಸಾಲದು, ಕೆಲವು ಶೋಧನೆಗಳನ್ನು ಸಹಿಸಿಕೊಳ್ಳುವದು ಮಾತ್ರ ಸಾಲದು, ಕೆಲವು ಸಂದರ್ಭಗಳಲ್ಲಿ ನಾವು ಅನುಭವಿಸಿದ ವಿಷಯಗಳ ಮೂಲಕ ವಿಧೇಯತೆಯನ್ನು ಕಲಿತಿರುವುದು ಮಾತ್ರ ಸಾಲದು; ತಂದೆಯೇ ನಿನ್ನ ಚಿತ್ತದಂತೆಯೇ ಆಗಲಿ, ನಮ್ಮ ಚಿತ್ತದಂತಲ್ಲ ಎಂದು ನಾವು ಹೇಳುವವರೆಗೂ ನಾವು ಕುಡಿಯುವುದನ್ನು ಮುಂದುವರಿಸಬೇಕು! ನಾವು ಜೀವನಪರ್ಯಂತ ಈ ಹಳ್ಳದಲ್ಲಿ ನೀರು ಕುಡಿಯದಿದ್ದರೆ, ನಮಗೆ ಮುಂದೆ ಬರಲಿರುವ ಮಹಿಮೆಯಲ್ಲಿ ಪಾಲು ಹೊಂದಲು ಸಾಧ್ಯವಾಗುವುದಿಲ್ಲ. **R 2936 : 1**

## 24 ನವೆಂಬರ್

**"ಕರ್ತನ ವಾಕ್ಯವು ಅವರಿಗೆ ಆಜ್ಞೆಯ ಮೇಲೆ ಆಜ್ಞೆ;...ಸೂತ್ರದ ಮೇಲೆ ಸೂತ್ರವಾಗಿದೆ" (ಯೆಶಾಯನು 28 : 13)**

ಕ್ರೈಸ್ತರ ಅನುಭವವು ಒಂದು ನಿರಂತರವಾದ ಶಾಲಾ ಶಿಕ್ಷಣವಾಗಿದೆ. ಪ್ರತಿದಿನ ನಾವು ನಮ್ಮ ಬಗ್ಗೆ ಮತ್ತು ದೇವರ ಜ್ಞಾನ ಮತ್ತು ನೀತಿಯ ಬಗ್ಗೆ ಹೆಚ್ಚೆಚ್ಚಾಗಿ ಕಲಿಯುತ್ತಿದ್ದೇವೆ. ನಾವು ಪ್ರತಿದಿನ ಈ ಪಾಠಗಳನ್ನು ಕಲಿಯುತ್ತಾ ಹೋದಂತೆ, ನಮ್ಮನ್ನು ನಾವೇ ನಿರಾಕರಿಸಿ, ನಮ್ಮನ್ನು ಸರಿಪಡಿಸಲು ಅಧಿಕವಾಗಿ ಕಲಿಯುತ್ತೇವೆ. ಹೀಗೆ ನಾವು ಕಲಿಯುವ ಸಮಯದಲ್ಲಿ, ನಮ್ಮ ಸ್ವಂತ ಅಪೂರ್ಣತೆಗಳನ್ನು ನಮ್ಮಲ್ಲಿ ಕಂಡುಕೊಂಡಾಗ, ಇತರರಲ್ಲಿ ಪರಿಪೂರ್ಣತೆಯನ್ನು ನಿರೀಕ್ಷಿಸಬಾರದು ಎಂಬ ವಿಚಾರವನ್ನು ಕಲಿಯಬೇಕು; ಮತ್ತು ಕ್ರಿಸ್ತನ ಶರೀರದಲ್ಲಿನ ಸದಸ್ಯತ್ವಕ್ಕೆ ಅಗತ್ಯವಾದ ಏಕತೆ ಮತ್ತು ಪರಿಪೂರ್ಣತೆಗೆ ಸಂಬಂಧಿಸಿದಂತೆ, ಅವರು ಅತ್ಯುನ್ನತ ಆದರ್ಶದ ಉದಾಹರಣೆಯಾಗಿ ಜೀವಿಸಲು ಅವರು ಪಡುವ ಉತ್ತಮ ಪ್ರಯಾಸಕ್ಕಾಗಿ ನಾವು ಅವರನ್ನು ಪ್ರಸಂಶಿಸಬೇಕು. **R 5124: 3**

## 25 ನವೆಂಬರ್

**"ಹದ್ದು ತನ್ನ ಗೂಡಿನಿಂದ ಮರಿಗಳನ್ನು ಹೊರಡಿಸಿ ಅವುಗಳ ಮೇಲೆ ತನ್ನ ರೆಕ್ಕೆಯನ್ನಾಡಿಸಿ...(ಕಲಕುವಂತೆ)." (ಧರ್ಮೋಪದೇಶಕಾಂಡ 32 : 11)**

ಹೀಗೆ ಕರ್ತನು ಕೆಲವೊಮ್ಮೆ ಶೋಧನೆಗಳು, ಹಿಂಸೆಗಳು, ಇತ್ಯಾದಿಗಳನ್ನು ಅನುಮತಿಸಿದಾಗ, ಇದು ಹೊರನೋಟಕ್ಕೆ ಅತ್ಯಮೂಲ್ಯವಾದ ಆಸಕ್ತಿಗಳನ್ನು (ವಿಚಾರಗಳನ್ನು) ಧ್ವಂಸಮಾಡುವ ಹಾಗೆ ತೋರುತ್ತದೆ ಮತ್ತು ಕೆಲಮೊಮ್ಮೆ ಒರಟುತನ ಮತ್ತು ಜಿಗುಪ್ಸೆಯ ಪರಿಸ್ಥಿತಿಗಳಿಂದ ತನ್ನ ಜನರಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಅದೇನೇ ಇದ್ದರೂ ದೈವಿಕ ಮೇಲ್ವಿಚಾರಣೆಯಲ್ಲಿ ಗೂಡನ್ನು ಕಲಕುವದು ಮತ್ತು ಆತನ ಜನರ ಮೇಲೆ ಜವಾಬ್ದಾರಿಯನ್ನು ನೀಡುವುದು ಅವರಿಗೆ ಅನುಕೂಲಕರವಾಗಿರಬಹುದು, ಬಲಪಡಿಸಬಹುದು, ಸಹಾಯ ಮಾಡಬಹುದು. ನಂತರ ವಿಶ್ರಾಂತಿಯ ಕಾಲ ಬರುತ್ತದೆ ಮತ್ತು ಆತ್ಮೀಕ ಬೆಳವಣಿಗೆ, ಆರೈಕೆ, ಕೃಪೆ ಮತ್ತು ಜ್ಞಾನದಲ್ಲಿ ಬೆಳವಣಿಗೆಯ ಅವಕಾಶ ಬರುತ್ತದೆ. ಗೂಡು ಕಲಕುವ ಸಮಯದಲ್ಲಿ, ಕರ್ತನ ಏರ್ಪಾಡಿನಿಂದ ಸರಿಯಾಗಿ ಅಭ್ಯಾಸಿಸಲ್ಪಟ್ಟು (ಕಲಿತು), ಆತನಿಂದ ಬೋಧಿಸಲ್ಪಟ್ಟು – ನೀತಿ, ಸತ್ಯ ಮತ್ತು ಪ್ರೀತಿಯ ಸೇವೆಯಲ್ಲಿ ಹೆಚ್ಚೆಚ್ಚಾಗಿ ಕ್ರಿಯಾಶೀಲರಾಗುವವರು ಭಾಗ್ಯವಂತರು. **R 4335 : 2**

## 26 ನವೆಂಬರ್

**"ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಕಠಿಣವಾದ ಶ್ರಮೆಯನ್ನನುಭವಿಸಬೇಕೆಂಬದನ್ನು ನಾನೇ ಅವನಿಗೆ ತೋರಿಸುವೆನು." (ಅಪೊಸ್ತಲರ ಕೃತ್ಯಗಳು 9 : 16)**

ನಮ್ಮ ಕರ್ತನು ಈ ಶ್ರಮೆಯ ವಾಗ್ದಾನಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸೇವೆಯ ನಿಯಮಗಳನ್ನು ನಮಗೆ ನೀಡಿರುವನೆ? ಖಂಡಿತವಾಗಿಯೂ ಇಲ್ಲ. ಆದರೂ ನಿಜಾಂಶದ ಬಗ್ಗೆ ತನ್ನ ಶಿಷ್ಯರನ್ನು ಯಾವುದೇ ತಪ್ಪು ಗ್ರಹಿಕೆಯ ಅಡಿಯಲ್ಲಿ ಕರೆಯದಿರುವುದರಿಂದ ನಮ್ಮ ಕರ್ತನು ಎಷ್ಟು ಪ್ರಾಮಾಣಿಕನಾಗಿದ್ದಾನೆ! ನಾವು ಆತನೊಂದಿಗೆ ಶ್ರಮೆಯನ್ನು ಅನಭವಿಸಲು ಕರೆಯಲ್ಪಟ್ಟಿದ್ದೇವೆ–ನಮ್ಮನ್ನು ನಾವು ಬಲಿ ಸಲ್ಲಿಸಲು, ನಮ್ಮ ಲೌಕಿಕ ಹಿತಾಸಕ್ತಿಗಳನ್ನು ತ್ಯಾಗಮಾಡಲು–ಆತನ ಶಿಲುಬೆಯ ಪಾಡುಗಳನ್ನು ಹಂಚಿಕೊಳ್ಳಲು ಮತ್ತು ಈ ಅನುಭವಗಳ ಮೂಲಕ ನಾವು ಆತನ ಆತ್ಮದಿಂದ ಭ್ರೂಣಾಂಕುರಗೊಂಡಿದ್ದೇವೆ (ಗರ್ಭಧಾರಣೆ ಹೊಂದಿದ್ದೇವೆ) ಎಂದು ಸಾಬೀತುಪಡಿಸಲು ಕರೆಯಲ್ಪಟ್ಟಿದ್ದೇವೆ ಮತ್ತು ಅದು ನಮ್ಮ ಹೃದಯದಲ್ಲಿ ಧಾರಾಳವಾಗಿ ಸುರಿದದೆ ಹಾಗೂ ದೇವರ ಪ್ರೀತಿಯ ಮಗನ ಸ್ವಾರೂಪ್ಯ ಹೊಂದುವುದಕ್ಕೆ ಕರೆಯಲ್ಪಟ್ಟಿದ್ದೇವೆ. ಈ ಕಾರಣಕ್ಕಾಗಿ ನಾವು ನಂಬಿಗಸ್ತರಾಗಿದ್ದರೆ ನಿಶ್ಚಯವಾಗಿ ನಮ್ಮ ವಿಮೋಚಕನೊಂದಿಗೆ ಆತನ ರಾಜ್ಯದಲ್ಲಿ ಸಹ–ಬಾಧ್ಯಸ್ಥರಾಗಿ ಬಹುಮಾನ ಹೊಂದಬಹುದು; ಇಲ್ಲದಿದ್ದರೆ ಆ ರಾಜ್ಯದ ಗೌರವಗಳನ್ನು ಬೇರೆ ಯಾವುದೇ ಷರತ್ತುಗಳ ಮೇಲೆ ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಅಪೋಸ್ತಲನು ಇದನ್ನು ಅರ್ಥಮಾಡಿಕೊಂಡನು ಮತ್ತು ಕರ್ತನ ಹಿಂಬಾಲಕರು ಕ್ರಿಸ್ತನ ಸಂಕಟಗಳನ್ನು ತನ್ನ ಶರೀರದಲ್ಲಿ ಎಷ್ಟು ಹೆಚ್ಚಾಗಿ ಹಂಚಿಕೊಳ್ಳುತ್ತಾರೋ, ಅಷ್ಟೇ ಹೆಚ್ಚಾಗಿ ಆತನ ಮಹಿಮೆಯಲ್ಲಿಯೂ ಪಾಲುಹೊಂದುತ್ತಾರೆ. ಅದು ನಾವು "ಆತನ ಶರೀರದ ಅಂಗಗಳಾಗುವಾಗ" ನಮಗೆ ಮುಂದೆ ಪ್ರಕಟವಾಗುತ್ತದೆ ಎಂಬ ಆಲೋಚನೆಯನ್ನು ಸಹ ನಮಗೆ ನೀಡುವಂತೆ ತೋರುತ್ತದೆ. "ನನ್ನ ನಾಮದ ನಿಮಿತ್ತವಾಗಿ" ಎಂಬ ಭಾವನೆಯು ಆಳವಾಗಿದೆ. ಅದು ದೈವಿಕ ಯೋಜನೆಗೆ ಸಂಬಂಧಿಸಿದ ಎಲ್ಲವನ್ನೂ ಒಳಗೊಂಡಿದೆ. ಅದರಲ್ಲಿ ಯೇಸು ಅಂದರೆ ಮೆಸ್ಸೀಯನು ಕೇಂದ್ರಬಿಂದುವಾಗಿದ್ದಾನೆ. ಇದರಲ್ಲಿ ಸತ್ಯಕ್ಕಾಗಿ ಶ್ರಮೆಯನ್ನನುಭವಿಸುವುದೂ ಒಳಗೊಂಡಿದೆ, ಏಕೆಂದರೆ ಸತ್ಯವು ಈ "ಒಂದೇ ನಾಮ" ದೊಂದಿಗೆ ಅತ್ಯಗತ್ಯವಾಗಿ ಸಂಪರ್ಕ ಹೊಂದಿದೆ. ಇದರಲ್ಲಿ ಸಹೋದರ–ಸಹೋದರಿಯರೂ ಒಳಗೊಂಡಿದ್ದಾರೆ. ಏಕೆಂದರೆ ಅವರೂ ಸಹ ಆತನ ಶರೀರದ ಅಂಗಗಳಾಗಿ ಆತನ ನಾಮದ ಅಡಿಯಲ್ಲಿದ್ದಾರೆ. ಇದರಲ್ಲಿ ಸಾವಿರ ವರ್ಷದ ಎಲ್ಲಾ ಕೆಲಸಗಳೂ ಒಳಗೊಂಡಿವೆ.

ಏಕೆಂದರೆ ಕ್ರಿಸ್ತನು ಅವರೆಲ್ಲರಿಗೂ ತಲೆಯಾಗಿದ್ದಾನೆ ಮತ್ತು ಆತನ ನಾಮ, ಆತನ ಗೌರವ ಅವರೆಲ್ಲರೊಂದಿಗೆ ಸಂಬಂಧಪಟ್ಟಿದೆ. ಆದ್ದರಿಂದ ಆತನ "ಅಮೂಲ್ಯವಾದ ನಾಮಕ್ಕೆ" ಮತ್ತು ಈ ವಿವಿಧ ಆಸಕ್ತಿಗಳ ಮೇಲಿನ ನಮ್ಮ ನಂಬಿಗಸ್ತಿಕೆಯಿಂದಾಗಿ, ಪ್ರತ್ಯಕ್ಷವಾಗಿ (ನೇರವಾಗಿ) ಅಥವಾ ಪರೋಕ್ಷವಾಗಿ (ಮರೆಯಾಗಿ) ನಮಗೆ ಬರುವ ಎಲ್ಲಾ ಸಂಕಟಗಳಲ್ಲಿ ನಾವು ಸಂತೋಷಪಡೋಣ. **R 4356 : 4**

## 27 ನವೆಂಬರ್

**"ದೇವರು ತನ್ನ(ಮಗನ) ಸ್ವರಕ್ತದಿಂದ ಕೊಂಡುಕೊಂಡ ಸಭೆಯನ್ನು ಪೋಷಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರನ್ನಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ." (ಅಪೋಸ್ತಲರ ಕೃತ್ಯಗಳು 20 : 28)**

ಸಭೆಯ ಹಿರಿಯರು ಎಲ್ಲಾ ವಿಚಾರದಲ್ಲೂ ವಿಶೇಷವಾದ ಗಮನವನ್ನು ನೀಡಬೇಕು, ಏಕೆಂದರೆ ಇವರಿಗೆ ಬರುವ ಪ್ರತಿಯೊಂದು ಶೋಧನೆಗಳಲ್ಲಿಯೂ ಇವರು ಅತ್ಯಂತ ದಯೆ ಮತ್ತು ಪ್ರಮುಖ ಸ್ಥಾನ ಹೊಂದಿದವರಾಗಿರುವುದರಿಂದ, ಇದರೊಂದಿಗೆ ಇವರು ತೀವ್ರ ತೊಂದರೆಗಳು ಮತ್ತು ಪರೀಕ್ಷೆಗಳನ್ನು ಸಹ ಹೊಂದಿರುತ್ತಾರೆ. ಆದ್ದರಿಂದ ಅಪೋಸ್ತಲನು ಹೀಗೆ ಎಚ್ಚರಿಸುತ್ತಾನೆ, "ನನ್ನ ಸಹೋದರರೇ, ಬೋಧಕರಾದ ನಿಮಗೆ ದೊಡ್ಡ ದಂಡನೆ(ತೀವ್ರ ಶೋಧನೆ)ಯಾಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ." ಅದೇ ರೀತಿ ಹೃದಯದಲ್ಲಿ ಪರಿಶುದ್ಧತೆ, ನಿಸ್ವಾರ್ಥದಿಂದಿರುವ ಎಲ್ಲಾ ಹಿರಿಯರಿಗೆ ನಾವು ಬುದ್ಧಿವಾದ ಹೇಳುವದೇನೆಂದರೆ, ಎಲ್ಲಾ ಮನುಕುಲದ ಬಗ್ಗೆ ಅವರಿಗೆ ಪ್ರೀತಿ ಮತ್ತು ಶುಭ ಹಾರೈಕೆಗಳನ್ನು ಹೊರತುಪಡಿಸಿ ಬೇರೇನೂ ಇರಕೂಡದು ಮತ್ತು ಅವರು ಹೆಚ್ಚೆಚ್ಚಾಗಿ ಪವಿತ್ರಾತ್ಮದ ಫಲಗಳು ಮತ್ತು ಕೃಪೆಗಳಿಂದ ತುಂಬಿರಬೇಕು, ಇದಲ್ಲದೆ ಮಂದೆಯನ್ನು ಕೂಡ ಗಮನಿಸಬೇಕು. ಮಂದೆಯು ಕರ್ತನದು ಎಂದೂ ಮತ್ತು ಕರ್ತನಿಗೆ ಹಾಗೂ ಮಂದೆಗೆ ಇಬ್ಬರಿಗೂ ನೀವು ಜವಾಬ್ದಾರಿಯನ್ನು ಹೊಂದಿರುವಿರಿ ಎಂದು ನೆನಪಿಡಿರಿ. ನೀವು ಮಂದೆಯ ಆತ್ಮಗಳ (ಆಸಕ್ತಿಯನ್ನು) ಕುರಿತು ಗಮನಿಸಬೇಕು, ಏಕೆಂದರೆ ನೀವು ಮಹಾ ಕುರುಬನಿಗೆ ಲೆಕ್ಕ ಕೊಡಬೇಕು ಎಂದು ನೆನಪಿಡಿರಿ. ಎಲ್ಲದರಲ್ಲೂ ಪ್ರಮುಖ ವಿಷಯವೇನೆಂದರೆ ಪ್ರೀತಿ; ಮತ್ತು ಬೋಧನೆಗಳನ್ನು ನಿರ್ಲಕ್ಷಿಸದೆ ಕರ್ತನ ಶರೀರದ ವಿವಿಧ ಅಂಗಗಳಲ್ಲಿ, ಕರ್ತನ ಆತ್ಮದ

ಬೆಳವಣಿಗೆಯನ್ನು ಹೊಂದುವದಕ್ಕಾಗಿ ವಿಶೇಷವಾದ ಗಮನವನ್ನು ಕೊಡಿರಿ, ಅದ್ದರಿಂದ ಅವರು "ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ" ಗಮನ ಕೊಡಿರಿ, ಮತ್ತು ದೈವಿಕ ಚಿತ್ತದ ಪ್ರಕಾರ ಈ ದುಷ್ಟ ದಿನದಲ್ಲಿ ಎಡವಿ ಬೀಳುವುದಕ್ಕೆ ಅವಕಾಶಕೊಡದೆ ಎಲ್ಲವನ್ನೂ ಮಾಡಿ ಮುಗಿಸಿದ ನಂತರ ಕ್ರಿಸ್ತನ ಶರೀರವಾಗಿ, ಆತನ ಅಂಗಗಳಾಗಿ, ಆತನೊಂದಿಗೆ ಬಲಿಯನ್ನು ಅರ್ಪಿಸುವವರಾಗಿ, ಆತನೊಂದಿಗೆ ಸಹ–ಬಾಧ್ಯಸ್ಥರಾಗಿ ಕ್ರಿಸ್ತನಲ್ಲಿ ಸಂಪೂರ್ಣವಾಗಿ ನಿಲ್ಲಲು ನೀವು ವಿಶೇಷವಾದ ಗಮನವನ್ನು ಕೊಡಿರಿ. **R4346 : 5**

## 28 ನವೆಂಬರ್

**"ದೇವರು ಬೆಳಕಾಗಿದ್ದಾನೆ; ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ." (1 ಯೋಹಾನ 1 : 5)**

ಸತ್ಯವೇದವು ದೇವರನ್ನು ಬೆಳಕು ಎಂದು ಸೂಚಿಸುತ್ತದೆ. ದೇವರ ಗುಡಾರದಲ್ಲಿ ಆತನನ್ನು ಕೃಪಾಸನದ ಮೇಲೆ ಅದ್ಭುತವಾದ ಬೆಳಕಿಗೆ ಸೂಚಿಸಲಾಯಿತು, ಇದನ್ನು ಶೆಕಿನಾ ಮಹಿಮೆ ಎಂದು ಕರೆಯಲಾಗುತ್ತದೆ. ನಮ್ಮ ಕರ್ತನಾದ ಯೇಸು ಪವಿತ್ರಾತ್ಮದ ಬೆಳಕಿನಿಂದ ತುಂಬಿರುವುದರಿಂದ "ನಿಜವಾದ ಬೆಳಕು" ಎಂದು ಕರೆಯಲಾಗುತ್ತದೆ. ಆತನು ತನ್ನ ಶಿಷ್ಯರ ಬಗ್ಗೆ "ನೀವು ಲೋಕಕ್ಕೆ ಬೆಳಕಾಗಿದ್ದೀರಿ.... ನಿಮ್ಮ ಬೆಳಕು ಮನುಷ್ಯರ ಮುಂದೆ ಪ್ರಕಾಶಿಸಲಿ, ಅವರು ನಿಮ್ಮ ಒಳ್ಳೆಯ ಕಾರ್ಯಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಮಹಿಮೆಪಡಿಸುವರು." ಅದೇ ರೀತಿ ಪಂಚಶತ್ತಮ ದಿನದಂದು ದೈವಿಕ ಶಕ್ತಿಯು ಬೆಳಕಿನ ಜ್ವಾಲೆಗಳಾಗಿ, ಬೆಂಕಿಯ ಕೆನ್ನಾಲಿಗೆಗಳಾಗಿ ಪ್ರತಿನಿಧಿಸಿತು. ಅದೇ ರೀತಿ ಕರ್ತನ ಆತ್ಮವು ತನ್ನ ಸತ್ಯವೇದ ವಾಕ್ಯಗಳಲ್ಲಿ ದೀಪದಿಂದ ಬೆಳಗುವ ಬೆಳಕಿನ ಜ್ವಾಲೆಯಾಗಿ ಚಿತ್ರಿಸಲಾಗಿದೆ. ನಾವು ವಾಕ್ಯದಲ್ಲಿ ಓದುವಂತೆ, "ನಿನ್ನ ವಾಕ್ಯವು ನನ್ನ ಪಾದಕ್ಕೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ." ಪರಿಶುದ್ಧ ಪ್ರೀತಿಯ ಜ್ವಾಲೆಯು, ತಂದೆ ಮತ್ತು ಮಗನ ಪವಿತ್ರಾತ್ಮವು, ಕೃಪೆಯ ವಾಕ್ಯ ಮತ್ತು ಪವಿತ್ರಾತ್ಮವನ್ನು ಪಡೆಯುವುದರ ಮೂಲಕ ನಮ್ಮ ಹೃದಯದಲ್ಲಿ ಕೆಂಡದಂತೆ ಉರಿಯುತ್ತದೆ. ಎಷ್ಟರ ಮಟ್ಟಿಗೆ ಈ ಜ್ವಾಲೆಯನ್ನು (ಆತ್ಮವನ್ನು) ನಾವು ಸತ್ಯದೊಂದಿಗೆ ಹೊಂದುತ್ತೇವೋ, ನಾವು ಈ ಲೋಕದಲ್ಲಿ ಉರಿಯುವ ಮತ್ತು ಪ್ರಕಾಶಿಸುವ ಬೆಳಕಾಗಿರುತ್ತೇವೆ– ಕರ್ತನ ಆತ್ಮ ನಮ್ಮಲ್ಲಿ ನೆಲೆಸಿರುತ್ತದೆ. **R4419:4**

## 29 ನವೆಂಬರ್

**"ಸತ್ತವನಾದೆನು, ಈಗ ಬದುಕುವವನಾಗಿದ್ದೇನೆ, ಇಗೋ ನಾನು ಎಂದೆಂದಿಗೂ ಬದುಕುವವನಾಗಿದ್ದೇನೆ." (ಪ್ರಕಟನೆ 1 : 18)**

ಸುವಾರ್ತೆಗೆ ಸಂಬಂಧಪಟ್ಟಂತೆ, ನಮ್ಮ ಕರ್ತನಾದ ಯೇಸುವಿನ ಪುನರುತ್ಥಾನಕ್ಕಿಂತ ಹೆಚ್ಚು ಮುಖ್ಯವಾದ ಪಾಠವಿಲ್ಲ. ಯೇಸುವಿನ ಮರಣವು ನಿಜವಾಗಿಯೂ ನಮ್ಮ ಮೇಲಿರುವ ಆತನ ಪ್ರೀತಿಯನ್ನು ತೋರಿಸುತ್ತದೆ ಮತ್ತು ನಮ್ಮ ಪರವಾಗಿ ತಂದೆಯ ಪ್ರೀತಿಯನ್ನು ತೋರಿಸುತ್ತದೆ. ಆದರೆ ದೈವಿಕ ಯೋಜನೆಯಲ್ಲಿ ಯೇಸುವಿನ ಮರಣದಿಂದ ಮನುಷ್ಯನಿಗೆ ಸರಿಯಾದ ಪ್ರಯೋಜನವಾಗಬೇಕಾದರೆ, ಆತನು ಸತ್ತವರೊಳಗಿಂದ ಎದ್ದೇಳಬೇಕು; ಆತನು ನಮ್ಮ ರಕ್ಷಣೆಯ ನಾಯಕನಾಗಬೇಕು, ಹಾಗೆಯೇ ನಮ್ಮ ವಿಮೋಚಕನಾಗಬೇಕು. ಸತ್ತ ಕ್ರಿಸ್ತನು ನಮ್ಮ ರಕ್ಷಕನಾಗಲು ಸಾಧ್ಯವಿಲ್ಲ; ವಾಕ್ಯವು ಹೇಳುವಂತೆ, "ನಾನು ಜೀವಿಸುವದರಿಂದ ನೀವೂ ಸಹ ಜೀವಿಸುವಿರಿ."(ಯೋಹಾನನು 14 : 19)...ಸಾವಿರ ವರ್ಷ ದಿನದ ಪುನರುತ್ಥಾನದ ಮುಂಜಾನೆಗೆ ನಾವು ಬರುವಾಗ ಸತ್ಯವೇದದ ಪ್ರಸ್ತುತಿಗೆ ಸಂಪೂರ್ಣ ಅನುಗುಣವಾಗಿ ಇವು ಇರುವುದರಿಂದ ಸಂತೋಷವು ನಮ್ಮ ಹೃದಯಗಳನ್ನು ರೋಮಾಂಚನಗೊಳಿಸುತ್ತದೆ ಮತ್ತು ಆ ಸಾವಿರ ವರ್ಷದಲ್ಲಿ ಮತ್ತು ಅದರ ಮೂಲಕ ಕರ್ತನು ಎಲ್ಲಾ ಜನರ ಮುಖಗಳಿಂದ ಎಲ್ಲರ ಕಣ್ಣೀರನ್ನು ಒರೆಸಿಬಿಡುವನು ಎಂಬ ವಾಗ್ದಾನ ಮಾಡಿದ್ದಾನೆ. **R4174:2 ; R4175:2**

## 30 ನವೆಂಬರ್

**"ದೇವರ ಮನೆಯ ಮೇಲೆ ಮಹಾಯಾಜಕನು ನಮಗಿರುವದರಿಂದ ನಾವು ಸತ್ಯವಾದ ಹೃದಯದಿಂದಲೂ ವಿಶ್ವಾಸದ ಪೂರ್ಣ ನಿಶ್ಚಯತ್ವದಿಂದಲೂ ಆತನ ಸಮೀಪಕ್ಕೆ ಬರೋಣ." (ಇಬ್ರಿಯರಿಗೆ 10 : 21, 22)**

ದೇವರ ಮಗುವು ದೇವರಿಗೆ ಬಹಳ ಹತ್ತಿರವಾಗುತ್ತಿದ್ದರೆ ಮತ್ತು ತಂದೆಯ ನಗುವಿನ ಅನುಮೋದನೆಯ ಆಶೀರ್ವಾದದ ಮನವರಿಕೆಯನ್ನು ನಿರಂತರವಾಗಿ ಹೊಂದಬೇಕೆಂದರೆ, ಅವನು ದೇವರ ಕಡೆಗೆ ಮತ್ತು ಮನುಷ್ಯನ ಕಡೆಗೆ ಅಪರಾಧವಿಲ್ಲದ ಆತ್ಮಸಾಕ್ಷಿಯನ್ನು ಹೊಂದಲು ಪ್ರಯತ್ನಿಸಬೇಕು–ಆ ಮನಸಾಕ್ಷಿಯು ಸತ್ಯವಾಗಿ ಹೀಗೆ ಹೇಳಬೇಕು–"ಕರ್ತನಿಗೆ ಮೆಚ್ಚುಗೆಯಾಗುವಂತೆ ನನ್ನ ಬಲಿಯ ಒಡಂಬಡಿಕೆಗೆ ಪೂರ್ಣವಾಗಿ ಹೊಂದಾಣಿಕೆಯಾಗುವಂತೆ ಮಾಡಲು ನಾನು

ಶ್ರಮಿಸುತ್ತೇನೆ; ಮತ್ತು ನಾನು ನೀತಿವಂತರ ಅನುಮೋದನೆಯನ್ನು ನ್ಯಾಯಯುತವಾಗಿ ಮಾಡಲು ಸಹ ಪ್ರಯತ್ನಿಸುತ್ತೇನೆ." ರಾಜವಂಶದ ಸದಸ್ಯರು ತಮ್ಮನ್ನು ತಾವು ಪ್ರತಿಷ್ಠೆಪಡಿಸಿಕೊಂಡವರು, ಕರ್ತನೊಂದಿಗೆ ಆಳ್ವಿಕೆ ಮಾಡುವುದಕ್ಕೆ, ಆತನ ಸೇವೆ ಮಾಡುವುದಕ್ಕೆ ತಮ್ಮ ಜೀವಿತವನ್ನೇ ಬಲಿಯಾಗಿ ಸಮರ್ಪಿಸಿದವರಲ್ಲಿ ಇದಕ್ಕಿಂತ ಕಡಿಮೆಯಾದದ್ದೇನ್ನನ್ನು ಅನುಮತಿಸುವುದಿಲ್ಲ. ನಮ್ಮಲ್ಲಿ ಈ ಒಳ್ಳೆಯ ಕ್ರಿಯೆಯನ್ನು ಆರಂಭಿಸಿದಾತನು ಎಂದಿಗೂ ಬದಲಾಗದವನು ಎಂದು ನಾವು ಎಂದಿಗೂ ಮರೆಯದಿರೋಣ ಮತ್ತು ನಾವು ನಮ್ಮ ಹೃದಯವನ್ನು ಆತನೊಂದಿಗೆ ಹೊಂದಾಣಿಕೆಯಾಗಿ (ಸಾಮರಸ್ಯದಿಂದ) ಇಟ್ಟುಕೊಂಡರೆ, ನಮ್ಮ ನಂಬಿಕೆ ಇನ್ನೂ ಸ್ಥಿರವಾಗಿದ್ದು ನಮ್ಮ ಪಾಪಗಳಿಗಾಗಿ ಮಹಾ ಪ್ರಾಯಶ್ಚಿತ ಮಾಡಿದಾತನ ಬಗ್ಗೆ ಸ್ಪಷ್ಟತೆ ಇದ್ದರೆ ಮತ್ತು ನಾವು ಆತನೊಂದಿಗೆ ನಮ್ಮ ಪ್ರತಿಷ್ಠೆಯನ್ನು ನಿರಂತರವಾಗಿ ನವೀಕರಿಸಿಕೊಂಡು, ನಮ್ಮೆಲ್ಲವನ್ನು ಬಲಿಪೀಠದ ಮೇಲಿಟ್ಟು, ಕರ್ತನು ಅದನ್ನು ತನ್ನದೇ ಆದ ರೀತಿಯಲ್ಲಿ ದಹಿಸಲು ಒಪ್ಪಿಸಿಕೊಟ್ಟು, ನಮ್ಮ ಸ್ವಂತ ಚಿತ್ತವನ್ನು ಹುಡುಕದೆ, ನಮ್ಮ ಸ್ವಂತ ಮಾರ್ಗವನ್ನು ಹುಡುಕದೆ, ಆತನ ಚಿತ್ತ ಮಾತ್ರ ನೆರವೇರುವಂತೆ ಒಪ್ಪಿಸಿದರೆ, ಈ ಒಳ್ಳೆಯ ಕ್ರಿಯೆಯು ನಮ್ಮಲ್ಲಿ ನೆರವೇರಿ ಮುಗಿಯುತ್ತದೆ ಎಂದು ಪೂರ್ಣ ಭರವಸೆ ಹೊಂದಲು ನಮಗೆ ಎಲ್ಲಾ ಕಾರಣಗಳಿವೆ. ಅಂದರೆ ನಮ್ಮ ಕರ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುತ್ತೇವೆ ಮತ್ತು "ಭಲೇ, ಒಳ್ಳೆಯ ಮತ್ತು ನಂಬಿಗಸ್ತ ಸೇವಕನೇ" ಎಂಬ ಆತನ ಅನುಮೋದನೆಯ ಆಶೀರ್ವಾದ ಮಾತುಗಳನ್ನು ಕೇಳುತ್ತೇವೆ. **R5425: 2, 5**

## 1 ಡಿಸೆಂಬರ್

**"ತನ್ನ ತಾಯಿಯು ಮತ್ತು ತಾನು ಪ್ರೀತಿಸಿದ ಶಿಷ್ಯನು ಹತ್ತಿರದಲ್ಲಿ ನಿಂತಿರುವದನ್ನು ಯೇಸು ನೋಡಿ ತನ್ನ ತಾಯಿಗೆ–ಸ್ತ್ರೀಯೇ, ಇಗೋ, ನಿನ್ನ ಮಗನು ಅಂದನು. ಆಮೇಲೆ ಆತನು ಆ ಶಿಷ್ಯನಿಗೆ–ಇಗೋ, ನಿನ್ನ ತಾಯಿಯು ಅಂದನು." (ಯೋಹಾನನು 19 : 26, 27)**

ನಮ್ಮ ಕರ್ತನು ತನ್ನ ವೇದನೆಯಲ್ಲಿಯೂ ತನ್ನ ಬಗ್ಗೆ ಯೋಚಿಸದೆ ಇತರರ ಬಗ್ಗೆ ಯೋಚಿಸುತ್ತಿದ್ದನು. ತನ್ನ ಸೇವೆಯ ಸಮಯದಲ್ಲಿ ಆತನು ಒಳ್ಳೆಯದನ್ನು ಮಾಡುತ್ತಾ ಹೋದಂತೆ, ಇಲ್ಲಿ ಆತನು ಸಾಯುವ ಸಮಯದಲ್ಲಿ ಇತರರಿಗೆ ಒಳ್ಳೆಯದನ್ನು ಕುರಿತು ಯೋಚಿಸಿದನು ಮತ್ತು ಮೇಲಿನ ಆಧಾರ ವಾಕ್ಯದಲ್ಲಿ ತನ್ನ ತಾಯಿಯನ್ನು ಪ್ರೀತಿಯ ಶಿಷ್ಯನ ಆರೈಕೆಗೆ ಒಪ್ಪಿಸಿದನು. ಈ ಪಾಠ ಎಷ್ಟು

ಸುಂದರವಾಗಿದೆ! ಇದು ನಮ್ಮ ಕರ್ತನ ವಿಶಾಲವಾದ ಹೃದಯ ಮತ್ತು ಸಹಾನುಭೂತಿಯ ದೊಡ್ಡತನವನ್ನು ನಮಗೆ ತೋರಿಸುತ್ತದೆ ಮತ್ತು ನಮ್ಮದೇ ಆದ ದೊಡ್ಡ ಹಾಗೂ ಚಿಕ್ಕ ಕಷ್ಟಗಳು ಮತ್ತು ನಮ್ಮ ಸ್ವಂತ ಶೋಧನೆಗಳಲ್ಲಿ ಮುಳುಗದೆ ಇರಲು ಅದು ನಮಗೆ ಕಲಿಸುತ್ತದೆ. ನಾವು ಇತರರ ಭಾರವನ್ನು ಹೊರುವವರಾಗಿ, ಅವರಿಗೆ ನಮ್ಮ ಸಹಾನುಭೂತಿ ತೋರಿಸುತ್ತಾ, ನಮ್ಮ ಆರೈಕೆಯ ಅಡಿಯಲ್ಲಿರುವವರೆಲ್ಲರ ಆಶೀರ್ವಾದಕ್ಕಾಗಿ ನಮ್ಮ ಯೋಚನೆಗಳು ಹಾಗೂ ನಮ್ಮ ಯೋಜನೆಗಳು ತಾತ್ಕಾಲಿಕ ಅಥವಾ ಆತ್ಮೀಕ ವಿಷಯಗಳಲ್ಲಿ ಸಾಧ್ಯವಾದಷ್ಟು ಸಕ್ರಿಯರಾಗಿರಬೇಕು. **R 4173 : 1**

## 2 ಡಿಸೆಂಬರ್

**"ಆತನ ಮೂಲಕ ನಾವೂ ನೀವು ಒಂದೇ ಆತ್ಮವನ್ನು ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವುದಕ್ಕೆ ಮಾರ್ಗವಾಯಿತು." (ಎಫೆಸದವರಿಗೆ 2 : 18)**

ನಾವು ಕೃಪೆಯ ಸಿಂಹಾಸನದ ಬಳಿಗೆ ಆಗಾಗ್ಗೆ ಹೋಗದೆ ಅಡ್ಡದಾರಿ ಹಿಡಿದರೆ ನಾವು ಎಂದಿಗೂ ಸುರಕ್ಷಿತವಾಗಿರಲು ಸಾಧ್ಯವಿಲ್ಲ; ನಮ್ಮೊಳಗೆ ಬರುವ ಮಹಾ ಜೀವ ಬುಗ್ಗೆಗೆ ನಾವು ತುಂಬಾ ಹತ್ತಿರದಲ್ಲಿರದಿದ್ದರೆ ನಾವು ಆತನ ಆತ್ಮದಿಂದ ತುಂಬಿರಲು ಸಾಧ್ಯವಿಲ್ಲ. ನಾವು ಪ್ರತಿದಿನ ನಮ್ಮ ಮಣ್ಣಿನ ಪಾತ್ರೆಯನ್ನು ಈ ಪರಲೋಕದ ಬುಗ್ಗೆಯ ಬಳಿಗೆ ಹೊತ್ತುಕೊಂಡು ಹೋಗಬೇಕು; ಏಕೆಂದರೆ ನಾವು ಸೋರುವ ಪಾತ್ರೆಗಳಾಗಿದ್ದೇವೆ. ನಾವು ಎದುರು ನೋಡುವ ತ್ವರಿತ ಬೆಳವಣಿಗೆಯನ್ನು ಕಾಣದಿದ್ದಾಗ ನಾವು ನಿರುತ್ಸಾಹಗೊಳ್ಳಬಾರದು. ಭೀಕರ ಚಂಡಮಾರುತಗಳನ್ನು ತಡೆದುಕೊಳ್ಳುವ ಬಲವಾದ ಗಟ್ಟಿಮುಟ್ಟಾದ ಮರಗಳು ಒಂದೇ ದಿನದಲ್ಲಿ ಬೆಳೆಯುವುದಿಲ್ಲ. ಬೆಳವಣಿಗೆ ಎಂಬುದು ಒಂದು ನಿಧಾನವಾದ, ಸ್ಥಿರವಾದ ಪ್ರಕ್ರಿಯೆಯಾಗಿದೆ. **R 5912 : 5**

## 3 ಡಿಸೆಂಬರ್

**"ಕೆಲವರು ಹೊಟ್ಟೆಕಿಚ್ಚುಪಟ್ಟು ಭೇದ ಹುಟ್ಟಿಸಬೇಕೆಂಬ ಭಾವನೆಯಿಂದ ಬೇರೆ ಕೆಲವರು ಒಳ್ಳೇಭಾವದಿಂದ ಕ್ರಿಸ್ತನನ್ನು ಪ್ರಚುರಪಡಿಸುತ್ತಾರೆ." (ಫಿಲಿಪ್ಪಿಯವರಿಗೆ 1:15)**

ನಾವು ಸತ್ಯವನ್ನು ಕಾದುಕೊಳ್ಳುವದು ನಮ್ಮ ಸ್ವಂತ–ಮಹಿಮೆ ಪಡಿಸಿಕೊಳ್ಳುವುದರ ಉದ್ದೇಶಕ್ಕಾಗಿ ಅಲ್ಲದೆ, ಸತ್ಯದ ಮೇಲಿನ ಪ್ರೀತಿಯಿಂದ, ಕರ್ತನ

ಮೇಲಿನ ಪ್ರೀತಿಯಿಂದ, ಆತನ ಜನರಾದ ನಮ್ಮ ಸಹೋದರರ ಮೇಲಿನ ಪ್ರೀತಿಯಿಂದಿರುವ ಉದ್ದೇಶಕ್ಕಾಗಿ ನಮ್ಮನ್ನು ನಾವು ಕಾದುಕೊಳ್ಳಬೇಕು. ಒಂದು ವೇಳೆ ಪ್ರೀತಿಯು ಪ್ರೇರೇಪಿಸುವ ಆತ್ಮದಿಂದ ಅಥವಾ ಉದ್ದೇಶದಿಂದಿದ್ದರೆ, ಅದು ಎಲ್ಲಾ ಸಹ–ಸೇವಕರೊಂದಿಗೆ ಪ್ರೀತಿಯಿಂದ, ಶಾಂತತೆಯಿಂದ, ತಾಳ್ಮೆಯಿಂದ, ದೀನತೆಯ ಮಾರ್ಗದಲ್ಲಿ ತನ್ನನ್ನು ತಾನೇ ವ್ಯಕ್ತಪಡಿಸುತ್ತದೆ. "ನಾವು ಎಲ್ಲರೊಂದಿಗೂ ಶಾಂತತೆಯಿಂದಿರೋಣ". "ಆತ್ಮವು ಕೊಡುವ ದೇವರ ವಾಕ್ಯವೆಂಬ ಕತ್ತಿಯು" ಸಜೀವವಾದದ್ದೂ ಮತ್ತು ಶಕ್ತಿಯುತವಾಗಿರುವುದರಿಂದ ಅದೇ ಎಲ್ಲಾ ಕತ್ತರಿಸುವ ಕೆಲಸವನ್ನು ಮಾಡಲಿ. **R4803 : 5**

## 4 ಡಿಸೆಂಬರ್

**"ದೇವರ ಆಲಯವು ಪವಿತ್ರವಾದದ್ದು, ಆ ಆಲಯವು ನೀವೇ." (1 ಕೊರಿಂಥದವರಿಗೆ 3 : 17)**

"ಆ ಆಲಯವು ನೀವೇ" ಅಂದರೆ ಕರ್ತನ ಸಭೆ ಎಂಬ ಆಲಯವನ್ನು ಕಟ್ಟುವುದಕ್ಕೆ ಸಂಬಂಧಪಟ್ಟಂತೆ ನಮಗಿರುವ ಪಾಠವೇನೆಂದರೆ–ಲೌಕಿಕ ವ್ಯಕ್ತಿಗಳು, ಲೌಕಿಕ ವಿಧಾನಗಳು, ಲೌಕಿಕ ಸಹಾಯ ಮತ್ತು ಜ್ಞಾನವನ್ನು ನಾವು ನಿರಾಕರಿಸಬೇಕಾಗಿದೆ. ಹೇಗೆ ಮಹಾ ಬೋಧಕನೂ, ಕಟ್ಟುವವನೂ ಆದ ಕರ್ತನ ದೃಷ್ಟಿಯ ಅಡಿಯಲ್ಲಿ ಮತ್ತು ಆತನ ಮಾರ್ಗದರ್ಶನದಲ್ಲಿ ಎಲ್ಲಾ ಜೀವಂತ ಕಲ್ಲುಗಳನ್ನು ನಯಗೊಳಿಸಿ, ಅಳವಡಿಸಿ, ತಯಾರಾಗುವಂತೆ ಎಲ್ಲಾ ಸೇವಕರು ಅಂದರೆ ಈ ಸೇವೆಯಲ್ಲಿ ತೊಡಗಿರುವ ಎಲ್ಲಾ ಸತ್ಯದ ಸೇವಕರು ಈ ವಿಚಾರದ ಅಡಿಯಲ್ಲಿ ನಡೆದುಕೊಳ್ಳಬೇಕು. ಅಂಥವರು ಮಾತ್ರ ಹೃದಯದಲ್ಲಿ ಸುನ್ನತಿಯಾಗಿರುವುದನ್ನು ಕುರಿತು ವ್ಯಕ್ತಪಡಿಸುತ್ತಾರೆ ಮತ್ತು ತಮ್ಮನ್ನು ನಿಜವಾದ ಇಸ್ರಾಯೇಲ್ಯರೆಂದು ತೋರಿಸಿಕೊಳ್ಳುವರು. ಕೆಲಸಗಾರರನ್ನು ಆಯ್ಕೆಮಾಡುವಾಗ ಮುಖ್ಯವಾಗಿ ಅವರು ಸಾರ್ವಜನಿಕ ಭಾಷಣಕಾರರು, ಒಳ್ಳೆಯ ಭಾಷಣ ಮಾಡುತ್ತಾರೆ ಎಂಬ ಕಾರಣಕ್ಕೆ ಶಿಫಾರಸ್ಸು ಮಾಡಿದರೆ ಅದು ಕರ್ತನ ಸೇವೆಗೆ ಗಂಭೀರವಾದ ಗಾಯ ಉಂಟು ಮಾಡುತ್ತದೆ. ಇದಕ್ಕೆ ಬದಲಾಗಿ ಬೋಧಕನೂ ಕಟ್ಟುವವನೂ ಆಗಿರುವಾತನಿಗೆ ಅವರು ಪೂರ್ಣ ಅನುಸಾರವಾಗಿಲ್ಲದಿದ್ದರೆ ನಿಜವಾದ ಇಸ್ರಾಯೇಲ್ಯರು ಎಂದು ಯಾರೂ ಈ ಕೆಲಸದಲ್ಲಿ ತೊಡಗಿಸಿಕೊಳ್ಳಬಾರದು ಮತ್ತು ಸತ್ಯದ ವಾಕ್ಯವನ್ನು ಸರಿಯಾಗಿ ವಿವೇಚಿಸಿ, ಅವರ ಸಾಮರ್ಥ್ಯದ ಮೂಲಕ ನಾಚಿಕೆಪಡದೆ ಇರುವ ಕೆಲಸಗಾರರು ಎಂದು ತಮ್ಮನ್ನು ತಾವೇ ನಿರೂಪಿಸಬೇಕು. **R 2512 : 5**

## 5 ಡಿಸೆಂಬರ್

**“ಆದದರಿಂದ ಸಹೋದರರೇ, ನಿಮ್ಮ ಕರೆಯುವಿಕೆಯನ್ನೂ ಆಯ್ಕೆಯನ್ನೂ ದೃಢಪಡಿಸಿಕೊಳ್ಳುವದಕ್ಕೆ ಜಾಗ್ರತೆಯಾಗಿರಿ: ಯಾಕೆಂದರೆ ಇವುಗಳನ್ನು ನೀವು ಮಾಡಿದರೆ ಎಂದಿಗೂ ತಪ್ಪಿಹೋಗುವುದಿಲ್ಲ.” (2 ಪೇತ್ರನು 1:10)**

ಈ ಮೇಲಿನ ವಿಚಾರಗಳನ್ನು ಪರಿಪೂರ್ಣವಾಗಿ ಮಾಡುವುದು ಮಾತ್ರವೇ ಅಂತಿಮ ಕಾರ್ಯವಲ್ಲ ಮತ್ತು ಕ್ರಿಸ್ತನ ನೀತಿಯು ನಮ್ಮ ದ್ರೋಹಗಳನ್ನು ಮರೆಮಾಡುವುದು ಮತ್ತು ನಮ್ಮ ಅನುದಿನದ ಕೊರತೆಗಳನ್ನು ಸರಿದೂಗಿಸುವದು ಮಾತ್ರವಲ್ಲ; ಆದರೆ ನಮ್ಮ ನಂಬಿಕೆಗೆ ಕ್ರಿಸ್ತನು ಹೊರಿಸಿದ ನೀತಿಯನ್ನು ಸೇರಿಸಿದರೆ, ನಮ್ಮ ಸಾಮರ್ಥ್ಯದ ಮಟ್ಟಿಗೆ ಈ ಎಲ್ಲಾ ಕೃಪೆಗಳನ್ನು ನಾವು ಬೆಳೆಸಿಕೊಂಡಿದ್ದಾದರೆ, ನಾವು ಎಡವಿ ಬೀಳುವುದಿಲ್ಲ. ನಾವು ಮಾಡಬಹುದಾದ ಎಲ್ಲವನ್ನೂ ಮಾಡಿದ ನಂತರವೂ ನಾವು ಪ್ರಯೋಜನವಿಲ್ಲದ ಸೇವಕರಾಗಿದ್ದೇವೆ. ನಮ್ಮ ಸ್ವಂತ ನೀತಿಯಲ್ಲಿ ಭರವಸೆಯಿಡಲು ನಾವು ಧೈರ್ಯವಿಲ್ಲದವರಾಗಿದ್ದೇವೆ. ಆದರೆ ಕ್ರಿಸ್ತನಲ್ಲಿರುವ ನಂಬಿಕೆಯಿಂದ ನಮಗೆ ಸಿಗುವ ನಿಲುವಂಗಿಯು ನಮ್ಮದಾಗುತ್ತದೆ. ಸ್ಥಿರವಾದ "ಎಚ್ಚರಿಕೆ"ಯಿಂದ ನಾವು ನಮ್ಮ ಸ್ವಂತ ರಕ್ಷಣೆಯನ್ನು ಭಯದಿಂದಲೂ ಮತ್ತು ನಡುಕದಿಂದಲೂ ಸಾಧಿಸಿಕೊಳ್ಳುತ್ತೇವೆ. ಯಾರೆಲ್ಲಾ ಪಾಪವನ್ನು ತ್ಯಜಿಸಲು ಬಯಸುತ್ತಾರೋ ಮತ್ತು “ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ” ಎಂದು ತಿಳಿದು ಪರಿಶುದ್ಧತೆಯನ್ನು ಹುಡುಕುವವರಿಗೆ ಮಾತ್ರ ಕ್ರಿಸ್ತನ ನೀತಿಯು ಅನ್ವಯಿಸುತ್ತದೆ. **R 2155 : 6**

## 6 ಡಿಸೆಂಬರ್

**“ನೀವು ಯಾವುದನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಹೃದಯಪೂರ್ವಕವಾಗಿ ಮಾಡಿರಿ; ಕರ್ತನಿಂದ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವರೆಂದು ತಿಳಿದಿದ್ದೀರಲ್ಲಾ. ಯಾಕೆಂದರೆ ಕರ್ತನಾದ ಕ್ರಿಸ್ತನನ್ನು ಸೇವಿಸುವವರಾಗಿದ್ದೀರಿ.” (ಕೊಲೊಸ್ಸೆಯವರಿಗೆ 3 : 23,24)**

ಕ್ರೈಸ್ತ ಧರ್ಮದ ಅಡಿಪಾಯದ ತತ್ವಗಳು ಈ ಮೇಲಿನ ಆಧಾರ ವಾಕ್ಯದ ಮೇಲೆ ಅಡಕವಾಗಿದೆ, ಇದು ಲೌಕಿಕ ಆಲೋಚನೆ ಮತ್ತು ನಡವಳಿಕೆಗೆ ವಿರುದ್ಧವಾಗಿದೆ; ಅದೇನೆಂದರೆ ಸಭೆಯಲ್ಲಿ ಬಹಳ ದೊಡ್ಡವನು ಯಾರೆಂದರೆ ಅವನು ಸಭೆಗೆ ಅತ್ಯಂತ ದೊಡ್ಡ ಸೇವಕನಾಗಿರುತ್ತಾನೆ, ಮತ್ತೊಬ್ಬರಿಗೆ ಅತ್ಯಧಿಕವಾದ

ಸಹಾಯವನ್ನು ಮಾಡುವವನಾಗಿರುತ್ತಾನೆ. ಸಭೆಯಲ್ಲಿ ಶ್ರೇಷ್ಠ ಸೇವಕನು ಯಾರೆಂದರೆ ಅದು ಸ್ವತಃ ಸಭೆಯ ಮಹಾ ಶಿರಸ್ಸಾಗಿರುವ ನಮ್ಮ ಕರ್ತನು, ಅತನು ನಮಗಾಗಿ ಸ್ವತಃ ತನ್ನ ಜೀವವನ್ನೇ ನೀಡಿದ್ದಾನೆ. ಮತ್ತು ಆತನ ಶಿಷ್ಯರು, ಕರ್ತನ ಎಣಿಕೆಯಲ್ಲಿ ದೊಡ್ಡವರಾಗಬೇಕೆಂದು ಬಯಸುವವರು, ಅದಲ್ಲದೆ ತನ್ನ ಜೊತೆ ಸೇವಕರ ಎಣಿಕೆಯಲ್ಲಿ ಗೌರವವನ್ನು ಬಯಸುವವರು ತಮ್ಮ ಬೋಧಕನ ಹೆಜ್ಜೆಯ ಜಾಡನ್ನು ನಿಕಟವಾಗಿ (ಹತ್ತಿರವಾಗಿ) ಅನುಸರಿಸಬೇಕು. ಮತ್ತು ಹೃದಯದಲ್ಲಿ ದೀನ ಸ್ವಭಾವದಿಂದ ಸಹೋದರರಿಗಾಗಿ ತಮ್ಮ ಜೀವವನ್ನೇ ಮುಡುಪಾಗಿಡಲು ಬಯಸುವವರಾಗಿರಬೇಕು ಮತ್ತು ಸಿದ್ಧರಾಗಿರಬೇಕು. ಇದು ಕೇವಲ ಉಪಚಾರ(ಬಾಹ್ಯಾಚಾರದ) ಸೇವೆ ಎಂದರ್ಥವಲ್ಲ; ಇದು ನಿಜವಾದ (ಹೃದಯದಿಂದ ಮಾಡುವ) ಸೇವೆ ಎಂದರ್ಥವಾಗಿದೆ. ನಮ್ಮ ಕರ್ತನ ತ್ಯಾಗ–ಬಲಿಯನ್ನು ನಾವು ನೋಡುವದಾದರೆ, ಅದು ಕೇವಲ ಒಂದು ಬಗೆಯ ಉಪಚಾರ ಅಥವಾ ಆಸಕ್ತಿ ಮತ್ತು ಪ್ರೀತಿಯನ್ನು ಪ್ರದರ್ಶಿಸುವದಾಗಿರಲಿಲ್ಲ; ಅದು ತನ್ನ ಜೀವವನ್ನು ನಮಗಾಗಿ ಬೆಲೆಯಾಗಿ ಕೊಟ್ಟು ನಮ್ಮನ್ನು ಕೊಂಡುಕೊಳ್ಳುವದಾಗಿತ್ತು. ಅದೇ ರೀತಿ ನಾವೂ ಮಾಡಬೇಕಾಗಿದೆ; ನಾವು ಒಬ್ಬರನೊಬ್ಬರು ಪ್ರೀತಿಸುವದು ಮತ್ತು ಸೇವೆ ಮಾಡುವದು ಕೇವಲ ಮಾತಿನಲ್ಲಿ, ಉದ್ಯೋಗದಲ್ಲಿ, ಶೀರ್ಷಿಕೆಯಲ್ಲಿ ಮಾತ್ರವಲ್ಲ(ಉದಾಹರಣೆಗೆ "ಮಿನಿಸ್ಟರ್" ಎಂಬ ಪದವು ಸೇವಕನನ್ನು ಸೂಚಿಸುತ್ತದೆ); ಆದರೆ ನಾವು "ಕ್ರಿಯೆಯಲ್ಲಿಯೂ, ಸತ್ಯದಲ್ಲಿಯೂ" ಒಬ್ಬರನೊಬ್ಬರು ಪ್ರೀತಿಸುತ್ತಾ ಒಬ್ಬರಿಗೊಬ್ಬರು ಸೇವೆಮಾಡಬೇಕು. **R 2343:5**

## 7 ಡಿಸೆಂಬರ್

**"ಯಾಕೆಂದರೆ ಮಾತನಾಡುವವರು ನೀವಲ್ಲ, ಆದರೆ ನಿಮ್ಮ ತಂದೆಯ ಆತ್ಮನು ನಿಮ್ಮೊಳಗೆ ಮಾತನಾಡುತ್ತಾನೆ." ( ಮತ್ತಾಯ 10 :20 )**

ಪುತ್ರತ್ವದ ಪವಿತ್ರಾತ್ಮವನ್ನು ನೀಡುವ ಅರ್ಥದಲ್ಲಿ ದೇವರು ನೇಮಿಸಿದವರು ಮಾತ್ರ ಕರ್ತನ ಹೆಸರಿನಲ್ಲಿ ಬೋಧಿಸಲು ನಿಯೋಜಿಸಲ್ಪಟ್ಟಿದ್ದಾರೆ ಅಥವಾ ಅಧಿಕಾರ ಹೊಂದಿದ್ದಾರೆ. ಭೂಮಿಯ ಮೇಲಿನ ಎಲ್ಲಾ ಸಂಪ್ರದಾಯಗಳು ಮತ್ತು ಬಿಷಪ್ಗಳ ಎಲ್ಲಾ ಕೈಗಳು ದೇವರ ಹೆಸರಿನಲ್ಲಿ ಮಾತನಾಡಲು, ಯಾರಿಗೂ ಅಧಿಕಾರವನ್ನು ನೀಡಲು ಸಾಧ್ಯವಿಲ್ಲ. ನಮ್ಮ ಕರ್ತನಾದ ಯೇಸು ದೇವರಿಂದ ಕಟ್ಟಳೆಯನ್ನು ಪಡೆಯುವವರೆಗೂ ತನ್ನ ಸೇವೆಯನ್ನು ಪ್ರಾರಂಭಿಸಲಿಲ್ಲ. ಆತನ ಪ್ರತಿಷ್ಠೆಯ ಮತ್ತು ದೀಕ್ಷಾಸ್ನಾನದ ಸಮಯದಲ್ಲಿ ಪವಿತ್ರಾತ್ಮವು ಆತನ ಮೇಲೆ ಇಳಿದು, ಆತನನ್ನು

ಅಭಿಷೇಕಿಸಿ, ಆತನನ್ನು ಪ್ರತಿಷ್ಠೆಪಡಿಸಿ, ದೀನರಿಗೆ ಶುಭ ಸಮಾಚಾರವನ್ನು ಸಾರಲು, ಮುರಿದ ಮನಸ್ಸುಳ್ಳವರನ್ನು ಕಟ್ಟಿ, ಸೆರೆಯಲ್ಲಿರುವವರಿಗೆ ಸ್ವಾತಂತ್ರ್ಯವನ್ನು ಘೋಷಿಸಲು, ಕರ್ತನ ಅಂಗೀಕಾರದ ವರುಷವನ್ನು ಸಾರಿ ಹೇಳುವದಕ್ಕೂ, ದುಃಖವುಳ್ಳವರೆಲ್ಲರನ್ನು ಆದರಿಸುವದಕ್ಕೂ ಪವಿತ್ರಾತ್ಮವು ಆತನ ಮೇಲೆ ಇಳಿದು ಬಂತು. ಅದೇ ಪವಿತ್ರಾತ್ಮವನ್ನು ಸ್ವೀಕರಿಸುವ ಯಾರಿಗಾದರು, ದೇವರ ಯೋಜನೆಯನ್ನು ಅರ್ಥಮಾಡಿಕೊಂಡವರು, ಕೇಳುವ ಕಿವಿಯುಳ್ಳವರಿಗೆ–ವಿಶೇಷವಾಗಿ ದೀನರಿಗೆ, ಮುರಿದ ಮನಸುಳ್ಳವರಿಗೆ, ದೇವರನ್ನು ಕುರಿತು ನೆನಸುವವರಿಗೆ ಶುಭಸಮಾಚಾರವನ್ನು ಸಾರಲು ಈ ಪವಿತ್ರಾತ್ಮವು ಅಧಿಕಾರಪೂರ್ವಕವಾಗಿ ಕೊಡಲ್ಪಟ್ಟಿದೆ. ಅಪೋಸ್ತಲನಾದ ಪೌಲನು ಸಭೆಯ ಅಂಗದ ಸ್ತ್ರೀಯರು ಸಾರ್ವಜನಿಕವಾಗಿ ಬೋಧಿಸಬಾರದು ಎಂದು ತಿಳಿಸಿದ್ದರೂ, ಪವಿತ್ರಾತ್ಮದ ಅಭಿಷೇಕ ಪಡೆದ ಅವರೆಲ್ಲರಿಗೂ ಉಪದೇಶಿಸಲು ಮತ್ತು ಬೋಧಿಸಲು ಅವರು ಸ್ತ್ರೀಯಾಗಿದ್ದರೂ ಅವರ ಮಿತಿಗಳ ಅಡಿಯಲ್ಲಿ ಯಾವುದೇ ಅಡ್ಡಿಯಿಲ್ಲ ಮತ್ತು ಕೆಲವು ಸಾರಿ ಖಾಸಗಿಯಾಗಿ ಬೋಧಿಸುವುದು ಸಾರ್ವಜನಿಕವಾಗಿ ಬೋಧಿಸಿದಷ್ಟೇ ಸಮಾನವಾದ ಪರಿಣಾಮಕಾರಿಯಾಗಿರುತ್ತದೆ. **R 5363 : 2**

## 8 ಡಿಸೆಂಬರ್

**"ಯಾಕೆಂದರೆ ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಉದಯಿಸುವಂತೆ ಮಾಡುತ್ತಾನೆ; ಮತ್ತು ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ." ( ಮತ್ತಾಯ 5 : 45 )**

ನಾವು ಮೇಲಿನ ಆಧಾರ ವಾಕ್ಯವನ್ನು ಓದುವಾಗ ನಮ್ಮ ದೇವರು ಕೃತಜ್ಞತೆ ಇಲ್ಲದವರಿಗೂ, ಅನೀತಿವಂತರಿಗೂ, ಪಾಪಿಗಳಿಗೂ ಸಹ ಆತನು ಕೃಪೆಯುಳ್ಳವನೂ, ಪ್ರೀತಿಯುಳ್ಳವನೂ, ಕರುಣೆ ಮತ್ತು ದಯೆಯುಳ್ಳವನೂ ಎಂದು ಈ ವಾಕ್ಯ ಹೇಳುವುದನ್ನು ನೋಡುತ್ತೇವೆ. ಅದೇ ರೀತಿ ನಾವು ಸಹ ದಯೆ, ಉದಾರ, ಪ್ರೀತಿಯುಳ್ಳವರಾಗಿದ್ದು ಅವಕಾಶ ಸಿಕ್ಕಿದಾಗ ಎಲ್ಲಾ ಮನುಷ್ಯರಿಗೆ ಮತ್ತು ವಿಶೇಷವಾಗಿ ವಿಶ್ವಾಸದ ಮನೆವಾರ್ತೆಯವರಿಗೆ ಒಳ್ಳೆಯದನ್ನು ಮಾಡಬೇಕು. ದೇವರ ಈ ದೃಷ್ಟಿಕೋನವು ನಮ್ಮ ಹೃದಯವನ್ನು ಸ್ಪಂದಿಸುತ್ತದೆ; ಮತ್ತು ನಾವು ಈ ಪ್ರೀತಿಯ ದೇವರನ್ನು ಎಷ್ಟು ಹೆಚ್ಚಾಗಿ ಅಧ್ಯಯನ ಮಾಡುತ್ತೇವೋ, ಆತನೊಬ್ಬನೇ ಪ್ರೀತಿಯುಳ್ಳ ಮತ್ತು ಸತ್ಯ ದೇವರೆಂದು ಎಷ್ಟು ಹೆಚ್ಚಾಗಿ ಅರಿತುಕೊಳ್ಳುತ್ತೇವೋ ಮತ್ತು ನಮ್ಮ ಹಿಂದಿನ ಎಲ್ಲಾ ತಪ್ಪು ಕಲ್ಪನೆಗಳು ನಿಜವಲ್ಲವೆಂದೂ, ಪ್ರೀತಿಯಿಲ್ಲದ್ದೆಂದೂ,

ಅಸತ್ಯವಾದವುಗಳೆಂದೂ–ನಾವೇ ಸೃಷ್ಟಿಸಿಕೊಂಡ ದೇವರೆಂದೂ–ಮತ್ತು ನಾವು ಇನ್ನೂ ನೋಡುವದೇನೆಂದರೆ ನಾಗರಿಕ ದೇಶಗಳು ಪೆನ್ನು, ಮುದ್ರಣ, ಶಾಯಿ(ಇಂಕ್) ಮತ್ತು ಕಾಗದದಿಂದ ಧರ್ಮದ ವಿಗ್ರಹಗಳನ್ನು ಮಾಡಿದ್ದಾರೆ, ಇದು ಅನ್ಯ ಜನರು ಹಿಂದೆ ಕಬ್ಬಿಣ, ಕಲ್ಲು, ಹಿತ್ತಾಳೆ, ಅಥವಾ ಜೇಡಿಮಣ್ಣಿನಿಂದ ಮಾಡಿದ ವಿಗ್ರಹಕ್ಕಿಂತ ಭಯಾನಕವಾಗಿದೆ....ನಾವು ಒಳ್ಳೆಯದಾಗಿರುವ ದೇವರ ದೃಢವಾದ ವಾಕ್ಯವನ್ನು ಹಿಡಿದಿಟ್ಟುಕೊಳ್ಳೋಣ. ದೈವಿಕ ಸಂದೇಶವನ್ನು ನಮಗೆ ಬಹಳ ತಪ್ಪಾಗಿ ನಿರೂಪಿಸಿದ ಕತ್ತಲೆ (ಅಂಧಕಾರ) ಯುಗದ ಮಾನವ ಸಿದ್ಧಾಂತಗಳನ್ನು ನಾವು ತ್ಯಜಿಸೋಣ. ಹಾಗೆ ಮಾಡುವುದರಿಂದ ನಾವು ನಮ್ಮ ಬೋಧಕನ ಮಾತುಗಳಿಗೆ ಗಮನ ಕೊಡುತ್ತೇವೆ. ಅದೇನೆಂದರೆ: "ನೀವು ಸತ್ಯವನ್ನು ತಿಳಿದುಕೊಳ್ಳುವಿರಿ; ಆ ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು." **R 5474 : 5**

## 9 ಡಿಸೆಂಬರ್

**"ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ." (ಮತ್ತಾಯ 6 : 9, 10)**

ಹತ್ತೊಂಬತ್ತು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಈ ಪ್ರಾರ್ಥನೆಯನ್ನು ಸಲ್ಲಿಸಲಾಗುತ್ತಿದೆ ಮತ್ತು ದೇವರ ಮಕ್ಕಳು ಇನ್ನೂ ಆತನ ರಾಜ್ಯ ಸ್ಥಾಪಿತವಾಗಿರುವುದನ್ನು ನೋಡಿಲ್ಲ. ಹಾಗೆಂದು ನಾವು ಪ್ರಾರ್ಥನೆ ಮಾಡುವುದನ್ನು ನಿಲ್ಲಿಸೋಣವೇ? ಆಹಾ, ಇಲ್ಲ! ಅದು ಖಂಡಿತವಾಗಿಯೂ ಬರುತ್ತದೆ ಎಂದು ನಮಗೆ ಭರವಸೆ ಇದೆ. ಈಗಲೂ ಅದು ಬಾಗಿಲಲ್ಲೇ ಇದೆ! ದೇವರ ರಾಜ್ಯವು ಸಂಪೂರ್ಣವಾಗಿ ಸ್ಥಾಪಿಸಲ್ಪಡುತ್ತದೆ; ಈಗ ಪರಲೋಕದಲ್ಲಿ ಎಲ್ಲರೂ ನಿಷ್ಠೆಯಿಂದ ಇರುವಂತೆ, ಭೂಮಿಯಲ್ಲೆಲ್ಲಾ ಎಲ್ಲರೂ ನಿಷ್ಠೆಯಿಂದ ಇರುವ ಕಾಲವು ಬರುತ್ತದೆ. ನಮ್ಮ ಪ್ರಾರ್ಥನೆಗಳಿಂದ ದೇವರ ರಾಜ್ಯವು ಆತನು ಯೋಜನೆ ಮಾಡಿದ್ದಕ್ಕಿಂತ ಒಂದು ನಿಮಿಷ ಕೂಡ ಬೇಗನೆ ಬರುವುದಿಲ್ಲ. ಆದರೆ ಕರ್ತನ ಖಚಿತವಾದ ವಾಗ್ದಾನಕ್ಕೆ ಅನುಗುಣವಾಗಿ ಆ ರಾಜ್ಯಕ್ಕಾಗಿ ನಿರೀಕ್ಷಿಸುತ್ತಾ ನಾವು ಪ್ರಾರ್ಥಿಸುತ್ತಿದ್ದೇವೆ. ಹೀಗೆ ಕರ್ತನ ಮಕ್ಕಳು ಪ್ರಾರ್ಥಿಸುವ ಮೂಲಕ ನಿರಾಶರಾಗದೆ ತಮ್ಮನ್ನು ತಾವು ಬಲಪಡಿಸಿಕೊಳ್ಳುತ್ತಿದ್ದಾರೆ. ಬೇಗನೆ ದೇವರ ಮಹಿಮೆಯುಳ್ಳ ರಾಜ್ಯವು ಪ್ರಕಟವಾಗುತ್ತದೆ! ಆಗ ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ವರೂಪವನ್ನು ಪಡೆದವರೆಲ್ಲರೂ ಆತನೊಂದಿಗೆ ಆಳ್ವಿಕೆ ಮಾಡಲು ಉನ್ನತಿ ಹೊಂದುವರು. **R 5710 : 4**

## 10 ಡಿಸೆಂಬರ್

**“ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು.” (ಇಬ್ರಿಯರಿಗೆ 13:6)**

ದೃಢವಾದ ಹೃದಯವನ್ನೂ ಸಹ ನಡುಗುವಂತೆ ಮಾಡುವ ಸಂದರ್ಭಗಳಲ್ಲಿ, ಕರ್ತನ ದೀನಸ್ವಭಾವವುಳ್ಳ ಚಿಕ್ಕವರಲ್ಲಿರುವ ಶಾಂತತೆಯ ಬಗ್ಗೆ ಲೋಕವು ಆಗಾಗ ಆಶ್ಚರ್ಯಪಡುತ್ತದೆ. ಆದರೆ ನಮ್ಮ ದೇವರನ್ನು ಮಹಿಮೆ ಪಡಿಸುವ, ಆತನ ಕೃಪೆಯನ್ನು ಕುರಿತು ಹೊಗಳುವಂತಹ ಜೀವನದ ಹಾದಿಯನ್ನು ಅನುಸರಿಸಲು, ನಾವು ಕ್ರೈಸ್ತರಾಗಿ ಪರಲೋಕದ ರಾಜನ ಪ್ರತಿನಿಧಿಗಳಾಗಿ, ಬುದ್ಧಿವಂತಿಕೆಯಿಂದ ಮತ್ತು ಧೈರ್ಯದಿಂದ ಶೋಧನೆಗಳು ಮತ್ತು ಕಷ್ಟಗಳನ್ನು ಎದುರಿಸಲು ಸಾಧ್ಯವಾಗುತ್ತದೆ ಮತ್ತು ಅವುಗಳನ್ನು ಎದುರಿಸಲು ಸಂತೋಷದ ಮನೋಭಾವದಿಂದ, ನಮ್ಮ ಎಲ್ಲಾ ದುಃಖಗಳನ್ನು ಸಂತೋಷವೆಂದು ಎಣಿಸಲು, ನಮ್ಮ ಹೃದಯಗಳು ಕರ್ತನೊಂದಿಗೆ ಹೊಂದಾಣಿಕೆಯಾಗುವುದು ಅವಶ್ಯಕವಾಗಿದೆ. ಅಂದರೆ ನಮ್ಮ ಚಿತ್ತವಲ್ಲ ಆದರೆ ಆತನ ಚಿತ್ತವು ಮಾತ್ರ ನಮಗಿದೆ ಮತ್ತು ಮನುಷ್ಯನ ಭಯವು ಉರುಲಿಗೆ ಕಾರಣ ಎಂದು ತಿಳಿದು ಅದನ್ನು ನಾವು ಜಯಿಸಬೇಕು. ನಾವು ಇದನ್ನು ನಮ್ಮ ಸ್ವಂತ ಶಕ್ತಿಯಿಂದ ಸಾಧಿಸಲು ಸಾಧ್ಯವಿಲ್ಲ, ಆದರೆ ದೇವರ ಶಕ್ತಿಯಿಂದ ಮಾತ್ರ ಸಾಧ್ಯವಾಗುತ್ತದೆ. ಯೆಹೋವನಿಗೆ ಭಯಪಡುವಂತೆ ಮತ್ತು ದುರ್ಬಲ ನರ ಮನುಷ್ಯರಿಗೆ ಭಯಪಡಬಾರದೆಂದು ನಮಗೆ ಬೋಧಿಸಲಾಗಿದೆ. ನೀತಿವಂತರು ಸಿಂಹದಂತೆ ಧೈರ್ಯಶಾಲಿಗಳೂ, ಪಾರಿವಾಳದಂತೆ ಸೌಮ್ಯರೂ, ಕುರಿಮರಿಯಂತೆ ದೀನ ಸ್ವಭಾವದವರೂ ಆಗಿದ್ದಾರೆ. ಧೈರ್ಯ, ಸೌಮ್ಯ ಮತ್ತು ದೀನತೆ ಎಂಬ ಈ ವಿಶೇಷ ಸಂಯೋಜನೆಯು ಪ್ರತಿ ಕ್ರೈಸ್ತರ ಗುಣಲಕ್ಷಣದಲ್ಲಿ ಕಾಣಬೇಕು. **R 5540 : 5**

## 11 ಡಿಸೆಂಬರ್

**“ನಾನು ಮಾಡುತ್ತಿರುವ ಈ ಕೆಲಸಗಳೇ ತಂದೆಯು ನನ್ನನ್ನು ಕಳುಹಿಸಿದ್ದಾನೆಂದು ನನ್ನ ವಿಷಯವಾಗಿ ಸಾಕ್ಷಿಕೊಡುತ್ತದೆ.” ( ಯೋಹಾನನು 5 : 36 )**

ನಮ್ಮ ಕರ್ತನು ಮಾಡಿದ ಅದ್ಭುತಗಳು ತನ್ನ ಗುರುತನ್ನು(ನಿಲುವನ್ನು) ಸ್ಥಾಪಿಸಲು ಸಾಕಾಗುವ ಉದ್ದೇಶವನ್ನು ಮಾತ್ರ ಹೊಂದಿದ್ದವು, ಅದು ಈ ಲೋಕದ ಅಥವಾ ಸಭೆಯ ಗುಣಪಡಿಸುವಿಕೆಗೆ ಪೂರ್ವ ನಿದರ್ಶನವನ್ನು ಸ್ಥಾಪಿಸುವ ದೃಷ್ಟಿಯಿಂದ ಇರಲಿಲ್ಲ. ಕರ್ತನ ದೊಡ್ಡ ಗುಣಪಡಿಸುವ ಸಮಯವನ್ನು

ಸತ್ಯವೇದದಲ್ಲಿ "ಮರುಸ್ಥಾಪನೆಯ (ಯಥಾ ಸ್ಥಿತಿಗೆ ತರುವ) ಸಮಯಗಳು" ಎಂದು ಗೊತ್ತುಪಡಿಸಲಾಗಿದೆ. ಆ ಸಮಯಗಳು ಬಂದಾಗ, ಸಾವಿರ ವರ್ಷದ ರಾಜ್ಯವು ಸ್ಥಾಪಿಸಲ್ಪಟ್ಟಾಗ, ದೇಶಗಳ (ಜನರ) ಗುಣಪಡಿಸುವಿಕೆಯು ದೊಡ್ಡ ಕೆಲಸವಾಗಿರುತ್ತದೆ; ಮತ್ತು ಇದು ಶಾರೀರಿಕ ಗುಣಪಡಿಸುವಿಕೆ ಮಾತ್ರವಲ್ಲದೆ ಮಾನಸಿಕ ಮತ್ತು ನೈತಿಕವಾಗಿ ಗುಣಪಡಿಸುವುದಾಗಿದೆ. ಇದು ಜ್ಞಾನ ಹೆಚ್ಚಾಗುತ್ತಾ ಇದ್ದಂತೆ, ಅನುಭವದ ಮೂಲಕ ಏದೆನ್ ತೋಟದಲ್ಲಿ ಕಳೆದುಕೊಂಡದದ್ದೆಲ್ಲವನ್ನು ಕ್ರಮೇಣವಾಗಿ ಯಥಾಸ್ಥಿತಿಗೆ ತರುತ್ತದೆ. **R 3495 : 5**

## 12 ಡಿಸೆಂಬರ್

**"ಕರುಣೆಯೂ ಸತ್ಯವೂ ನಿನ್ನನ್ನು ಬಿಡದಿರಲಿ. ನಿನ್ನ ಕೊರಳಿನ ಸುತ್ತಲೂ ಅವುಗಳನ್ನು ಕಟ್ಟಿಕೋ; ನಿನ್ನ ಹೃದಯದ ಹಲಗೆಯ ಮೇಲೆ ಅವುಗಳನ್ನು ಬರೆ." (ಜ್ಞಾನೋಕ್ತಿಗಳು 3 : 3)**

ಒಬ್ಬನು ತನ್ನ ಸ್ವಂತ ಮನಸ್ಸಿನಲ್ಲಿ ಸತ್ಯ ಮತ್ತು ನೀತಿಯ ತತ್ವಗಳನ್ನು ಕಾದುಕೊಳ್ಳಲು ಸಂಪೂರ್ಣ ಯಥಾರ್ಥನಾದ ಪುರುಷ ಅಥವಾ ಸ್ತ್ರೀಯಾಗಿರಬೇಕು. ಅಂಥವರಲ್ಲಿ ಸತ್ಯತೆ, ಶುದ್ಧತೆ, ಸದ್ಗುಣಗಳು ನಿಯಂತ್ರಣದಲ್ಲಿರುತ್ತದೆ. ಆದರೆ ಕೇವಲ ಈ ಸತ್ಯ, ಶುದ್ಧತೆ, ಸದ್ಗುಣಗಳ ತತ್ವಗಳನ್ನು ನಿಯಂತ್ರಣ ಹೊಂದಿರುವ ವ್ಯಕ್ತಿಯು ಇದರ ಜೊತೆಗೆ ಕರುಣೆಯ ಗುಣವನ್ನೂ ಸಹ ಹೆಚ್ಚೆಚ್ಚಾಗಿ ಬೆಳೆಸಿಕೊಳ್ಳಬೇಕು. ಇವುಗಳನ್ನು ನಮ್ಮ ಕೊರಳಿನ ಸುತ್ತಲೂ ಕಟ್ಟಿಕೊಳ್ಳಬೇಕು. ಇಲ್ಲಿ ಇದನ್ನು ನೆಕ್ಲೆಸ್ ಅಥವಾ ಚಿನ್ನದ ಸರಕ್ಕೆ ಆಲೋಚನೆಯಾಗಿ ನೀಡಲಾಗಿದೆ. ಹೇಗೆ ಒಬ್ಬ ಮನುಷ್ಯನು ತನ್ನ ಕೊರಳಿಗೆ ಚಿನ್ನದ ಸರವನ್ನು ಹಾಕಿ ಅದನ್ನು ಆಭರಣವಾಗಿ ಪ್ರದರ್ಶಿಸುತ್ತಾನೋ, ಅದೇ ರೀತಿ ಈ ಗುಣಲಕ್ಷಣಗಳು ಆಭರಣದಂತಿದೆ. ಅವುಗಳಿಗೆ ನಾವು ಪ್ರಮುಖ ಸ್ಥಾನವನ್ನು ನೀಡುತ್ತೇವೆ; ಏಕೆಂದರೆ ಅವು ನಿಮ್ಮನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ, ಕರ್ತನು ನಿಮ್ಮನ್ನು ಅಧಿಕವಾಗಿ ಸ್ವೀಕರಿಸಲು ಅರ್ಹರನ್ನಾಗಿ ಮಾಡಲು ಸಹಾಯ ಮಾಡುತ್ತದೆ. ಆಭರಣದ ಪ್ರದರ್ಶನಕ್ಕೆ ಆದ್ಯತೆಯ ಸ್ಥಳವೆಂದರೆ ಕೊರಳು (ಕುತ್ತಿಗೆ). ಅಲ್ಲಿ ಒಂದು ಆಭರಣವು ವಿಶೇಷವಾಗಿ ಎದ್ದುಕಾಣುವ ಮತ್ತು ಅಲಂಕಾರವಾಗಿ ಕಾಣುವ ಸ್ಥಳವಾಗಿದೆ. ಆದ್ದರಿಂದ ನಾವು ಈ ಶ್ರೇಷ್ಠವಾದ ಗುಣಗಳನ್ನು ಜೀವನದ ಎಲ್ಲಾ ನಡವಳಿಕೆಗಳಲ್ಲಿ ಸ್ಪಷ್ಟವಾಗಿ ತೋರಿಸಲು ಅವುಗಳನ್ನು ಕೊರಳಿನಲ್ಲಿ ಕಟ್ಟಿಕೊಳ್ಳಬೇಕು. ನಾವು ಖರೀದಿಸಲಿ ಅಥವಾ ಮಾರಾಟ ಮಾಡಲಿ ಅಥವಾ ನಾವು ಏನು ಮಾಡಿದರೂ, ನಾವು ಈ ಆಭರಣಗಳನ್ನು ಧರಿಸಬೇಕು. ಅವು ಪುರುಷ ಅಥವಾ ಸ್ತ್ರೀಯರ ಗುಣಲಕ್ಷಣವನ್ನು ಬಹಿರಂಗವಾಗಿ

ಎದುರಲ್ಲೇ ತೋರಿಸುತ್ತದೆ. ನಾವು ಇತರರನ್ನು ಭೇಟಿಯಾಗುವಾಗ ಆ ಗುಣಲಕ್ಷಣಗಳು ಇತರರು ಕಾಣುವಂತೆ ಇರಬೇಕು. ನಮ್ಮಲ್ಲಿ ಕೀಳರಿಮೆ, ಅವಹೇಳನ, ಜಿಪುಣತನ ಇವುಗಳು ಯಾವುದೂ ಇರಬಾರದು. **R 5309 : 2**

## 13 ಡಿಸೆಂಬರ್

**"ದಿನಗಳು ಕೆಟ್ಟವುಗಳಾಗಿರುವದರಿಂದ ಕಾಲವನ್ನು ಸುಮ್ಮನೆ ಕಳೆಯದೆ ಸದುಪಯೋಗ ಪಡಿಸಿಕೊಳ್ಳಿರಿ." (ಎಫೆಸದವರಿಗೆ 5 : 16)**

ಇದು ಮೊದಲೇ ಒತ್ತೆ ಇಟ್ಟ ಸಮಯವನ್ನು ಮತ್ತೆ ಪಡೆಯುವುದನ್ನು ಸೂಚಿಸುತ್ತದೆ. ಮತ್ತು ಇದು ಹಾಗೆಯೇ ಇದೆ ಅಂದರೆ ಈ ಜೀವನದ ಚಿಂತೆಗಳು, ಅದರ ಅವಶ್ಯಕತೆಗಳು, ಲೋಕದ ಸಂಪ್ರದಾಯಗಳು, ನಮ್ಮಲ್ಲಿರುವ ಬಿದ್ದುಹೋದ ಪ್ರವೃತ್ತಿಗಳು (ಸ್ವಭಾವಗಳು), ಎಲ್ಲವ್ರೂ ಈ ಜೀವನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಜೀವನದ ಪ್ರತಿ ಗಂಟೆಯನ್ನು ಹೀರಿಕೊಳ್ಳುತ್ತವೆ, ಆದರೆ ನೂತನ ಸೃಷ್ಟಿಗಳಾಗಿ ನಮ್ಮ ಹೊಸ ನಿರೀಕ್ಷೆಗಳು, ಗುರಿಗಳು ಮತ್ತು ಪ್ರಯಾಸಗಳೆಲ್ಲವ್ರೂ ಉನ್ನತವಾದ, ಪರಲೋಕದ, ರಾಜನ ವಿಷಯಗಳಲ್ಲಿ ಸರಿಯಾಗಿ ಕೇಂದ್ರೀಕೃತವಾಗಿರಬೇಕು. ನೂತನ ಸೃಷ್ಟಿಗಳಾಗಿ ನಮದಾಗಿರುವ ಆಶೀರ್ವಾದಗಳು, ವಾಗ್ದಾನಗಳು ಮತ್ತು ಅನುಗ್ರಹಗಳನ್ನು ಪೂರ್ವಾಭ್ಯಾಸದಲ್ಲಿ ಅಧ್ಯಯನ ಮಾಡಲು ಮತ್ತು ನಮ್ಮನ್ನು ಪುನಶ್ಚೇತನಗೊಳಿಸಲು ಅಗತ್ಯವಾದ ಸಮಯವನ್ನು ನಾವು ಎಲ್ಲಿ ಪಡೆಯಬಹುದು? ಮತ್ತು ಈ ಸುವಾರ್ತೆಯನ್ನು ಇತರರಿಗೆ ಹೇಳಲು ನಾವು ಸಮಯವನ್ನು ಎಲ್ಲಿ ಪಡೆಯಬಹುದು? ಈ ಲೋಕದ ಆತ್ಮವು ನಮ್ಮನ್ನು ನಡೆಸಲು ನಾವು ಅನುಮತಿಸಿದರೆ, ಈ (ಮೇಲಿನ) ಯಾವುದೇ ವಿಷಯಗಳಿಗೆ ನಮಗೆ ಸಮಯವಿರುವುದಿಲ್ಲ ಮತ್ತು ನಾವು ವಿಫಲರಾಗುತ್ತೇವೆ. ಆದರೆ ಕರ್ತನ ಬುದ್ಧಿಯುಳ್ಳ ಮಕ್ಕಳಾಗಿದ್ದು ಮತ್ತು ಬುದ್ಧಿಯಿಲ್ಲದ ಮಕ್ಕಳಂತೆ ಇರದೆ, ನಾವು ಪರಲೋಕದ ವಿಷಯಗಳಲ್ಲಿ ಅಧಿಕ ಪ್ರಾಮುಖ್ಯತೆಯನ್ನು ನೋಡಿ ಪ್ರಶಂಸಿಸುತ್ತೇವೆ ಮತ್ತು ಪರಲೋಕದ ದಯೆಯನ್ನು ಹೊಂದುವುದಕ್ಕಾಗಿ ಈ ಲೋಕದ ಆಸಕ್ತಿಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ತ್ಯಾಗ–ಬಲಿ ಸಲ್ಲಿಸಲು ಸಿದ್ಧರಾಗುತ್ತೇವೆ. ಹೀಗೆ ನಾವು ಈ ಹಿಂದೆ ಲೋಕದ ವಿಷಯಗಳಿಗಾಗಿ ಕಳೆದ ಸಮಯವನ್ನು ಪುನಃ ಪಡೆದುಕೊಳ್ಳಬಹುದು ಅಥವಾ ಕೊಂಡುಕೊಳ್ಳಬಹುದು, ಇನ್ನು ಮುಂದೆ ಇಂತಹ ಸಮಯವನ್ನು ನಮ್ಮ ಮತ್ತು ಇತರ ನೂತನ ಸೃಷ್ಟಿಯ ಹಿತಾಸಕ್ತಿಯಲ್ಲಿ ಹಾಗೂ ನಮ್ಮ ಕರ್ತನ ಮತ್ತು ಯಜಮಾನನ ಸೇವೆಯಲ್ಲಿ ಕಳೆಯಬಹುದು, ಕರ್ತನಿಗಾಗಿ

ನಮ್ಮಲ್ಲಿರುವ ಎಲ್ಲವನ್ನು ಪ್ರತಿಷ್ಟೆಪಡಿಸಿದ್ದೇವೆ, ಅವುಗಳು ಈಗಿರುವ ಜೀವನಕ್ಕೆ ಪ್ರಾಮಾಣಿಕವಾಗಿ ಒದಗಿಸಲು ಅಗತ್ಯವಾದ ಎಲ್ಲಾ ವಿಷಯಗಳಿಗಿಂತ ಪರಲೋಕದ ವಿಷಯಗಳು ಬಹಳ ಮೇಲಾಗಿದೆ ಎಂದು ನಾವು ಕಂಡುಕೊಳ್ಳುತ್ತೇವೆ. **R 4190 : 2**

## 14 ಡಿಸೆಂಬರ್

**"ಪ್ರೀತಿಯಲ್ಲಿ ಹೆದರಿಕೆಯಿಲ್ಲ; ಆದರೆ ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ." (1 ಯೋಹಾನ 4 : 18)**

ನಮ್ಮ ಪರಲೋಕದ ತಂದೆ ಮತ್ತು ನಮ್ಮ ವಿಮೋಚಕನಿಗೆ ವಿರೋಧವಾಗಿ ಅಪರಾಧ ಮಾಡಿ ಅವರನ್ನು ನಾವು ಎಂದಿಗೂ ಕಳೆದುಕೊಳ್ಳದ ಹಾಗೆ ಸರಿಯಾದ ಭಯ ಅಥವಾ ಭಕ್ತಿ ಇರಬೇಕು. ಪರಿಪೂರ್ಣ ಪ್ರೀತಿಯು ಈ ದೇವರ ಭಯವನ್ನು ಹೊರಡಿಸಿಬಿಡುವುದಿಲ್ಲ, ಆದರೆ ಅದನ್ನು ತೀವ್ರಗೊಳಿಸುತ್ತದೆ. ಪ್ರೀತಿಯು ಹೊರಡಿಸಿಬಿಡುವ ಭಯ ಯಾವುದೆಂದರೆ ಅದು ಅಂಜುಬುರುಕತನ, ದಾಸತ್ವದ ಭಯ ಅಥವಾ ಕರ್ತನ ಅಥವಾ ಸೈತಾನನ ಭಯ ಅಥವಾ ಬಿದ್ದು ಹೋದ ದೂತರು ಅಥವಾ ಮನುಷ್ಯರು ನಮಗೆ ಏನು ಮಾಡಿ ಬಿಡುತ್ತಾರೋ ಎಂಬ ಭಯಗಳನ್ನು ಪ್ರೀತಿಯು ಹೊರಡಿಸಿಬಿಡುತ್ತದೆ. ಜ್ಞಾನ, ನಂಬಿಕೆ, ಧೈರ್ಯ ಮತ್ತು ಜಯ—ಇವುಗಳಿಲ್ಲದೆ ಪರಿಪೂರ್ಣ ಪ್ರೀತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ಈ ಎಲ್ಲಾ ದೈವಿಕ ಏರ್ಪಾಡಿನ ಪ್ರಯಾಸದ ಫಲಿತಾಂಶವು ನಮ್ಮನ್ನು ದೇವರಿಗೆ ಹತ್ತಿರ ತರುತ್ತದೆ ಮತ್ತು ಆತನ ಕೃಪೆಯ ಉದ್ದೇಶಗಳು ಹಾಗೂ ಅವುಗಳನ್ನು ಸಾಧಿಸುವ ಸರ್ವಶಕ್ತನ ಶಕ್ತಿಯನ್ನು ಪ್ರಶಂಸಿಸುವಂತೆ ಮತ್ತು ನಿಜವಾಗಿಯೂ ಕೃತಜ್ಞತರಾಗಿರುವಂತೆ ಮಾಡುತ್ತದೆ. **R 4379 : 1**

## 15 ಡಿಸೆಂಬರ್

**"ಯೇಸುವಿನ ಜೀವವು ನಮ್ಮ ದೇಹದಲ್ಲಿ ಉಂಟೆಂದು ತೋರಿ ಬರುವದಕ್ಕಾಗಿ ಕರ್ತನಾದ ಯೇಸುವಿನ ಮರಣವನ್ನು ನಾವು ಯಾವಾಗಲೂ ದೇಹದಲ್ಲಿ ಹೊರುತ್ತಾ ಇದ್ದೇವೆ." (2 ಕೊರಿಂಥದವರಿಗೆ 4 : 10)**

ಪೌಲನು ಇಲ್ಲಿ ಮಾನವ ಶರೀರವನ್ನು ಕುರಿತು ಸೂಚಿಸುತ್ತಿದ್ದಾನೆಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ಈ ಶರೀರವು ನೂತನ ಸೃಷ್ಟಿಗೆ ಸ್ವಂತವಾಗಿದೆ.

ಈ ಲೋಕದ ಜನರಿಗೆ ಎರಡು ವ್ಯಕ್ತಿತ್ವಗಳಿಲ್ಲ, ಆದರೆ ಕೇವಲ ಒಂದು ವ್ಯಕ್ತಿತ್ವ ಮಾತ್ರವಿದೆ. ನೂತನ ಸೃಷ್ಟಿಯ ಈ ಎರಡು ವ್ಯಕ್ತಿತ್ವದ ಗುಣವು ಪವಿತ್ರಾತ್ಮದಿಂದ ಭ್ರೂಣಾಂಕುರಗೊಂಡವರಿಗೆ (ಪವಿತ್ರಾತ್ಮದಿಂದ ಗರ್ಭಧರಿಸಿದವರಿಗೆ)(begotten of the holy spirit) ಮಾತ್ರ ಅನ್ವಯಿಸುತ್ತದೆ. ಹಳೆಯ ಶರೀರವು ಪಾಡುಪಡುತ್ತಿದೆ; ಆದರೆ ಹೊಸ ಸೃಷ್ಟಿಯು ಸಂತೋಷಪಡುತ್ತದೆ, ಸೇವೆಯಲ್ಲಿರುವುದಕ್ಕೆ (ಸೇವೆ ಮಾಡುವುದಕ್ಕೆ) ಸಂತೋಷಪಡುತ್ತದೆ–ದಿನದಿಂದ ದಿನಕ್ಕೆ ತನ್ನ ಸಂಕಟಗಳನ್ನು ಕುರಿತು ದೇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ. ಈ ಸಂಕಟಗಳು "ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ" ಎಂದು ತಿಳಿದಿರುತ್ತದೆ. ಹೀಗೆ ಯೇಸುವಿನ ಜೀವವು ನಮ್ಮ ಮೂಲಕ ಈ ಲೋಕಕ್ಕೆ ಮತ್ತು ಸಹೋದರ, ಸಹೋದರಿಯರಿಗೆ ಪ್ರಕಟವಾಗುತ್ತವೆ. ಲೋಕವು ಈ ವಿಚಾರವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅವರು ಹೀಗೆ ಹೇಳುತ್ತಾರೆ, "ಅಂತಹ ಶೋಧನೆಯಲ್ಲಿ ನಾನು ನಿಮ್ಮ ಸ್ಥಾನದಲ್ಲಿದ್ದರೆ, ನಾನು ಶೋಚನೀಯ ಸ್ಥಿತಿಯಲ್ಲಿರುತ್ತಿದ್ದೆ. ಆದರೆ ನೀವು ಸಂತೋಷ ಪಡುತ್ತಿದ್ದೀರಿ!" ಆದ್ದರಿಂದ ಅವರು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ನಾವು ಈ ಲೋಕವು ಮೆಚ್ಚಲು ಸಾಧ್ಯವಿಲ್ಲದ ನೂತನ ಜೀವದಲ್ಲಿದ್ದೇವೆ. ಈ ವಿಚಾರವನ್ನು ಮೆಚ್ಚುವವರೆಲ್ಲರೂ ಕೃಪೆ ಮತ್ತು ಜ್ಞಾನದಲ್ಲಿ ಪ್ರತಿದಿನವೂ ಬೆಳೆಯಬೇಕು. ನಾವು ನಮ್ಮ ಗುಣಲಕ್ಷಣಗಳಲ್ಲಿ ಮತ್ತು ನಮ್ಮ ದೇಹದಲ್ಲಿ ಕರ್ತನ ಜೀವವನ್ನು ಹೆಚ್ಚೆಚ್ಚಾಗಿ ವ್ಯಕ್ತಪಡಿಸಬೇಕು. ಹೀಗೆ ಕರ್ತನ ಆತ್ಮವನ್ನು ಹೆಚ್ಚೆಚ್ಚಾಗಿ ಪ್ರಕಟಿಸುತ್ತೇವೆ, ಕರ್ತನ ಕೆಲಸಗಳನ್ನು ಹೆಚ್ಚೆಚ್ಚಾಗಿ ಮಾಡುತ್ತೇವೆ, ಯೇಸುವಿನಂತೆ ಹೆಚ್ಚೆಚ್ಚಾಗಿ ಮಾರ್ಪಡುತ್ತೇವೆ–ಇವೆಲ್ಲವೂ ನಮ್ಮನ್ನು ತೆರೆಯ ಹಿಂದೆ ಮಹಿಮೆಗೆ ಸಿದ್ಧಗೊಳಿಸುತ್ತದೆ, ಹೊಸ ಸೃಷ್ಟಿ ಪೂರ್ಣಗೊಂಡಾಗ, ಎಲ್ಲಾ ಪರಿಪೂರ್ಣತೆಗಳು ಮತ್ತು ಹೊಸ ಸ್ವಭಾವದ ಎಲ್ಲಾ ಮಹಿಮೆಗಳು ನಮ್ಮದಾಗುತ್ತದೆ. **R 5671 : 6**

## 16 ಡಿಸೆಂಬರ್

**"ಒಳ್ಳೇ ಕುರುಬನು ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ." (ಯೋಹಾನನು 10 : 11)**

ಕರ್ತನು ಮೇಲಿನ ಆಧಾರ ವಾಕ್ಯವನ್ನು ಹೇಳುವ ಸಂದರ್ಭದಲ್ಲಿ, ಶೀಘ್ರದಲ್ಲೇ ನೀಡಲಿರುವ ಆತನ ಜೀವವು ಆತನ ಕಡೆಯಿಂದ ಸ್ವಯಂ ಪ್ರೇರಣೆಯಿಂದ ಸಲ್ಲಿಸಲ್ಪಟ್ಟಿದೆ ಎಂದು ಶಿಷ್ಯರು ಅರ್ಥಮಾಡಿಕೊಳ್ಳಬೇಕೆಂದು ನಮ್ಮ ಕರ್ತನು ಬಯಸಿದನು. ಆತನ ಶಿಷ್ಯರು ಇದನ್ನು ತಿಳಿದುಕೊಳ್ಳುವದು ಅಗತ್ಯವಾಗಿತ್ತು.

ಇದರಿಂದ ಅವರು ತಮ್ಮ ಕರ್ತನನ್ನು ಅತಿ ಹೆಚ್ಚಾಗಿ ಗೌರವಿಸುವದು ಮಾತ್ರವಲ್ಲದೆ ವಿಶೇಷವಾಗಿ ನಮ್ಮ ಪಾಪಗಳಿಗಾಗಿ ಆತನ ಸ್ವಯಂಪ್ರೇರಿತ ತ್ಯಾಗಬಲಿಯು ತಂದೆ ಆದಾಮ ಮತ್ತು ಆತನ ಎಲ್ಲಾ ಜನಾಂಗವನ್ನು ವಿಮೋಚನೆಗೊಳಿಸುವ ವಿಮೋಚಕ ಎಂದು ಅವರು ಅರಿತುಕೊಳ್ಳಬೇಕು. ಅದರ ಫಲಿತಾಂಶದಲ್ಲಿ ವಿಶ್ವಾಸ ಹೊಂದಲು ಅವರು ಕ್ರಿಸ್ತನ ಪುನರುತ್ಥಾನದಲ್ಲಿ ವಿಶ್ವಾಸ ಹೊಂದಿರಬೇಕು–ಅಂದರೆ ತಂದೆಯಾದ ದೇವರು ಎಷ್ಟೋ ಸಂತೋಷ ಪಟ್ಟಿದ್ದಾರೆಂದರೆ ಆತನು ಈ ಉದ್ದೇಶಕ್ಕಾಗಿ ಆತನ ಅನುಮತಿ ಅಥವಾ ಅಧಿಕಾರ ಅಥವಾ ಶಕ್ತಿಯನ್ನು ನೀಡಿದ್ದಾರೆ. ಕರ್ತನ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಎಲ್ಲಾ ಅಧಿಕಾರ ಎಲ್ಲಾ ಶಕ್ತಿಯು ತಂದೆಯದ್ದಾಗಿದೆ ಎಂದು ನಮ್ಮ ಕರ್ತನು ಒಪ್ಪಿಕೊಂಡನು. ಕರ್ತನು ಸಂಪೂರ್ಣವಾಗಿ ತಂದೆಯನ್ನು ನಂಬುತ್ತಿದ್ದನು, ಹಾಗೆ ಮಾಡುವುದರಿಂದ ತನ್ನ ಚಿಕ್ಕ ಹಿಂಡಿನ ನಿಮಿತ್ತವಾಗಿ ಜೀವವನ್ನು ಸಹ ತ್ಯಾಗ ಮಾಡಲು ಸಾಧ್ಯವಾಯಿತು. ಆತನ ಹೆಜ್ಜೆಯ ಜಾಡಿನಲ್ಲಿ ನಡೆಯುವವರೆಲ್ಲರ ವಿಷಯದಲ್ಲಿಯೂ ಇದು ನಿಜವಾಗಿದೆ. ನಮ್ಮ ಜೀವವನ್ನು ತ್ಯಾಗಮಾಡುವುದಕ್ಕೆ ನಂಬಿಗಸ್ತರಾಗಿರಬೇಕಾದರೆ, ನಾವು ತಂದೆಯಲ್ಲಿ ಮತ್ತು ನಮ್ಮ ಕರ್ತನ ತ್ಯಾಗಬಲಿಯನ್ನು ಅವಲಂಬಿಸಿರುವ ರಕ್ಷಣೆಯ ಮಹಾ ಯೋಜನೆಯಲ್ಲಿ ನಂಬಿಕೆಯನ್ನು ಹೊಂದಿರಬೇಕು. ಈ ವಿಷಯವು ನಮ್ಮ ಮನಸ್ಸಿನ ಮುಂದೆ ಸ್ಪಷ್ಟವಾಗಿರುವುದಾದರೆ ನಾವು ಅಗತ್ಯವಿರುವ ಪ್ರತಿಯೊಂದು ಸಮಯಲ್ಲಿಯೂ ಕೃಪೆ ಮತ್ತು ಶಕ್ತಿಯನ್ನು ಹೊಂದಿಕೊಳ್ಳಬಹುದು. **R 3528 : 6**

## 17 ಡಿಸೆಂಬರ್

**“ಈ ಮೂರು ಗುಂಪಿನ ಜನರು ತುತೂರಿಗಳನ್ನು ಊದಿ ಆ ಕೊಡಗಳನ್ನು ಒಡೆದುಬಿಟ್ಟು ಪಂಜುಗಳನ್ನು ತಮ್ಮ ಎಡಗೈಯಲ್ಲಿಯೂ ಊದುವ ತುತೂರಿಗಳನ್ನು ತಮ್ಮ ಬಲಗೈಯಲ್ಲಿಯೂ ಹಿಡಿದು: ಕರ್ತನ ಕತ್ತಿ, ಗಿದ್ಯೋನನ ಕತ್ತಿ ಎಂದು ಕೂಗಿದರು.” (ನ್ಯಾಯಸ್ಥಾಪಕರು 7:20)**

ನಮ್ಮ ನಾಯಕನಾದ ಕರ್ತನು ಈಗ ನಡೆಯುತ್ತಿರುವ ಕೆಟ್ಟತನಕ್ಕೆ ವಿರುದ್ಧವಾದ ಸಂಘರ್ಷದಲ್ಲಿ (ಹೋರಾಟದಲ್ಲಿ) ಆತನು ವಿಶೇಷವಾಗಿ ಉಪಯೋಗಿಸುತ್ತಿರುವವರಿಗೆ ತನ್ನ ವಿಶೇಷ ಮಾರ್ಗದರ್ಶನಗಳನ್ನು ನೀಡುತ್ತಿದ್ದಾನೆ. ಪ್ರತಿಯೊಬ್ಬರೂ ನಮ್ಮ ರಕ್ಷಣೆಯ ನಾಯಕನ ಉದಾಹರಣೆಯನ್ನು ಅನುಸರಿಸಬೇಕು. ಮೊದಲನೆಯದಾಗಿ, ಆತನು ಸತ್ಯದ ಘೋಷಣೆಯನ್ನು ಪ್ರತಿನಿಧಿಸುವ ತುತ್ತೂರಿಯನ್ನು ಊದಬೇಕು ಮತ್ತು ಸತ್ಯದ ಆತ್ಮದ ಖಡ್ಗವು ಯೆಹೋವನದು

ಮತ್ತು ಆತನ ಅಭಿಷೇಕಿಸಿದ ಮಗನದೆಂದು ಘೋಷಿಸಬೇಕು; ಮತ್ತು ಎರಡನೆಯದಾಗಿ, ಅವರು ತಮ್ಮ ಕೊಡಗಳನ್ನು ಒಡೆದುಬಿಟ್ಟು ತಮ್ಮ ಬೆಳಕನ್ನು ಪ್ರಕಾಶಿಸಬೇಕು. ಕೊಡಗಳು ನಮ್ಮ ಲೌಕಿಕ ಪಾತ್ರೆಗಳನ್ನು (ಶರೀರವನ್ನು) ಸೂಚಿಸುತ್ತದೆ ಮತ್ತು ಅವುಗಳನ್ನು ಒಡೆಯುವುದು ಅಂದರೆ ಅಪೋಸ್ತಲನಿಂದ ನಮಗೆ ಉಪದೇಶಿಸಲ್ಪಟ್ಟಂತೆ–"ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ–ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ,... ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು." ಎಂಬುದನ್ನು ಸೂಚಿಸುತ್ತದೆ. ನಮ್ಮ ಪ್ರಧಾನ–ನಾಯಕನು ತನ್ನ ಮಣ್ಣಿನ ಪಾತ್ರೆಯನ್ನು ಹೇಗೆ ಒಡೆದುಬಿಟ್ಟನು ಎಂದು ನಾವು ನೋಡಿದ್ದೇವೆ; ಆ ಬೆಳಕು ಯಾವ ರೀತಿ ಹೊಳೆಯಿತು ಎಂಬುದನ್ನು ನಾವು ನೋಡಿದ್ದೇವೆ. ನಮ್ಮ ಅತ್ಯುನ್ನತ ಮಹತ್ವಾಕಾಂಕ್ಷೆಯು ಆತನ ಮಾದರಿಯನ್ನು ಅನುಸರಿಸುವುದಾಗಿರಬೇಕು, ಆತನ ಹೆಜ್ಜೆಯ ಜಾಡಿನಲ್ಲಿ ನಡೆದು ಆತನು ನಮಗಾಗಿ ತನ್ನ ಪ್ರಾಣವನ್ನು ಅರ್ಪಿಸಿದಂತೆಯೇ ಸಹೋದರರಿಗಾಗಿ ನಮ್ಮ ಜೀವವನ್ನು ಮುಡುಪಾಗಿಡಬೇಕು. ಅದೇ ಸಮಯದಲ್ಲಿ ತುತೂರಿಯನ್ನು ಊದುವುದು ಪ್ರಗತಿಯಲ್ಲಿರಬೇಕು, ಜೊತೆಗೆ ಯೆಹೋವನ ನಾಮದಲ್ಲಿ, ನಮ್ಮ ನಾಯಕನ ನಾಮದಲ್ಲಿ ಕೂಗಬೇಕು ಹಾಗೂ ಸತ್ಯದ ಆತ್ಮದ ಕತ್ತಿಯನ್ನು ಪ್ರಯೋಗಿಸಬೇಕು. ಇದರ ಫಲಿತಾಂಶದಿಂದ ನಮಗೆ ಜಯ ಉಂಟಾಗುತ್ತದೆ; ಕರ್ತನ ಶತ್ರುಗಳು ಮುಗಿಬೀಳುವರು. **R4083 : 5**

## 18 ಡಿಸೆಂಬರ್

**"ಕರ್ತನು ತನ್ನನ್ನು ಪ್ರೀತಿ ಮಾಡುವವರೆಲ್ಲರನ್ನು ಕಾಪಾಡುತ್ತಾನೆ." (ಕೀರ್ತನೆಗಳು 145 : 20)**

ಛಾಯೆಯಲ್ಲಿರುವ ಇಸ್ರಾಯೇಲ್ ಜನರ ಮೇಲಿನ ದೇವರ ದೈವಿಕ ಏರ್ಪಾಡಿನ ಕಾಳಜಿಯನ್ನು ನಾವು ಗಮನಿಸಿದಾಗ ಅದು ಆತನ ಆತ್ಮೀಕ ಮಕ್ಕಳಾದ ನಮಗೆ, ನಮ್ಮ ನಂಬಿಕೆ ಮತ್ತು ವಿಶ್ವಾಸ ಹೆಚ್ಚಿಸುತ್ತದೆ. ಏಕೆಂದರೆ ನಾವು ಪಾಪಿಗಳಾಗಿದ್ದಾಗಲೇ ದೇವರು ನಮ್ಮನ್ನು ಪ್ರೀತಿಸಿ ತನ್ನ ಮಗನನ್ನು ನಮಗಾಗಿ ಕೊಟ್ಟಿರುವಾಗ, ಈಗ ದೇವರು ನಮ್ಮನ್ನು ಇನ್ನೂ ಎಷ್ಟೋ ಹೆಚ್ಚಾಗಿ ಪ್ರೀತಿಸುತ್ತಾರೆ. ಏಕೆಂದರೆ ನಾವು ಇನ್ನು ಮುಂದೆ ಪಾಪಿಗಳಾಗಿರದೆ, ಅನ್ಯಜನರಾಗಿರದೆ, ಅಪರಿಚಿತರಾಗಿರದೆ, ವಿದೇಶಿಗರಾಗಿರದೆ, ಆತನಿಗಾಗಿ ಪ್ರತಿಷ್ಠಿಸಲ್ಪಟ್ಟು ನಮ್ಮ

ವಿಮೋಚಕನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದೇವೆ ಎಂದು ನಾವು ಅಪೋಸ್ತಲನೊಂದಿಗೆ ಸೇರಿ ಹೇಳಬಹುದು. ಅದೇ ರೀತಿ ಛಾಯೆಯಲ್ಲಿರುವ ಇಸ್ರಾಯೇಲ್ ಜನರ ಹಿತಾಸಕ್ತಿಗಳಿಗಾಗಿ ದೇವರು ತನ್ನ ಏರ್ಪಾಡಿನ ಅಡಿಯಲ್ಲಿ ಕಾಳಜಿ ವಹಿಸಿದ್ದಾರೆ, ಆತನು ತನ್ನ ಆತ್ಮೀಕ ಇಸ್ರಾಯೇಲಿಗಾಗಿ–ಕಪಟವಿಲ್ಲದ ನಿಜವಾದ–ಇಸ್ರಾಯೇಲಿಗಾಗಿ, ಆತನು ಇನ್ನೂ ಅಧಿಕ ಸಮರ್ಥನಾಗಿದ್ದಾನೆ ಮತ್ತು ಚಿತ್ತವುಳ್ಳವನಾಗಿದ್ದಾನೆ ಎಂದು ನಾವು ಹೇಳುತ್ತೇವೆ. ಏಕೆಂದರೆ ಅವರು ದೇವರೊಂದಿಗೆ ಒಡಂಬಡಿಕೆಯ ಸಂಬಂಧದಲ್ಲಿ ಪ್ರವೇಶಿಸಿದ್ದಾರೆ ಮತ್ತು ಶರೀರದ ಪ್ರಕಾರ ನಡೆಯದೆ, ಆತ್ಮದ ಪ್ರಕಾರ ನಡೆಯಲು ಪ್ರಯತ್ನಿಸುತ್ತಾರೆ. ನಮ್ಮ ಮೇಲಿನ ವಾಕ್ಯವು–"ಕರ್ತನು ತನ್ನನ್ನು ಪ್ರೀತಿ ಮಾಡುವವರೆಲ್ಲರನ್ನು ಕಾಪಾಡುತ್ತಾನೆ." ಎಂಬುದು ಈ ಆಲೋಚನೆಗೆ ಅನುಗುಣವಾಗಿದೆ. ನಿಜ, ದೇವರು ಈ ಲೋಕದ ಮೇಲೆ ಅನುಕಂಪದ ಪ್ರೀತಿಯನ್ನು ಹೊಂದಿರುವುದರಿಂದ ಆತನು ತಕ್ಕ ಕಾಲದಲ್ಲಿ ಎಲ್ಲರಿಗೂ ವಿಮೋಚನೆಯನ್ನು ಒದಗಿಸಲು ಕಾರಣವಾಯಿತು. ವಿಮೋಚನೆಯಾದವರೆಲ್ಲರು ದೈವಿಕ ಪ್ರೀತಿ ಮತ್ತು ಅವರ ಹಿತಾಸಕ್ತಿಗಳ ಮೇಲಿನ ಕಾಳಜಿ ಹೊಂದಿರುವುದನ್ನು ಇದು ವ್ಯಕ್ತಪಡಿಸುತ್ತದೆ. ಆದರೆ ಈಗ, ಈ ಸುವಾರ್ತಾ ಯುಗದಲ್ಲಿ, ಯಾರೆಲ್ಲಾ ತಮ್ಮ ಮನೆಗಳಿಗಿಂತ, ಜಮೀನುಗಳಿಗಿಂತ, ಹೆತ್ತವರು, ಮಕ್ಕಳು, ಅಥವಾ ತಮ್ಮನ್ನೇ ಪ್ರೀತಿಸುವುದಕ್ಕಿಂತ ಹೆಚ್ಚಾಗಿ ದೇವರನ್ನು ಪ್ರೀತಿಸುವವರಿಗೆ ದೈವಿಕ ಆಶೀರ್ವಾದಗಳನ್ನು ಸಭೆಗೆ, ಕ್ರಿಸ್ತನ ಶರೀರಕ್ಕೆ ನೀಡಲಾಗುತ್ತದೆ. ಆದ್ದರಿಂದ ಯಾರೆಲ್ಲಾ ತಮ್ಮ ಸ್ವಂತ ಹೃದಯಗಳಲ್ಲಿ ತಮ್ಮ ನಿಷ್ಠೆಯನ್ನು, ತಮ್ಮ ನಂಬಿಕೆ ಮತ್ತು ವಿಶ್ವಾಸವನ್ನು ದೃಢಪಡಿಸುತ್ತಾರೋ, ಅಂಥವರ ಒಳಿತಿಗಾಗಿ ದೇವರು ತಾತ್ಕಾಲಿಕ(ಲೌಕಿಕ) ಮತ್ತು ನಿತ್ಯವಾದ ವಿಷಯಗಳಲ್ಲಿ ಮೇಲ್ವಿಚಾರಣೆ ಮಾಡುತ್ತಾರೆಂದು ಭರವಸೆ ನೀಡಬಹುದು. **R 3658 : 5**

## 19 ಡಿಸೆಂಬರ್

**"ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ." (ಯೋಹಾನ 7 : 37)**

ನಮ್ಮ ಮೇಲಿನ ಆಧಾರ ವಾಕ್ಯವು ನಮಗೆ ತಿಳಿಸಲಾದ ಪಾಠಕ್ಕೆ ಅನುಗುಣವಾಗಿದೆ–ಅಂದರೆ ಯಾವನಾದರು ಕರ್ತನ ಬಳಿಗೆ ಬರುವದಕ್ಕೆ ಮೊದಲು ಅವನಿಗೆ ಬಾಯಾರಿಕೆಯಾಗಿರಬೇಕು. ಕರ್ತನು ಕೊಡುವಂತಹ ಉಲ್ಲಾಸದ ನೀರು, ನಿತ್ಯ ಜೀವದ ಬಗ್ಗೆ ಮೆಚ್ಚುಗೆಯನ್ನು ಹೊಂದಿರಬೇಕು. ಇದರ ಅರ್ಥ ಅವನು ಪಾಪಿ

ಮತ್ತು ಮರಣದಂಡನೆಗೆ ಒಳಗಾಗಿದ್ದಾನೆ ಮತ್ತು ಕ್ರಿಸ್ತನ ಮೂಲಕವಲ್ಲದೆ ಭವಿಷ್ಯದ ಜೀವನಕ್ಕೆ ಯಾವುದೇ ನಿರೀಕ್ಷೆಯಿಲ್ಲ ಎಂದು ಅವನು ಕಲಿತುಕೊಳ್ಳಬೇಕು. ನಂಬಿಕೆಯ ಮೂಲಕ ಮಾತ್ರ ಕರ್ತನ ಬಳಿಗೆ ಬರಲು ಸಾಧ್ಯ. ನಮ್ಮ ಬಯಕೆಯೇ ನಮ್ಮ ಬಾಯಾರಿಕೆಯಾಗಿದೆ. ದೈವಿಕ ಸಂದೇಶವನ್ನು ನಾವು ಕುಡಿಯುತ್ತೇವೆ ಅಥವಾ ನಮ್ಮದಾಗಿಸಿಕೊಳ್ಳುತ್ತೇವೆ. "ನಿನ್ನ ಸತ್ಯದಿಂದ ಅವರನ್ನು ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು." ನೀರು ಎಂಬುದು ಸತ್ಯಕ್ಕೆ ಸಂಕೇತವಾಗಿದೆ. ಇದು "ನೀತಿಗಾಗಿ ಹಸಿದು ಬಾಯಾರಿದವರಿಗೆ" ಒಂದು ಆಶೀರ್ವಾದದ ವಾಗ್ದಾನವಾಗಿದೆ ಎಂಬುದಕ್ಕೆ ಸಂಪೂರ್ಣವಾಗಿ ಅನುಗುಣವಾಗಿದೆ. ಮತ್ತು ಅವರಿಗೆ ನೀಡಿರುವ ವಾಗ್ದಾನವೇನೆಂದರೆ "ಅವರು ತೃಪ್ತಿ ಹೊಂದುವರು." ಇದೂ ಸಹ ನಮ್ಮ ಪಾಠದಲ್ಲಿ, "ನಾನು ಕೊಡುವ ನೀರನ್ನು ಕುಡಿಯುವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ." ಎಂಬ ನಮ್ಮ ಕರ್ತನ ಹೇಳಿಕೆಗೆ ಹೊಂದಾಣಿಕೆಯಾಗುತ್ತದೆ. **R 4132 : 4**

## 20 ಡಿಸೆಂಬರ್

**"ಸುನ್ನತಿಯೆಂದು ಹೇಳಿಕೊಂಡು ಅಂಗಚ್ಛೇದನ ಮಾಡುವವರಿಗೆ ಎಚ್ಚರಿಕೆಯಾಗಿರಿ. ನಿಜವಾದ ಸುನ್ನತಿಯವರು ಯಾರಂದರೆ–ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರ ಸಂಬಂಧವಾದವುಗಳಲ್ಲಿ ಭರವಸವಿಲ್ಲದವರೂ ಆಗಿರುವ ನಾವೇ." ( ಫಿಲಿಪ್ಪಿಯವರಿಗೆ 3 : 2 , 3)**

ಬಿದ್ದುಹೋದ ಮನುಕುಲದಲ್ಲಿರುವ ಯಾವುದೇ ಸ್ವಾಭಾವಿಕ ಮನುಷ್ಯನು ಸಂಪೂರ್ಣವಾಗಿ ಹೃದಯ ಸುನ್ನತಿಯನ್ನು ಹೊಂದಿಲ್ಲ. ಮತ್ತು ಹಾಗೆ ಹೃದಯ ಸುನ್ನತಿಯನ್ನು ಹೊಂದಿರುವವರು ಲೋಕಕ್ಕೆ ಸತ್ತವರಾಗಿದ್ದಾರೆ. ಲೋಕದ ನಿರೀಕ್ಷೆಗಳು, ಗುರಿಗಳು, ಮಹತ್ವಾಕಾಂಕ್ಷೆಗಳೆಲ್ಲವೂ ಅವರ ಪಾಲಿಗೆ ಶಿಲುಬೆಗೇರಿಸಲ್ಪಟ್ಟದ್ದಾಗಿವೆ ಮತ್ತು ಅವರು ದೇವರಿಗಾಗಿ ಜೀವಂತವಾಗಿದ್ದಾರೆ. ಅಂತಹ ಹೃದಯ ಸ್ಥಿತಿಯುಳ್ಳವರೆಂದು ಮನುವರಿಕೆಯಾಗುವವರಿಗೆ ದೇವರು ಅಂಗೀಕರಿಸಿದ ಮತ್ತು ಆತನ ಬಾಧ್ಯತೆಗೆಂದು ಎಲ್ಲಾ ಉತ್ಕೃಷ್ಟವಾದ ಮತ್ತು ಅಮೂಲ್ಯವಾದ ವಾಗ್ದಾನಗಳ ಆಶೀರ್ವದಿಸಿಲ್ಪಟ್ಟ ಪುರಾವೆಯನ್ನು ಹೊಂದಿದ್ದಾನೆ–ಹಾಗಿದ್ದರೆ ಅವನು ಮರಣ ಪರ್ಯಂತ ನಂಬಿಗಸ್ತನಾಗಿರಲು ಪ್ರಯತ್ನಿಸುತ್ತಾನೆ. ಆದರೆ ಅಂಥವರೆಲ್ಲರೂ ಸುನ್ನತಿ, ಕಲಹ ಮತ್ತು ವಿಭಜನೆಯ ಮನೋಭಾವದ ಬಗ್ಗೆ ಎಚ್ಚರಿಕೆಯಿಂದಿರಲಿ; ಏಕೆಂದರೆ ಈ ದುಷ್ಟ ದಿನದಲ್ಲಿ ಬೆಂಕಿಯಂತಿರುವ ಶೋಧನೆಗಳಲ್ಲಿ ಅಂಥವರೆಲ್ಲರೂ ಖಂಡಿತವಾಗಿಯೂ ಬೀಳುತ್ತಾರೆ

ಮತ್ತು ಯಾರೆಲ್ಲಾ ದೇವರನ್ನು ಆತ್ಮದಲ್ಲಿ ಮತ್ತು ಸತ್ಯದಲ್ಲಿ ಆರಾಧಿಸುತ್ತಾರೋ ಅಂಥವರು ಮಾತ್ರ ನಿಲ್ಲುತ್ತಾರೆ. ಈಗಾಗಲೇ ಸಹಿಷ್ಣುತೆಯ ಪರೀಕ್ಷೆಯು ಕೆಲವರಿಗೆ ತೀವ್ರವಾದ ಪರೀಕ್ಷೆಯಾಗಿದೆ ಎಂದು ಸಾಬೀತುಪಡಿಸುತ್ತಿದೆ; ಮತ್ತು ಖಂಡಿತವಾಗಿಯೂ ಇನ್ನೂ ಹೆಚ್ಚು ತೀವ್ರವಾಗಿರುತ್ತದೆ. "ನೀವು ಪಾಪಕ್ಕೆ ವಿರೋಧವಾಗಿ ಹೋರಾಡುವದರಲ್ಲಿ ರಕ್ತದ (ಪ್ರಾಣಾಪಾಯದ) ಮಟ್ಟಿಗೂ ಇನ್ನೂ ಅದನ್ನು ಎದುರಿಸಲಿಲ್ಲ." (ಇಬ್ರಿಯರಿಗೆ 12 : 4) ಕರ್ತನಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳದಿದ್ದರೆ ಮತ್ತು ಮೀಸಲು ಇಲ್ಲದ್ದಾಗಿ ಅರ್ಪಿಸಿಕೊಳ್ಳದಿದ್ದರೆ ಈ ದುಷ್ಟ ದಿನದಲ್ಲಿ ನಿಲ್ಲಲು ಸಾಧ್ಯವಾಗುತ್ತದೆ ಎಂಬುದಕ್ಕೆ ಯಾವುದೇ ಭರವಸೆ ಇಲ್ಲ. ಆದರೆ ಕರ್ತನಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿದವರು ಮತ್ತು ಮೀಸಲು ಇಲ್ಲದ್ದಾಗಿ ಅರ್ಪಿಸಿದವರು ಹಾಗೂ ತಮ್ಮ ಒಡಂಬಡಿಕೆಗೆ ಇನ್ನೂ ನಂಬಿಗಸ್ತರಾಗಿರುವವರು ಕ್ರಿಸ್ತ ಯೇಸುವಿನಲ್ಲಿ ಸಂತೋಷಪಡಲು ಕಾರಣವನ್ನು ಹೊಂದಿದ್ದಾರೆ. ಏಕೆಂದರೆ ಕ್ರಿಸ್ತನ ಕೃಪೆಯು ಅವರಿಗೆ ಸಾಕಾಗಿದೆ ಮತ್ತು ಆತನ ಅಮೂಲ್ಯವಾದ ರಕ್ತವು ಅವರಿಗೆ ಈಡು ಬಲಿಯಾಗಿ ಕೊಂಡುಕೊಂಡಿತು. **R 1671 : 4**

## 21 ಡಿಸೆಂಬರ್

**"ನೀತಿವಂತರು ಅಧಿಕಾರದಲ್ಲಿದ್ದಾಗ ಜನರು ಹರ್ಷಿಸುತ್ತಾರೆ." (ಜ್ಞಾನೋಕ್ತಿಗಳು 29 : 2)**

"ಈಗಿನ ದುಷ್ಟ ಲೋಕದ" ಸಮಯದಲ್ಲಿ ಮನುಷ್ಯನ ಆಳ್ವಿಕೆಯ ಅಡಿಯಲ್ಲಿ ನಮ್ಮ ಮೇಲಿನ ಆಧಾರ ವಾಕ್ಯವು ಒಂದು ಭಾಗದಷ್ಟು ಮಾತ್ರ ಅನ್ವಯಿಸುತ್ತದೆ. ಏಕೆಂದರೆ ಸೈತಾನನು ಈ ಲೋಕದ ಅಧಿಪತಿಯಾಗಿ ಈ ಲೋಕವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಾನೆ. ನಮ್ಮ ಮನುಕುಲದ ಅನುವಂಶಿಕ ದೌರ್ಬಲ್ಯದಿಂದಾಗಿ ಮನುಷ್ಯರ ಅತ್ಯುತ್ತಮ ಮಾದರಿಗಳು ಸಹ ಸಂಪೂರ್ಣ ನೀತಿಯಿಂದ ದೂರವಿದೆ ಮತ್ತು ಇದರ ಪರಿಣಾಮವಾಗಿ ಪ್ರಸ್ತುತ (ಈಗಿನ) ಕಾಲದ ಯಾವುದೇ ಆಳ್ವಿಕೆಯು ಅಂದರೆ ಅಪೂರ್ಣ ಮನುಷ್ಯರ ಅಡಿಯಲ್ಲಿರುವ ಯಾವ ಆಳ್ವಿಕೆಯು ನಮ್ಮ ಮೇಲಿನ ಆಧಾರ ವಾಕ್ಯದ ಭವಿಷ್ಯವಾಣಿಗಳನ್ನು ಪೂರೈಸಲು ಸಾಧ್ಯವಿಲ್ಲ. ಇದು ಇಡೀ ಸತ್ಯವೇದದಲ್ಲಿ ಸೂಚಿಸಲ್ಪಟ್ಟಿದೆ, ಇದರಲ್ಲಿ ಕರ್ತನು ತನ್ನ ರಾಜ್ಯವನ್ನು ಮನುಷ್ಯರ ನಡುವೆ ಸ್ಥಾಪಿಸುವನೆಂದು ಭರವಸೆ ನೀಡುತ್ತಾನೆ ಮತ್ತು ಇಮ್ಮಾನುಯೆಲನ ಆಳ್ವಿಕೆಯ ಅಡಿಯಲ್ಲಿ ಈ ಲೋಕದ ಎಲ್ಲಾ ಜನರು ಆಶೀರ್ವದಿಸಲ್ಪಡುತ್ತಾರೆ. ಈ ಕಾರಣದಿಂದಾಗಿಯೇ ಕರ್ತನ ಜನರು ಇನ್ನೂ ಹೀಗೆ

ಪ್ರಾರ್ಥಿಸುತ್ತಿದ್ದಾರೆ, "ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ." ಈ ಕಾರಣಕ್ಕಾಗಿಯೇ ಅಪೋಸ್ತಲನು ಹೀಗೆ ಘೋಷಿಸುತ್ತಾನೆ, ದೇವ ಪುತ್ರರ ಪ್ರತ್ಯಕ್ಷತೆಯನ್ನು ಸರ್ವ ಸೃಷ್ಟಿಯು ಲವಲವಿಕೆಯಿಂದ ಎದುರುನೋಡುತ್ತಾ, "ಇಂದಿನವರೆಗೂ ನರಳುತ್ತಾ ಪ್ರಸವವೇದನೆ ಪಡುತ್ತದೆ." ದೇವರ ಮಕ್ಕಳು ಅಂದರೆ ಚಿಕ್ಕ ಹಿಂಡು ತಮ್ಮ ಶಿರಸ್ಸಾದ ಕರ್ತನಾದ ಯೇಸುವಿನೊಂದಿಗೆ, ಮಹಾ ಪ್ರಾಯಶ್ಚಿತ ಯಜ್ಞದ ಆಧಾರದ ಅಡಿಯಲ್ಲಿ, ದೈವಿಕ ಏರ್ಪಾಡಿನ ಮೂಲಕ, ಅಧಿಕಾರದಿಂದ, ಬಲದಿಂದ, ನೀತಿಯಿಂದ ಲೋಕವನ್ನು ಆಳ್ವಿಕೆ ಮಾಡುತ್ತಾರೆ. ಆ ಸಮಯವನ್ನು ಮತ್ತು ಆ ಮಹಾನ್ ಆಳ್ವಿಕೆಗಾರರಾದ ಶಿರಸ್ಸು ಮತ್ತು ಶರೀರವನ್ನು ಕುರಿತು ಈ ರೀತಿಯಾಗಿ ಬರೆದದೆ, "ಆತನ ದಿವಸಗಳಲ್ಲಿ ನೀತಿವಂತನು ವೃದ್ಧಿಯಾಗುವನು." (ಕೀರ್ತನೆಗಳು 72 : 7). ಆತನ ದಿನದಲ್ಲಿ ಸೈತಾನನು ಜನರನ್ನು ಇನ್ನು ಮುಂದೆ ಮೋಸಗೊಳಿಸದ ಹಾಗೆ ಸಾವಿರ ವರ್ಷಗಳ ಕಾಲ ಬಂಧಿಸಲ್ಪಡುತ್ತಾನೆ ಹಾಗೂ ನೀತಿ ಮತ್ತು ಸತ್ಯದ ಎಲ್ಲಾ ಪ್ರಭಾವಗಳನ್ನು ಸಡಿಲಗೊಳಿಸಲಾಗುವುದು, ಇದರಿಂದ ಲೋಕವು ದೇವರ ಮಹಿಮೆಯ ಬೆಳಕು ಮತ್ತು ಜ್ಞಾನದಿಂದ ತುಂಬಿರುತ್ತದೆ. ಅಂತಹ ಆಶೀರ್ವಾದದ ಪರಿಸ್ಥಿತಿಗಳಲ್ಲಿ ಯಾರು ಬೇಕಾದರು ಜೀವಜಲವನ್ನು ಉಚಿತವಾಗಿ ತೆಗೆದುಕೊಂಡು ನಿತ್ಯನಿತ್ಯವಾಗಿ ಬದುಕಬಹುದು. **R 3285 : 5**

## 22 ಡಿಸೆಂಬರ್

**"ಕರ್ತನೇ, ನನ್ನ ತುಟಿಗಳನ್ನು ತೆರೆ, ಆಗ ನನ್ನ ಬಾಯಿ ನಿನ್ನ ಸ್ತೋತ್ರವನ್ನು ಪ್ರಕಟ ಮಾಡುವದು." (ಕೀರ್ತನೆಗಳು 51 : 15)**

ಇಲ್ಲಿ ವ್ಯಕ್ತಪಡಿಸುತ್ತಿರುವ ವಾಕ್ಯವು ಏನ್ನನ್ನು ಸೂಚಿಸುತ್ತದೆ ಎಂದರೆ ಕರ್ತನು ಮೊದಲು ತನ್ನ ಕರುಣೆ ಮತ್ತು ಸತ್ಯದಿಂದ ಅವರ ತುಟಿಗಳನ್ನು ತೆರೆಯದಿದ್ದರೆ ಕತ್ತಲೆಯಿಂದ ಆತನ ಅದ್ಭುತವಾದ ಬೆಳಕಿಗೆ ಕರೆದಾತನಾದ ಕರ್ತನು ಅವರ ಬಾಯನ್ನು ಸರಿಯಾಗಿ ತೆರೆದು ಸ್ತುತಿಗಳನ್ನು ವ್ಯಕ್ತಪಡಿಸಲು ಯಾರೂ ನಿರೀಕ್ಷಿಸಬೇಕಾಗಿಲ್ಲ; ಹಾಗಿಲ್ಲದಿದ್ದರೆ ಎಲ್ಲಾ ಜನರಿಗೆ ಮಹಾ ಸಂತೋಷವನ್ನು ಉಂಟುಮಾಡುವ ಶುಭಸಮಾಚಾರವನ್ನು ಹೇಳಲು ಯಾರಾದರು ಹೇಗೆ ನಿರೀಕ್ಷಿಸಬಹುದು? ಪಾಪ ಕ್ಷಮಾಪಣೆಯನ್ನು ಪಡೆದವರೆಲ್ಲರೂ ಕರ್ತನಿಗೆ ತಮ್ಮ ಸರ್ವಸ್ವವನ್ನೂ ಸಂಪೂರ್ಣವಾಗಿ ಪ್ರತಿಷ್ಠಿಸುವ ಮನಸ್ಥಿತಿಯಲ್ಲಿರಬೇಕೆಂದು ಇದು

ಸಮಾನವಾಗಿ ಸೂಚಿಸುತ್ತದೆ ಹಾಗೂ ನಂತರ ಅಂಥವರೆಲ್ಲರೂ ತಮ್ಮ ತುಟಿಗಳನ್ನು ತೆರೆಯಲು ನಿರೀಕ್ಷಿಸಬೇಕು, ಅದರಿಂದ ದೇವರ ಸತ್ಯದ ಮತ್ತು ಕೃಪೆಯ ಸಂದೇಶವು ಇತರರಿಗೆ ಮಾರ್ಗದರ್ಶನ ಮತ್ತು ಆಶೀರ್ವಾದಕ್ಕಾಗಿ ಅವರಿಂದ ಹೊರಟು ಬರಬಹುದು–"ನಿನ್ನ ತುಟಿಗಳಲ್ಲಿ ಕೃಪೆಯು ಹೊಯಿದದೆ (ಸುರಿದದೆ)." ಎಂದು ವಾಕ್ಯದಲ್ಲಿ ಬರೆದದೆ. (ಕೀರ್ತನೆಗಳು 45 : 2) "ಆತನು ನನ್ನ ಬಾಯಲ್ಲಿ ನೂತನ ಹಾಡನ್ನು ಇಟ್ಟಿದ್ದಾನೆ; ಅದು ನಮ್ಮ ದೇವರ ಸ್ತೋತ್ರವೇ." (ಕೀರ್ತನೆಗಳು 40 : 2). ಇವುಗಳು ವಿಶೇಷವಾಗಿ ನಮ್ಮ ಪ್ರಿಯ ವಿಮೋಚಕನಿಗೆ ಸೂಕ್ತವಾಗಿದ್ದರೂ, ಇವುಗಳು "ಆತನ ಶರೀರವಾಗಿರುವ ಸಭೆಯ" ಪ್ರತಿಯೊಬ್ಬ ಸದಸ್ಯರಿಗೂ ಸಹ ಸೂಕ್ತವಾಗಿದೆ ಮತ್ತು ಆತನ "ಶರೀರ"ದವರು ಎಂದು ಹೇಳಿಕೊಳ್ಳುವವರೆಲ್ಲರೂ ಅವರಿಗೆ ಸಿಕ್ಕಿದ ಅವಕಾಶಕ್ಕೆ ಅನುಗುಣವಾಗಿ ಕರ್ತನನ್ನು ಒಪ್ಪಿಕೊಳ್ಳಲು ತಮ್ಮ ತುಟಿಗಳನ್ನು ಎಂದಿಗೂ ತೆರೆಯದಿದ್ದರೆ ಕರ್ತನೊಂದಿಗಿನ ಅವರ ಸಂಬಂಧಕ್ಕೆ ಸಂಬಂಧಿಸಿದಂತೆ ಎಲ್ಲವನ್ನೂ ಪ್ರಶ್ನಿಸಲು ಕಾರಣವಿದೆ. **R 3255 : 3**

## 23 ಡಿಸೆಂಬರ್

**"ನಾನು ಜಯಹೊಂದಿ ನನ್ನ ತಂದೆಯೊಡನೆ ಆತನ ಸಿಂಹಾಸನದಲ್ಲಿ ಕೂತುಕೊಂಡ ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ನನ್ನ ಸಿಂಹಾಸನದಲ್ಲಿ ನನ್ನ ಕೂಡ ಕೂತುಕೊಳ್ಳುವಂತೆ ಅನುಗ್ರಹಿಸುವೆನು." ( ಪ್ರಕಟನೆ 3 : 21 )**

ಯಾರೆಲ್ಲಾ ದೇವರಲ್ಲಿ ನಂಬಿಕೆಯಿಟ್ಟಿದ್ದಾರೋ ಅವರು ಇನ್ನೂ ಯದ್ಧಗಳನ್ನು ಜಯಿಸಬೇಕಾಗಿದೆ, ಆದರೆ ಅದು ಶಾರೀರಿಕವಾದ ಆಯುಧಗಳಿಂದಲ್ಲ. ಆದಾಗ್ಯೂ ಅವರ ವಿಜಯಗಳು ದಾವೀದನೊಂದಿಗೆ ಅನುಕೂಲಕರವಾಗಿ ಕಾರ್ಯ ನಿರ್ವಹಿಸಿದ ಅದೇ ತತ್ವವನ್ನು ಆಧರಿಸಿವೆ. ದೇವರ ಮೇಲಿರುವ ನಂಬಿಕೆಯು ಯಾವುದರ ಮೇಲೆ ಆಧಾರವಾಗಿದೆ ಎಂದರೆ–ಅವರ ಹೋರಾಟದ ಕಾರಣವು ದೇವರಿಂದ ಅನುಮೋದಿತವಾಗಿದೆ ಎಂಬ ಮನವರಿಕೆ ಅವರಲ್ಲಿ ಉಂಟಾಗುವುದರ ಮೇಲೆ ಆಧಾರವಾಗಿದೆ. ಅವರ ನಂಬಿಕೆಗೆ ಸೂಕ್ತವಾದ ಧೈರ್ಯ–ಅಂದರೆ ದಾವೀದನ ವಿಚಾರದಲ್ಲಿ ನಡೆದಂತೆ ಕೆಲವು ವೈರಿಗಳ ಮೇಲಿನ ಹಿಂದಿನ ಜಯವು ಕ್ರಮೇಣವಾಗಿ ನಂಬಿಕೆಯಲ್ಲಿ ಬೆಳೆಯಲು ಕಾರಣವಾಯಿತು–ಈ ವಿಚಾರವು ಮುಂದೆ ನಾವು ಎದುರಿಸಬಹುದಾದ ಅತ್ಯಂತ ಭಯಾನಕ ದೈತ್ಯರೊಂದಿಗೆ ಹೋರಾಡಲು ಧೈರ್ಯ ಮತ್ತು ಶಕ್ತಿಯನ್ನು ನೀಡಲು ಸಹಾಯ ಮಾಡುತ್ತದೆ. **R 5662 : 4**

## 24 ಡಿಸೆಂಬರ್

**"ಇಗೋ, ಎಲ್ಲಾ ಜನರಿಗೆ ಮಹಾ ಸಂತೋಷವನ್ನುಂಟು ಮಾಡುವ ಶುಭಸಮಾಚಾರವನ್ನು ನಾನು ನಿಮಗೆ ತಿಳಿಯಪಡಿಸುತ್ತೇನೆ." (ಲೂಕನು 2 : 10)**

ದೇವರ ವಿಮೋಚನೆಯ ಪ್ರೀತಿಯ ಕಥೆ ಹೋದ ಕಡೆಯೆಲ್ಲೆಲ್ಲಾ, ವಿಧವಿಧವಾದ ಸುಳ್ಳುಗಳಿಂದ ಗೊಂದಲಕ್ಕೊಳಗಾಗಿದ್ದರೂ, ಅದು ಹೆಚ್ಚು ಕಡಿಮೆ ಆಶೀರ್ವಾದವನ್ನು ತಂದಿದೆ–ನಿರ್ಲಕ್ಷ್ಯವಾಗಿ ಕೇಳಿ, ಆ ವಾಕ್ಯವನ್ನು ಅನುಸರಿಸದೆ ಇರುವವರಿಗೂ ಸಹ ಅದು ಆಶೀರ್ವಾದವನ್ನು ತಂದಿದೆ; ಸ್ವಲ್ಪ ಮಟ್ಟಿಗೆ ಕೇಳಿ ಮತ್ತು ಸ್ವಲ್ಪ ಮಟ್ಟಿಗೆ ಅನುಸರಿಸುವ ಬೇರೆಯವರಿಗೆ ಇನ್ನೂ ಹೆಚ್ಚಿನ ಆಶೀರ್ವಾದ ತಂದಿದೆ. ಆದರೆ ಅದರ ಅತ್ಯಧಿಕ ಆಶೀರ್ವಾದವು ಚಿಕ್ಕ ಹಿಂಡಿಗೆ, ರಾಜವಂಶದವರಾದ ಯಾಜಕ ವರ್ಗದವರಿಗೆ ತಂದಿದೆ. ಇವರು ದೈವಿಕ ಏರ್ಪಾಡಿನ ಮನೋಭಾವದಲ್ಲಿ ಪ್ರವೇಶಿಸಿ, ಕರ್ತನ ಅಮೂಲ್ಯವಾದ ರಕ್ತದ ಮೇಲಿನ ನಂಬಿಕೆಯ ಮೂಲಕ ನೀತಿವಂತರಾಗಿದ್ದಾರೆಂದು ಅರಿತುಕೊಂಡು, ಕರ್ತನ ಆಹ್ವಾನಕ್ಕೆ ಅನುಗುಣವಾಗಿ ತಮ್ಮನ್ನು ತಾವು ಜೀವಬಲಿಯಾಗಿ ಅರ್ಪಿಸಲು ಮುಂದೆ ಬಂದು, ಈಗಿನ (ಈ ವರ್ತಮಾನ) ಕಾಲದ ಸಂಕಟಗಳಲ್ಲಿ ಕ್ರಿಸ್ತನೊಂದಿಗೆ ಐಕ್ಯತೆ ಹೊಂದುವದು ಮಾತ್ರವಲ್ಲದೆ, ಭವಿಷ್ಯದಲ್ಲಿ ಬರುವ ರಾಜ್ಯದ ಮಹಿಮೆಯಲ್ಲಿಯೂ ಪಾಲು ಹೊಂದುತ್ತಾರೆ. ಈ ವರ್ಗದವರು ಮುಖ್ಯವಾಗಿ, ಅಂಧಕಾರದ ಯುಗದಿಂದ ಬರುವ ಸುಳ್ಳುಗಳಿಂದ ಮರೆಯಾಗಿದ್ದ ದೈವಿಕ ವಾಕ್ಯವು ಈಗ ಇನ್ನೂ ಪೂರ್ಣವಾಗಿ ತೆರೆದಿರುವುದನ್ನು ಕಂಡು ಸಂತೋಷಪಡುತ್ತಾರೆ; ಈ ವರ್ಗದವರು ಮುಖ್ಯವಾಗಿ ಈಗ ದೈವಿಕ ಪ್ರೀತಿಯ ಮತ್ತು ದೈವಿಕ ಯೋಜನೆಯ ಉದ್ದ, ಅಗಲ, ಎತ್ತರ ಮತ್ತು ಆಳಗಳನ್ನು ಕುರಿತು ವಿವೇಚಿಸುವುದರಲ್ಲಿ ಸಂತೋಷ ಪಡುತ್ತಾರೆ ಮತ್ತು ಆ ದೈವಿಕ ಪ್ರೀತಿ ಮತ್ತು ಯೋಜನೆಯು ಇಡೀ ಲೋಕವನ್ನು ಕೊಂಡುಕೊಂಡಿದೆ (ಖರೀದಿಸಿದೆ), ಮತ್ತು ಅಂತಿಮವಾಗಿ ಈಗಿನ ಅವನತಿಯಿಂದ (ಅಳಿವಿನಿಂದ) ಸಾವಿರ ವರ್ಷದ ಕ್ರಿಸ್ತನ ರಾಜ್ಯದ ಅನುಕೂಲಕರ ಪರಿಸ್ಥಿತಿಯ ಅಡಿಯಲ್ಲಿ ದೇವರು ಬೇಡಿಕೆ ಇಡುವ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುತ್ತಾರೆ. ಇಂಥವರು ನೀತಿಯನ್ನು ಪ್ರೀತಿಸಿ, ಅಕ್ರಮವನ್ನು ದ್ವೇಷಿಸುತ್ತಾರೆ. ಇಂಥವರೇ ನಿತ್ಯಜೀವವನ್ನು ಹೊಂದುವವರಾಗುತ್ತಾರೆ. **R 3115 : 6**

## 25 ಡಿಸೆಂಬರ್

**"ಈ ದಿನ ದಾವೀದನ ಪಟ್ಟಣದಲ್ಲಿ ನಿಮಗೋಸ್ಕರ ಒಬ್ಬ ರಕ್ಷಕನು ಹುಟ್ಟಿದ್ದಾನೆ; ಆತನು ಕರ್ತನಾಗಿರುವ ಕ್ರಿಸ್ತನೇ." (ಲೂಕನು 2 : 11)**

ವರ್ಷದ ಈ ಸಂತೋಷದಾಯಕ ಕಾಲದಲ್ಲಿ ನಾವು ಸಂತೋಷ ಪಡೋಣ ಮತ್ತು ಮೆಸ್ಸೀಯನ ಮಹಾ ಕೊಡುಗೆಯನ್ನು ನೀಡಿದ ದೈವಿಕ ಪ್ರೀತಿ ಮತ್ತು ಉದಾರತೆಯನ್ನು ಮೆಚ್ಚುಗೆಯಿಂದ ನಮ್ಮ ಹೃದಯಗಳಲ್ಲಿ ತುಂಬಿಕೊಳ್ಳೋಣ, ಹೀಗಾಗಿ ಪರೋಕ್ಷವಾಗಿ ಇನ್ನೂ ಮುಂದೆ ಬರಲಿರುವ ರಾಜ್ಯದ ಬಗ್ಗೆ ಮತ್ತು ಅದರಲ್ಲಿ ನಮ್ಮ ಪಾಲು ಲೋಕವನ್ನು ಆಶೀರ್ವದಿಸುವುದಾಗಿದೆ. ನಾವು ಉಚಿತವಾಗಿ ಸ್ವೀಕರಿಸಿದಂತೆ, ನಾವು ಉಚಿತವಾಗಿ ನೀಡೋಣ ಮತ್ತು ಹೀಗೆ ನಮ್ಮ ಕರ್ತನನ್ನು ಮತ್ತು ಪರಲೋಕದ ತಂದೆಯನ್ನು ಅನುಸರಿಸೋಣ. ಕೆಲವರಿಗೆ ಅನೇಕ ರೀತಿಯ ಉಡುಗೊರೆಗಳನ್ನು ನೀಡುವ ಅವಕಾಶವಿರಬಹುದು. "ಯುಗಗಳ ದೈವಿಕ ಯೋಜನೆಯಲ್ಲಿ" ತಿಳಿಸಿರುವಂತೆ ದೇವರ ಕೃಪೆಯ ಐಶ್ವರ್ಯವನ್ನು ಜನರಿಗೆ ತಿಳಿಸುವ ಮೂಲಕ ದೇವರ ಪ್ರೀತಿಯ ಉಡುಗೊರೆಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ (ಮರೆಯಾಗಿ) ಇತರರಿಗೆ ನೀಡುವ ಸವಲತ್ತು ನಮ್ಮೆಲ್ಲರಿಗೂ ಇದೆ. ದೇವರ ಪ್ರೀತಿಯ ಸಂದೇಶವು ನಾವು ಸ್ವೀಕರಿಸಿದ ಅತ್ಯಮೂಲ್ಯವಾದ ವಿಷಯವಾಗಿದೆ ಮತ್ತು ನಮ್ಮ ಆತ್ಮೀಯ ಸ್ನೇಹಿತರು ಮತ್ತು ನೆರೆಹೊರೆಯವರು ಮತ್ತು ಪ್ರೀತಿಪಾತ್ರರಿಗೆ ನಾವು ಉಡುಗೊರೆಗಳನ್ನು ನೀಡುವಾಗ, ಬೇರೆ ಏನೇ ವಸ್ತುಗಳನ್ನು ನಾವು ನೀಡಲು ಸಾಧ್ಯವಾದರೂ ಅಥವಾ ನೀಡಲು ಸಾಧ್ಯವಾಗದಿದ್ದರೂ, ಅವರಿಗೆ ಇದನ್ನು ಅಂದರೆ ದೇವರ ಪ್ರೀತಿಯ ಸಂದೇಶವನ್ನು ನೀಡಬಹುದು; ನಮ್ಮ ನಡತೆ ಮತ್ತು ಸಾಮಾನ್ಯ ಜೀವಿತದಲ್ಲಿ, ನಾವು ಅದನ್ನು ಮಾಣಿಕ್ಯಗಳಿಗಿಂತ ಹೆಚ್ಚಾಗಿ ಹೇಗೆ ಗೌರವಿಸುತ್ತೇವೆ ಎಂಬುದನ್ನು ತೋರಿಸಬೇಕು ಮತ್ತು ನಾವು ದೇವರ ಉಡುಗೊರೆಯನ್ನು ಕುರಿತು ಅತ್ಯುತ್ತಮವಾಗಿ ಪ್ರಶಂಸಿಸಬಹುದು ಮತ್ತು ಅದನ್ನು ಇತರರು ಪ್ರಶಂಸಿಸಲು ಸಹಾಯ ಮಾಡಬಹುದು. ಅಂತಹ ಪ್ರಸ್ತುತಿಗಳಲ್ಲಿ ದಯೆಯ ಮಾತುಗಳು, ದಯೆಯ ನೋಟಗಳು ಪ್ರೀತಿಯ ಹೃದಯದಿಂದ ಹೊರಬರುತ್ತದೆ. ಅದು ಸ್ವತಃ ಸತ್ಯದ ಶಕ್ತಿಯ ಮೂಲಕ ವಿರೋಧಿಯ ಆಳ್ವಿಕೆ, ಪಾಪ ಮತ್ತು ಸ್ವಾರ್ಥದಿಂದ ರಕ್ಷಿಸಲ್ಪಟ್ಟಿದೆ. ಈ ಕೃಪೆ ಮತ್ತು ಸತ್ಯದ ಉಡುಗೊರೆಗಳನ್ನು ಮತ್ತು ಸಂತೋಷದಾಯಕ ಪ್ರಭಾವಗಳನ್ನು ನಮ್ಮ ಸುತ್ತ ಇರುವ ಎಲ್ಲರಿಗೂ ಹಂಚಲು (ಹರಡಲು) ಕಲಿಯೋಣ. ಕೇವಲ ವರ್ಷಕ್ಕೊಮ್ಮೆ ಅಲ್ಲ, ಆದರೆ ಪ್ರತಿದಿನ ಮತ್ತು ಪ್ರತಿ ಗಂಟೆಗೂ ಹರಡೋಣ ಮತ್ತು ಕೇವಲ ನಮ್ಮ ಸ್ನೇಹಿತರಿಗೆ ಮಾತ್ರವಲ್ಲದೆ ದೇವರಂತೆ ನಮ್ಮ ಶತ್ರುಗಳಿಗೂ ಹರಡೋಣ. ಏಕೆಂದರೆ "ಆತನು ಕೃತಜ್ಞತೆಯಿಲ್ಲದವರಿಗೂ ದಯೆಯುಳ್ಳವನಾಗಿದ್ದಾನೆ ಮತ್ತು ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಉದಯಿಸುವಂತೆ ಮಾಡುತ್ತಾನೆ." **R 4298 : 6**

## 26 ಡಿಸೆಂಬರ್

**"ನೀತಿವಂತನು ನನ್ನನ್ನು ಹೊಡೆಯಲಿ; ಅದು ಕರುಣೆಯೇ; ಅವನು ನನ್ನನ್ನು ಗದರಿಸಲಿ; ಅದು ನನ್ನ ತಲೆಗೆ ಶ್ರೇಷ್ಠ ಎಣ್ಣೆಯೇ. ಅದನ್ನು ನನ್ನ ತಲೆ ಬೇಡವೆನ್ನದಿರಲಿ." (ಕೀರ್ತನೆಗಳು 141 : 5)**

ನೀತಿವಂತನು ಎಂಬ ಪದದ ಈ ಬಳಕೆಯಲ್ಲಿ, ಯಾರೆಲ್ಲಾ ತಿದ್ದಲ್ಪಡುತ್ತಾರೋ ಅಂಥವರ ಒಳಿತಿಗಾಗಿ ಸಹಾಯವಾಗುವ ಹಾಗೆ ಎಲ್ಲಾ ಕರ್ತನ ಜನರು ನೀತಿಯಲ್ಲಿ ಖಂಡನೆ ಮತ್ತು ತಿದ್ದುಪಡಿಯನ್ನು ನೀಡಲು ಶಕ್ತರಾಗಬೇಕು ಎಂದು ಈ ವಾಕ್ಯವು ಸೂಚಿಸುವಂತೆ ತೋರುತ್ತದೆ; ಅದು ಒಂದು ರೀತಿಯಲ್ಲಿ ಸಾಂತ್ವನ, ಆಶೀರ್ವಾದ ಮತ್ತು ಉಲ್ಲಾಸವನ್ನು ತರುವ ರೀತಿಯಲ್ಲಿರಬೇಕು; ಅದು ಅತ್ಯುತ್ತಮವಾದ ಅಥವಾ ಪರಿಮಳಯುಕ್ತ ಎಣ್ಣೆಯಂತಿರುವ ರೀತಿಯಲ್ಲಿದ್ದು ಅದರ ಸುಗಂಧವು ಬಹು ಗಂಟೆಗಳ ಕಾಲ ಇರಬೇಕು. ಇಲ್ಲಿ ನಮ್ಮ ಮನಸ್ಸಿನ ಮುಂದೆ ಈ ಆಲೋಚನೆಯ ಮೂಲಕ ನಮಗೆ ಒಂದು ಅಮೂಲ್ಯವಾದ ಪಾಠವಿದೆ. ಮೊದಲನೆಯದಾಗಿ, ನಾವು ಕರ್ತನ ತಿದ್ದುಪಡಿಗಳನ್ನು ಸ್ವೀಕರಿಸುವವರಾಗಿರಬೇಕು; ಮತ್ತು ನಮ್ಮಲ್ಲಿ ಯಾವುದೇ ರೀತಿಯಾದ ತಪ್ಪಿದ್ದರೆ ಅದನ್ನು ಸರಿಪಡಿಸಿಕೊಳ್ಳಲು ನಾವು ಸಂತೋಷವುಳ್ಳವರಾಗಿರಬೇಕು; ಎರಡನೆಯದಾಗಿ, ನಾವು ಎಂಥವರಾಗಿರಬೇಕೆಂದರೆ ಮತ್ತೊಬ್ಬರನ್ನು ನಾವು ಖಂಡಿಸಲು ಯೋಗ್ಯರಾಗಿದ್ದರೆ, ಅದು ಹಾನಿಕರವಲ್ಲದ ಒಂದು ರೀತಿಯದ್ದಾಗಿರಬೇಕು, ಆದರೆ ಅದು ಆತ್ಮೀಕವಾದದ್ದು, ಉನ್ನತಿಗೇರಿಸುವಂತೆ ಮತ್ತು ಉಲ್ಲಾಸಕರವಾಗಿರುವಂತೆ ಇರಬೇಕು ಎಂದು ನಾವು ಗುರುತಿಸುವವರಾಗಿರಬೇಕು. **R 4977 :2**

## 27 ಡಿಸೆಂಬರ್

**"ನೀವು ಮಾಡುವದನ್ನೆಲ್ಲಾ ಪ್ರೀತಿಯಿಂದ ಮಾಡಿರಿ." (1 ಕೊರಿಂಥ 16 : 14)**

ದೇವರು ಅತ್ಯಂತ ಸಹಾನುಭೂತಿ ಮತ್ತು ಪ್ರೀತಿಯ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಸತ್ಯವೇದವು ಹೇಳುವಂತೆ– "ದೇವರು ಪ್ರೀತಿಸ್ವರೂಪಿಯಾಗಿದ್ದಾರೆ." ಮತ್ತು ಯಾರೆಲ್ಲಾ ದೇವರ ಮಕ್ಕಳಾಗಿರುತ್ತಾರೋ ಅಂದರೆ ದೇವರ ಸ್ವರೂಪದಲ್ಲಿ ಬೆಳೆಯುತ್ತಾರೋ, ಅಂಥವರು ಪ್ರೀತಿಯುಳ್ಳ ಮಕ್ಕಳಾಗಿರುತ್ತಾರೆ. ಯೋಹಾನನು ಹೇಳುವಂತೆ– "ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ ಮತ್ತು ದೇವರು ಅವನಲ್ಲಿ ನೆಲೆಗೊಂಡಿದ್ದಾರೆ." ನೂತನ ಸೃಷ್ಟಿಗಳಾಗಿ ನಾವು ಎಷ್ಟರ

ಮಟ್ಟಿಗೆ ಈ ಗುಣಲಕ್ಷಣದ ಶಕ್ತಿಯನ್ನು ಬೆಳೆಸಿಕೊಳ್ಳುತ್ತೇವೋ, ಅಷ್ಟರ ಮಟ್ಟಿಗೆ ಈ ಪ್ರೀತಿಯ ಗುಣವು ಹೆಚ್ಚಾಗುತ್ತದೆ. ಇದರೊಂದಿಗೆ ನಮ್ಮ ನ್ಯಾಯತೀರ್ಪು ಕೂಡ ಹೆಚ್ಚು ನಿಖರವಾಗುತ್ತಿದೆ ಎಂದು ನಾವು ಕಂಡುಕೊಳ್ಳಬೇಕು. ಕರ್ತನ ಆತ್ಮದಲ್ಲಿ ಅಭಿವೃದ್ಧಿ ಹೊಂದಿದವರು, ಹಿಂದೆ ಹೊಂದಿದ್ದಕ್ಕಿಂತ ಉತ್ತಮ ನ್ಯಾಯತೀರ್ಪನ್ನು ಅವರು ಈಗ ಹೊಂದಿರುತ್ತಾರೆ. ದಿನಗಳು ಕಳೆದಂತೆ, ಲೋಕದವರೊಂದಿಗೆ ಎಷ್ಟು ಸಹಾನುಭೂತಿ ಹೊಂದಿರಬೇಕು ಎಂದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ; ಮನುಕುಲದೊಂದಿಗೆ ಹೇಗೆ ವ್ಯವಹರಿಸಬೇಕು ಎಂದು ತಿಳಿದಿರುತ್ತದೆ; ಅವರು ಮೇಲಿನಿಂದ ಬರುವ ಜ್ಞಾನವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುತ್ತಾರೆ. **R 5417 : 2**

## 28 ಡಿಸೆಂಬರ್

**"ನಾವು ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯಿಂದ ನಮ್ಮನ್ನು ಶುದ್ಧಿಮಾಡುವನು." (1 ಯೋಹಾನ 1 : 9)**

ಕರ್ತನು ತನ್ನ ಜನರು ತಮ್ಮ ಶರೀರದ ಅನುವಂಶಿಕ ಬಲಹೀನತೆಗಳ ಮೂಲಕ ತಮಗೆ ಮತ್ತೆ ಮತ್ತೆ ಉಂಟಾಗುವ ವೈಫಲ್ಯಗಳಿಂದ ತುಂಬಾ ಬೇಸರಗೊಳ್ಳಬಹುದೆಂದು ಮೊದಲೇ ತಿಳಿದಿದ್ದರಿಂದ, ಕರ್ತನು ಅವರ ಪ್ರೋತ್ಸಾಹಕ್ಕಾಗಿ ವಿಶೇಷ ಉಪದೇಶವನ್ನು ಅವರಿಗೆ ಒದಗಿಸಿದನು, ಅದೇನೆಂದರೆ–"ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾ ಸಿಂಹಾಸನದ ಬಳಿಗೆ ಬರೋಣ." ಈ ವಿಚಾರವನ್ನು ನಾವು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ವರ್ಷದ ಅಂತ್ಯದ ಸಮಯದಲ್ಲಿ ಮತ್ತು ಹೊಸದೊಂದು ವರ್ಷದ ಪ್ರಾರಂಭದ ಸಮಯದಲ್ಲಿರುವ ಎಲ್ಲಾ ಕ್ರೈಸ್ತರು ತಮ್ಮ ತಪ್ಪೊಪ್ಪಿಗೆಯ ದಾಖಲೆಗಳನ್ನು(ವಿಚಾರಗಳನ್ನು) ಕರ್ತನಿಗೆ ಒಪ್ಪಿಸಬೇಕು ಮತ್ತು ಈ ಕ್ಷಮೆಯ ದಯೆ ಮತ್ತು ಸಹಾಯವನ್ನು ಪಡೆಯದೆ ಎಂದಿಗೂ ವಿಶ್ರಾಂತಿಗೆ ಹೋಗಬಾರದು. ಆದರೆ ಯಾರಾದರೂ ಈ ವಿಷಯವನ್ನು ತಡಮಾಡಿದರೆ, ಅವರ ಮತ್ತು ಕರ್ತನ ನಡುವೆ ಮೋಡ ಕವಿದಿದ್ದರೆ, ಅವರು ಈ ವರ್ಷದ ಕೊನೆಯಲ್ಲಿ ಈ ವಾಗ್ದಾನಗಳನ್ನು ಖಂಡಿವಾಗಿಯೂ ಪಡೆದುಕೊಳ್ಳಲಿ, ಇದರಿಂದ ಅವರು ಹೊಸ ವರ್ಷವನ್ನು ಶುದ್ಧವಾದ ಮನಸಾಕ್ಷಿಯೊಂದಿಗೆ ಪ್ರಾರಂಭಿಸಬಹುದು–ಅವರ ಮೇಲೆ ತಂದೆಯ ನಗು ಮುಖದೊಂದಿಗೆ ಮತ್ತು ಅವರ ವಿಮೋಚಕನ ಐಕ್ಯದೊಂದಿಗೆ

ಮತ್ತು ಅವರು ನಡೆಯುವ ಹೆಜ್ಜೆಗಳಲ್ಲಿ ಶ್ರದ್ಧೆ ಮತ್ತು ಜಾಗರೂಕತೆಯ ಹೊಸ ಸಂಕಲ್ಪದೊಂದಿಗೆ ಈ ಹೊಸ ವರ್ಷವನ್ನು ಪ್ರಾರಂಭಿಸಬಹುದು. **R 4932 : 1**

## 29 ಡಿಸೆಂಬರ್

**"ನಾನು ಅವರನ್ನು ಮನುಷ್ಯ ಸ್ನೇಹ ಬಂಧನವೆಂಬ ಹಗ್ಗಗಳಿಂದಲೂ ಪ್ರೀತಿಯ ಬಂಧನಗಳಿಂದಲೂ ಎಳೆದೆನು." ( ಹೋಶೇಯ 11 : 4 )**

ಪ್ರೀತಿಯು ಸತ್ಯವೇದದ ವಾಕ್ಯಾಧಾರವಾಗಿದೆ, ಇದು ಖಂಡನೆಗಳನ್ನು ಹಾಗೂ ವಾಗ್ದಾನಗಳನ್ನು ಒಳಗೊಂಡಿದೆ ಮತ್ತು ನೀತಿಯ ಘೋಷಣೆಗಳನ್ನು ಹಾಗೂ ಕರುಣೆಯನ್ನು ವ್ಯಕ್ತಪಡಿಸುಂಥದ್ದಾಗಿದೆ. ಒಂದು ವೇಳೆ ದೇವರ ಗುಣಲಕ್ಷಣವು ನೀತಿಯನ್ನು ವ್ಯರ್ಥಗೊಳಿಸುವುದಾದರೆ–ಒಂದು ವೇಳೆ ಆತನ ಪ್ರೀತಿಯು ಆತನ ನೀತಿಯನ್ನು ಅತಿಕ್ರಮಿಸಿದರೆ (ತಳ್ಳಿಹಾಕಿದರೆ), ಅದು ಆತನ ಮೇಲೆ ಅವಲಂಬಿಸಿರುವ ಎಲ್ಲರಿಗೂ ಭಯಾನಕ ವಿಪತ್ತಾಗಿ ಮಾರ್ಪಡುತ್ತದೆ. ಇದು ದೇವರ ಬಲವುಳ್ಳ ಗುಣಲಕ್ಷಣಕ್ಕೆ ಬದಲಾಗಿ ಬಲಹೀನ ಗುಣಲಕ್ಷಣಕ್ಕೆ ಸಾಕ್ಷಿಯಾಗಿರುತ್ತದೆ. ನಿಜಾಂಶವೇನೆಂದರೆ ದೇವರ ಜ್ಞಾನ, ನೀತಿ, ಪ್ರೀತಿ ಮತ್ತು ಶಕ್ತಿಯು ಪೂರ್ಣ ಸಾಮರಸ್ಯದಿಂದ – ಸಮನ್ವಯದಿಂದ ಕಾರ್ಯನಿರ್ವಹಿಸುತ್ತದೆ– ಇದರಿಂದ ನಾವು ಆತನಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಲು, ಆತನ ಮೇಲೆ ವಿಶ್ವಾಸವಿಡಲು, ಆತನ ಮೇಲೆ ಪ್ರೀತಿಯನ್ನಿಡಲು ಸಾಧ್ಯವಾಗುತ್ತದೆ; ಮತ್ತು ಆತನು ಬದಲಾಗದವನು ಎಂದು ನಾವು ಅರಿತುಕೊಂಡಾಗ ಈ ಎಲ್ಲಾ ಮೆಚ್ಚುಗೆಗಳು ತೀವ್ರಗೊಳ್ಳುತ್ತದೆ. **R 5809 : 2**

## 30 ಡಿಸೆಂಬರ್

**"ನಾನು ನಿನಗೆ ಸ್ತೋತ್ರದ ಬಲಿಯನ್ನು ಅರ್ಪಿಸುವೆನು; ಕರ್ತನ ಹೆಸರನ್ನು ಕರೆಯುವೆನು." (ಕೀರ್ತನೆಗಳು 116 : 17)**

ಆತ್ಮೀಕವಾಗಿ, ನಾವು ಹೇರಳವಾದ ದೈವಿಕ ದಯೆಯ(ಕರುಣೆಯ) ಹಬ್ಬವನ್ನು ಆಚರಿಸಿದ್ದೇವೆ; ನಾವು ತಾತ್ಕಾಲಿಕವಾದ (ಲೌಕಿಕ) ವಿಷಯಗಳಲ್ಲಿ, ಯಾವುದೇ ಪರಿಸ್ಥಿತಿಯಲ್ಲಿದ್ದರೂ, ದೇವರನ್ನು ಪ್ರೀತಿಸುವವರಿಗೆ ಎಲ್ಲವೂ ಒಳ್ಳೆಯದಕ್ಕಾಗಿ ಕೆಲಸ ಮಾಡುತ್ತದೆ ಎಂಬ ಭರವಸೆಯೊಂದಿಗೆ ನಾವು ಅರಿತಿರುವುದೇನೆಂದರೆ "ಸಂತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ."(1 ತಿಮೊಥೆ 6 : 6), ಈಗಿನ ಜೀವನದ ಭರವಸೆಯನ್ನು ಹೊಂದಿದ್ದೇವೆ (ಹಾಗೆ

ಎಲ್ಲಿಯವರೆಗೆ ನಾವು ಇಲ್ಲಿ ಬದುಕಿರಬೇಕೆಂದು ದೇವರು ಬಯಸುತ್ತಾರೋ ಅಲ್ಲಿಯವರೆಗೆ) ಮತ್ತು ಮುಂದೆ ಬರಲಿರುವ ಜೀವನದ ಬಗ್ಗೆಯೂ ಸಹ ಭರವಸೆಯನ್ನು ಹೊಂದಿದ್ದೇವೆ. ಆದ್ದರಿಂದ ನಾವು ಅತ್ಯಂತ ಹೃದಯ ಪೂರ್ವಕವಾಗಿ "ದೇವರಿಗೆ ಸ್ತೋತ್ರದ ಬಲಿಯನ್ನು" ಅರ್ಪಿಸಬಹುದು ಮತ್ತು ಅರ್ಪಿಸುತ್ತೇವೆ. ಮತ್ತು ನಾವು ಕರ್ತನಿಗೆ ನಮ್ಮ ತುಟಿಗಳ ಸ್ತೋತ್ರಗಳನ್ನು ಮಾತ್ರವಲ್ಲದೆ, ನಾವು ಪ್ರವೇಶಿಸುತ್ತಿರುವ ಹೊಸ ವರ್ಷವಿಡೀ ನಿಜವಾದ ಪ್ರತಿಷ್ಠಿತ ಜೀವಿತದ ಧೂಪವನ್ನು ಸಹ ಸಲ್ಲಿಸುವುದಿಲ್ಲವೇ? ಅತಿ ಪ್ರಿಯರೇ, ಇಂದು ನಿಮ್ಮನ್ನು ಕರ್ತನಿಗೆ ಹೊಸದಾಗಿ ಪ್ರತಿಷ್ಟಿಸಿಕೊಳ್ಳಿರಿ–ಬಹುಶಃ ಅನೇಕ ವರ್ಷಗಳ ಹಿಂದೆ ಒಮ್ಮೆ ಮಾಡಿದ ಪ್ರತಿಷ್ಠೆಯನ್ನು ಅಮಾನ್ಯಗೊಳಿಸುವ (ಬೆಲೆಯಿಲ್ಲದ್ದಾಗಿ ಮಾಡುವ) ಅರ್ಥದಲ್ಲಿ ಅಲ್ಲ, ಅದಕ್ಕೆ ಬದಲಾಗಿ ಆ ಒಡಂಬಡಿಕೆಯನ್ನು ಮತ್ತೆ ದೃಢೀಕರಿಸುವ ಮತ್ತು ಒತ್ತಿ ಹೇಳುವ ಅರ್ಥದಲ್ಲಿ ಉಂಟಾಗಿದೆ. ನೀವು ನಿಮ್ಮನ್ನು ಕರ್ತನಿಗೆ ಸಂಪೂರ್ಣವಾಗಿ ಆತನವರೆಂದು ಪರಿಗಣಿಸುತ್ತೀರಿ ಎಂದು ಮತ್ತು ಬರುವ ಈ ಹೊಸ ವರ್ಷದಲ್ಲಿ ನಿಮ್ಮೆಲ್ಲವನ್ನು ಬಲಿಪೀಠದ ಮೇಲೆ ಇರಿಸುತ್ತೀರಿ ಎಂದು ಹಾಗೂ ಅದು ಆತನ ಸೇವೆಯಲ್ಲಿ ಸಂಪೂರ್ಣವಾಗಿ ದಹಿಸುವವರೆಗೆ ಅದನ್ನು ಬಲಿಪೀಠದ ಮೇಲೆ ಇರಿಸುವುದು ನಿಮ್ಮ ಉದ್ದೇಶವಾಗಿದೆ ಎಂದು ಪ್ರಿಯ ಕರ್ತನಿಗೆ ಹೇಳಿರಿ. ನಂತರ ನಮ್ಮ ಪೂರ್ಣ ಪ್ರತಿಷ್ಠೆಯ ಪ್ರತಿಜ್ಞೆಗಳನ್ನು ಮಹೋನ್ನತನಿಗೆ ಪ್ರತಿದಿನ ನಾವು ಸಲ್ಲಿಸಲು ಎಚ್ಚರಿಕೆಯಿಂದ ಮತ್ತು ಕಾಳಜಿಯೊಂದಿಗೆ ಮುಂದುವರಿಸೋಣ.
**R 3695 : 3**

## 31 ಡಿಸೆಂಬರ್

**"ಯಾವನಾದರೂ ನನ್ನನ್ನು ಪ್ರೀತಿಸುವವದಾದರೆ ಅವನು ನನ್ನ ಮಾತುಗಳನ್ನು ಕೈಕೊಳ್ಳುವನು; ನನ್ನ ತಂದೆಯು ಅವನನ್ನು ಪ್ರೀತಿಸುವನು, ಇದಲ್ಲದೆ ನಾವು ಅವನ ಬಳಿಗೆ ಬಂದು ಅವನೊಂದಿಗೆ ನಮ್ಮ ನಿವಾಸವನ್ನು ಮಾಡಿಕೊಳ್ಳುವೆವು." (ಯೋಹಾನನು 14 : 23)**

ನಮ್ಮ ಮದಲಿಂಗನ ಕೂಗನ್ನು, ತಟ್ಟುವುದನ್ನು, ಪ್ರಸನ್ನತೆಯ ಕೂಗನ್ನು ನೀವು ಕೇಳಿದ್ದೀರಾ? ನೀವು ಎಚ್ಚೆತ್ತುಕೊಂಡಿದ್ದೀರಾ? ನೀವು ಕ್ರಿಸ್ತನ ನೀತಿಯ ವಸ್ತ್ರವನ್ನು ಉಡುಪಿನಂತೆ ಧರಿಸಿಕೊಂಡಿರುವುದನ್ನು ನೋಡುತ್ತಿದ್ದೀರಾ? ಕರ್ತನ ಮಾರ್ಗದರ್ಶನದ ಅಡಿಯಲ್ಲಿ "ಕಳಂಕ ಸುಕ್ಕು ಇಂಥದ್ದು ಯಾವದೂ ಇಲ್ಲದ" ಹಾಗೆ ಅದನ್ನು ನೋಡಿಕೊಳ್ಳಿರಿ. ಹಾಗೂ ಒಬ್ಬರಿಗೊಬ್ಬರು ಸಹಾಯ ಮಾಡಿರಿ ಮತ್ತು "ಆ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುತ್ತಿರುವದರಿಂದ ಇದನ್ನು

ಮತ್ತಷ್ಟು ಮಾಡಿರಿ" ಮತ್ತು "ಕುರಿಮರಿಯಾದಾತನ ಹೆಂಡತಿಯು ತನ್ನನ್ನು ಸಿದ್ಧ ಮಾಡಿಕೊಂಡಿದ್ದಾಳೆ" ಎಂದು ಬರೆದಿರುವುದನ್ನು ಕುರಿತು ನೆನಪಿನಲ್ಲಿಡೋಣ. (ಪ್ರಕಟನೆ 19:7) **R88:6**

---